START

START

START

START

START

MICRO FILMED
BY

KARNATAKA STATE
ARCHIVES
1991

MICRO FILMED
BY

KARNATAKA STATE
ARCHIVES
1991

ARS 15 APP 90.

ಜೀವನ ಶಿಕ್ಷಣ - ಕನ್ನಡ
ಪ್ರಾಥಮಿಕ ಶಿಕ್ಷಣ - 1957
ಅಕ್ಟೋಬರ್ ಸಂಚಿಕೆಯಿಂದ
ಮುಂದುವರಿಸಲಾಗಿದೆ.

- - - - -

ARS 15 APP 90.

ಜೀವನ ಶಿಕ್ಷಣ - ಕನ್ನಡ
ಪ್ರಾಥಮಿಕ ಶಿಕ್ಷಣ - 195[illegible]
ಅಕ್ಟೋಬರ್ ಸಂಚಿಕೆಯಿಂದ
ಮುಂದುವರಿಸಲಾಗಿದೆ.

- - - - -

Regd No. B. 5

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧. ನನ್ನನಲ್ಲ (ಅಂತರ್ಮುಖಿಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ ೧–೧೨
೨. ಆತ್ಮಸಂಶೋಧನ (ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ) ೧– ೮
೩. ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ) ೧– ೨
೪. ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು) ೧– ೪
೫. ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ) ೧– ೮
೬. ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿನೊಳಿಕೆ) ೦– ೫
೭. ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ) ೧– ೮
೮. ಮುಗಿಲ ಜೇನು (ಮಿಂಚಿನ ಶಲಾಖೆಯಂಥ ಕವನ ಸಂಕಲನ) ೧– ೫
೯. ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು) ೧– ೪
೧೦. ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ) ೧– ೦
೧೧. ಬೆಟ್ಟದ ಹೊಳೆ (ಜೀವನ ಪ್ರಚೋದಕವಾದ ಕಾದಂಬರಿ) ೧– ೪
೧೨. ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ) ೧– ೪
೧೩. ಬಾಳಬಟ್ಟೆ (ಆಧುನಿಕ ಬಾಳಿನ ಒಂಡಾಟಕ್ಕೆ ಚಿಕಿತ್ಸೆ) ೧– ೮
೧೪. ಪೂಜಾ (ಅತೀಂದ್ರಿಯ ಜಾಗ್ರತಿಯ ಮಿಸುಕು) ೦–೧೨
೧೫. ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ) ೧– ೨
೧೬. ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ) ೧– ೦

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆ
ನಾವೇ ವಹಿಸುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— ಚಡಚಣ ಜಿ. ವಿಜಾ

ಶ್ರೀ ಜಿ. ಎ. ಬಸವರಾಜ ಅವರ

ಬಯಲಿನುಡಿಯಲ್ಲಿ

ಬೆಲೆ : ೬೦ ನಯಾ

[ಕಥಾ ಸಂಕಲನ]

● ಕೇವಲ ೨-೮-೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ [illegible] ಕುಸುಮವನ್ನಾಗಿ ಪಡೆಯಿರಿ.
● ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ನಾಲ್ಕೈದು ಕೃತಿಗಳು ೨೦೦ ಪುಟಗಳಲ್ಲಿ.
● ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
● ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
● ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ¾ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಬೇರೆ)
● ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. ಕೂಡಲೇ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಯ
ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪ ಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.
★ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ [illegible]೦೦ ಜನ ಶ್ರೇಷ್ಠ ಸಾಹಿ
ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ 'ಅಣೆಕಲ್ಲು' 'ಪುಟಚೆಂಡು,' ಕಥೆ, ಕವನಗಳ ಪುಸ್ತಕಗಳು ನಿಮ್ಮಲ್ಲಿಗೆ
ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ ಚಂದಾದಾರರಿಗೆ ಮಾತ್ರ ¾ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣೆಯ

ವಿವರಗಳಿಗೆ: ಭಾರತೀ ಸಾಹಿತ್ಯ ಭಂಡಾರ ಅಂಚೆ: ಯರನಾಳ ಜಿಲ್ಲೆ : ಬಿಜಾಪುರ

Printed by Shri S. F. Kattimani, at Manohar Power Printing Press, Hubli. Edited
Published by Sjts. S. P. Patil, B. M. Shintri, S. R. Tatti & Smt. P. A. Bhaskar, at the Kann
Jeevan Shikshan Office, Govt. Training College for Men Dharwar

Regd No. B. ೨೩

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧.	ನನ್ನನಲ್ಲ (ಅಂತರ್ಮುಖಿಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ	....	೧–೧೨
೨.	ಆತ್ಮಸಂಶೋಧನ (ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ)	....	೧– ೮
೩.	ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ)	....	೧– ೨
೪.	ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು)	....	೧– ೪
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧– ೮
೬.	ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿವೊಳಿಕೆ)		೦– ೮
೭.	ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ)	....	೧– ೮
೮.	ಮುಗಿಲ ಜೇನು (ಮಿಂಚಿನ ಶಲಾಖೆಯಂಥ ಕವನ ಸಂಕಲನ)	....	೧– ೮
೯.	ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು)	....	೧– ೪
೧೦.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧– ೦
೧೧.	ಬೆಟ್ಟದ ಹೊಳೆ (ಜೀವನ ಪ್ರಚೋದಕವಾದ ಕಾದಂಬರಿ)	....	೧– ೪
೧೨.	ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ)	....	೧– ೪
೧೩.	ಬಾಳಬಟ್ಟೆ (ಆಧುನಿಕ ಬಾಳಿನ ಒಂಡಾಟಕ್ಕೆ ಚಿಕಿತ್ಸೆ)	....	೧– ೮
೧೪.	ಪೂಜಾ (ಅತೀಂದ್ರಿಯ ಜಾಗೃತಿಯ ಮಿಸುಕು)	....	೦–೧೨
೧೫.	ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ)	....	೧– ೨
೧೬.	ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ)	....	೧– ೦

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆ **ನಾವೇ ವಹಿಸುವೆವು.**

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿಜಾ

ಶ್ರೀ ಜಿ. ಎ. ಬಸವರಾಜ ಅವರ

ಬಯಲಿನುಡಿಯಲ್ಲಿ

ಬೆಲೆ : ೬೦ ನಯೆ

[ಕಥಾ ಸಂಕಲನ]

- ಕೇವಲ ೨–೮–೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ೫ನೆಯ ಕುಸುಮವನ್ನಾಗಿ **ಪಡೆಯಿರಿ.**
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ನಾಲ್ಕೈದು ಕೃತಿಗಳು ೪೦೦ ಪುಟಗಳಲ್ಲಿ.
- ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ಕ್ಕಿ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಬೇರೆ)
- ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. ಕೂಡಲೇ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿ ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.

★ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೨೦೦ ಜನ ಶ್ರೇಷ್ಠ ಸಾಹಿ ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ 'ಆಣೆಕಲ್ಲು' 'ಪುಟಚೆಂಡು' ಕಥೆ, ಕವನಗಳ ಪುಸ್ತಕಗಳು ನಿಮ್ಮಲ್ಲಿ ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ ಚಂದಾದಾರರಿಗೆ ಮಾತ್ರ ಕ್ಕಿ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣ

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ : **ಬಿಜಾಪುರ**

Printed by Shri S. F. Kattimani, at Manohar Power Printing Press, Hubli. Editec
Published by Sjts. S. P. Patil, B. M. Shintri, S. R. Tatti & Smti. P. A. Bhaskar, at the Kan
Jeevan Shikshan Office, Govt. Training College for Men, Dharwar

[illegible]

[illegible]



[illegible]

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಸಿ.ಇಡಿ.,
ಪ್ರಿನ್ಸಿಪಾಲ. ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, **ಧಾರವಾಡ**

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ, ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್,
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೩] ಅಕ್ಟೋಬರ ೧೯೫೭ **[ಸಂಚಿಕೆ**

— ಪರಿವಿಡಿ —

ವಿಷಯ

೧. ಸಂಪಾದಕೀಯ
೨. ಕನ್ನಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಾಬ್ದಿ ಕಾರ್ಯಕ್ರಮದ ಯೋಜನೆ
೩. ಕ. ಗಂ. ಸ. ಟ್ರೇ. ಕಾಲೇಜದ ಶತಾಬ್ದಿ ಸಮಾರಂಭ.
೪. ನೂಲುವ ನೇಯುವ ಶಾಲೆಯಲ್ಲಿ ಕೂಡಿಸಿದ್ದ ನೂಲಿನ ಸಮಸ್ಯೆ. — ಶ್ರೀ ಬಿ. ಜಿ. ಛಬ್ಬಿ
೫. ನಾಡಹಬ್ಬದ ವರದಿಯು. — ಶ್ರೀ ಅಂ. ಚ. ಹೊಸಮನಿ
೬. ಶತಮಾನೋತ್ಸವದ ನಿಧಿ ಸಂಗ್ರಹ
೭. ಶಾಲೆಗಳಲ್ಲಿ ಸಾಂಘಿಕ ಜೀವನ — ಶ್ರೀ ಬಿ. ವಿ. ಕುರಬೆಟ
೮. ಭಾರತದ ಮುಂದಿನ ವಿದ್ಯಾಭ್ಯಾಸದ ರೀತಿನೀತಿ — ಶ್ರೀ ತಟ್ಟಿ ಶ್ಯಾಮರಾಯರು
೯. ನೂ. ನೇ. ಮೂಲೋದ್ಯೋಗ ಶಾಲೆಗಳಲ್ಲಿ ಉತ್ತಮ ನೂಲು ತಯಾರಿಸಲು ದಕ್ಷತೆ ವಹಿಸಿ ಅನುಸರಿಸತಕ್ಕ ಕೃತಿಗಳು. — ಶ್ರೀ ಜಿ. ವಿ. ಮಿರಜಕರ
೧೦. ಮೂಲ ಶಿಕ್ಷಣದ ಅರಿವು — ಶ್ರೀ ಶಿಂತ್ರಿ ಬಸಪ್ಪನವರು
೧೧. ಪ್ರಾಥಮಿಕ ಶಿಕ್ಷಣದಲ್ಲಿ ವ್ಯವಹಾರಿ ಹಾಗು ದಶಾಂಶ ಅಪೂರ್ಣಾಂಕಗಳು — ಶ್ರೀ ಸಿ. ರೇ. ಹಿರೇಮಠ
೧೨. ವನಮಹೋತ್ಸವ — ಶ್ರೀ ವೀರೇಶ ಹಿರೇಮಠ
೧೩. ಭಾಷಾಭ್ಯಾಸದ ಗೊತ್ತುಗುರಿಗಳು — ಶ್ರೀ ಮ. ಗು. ಹಂದ್ರಾಳ
೧೪. ಅಂದಡೆ ಶರಣ — ಶ್ರೀ ಗುರಲಿಂಗ ಕಾಪ್ಸೆ
ಕವರ

ಮುಖಪುಟದ ಛಾಯಾಚಿತ್ರ ಸಂಯುಕ್ತ ಕರ್ನಾಟಕದ ಕೃಪೆಯಿಂದ

ಸಂಪಾದಕೀಯ

ಟಿಪ್ಪಣಿಗಳು

ನಾಡಹಬ್ಬ: ಸಪ್ಟಂಬರ ತಿಂಗಳ ಕೊನೆಯ ವಾರದಲ್ಲಿ ಕರ್ನಾಟಕದ ಮೂಲೆ ಮೂಲೆಗಳಲ್ಲಿ ನಾಡಹಬ್ಬವು ಒಳ್ಳೆ ಹುರುಪು ಹುಮ್ಮಸಗಳಿಂದ ಆಚರಿಸಲ್ಪಟ್ಟಿತು. ಸುಮಾರು ಮೂವತ್ತು ವರುಷಗಳಿಂದ ಈ ಉತ್ಸವವು ಕನ್ನಡ ನಾಡಿನಲ್ಲಿ ಆಚರಿಸಲ್ಪಡುತ್ತ ಬಂದಿದೆ. ಇತ್ತೀಚೆಗಂತೂ ಹಳ್ಳಿಗಳಲ್ಲಿ ಸಹ ಇದೊಂದು ಸಾಂಸ್ಕೃತಿಕ ಸಮಾರಂಭವಾಗಿ ಆಚರಿಸಲ್ಪಡುತ್ತದೆ. ಈ ಉತ್ಸವಕ್ಕೆ ವಿಜಯನಗರ ಸಾಮ್ರಾಜ್ಯದ ನವರಾತ್ರಿಯ ಹಬ್ಬದ ಪರಂಪರೆ ಇದ್ದರೂ ಕಳೆದ ೨೫ ವರುಷಗಳ ಆಚರಣೆಯಲ್ಲಿ ಕರ್ನಾಟಕದ ಏಕೀಕರಣಕ್ಕೆ ಪ್ರಧಾನ ಸ್ಥಾನ ಕೊಡಲ್ಪಟ್ಟಿತ್ತು. ಈ ಹಬ್ಬವು ಕನ್ನಡಿಗರಿಗೆ ಐತಿಹಾಸಿಕ ಸ್ಮೃತಿಗಳನ್ನು ನೆನಪು ಮಾಡಿ ಅವರಲ್ಲಿ ಏಕೀಕರಣದ ಆಂದೋಲನಕ್ಕೆ ಅವಶ್ಯವಿದ್ದ ಸಂಘಟನೆಗಳನ್ನು ತಂದು ಕೊಟ್ಟಿತು. ಕರ್ನಾಟಕ ಇತಿಹಾಸದ ಹಿಂದಿನ ಪುಟಗಳನ್ನು ನೋಡಿದಾಗ ಈ ಹಬ್ಬವು ಒಳ್ಳೇ ವೈಭವದಿಂದ ಜರುಗಿಸಲ್ಪಡುತ್ತಿತ್ತೆಂದು ನಮಗೆ ತಿಳಿಯದಿರದು. ಆಗಿನ ಕಾಲದಲ್ಲಿ ಈ ಉತ್ಸವವು ನಡೆಯುವಾಗ ವಿದ್ಯೆ-ಕಲೆ-ಕುಶಲತೆಗಳ ಬೆಳವಣಿಗೆಗೆ ಪುರಸ್ಕಾರ ಸಿಗುತ್ತಿತ್ತು. ಜೀವನದ ನಾನಾ ಭಾಗಗಳಲ್ಲಿ ಗಣ್ಯಸ್ಥಾನ ಪಡೆದ ವ್ಯಕ್ತಿಗಳಿಗೂ ರಾಜಮನ್ನಣೆ ದೊರೆಯುತ್ತಿತ್ತು. ಪರಿಸ್ಥಿತಿಯಲ್ಲಿ ಬದಲಾದಂತೆ ಈ ಆಚರಣೆಯಲ್ಲಿ ಸ್ಥಿತ್ಯಂತರಗಳಾದವು. ಕನ್ನಡಿಗರನ್ನು ಒಂದುಗೂಡಿಸುವದೇ ಮುಖ್ಯ ಕಾರ್ಯಕ್ರಮವಾಗಿತ್ತು. ಇದು ಈಗ ಸಾಧಿಸಿದಾಗ ಈ ಹಬ್ಬದ ಆಚರಣೆಯಲ್ಲಿ ಹೊಸ ರೀತಿ ಬರುವದು ಸಹಜವಾಗಿದೆ. ನಾಡಹಬ್ಬದ ಪರಂಪರೆಯನ್ನು ನಾವು ಸರಿಯಾಗಿ ತಿಳಿದುಕೊಂಡು ಅದರಲ್ಲಿ ಯೋಗ್ಯ ಮಾರ್ಪಾಟುಗಳನ್ನು ಮಾಡಬೇಕು. ಇಂಥ ಮಾರ್ಪಾಟುಗಳಲ್ಲಿ ಜ್ಞಾನಾರ್ಜನೆ ಉದ್ಯೋಗಗಳ ಅಭಿವೃದ್ಧಿ, ಸಾಂಸ್ಕೃತಿಕ ಬೆಳವಣಿಗೆ, ಕೈಗಾರಿಕೆಗಳ ಸುಧಾರಣೆ ಹಾಗೂ ಇನ್ನುಳಿದ ಕಲೆ ಕುಶಲತೆಗಳು ಅಭಿವೃದ್ಧಿಯಾಗುವಂತೆ ಅವುಗಳಿಗೆ ನಮ್ಮ ನಾಡಹಬ್ಬದಲ್ಲಿ ಪ್ರಾಧಾನ್ಯ ದೊರೆಯಬೇಕು. ಹೀಗಾಗುವದರಿಂದ ರಾಜ್ಯದ ನಿಜವಾದ ಘನತೆ ಸಾಧಿಸುವದೆಂಬದು ನಮ್ಮ ತಿಳುವಳಿಕೆ.

ಗಾಂಧಿ ಜಯಂತಿ: ವಾಡಿಕೆಯಂತೆ ಈ ವರುಷವೂ ಪೂಜ್ಯ ಬಾಪೂಜಿಯ ಜಯಂತಿ ಸಪ್ತಾಹವು ನಮ್ಮ ರಾಷ್ಟ್ರದ ಒಳಗೂ ಹೊರಗೂ ಆಚರಿಸಲ್ಪಟ್ಟಿತು. ಸಾಮಾನ್ಯವಾಗಿ ಈ ಸಪ್ತಾಹದ ಕಾರ್ಯಕ್ರಮದಲ್ಲಿ ಪೂಜ್ಯ ಬಾಪೂಜಿಯವರ ವಿಧಾಯಕ ಕಾರ್ಯಕ್ರಮದ ಅಂಶಗಳಿಗೆ ಪ್ರಾಧಾನ್ಯತೆ ಇರುತ್ತಾ ಬಂದಿದೆ. ಮುಖ್ಯವಾಗಿ ಧ್ವಜಾರೋಹಣ, ಪ್ರಭಾತಫೇರಿ, ಸಫಾಯಿ, ಸೂತ್ರಯಜ್ಞ, ಶ್ರಮದಾನ ಹಾಗೂ ಬಾಪೂಜಿಯ ಅಮರ ತತ್ವಗಳ ಬಗೆಗೆ ವಿಚಾರ ಸಂಕೀರ್ಣಗಳು ಈ ವರುಷವೂ ನಡೆದವು. ಎಲ್ಲ ಕಡೆಗೂ ನಡೆದ ವಿಚಾರ ಸಂಕೀರ್ಣಗಳಲ್ಲಿ ನಾಡಿನ ಮುಖಂಡರು ಭಾಗವಹಿಸಿ ಗಾಂಧೀಜಿಯವರ ದಿವ್ಯ ಜೀವನದ ಅಂಶಗಳನ್ನು ಜನತೆಯ ಮುಂದಿಟ್ಟರು. ಅವರಿಂದ ಭಾರತಕ್ಕೆ ತನ್ಮೂಲಕ ಮಾನವ ಕೋಟಿಗೆ ನಡೆದ ಅಮೋಘವಾದ ಸೇವೆಯನ್ನು ಭಾರತೀಯರು ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಸ್ಮರಿಸಿದರು. ಮಾನವ ಕುಲವನ್ನುದ್ಧರಿಸಲು ಪ್ರಯತ್ನಿಸಿದ ಹಲವಾರು ಮಹಾನುಭಾವರು ಹಿಂದೆ ಆಗಿ ಹೋಗಿದ್ದಾರೆ. ಬುದ್ಧ, ಏಸೂಕ್ರಿಸ್ತ, ಹಜರತ ಪೈಗಂಬರ ಹಾಗೂ ಬಸವಣ್ಣನವರಂತೆ ಮಹಾತ್ಮಾ ಗಾಂಧೀಜಿಯವರೂ ಜನ ಸಾಮಾನ್ಯರಲ್ಲಿ ಬೆರೆತು ಅವರನ್ನು ಮೇಲಕ್ಕೆತ್ತುವ ಪ್ರಯತ್ನದಲ್ಲಿಯೇ ತಮ್ಮ ಕೊನೆಯನ್ನು ಕಂಡರು. ಭಾರತಕ್ಕೆ ಸ್ವಾತಂತ್ರ್ಯವನ್ನು ತಂದುಕೊಡುವದೇ ಬಾಪೂಜಿಯವರ ಜೀವನದ ಮುಖ್ಯ ಗುರಿಯಾಗಿತ್ತೆಂದು ಹೇಳಿದರೆ ಸರಿಯಾಗಲಿಕ್ಕಿಲ್ಲ. ಹಾಗೆ ಹೇಳುವವರು ಅವರ ಜೀವನ ಕ್ರಮದ ಅರ್ಥವನ್ನು ಯೋಗ್ಯ ದೃಷ್ಟಿಯಿಂದ ಮಾಡಿಕೊಂಡಿಲ್ಲವೆನ್ನಬಹುದು. ಬಾಪೂಜಿಯವರಿಗೆ ಭಾರತದ ಸ್ವಾತಂತ್ರ್ಯ, ವಿಶ್ವದ ವ್ಯಕ್ತಿವ್ಯಕ್ತಿಗಳಲ್ಲಿ, ರಾಷ್ಟ್ರರಾಷ್ಟ್ರಗಳಲ್ಲಿ, ಕಂಡು ಬರುತ್ತಿದ್ದ ಉಚ್ಚ-ನೀಚ ಭಾವನೆಗಳನ್ನು ಹೊಡೆದೋಡಿಸಲು ಒಂದು ಮುಖ್ಯ ಸಾಧನವಾಗಿ ಪರಿಣಮಿಸಿತ್ತು. ಅವರು ವಿಶ್ವದ ಉದ್ಧಾರ ದೃಷ್ಟಿಯಿಂದಲೇ ಭಾರತದ ಬಿಡುಗಡೆಯನ್ನು ಕಾಣುತ್ತಿದ್ದರು. ಆದುದರಿಂದ ಅವರು ವಿಶ್ವಶಾಂತಿಯನ್ನು ಸ್ಥಾಪಿಸುವದಕ್ಕಾಗಿ, ನಡೆದ ಯುದ್ಧಗಳನ್ನು ಅತೀಯವಾಗಿ ಖಂಡಿಸಿದರು. ಅಣ್ವಸ್ತ್ರ ಮತ್ತು ಜಲಜನಕಗಳಲ್ಲಿ ಅವರಿಗೆ ವಿಶ್ವಾಸವೇ ಇರಲಿಲ್ಲ. ಅವುಗಳಿಂದ ಮಾನವ ಕುಲವು ಉದ್ಧಾರವಾಗುವ ಬದಲು ಅಳಿದು ಹೋಗುವದೆಂದು ಜಗತ್ತಿಗೆ ಸಾರಿದರು. ಅಷ್ಟೇ ಅಲ್ಲದೆ ವಿಶ್ವಕ್ಕೆ ಮಾರ್ಗದರ್ಶನ ಮಾಡಿದರು. ಅಹಿಂಸಾ

ತ್ಮಕ ಸತ್ಯಾಗ್ರಹದಿಂದ ಮಾನವನ ಎಲ್ಲ ಸಮಸ್ಯೆಗಳು ಪರಿಹಾರವಾಗಬಲ್ಲದೆಂಬದನ್ನು ನಮ್ಮ ಜೀವನದಲ್ಲಿಯೇ ಸಾಧಿಸಿ ತೋರಿಸಿದರು. ಹಿಂದೆ ಆಗಿ ಹೋದ ಮಹಾಪುರುಷರೂ ಹಿಂಸೆಗೆ ಒಪ್ಪಿರಲಿಲ್ಲ. ಆದರೆ ಅಂಥವರ ಅನುಯಾಯಿಗಳೇ ಈಗ ಮತ್ತೊಂದು ವಿಶ್ವ ಸಮರಕ್ಕೆ ಅಣಿಯಾಗುತ್ತಿರುವುದು ದುರ್ದೈವದ ಸಂಗತಿ. ಅವರೆಲ್ಲರೂ ಮಹಾತ್ಮರ ತತ್ವಗಳ ಕಡೆಗೆ ಒಲಿಯುವಂತಾದರೆ ವಿಶ್ವ ಶಾಂತಿಯು ಸಾಧಿಸಲು ಅಸಾಧ್ಯವೇ ?

ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ:—

ನಮ್ಮ ರಾಷ್ಟ್ರದ ಘಟನೆಯಲ್ಲಿ ಸೂಚಿಸಲ್ಪಟ್ಟಂತೆ ೧೯೬೦ಕ್ಕೆ ೬ ರಿಂದ ೧೪ರ ವಯಸ್ಸಿನ ವರೆಗಿನ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕವಾಗಿಯೂ ಮುಕ್ತ ಯಾಗಿಯೂ ಒತ್ತಾಯವಾಗಿಯೂ ಕೊಡಲ್ಪಡಬೇಕಾಗಿತ್ತು. ಕಾರಣಾಂತರಗಳಿಂದ ಅದು ಸಾಧಿಸಲಿಲ್ಲ. ಕಳೆದ ತಿಂಗಳ ರಾಷ್ಟ್ರದ ರಾಜಧಾನಿಯಲ್ಲಿ ·ಕೇಂದ್ರದ ಶಿಕ್ಷಣ ಮಂತ್ರಿ ಮೌಲಾನಾ ಆಝಾದರ ನೇತೃತ್ವದಲ್ಲಿ ನಡೆದ ರಾಜ್ಯಶಿಕ್ಷಣ ಮಂತ್ರಿಗಳ ಸಭೆಯಲ್ಲಿ ಈ ವಿಷಯಕ್ಕೆ ಪ್ರಾಧಾನ್ಯತೆ ಕೊಡಲ್ಪಟ್ಟಿತ್ತು. ಮೌಲಾನಾ ಆಝಾದರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಅದನ್ನೇ ಎತ್ತಿ ತೋರಿಸಿ ಸಾರ್ವತ್ರಿಕ ಶಿಕ್ಷಣವನ್ನು ೧೯೬೦ ರೊಳಗಾಗಿ ಸಾಧಿಸುವಂತೆ ಘಟನೆಯಲ್ಲಿ ಕಾಣಿಸಿದ್ದರೂ ಅದನ್ನು ರಾಷ್ಟ್ರೀಯ ಸಭೆಯು ಒಪ್ಪಿಕೊಂಡಿದ್ದರೂ ಅದು ಸಾಧಿಸಲಿಲ್ಲವಾದ್ದರಿಂದ ತಮಗಾದ ಅಸಮಾಧಾನವನ್ನು ವ್ಯಕ್ತಪಡಿಸಿ ರಾಜ್ಯದ ಮಂತ್ರಿಗಳನ್ನು ನೇರವಾಗಿ ಕೇಳುತ್ತ ಈ ವಿಷಯದಲ್ಲಿ ಯಾವ ತರದ ಅಡೆತಡೆಗಳನ್ನು ಅಡ್ಡಿ ಆತಂಕಗಳನ್ನೂ ಮುಂದೆ ಮಾಡಬಾರದೆಂದೂ ಈಗಲೇ ರಾಜ್ಯ ಸರಕಾರಗಳು ಯೋಗ್ಯ ಕ್ರಮವನ್ನು ಕೈಕೊಳ್ಳಲು ಮುಂದೆ ಬರಬೇಕೆಂದೂ ಸುಸ್ಪಷ್ಟವಾಗಿ ತಿಳಿಸಿದರು. ಅವರು ಕೊಟ್ಟ ಎಚ್ಚರಿಕೆಗೆ ಉತ್ತರವನ್ನೀಯುತ್ತ ರಾಜ್ಯಗಳ ಶಿಕ್ಷಣ ಮಂತ್ರಿಗಳು ಸಾಧ್ಯವಿದ್ದ ಪ್ರಯತ್ನಗಳೆಲ್ಲವನ್ನೂ ಮಾಡಿ ಆರ್ಥಿಕ ಅನುಕೂಲತೆಗಳಿಗನ್ವಯಿಸಿ ತೃತೀಯ ಪಂಚವಾರ್ಷಿಕ ಯೋಜನೆಯು ಮುಗಿಯುವದರೊಳಗಾಗಿ ಸಾರ್ವತ್ರಿಕ ಒತ್ತಾಯದ ಹಾಗೂ ಮುಕ್ತಟೆಯಾದ ಪ್ರಾಥಮಿಕ ಶಿಕ್ಷಣವನ್ನು ೬ ರಿಂದ ೧೧ರ ವಯಸ್ಸಿನ ವರೆಗಿನ ಮಕ್ಕಳ ಸಲುವಾಗಿ ಕಾರ್ಯಗತಮಾಡುವೆವೆಂದು ಹೇಳಿದರು. ಈ ರೀತಿಯಿಂದ ಎಲ್ಲ ರಾಜ್ಯಗಳು ಒಂದು ನಿರ್ದಿಷ್ಟವಾದ ನಿರ್ಣಯಕ್ಕೆ ಬಂದಿರುವುದು ಒಳ್ಳೇ ಸ್ತುತ್ಯವಾಗಿದೆ. ಕೇಂದ್ರದ ಆಡಳಿತೆಗೊಳಪಟ್ಟ ಪ್ರದೇಶಗಳಲ್ಲಿ ಮಾತ್ರ ೧೯೬೬ ನೆಯ ವರ್ಷಾಂತ್ಯಕ್ಕೆ ೬ ರಿಂದ ೧೪ರ ವಯಸ್ಸಿನ ಮಕ್ಕಳೆಲ್ಲರಿಗೂ ಸಾರ್ವತ್ರಿಕ ಕಡ್ಡಾಯದ ಹಾಗೂ ಪುಕ್ಕಟೆಯಾದ ಪ್ರಾಥಮಿಕ ಶಿಕ್ಷಣವು ಸಿಗುವಂತೆ ಕ್ರಮಗಳನ್ನು ಕೈಕೊಳ್ಳಲು ಕೇಂದ್ರ ಸರಕಾರವು ನಿರ್ಣಯಿಸಿರುವದು ಹೆಚ್ಚಿನ ಸಂತೋಷದ ಸಂಗತಿ.

ಜೀವನ ಶಿಕ್ಷಣದ ಉದ್ದೇಶಗಳು:—

ಜೀವನ ಶಿಕ್ಷಣವು ಸಾಧಿಸಬೇಕಾದ ಉದ್ದೇಶಗಳಲ್ಲಿ ಕೆಳಗಿನವುಗಳು ಇರಬೇಕು—

೧) ಸಮಗ್ರ ವ್ಯಕ್ತಿತ್ವದ ವಿಕಾಸ ೨) ಉತ್ಪಾದನೆ. ೩) ಸೃಜತೆ. ೪) ನೈಸರ್ಗಿಕತೆ. ೫) ಮಾತೃಭಾಷೆಯೇ ಶಿಷಣದ ಮಾಧ್ಯಮ ೬) ಮಕ್ಕಳ ಆಸ್ಥೆಯಂತೆ ತಯಾರಿಸಿದ ಅಭ್ಯಾಸ ಪತ್ರಿಕೆ. ೭) ಸ್ವಶಿಕ್ಷಣ. ೮) ಸರ್ವೋದಯವನ್ನೊಳಗೊಂಡ ಅಭ್ಯಾಸ ಪತ್ರಿಕೆ ೯) ಪ್ರಜಾ ಸತ್ತೆಯಲ್ಲಿ ನಿಷ್ಠೆ. ೧೦) ಜ್ಞಾನ ಕರ್ಮ ಹಾಗೂ ಅನುಭವಗಳ ಐಕ್ಯತೆ. ೧೧) ಬೆಲೆ ಕಟ್ಟುವಿಕೆ. ೧೨) ವೈಜ್ಞಾನಿಕ ದೃಷ್ಟಿ. ೧೩) ಸರ್ವೋದಯ ಸಮಾಜದ ನಿರ್ಮಾಣ. ೧೪) ಕ್ರಿಯಾ ಪದ್ಧತಿ. ೧೫) ಶ್ರಮ ಗೌರವ.

ಗ್ರಂಥ ವಿಮರ್ಶೆ

ಅಮೃತವಾಣಿ ಹಾಗೂ ಪ್ರಾರ್ಥನೆ :

ಇದು ಒಂದು ಚಿಕ್ಕ ಪುಸ್ತಕವು. ಇಲ್ಲಿ ಶ್ರೀ ವ್ಹಿ. ಎಂ. ದಿಬ್ಬಿ ಹಾಗೂ ಎಸ್. ಎಸ್. ಲಠ್ಠೆ ಇವರೀರ್ವರು ಬಹು ಸಂಖ್ಯೆಯಲ್ಲಿ ಅಮೃತವಾಣಿಗಳನ್ನೂ, ಕೆಲವು ಪ್ರಾರ್ಥನೆಯ ಪದ್ಯಗಳನ್ನೂ ಸಂಗ್ರಹಿಸಿದ್ದಾರೆ. ಇವುಗಳ ಜೊತೆಗೆ ರಾಷ್ಟ್ರೀಯ ಹಬ್ಬಗಳ ಹಾಗೂ ಸಾಂಸ್ಕೃತಿಕ ಹಬ್ಬಗಳ ವಿವರಣೆಯನ್ನೂ ಕೊಟ್ಟಿರುವುದರಿಂದ ಈ ಕಿರಿ ಹೊತ್ತಿಗೆಯು ಶೈಕ್ಷಣಿಕ ಸಂಸ್ಥೆಗಳಿಗೆ ಅತ್ಯುಪಯುಕ್ತವಾಗಿದೆ.

ಈ ದಿಶೆಯಲ್ಲಿ ಸಂಗ್ರಹಕಾರರು ಪಟ್ಟ ಪ್ರಯತ್ನವು ಸ್ತುತ್ಯವಾದುದು. ಅವರು ಸ್ವದೇಶ–ವಿದೇಶಗಳ ನಾಣ್ಣುಡಿಗಳನ್ನೂ ದೇಶಭಕ್ತರ-ದೇವ ಭಕ್ತರ ಅಮರವಾಣಿಗಳನ್ನೂ ಪ್ರಾರ್ಥನೆಯ ಪದ್ಯಗಳನ್ನೂ ಸಂಕಲನ ಮಾಡಿ ಪಾಠಕರಿಗೆ ಒಂದು ಅಪೂರ್ವ ಸಂಧಿಯನ್ನು ಒದಗಿಸಿ ಕೊಟ್ಟಿದ್ದಾರೆ.

ಕನ್ನಡ ಗಂಡು ಮಕ್ಕಳ ಸರಕಾರಿ ಟೇನಿಂಗ ಕಾಲೇಜದ ಶತಾಬ್ದಿ ಸಮಾರಂಭದ ಕಾರ್ಯಕ್ರಮದ ಯೋಜನೆ

ಈ ಸಂಸ್ಥೆಯ ಶತಮಾನೋತ್ಸವದ ವಿಷಯಕ್ಕೆ ಈಗಾಗಲೇ ಪತ್ರಿಕೆಗಳಲ್ಲಿ ಅನೇಕ ಸಲ ಪ್ರಕಟಿಸಿದ ಪ್ರಕಟನೆಗಳನ್ನು ಸಾರ್ವಜನಿಕರು ಓದಿರಲು ಸಾಕು. ನಾಲ್ಕು ಜಿಲ್ಲೆಗಳಲ್ಲಿ ಇರುವ ಈ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಗೂ ಶಿಕ್ಷಣಾಭಿಮಾನಿಗಳಿಗೂ ಮುಕ್ತಹಸ್ತದಿಂದ ಧನಸಹಾಯವನ್ನು ಮಾಡಲು ವಿನಂತಿಸಲಾಗಿದೆ. ಈ ಮಹತ್ವದ ಕಾರ್ಯವು ಯಶಸ್ವಿಯಾಗಿ ನೆರವೇರುವ ಕುರಿತು ತಮ್ಮ ಸದಿಚ್ಛೆಯನ್ನು ವ್ಯಕ್ತಮಾಡಿ ಎಲ್ಲ ಸ್ಕೂಲ ಬೋರ್ಡುಗಳ ಚೇರಮನ್ನರು ಒಂದು ಸಂಯುಕ್ತ ಪ್ರಕಟನೆಯನ್ನು ಹೊರಡಿಸಿ ಶಿಕ್ಷಕರೂ ಉಳಿದವರೂ ತನು-ಮನ-ಧನಗಳಿಂದ ಸಹಾಯ ಮಾಡಲು ಕೇಳಿಕೊಂಡಿದ್ದಾರೆ. ಇದೆಲ್ಲದರ ಪರಿಣಾಮವಾಗಿ ನಿಧಿ ಸಂಗ್ರಹದ ಕಾರ್ಯವು ಆರಂಭವಾಗಿದ್ದು ಕೆಲವು ಶಿಕ್ಷಕರು ತಮ್ಮ ತಾಲೂಕಿನ ಪರವಾಗಿಯೂ ಕೆಲವರು ವೈಯಕ್ತಿಕವಾಗಿಯೂ ನಮ್ಮ ಕಡೆಗೆ ನಿಧಿಯನ್ನು ಕಳಿಸಿದ್ದಾರೆ. ಅವರೆಲ್ಲರ ಈ ಪ್ರಾರಂಭದ ಉತ್ತೇಜನಕ್ಕಾಗಿ ನಾವು ಉಪಕೃತರಾಗಿರುವೆವು.

ಈ ಸಮಾರಂಭದ ವಿವರವಾದ ಯೋಜನೆ ಹಾಗೂ ಖರ್ಚಿನ ಅಂದಾಜು ಇವುಗಳ ಬಗೆಗೆ ಸಾರ್ವಜನಿಕರ ಕಲ್ಪನೆಯಾದರೆ ನಿಧಿ ಸಂಗ್ರಹದ ಕಾರ್ಯವು ಇನ್ನೂ ಸುಗಮವಾಗಿ ಸಾಗುವದೆಂದು ಭಾವಿಸಿ ಈಗಿನ ನಮ್ಮ ಯೋಜನೆಯ ಮೇರೆಗೆ ಕೆಳಗಿನ ವಿವರಗಳನ್ನು ಪ್ರಕಟಿಸಿರುವೆವು.

೧) ಈ ಉತ್ಸವವು ಇದೇ ಡಿಸೆಂಬರ ತಿಂಗಳಲ್ಲಿ ಎರಡು ದಿವಸ ನಡೆಯುವದು.

೨) ಈ ಉತ್ಸವದ ಉದ್ಘಾಟನೆಯು ನಮ್ಮ ರಾಜ್ಯದ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ನಿಜಲಿಂಗಪ್ಪನವರ ಅಮೃತ ಹಸ್ತದಿಂದ ಆಗಬೇಕೆಂದು ಸಮಿತಿಯವರು ಬಯಸಿ ಅವರನ್ನು ವಿನಂತಿಸಲು ಮಾನ್ಯ ಮುಖ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ.

೩. ಉತ್ಸವದ ಎರಡು ದಿನಗಳ ಕಾರ್ಯಕ್ರಮದಲ್ಲಿ ಮೊದಲನೆಯ ದಿನ ಉದ್ಘಾಟನೆ ಹಾಗೂ ಗಣ್ಯ ಪ್ರಿನ್ಸಿಪಾಲರ ಮತ್ತು ವಿದ್ಯಾರ್ಥಿಗಳ ಭಾವ ಚಿತ್ರಗಳ ಅನಾವರಣ; ಎರಡನೆಯ ದಿನ ಜೀವನ ಶಿಕ್ಷಣ ಪ್ರದರ್ಶನದ ಉದ್ಘಾಟನೆ ಹಾಗೂ ಸಮ್ಮೇಲನ, ಸ್ಮಾರಕ ಸಂಪುಟ ಪ್ರಕಟನೆ ಪಾರಿತೋಷಿಕ ವಿತರಣೆ ಮತ್ತು ಮುಕ್ತಾಯ ಸಮಾರಂಭ. ಎರಡೂ ದಿವಸ ಸಂಜೆಗೆ ವಿನೋದಾವಳಿಗಳು ನಡೆಯುವವು. ಇದಲ್ಲದೆ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನವನ್ನು ಇದರಲ್ಲಿ ಸಮಾವೇಶ ಮಾಡುವ ವಿಚಾರವಿದೆ. ಈ ಎಲ್ಲ ಕಾರ್ಯಕ್ರಮಕ್ಕೆ ಕೆಳಗಿನಂತೆ ಖರ್ಚಿನ ಅಂದಾಜು ಮಾಡಲಾಗಿದೆ.

೧.	ಸ್ಮಾರಕ ಸಂಪುಟದ ಪ್ರಕಟನೆ	....	೨೦೦೦ ರೂ.
೨.	ಭಾವ ಚಿತ್ರಗಳ ಅನಾವರಣ	....	೫೦೦ ರೂ.
೩.	ಸ್ಮಾರಕಶಿಲಾ ಸ್ಥಾಪನೆ	....	೫೦೦ ರೂ.
೪.	ಜೀವನ ಶಿಕ್ಷಣ ಪ್ರದರ್ಶನ	....	೫೦೦ ರೂ.
೫.	ಮಂಟಪದ ರಚನೆ	....	೮೦೦ ರೂ.
೬.	ಪಾರಿತೋಷಿಕಗಳ ವಿತರಣೆ	....	೨೫೦ ರೂ.
೭.	ಪ್ರಾಥಮಿಕ ಶಿಕ್ಷಕರ ಮಕ್ಕಳ ಸಲುವಾಗಿ ಶತಾಬ್ದಿ-ಸ್ಮಾರಕ ಪಾರಿತೋಷಿಕ ನಿಧಿ	....	೩೦೦೦ ರೂ.
೮.	ಇತರ ಖರ್ಚು	....	೭೦೦ ರೂ.
		ಒಟ್ಟು	೮೨೫೦ ರೂ.

ಇಷ್ಟು ಖರ್ಚಿನ ಭಾರವನ್ನು ನಮ್ಮ ಶಿಕ್ಷಕರ, ಶಿಕ್ಷಣಾಭಿಮಾನಿಗಳ ಉದಾರ ಧನಸಹಾಯದಿಂದ ಗುರು ಮಾಡಿಕೊಳ್ಳಬೇಕಾಗಿದೆ. ಆದುದರಿಂದ ಎಲ್ಲರೂ ಮುಕ್ತ ಹಸ್ತದಿಂದ ಧನ ಸಹಾಯ ನೀಡಿ ಈ ಮಹಾ ಾರ್ಯವು ಯಶಸ್ವಿಯಾಗಿ ನೆರವೇರುವಂತೆ ನೆರವಾಗಬೇಕೆಂದು ಸಮಿತಿಯ ಪರವಾಗಿ ವಿನಂತಿಸುವೆವು.

ನಿಧಿಸಂಗ್ರಹಕ್ಕಾಗಿ ಗೊತ್ತುಪಡಿಸಿದ ವಂತಿಗೆಯ ದರಗಳು ಕೆಳಗಿನಂತಿವೆ.

೫ ರೂ. ಕೊಡುವ ಸಾರ್ವಜನಿಕರು ಸ್ವಾಗತ ಸಮಿತಿಯ ಸದಸ್ಯರಾಗುವರು.
೫ ರೂ. ಕೊಡುವ ಶಿಕ್ಷಕರು ಸ್ವಾಗತ ಸಮಿತಿಯ ಸದಸ್ಯರಾಗುವರು.
೩ ರೂ. ಕೊಡುವ ಶಿಕ್ಷಕರು ೧ನೇ ತರಗತಿಯ ಪ್ರತಿನಿಧಿಗಳಾಗುವರು.
೨ ರೂ. ಕೊಡುವ ಶಿಕ್ಷಕರು ೨ನೇ ತರಗತಿಯ ಪ್ರತಿನಿಧಿಗಳಾಗುವರು.
೧ ರೂ. ಕೊಡುವ ಶಿಕ್ಷಕರು ೩ನೇ ತರಗತಿಯ ಪ್ರತಿನಿಧಿಗಳಾಗುವರು.

ವಂತಿಗೆಯ ಪಾವತಿಗಳನ್ನು ಎಲ್ಲರೂ ಕಾಯ್ದಿಡಬೇಕಾಗಿ ವಿನಂತಿ ಯಾಕಂದರೆ ಆ ಪಾವತಿಗಳನ್ನು ತೋರಿಸಿದವರಿಗೆ ಮಾತ್ರ ಉತ್ಸವದಲ್ಲಿ ಪ್ರವೇಶ ದೊರೆಯುವದು. ಈ ಸಮಾರಂಭದ ವಿಷಯದಲ್ಲಿ ಶಿಕ್ಷಕರಿಂದಲೂ ಶಿಕ್ಷಣಾಭಿಮಾನಿಗಳಿಂದಲೂ ಸೂಕ್ತ ಸೂಚನೆಗಳನ್ನು ಅಪೇಕ್ಷಿಸುವೆವು.

ಕನ್ನಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಶತಾಬ್ದಿ ಸಮಾರಂಭ

ಈ ವರುಷ ಈ ಕಾಲೇಜದ ಶತಾಬ್ದಿ ಸಮಾರಂಭವನ್ನು ಜರುಗಿಸಬೇಕೆಂಬ ವಿಷಯವನ್ನು ಪತ್ರಿಕೆಗಳಲ್ಲಿ ಓದಿ ಅತ್ಯಂತ ಸಂತೋಷವಾಗಿದೆ. ಆದುದರಿಂದ ಈ ಕಾಲೇಜದ ಹಳೆಯ ವಿದ್ಯಾರ್ಥಿಗಳು ಮುಂದೆ ಬಂದು ಈ ಸಮಾರಂಭವನ್ನು ನೆರವೇರಿಸಲು ನಿರ್ಣಯ ಮಾಡಿದ ಬಗ್ಗೆ ಅವರನ್ನು ಅಭಿನಂದಿಸುವೆವು. ಕರ್ನಾಟಕದ ಶಿಕ್ಷಣ, ಸಾಹಿತ್ಯ ಹಾಗೂ ಸಂಸ್ಕೃತಿಯ ಬೆಳವಣಿಗೆಯ ನೂರಾರು ವರುಷಗಳ ಇತಿಹಾಸವನ್ನು ನಾವು ನೋಡಿದಾಗ ಈ ಸಂಸ್ಥೆಯಿಂದ ಸಲ್ಲಿಸಲ್ಪಟ್ಟ ಅಮೋಘವಾದ ಸೇವೆಯು ಎಲ್ಲರ ನಿದರ್ಶನಕ್ಕೆ ಬಾರದೇ ಇರದು. ಕಳೆದ ಶತಮಾನದ ಪೂರ್ವಾರ್ಧದಲ್ಲಿ ಕನ್ನಡದಲ್ಲಿ ಶಿಕ್ಷಣ ನಡೆಯುವ ಶಾಲೆಗಳು ಈ ಭಾಗದಲ್ಲಿ ಇಲ್ಲದಾಗ ಈ ಸಂಸ್ಥೆಯು ಜನ್ಮ ತಾಳಿ ಬಾಲ್ಯಾವಸ್ಥೆಯ ಹಲ ಕೆಲವು ಅಡೆತಡೆಗಳನ್ನು ಸಹಿಸಿ ಕೊನೆಗೆ ಕನ್ನಡ ಮಾತೆಯ ಕೀರ್ತಿ ಧ್ವಜವನ್ನು ನಾಡಿನಲ್ಲೆಲ್ಲ ಏರಿಸಿ ಸಮಸ್ತ ಕನ್ನಡಿಗರಿಗೆ ಅಪಾರವಾದ ಉಪಕಾರವನ್ನು ಮಾಡಿರುವದು ಎಲ್ಲರ ಪುಣ್ಯ ಸ್ಮರಣೆಯ ವಿಷಯವಾಗಿದೆ. ಈ ಸಂಸ್ಥೆಯನ್ನು ಸ್ಥಾಪಿಸಿ, ಬೆಳಿಸಿ ಉಳಿಸಿದ ಅನೇಕ ಮಹಾನುಭಾವರ ಸೇವೆಯನ್ನು ಈ ಸಮಾರಂಭದ ಮೂಲಕ ಸ್ಮರಿಸುವದು ಅತ್ಯವಶ್ಯ. ಅಂಥ ಮಹಾನುಭಾವರಲ್ಲಿ ಡೆಪ್ಯುಟಿ ಚೆನ್ನಬಸಪ್ಪನವರು, ಭುಜಂಗರಾವ ಹುಯಿಲಗೋಳರವರು, ಶ್ರೀ ರಾವಜೀ ಕರಂದೀಕರ ಹಾಗೂ ದಿವಾನ ಬಹಾದ್ದೂರ ಶ್ರೀ ರೊದ್ದ ಇವರೇ ಅಗ್ರಗಣ್ಯರು. ಇವರಿಂದಾದ ದೀರ್ಘ ಪರಿಶ್ರಮದ ಫಲವಾಗಿ ಕನ್ನಡ ಮಾತೆ ಬದುಕಿದ್ದಾಳೆ. ಯಾವ ದೃಷ್ಟಿಯಿಂದ ನೋಡಿದರೂ ಕನ್ನಡಿಗರಲ್ಲಿ ಈಗ ಕಾಣುತ್ತಿರುವ ನವಜಾಗ್ರತಿಯ ಮೂಲ ಬೇರುಗಳ ಉಗಮವು ಈ ಸಂಸ್ಥೆಯ ಸ್ಥಾಪನೆಯಲ್ಲಿಯೇ ಅಡಕವಾಗಿದೆ. ಆದುದರಿಂದ ಈ ಹಿರಿಯ ಸಂಸ್ಥೆಯ ಶತಾಬ್ದಿ ಸಮಾರಂಭವನ್ನು ನೆರವೇರಿಸುವದು ಕೇವಲ ಆ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳದಾಗಿರದೇ ಪ್ರತಿಯೊಬ್ಬ ಕನ್ನಡಿಗನ ಆದ್ಯ ಕರ್ತವ್ಯವಾಗಿದೆ ಎಂದರೆ ಅದರಲ್ಲಿ ಯಾವ ಅತಿಶಯೋಕ್ತಿಯೂ ಇಲ್ಲ. ಈ ಪವಿತ್ರ ಕಾರ್ಯಕ್ಕೆ ಕನ್ನಡಿಗರೆಲ್ಲರೂ ಮುಖ್ಯವಾಗಿ ಆ ಸಂಸ್ಥೆಯಲ್ಲಿ ತರಬೇತಿ ಹೊಂದಿದವರೆಲ್ಲರೂ ಧನ ರೂಪದಿಂದ ನೆರವಾಗುವರೆಂದು ನಾವು ಆಶಿಸಿದ್ದೇವೆ.

೧) ಶ್ರೀ ಸಿ. ಕೆ. ಕುಲಕರ್ಣಿ, ಚೇರಮನ್
ಡಿ. ಎಸ್. ಬಿ. ಧಾರವಾಡ

೨) ಶ್ರೀ ಪಿ. ಎಮ್. ನಾಡಗೌಡ, ಎಲ್‌ಎಲ್.ಬಿ.
ಡಿ. ಎಸ್. ಬಿ. ಚೇರಮನ್, ವಿಜಾಪೂರ
೩) ಶ್ರೀ ಟಿ. ಆರ್. ಊದಪುಡಿ, ಚೇರಮನ್.
ಡಿ. ಎಸ್. ಬಿ. ಬೆಳಗಾಂವ
೪) ಶ್ರೀ ಜಾಲಿಸತ್ತಿಗಿ, ಚೇರಮನ್,
ಡಿ. ಎಸ್. ಬಿ. ಕಾರವಾರ
೫) ಶ್ರೀ ಡಿ. ಎಲ್. ಪಾಟೀಲ ಚೇರಮನ್.
ಎಮ್. ಎಸ್. ಬಿ. ಧಾರವಾಡ
೬) ಶ್ರೀ ಎಮ್. ಆರ್. ಸೆಟ್ಟರ ಚೇರಮನ್.
ಎಮ್. ಎಸ್. ಬಿ. ಹುಬ್ಬಳ್ಳಿ
೭) ಶ್ರೀ ಎ. ಬಿ. ಮಾರವಡಿ ಚೇರಮನ್.
ಎಮ್. ಎಸ್. ಬಿ. ವಿಜಾಪೂ

ನೂಲುವ ನೇಯುವ ಶಾಲೆಯಲ್ಲಿ ಕೂಡಿಬಿದ್ದ ನೂಲಿನ ಸಮಸ್ಯೆ

ಲೇಖಕರು : ಬಿ. ಜಿ. ಭಬ್ಬಿ, B.A., B.Ed., D.P.Ed , D.B.E , A.D.E.I.,
for Basic Schools, Hungund.

ನೂಲುವ ನೇಯುವ ಶಾಲೆಗಳಲ್ಲಿ ದಿನದಿನಕ್ಕೆ ಹೆಚ್ಚಾಗಿ ಬೆಳೆಯುತ್ತಿರುವ ನೂಲಿನ ಅಪಾರವಾದ ಸಂಗ್ರಹವು ಗುರುಗಳಿಗೂ ಶಿಕ್ಷಣಾಧಿಕಾರಿಗಳಿಗೂ ಒಂದು ದೊಡ್ಡ ಸಮಸ್ಯೆಯಾಗಿದೆ. ಸುಮಾರು ೮–೧೦ ವರ್ಷಗಳ ಹಿಂದೆ ಹೇಗೋ ತಯಾರಾಗಿ ಚೀಲದಲ್ಲಿಯೋ ಡ್ರಮ್ಮಿನಲ್ಲಿಯೋ ಅಥವಾ ಮಾಡಗಳಲ್ಲಿಯೋ ಒಮ್ಮೆ ಸೇರಿಕೊಂಡ ನೂಲು ಸೂರ್ಯ ಪ್ರಕಾಶವನ್ನು ಇನ್ನೂ ಕಾಣದ ಉದಾಹರಣೆಗಳಿಗೆ ನಮ್ಮಲ್ಲಿ ಕೊರತೆಯಿಲ್ಲ. ಮೇಲ್ವಿಚಾರಕರ ಆಗ್ರಹಕ್ಕಾಗಿ ಇದರ ಕೆಲವಂಶವು ಮಾತ್ರ ಗುರುಗಳ ಮನೆಯ ಮಕ್ಕಳ ಕೈಯಲ್ಲಿ ಹಗ್ಗವಾಗಿಯೋ ಒಕ್ಕಲಿಗರ ದನಗಳ ಕಣ್ಣಿಯಾಗಿಯೋ ರೂಪಾಂತರಗೊಂಡು ಆರ್ಥಿಕ ಹಾನಿಗೀಡು ಮಾಡಿದ ಉಬಾಹರಣೆ ಉಂಟು. ಕೆಲವಡೆಗಳಲ್ಲಿ ಗಿರಣಿಯ ನೂಲು ಕೈ ನೂಲಿನ ಕೈ ಹಿಡಿದು ಅವೆರಡೂ ಹಾಸು ಹೊಕ್ಕಾಗಿ ಗುರುಗಳ ಸಮ್ಮಿಶ್ರ ಅಭಿರುಚಿಗೆ ಸಾಕ್ಷಿಯಾಗಿ ಅವರ ತಲೆಯ ಮೇಲೆ ಸಹ ಏರಿ ನಿಂತಿರುವವು. ಶಾಲೆಗೆ ದಿನಾಲು ಒಬ್ಬ ಅತಿಥಿಯನ್ನು ಕರೆದು ,ನೂಲಿನ ಮಾಲೆಯನ್ನು ಹಾಕುತ್ತ ಹೋದರೆ ಒಂದೆರಡು ವರ್ಷಗಳಲ್ಲಿ ನಮ್ಮ ಶಾಲೆಯ ನೂಲು 'ಖಲಾಸ' ಆದೀತು ಎಂದು ನಗೆಗಾರರಾದ ಒಬ್ಬ ಗುರುಗಳು ಹೇಳುತ್ತಿರುವದನ್ನು ಕೇಳಿ ನಾನೂ ನಕ್ಕೆನು. ಆಹಾರದ ಅಭಾವದಿಂದ ಅನೇಕ ಸಂಕಷ್ಟಗಳಿಗೀಡಾದ ಈ ಕಾಲದಲ್ಲಿ ಕೊರಳಿಗೆ ಉರುಲು ಹಾಕಿಕೊಳ್ಳಲು ಇಂತಹ ಲಡಿಗಳನ್ನು ತಯಾರಿಸುತ್ತಿರುವಿರಾ ? ಎಂದು ನನ್ನ ಸಲಿಗೆಯ ಸ್ನೇಹಿತರೊಬ್ಬರು ಹಾಸ್ಯ ಮಾಡಿದರು.

ಹೀಗೆ ಎಲ್ಲರ ದೃಷ್ಟಿಯಲ್ಲಿ ಅತ್ಯವಸ್ಥೆಗೀಡಾಗಲು ಕಾರಣಗಳಿಲ್ಲದಿಲ್ಲ. ನೂಲಿನ ಅಪಾರವಾದ ಸಂಗ್ರಹಕ್ಕೆ ಕಾರಣೀಭೂತವಾದ ಕೆಲವು ಅಂಶಗಳನ್ನು ಇಲ್ಲಿ ಸಂಕ್ಷೇಪವಾಗಿ ಕೊಡಲಾಗಿದೆ.

(೧) ನೂಲುವ ಕ್ರಿಯೆಗಿಂತ ನೇಯ್ಗೆಯ ಕ್ರಿಯೆಯು ಕ್ಲಿಷ್ಟವಾಗಿದೆ.

೨) ನೇಯ್ಗೆಯ ವರ್ಗಗಳಲ್ಲಿ ನೂಲುವ ವರ್ಗಗಳಿಗಿಂತ ಮಗ್ಗಗಳ ಸಂಖ್ಯೆ ಬಹಳ ಕಡಿಮೆ ಇರುವದು.

೩) ನೂಲಿನ ಉಪಕರಣಗಳು ಸಾಕಷ್ಟು ಸಂಖ್ಯೆಯಲ್ಲಿ ಪೂರೈಸಲ್ಪಟ್ಟಿದ್ದು ನೇಯ್ಗೆಯ ಉಪಕರಣಗಳು ಮಾತ್ರ ತೀರ ಕಡಿಮೆ ಪ್ರಮಾಣದಲ್ಲಿ ಪೂರೈಸಲ್ಪಟ್ಟಿವೆ.

೪) ರಾಟಿ ತಕಲಿಗಳು ಸುಲಭವಾಗಿ ತಿದ್ದಲು ಯೋಗ್ಯವಾದಂತೆ ಮಗ್ಗಗಳು ಆಗಲಾರವು. ಮಗ್ಗಗಳ ಬಿಡಿ ಭಾಗಗಳು ಅನೇಕ ಪ್ರಕಾರದವಿದ್ದು ಅವುಗಳ ಹೊಂದಿಕೆಯು ಅನೇಕರಿಗೆ ತಲೆಶೂಲಿಯನ್ನುಂಟು ಮಾಡಿದೆ.

೫) ಅಭ್ಯಾಸ ಪತ್ರಿಕೆಯಲ್ಲಿ ನೂಲಿನ ಪ್ರಮಾಣಕ್ಕೂ ತಯಾರಾಗತಕ್ಕ ಅರಿವೆಯ ಪ್ರಮಾಣಕ್ಕೂ ಸಂಬಂಧವನ್ನೇ ಇಟ್ಟಿಲ್ಲ.

೬) ಅಯೋಗ್ಯ ಮಗ್ಗಗಳ ಪೂರೈಕೆಯೇ ರೂಢಿಯಾಗಿ ಬಿಟ್ಟಿದೆ.

೭) ಅವಶ್ಯಕ ಉಪಕರಣಗಳ ನಿರಂತರ ಕೊರತೆ.

೮) ಶಿಕ್ಷಕರ ಅನಾಸ್ಥೆ, ಅಜ್ಞಾನ ಮತ್ತು ಯೋಗ್ಯ ತರಬೇತಿಯ ಅಭಾವ. ಇದು ಹೊಸ ಜೀವನ ಶಿಕ್ಷಣ ಶಾಲೆಗಳಿಗಂತೂ ಜಟಿಲ ಪ್ರಶ್ನೆಯಾಗಿದೆ.

) ಜನ ಸಾಮಾನ್ಯರ ಅಪಪ್ರಚಾರ, ಅದರಿಂದ ಮಕ್ಕಳಿಂದ ಅನಾದರ.

೧೦) ಗುರುಗಳಿಗೆ ಯೋಗ್ಯ ಮಾರ್ಗದರ್ಶನದ ಅಭಾವ.

ಈ ಕಾರಣಗಳಿಂದ ನೂಲಿನ ಸಂಗ್ರಹವು ಶಾಲೆಯಲ್ಲಿ ಹೆಚ್ಚಾಗಿದ್ದರೂ ಅದಕ್ಕೆ ಉಪಾಯವಿಲ್ಲದಿಲ್ಲ. ಅದನ್ನು ಸ್ವಲ್ಪದರಲ್ಲಿ ಇಲ್ಲಿ ಕೊಡಲಾಗಿದೆ.

೧) ಕಟ್ಟಿಟ್ಟ ಹಳೆಯ ನೂಲನ್ನು ಹೊರತೆಗೆದು ಉತ್ತಮ ಗುಂಡಿಗಳನ್ನು ಆಯ್ದುಕೊಂಡು ನೇಯಲಿಕ್ಕೆ ಉಪಯೋಗಿಸಬೇಕು.

೨) ಸ್ಥಳಿಕ ಇಲ್ಲವೇ ಸಮೀಪದ ನೇಕಾರರನ್ನು ಕರೆಯಿಸಿ, ಉಳಿದ ಗುಂಡಿಗಳಲ್ಲಿ ಉತ್ತಮ ಗುಂಡಿಗಳನ್ನು ಆರಿಸಿಕೊಂಡು ಆಸನ, ಗುಡಾರಪಟ್ಟಿ ಮುಂತಾದ ಉರುಟು ಬಟ್ಟೆಗಳನ್ನು ನೇಯಿಸಿಕೊಳ್ಳಬೇಕು.

೩) ಇನ್ನುಳಿದ ಗುಂಡಿಗಳನ್ನು ಜಾಹೀರ ಲಿಲಾವು ಮಾಡಬೇಕು.

ಮೇಲೆ ಹೇಳಿದ ಮೊದಲನೆಯ ಉಪಾಯವು ಗುರುಗಳ ಕೈಯಲ್ಲಿದೆ. ಉಳಿದ ಎರಡು ಉಪಾಯಗಳಿಗೆ ಅಧಿಕಾರಿಗಳ ಅಪ್ಪಣೆಬೇಕು. ಈ ಉಪಾಯಗಳು ರಾಮಬಾಣವೆಂದು ತಿಳಿಯಬೇಕಾದರೆ ಆಸ್ಥೆಯಿಂದ ಕೆಲಸ ಮಾಡುವ ಗುರುಗಳ ಅವಶ್ಯಕತೆ ಮಾತ್ರ ಇದೆ.

ಮೇಲೆ ಕಾಣಿಸಿದ ಉಪಾಯಗಳಿಂದ ಶಾಲೆಯಲ್ಲಿಟ್ಟ ನೂಲನ್ನು ನಿರ್ನಾಮ ಮಾಡಬಹುದು. ಆದರೆ ಈ ಸಮಸ್ಯೆಯು ಪುನಃ ತಲೆಯೆತ್ತದಂತೆ ಈ ಕೆಳಗಿನ ಮುಂಜಾಗ್ರತೆ ವಹಿಸಬೇಕಾಗುವದು.

೧) ಪ್ರತಿಯೊಂದು ಗುಂಡಿಯು ತಯಾರಾದಂತೆ ಅದರ ತೂಕ ಮತ್ತು ನಂಬರು ತೆಗೆದು ಅದಕ್ಕೆ ಒಂದು ಚೀಟಿಯನ್ನು ಅಂಟಿಸಬೇಕು.

೨) ಕೆಳಗಿನ ವರ್ಗಗಳಲ್ಲಿ ತಯಾರಾದ ಒಂಟೆಳೆಯ ಗುಂಡಿಗಳನ್ನು ವರ್ಗೀಕರಿಸಿ ಮೇಲಿನ ವರ್ಗಗಳ ಮಕ್ಕಳಿಂದ ಆಗಿಂದಾಗ್ಗೆ ಅವಶ್ಯಕ ಸಂಖ್ಯೆಯ ಎಳೆಗಳ ಹುರಿ ಹಾಕಿಸಿಯೇ ಇಡಬೇಕು.

೩) ನೂಲಿನ ಸಂಗ್ರಹವು ಹೆಚ್ಚಾಗುವ ಲಕ್ಷಣಗಳು ಕಂಡು ಬಂದ ಕೂಡಲೇ ಕೆಲವು ದಿನ ಮೇಲಿನ ವರ್ಗಗಳಲ್ಲಿ ನೂಲುವದನ್ನು ತಡೆಹಿಡಿದು ಅದರ ಬದಲಾಗಿ ನೇಯ್ಗೆಯನ್ನು ಮಾಡಬೇಕು.

೪) ಮಗ್ಗಗಳು ಯಾವಾಗಲೂ ಕೆಲಸದಲ್ಲಿ ತೊಡಗಿರಬೇಕು. ಒಂದು ಅರಿವೆಯನ್ನು ನೇಯುವಾಗ ಮತ್ತೊಂದು ಹಾಸು ಮಗ್ಗಕ್ಕೆ ಏರಲು ತಯಾರಾಗಿರುವಂತೆ ಎಲ್ಲ ಪೂರ್ವ ಕ್ರಿಯೆಗಳನ್ನು ಮಾಡುತ್ತಿರಬೇಕು.

೫) ಮಗ್ಗಗಳನ್ನು ಸರಿ ಪಡಿಸುವ ಕೆಲಸವು ಬಹಳ ಮಹತ್ವವಾದದ್ದು.

೬) ಯೋಜನಾ ಬದ್ಧವಾಗಿ ಈ ಎಲ್ಲ ಕೆಲಸವನ್ನು ಮಾಡಬೇಕು.

೭) ಟ್ರೇನಿಂಗ ಕಾಲೇಜುಗಳಲ್ಲಿ ಕಲಿಯುತ್ತಿರುವ ಗುರುಗಳಿಗೆ ಮೂಲೋದ್ಯೋಗದ ಉಪಕರಣಗಳನ್ನು ಸ್ವತಂತ್ರವಾಗಿ ಸಜ್ಜುಗೊಳಿಸುವದನ್ನು ಮತ್ತು ದುರಸ್ತಿ ಮಾಡುವದನ್ನು ವಿಶೇಷ ಲಕ್ಷ್ಯಪೂರ್ವಕವಾಗಿ ಕಲಿಸಬೇಕು. ಪರೀಕ್ಷೆಯಲ್ಲಿ ಇದಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕು. ಈ ವಿಷಯದಲ್ಲಿ ಸದ್ಯಕ್ಕೆ ಸಾಕಷ್ಟು ಲಕ್ಷ್ಯ ಹಾಕಲಾಗಿಲ್ಲವೆಂದೇ ಹೊಸ ಮಗ್ಗಗಳು ಶಾಲೆಗೆ ಬಂದ ಕೂಡಲೇ ಗುರುಗಳು ಕಕ್ಕಾವಿಕ್ಕಿಯಾಗಿ ಬಿಡುತ್ತಾರೆಂಬುದನ್ನು ನಾವು ಕಣ್ಣಾರೆ ಕಂಡಿದ್ದೇವೆ.

೮) ಈಗಿದ್ದ ಹೊಸ ಟ್ರೇಂಡರಲ್ಲಿ ಹಸಿ ಬಿಸಿಯಾಗಿದ್ದವರನ್ನು ವಿಶೇಷ ತರಬೇತುಗೊಳಿಸಬೇಕು. ಶಾಲೆಗೊಬ್ಬರಂತೆಯಾದರೂ ನುರಿತ ಶಿಕ್ಷಕರಿರುವದು ಅವಶ್ಯವಾಗಿರುವದು.

೯) ನೂಲುವ ಮತ್ತು ನೇಯ್ಗೆಯ ಉಪಕರಣಗಳನ್ನು ಸಾಕಷ್ಟು ಪ್ರಮಾಣದಲ್ಲಿ ಮತ್ತು ಯೋಗ್ಯವಾದವುಗಳೆಂದು ಮನವರಿಕೆ ಮಾಡಿಕೊಂಡು ಪೂರೈಸಬೇಕು.

೧೦) ಆಸ್ಥೆಯುಳ್ಳ ಗುರುಗಳನ್ನು ಈ ಶಾಲೆಗಳಿಗೆ ವರ್ಗ ಮಾಡಬೇಕು.

ಒಟ್ಟಿನ ಮೇಲೆ ಗುರುಗಳೂ ಮೇಲ್ವಿಚಾರಕರೂ ಕೂಡಿ ಆಗಾಗ್ಗೆ ಈ ವಿಷಯಗಳನ್ನು ಚರ್ಚಿಸುತ್ತಿರಬೇಕು. ವಾದದ ಘರ್ಷಣೆಯಿಂದ ಹೊಸ ಉಪಾಯದ ಕಿಡಿಗಳು ಹುಟ್ಟಲನುವಾಗುವಂತೆ ಆಗಾಗ್ಗೆ ಈ ಚರ್ಚೆಗೆ ಎಡೆಗೊಡಬೇಕು. ಇಲ್ಲಿ ಇನ್ನೊಂದು ಮಾತಿನ ಬಗೆಗೆ ಗುರುಗಳಿಗೆ

ಎಚ್ಚರಿಕೆ ಕೊಡಬೇಕಾಗಿದೆ. ಜೀವನ ಶಿಕ್ಷಣ ಶಾಲೆಯಲ್ಲಿ ಕೇವಲ ಮೂಲೋದ್ಯೋಗಕ್ಕೆ ಎಲ್ಲ ವೇಳೆಯು ಹೋಗುವದರಿಂದ ಉಳಿದ ವಿಷಯಗಳು ಸಾಕಷ್ಟಾಗುವದಿಲ್ಲವೆಂದು ಕೆಲವು ಗುರುಗಳು ಅಜ್ಞಾನಿಗಳಾದ ಪಾಲಕರಲ್ಲಿ ಅಪಪ್ರಚಾರ ಮಾಡುತ್ತಿರುವದು ನಮ್ಮ ಲಕ್ಷ್ಯಕ್ಕೆ ಬಂದಿದೆ. ಈ ರಾಷ್ಟ್ರಘಾತಕ ಮನೋವೃತ್ತಿಯ ಗುರುಗಳಿರುವವರೆಗೆ ನಮ್ಮ ಶಾಲೆಗಳಿಗೆ ಮೋಕ್ಷವಿಲ್ಲ. ಇಂಥ ಗುರುಗಳು ತಮ್ಮ ವಿಚಾರಗಳನ್ನು ತಿದ್ದಿಕೊಂಡು ಜೀವನ ಶಿಕ್ಷಣದ ಬಗೆಗೆ ಪವಿತ್ರವಾದ ಭಾವನೆಯು ಜನರಲ್ಲಿ ಬೆಳೆದು ಬರುವಂತೆ ತಮ್ಮ ನಡೆನುಡಿಗಳಲ್ಲಿ ಮಾರ್ಪಾಟು ಮಾಡಿಕೊಳ್ಳಬೇಕೆಂದು ಒತ್ತಿ ಹೇಳಬೇಕಾಗಿದೆ. ಮನಸ್ಸಿದ್ದಲ್ಲಿ ಮಾರ್ಗವಿದೆ.

ನಾಡಹಬ್ಬದ ವರದಿಯು

ಈ ವರುಷ ನಮ್ಮ ಸಂಸ್ಥೆಯಲ್ಲಿ ನಾಡಹಬ್ಬ ಹಾಗೂ ಗಾಂಧಿ ಜಯಂತಿಯ ಸಪ್ತಾಹವನ್ನು ಸಂಯುಕ್ತವಾಗಿ ಆಚರಿಸಬೇಕೆಂದು ನಮ್ಮ ವಿಧಾನ ಮಂಡಲದಲ್ಲಿ ನಾವು ನಿರ್ಧರಿಸಿದ ಪ್ರಕಾರ ಒಂದು ವಾರದ ವರೆಗೆ ಆಚರಿಸಿದ ಕಾರ್ಯಕ್ರಮಗಳ ವರದಿಯನ್ನು ತಮ್ಮ ಮುಂದಿಡ ಬಯಸುತ್ತೇನೆ. ನಮ್ಮ ಸಪ್ತಾಹದ ಪ್ರಾರಂಭೋತ್ಸವವು. ದಿ. ೨೮—೯—೫೭ ರಂದು ಡಾ. ಆರ್. ಸಿ. ಹಿರೇಮಠ (ಕರ್ನಾಟಕ, ವಿಶ್ವವಿದ್ಯಾಲಯ ಕನ್ನಡ, ಪ್ರಾಧ್ಯಾಪಕರು) ಇವರಿಂದ ನೆರವೇರಿತು. ಶ್ರೀಯುತರು ನಾಡಹಬ್ಬದ ಅಂತರಾಳದಲ್ಲಿರುವ ತತ್ವಕ್ಕನುಗುಣಗಾಗಿ "ಚಾಮರಸನ ಪ್ರಭುಲಿಂಗಲೀಲೆ" ಈ ವಿಷಯ ಕುರಿತು ವಿದ್ವತ್ಪೂರ್ಣ ಭಾಷಣ ಮಾಡಿದರು.

ದಿ. ೩೦—೯—೫೭ ರಂದು ಕನ್ನಡ ನಾಡಿನ ವೀರ ಮಹಿಳೆಯರು, ಬುದ್ಧ, ಬಸವ, ಗಾಂಧಿ ಇವರೆಲ್ಲರು ಸಮನ್ವಯ ರೂಪದಿಂದ ಜಗತ್ತಿಗೆ ಕೊಟ್ಟ ಕಾಣಿಕೆ. ಹೀಗೆ ವಿಷಯವನ್ನು ಕುರಿತು ನಿಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು.

ದಿ. ೨—೧೦—೫೭ ರಂದು ಮಹಾತ್ಮರ ಪುಣ್ಯ ಜಯಂತಿ ಇದ್ದುದರಿಂದ ಮೊದಲು ಧ್ವಜವಂದನೆ, ಪ್ರಾರ್ಥನೆ, ಸೂತ್ರಯಜ್ಞ, ಭಾಷಣಗಳ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ಭಾಷಣದಲ್ಲಿ ಇಬ್ಬರು ಗುರುಗಳು, ಇಬ್ಬರು ಶಿಕ್ಷಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿ. ೪—೧೦—೫೭ ರಂದು ಗಾಂಧಿಜಿಯವರನ್ನು ಕುರಿತು ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ಇದರಲ್ಲಿ ನಾಲ್ವರು ಶಿಕ್ಷಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ದಿ. ೫—೧೦—೫೭ ರಂದು ಮುಂಬರುವ ಈದಮಿಲಾದ ಹಬ್ಬದ ಕುರಿತು. ಭಾಷಣ ಸ್ಪರ್ಧೆ ಏರ್ಪಡಿಸಲಾಗಿತ್ತು. ಇದರಲ್ಲಿ ೧೩ ಜನ ಶಿಕ್ಷಕ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಲ್ಲದೆ ಕಾರ್ಯಕ್ರಮಗಳನ್ನು ಯಶಸ್ವೀ ರೀತಿಯಿಂದ ಜರುಗಿಸಿದರು.

ದಿ. ೭—೧೦—೫೭ ರಂದು ಮಹಮ್ಮದ ಪೈಗಂಬರರ ಜಯಂತಿ ಇದ್ದು ಅಂದಿನದಿವಸ ಮುಖ್ಯ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಶ್ರೀ ಜಾಸವಾಡಕರರು, ಹುಬ್ಬಳ್ಳಿಯ ಆ್ಯಂಗ್ಲೋ, ಉರ್ದು ಹಾಯ್‌ಸ್ಕೂಲಿನ ಹೆ. ಮಾಸ್ತರರು ಅತಿಥಿಗಳಾಗಿ ಬಂದು ಪೈಗಂಬರರ ಜೀವನ ಕುರಿತು ಉದ್ಬೋಧಕ ಭಾಷಣ ಮಾಡಿದರು. ಅಂದಿನ ದಿವಸವೇ ಸೂತ್ರಯಜ್ಞ ಸ್ಪರ್ಧೆಯನ್ನು ಸಹ ಏರ್ಪಡಿಸಲಾತ್ತು. ಅದರಲ್ಲಿ ಕಾಲೇಜಿನ ಎಲ್ಲ ಸದಸ್ಯರು ಭಾಗವಹಿಸಿದ್ದರು.

ಇದೂ ಅಲ್ಲದೆ. ಪಾಠಸ್ಪರ್ಧೆಯಲ್ಲಿ ೮ ಜನ ಶಿಕ್ಷಕ ವಿದ್ಯಾರ್ಥಿಗಳು ಭಾಗವಹಿಸಿ ಸ್ಪರ್ಧಾಪಾಠಕೊಟ್ಟರು, ಹಾಗೂ ವಿದ್ಯಾರ್ಥಿಗಳ ಶ್ರಮದಾನ ರೂಪದಿಂದ ಕಟ್ಟಬೇಕೆಂದಿರುವ ಬಯಲು ನಾಟ್ಯಮಂದಿರದ ಕಟ್ಟೆಯ ಕಾರ್ಯಕ್ರಮವೂ ವಿಶೇಷಸಾಂಘಿಕ ಸಫಾಯಿ ಕ್ರಿಯೆಯೂ ನೆರವೇರುತ್ತಲೇ ಇದ್ದವು. ಅಲ್ಲದೆ ನಮ್ಮ ಸಹ ಶಿ. ವಿದ್ಯಾರ್ಥಿಗಳು ಶ್ರೀ ಸರಗಣಾಚಾರಿ ಗುರುಗಳ ನೇತೃತ್ವದಲ್ಲಿ ಮೈಸೂರ ಪ್ರವಾಸವನ್ನು ಸಹ ಮುಗಿಸಿ ಬಂದದ್ದಾಗಿದೆ. ಇನ್ನೊಂದು ವಿಶಿಷ್ಟ ಸಂಗತಿಯೆಂದರೆ ಮಹಾತ್ಮಾ ಗಾಂಧಿಜಿಯವರ ಜಯಂತಿಯಲ್ಲಿ ಅವರು ನಮಗೊಲಿದು ನಮ್ಮ ಅಂಧಕಾರವನ್ನು ದೂರ ಮಾಡಿದರೋ ಏನೋ ಅನ್ನುವಂತೆ ವಿದ್ಯುದ್ದೀಪಗಳು ಬಂದವು. ಅದೂ ಸಹಿತ ನೆ| ಸುಪರಿಂಟೆಂಡೆಂಟ ಸಾಹೇಬರವರ ಹಸ್ತದಿಂದ ದಿ. ೨—೧೦—೫೭ ರಂದು ಉದ್ಘಾಟಿಸಲ್ಪಟ್ಟಿತು.

ದಿ. ೮-೧೦-೫೭ರಂದು ಕೊನೆಯ ದಿನದ ಮುಕ್ತಾಯ ಸಮಾರಂಭವು ಪೂಜ್ಯ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ನೆರವೇರಿತು. ಮುಂಜಾನೆ ಪ್ರಾರ್ಥನೆ, ಸಾಂಘಿಕ ಸಫಾಯಿ, ಜರುಗಿದವು. ಮಧ್ಯಾಹ್ನ ೪ ಘಂಟೆಗೆ ಸಭೆ ಜರುಗಿತು. ಆಮಂತ್ರಣದ ಮೇರೆಗೆ ಮಾನ್ಯ ಹುಕ್ಕೇರಿಕರ ರಾಮರಾಯರು ಅತಿಥಿಗಳಾಗಿ ಬಂದು ವರದಿ ವಾಚನ ನಿರೀಕ್ಷಿಸಿದ ನಂತರ, ಸ್ಪರ್ಧೆಯಲ್ಲಿ ಮೇಲು ನಂಬರು ಪಡೆದ ಶಿಕ್ಷಕ ವಿದ್ಯಾರ್ಥಿಗಳಿಗೆ ಪಾರಿತೋಷಿಕ ವಿತರಣೆ ಮಾಡಿದರು· ಹಾಗೂ ಗಾಂಧಿಜಿಯವರ ಕೆಲವು ರಸಭರಿತ ಸನ್ನಿವೇಶಗಳೊಂದಿಗೆ, ಶಿಕ್ಷಕರ ಭವ್ಯ ಜೀವನ ಕುರಿತು ಭಾಷಣ ಮಾಡಿದರು.

ಅಂ. ಚ. ಹೊಸಮನಿ
ಸಾಂಸ್ಕೃತಿಕ ಮಂತ್ರಿ,

ನೇಯಿಗೆಯ ಸಪ್ತಾಹ, ಕಾಕೋಳ

ಶಾಲೆಯ ಪ್ರಧಾನ ಗುರುಗಳು ಹಾಗು ಉಪಗುರುಗಳು ಕೂಡಿ ಅಲ್ಲಿಯ ಬೀಟ ಆಫೀಸರರಾದ ಶ್ರೀ ಅಯ್ಯಾಚಿತರವರ ಸಲಹೆಯ ಮೇರೆಗೆ ದಿ. ೨೧-೯-೫೭ ರಿಂದ ೨೭-೯-೫೭ರ ವರೆಗೆ ನೇಯಿಗೆಯ ಸಪ್ತಾಹವನ್ನು ಆಚರಿಸಿದರು. ಈ ಸಪ್ತಾಹದ ಉದ್ಘಾಟನೆಯನ್ನು ಶ್ರೀ ಎಫ್. ಸಿ. ಉಣಕಲ್ಲ ಕ್ರಾಫ್ಟ್ ಆರ್ಗನಾಯಜರ ಧಾರವಾಡ ವಿಭಾಗ ಇವರು ಜರುಗಿಸಿ ಮಾರ್ಗದರ್ಶನ ಮಾಡಿದರು. ಸಪ್ತಾಹದಲ್ಲಿ ೨೨ ವಿದ್ಯಾರ್ಥಿಗಳು ಹಾಗು ೬ ಜನ ಶಿಕ್ಷಕರು ಒಳ್ಳೇ ಆಸ್ಥೆಯಿಂದ ಭಾಗವಹಿಸಿ ಶಾಲೆಯಲ್ಲಿ ಶಿಲ್ಕು ಇದ್ದ ನೂಲನ್ನು ನೇಯಿಗೆಗಾಗಿ ಉಪಯೋಗಿಸಿ ೫೩ ಚೌ. ಯಾರ್ಡು ಅರವೆಯನ್ನು ತಯಾರಿಸಿದರು. ಮೇಲ್ಮೆ ಪಡೆದ ವಿದ್ಯಾರ್ಥಿಗಳಿಗೆ ಸರಪಂಚರಾದ ಶ್ರೀ ಕೊಂಬಳಿಯವರ ಅಧ್ಯಕ್ಷತೆಯಲ್ಲಿ ಬೆಳ್ಳಿಯ ಕಪ್ಪು, ಮೆಡ್ಲುಗಳನ್ನು ಪಾರಿತೋಷಿಕವೆಂದು ಕೊಡಲಾಯಿತು.

ಈ ಸಪ್ತಾಹ ಹಾಗು ಪ್ರದರ್ಶನ ನೋಡಿ ಸಂತೋಷಬಟ್ಟು ಊರ ಪ್ರತಿಷ್ಠಿತ ನಾಗರಿಕರಾದ ಶ್ರೀ ಪುಟ್ಟಪ್ಪನವರು ಹುಲಮನಿ ಇವರು ಒಂದು ಬೆಳ್ಳಿಯ ಕಪ್ಪನ್ನೂ, ಶ್ರೀ ಹೇಮಣ್ಣನವರು ಅಂಗಡಿ ಇವರು ಬೆಳ್ಳಿಯ ಮೆಡಲ್ಲುಗಳನ್ನೂ, ·ಶ್ರೀ ವ್ಹಿ. ಪಿ. ಸಿಂಪವರು ಕುಡಿಯುವ ನೀರಿನ ಪಿತ್ತಾಳಿ ಟಾಕಿ, ಒಂದು ತಂಬಿಗೆ, ಎರಡು ವಾಟಿ ಹಾಗು ಶ್ರೀ ಶಂಕ್ರಪ್ಪನವರು ಸೂರಣಗಿ ಇವರು ೨೦ ರೂ. ಬೆಲೆಬಾಳುವ ನಿಲುಗನ್ನಡಿ ಇವುಗಳನ್ನು ಕಾಣಿಕೆಯಾಗಿ ಕೊಟ್ಟರು.

ಸಪ್ತಾಹವು ಯಶಸ್ವಿಯಾಗಿ ಜರುಗಿ ಶಿಕ್ಷಣಾಭಿಮಾನಿಗಳ ಪ್ರಶಂಸೆಗೆ ಪಾತ್ರವಾಯಿತು.

ಗ. ಮ. ಸ. ಟ್ರೇ. ಕಾಲೇಜದ ಶತಾಬ್ದಿ ಸಮಾರಂಭದ ನಿಧಿ ಸಂಗ್ರಹದ ವಿವರ

೧	ತಾಲೂಕ ಶಾಲಾ ಮಾಸ್ತರರಿಂದ	
	೧. ತಾ. ಶಾ. ಮಾ. ಸವದತ್ತಿ	೬೯-೦೦
	೨. ,, ಕರ್ಜಗಿ	೧೪-೭೦
	೩. ,, ಶಿರ್ಶಿ	೧೯-೫೦
		೧೦೩-೨೦
೨	ಚೇರಮನ್, ಪ್ರಾ. ಶಿ. ಸೊಸಾಯಟಿ ತಾ. ಬೈಲಹೊಂಗಲ	೫೦-೧೦
೩	ವೈಯಕ್ತಿಕವಾಗಿ ಸಂಗ್ರಹಿಸಿಧ ನಿಧಿ	
	೧. ಶ್ರೀ ಸುತ್ತುಕೋಟಿ, ಹೆ. ಮಾ. ದ್ಯಾಮನಕೊಪ್ಪ	೧೫-೦೦
	೨. ಶ್ರೀ ಎಲ್. ಎಸ್. ಶಶಿಮಠ ಅ. ಮಾ. ಹಾವೇರಿ	೩೩-೦೦
	೩. ಶ್ರೀ ಕಡೆಬಾಗಿಲ ಹೆ. ಮಾ. ಕೋಟಕಲ್ಲ	೧೪-೦೦
	೪. ಶ್ರೀ ಆರ್. ಆರ್. ಶೇಲಾರ ಎ,ಡಿ.ಇ.ಆಯ್. ಧಾರವಾಡ	೧೫-೦೦
	೫. ಶ್ರೀ ವ್ಹಿ. ಬಿ. ಗುಡ್ಡದ ಎ.ಡಿ.ಇ.ಆಯ್. ಧಾರವಾಡ	೨೩-೦೦
	೬. ಶ್ರೀ ಸಾ. ಮ. ಚಳ್ಳಗಿ ನಿವೃತ್ತ ಶಿಕ್ಷಕರು, ಯಾಳವಾರ	೩೦-೦೦
	೭. ಕಾಡದೇವರಮಠ ತಾ. ಶಾ. ಮಾ. ಸವದತ್ತಿ	೧೪-೦೦
		೧೪೪-೦೦
೪	ವೈಯುಕ್ತಿಕವಾಗಿ ಬಂದ ವರ್ಗಣಿ	೩೯-೦೦

ಬ. ಮ. ಶಿಂತ್ರಿ
ಕೋಶಾಧ್ಯಕ್ಷರು

ಸಾಲೆಗಳಲ್ಲಿ ಸಾಂಘಿಕ ಜೀವನ

ಲೇಖಕರು: ಬ. ವಿ. ಕುರಬೆಟ, ಅ. ಡೆ. ಎ. ಇ., ಬೆಳಗಾಂವಿ.

ನಮ್ಮೆಲ್ಲರ ಸುದೈವದಿಂದ ಪೂಜ್ಯ ಬಾಪೂಜಿಯವರ ಪುಣ್ಯದಿಂದ ಭಾರತಾಂಬೆಯು ಪಾರತಂತ್ರ್ಯದ ಸಂಕೋಲೆಗಳಿಂದ ಮುಕ್ತಳಾದಳು. ಬಹು ದಿನಗಳಿಂದ ದಾಸ್ಯದ ಹೊಣೆಹೊತ್ತ ಅವಳು ತನ್ನ ನರನಾಡಿಗಳಲ್ಲಿ ಚೈತನ್ಯವನ್ನು ಕಳೆದುಕೊಂಡು ಅಂದಗೇಡಿಯಂತೆ ತೋರತೊಡಗಿದಳು. ಆದ್ದರಿಂದಲೇ ದೂರದೃಷ್ಟಿಯುಳ್ಳ ಮಹಾತ್ಮಾಜಿಯವರು ನಾಡಿನ ನಾಡಿಗಳಾದ ನಮಗೆ ಆದರ್ಶ ಶಿಕ್ಷಣ ದೊರೆತ ಹೊರತು ಭಾರತಮಾತೆಯ ಸರ್ವಾಂಗಗಳಲ್ಲಿ ಸೌಂದರ್ಯವು ತುಂಬಿ ಬರಲಾರದೆಂದು ಆದರ್ಶ ತತ್ವಗಳ ಬೆಳಕಿನಲ್ಲಿ ಕಂಡುಕೊಂಡಿದ್ದರು. ಈ ಶಿಕ್ಷಣವೇ ಇಂದು ಕಾರ್ಯರೂಪದಲ್ಲಿ ಇಳಿದಿದೆ. ಇದುವೇ 'ಜೀವನ ಶಿಕ್ಷಣ'.

ಅಂದಿನ ಶಿಕ್ಷಣವು ನಮ್ಮೀ ಜೀವನದ ಮೂಲಭೂತ ಬೇಡಿಕೆಗಳಿಗೆ ಕೊಡಲಿ ಪೆಟ್ಟುಕೊಟ್ಟು, ನಮ್ಮನ್ನು ಗುಲಾಮರನ್ನಾಗಿಯೂ ಸ್ವಾಭಿಮಾನಶೂನ್ಯರನ್ನಾಗಿಯೂ ಮಾಡಿತ್ತು. ಇಂದು ಜೀವನ ಶಿಕ್ಷಣವು ನಮ್ಮ ಜೀವನಾವಶ್ಯಕ ಬೇಡಿಕೆಗಳಾದ ಆಹಾರ, ಆಚ್ಛಾದನ, ಆಶ್ರಯಗಳ ಪೂರೈಕೆಯನ್ನೀಯುವ ಕಾಮಧೇನುವಾಗಿ ನವಭಾರತದ ನಾಗರಿಕರನ್ನಾಗಿ ನಿರ್ಮಿಸಲು ಟೊಂಕಕಟ್ಟಿ ನಿಂತಿದೆ. ಈ ಶಿಕ್ಷಣವು ಗಾಂಧೀಜಿಯವರ ತತ್ವಗಳ ಸತ್ವ ಹೀರಿದ್ದರಿಂದ ಸತ್ಯ, ನ್ಯಾಯ, ಪ್ರೀತಿ, ಸಹಕಾರ, ವಿಶ್ವಾಸ, ತಾಳ್ಮೆಗಳೇ ಇದರ ಮೂಲ ಸೊತ್ತುಗಳಾಗಿರುವವು. ಈ ಶಿಕ್ಷಣವು ಯಶಸ್ವಿ ಪಥದಲ್ಲಿ ಹೆಜ್ಜೆಯನ್ನಿಡಬೇಕಾದರೆ, ಬಾಲಕರಲ್ಲಿ ಆದರ್ಶ ತತ್ವಗಳು ಮೈಗೂಡಬೇಕಾದರೆ ಸಾಲೆಗಳಲ್ಲಿ 'ಸಾಂಘಿಕ ಜೀವನ' ಪ್ರಗತಿ ಪರವಾಗಿ ಅರಳಿ ಬಹುಮುಖವಾಗಿ ಕಂಪುಸೂಸಬೇಕು.

ಸಾಂಘಿಕ ಜೀವನವೆಂದರೆ, ನಾವೆಲ್ಲರು ಒಂದುತನದಿಂದ ಹೊಂದಿಕೊಂಡು ಬರುತ್ತಿರುವ ಎಡರುಗಳನ್ನು ಪ್ರೀತಿಯಿಂದ ತಾಳ್ಮೆಯಿಂದ ಸಹೋದರರಂತೆ ಎದುರಿಸಿ ನಮ್ಮೀ ಜೀವನವನ್ನು ಸುಖದ ನಂದನವನವನ್ನಾಗಿ ಮಾಡಿಕೊಳ್ಳುವದೆಂದು ಸಾಮಾನ್ಯವಾಗಿ ಹೇಳಬಹುದು. ಸಾಂಘಿಕ ಜೀವನದ ತತ್ವಗಳನ್ನು ಅಳವಡಿಸಿಕೊಂಡ ಯಾವದೇ ವ್ಯಕ್ತಿಯಾಗಲಿ, ಕುಟುಂಬವಾಗಲಿ, ಶಾಲೆಯಾಗಲಿ ಇಲ್ಲವೆ ದೇಶವಾಗಲಿ ತನ್ನ ಭವಿತವ್ಯವನ್ನು ಉಜ್ವಲಮಾಡಿಕೊಂಡಿತೇ ಹೊರತು ವಿನಾಶದ ಹಾದಿಯನ್ನು ತುಳಿಯಲಾರದು. ಈ 'ತತ್ವ'ಕ್ಕೆ ಮಹತ್ವ ಕೊಟ್ಟ ಇಂದಿನ ನಮ್ಮ ಸಾಲೆಗಳಲ್ಲಿ 'ಇದರ' ಸ್ಥಾನಮಾನಗಳ ಸಮಸ್ಯೆಗಳ ಎಳೆಗಳನ್ನು ವಿವೇಕ ದೃಷ್ಟಿಯಿಂದ ಬಿಡಿಸೋಣ.

“ಈ ವಿಶಾಲ ವಿಶ್ವವೇ ನನ್ನ ವಸತಿ, ವಾಸಿಸುವ ಜೀವಿಗಳೆಲ್ಲ ಸಹೋದರರು” ಎಂಬ ಆದರ್ಶದ ತತ್ವದ ಭದ್ರ ತಳಹದಿಯ ಮೇಲೆ ಈ ಶಿಕ್ಷಣದ ಧ್ಯೇಯವನ್ನು ನಿರ್ಮಿಸಬೇಕಾದುದರಿಂದ ಹಿರಿಮೆ-ಕಿರಿಮೆಯೆಂಬ ಕೀಳ ಕಲ್ಪನೆಗಳಿಗೆ ಇಲ್ಲಿ ಸ್ಥಾನ ದೊರೆಯಲಾರದು. ಆದುದರಿಂದಲೇ ಸಹೋದರತನವು ಸ್ವಾಭಾವಿಕವಾಗಿ ತಾಳ್ಮೆಯೊಂದಿಗೆ ಬೆಳೆದು ಬರುವದು. 'ಅಧಿಕಾರ'ದ ಮದವು ಹೇಳದೆ ಪಲಾಯನ ಮಾಡುವದು. ಒಂದು-ತನದ ವಾತಾವರಣ ನಿರ್ಮಿತವಾದ ಮೇಲೆ ಜರುಗಲಿರುವ ಚಟುವಟಿಕೆಗಳು ವೈಯಕ್ತಿಕವಾಗಿ ಸಾಗದೆ ಸಹಕಾರದಿಂದ ಹರಿದು ಹಂಚಿ ಹೋಗುವದಲ್ಲದೆ ಬರುತ್ತಿರುವ ಎಡರುಗಳಲ್ಲಿ ಸಮಭಾಗಿಗಳನ್ನಾಗಿ ಮಾಡುವದು. ಆದ್ದರಿಂದ ಬಾಲಕರಲ್ಲಿ ಸಾಂಘಿಕ ಜೀವನದ ತತ್ವಗಳು ನಿಸರ್ಗದತ್ತವಾಗಿ ರಕ್ತದಲ್ಲಿ ಇಳಿದು ಬರುವವು.

ಇಂದಿನ ವಿದ್ಯಾಮಂದಿರಗಳಲ್ಲಿ ನಿತ್ಯದ ಕಾರ್ಯಕ್ರಮಗಳು ಈಶಸ್ತೋತ್ರದ ನಾಂದಿಯಾದ ಮೇಲೆಯೇ ಉಳಿದ ಚಟುವಟಿಕೆಗಳಿಗೆ ಸ್ವಾಗತವನ್ನೀಯುವದು. ಎಲ್ಲರೂ ಕೂಡಿ ಈಶನನ್ನು ಸ್ಮರಿಸುವಾಗ ಮನಸ್ಸು ಶಾಂತಿಯ ತವರೂರಾಗುವದು. ಮನವೆಲ್ಲ ಪವಿತ್ರತೆಯಲ್ಲಿ ಪರಿಶುದ್ಧವಾಗುವದರಿಂದ ಕಾರ್ಯಮಾಡಲು ಉತ್ಸಾಹ ಇಮ್ಮಡಿಸುವದು. ಅನುಕರಣ ಪ್ರಿಯರಾದ ಬಾಲಕರು ಬಿತ್ತರಿಸಿದ ಅಮೃತವಾಣಿಗಳು ತಮ್ಮ ಜೀವನದಲ್ಲಿ ಬೆಳಕಾಗಿ ಬೆಳಗಬೇಕೆಂಬ ಆಕಾಂಕ್ಷೆಯುಳ್ಳವರನ್ನಾಗಿ ಮಾಡದೆ ಇರಲಾರದು. 'ಪ್ರಪಂಚ'ದ ಸುದ್ದಿಗಳ ಮುದ್ದೆಗಳನ್ನು ಕ್ರಮಬದ್ಧವಾಗಿ ಬಿತ್ತರಿಸುವ ಬಾಲಕನು ತನ್ನ ಇತರ ಸಹಪಾಠಿಗಳ ಜ್ಞಾನಾಭಿವೃದ್ಧಿಗೆ ಕಾರಣನಾಗುವನಲ್ಲದೆ ದೈನಂದಿನ ಪತ್ರಿಕೆಗಳನ್ನು ಓದುವ ಕುತೂಹಲವನ್ನು ಕೆರಳಿಸುವನು. ಇಂಥ ಚಿಕ್ಕ ಪ್ರಯತ್ನಗಳು ಮಗುವಿನ

ಜೀವನದಲ್ಲಿ ಹಾಸುಹೊಕ್ಕಾಗಿ ಸೇರಿ ಬಾಳಿನ ವಿಶಾಲ ಸಹಾಸದಲ್ಲಿ ಮುನ್ನುಗ್ಗುವಂತೆ ಪ್ರೇರೇಪಿಸುವದು.

'ಕಾಯಕವೇ ಕೈಲಾಸ'ವೆಂಬ ಬಸವಣ್ಣನವರ ತತ್ವವನ್ನು ತನ್ನ ಜೀವಾಳ ಮಾಡಿಕೊಂಡ ಈ ಶಿಕ್ಷಣವು, ತನ್ನ ಕಾರ್ಯ ಕ್ಷೇತ್ರದ ಬಹುಭಾಗವನ್ನೆಲ್ಲ ಚಟುವಟಿಕೆಗಳ ಮುಖಾಂತರವೇ ವಿದ್ಯೆಯನ್ನು ದಾನ ಮಾಡುತ್ತದೆ. ಆದ್ದರಿಂದ ಜೀವನ ಶಿಕ್ಷಣ ಕ್ಷೇತ್ರಗಳಲ್ಲಿ ನೂಲುವದು, ನೇಯುವದು, ಕೈತೋಟದಲ್ಲಿ ಕೃಷಿವ್ಯವಸಾಯ ಸಾಗಿಸುವದು ಇದಲ್ಲದೆ ಬಡಿಗತನ, ಕೈಕೆಲಸ ಮುಂತಾದ ಕೃತಿಗಳ ಸ್ಥಾನಕ್ಕೆ ಮೀಸಲಿಡಲಾಗಿದೆ. ಇಂಥ ರಚನಾತ್ಮಕ ಕ್ರಿಯೆಗಳು ಕಾರ್ಯರೂಪದಲ್ಲಿ ಬರುವಾಗ ಶ್ರಮವು ಪರಸ್ಪರರಲ್ಲಿ ಹಂಚಿಹೋಗುವದರಿಂದ ಕೃತಿಯ ಯಶಸ್ಸಿಗೆ ಸುಲಭವಾದ ಮಾರ್ಗವಾಗುವದು. ಇದಲ್ಲದೆ ಶಾಸ್ತ್ರೀಯ ರೀತಿಯಿಂದ ಪ್ರತಿಯೊಂದು ಚಟುವಟಿಕೆಗಳು ನಡೆಯುವದರಿಂದ ಕಲಾಭಿವೃದ್ಧಿಯು ವ್ಯಕ್ತಗೊಳ್ಳುವದು... ಕಲಾಭಿವೃದ್ಧಿಯು ವ್ಯೈದೋರುವದು. ಹೀಗಾಗಿ ಬಾಲಕರಲ್ಲಿ ಉತ್ಸಾಹ ತಲೆದೋರಿ ಕೃತಿಗಳ ಬಗ್ಗೆ ಆದರುಳ್ಳವರಾಗುವದರಿಂದ ಜ್ಞಾನದ ಅಭಿಲಾಷೆಗೆ ತಾತ್ಸಾರ ಮಾಡಲಾರರು. ಅನುಭವದಿಂದ ಬಂದ ಈ ಜ್ಞಾನವು ಅವರಲ್ಲಿ ಭದ್ರವಾಗಿ ನೆಲೆಯೂರುವದಲ್ಲದೆ ಶ್ರಮಕ್ಕೆ ಗೌರವ ಕೊಡಬೇಕೆಂಬ ಭಾವನೆಯು ಹೊಳೆಯುವದು. ಅನುಭವಗಳ ಆಗರವಾದ ಈ ಜ್ಞಾನವು ಮಗುವಿನ ಭಾವೀ ಜೀವನದ ಮಂದಿರಕ್ಕೆ ನೆಲಗಟ್ಟನ್ನು ಹಾಕಿದಂತಾಗುವದು.

ನಾನಾಮುಖವಾಗಿ ಹರಿದು ಬರುತ್ತಿರುವ ಜ್ಞಾನವನ್ನು ಹೀರಬೇಕೆನ್ನುವ ಮಗುವಿಗೆ ಕೇವಲ ಶ್ರಮಗೌರವವೊಂದೇ ಜೀವನದ ಜೊತೆಯಾಗಿ ಬರಬಾರದೆಂದು ಮನೋರಂಜನಕ್ಕೂ ಈ ಶಿಕ್ಷಣದಲ್ಲಿ ಅವಕಾಶವನ್ನೀಯಲಾಗಿದೆ. ಆದ್ದರಿಂದ ಚರ್ಚಾಕೂಟ, ಪ್ರವಾಸ, ವನಭೋಜನ, ಮನೋರಂಜನ ಕಾರ್ಯಕ್ರಮ, ಉತ್ಸವ, ದಿನಾಚರಣೆಗಳನ್ನಾಚರಿಸಲು ಕಡ್ಡಾಯ ಮಾಡಲಾಗಿದೆ. ಭಾವೀನಾಗರಿಕರಾಗಬೇಕಾದ ಬಾಲಕರು ಪರಸ್ಪರರು ಕಲೆತು ಒಂದು ವಿಷಯದ ಬಗ್ಗೆ ಚರ್ಚೆ ಮಾಡುವಾಗ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಚರ್ಚಾಕೂಟಗಳಲ್ಲಿ ಸದಾವಕಾಶ ದೊರೆಯುವದು. ಕೂಡಿಕೊಂಡು ಪ್ರವಾಸ, ವನಭೋಜನವನ್ನು ಮಾಡುವಾಗ ನಿಸರ್ಗದ ಮಹತ್ವ, ಪ್ರವಾಸದಿಂದಾಗುವ ಜ್ಞಾನ, ಸಹಭೋಜನದ ರುಚಿ, ಮುಂತಾದವುಗಳ ಅರಿವು ತಮಗರಿಯದಂತೆ ಜೀವನದಲ್ಲಿ ಬೆರೆತು ಬರುವವು. ಉತ್ಸವ ದಿನಾಚರಣೆಗಳನ್ನು ಆಚರಿಸಿದಾಗಂತೂ ನಾವೂ ಮಾನವರಾಗಿ ಬಾ
ಬೇಕೆಂದು ಅವರಲ್ಲಿ ಉತ್ಸಾಹ ತಲೆದೋರುವದು. ಮನೊ
ರಂಜನ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮಲ್ಲಿರು
ಕಲೆಯ ಬೆಲೆಯನ್ನು ಬೀಸಿ, ಸರ್ವರ ಮನವನ್ನು ಸೂ
ಗೊಳ್ಳಬಹುದು !!.

ಸಾಂಘಿಕ ಜೀವನವನ್ನು ತಮ್ಮ ರಕ್ತಗತ ಮಾ
ಕೊಂಡ ಬಾಲಕರು ಸಂಕುಚಿತ ದೃಷ್ಟಿಯುಳ್ಳವರಾ
ಬಾಳಲಾರರು. ಸಮಾಜದಲ್ಲಿ ವಿವೇಕ ದೃಷ್ಟಿಯನ್ನು
ತೂರಿ ಕಾರ್ಯಕ್ಷೇತ್ರವನ್ನು ವಿಶಾಲ ಮಾಡಿಕೊಳ್ಳಲು ಸಮ
ರ್ಥರಾಗುವರು. ಬಾಳಿನ ಹೋರಾಟದಲ್ಲಿ ಹೋರಾ
ಬಲ್ಲ ಈ ಯೋಧರು ದೇಶಸೇವೆಯೇ ಜನಾರ್ಧನ ಸೇ
ಎಂದು ಭಾವಿಸುವರು. ಸಹಕಾರವು ಸದಾ ಇವ
ಬೆಂಗಾವಲಾಗಿರುವದರಿಂದ ಎಡರುಗಳ ತಂಡುಗಳನ್ನು
ಪ್ರೀತಿಯಿಂದ ಹಾಗೂ ಸಹನೆಯಿಂದ ಎದುರಿಸಿ ಸಮಾ
ಕಲ್ಯಾಣ ಮಾಡಲು ಬದ್ಧಕಂಕಣರಾಗುವರು. ತಮ್ಮ
ಬಾಲಜೀವನದ ಗರಡಿಯಲ್ಲಿ ಆದರ್ಶ ತತ್ವಗಳ ಸಾಧನೆ
ಯನ್ನು ಮಾಡುತ್ತಿರುವ ಈ ಬಾಲಕರು ಭಾವೀರಾಷ್ಟ್ರ
ಆದರ್ಶ ನಾಗರಿಕರಾಗುವದರಲ್ಲಿ ಸಂದೇಹವೇನು ?

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ

ಶೀಲಾರ ಕೃತ

ಪ್ರಾಥಮಿಕ ಭೂಮಿತಿ

[ಕ್ಷೇತ್ರಫಲ ಘನಫಲ ಸಹಿತ]

೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.

ಬೆಲೆ: ೧ರೂ. ೮ಆಣೆ ಮಾತ್ರ

ದೊರೆಯುವ ಸ್ಥಳ:—

ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಭಾರತದ ಮುಂದಿನ ವಿದ್ಯಾಭ್ಯಾಸದ ರೀತಿನೀತಿ

ಅಖಿಲಭಾರತ ಆಕಾಶವಾಣಿ ಕಾರ್ಯಕ್ರಮದಲ್ಲಿ [೧೯೫೩ರಲ್ಲಿ]

ಶ್ರೀಮತಿ ಆಶಾದೇವಿ ಆರ್ಯನಾಯಕಂರವರು ಮಾಡಿದ ಭಾಷಣ

ಅನುವಾದಕರು : **ಶ್ರೀ ತಟ್ಟಿ ಶಾಮರಾಯರು** (ಹಿಂದಿನ ಸಂಚಿಕೆಯಿಂದ ಬಂದದ್ದು)

ಮಾನವನ ಇತಿಹಾಸದಲ್ಲಿ ಆಯಾ ಕಾಲದ ಮಾನವನ ಮುಖ್ಯ ಅವಶ್ಯಕತೆಯ ಪೂರ್ತಿಗೆ ಒಬ್ಬ ಮಹಾಪುರುಷನೂ ಒಂದು ದೊಡ್ಡ ಆಂದೋಲನವೂ ಹುಟ್ಟಿ ಬಂದಿವೆ ಎಂದು ಕಂಡು ಬರುವದು. ಈ ಯುಗದ ಅಗತ್ಯಕ್ಕೆ ಹುಟ್ಟಿ ಬಂದ ಮನುಷ್ಯನು ಸಾಮಾನ್ಯ ದರಿದ್ರ ವರ್ಗಕ್ಕೆ ಪ್ರತಿನಿಧಿಯಾಗಿದ್ದನು; ಆತನು ಎಲ್ಲರೊಡನೆ ಎಲ್ಲರ ಹಿತಕ್ಕಾಗಿ ಜೀವಿಸಿದನು. ಈ "ಎಲ್ಲರ ಹಿತಕ್ಕಾಗಿ" ಎಂಬ ಮಂತ್ರವನ್ನು ಆತನು "ಸರ್ವೋದಯ" ಎಂಬ ಪದದಿಂದ ಗಟ್ಟಿ ಮಾಡಿದನು. ತನ್ನ ಅನುಭವ ಪರಿಪಾಕ ಸುಜ್ಞಾನ ಸಂಪದದಿಂದ ಜನರಿಗೆ ಒಂದು ತಾತ್ವಿಕ ತಳಪಾಯದ ಆಧಾರದ ಮೇಲೆ ನೆಲಸಿದ ವಿದ್ಯಾಭ್ಯಾಸ ಕ್ರಮವನ್ನು ಮಾನವನ ಅಂತಿಮ ಗುರಿಯಾದ ಸರ್ವೋದಯದ ಸಾಧನೆಗಾಗಿ ನೀಡಿದನು. ಶಿಕ್ಷಣವು ಕೋಲಾಹಲರಹಿತ ಸಮಾಜ ಕ್ರಾಂತಿಯ ಮುಂದಾಳು ಎಂಬ ಭಾವನೆಯು ಆತನಿಗೆ ಇತ್ತು; ಈ ಕ್ರಾಂತಿಯು ಅದ್ಭುತವಾದ ಬದಲಾವಣೆಯನ್ನುಂಟು ಮಾಡುವ ಪ್ರಭಾವವುಳ್ಳದ್ದಾಗಿದ್ದು ನಿರ್ದುಷ್ಟ ನ್ಯಾಯಬದ್ಧ ಸಮಾಜ ವ್ಯವಸ್ಥೆಯ ತಳಪಾಯವನ್ನು ಹಾಕುವದು; ಆ ಸಮಾಜದಲ್ಲಿ 'ಉಳ್ಳವರು,' 'ಇಲ್ಲದವರು' ಎಂಬ ಅಸ್ವಾಭಾವಿಕ ವಿಭಾಗವಿರುವದಿಲ್ಲ; ಪ್ರತಿಯೊಬ್ಬನಿಗೂ ಉಪಜೀವನದ ವೇತನದ ಹಾಗು ಸ್ವಾತಂತ್ರ್ಯದ ಹಕ್ಕಿನ ಆಶ್ವಾಸನವಿರುವದು.

ಆತನು ನಮ್ಮ ರಾಷ್ಟ್ರೀಯ ಶಿಕ್ಷಣದ ನಿರ್ದೇಶಕ ತತ್ವಗಳನ್ನಷ್ಟೇ ಹೇಳದೆ ಅದರ ಸ್ಪಷ್ಟ ವಿವರಣೆಯ ರೂಪವಾದ ಅಭ್ಯಾಸ ಕ್ರಮವನ್ನು ನಿರೂಪಿಸಿದನು. –ಆತನು ಮೂಲತಃ ವಿಧಾಯಕ ಕಾರ್ಮಿಕನಾಗಿರಲಿಲ್ಲವೇ?

ವಿದ್ಯಾಭ್ಯಾಸವು "ಜೀವನಕ್ಕಾಗಿ ಜೀವನ ಮುಖಾಂತರ" ಎಂದು ಆತನು ನಿರ್ವಚನ ಮಾಡಿದನು. ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳೂ ಶಿಕ್ಷಣಕ್ಕೆ ಸಂಬಂಧಿಸಿದವಾಗಿವೆ— ವ್ಯಕ್ತಿಯ ಆರೋಗ್ಯ, ಮನೆಯ ಆವರಣದ ಆರೋಗ್ಯ, ಮನೆಯಲ್ಲಿನ ಅನ್ನವಸ್ತ್ರಗಳು, ನಾಗರಿಕನ ಹೊಣೆ, ಅವನ ವಿಶ್ರಾಂತಿ ವಿಹಾರ–ಇವಕ್ಕೆ ಸಂಬಂಧಿಸಿದ ಮಾತುಗಳು ಶಿಕ್ಷಣಕ್ಕೂ ನಿಕಟ ಸಂಬಂಧಪಟ್ಟಿವೆ. ಈ ಜೀವನದ ಸಿದ್ಧತೆಯನ್ನಾದರೂ ಜೀವನವನ್ನು ಸಾಗಿಸುವ ಮೂಲಕವಾಗಿಯೇ ಆಗಬೇಕೆಂಬದನ್ನು ಆತನು ನಮಗೆ ಕಲಿಸಿದನು. ವಿದ್ಯಾಭ್ಯಾಸವು ಪೂರ್ತಿಯಾಗಿ ನ್ಯಾಯಬದ್ಧವಾದ ಸಮಾಜ ವ್ಯವಸ್ಥೆಯ ಸಿದ್ಧತೆಗಾಗಿ ಇರುವದೆಂದು ತಿಳಿದುಕೊಂಡರೆ ಈ ಸಿದ್ಧತೆಯನ್ನು ಒದಗಿಸುವದು ಹೇಗೆ? ಅದಕ್ಕೆ ಇರುವದೊಂದೇ ಮಾರ್ಗವು– ಈಗಿದ್ದ ಶಿಕ್ಷಣ ಸಂಸ್ಥೆಗಳನ್ನು–ಪ್ರಾಥಮಿಕ ಶಾಲೆಗಳೇ ಆಗಲಿ, ಮಾಧ್ಯಮಿಕ ಶಾಲೆಗಳೇ ಆಗಲಿ, ಕಾಲೇಜುಗಳೇ ಆಗಲಿ, ವಿಶ್ವವಿದ್ಯಾಲಯಗಳೇ ಆಗಲಿ- ಸಹಕಾರದಿಂದ ಪರಿಶ್ರಮಿಸಿ ಜೀವಿಸುವ ತತ್ವದ ಮೇಲೆ ಊರಿ ನಿಂತು, ಮುನ್ನಡೆದು ತೋರಿಸುವ ಸಮಾಜಗಳನ್ನಾಗಿ ಮಾರ್ಪಡಿಸುವದೊಂದೇ ಮಾರ್ಗ. ಈ ಸಮಾಜಗಳು ಭವಿಷ್ಯತ್ ನ್ಯಾಯನಿಷ್ಠ ಸಾಮಾಜಿಕ ವ್ಯವಸ್ಥೆಗೆ ಹೋರಾಡುವ ವೀರಭಟರಾಗುವರು. ಇಂತು ಈ ಶೈಕ್ಷಣಿಕ ಸಮಾಜಗಳ ಪ್ರತಿಯೊಂದು ಚಟುವಟಿಕೆಯು ವಿದ್ಯಾಭ್ಯಾಸದ ಚಟುವಟಿಕೆಯಾಗುವದು. ಬರಿಯ ಜ್ಞಾನಪ್ರಾಪ್ತಿಯ ಸಾಧನವಾಗದೇ ಸಾರ್ವಾಂಗೀಣ ವಿಕಾಸಸಾಧಕವಾಗುವದು.

ಆತನಿಂದ ಪ್ರತಿಪಾದಿತವಾದ ಈ ಘನವಾದ ಶೈಕ್ಷಣಿಕ ತತ್ವವು ಆಧುನಿಕ ಮನೋವಿಜ್ಞಾನ-ಸಮಾಜವಿಜ್ಞಾನ ಸಂಶೋಧಕರಿಂದ ಪುಷ್ಟೀಕರಿಸಲ್ಪಟ್ಟಿದೆ. ಇಷ್ಟೇ ಅಲ್ಲ ಅದು ಪ್ರಪಂಚದ ಎಲ್ಲ ಸನಾತನ ಪುರಾತನ ಆಧ್ಯಾತ್ಮ ಪರಂಪರೆಯಲ್ಲಿಯೂ ದೃಢೀಕರಿಸಲ್ಪಟ್ಟಿದೆ. ವ್ಯಕ್ತಿಯ ಅಥವಾ ರಾಷ್ಟ್ರದ ಪರಮೋಚ್ಚ ವಿಕಾಸವು ಯಾವಾಗ ಸಾಧಿಸುವದೆಂದರೆ ಶೈಕ್ಷಣಿಕ ಜೀವನವನ್ನು ಯೋಜನೆಯಂತೆ ಆಚರಿಸಿ–ಸಾಮಾನ್ಯ ಹಿತಕ್ಕಾಗಿ ಸಾಮೂಹಿಕ ಪ್ರಯತ್ನದ ಬಾಳುವೆಯಂತೆ ಬಾಳಿದಾಗ. ಜ್ಞಾನ ಸಾಧನೆಯೇ ಒಂದು ಸ್ವತಂತ್ರ ಧ್ಯೇಯ-ಅದು ವಿಸ್ತೃತವಾದ ಸಾಮಾಜಿಕ ನೈತಿಕ–ಧ್ಯೇಯಕ್ಕೆ ಸಂಬಂಧವಿಲ್ಲದ್ದು ಎಂದು ತಿಳಿದರೆ ಅದರಿಂದ ಯಾವ ಸತ್ಫಲ ಪ್ರಾಪ್ತಿಯೂ ಇಲ್ಲ. ಈ ವಿದ್ಯಾಭ್ಯಾಸದ ಕಲ್ಪನೆಯು

ಪ್ರಾಚೀನ ಭಾರತದಲ್ಲಿ ಆಶ್ರಮಗಳಲ್ಲಿ ಗುರುಕುಲಗಳಲ್ಲಿ ಪ್ರಯೋಗಿಸಲ್ಪಟ್ಟಿತು. ಅಲ್ಲಿ ಗುರು ಶಿಷ್ಯರು ಕೂಡಿಯೇ ಜೀವಿಸುತ್ತಿದ್ದರು. ಆ ಜೀವನವೆಂಥದು ? ಎಲ್ಲರೂ ಕೂಡಿ ಕೆಲಸ ಮಾಡುವದು. ಎಲ್ಲರೂ ಸಾಮೂಹಿಕವಾಗಿ ಪೂಜೆ ಪ್ರಾರ್ಥನೆ ಮಾಡುವದು. ಎಲ್ಲರೂ ಮಿಳಿತರಾಗಿ ವಿದ್ಯಾಭ್ಯಾಸ ಮಾಡುವದು—ಇಂತಹ ಸರಳ ಸಾಂಘಿಕ ಜೀವನವದು. ನಮ್ಮ ಹೊಸ ಶೈಕ್ಷಣಿಕ ಕಾರ್ಯಕ್ರಮವು-ಜೀವನ ಶಿಕ್ಷಣವೆಂಬ ಹೆಸರಿನಿಂದ ಜನಪ್ರಿಯವಾದ ಶಿಕ್ಷಣವು–ರಾಷ್ಟ್ರೀಯ ಶಿಕ್ಷಣವನ್ನು ಎಲ್ಲ ಮಟ್ಟಗಳಲ್ಲಿಯೂ ಈ ದೃಷ್ಟಿಯಿಂದ ಪರಿಶೀಲಿಸುವ ಶಿಕ್ಷಣವು–ಸಹಕಾರಯುತ ಪರಿಶ್ರಮವನ್ನಾಶ್ರಯಿಸಿ ಈ ಯುಗದ ಆರ್ಥಿಕ ಸಾಮಾಜಿಕ ಪರಿಸ್ಥಿತಿಯನ್ನನುಲಕ್ಷಿಸಿ, ಸರ್ವರ ಉದಯದ ಶಾಶ್ವತವಾದ ಧ್ಯೇಯಕ್ಕೆ ದುಡಿಯುವ ಎಲ್ಲ ಸಂಸ್ಥೆಗಳ ಕಾರ್ಯಕ್ರಮವಾಗಿರುತ್ತದೆ.

ರಾಷ್ಟ್ರೀಯ ಶಿಕ್ಷಣದ ಒಂದು ಕಾರ್ಯಕ್ರಮದಿಂದ ರಾಷ್ಟ್ರೀಯ ಜೀವನವನ್ನು ರೂಪಿಸುವ ಆಸೆಯನ್ನು ಇಟ್ಟುಕೊಂಡಿದ್ದೇವೆ ನಾವು. ಆದ್ದರಿಂದ ನಮ್ಮ ಶೈಕ್ಷಣಿಕ ಸಂಸ್ಥೆಗಳ ನಕ್ಷೆಯು ಹೇಗಿರಬೇಕೆಂಬುದನ್ನು ನಾವು ಮೊಟ್ಟ ಮೊದಲು ನಿರ್ಧರಿಸೋಣ. ಶಾಲೆ ಕಾಲೇಜು ವಿಶ್ವವಿದ್ಯಾಲಯಗಳನ್ನು ಈಗಿನಂತೆಯೇ ಪರೀಕ್ಷೆ ಪಾಸಾಗುವ ಸ್ಥಳಗಳೆಂದು, ಮುಂದಿನ ಸಂಪಾದನೆಯ ಜೀವನದ ಮೆಟ್ಟಿಲುಗಳೆಂದು ಇಟ್ಟುಕೊಳ್ಳೋಣವೇ ಅಥವಾ ಪ್ರಪ್ರಥಮ ಮಾರ್ಗದರ್ಶಕ ಸಂಘಗಳು—ಸಾರ್ವಜನಿಕ ಹಿತ ಸಾಧನೆಗೆ ಶಿಷ್ಯರೂ ಗುರುಗಳೂ ದುಡಿಯುವ, ಕಲಿಯುವ, ಕೂಡಿ ಬೆಳೆಯುವ ಸಂಘಗಳೆಂದು ಇಟ್ಟುಕೊಳ್ಳೋಣವೋ ?

ನಮ್ಮ ಯುಗಪುರುಷರಾದ ಉಪಾಧ್ಯಾಯರು ಮತ್ತೊಂದು ವಿದ್ಯೆಯ ಮೂಲ ತತ್ವವನ್ನು ನಮಗೆ ನೀಡಿ ಹೋಗಿದ್ದಾರೆ. ಅದನ್ನು ನಾವು ಇನ್ನೂ ತಿಳಿದುಕೊಂಡಿಲ್ಲ, ಸಂಪೂರ್ಣವಾಗಿ ಸ್ವೀಕರಿಸಿಲ್ಲ. ಈ ತತ್ವವು ನಮ್ಮ ರಾಷ್ಟ್ರೀಯ ಅಗತ್ಯದಿಂದ ಉದ್ಭವಿಸಿದೆ; ಆದರೂ ಮಾನವ ವಿಕಾಸವನ್ನು ನಿಯಮಿಸುವ ಸಾರ್ವತ್ರಿಕ ನಿಯಮಗಳಿಗೊಳಪಟ್ಟಿದ್ದೇ–ಅದು ಸಹಕಾರಯುತ ಸ್ವಪ್ರಯತ್ನ, ಸ್ವಾವಲಂಬನ ತತ್ವ.

ಗಾಂಧೀಜಿಯವರು ಮೊದಲು ದೇಶದ ಮುಂದೆ ತಮ್ಮ ರಾಷ್ಟ್ರೀಯ ಶಿಕ್ಷಣದ ಕಾರ್ಯಕ್ರಮವನ್ನು ಇಟ್ಟಾಗ ಅವರು “ಇದಕ್ಕಾಗಿ, ವಿಧಾಯಕ ಕರ್ತೃತ್ವದ ಅಭಾವವು ನನ್ನಲ್ಲಿ ಆಪಾದಿತವಾದರೂ ಧೈರ್ಯಮಾಡಿ; ಶಿಕ್ಷಣವು ಸ್ವಯಂಪೋಷಕವಾಗಿರಬೇಕೆಂಬ ಸೂಚನೆಯನ್ನು ಮಾಡಿದ್ದೇನೆ” ಎಂದು ಹೇಳಿದರು. ಕೊನೆಯ ದಿನದ ವರೆಗೂ ಅವರು ನಿಜವಾದ ಶಿಕ್ಷಣದ ಒರೆಗಲ್ಲು, ಸ್ವಾವಲಂಬನ ಸ್ವಯಂಪೋಷಣೆಯಾಗಿವೆ, ಎಂದು ನಮ್ಮನ್ನು ಮನಗಾಣಿಸಲು ಪ್ರಯತ್ನಿಸಿದರು.

ಪರಾವಲಂಬಿಗಳಿಗೆ ಪ್ರಶಸ್ತಿಯನ್ನು ಕೊಡುವ ಮತ್ತು ತಮ್ಮ ಪರಿಶ್ರಮದಿಂದ ತಮ್ಮನ್ನು, ಸಮಾಜವನ್ನು, ಪೋಷಿಸುವವರನ್ನು ಹೀನರೆಂದೆಣಿಸುವ, ಇದುವರೆಗೆ ಅಸ್ತಿತ್ವದಲ್ಲಿದ್ದ ಸಮಾಜ ನೀತಿಯವರು ಈ ಸ್ವಾವಲಂಬನ ತತ್ವವನ್ನು ಒಪ್ಪಿಕೊಳ್ಳುವದು ಕಷ್ಟ. ಆದರೂ ಪ್ರತಿಯೊಂದು ರಾಜ್ಯದಲ್ಲಿನ ಸರಕಾರಕ್ಕೆ ಸಾರ್ವತ್ರಿಕ ಶಿಕ್ಷಣಕ್ಕೆ ಹಣಕಾಸನ್ನು ಪೂರಯಿಸುವ ಸಮಸ್ಯೆಯನ್ನು ಎದುರಿಸುವ ಪ್ರಸಂಗ ಬಂದಿದೆ. ಈ ಸಾರ್ವತ್ರಿಕ ಶಿಕ್ಷಣದ ಗುರಿಯನ್ನು ಕೇಂದ್ರ ಸರಕಾರದ ನ್ಯಾಯಬದ್ಧ ಘಟನೆಯಲ್ಲಿ ಸ್ವೀಕರಿಸಲಾಗಿದೆ. ನಿರ್ವಾಹವಿಲ್ಲದೆ ಈ ಸ್ವಯಂಪೋಷಣೆಯ ತತ್ವವನ್ನು ಸ್ವಾವಲಂಬನದ ಆಚರಣೆಯನ್ನು ಒಪ್ಪಿಕೊಳ್ಳುವ ದುರ್ಧರ ಪ್ರಸಂಗವು ಬರಬಹುದು. ಸ್ವಯಂಪೋಷಿತ ಒಂದು ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ನಮ್ಮ ಸಹಕಾರಿ ಪ್ರಯತ್ನದಿಂದ ಕಟ್ಟಿ ಬೆಳೆಸುವದರಲ್ಲಿ ಮಾಡಿದ ಸಾಹಸದ ಬಗೆಗೆ, ನಮ್ಮ ಶಿಕ್ಷಕರೂ ವಿದ್ಯಾರ್ಥಿಗಳೂ ಆಡಳಿತಗಾರರೂ ಅಭಿಮಾನ ತಾಳಲಿ; ನಾಚಿಕೆಪಡದೆ ಇರಲಿ. ಇದು ಇತರ ಅನೇಕ ರಾಷ್ಟ್ರಗಳಿಗೆ ಮಾದರಿಯಾಗಬಹುದು– ನಾವು ಬಡವರಿರುವದು ನಿಜ ಆದರೂ ಸ್ವಾಭಿಮಾನಿಗಳೂ ಸ್ವಾವಲಂಬಿಗಳೂ ಆಗೋಣ.

ನಮ್ಮ ಮುಂದಿನ ರಾಷ್ಟ್ರೀಯ ಶಿಕ್ಷಣ ಕಾರ್ಯಕ್ರಮದ ಗೊತ್ತುಗುರಿಗಳನ್ನು, ನಿರ್ದೇಶಕ ತತ್ವಗಳನ್ನು ನಮ್ಮ ಮುಂದೆ ಇಟ್ಟುಕೊಳ್ಳಲಿಕ್ಕೆ ಹವಣಿಸಿದ್ದೇವೆ. ಇನ್ನು ಆ ಶಿಕ್ಷಣದ ಬೇರೆ ಬೇರೆ ಮಟ್ಟಗಳ ಯೋಜನೆಗಳನ್ನು ಪರಿಶೀಲಿಸೋಣ. ಇಡಿಯಾದ ಶೈಕ್ಷಣಿಕ ಕಟ್ಟಡದ ವಿಸ್ತೀರ್ಣವಾದ ತಳಹದಿಯು, ಸಾಮಾಜಿಕ ಅಥವಾ ಪ್ರೌಢರ ಶಿಕ್ಷಣವಾಗಿರಬೇಕೆಂಬ ಮಾತು ಸ್ಪಷ್ಟವಿದೆ. ಅದು ಹೊಸ ಸಮಾಜ ವ್ಯವಸ್ಥೆಯ ಸರ್ವತೋಮುಖವಾಗಿ ಸಮತೋಲದಿಂದ ಬೆಳೆದು ಬಂದ ಮುಂದಿನ ನಾಗರಿಕರಾದ ಎಲ್ಲ ಸ್ತ್ರೀ ಪುರುಷರ ಸಮಾಜ ಶಿಕ್ಷಣವಾಗಿರಬೇಕು. ಈ ವಿಶಾಲವಾದ, ವ್ಯಾಪಕವಾದ ಮೂಲಾ

ಧಾರದ ಮೇಲೆ ನಾವು ಜೀವನ ಶಿಕ್ಷಣದ ವ್ಯವಸ್ಥೆಯನ್ನು ರಚಿಸಬೇಕು.—೧೪ ವರ್ಷದ ವರೆಗಿನ ಮಕ್ಕಳ ವಿದ್ಯಾಭ್ಯಾಸವನ್ನು.

ಪ್ರಾಥಮಿಕ ಮಟ್ಟದಲ್ಲಿ ಮೂಲ ಶಿಕ್ಷಣವನ್ನು ರಾಷ್ಟ್ರೀಯ ಶಿಕ್ಷಣದ ನಮ್ಮ ಮುಂದಿನ ಕಾರ್ಯಕ್ರಮವೆಂದು ಸ್ವೀಕರಿಸಲಾಗಿದೆ ಎಂದು ಹೇಳಿದ್ದೇವೆ. ವಿದ್ಯಾಖಾತೆಯ ಕೇಂದ್ರ ಮುಖ್ಯ ಮಂತ್ರಿಗಳಾದ ಅಬುಲ್ ಕಲಾಮ್ ಆಜಾದರು ತಮ್ಮ ಅಖಿಲ ಭಾರತ ಆಕಾಶವಾಣಿ ಕಾರ್ಯಕ್ರಮ ಭಾಷಣದಲ್ಲಿ ಇದನ್ನು ದೃಢಪಡಿಸಿದ್ದಾರೆ. ವ್ಯವಹಾರದಲ್ಲಿ ಇದನ್ನು ಅನುಷ್ಠಾನಕ್ಕೆ ತರುವದರ ಸಾಧ್ಯಾಸಾಧ್ಯತೆಯನ್ನು ನೋಡೋಣ.

ಎಷ್ಟೋ ರಾಜ್ಯಗಳಲ್ಲಿ ಗ್ರಾಮ ಪ್ರದೇಶಗಳಲ್ಲಿ ಜೀವನ ಶಿಕ್ಷಣವನ್ನಾರಂಭಿಸಲಾಗಿದೆ. —ಹೆಚ್ಚು ಬಡವರ ವಸತಿಯ ಕ್ಷೇತ್ರದಲ್ಲಿ, ಕೆಲವು ಪುರಪಾಲಿಕೆಯ ಸಾಲೆಗಳಲ್ಲಿ, ಆರಂಭಿಸಲಾಗಿದೆ. ಆದರೆ ನಮ್ಮ ನಾಯಕರೂ ಆಡಳಿತಗಾರರೂ (ಮೂಲ ಶಿಕ್ಷಣದ ಆಡಳಿತಗಾರರನ್ನು ಹಿಡಿದು) ಜೀವನ ಶಿಕ್ಷಣವನ್ನು ಸ್ವೀಕರಿಸಿಲ್ಲ—ಸ್ವೀಕರಿಸಿದ್ದರ ಸಾಕ್ಷಿ ತಮ್ಮ ಮಕ್ಕಳಿಗೆ ಅದು ಯೋಗ್ಯವಾದುದು ಎಂದು ತಿಳಿಯುವದಾದರೆ—ಆದ್ದರಿಂದ ಇನ್ನೂ ಇಂದಿನ ನಮ್ಮ ರಾಷ್ಟ್ರೀಯ ಶಿಕ್ಷಣದ ಯಥಾಸ್ಥಿತ ಚಿತ್ರವೆಂದರೆ ವರ್ಗ ಶಿಕ್ಷಣವೇ ಎಂದು ಹೇಳಬಹುದು. ಸರಕಾರದ ಹಣದ ಸಹಾಯವನ್ನೇ ಪಡೆದ ಸಾಲೆಗಳ ಒಂದು ಖಂಡವು ಭಾಗ್ಯವಂತರ ಮಕ್ಕಳಿಗೆ; ಗ್ರಾಮಗಳಲ್ಲಿ, ಪಟ್ಟಣಗಳಲ್ಲಿ ಭಾಗ್ಯಹೀನರ ಮಕ್ಕಳಿಗಾಗಿ ಮೂಲ ಶಿಕ್ಷಣ ಶಾಲೆಗಳ ಇನ್ನೊಂದು ಖಂಡ, ಹೀಗಿದೆ ಈಗ. ಈ ಪರಿಸ್ಥಿತಿಯಲ್ಲಿ ಜೀವನ ಶಿಕ್ಷಣ ಸಾಲೆಗಳು ರಾಷ್ಟ್ರೀಯ ಸಾಲೆಗಳಾಗವು; ಅವು "ಬಡ ಸಾಲೆಗಳು" ಆಗುವವು. ಯಾವ ಮೂಲಶಿಕ್ಷಣವು, 'ಉಳ್ಳವರು' 'ಇಲ್ಲದವರು' ಎಂಬ ಭೇದವಿಲ್ಲದ ನ್ಯಾಯನಿಷ್ಠುರವಾದ ಸಮಾಜ ಘಟನೆಯ ಮುಂಚೂಣಿ ಎಂದು ಅದರ ಪ್ರತಿಪಾದಕರ ಮೂಲ ಭಾವನೆಯಿದ್ದಿತೋ, ಅದು ಇದರಿಂದ ಅರ್ಥಹೀನವಾಗಲಿಲ್ಲವೇ ?

ಜೀವನ ಶಿಕ್ಷಣವನ್ನು ಮುಂದರಿಸಬೇಕೆನ್ನುವ ನಾವು, ರಾಷ್ಟ್ರದ ನಾಯಕರು, ಮೂಲಶಿಕ್ಷಣದ ಧೋರಣವನ್ನು ಒಪ್ಪುವರೋ ಇಲ್ಲವೋ ಎಂದು ಕೂಲಂಕಷವಾಗಿ ಆಲೋಚಿಸಿ ನಿರ್ಧಾರಕ್ಕೆ ಬರಬೇಕೆಂದು ಕೇಳುವೆವು. ಮೂಲಶಿಕ್ಷಣವು ಪರಿಪೂರ್ಣವಾದ ಶಿಕ್ಷಣ ಯೋಜನೆಯಾಗಿದೆ; ಅದನ್ನು ಇಡಿಯಾಗಿಯೇ ಕಾರ್ಯಗತ ಮಾಡಬೇಕೇವಿನಾ ಅದರಲ್ಲಿನ ಒಂದರ್ಧ ಅಂಶವನ್ನು ಬಿಟ್ಟು ಪ್ರಾರಂಭಿಸಿದರೆ ಅದು ನಿಷ್ಫಲವಾಗುವದು. ಇದಕ್ಕಾಗಿ, ಅದು ಎಲ್ಲರಿಗಾಗಿ, ಎಲ್ಲರ ಹಿತಕ್ಕಾಗಿ, ಎಲ್ಲ ಮಟ್ಟಗಳಲ್ಲಿಯೂ ಅತ್ಯಂತ ಯೋಗ್ಯವಾದ ಶಿಕ್ಷಣ ಎಂಬ ಮನವರಿಕೆಯಾಗುವದು ಅಗತ್ಯ. ರಾಷ್ಟ್ರೀಯ ಶಿಕ್ಷಣದ ರಚನೆಗೆ ಮೂಲ ಶಿಕ್ಷಣವು ವಿಶೇಷ ಮಹತ್ವವನ್ನು ಪಡೆದಿದೆ ಎಂದು ಮನಗಾಣಬೇಕು. ನಮ್ಮ ಮಂತ್ರಿವರ್ಯರ ಮಾತಿನಲ್ಲಿ ಹೇಳುವದಾದರೆ ಆ ಮೂಲ ಶಿಕ್ಷಣದ ತತ್ವಗಳನ್ನೇ ಮಾಧ್ಯಮಿಕ ಮತ್ತು ವಿಶ್ವವಿದ್ಯಾಲಯ ಮಟ್ಟಗಳಲ್ಲಿ ಅನುಸರಿಸಬೇಕು.

ಮಾಧ್ಯಮಿಕ ಮತ್ತು ಅಪರ ಮೂಲಶಿಕ್ಷಣ ಸಂಸ್ಥೆಗಳು ಸಹಕಾರಿ ಪರಿಶ್ರಮ ಹಾಗು ಸಾಂಘಿಕ ಜೀವನದ ಮುಖಾಂತರ ಶಿಕ್ಷಣ ಕಾರ್ಯಕ್ರಮವನ್ನು ಕ್ರಮವಾಗಿ ಅನುಷ್ಠಾನಕ್ಕೆ ತರಬೇಕು— ಈ ಕಾರ್ಯಕ್ರಮದ ಮಟ್ಟವನ್ನು ಎತ್ತರಿಸಿ ಅವು ರಾಷ್ಟ್ರವನ್ನು ಕಟ್ಟುವ ಚಟುವಟಿಕೆಗಳ ಕೇಂದ್ರಗಳಾಗಬೇಕು. ೧೫ ಹಾಗು ೧೮ರ ನಡುವಿನ ವಯಸ್ಸಿನ ತರುಣ ವಿದ್ಯಾರ್ಥಿಗಳುಳ್ಳ ಈ ಸಂಸ್ಥೆಗಳಲ್ಲಿ ಅಧ್ಯಾಪಕರು ವಿದ್ಯಾವಿತರಣದಕ್ಷರೂ ತಾಂತ್ರಿಕ ಕುಶಲರೂ ಆಗಿರಬೇಕು. ಈ ಸಂಸ್ಥೆಗಳು ಸ್ವಯಂಪೋಷಣೆಯುಕ್ತವಾಗಿರಬೇಕಲ್ಲದೆ ತಮ್ಮ ಉತ್ಪಾದಕ ಶ್ರಮದ ಮೂಲಕ ಹಾಗು ಸಮಾಜ ಸೇವೆಯ ಮೂಲಕ ರಾಷ್ಟ್ರದ ಸಂಪತ್ತಿಗೆ ತಮ್ಮ ಕೊಡುಗೆಯನ್ನು ನೀಡಬೇಕು. ಅವು ಜ್ಞಾನ ಉದ್ಯಮ ಕೌಶಲಗಳ ವಿತರಣ ಕೇಂದ್ರಗಳಾಗಿರಬೇಕು. ಇಂತಿವು ಸುತ್ತಲಿನ ಗ್ರಾಮಗಳ ಜೀವನ ಮಟ್ಟವನ್ನು ಸ್ವಾಭಾವಿಕವಾಗಿ ಎತ್ತರಿಸಬಲ್ಲವು.

ರಾಷ್ಟ್ರೀಯ ಶಿಕ್ಷಣದ ಈ ಅಭ್ಯಾಸ ಕ್ರಮವು ೧೪ ವರ್ಷದ ವರೆಗಿನ ಈ ದೇಶದ ಎಲ್ಲ ಬಾಲ-ಬಾಲಿಕೆಯರಿಗೆ ದೊರೆಯುವದೆಂದು ಆಶಿಸಲಾಗಿದೆ— ಈ ವಿದ್ಯಾಭ್ಯಾಸ ಪದ್ಧತಿಯು ರಾಜ್ಯಕ್ಕೆ ಖರ್ಚಿನ ದೃಷ್ಟಿಯಿಂದ ಭಾರವಾಗದೆ ರಾಷ್ಟ್ರದ ಸಂಪತ್ತಿಗೆ ಅದು ಭರತಿ ಹಾಕಿ ರಾಷ್ಟ್ರದ ಪುನರ್ರಚನೆಗೆ ಸನ್ನದ್ಧರೂ ಉತ್ಸಾಹಿಗಳೂ ಆದ ತರುಣ ತರುಣಿಯರ ಒಂದು ಪೀಳಿಗೆಯನ್ನು ನಿರ್ಮಾಣ ಮಾಡಿ ರಾಜ್ಯದ ಜೀವನ ಮಟ್ಟವನ್ನು ಎತ್ತರಿಸುವಂತಾದರೆ ಮಾತ್ರ ನಮ್ಮ ಆಶೆಯು ಕೈಗೂಡಬಲ್ಲದು.

ಮುಂದಿನ ವಿಶ್ವವಿದ್ಯಾಲಯದ ಮಟ್ಟದ ಶಿಕ್ಷಣದ ಯೋಜನೆಯು ಸ್ಥಿತಿವಂತರಿಗಾಗಿ ಇರದೆ ಆ ಶಿಕ್ಷಣ ಪಡೆ

ಯುವದಕ್ಕೆ ಅವಶ್ಯವಿದ್ದ ಯೋಗ್ಯತೆ ಸಾಮರ್ಥ್ಯವಿದ್ದವರಿಗಾಗಿ ಇರಬೇಕು. ಇನ್ನು ಮುಂದೆ ಬರುವ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳು ಡಿಗ್ರಿಗಳನ್ನು ಕೊಂಡುಕೊಳ್ಳಲಿಕ್ಕೆ ಬರುವ ಮಾರುಕಟ್ಟೆಗಳಾಗಿರದೆ ಭಕ್ತ್ಯಾದರದಿಂದ ಬಂದು ಶ್ರೇಷ್ಠ ಜ್ಞಾನವಂತರಾಗಿ ಅವರು ಬೆಳೆದು ಬರುವ ಪವಿತ್ರ ಕ್ಷೇತ್ರಗಳಾಗಬೇಕು— ಮಾನವನಿಗಾಗಿ ಪರಿಶ್ರಮಿಸುವ, ನಿಜವಾದ ಸ್ವಾತಂತ್ರ್ಯವನ್ನು ತಂದು ಕೊಡುವ ಜ್ಞಾನವನ್ನು ಪಡೆಯುವ ಕ್ಷೇತ್ರಗಳಾಗಬೇಕು, ಆಗುವವೆಂದು ಆಶಿಸೋಣ. ವಿಶ್ವವಿದ್ಯಾಲಯಗಳಲ್ಲಿನ ಇತ್ತೀಚಿನ ಕೋಲಾಹಲಗಳಿಂದ ಸ್ಪಷ್ಟವಾಗಿಯೂ ಕರುಣಾಜನಕವಾಗಿಯೂ ರಾಷ್ಟ್ರದ ತರುಣರ ಮೇಲೆ ಈ ವಿದ್ಯೆಯ ಅಂಗಡಿಗಳು ಯಾವ ಆಘಾತವನ್ನುಂಟುಮಾಡಿವೆ ಎಂಬ ಮಾತಿನ ನಿದರ್ಶನವಾಗುವದಿಲ್ಲವೇ? ಅಂಗಡಿಯ ಮಟ್ಟದಿಂದ, ಸಾರ್ವಜನಿಕ ಹಿತಕ್ಕಾಗಿ ಮಾಡುವ ಸಹಕೃತ ಶೈಕ್ಷಣಿಕ ಪ್ರಯತ್ನದ ಉಚ್ಚ ಅಂತಸ್ತಿಗೆ ನಮ್ಮ ಶಿಕ್ಷಣವನ್ನು ಎತ್ತರಿಸುವದಕ್ಕೆ, ಭಾರತದ ನಾಗರಿಕರಾದ ನಾವು ನಿಷ್ಠೆಯಿಂದ ಪ್ರಯತ್ನ ಮಾಡಬೇಡವೇ ?

ಜೀವನದ ಒಂದು ಪರಿಪೂರ್ಣ ತತ್ವಜ್ಞಾನ ರೂಪವಾದ, ಮತ್ತು ಸರ್ವತೋಮುಖವಾದ ರಾಷ್ಟ್ರದ ಜೀವನದ ಪುನರುಜ್ಜೀವನಕ್ಕೆ ತಕ್ಕ ಕಾರ್ಯಕ್ರಮ ರೂಪವಾದ ಈ ಶಿಕ್ಷಣದ ಅಭ್ಯಾಸ ಕ್ರಮದಲ್ಲಿ ಮೂಲ ಶಿಕ್ಷಣದಲ್ಲಿ ದುಡಿಯುವ ನಾವು ನಮ್ಮ ವಿಶ್ವಾಸವನ್ನೂ ಶ್ರದ್ಧೆಯನ್ನೂ ವ್ಯಕ್ತ ಮಾಡೋಣ. ಜೀವನಾವಶ್ಯಕ ವಸ್ತುಗಳನ್ನು ಉತ್ಪಾದಿಸುವದಕ್ಕೆ ಇಂದು ಪರಿಶ್ರಮಿಸುವ ಜನರ ಜೀವನವನ್ನು ನಡೆಯಿಸುವ ನಿಯಮಗಳ ಆಧಾರದ ಮೇಲೆ ಈ ಶಿಕ್ಷಣವು ನಿಂತಿದೆ. ಈ ಪರಿಶ್ರಮವು ಅಥವಾ ಕೈಕೆಲಸವು ಕೀಳೆಂದು ನಾವು ಭಾವಿಸಬಾರದು; ಅದು ಕೀಳಾಗಿರದೆ ಮಾನವನ ಮತ್ತು ಸಮಾಜದ ವಿಕಾಸದ ಅತ್ಯುಚ್ಚ ಸಾಧನವೆಂದು ಭಾವಿಸಬೇಕು; ಇಷ್ಟೇ, ಆ ಪರಿಶ್ರಮವು ಶೋಷಣರಹಿತವಾಗಿರಬೇಕು, ಸ್ವಾರ್ಥಕ್ಕಾಗಿ ಲಾಭದ ಆಸೆಯಿಂದ ದೂರವಾಗಿರಬೇಕು; ಜ್ಞಾನ ನೈತಿಕ ಆದರ್ಶಗಳಿಂದ ದೀಪ್ತವಾಗಿರಬೇಕು— ಎಲ್ಲರ ಹಿತಕ್ಕಾಗಿ ಸಹಕರಿಸಿ ದುಡಿಯುವ ಆದರ್ಶದಿಂದ ಉಜ್ವಲವಾಗಿರಬೇಕು— ಪರಮೇಶ್ವರನಲ್ಲಿ ನಿವೇದನ ಬುದ್ಧಿಯಿಂದ ಕೈಕೊಂಡಿರಬೇಕು. ಸಹಕಾರ ಭಾವದಿಂದ ಕೂಡಿದ ಸ್ವಪ್ರಯತ್ನ ಅಥವಾ ಸ್ವಾವಲಂಬನವು ಉದಾತ್ತವಾದ ಸಾಮಾಜಿಕ ಆದರ್ಶವೆಂದು ನಾವು ನಂಬಿದ್ದೇವೆ. ಈ ಭಾವವು ನಮ್ಮ ಎಲ್ಲ ಶೈಕ್ಷಣಿಕ-ಚಟುವಟಿಕೆಗಳಲ್ಲಿ ಬೆರೆತಿರಬೇಕು. ಈ ಮೂಲಭೂತ ತತ್ವಗಳು ಕೇವಲ ಪ್ರಾಥಮಿಕ ಶಿಕ್ಷಣಕ್ಕೆ ಅನ್ವಯಿಸುವವಾಗಿರದೆ ಶಿಕ್ಷಣದ ಮಾಧ್ಯಮಿಕ, ವಿಶ್ವವಿದ್ಯಾಲಯದ ಹಾಗು ಸಂಶೋಧನೆಯ —ಎಲ್ಲ ಮಟ್ಟಗಳಿಗೂ ಅನ್ವಯಿಸಬೇಕು. ಈ ಘನವಾದ ಶಿಕ್ಷಣ ವ್ಯವಸ್ಥೆಯ ನಿಜವಾದ ಗುರಿಯು, ಶಿಕ್ಷಣ ಕ್ಷೇತ್ರಕ್ಕೆ ಮಾತ್ರ ಅದನ್ನು ಸೀಮಿತ ಮಾಡುವದರಿಂದ ಸಫಲವಾಗದು. ಅದು ನಮ್ಮ ಎಲ್ಲ ರಾಷ್ಟ್ರೀಯ ಕಾರ್ಯಗಳಿಗೂ ಸಂಬಂಧಿಸಬೇಕು. ರಾಷ್ಟ್ರೀಯ ಶಿಕ್ಷಣದ ಮುಂದಿನ ಕಾರ್ಯಕ್ರಮವನ್ನು ಹಿಡಿದು ರಾಷ್ಟ್ರ ನಿರ್ಮಾಣದ ಎಲ್ಲ ಯೋಜನೆಗಳನ್ನು ಒಂದು ಸಾಮಾನ್ಯ ನೈತಿಕ ಉದ್ದೇಶಾನುಸಾರವಾಗಿ ಯೋಗ್ಯ ನ್ಯಾಯ ಮೂಲವಾದ ಸಮಾಜ ರಚನೆಯ ಒಂದು ಸರ್ವಸಾಮಾನ್ಯ ಕಾರ್ಯದಲ್ಲಿ ಸಮನ್ವಯಗೊಳಿಸಬೇಕು; ಈ ನಮ್ಮ ಪ್ರಯತ್ನಗಳ ಮೂಲಕ ನಾವು ನಮ್ಮ ರಾಷ್ಟ್ರ ಜೀವನವನ್ನೊಂದೇ ಮೇಲ್ಮಟ್ಟಕ್ಕೊಯ್ಯುವದಲ್ಲದೇ ಸರ್ವ ಸಾಮಾನ್ಯರ ಸಮಾನ ಹಿತಕ್ಕಾಗಿ ಸಾಮೂಹಿಕ ಸಾಹಸದಲ್ಲಿ ಜಗತ್ತಿನ ಮೇಲಿನ ಭಾಗ್ಯಹೀನರಾದ ಎಲ್ಲ ಬಂಧು-ಭಗಿನಿಯರೊಡನೆಯೂ ಸಹಕರಿಸುವೆವು ಎಂದು ನಾವು ಆಶಿಸೋಣವೇ?

೧೯೩೭ ರಲ್ಲಿ ಗಾಂಧಿಜಿಯವರು ಈ ಶೈಕ್ಷಣಿಕ ಕಾರ್ಯಕ್ರಮವನ್ನು ದೇಶದ ಮುಂದೆ ಇಟ್ಟಾಗ ಅವರು "ಶಹರದ ಜನರು ನನ್ನ ಮಾತನ್ನು ಕೇಳಿಯಾದರೂ ಕೇಳುವರೋ ಅಥವಾ ನನ್ನ ಮಾತು ಅರಣ್ಯರೋದನವಾಗಿ ಹೋಗುವದೋ ?" ಎಂದು ಕೇಳಿದರು. ಅವರ ಪ್ರಶ್ನೆಯು ಇನ್ನೂ ರಾಷ್ಟ್ರದ ಮುಂದಿದೆ. ಶಹರವಾಸಿಗಳೆ ರಾಷ್ಟ್ರದ ನಾಯಕರಾಗಿರುವರು. ಅವರು ಆತನ ಮಾತನ್ನು ಆಲಿಸುವರೋ ಇಲ್ಲವೆ ಅದು ಅರಣ್ಯರೋದನವಾ ಹೋಗುವದೋ ?

* * *

ನೂಲುವ ನೆಯ್ಗೆಯ ಮೂಲೋದ್ಯೋಗ ಶಾಲೆಗಳಲ್ಲಿ

ಉತ್ತಮ ನೂಲು ತಯಾರಿಸಲು ದಕ್ಷತೆವಹಿಸಿ ಅನುಸರಿಸತಕ್ಕ ಕೃತಿಗಳು

ಲೇಖಕರು : **ಶ್ರೀ ಜಿ. ಎ. ಮಿರಜಕರ,** ಎ. ಡಿ. ಇ. ಆಯ್., ವಿಜಾಪೂರ.

ಅನೇಕ ನೂಲು-ನೆಯ್ಗೆಯ ಮೂಲೋದ್ಯೋಗ ಶಾಲೆಗಳಲ್ಲಿ ನೂಲು ಸರಿಯಾಗಿ ತಯಾರಾಗದ ಮೂಲಕ ಆ ನೂಲು ನೆಯ್ಗೆಯ ಕೆಲಸಕ್ಕೆ ಬಾರದೇ ಉಳಿದು, ಕಡೆಗೆ ಹೀಗೆ ತಯಾರಿಸಿದಂಥ ಗುಂಡಿ (ಲಡಿ)ಗಳನ್ನು ಕೂಡ, ನೂಲು ಅಶಕ್ತವಾಗ ತೋಡಲಿಕ್ಕೂ ಬಾರದಂತಾಗಿ ಎಷ್ಟೋ ಕಡೆಗೆ ನಾಲ್ಕಾರು ವರುಷಗಳಿಂದ ನೂಲು ಕೂಡಿ ಬಿದ್ದಿದೆ ಎಂಬ ಮಾತು ಎಲ್ಲರಿಗೂ ಗೊತ್ತಿದೆ. (ಈಗ ಕೂಡಿ ಬಿದ್ದಂಥ ಅಶಕ್ತ ಅಸಮಾನತೆಯುಳ್ಳ ನೂಲಿನಿಂದ ಕನಿಷ್ಠ ಹಗ್ಗಗಳನ್ನಾದರೂ ತಯಾರಿಸಿ ಮಾರಿದರೆ ಕಚ್ಚಾ ಮಾಲಿನ ಅರ್ಧ ಬೆಲೆಯೂ ಕೂಡ ಬರುವದಿಲ್ಲವೆಂದು ಕೇಳಿ ಬರುತ್ತದೆ. ಈಗ ತಯಾರಾಗಿ ಕೂಡಿ ಬಿದ್ದಂಥ ನೂಲಿಗೆ ಏನು ಮಾಡಲೂ ಸಾಧ್ಯವಿಲ್ಲ.) ಆದರೆ ಇನ್ನು ಮುಂದೆಯಾದರೂ ಹೀಗಾಗದಂತೆ ಎಚ್ಚರ ಪಡಲು ಮುಖ್ಯವಾಗಿ ಉತ್ತಮ ನೂಲು ತಯಾರಿಸಲು ಹತ್ತಿಯ ಸ್ವಚ್ಛತೆ ಮೊದಲುಗೊಂಡು ನೂಲು ತಯಾರಾಗುವ ವರೆಗೆ ಕೆಳಗಿನಂತೆ ದಕ್ಷತೆವಹಿಸಿ ಕೆಲಸ ಸಾಗಿಸಿದರೆ ನೂಲು ಅತಿ ಉತ್ತಮ (ಶಕ್ತಿ-ಸಮಾನತೆಯುಳ್ಳದ್ದಾಗಿ) ಆಗುವದಲ್ಲದೆ ನೆಯ್ಗೆಯ ಕೆಲಸಕ್ಕೆ ಸರಳವಾಗುವದರಲ್ಲಿ ಏನೂ ಸಂಶಯವಿಲ್ಲ.

ಮುಖ್ಯವಾಗಿ ಲಕ್ಷ್ಮೀ ಹತ್ತಿಯನ್ನು ಶಾಲೆಗೆ ಎಂದೂ ಕೊಂಡುಕೊಳ್ಳಬಾರದು. ಲಕ್ಷ್ಮೀ ಹತ್ತಿಯನ್ನು, ಅರೆಯುವ ಮಣಿ-ಸಳಿ (ಕುಡ-ಹಲಿಗೆ)ಗಳಿಂದ ಅರೆಯಲು ಬರುವದಿಲ್ಲ. ಶ್ರಮವಹಿಸಿ ಅರೆದರೂ ಕಾಳು ಬೇರೆಯಾಗದೇ ಅಲ್ಲಿಯೇ ಒಡೆಯುತ್ತವೆ. ಒಡಕು ಕಾಳು-ಮಿಶ್ರಿತ ಅರಳಿಯಿಂದ ಹಂಜಿಗಳು ಸರಿಯಾಗುವದಿಲ್ಲ. ನಂತರ ನೂಲು ಸರಿಯಾಗಿ ಹೊರಡುವದಿಲ್ಲ. ಅದಕ್ಕಾಗಿ ಉತ್ತಮ ಜಯಧರ ಹತ್ತಿಯನ್ನೇ ಫೇಬ್ರುವರಿ, ಮಾರ್ಚ ತಿಂಗಳಲ್ಲಿಯೇ ಖರೀದಿ ಮಾಡಿ ಜತನ ಮಾಡಿಡಬೇಕು.

ಕ್ರಿಯೆಗಳು

(೧) ಹತ್ತಿಯ ಸ್ವಚ್ಛತೆ:— ಮುಖ್ಯವಾಗಿ ಹತ್ತಿಯಲ್ಲಿದ್ದ ಎಲೆಗಸರು ಹಾಗೂ ಇತರ ಕಸರುಗಳನ್ನು ತಂತುಗಳಿಗೆ ಧಕ್ಕೆಯಾಗದಂತೆ ತೆಗೆಯಬೇಕು. ಈ ಕಸರು ಹಾಗೇ ಇಟ್ಟು ಅರೆದು ಹಿಂಜಿ ಹಂಜೀಮಾಡಿದರೆ ಹಂಜಿಗಳು ಸರಿಯಾಗಿ ಆಗುವದಿಲ್ಲ. ಅಲ್ಲದೆ ನೂಲುವಾಗ್ಗೆ ಮೇಲಿಂದ ಮೇಲೆ ಕಸರು ಬಂದು ಹರಿಯುತ್ತದೆ. ಈ ಪ್ರಕಾರ ಹರಿಯುವದರಿಂದ ನೂಲಿನ ಗತಿ ಕುಂಠಿತವಾಗುವದು, ಮತ್ತು ನೂಲು ಸಹ ಸರಿಯಾಗಿ ಸಮಾನತೆ-ಶಕ್ತಿಯುತವಾಗಿ ಆಗುವದಿಲ್ಲ. ಆದ್ದರಿಂದ ಗುರುಗಳು ಮಕ್ಕಳಿಗೆ ಒಂದು ದಿವಸದಲ್ಲಿಯ ಎರಡು ಅವಧಿಗಳಲ್ಲಿ ಹತ್ತಿ ಸ್ವಚ್ಛ ಮಾಡಿ, ಅರೆದು ಹಿಂಜಿ ಹಂಜೀ ಮಾಡಿಕೊಂಡು ನೂಲುವಷ್ಟೇ ಹತ್ತಿಯನ್ನು ಕೊಡಬೇಕು. ನಂತರ ಸ್ವಚ್ಛ ಮಾಡತಕ್ಕ ಹತ್ತಿಯನ್ನು ತಮ್ಮ ಬಲಗಡೆಯಲ್ಲಿ, ವರ್ತಮಾನಪತ್ರ ಕೊಟ್ಟು ಅದರ ಮೇಲೆ ಇಟ್ಟುಕೊಳ್ಳಲು ಹೇಳಬೇಕು. ಸ್ವಚ್ಛ ಮಾಡತಕ್ಕ ಹತ್ತಿಯ ಒಂದೊಂದೇ ತೊಳೆ ತೆಗೆದುಕೊಂಡು ಮೊದಲು ಎಡಗೈಯಲ್ಲಿ ಹಿಡಿದು ಬಲಗೈ ಬೆರಳುಗಳ ಚುಟುಕಿಯಿಂದ ಜಾಡಿಸಬೇಕು. ಇದರಿಂದ ಹತ್ತಿಯಲ್ಲಿದ್ದ ಮಣ್ಣು ಮುಂತಾದ್ದು ಉದುರಿ ಕೆಳಗೆ ಬೀಳುತ್ತದೆ. ಮತ್ತು ಅದಕ್ಕೆ ಅಂಟಿಕೊಂಡಿದ್ದ ಎಲೆಗಸರು ಮೇಲೆ ಬರುತ್ತಿದೆ. ಅದನ್ನು ಸಾವಕಾಶವಾಗಿ ತೆಗೆದು ತೊಳೆಯನ್ನು ಸ್ವಲ್ಪ ಉದ್ದಕ್ಕೆ ಮಾಡಿ ಎಡಗಡೆಗೆ ಅಥವಾ ಮುಂಭಾಗದಲ್ಲಿ ಸ್ವಲ್ಪ ದೂರದಲ್ಲಿ ಸಾಲಾಗಿ ಇಡುತ್ತ ಹೋಗಬೇಕು. ಆದರೆ ಸ್ವಚ್ಛ ಮಾಡುವಾಗ್ಗೆ ಕಾಳುಗಳಿಂದ ಅರಳಿಯನ್ನು ಬೇರ್ಪಡಿಸಕೂಡದು. ಒಂದರ ಮೇಲೊಂದು ಇಟ್ಟು ದಬ್ಬಬಾರದು. ಆದರೆ ಸಾವಕಾಶವಾಗಿ ಇಡಲು ಅಡ್ಡಿಯಿಲ್ಲ.

(೨) ಅರೆಯುವದು:— ಸ್ವಚ್ಛ ಮಾಡಿದ ದಿನವೇ ಹತ್ತಿಯನ್ನು ಅರೆಯಲು ಬಹಳೇ ಸರಳವಾಗುತ್ತದೆ. ಆದರೆ ಮುನ್ನಾದಿನ ಅಥವಾ ಮೊದಲು ಸ್ವಚ್ಛ ಮಾಡಿದ್ದ ಹತ್ತಿಯ ತೊಳೆಗಳು ಒತ್ತಟ್ಟಿಗೇ ಕೂಡಿಸಿಟ್ಟದರ ಪರಿಣಾಮವಾಗಿ ತೊಳೆಗಳು ಒಂದಕ್ಕೊಂದು ದಬ್ಬಲ್ಪಟ್ಟು ಅರೆಯಲು ಅನುಕೂಲವಾಗುವದಿಲ್ಲ. ಈ ಪ್ರಕಾರ ಇದ್ದ, ಅರೆದಂಥ ಅರಳಿಯೂ ಕೂಡ ಮುಂದೆ ಹಿಂಜು

ನಾಗ್ಗೆ ಸರಿಯಾಗಿ ಹಿಂಜದೇ ಗಂಟು ಗಂಟಾಗಿ ಉಳಿದು ಹಂಜಿಗಳು ಸರಿಯಾಗಿ ಆಗುವದಿಲ್ಲ. ಮುಂದೆ ನೂಲು ಕೂಡ ಅಸಮಾನ ಹೊರಡುತ್ತದೆ. ಆದ್ದರಿಂದ ಎರಡು ಅವಧಿಗಳಲ್ಲಿ ಕೆಲಸ ಮಾಡಲು ಯೋಜಿಸಿಕೊಂಡು ಕೊಟ್ಟ ಹತ್ತಿಯನ್ನು ಸ್ವಚ್ಛ ಮಾಡಿ ಬಲಗಡೆಗೆ ಇಟ್ಟುಕೊಂಡು ಅರೆಯುವ ಕುಡ ಹಲಿಗೆಯನ್ನು (ನುಣುಪಾದ ಕುಡ ಜಂಗು ಹತ್ತಿರಬಾರದು) ತೆಗೆದುಕೊಂಡು ಎಡಗೈಯಲ್ಲಿ ಅರೆಯುವ ಕುಡವನ್ನು ಹಿಡಿದು ಬಲಗೈಯಿಂದ ಸ್ವಚ್ಛ ಮಾಡಿದ ಹತ್ತಿಯ ಒಂದೊಂದೇ ತೊಳಿ ತೆಗೆದುಕೊಂಡು ಮಣೆಯ ಮೇಲಿಟ್ಟು ಮೊದಲು ತೊಳೆಯಲ್ಲಿಯ ಅರ್ಧ ಕಾಳುಗಳನ್ನೂ ನಂತರ ತೊಳಿ ಹೊರಳಿಸಿ ಉಳಿದ ಅರ್ಧ ಕಾಳುಗಳನ್ನೂ ಸಳಿಯಿಂದ ತೆಗೆದು ಬಲಗೈಯಲ್ಲಿಯ ಸಳಿಯನ್ನು ಕೆಳಗಿಡದೇ ಹಾಗೆಯೇ ಎರಡೂ ಕೈಗಳಿಂದ, ಅರೆದ ಅರಳೆಯನ್ನು ಉದ್ದಕ್ಕೆ ಜಗ್ಗಿ (ಪಸರಿಸಿ) ಎದುರಿಗೆ ಒಂದರ ಮೇಲೊಂದು ಸಾವಕಾಶವಾಗಿ ಇಡುತ್ತ ಹೋಗಬೇಕು. ಎಡ್ಡರು ಬಲ ಹೇಳಿದಲ್ಲಿ ಎಡ ಎಂದೂ ಎಡ ಹೇಳಿದಲ್ಲಿ ಬಲ ಎಂದೂ ಸೇರಿಸಿಕೊಂಡು ಓದಬೇಕು.

(೩) **ಹಿಂಜುವದು:**— ಒಂದೆರಡು ಅಥವಾ ಬಹಳ ದಿವಸಗಳ ಹಿಂದೆ ಅರೆದು ಕೂಡಿಸಿಟ್ಟ ಅರಳಿಯನ್ನು ಧುನುಷಿನಿಂದ ಹಿಂಜುವವೆಂದರೆ ಮಕ್ಕಳ ಶ್ರಮ ವ್ಯರ್ಥ ಹಾಳು ಮಾಡಿದಂತೆಯೇ ಸರಿ. ಇದರಿಂದ ಅರಳಿಯು ಸರಿಯಾಗಿ ಹಿಂಜದೆ ಹಾಗೆಯೇ ಗಂಟು ಗಂಟಾಗಿ ಉಳಿದು ಹಂಜಿಗಳು ಸರಿಯಾಗಿ ಆಗುವದಿಲ್ಲ. ಇಂಥ ಹಂಜಿಗಳಿಂದ ನೂಲು ಸರಿಯಾಗಿ ಸಮಾನತೆಯುಳ್ಳದಾಗಿ ಹೊರಡುವದಿಲ್ಲ. ಆದ್ದರಿಂದ ಅರೆದ ದಿನವೇ ಒಂದೊಂದೇ ತೊಳೆಯಾಗಿ ಬಲಗಡೆಗೆ ಇಟ್ಟಂಥ ಅರಳಿಯನ್ನು ಪಾಲಾಮುಂಡಿ ಧನುಷಿನ ಹೆದೆಗೆ (ದಾರಕ್ಕೆ) ಚಾಲೀ ತೊಪ್ಪಲು ಅದು ಸಿಗದಿದ್ದಲ್ಲಿ ಅಂಟಿನ ನೀರನ್ನು ಹಚ್ಚಿಕೊಂಡು ಎಡಗೈಯಲ್ಲಿ ಧನುಷು ಹಿಡಿದು ಧನುಷಿನ (ತಮ್ಮ ಕಡೆಗಿದ್ದ) ¼ ಭಾಗದಲ್ಲಿ ಬಲಗೈ ತೋರ್ಬೆರಳು ಹಾಗೂ ಹೆಬ್ಬೆರಳಿನ ಚುಟುಕಿಯಿಂದ ಜಗ್ಗುತ್ತ ಬಲಗಡೆಗಿದ್ದ ಅರಳಿಯನ್ನು ಮೇಲ್ಬದಿಯಿಂದ ಹಿಂಜುತ್ತ ಹೋಗಬೇಕು. ಅರಳಿಯನ್ನು ಇಡಿಯಾಗಿ ಹಿಂಜಬಾರದು. ಹಿಂಜಿದ ನಂತರ ತಿಳಿ (ಹಿಂಜಿದ ಅರಳೆ)ಯನ್ನು ಎಡಕ್ಕೇ ಇಡಬೇಕು. ಧನುಷಿನಿಂದ ಒಮ್ಮೆ ತಿಳಿಯಾಗಿ ಹಿಂಜಿದ ಅರಳಿಯನ್ನು ಸರಿಯಾಗಿ ಎಲ್ಲವನ್ನು ಬೆರಳುಗಳ ಕತ್ತರಿಯಿಂದ ಬಿಡಿಸಿದ ನಂತರವೇ ಎರಡನೆಯ ಸಾರೆ ಹಿಂಜಲು ಪ್ರಾರಂಭಿಸಬೇಕು. ಹೆದೆಗೆ ಎಳ್ಳಷ್ಟೂ ಅರಳಿ ಹತ್ತಿರಬಾರದು. ಹಿಂಜಿದ ಅರಳಿಯನ್ನು ಬೆರಳುಗಳ ಕತ್ತರಿಯಿಂದಲೇ ಬಿಡಿಸತಕ್ಕದ್ದು. ಬೆರಳುಗಳ ಚುಟುಕಿಯಿಂದಲ್ಲ. ಹಿಂಜಿದ ಅರಳಿಯಲ್ಲಿ ಗಂಟುಗಳು ಇರಲೇ ಕೂಡದು. ಅದು ನೀರಿನಂತೆ ತಿಳಿಯಾಗಿರಬೇಕು.

(೪) **ಹಂಜೀ ಹಾಕುವದು:**— ಹಿಂಜಿದ ಅರಳಿಯನ್ನು ಹಂಜೀ ಮಾಡುವಾಗ, ಎಡಗೈಯಲ್ಲಿ ಹಿಡಿದ ನುಣುಪಾದ ಹಂಜೀ ಸಳಿ ಇಲ್ಲವೆ ಬಿದುರಿನ ಹಂಜೀ ಕಡ್ಡಿಯನ್ನು ಹಿಡಿದು ಬಲಗೈಯಿಂದ ಒಂದಾಣೆ ತೂಕದಷ್ಟೇ ತಿಳಿಯನ್ನು ತೆಗೆದುಕೊಳ್ಳಬೇಕು. ಹಿಂಜಿದ ಅರಳಿ ಎಂದರೆ ಸೂಕ್ಷ್ಮವಾದ ಮಲ್ಲಿಗೆಯ ಅಥವಾ ಗುಲಾಬೀ ಹೂವೆಂದು ತಿಳಿದು ಮುಟ್ಟಬೇಕು. ಹಂಜಯ ಮಣೆಯ ಮೇಲಿಟ್ಟು ಹಂಜೀ ಮಾಡುವಾಗ ಅದನ್ನು ಕೈಯಿಂದ ಹತ್ತಿಕ್ಕಬಾರದು. ಹಂಜಿಯನ್ನು ತಯಾರಿಸಿದ ನಂತರ ಅದನ್ನು ಹಿಡಿ ಮಣೆಯಿಂದ ಮುಂದೂಡಬೇಕು. ಹಂಜಿಗಳು ಒಂದೇ ಉದ್ದಳತೆಯವು ಹಾಗೂ ಒಂದಾಣೆ ತೂಕದವು ಇರಬೇಕು. ಹಂಜಿಗಳು ಸರಿಯಾಗಿರದಿದ್ದರೆ ನೂಲು ಸರಿಯಾಗಿ ಹೊರಡುವದಿಲ್ಲ. ಹಂಜಿಗಳು ಅತಿ ಮೃದುವಾಗಿಯೂ ಅಥವಾ ಅತಿ ಬಿರುಸಾಗಿಯೂ ಆಗದೆ ಮಧ್ಯಮ ತರದವು ಇರಬೇಕು. ಹಂಜಿಗಳನ್ನು ತಯಾರಿಸಿದ ಕೂಡಲೇ ಅವನ್ನು ಕಾಗದದಲ್ಲಿ ಗಟ್ಟಿಯಾಗಿ ಸುತ್ತಿ ಹವೆ ಪ್ರವೇಶಿಸದಂತೆ ಕಟ್ಟಿ ಇಡಬೇಕು.— ಹಂಜಿಗಳನ್ನು ವರ್ಧಾ ಪದ್ಧತಿಯಂತೆ ಅರೆಯುವ ಮಣೆಯ ಮೇಲೆ ಕೈಯಿಂದ ಮಾಡುವದರಿಂದ ಸರಕಾರಕ್ಕೆ ಹಂಜೀ ಮಣೆ ಜತೆಯ ಬಹಳಷ್ಟು ಉಳಿತಾಯ ಆಗುತ್ತದೆ.

(೫) **ನೂಲುವದು:**— ಹಂಜಿಯ ಹಿಡಿತ (ರಾಟಿ—ತಕಲಿ ಹೆಬ್ಬೆರಳು ಮತ್ತು ಉಂಗರ ಬೆರಳು. ಎಡಗೈ ಹೆಬ್ಬೆರಳು ಮತ್ತು ತೋರ್ಬೆರಳುಗಳ ಚುಟುಕಿ) ಸರಿಯಾಗಿರಬೇಕು. ಯಾವಾಗಲೂ ಸಣ್ಣ (ಗತಿಚಕ್ರ) ಗಾಲಿಯ ಸಮಾಂತರವಾಗಿ ಬಲಗಾಲ ಮೊಳಕಾಲು-ಇಟ್ಟು ಕೂಡ್ರತಕ್ಕದ್ದು. ಚರಖಾದ ಮೇಲೆ ನೂಲುವಾಗ ಎಡಗೈಯನ್ನು ನೆಲಕ್ಕೆ ಸಮಾಂತರವಾಗಿ ಒಯ್ಯಬೇಕು. ಕೈಯೆಳೆ ಯಾವಾಗಲೂ ೮ ರಿಂದ ೧೦ ವರೆಗೆ ಬಿಡಬೇಕು. ಇದರಿಂದ ನೂಲಿನ ಸಮಾನತೆ ಕಾಯ್ದುಕೊಳ್ಳಲು ಹೆಚ್ಚು ಅನುಕೂಲವಾಗುತ್ತದೆ. ಅಂದರೆ ಕೈಯೆಳೆಯ ಮೇಲೆಯೂ ನೂಲಿನ ಸಮಾನತೆ ಅವಲಂಬಿಸಿದೆ ಎಂದು ಅನ್ನಲು ಅಡ್ಡಿಯಿಲ್ಲ. ಕೈ ಎಳೆ ಕಡಿಮೆ ಬಿಟ್ಟರೆ ಹುರಿ

ಒಮ್ಮೆಲೇ ಹಂಜಿಯಲ್ಲಿ ಏರಿ ಕಟ್ಟುರಿಯಾಗಿ ಹಂಜಿಯಲ್ಲಿಯ ಅರಳಿ ಒಮ್ಮೆಲೇ ಗೊನ್ನೆಯಾಗಿ ಒಂದು ನೂಲು ಅಸಮಾನವಾಗುವದು. ಇಲ್ಲವೆ ಚಟ್ಟನೆ ಹರಿಯುವದು. ಈ ಪ್ರಕಾರ ಪ್ರತಿ ಸಾರೆ ಕೈ ಎಳೆ ಕಡಿಮೆಬಿಟ್ಟು ನೂಲುವಾಗ್ಗೆ ಹರಿಯುತ್ತ ಹೋದರೆ ನೂಲು ಸಂತಾನೇ ಅಸಮಾನ, ಅಶಕ್ತವಾಗುತ್ತ ಹೋಗುವದು. ತಕಲಿಯ ಮೇಲೆ ನೂಲುವಾಗ್ಗೆ ಸಹ ಕೈ ಎಳೆ ೮'' ರಿಂದ ೧೦" ರ ವರೆಗೆ ಬಿಟ್ಟು ನೂಲಬೇಕು. ಮತ್ತು ದೃಷ್ಟಿಯು ಎದುರಿಗೆ ಕೈ ಬಂದ ಕೂಡಲೇ ಎಡಬದಿಗೆ ಹಂಜಿಕೈ (ಎಡಗೈ) ಯನ್ನು ಕರ್ಣ ಮಾರ್ಗವಾಗಿ ಒಯ್ಯಬೇಕು. ನೂತ ನೂಲನ್ನು ಸುತ್ತುವಾಗ್ಗೆ ಎಡಗೈಯನ್ನು ಯಾವಾಗಲೂ ಬಿಗಿಹಿಡಿದು ಸುತ್ತಬೇಕು. ಹೀಗೆ ಮಾಡದಿದ್ದರೆ ಮುರಿಗೆಗಳು ಆಗುತ್ತವೆ. ತಕಲಿ ಮತ್ತು ಕದಿರಿನ ಮೇಲೆ ಸುತ್ತಲ್ಪಟ್ಟ ಈ ಮುರಿಗೆಗಳಿಂದ ಹವೆಯ ಘರ್ಷಣವಾಗಿ ನೂಲುವ ಗತಿಗೆ ಅಡ್ಡಿಯಾಗುತ್ತದೆ. ಮೋಡಿಯಾದ (ಗೊಂಬಿಯ) ಮೂಗದಾರ ಅತಿ ಬಿಗಿಯಾಗಿ ಕಟ್ಟುವದರಿಂದ ಕದಿರು ಮೇಲೆ ನಿಲ್ಲುತ್ತದೆ. ಇದರಿಂದ ನೂಲಲು ಸರಿಯಾಗಿ ಬರುವದಿಲ್ಲ. ಅಂದರೆ ಕದಿರು ಮೇಲೆ ಎದ್ದು ಬರುತ್ತದೆ. ಕದಿರಿಗೆ ದಿಂಡು (ಚಿಲ್ಲಿ ನಿಲ್ಲಲು) ಗಟ್ಟಿಯಾಗಿ ಕಟ್ಟತಕ್ಕದ್ದು. ಇದರಿಂದ ನೂತ ನೂಲು ಸುತ್ತುವಾಗ ನೂಲು ಹಿಂದೆ ಮುಂದೆ ಬೀಳುವದಿಲ್ಲ. ಕುಕ್ಕಡಿ ಯಾವಾಗಲೂ ಗಜ್ಜರೀ ಆಕಾರದಂತೆ ಸುತ್ತಲ್ಪಡಬೇಕು. ಇದರಿಂದ ನೂಲು ತೋಡುವಾಗ್ಗೆ ಸರಳ ಬರುವದು. ಕದಿರಿನ ಗಡಗಡಿ ಯಾವಾಗಲೂ ಮೋಡಿಯಾದ ಮಧ್ಯದಲ್ಲಿಯೇ ತಿರುಗುತ್ತಿರಬೇಕು. ಹಂಜಿಗೆ ತಕ್ಕಂತೆ ನೂಲನ್ನು ತೆಗೆಯಬೇಕು.

(೬) ಸುತ್ತುವದು:— ಚರಖಾದ ಮೇಲೆ ನೂತ ಒಂದೇ ತರಗತಿಯ ನೂಲನ್ನು ಯಾವಾಗಲೂ ದುಬಟ್ಟಾ ನ್ಯಾಟ್ಯಂಡಿನಿಂದ (ಗಿಂಟಿಡ ಹರಿ) ಹುರಿ ಹಾಕಿ, ಹಾಗೂ ತಕಲಿಯ ಮೇಲಿನ ನೂಲನ್ನು ಆಗಿಂದಾಗ್ಗೆ ಗಿಂಟಿ ಮಾಡಿ ಗುಂಡಿಗಳನ್ನು ಮಾಡಬೇಕು. ಒಂಟಿಕೆಯ ನೂಲಿನ ಗುಂಡಿಗಳನ್ನು ಎಂದೂ ಮಾಡತಕ್ಕದ್ದಲ್ಲ. ಈ ಪ್ರಕಾರ ಹುರಿ ಹಾಕಿ ಮಾಡಿದ ಜನುಗು ನೂಲಿನ ಗುಂಡಿಗಳನ್ನು ಶರ್ಟಿಂಗ ಇಲ್ಲವೆ ಕೋಟಿಂಗಿನ ಹಾಸಿಗೆ ತೋಡಲು, ಉಳಿದ ಉರುಟು ನೂಲನ್ನು ಆಸನ ಮುಂತಾದವುಗಳಿಗೆ ಹಾಗೂ ನಾಡಾ ಗಿಂಟನ್ನು ಶರ್ಟಿಂಗ ಮತ್ತು ಕೋಟಿಂಗಿನ ಹೊಕ್ಕಿಗೆ ತೋಡಿಕೊಳ್ಳಲು ಬರುತ್ತವೆ. ತೀರ ಉರುಟು ನೂಲನ್ನು ನಾಲ್ಕೆಳೆ, ಆರೆಳೆ, ಎಂಟೆಳೆ ಮಾಡಿಕೊಂಡು ಆಸನದ ಹೊಕ್ಕಿಗೆ ಉಪಯೋಗಿಸಲು ಬರುವದು. ಆದ್ದರಿಂದ ನೂತ ನೂಲನ್ನು ಯಾವಾಗಲೂ ಜೋಡೆಳೆಯಾಗಿಯೇ ಹುರಿ ಹಾಕಿ ಗುಂಡಿ ಮಾಡುವದರಿಂದ ಈಗಿನಂತೆ ನೂಲು ಹಾಳಾಗುವ ಸಂಭವವಿಲ್ಲ; ಅಲ್ಲದೆ ನೂಲು ಅಶಕ್ತ ಕೂಡ ಆಗುವದಿಲ್ಲ.

ಈ ಕ್ರಿಯೆಗಳಿಗೆ ತಕ್ಕಂತೆ ಉಪಕರಣಗಳು ಹೇಗಿರಬೇಕೆಂಬ ಬಗೆಗೆ ಮುಂದಿನ ಸಾರೆ ಬರೆಯಲಾಗುವದು.

ಮೂಲ ಶಿಕ್ಷಣದ ಅರಿವು

ಅನುವಾದಕರು : **ಶ್ರೀ ಶಿಂತ್ರಿ ಬಸಪ್ಪನವರು,** ಬಿ.ಎ.,ಬಿ.ಟಿ.

(ಹಿಂದಿನ ಸಂಚಿಕೆಯಿಂದ ಬಂದದ್ದು)

೧೦ ಪ್ರಕರಣ

ಭವಿತವ್ಯ

೧೯೩೭ರಲ್ಲಿ ಜನತೆಯ ಅವಗಾಹನೆಗೋಸ್ಕರ ಮೂಲ ಶಿಕ್ಷಣವು ಮೊತ್ತ ಮೊದಲು ಮಂಡಿಸಲ್ಪಟ್ಟಾಗ ಶಿಕ್ಷಣ ಶಾಸ್ತ್ರದ ಪಂಡಿತರೆಷ್ಟೋ ಜನರು ಅದನ್ನು ಹೀಯಾಳಿಸಿದರು. ಶಿಕ್ಷಣವನ್ನು ಕಾಯಕಷ್ಟಕ್ಕೆ ತಳಕು ಹಾಕಿದ ವಿಚಾರವಂತೂ ಅವರಿಗೆ ವಿಲಕ್ಷಣವೆಂದೂ ಅಸಹ್ಯವೆಂದೂ ಅನಿಸಿತು. ದುಡಿಮೆಯ ಮುಖಾಂತರ ಶಿಕ್ಷಣವೆಂಬುದು ಸಾಲೆಯ ಮಕ್ಕಳನ್ನು ಗುಲಾಮರನ್ನಾಗಿ ಮಾಡಿದಂತಾಗುವದೆಂದನ್ನುವಷ್ಟರ ದೂರದ ವರೆಗೆ ಅವರು ಹೋದರು. ಆದರೆ, ಅದು ಹಿತಕರವೆಂದೂ ಅಭ್ಯಾಸ ಪತ್ರಿಕೆಯಲ್ಲಿ ಅದಕ್ಕೊಂದು ಸ್ಥಾನವಿರುವದು

[redacted] ೧೫ ವರ್ಷಗಳ ನಂತರ ಈಗ ಅದು ಸ್ವೀಕರಿಸಲ್ಪಟ್ಟಿದೆ. ವಿಶ್ವವಿದ್ಯಾನಿಲಯಗಳ ಶಿಕ್ಷಣದ ಬಗೆಗೆ ಡಾ. ರಾಧಾಕೃಷ್ಣನ್ನರವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಿರ್ಮಿಸಲ್ಪಟ್ಟ ಸಮಿತಿಯವರು "ಅದು ಶಿಕ್ಷಣ ಕ್ಷೇತ್ರದಲ್ಲಿ ದೃಢವಾದ ಮನ್ನಣೆಯನ್ನೂ ಕಾರ್ಯಾಚರಣೆಯನ್ನೂ ಹೊಂದುತ್ತ ನಡೆದಿದೆ"ಯೆಂದು ಅಭಿಪ್ರಾಯಪಟ್ಟು ಅದನ್ನು ಪ್ರೇಮಾದರಗಳಿಂದ ಸ್ವಾಗತಿಸಿ ತಮ್ಮ ಒಪ್ಪಿಗೆಯನ್ನು ಸಲ್ಲಿಸಿದ್ದಾರೆ. ಅದಕ್ಕಿಂತಲೂ ಇತ್ತೀಚೆಗೆ ನಿರ್ಮಿತವಾದ ಮಾಧ್ಯಮಿಕ ಶಿಕ್ಷಣ ಸಮಿತಿಯವರು "ವ್ಯಕ್ತಿಯ ಹಿತದ ದೃಷ್ಟಿಯಿಂದಳಿದು ನೋಡಲು ನಿಜವಾದ ಶಿಕ್ಷಣವೆಂದರೆ ಯೋಜನೆಯನ್ನು ತಯಾರಿಸುವದು, ಆ ಯೋಜನೆಯಂತೆ ಕಾರ್ಯವನ್ನು ಕೈಕೊಳ್ಳುವದು, ಮತ್ತು ಕೊನೆಗೆ ತನ್ನ ಮನವನ್ನು ಹಿಡಿಯುವ ಸಂಗತಿಗಳನ್ನು ಅರಗಿಸಿಕೊಳ್ಳುವದು. ಸ್ವಂತ ಕೃತಿಯಿಂದಲೇ ಬುದ್ಧಿಯು ವಿಕಾಸಗೊಳ್ಳುವದು.'' ಎಂದು ಅಂದಿದ್ದಾರೆ (೧೯೫೨-೫೩ರಲ್ಲಿ ಪ್ರಕಟಗೊಂಡ ವರದಿಯ ೪೦ನೆಯ ಪುಟವನ್ನು ನೋಡಿರಿ). "ದುಡಿತದ ಮನೆಯು ನಡತೆಯನ್ನು ತಿದ್ದುವ ಸಂಸ್ಥೆಯು" ಎಂದು ಆ ವರದಿಯಲ್ಲಿ ಅನ್ನುವಷ್ಟರ ದೂರದ ವರೆಗೆ ಆ ಸಮಿತಿಯವರು ಹೋಗಿದ್ದಾರೆ.

ಮೂಲ ಶಿಕ್ಷಣದ ಪ್ರಭಾವವು ಸಮಾಜವನ್ನು ಬಹಳಷ್ಟು ಭೇದಿಸಿದೆ. ಕಾಯಕಷ್ಟದ ಗೌರವವನ್ನೆತ್ತಿ ಹಿಡಿಯುವದು ನಮ್ಮ ಸುತ್ತಲೆಲ್ಲ ಕಂಡು ಬರುತ್ತಿದೆ. ರಾಷ್ಟ್ರೀಯ ಬಾಲವೀರರ ತಂಡ (National Cadet Corps) ದವರು ಎಷ್ಟೋ ಫರ್ಲಾಂಗುಗಳ ಗಟಾರುಗಳನ್ನು ಅಗಿಯುವದನ್ನೂ, ಸಾಲೆಯ ಮಕ್ಕಳು ಸಾಲೆಯ ಮನೆಯನ್ನು ಕಟ್ಟಿಕೊಳ್ಳುವದನ್ನೂ, ಕಾಲೇಜದ ವಿದ್ಯಾರ್ಥಿ-ವಿದ್ಯಾರ್ಥಿನಿಯರು ರಸ್ತೆ, ಪಾಯಖಾನೆ, ಮೂತ್ರಿ, ಮುಂತಾದವುಗಳನ್ನು ರಚಿಸುವದನ್ನೂ, ಸುಶಿಕ್ಷಿತ ನರ-ನಾರಿಯರು ಹಳ್ಳಿಗಳಲ್ಲಿ ಸಫಾಯಿಯ ಯೋಜನೆಗಳನ್ನು ಸಂಘಟಿಸುವದನ್ನೂ ನಾವು ನೋಡುತ್ತಿದ್ದೇವೆ. ನಮ್ಮ ಹಿಂದಿನ ಪೀಳಿಗೆಯು ಕೇಳದಂತಹ ಈ ಸಂಗತಿಗಳು ಗಾಂಧೀಜಿಯವರ ಸಂದೇಶದ ಮುಕ್ತಾಫಲಗಳಲ್ಲದೆ ಮತ್ತೇನು? ಈ ಲಕ್ಷಣಗಳು ಎಷ್ಟೇ ಚನ್ನಾಗಿದ್ದರೂ ಸಾಕೆಂದೆನಿಸಲಾರವು. ಆವುದಾದರೊಂದು ದೇಶದ ಭವಿತವ್ಯವು ಆ ದೇಶದಲ್ಲಿಯ ಪ್ರತಿಯೊಬ್ಬನು ಮಾಡುವ ಕೆಲಸದ ಗುಣದ ಮೇಲೂ ತನ್ನ ನಿತ್ಯದ ಹೋರೆಗಳಲ್ಲಿ ತೋರ್ಪಡಿಸುವ ಕಸಬುತನದ ಯೋಗ್ಯತೆಯ ಮೇಲೂ ಅವಲಂಬಿಸಿದೆ. ವೈಯಕ್ತಿಕ ಯೋಗ್ಯತೆಯ ಹೊರತು ಆವುದಾದರೊಂದು ಸಾಮೂಹಿಕ ಧ್ಯೇಯಕ್ಕೋಸ್ಕರ ಎಲ್ಲರಗೂಡ ಕೂಡಿಕೊಂಡು ಸರಾಗವಾಗಿ ಕೆಲಸ ಮಾಡುವದು ಅತ್ಯಂತ ಮಹತ್ವದ ವಿಷಯವು. ಈಗಿನ ದಿನಮಾನಗಳಲ್ಲಿ ಆವುದಾದರೊಂದು ಸಾರ್ವಜನಿಕ ಉದ್ದೇಶಕ್ಕೋಸುಗ ಜನತೆಯನ್ನು ಸಂಘಟಿಸಿ ಅಣಿಗೊಳಿಸುವವರಿಗೆ ಯಶವು ಸಿಗುವದುಂಟು. ಇಂತಹ ಗುಣಗಳನ್ನು ಚಿಗುರಿಸಲು ದೀರ್ಘವಾದ ತರಬೇತಿಯು ಅವಶ್ಯವಿದೆ. ಇಂತಹ ಗುಣಗಳನ್ನು ಹುಟ್ಟಿಸುವಂತಹ ಶಿಕ್ಷಣ ಪದ್ಧತಿಗೆ ನಮ್ಮ ಶಿಕ್ಷಣ ಸಂಸ್ಥೆಗಳು ಹೊಂದಿಕೊಂಡು ಹೋಗುವದು ಲೇಸು.

ಮೂಲ ಶಿಕ್ಷಣವು ದೇಶದಾದ್ಯಂತ ಕೆಳಗಿನ ಹಾಗೂ ಮೇಲಿನ ಬೇಸಿಕ್ ವರ್ಗಗಳಲ್ಲಷ್ಟೇ ನಡೆದಿದೆ. ಬೇಸಿಕ್ಕಾನಂತರದ ಶಿಕ್ಷಣವು ಕೆಲವೇ ಸಾಲೆಗಳಲ್ಲಿ ಮಾತ್ರ ಸಾಗಿದೆ. ಬಿಹಾರದಲ್ಲಿಯ ಹಲವನ್ನು ಮತ್ತು ಸೇವಾಗ್ರಾಮದಲ್ಲಿಯದೊಂದನ್ನು ಬಿಟ್ಟರೆ, ಉಳಿದ ರಾಜ್ಯಗಳಲ್ಲಿ ಒಂದೂ ಸಹ ಇಲ್ಲ. ಮದ್ರಾಸ ರಾಜ್ಯದಲ್ಲಿ ಬೇಸಿಕ್ಕಾನಂತರದ ವರ್ಗಗಳನ್ನು ತೆರೆಯಲು ಎರಡೇ ಎರಡು ಸಂಸ್ಥೆಗಳಿಗೆ ಪರವಾನಿಗೆಯು ಇತ್ತೀಚೆಗೆ ಕೊಡಲ್ಪಟ್ಟಿದೆ. ಬೇಸಿಕ್ ಶಿಕ್ಷಣವನ್ನು ಬಳಿಕೆಯಲ್ಲಿ ತರುವದರಲ್ಲಿ ಪ್ರಗತಿಯು ಮಂದಗತಿಯಿಂದ ಸಾಗಿದೆಯೆಂಬುದು ಸ್ಪಷ್ಟವಿದೆ. ಮತ್ತು ಅದನ್ನು ತ್ವರಿತಗೊಳಿಸಬೇಕು. ಉಚ್ಚ ಶಿಕ್ಷಣದ ಕ್ಷೇತ್ರದಲ್ಲಿಯಂತೂ ಅದು ಇಲ್ಲವೇ ಇಲ್ಲ. ವಿಶ್ವವಿದ್ಯಾನಿಲಯಗಳ ಶಿಕ್ಷಣ ಸಮಿತಿಯವರು (೧೯೪೮-೪೯ನೆಯ ಸಾಲಿನಲ್ಲಿ ಪ್ರಕಟವಾದ ಅವರ ವರದಿಯ ೫೭೬ನೆಯ ಪುಟವನ್ನು ನೋಡಿರಿ) ಈ ಪ್ರಕಾರ ಅಭಿಪ್ರಾಯಪಟ್ಟಿದ್ದುಂಟು—"ಒಮ್ಮೆ ಅಭ್ಯಾಸ ಒಮ್ಮೆ ಕೆಲಸ, ಹಾಗೂ ಕಾಯಕಷ್ಟವುಳ್ಳ ಕಾಯಕಗಳಲ್ಲಿಯ ಪ್ರಾಯೋಗಿಕ ಶಿಕ್ಷಣ, ಇವು ಮಂದ ಬುದ್ಧಿಯವರಿಗೂ, ಕಾಯಕಗಳ ತಾತ್ತ್ವಿಕ ಶಿಕ್ಷಣವು ಹರಿತ ಬುದ್ಧಿಯವರಿಗೂ ಹೊಂದಿಕೆಯಾಗುವವೆಂದು ವಿಶ್ವವಿದ್ಯಾನಿಲಯಗಳ ಒಲವಿದ್ದಂತೆ ತೋರುತ್ತಿದೆ. ಕೈಯ ಕೌಶಲ್ಯ ಮತ್ತು ಮನದ ಕೌಶಲ್ಯ ಇವೆರಡನ್ನು ಬೇರ್ಪಡಿಸಿದುದು ನಿಸರ್ಗದ ಮೇಲಿನ ಮಾನವನ ಸ್ವಾಮಿತ್ವವನ್ನು ಬಹಳಷ್ಟು ಕುಗ್ಗಿಸಿ ಜಗತ್ತಿನ ಬಡತನಕ್ಕೆ ವಿಶೇಷತಃ ಭಾರತದ ಬಡತನಕ್ಕೆ ಮುಖ್ಯ ಕಾರಣವಾಗಿದೆ. ಶ್ರಮಜೀವಿಯು ತನ್ನ ಶ್ರಮದ ಕೆಲಸವನ್ನು ಮಾಡುತ್ತ ಮಾಡುತ್ತ ತನ್ನ ವಿಕಾಸವನ್ನು ಮಾಡಿಕೊಳ್ಳಲು ಪ್ರಸಂಗಗಳು ಅವ್ಯಾಹತವಾಗಿ ಒದಗಿಸ

ಲ್ಪಡಬೇಕು. ಶಿಷ್ಯವೃತ್ತಿಯಲ್ಲಿಯಂತೆ ಶ್ರಮದ ಕೆಲಸದಲ್ಲಿಯೂ ಹೆಚ್ಚೆಚ್ಚು ಯೋಗ್ಯತೆಯನ್ನು ತೋರಿಸುವವರಿಗೆ ಮನ್ನಣೆಯನ್ನೀಯಬೇಕು. ಬುದ್ಧಿಜೀವಿಗೂ, ಕೈಕಂಣುಗಳ ಕೆಲಸದಲ್ಲಿ ಮೇಲಿನ ಯೋಗ್ಯತೆಯನ್ನು ಪಡೆದ ಶ್ರಮಜೀವಿಗೂ, ತಮ್ಮ ತಮ್ಮ ವಿಕಾಸವನ್ನು ಮಾಡಿಕೊಳ್ಳಲು ಸಮನಾದ ಪ್ರಸಂಗಗಳನ್ನೊದಗಿಸಿಕೊಡಬೇಕು." ಇಂತಹ ಪ್ರಸಂಗಗಳನ್ನೊದಗಿಸಿ ಕೊಡಲು ನಮ್ಮ ವಿಶ್ವವಿದ್ಯಾನಿಲಯಗಳ ಶಿಕ್ಷಣಕ್ರಮವು ಪುನರ್ರಚಿತವಾಗುವದೊಳಿತು.

[ಮುಂದುವರಿಯುವದು]

ಪ್ರಾಥಮಿಕ ಶಿಕ್ಷಣದಲ್ಲಿ ವ್ಯವಹಾರಿ ಹಾಗು ದಶಾಂಶ ಅಪೂರ್ಣಾಂಕಗಳು

ಲೇಖಕರು : **ಶ್ರೀ ನೀ. ರೇ. ಹಿರೇಮಠ,** ಪ್ರಾಧ್ಯಾಪಕರು ಜೀವನ ಶಿಕ್ಷಣ ಕೇಂದ್ರ, ಧಾರವಾಡ.

(ಹಿಂದಿನ ಸಂಚಿಕೆಯಿಂದ ಬಂದದ್ದು)

ಅಪೂರ್ಣಾಂಕಗಳು ಶಿಕ್ಷಣದಲ್ಲಿ ಅವಾಸ್ತವ ಸ್ಥಾನ ಪಡೆದುದು ಹೇಗೆ?

ಹಿಂದಿನ ಶಿಕ್ಷಣದಲ್ಲಿ ಓದು, ಬರಹ, ಲೆಕ್ಕಗಳೇ ಪ್ರಧಾನವಾಗಿದ್ದು ಶಾಲೆಯು ಅವುಗಳನ್ನು ಕಲಿಸಲೆಂದೇ ಇತ್ತು. ಭೂಗೋಲ ಹಾಗು ವಿಜ್ಞಾನಗಳು ಹಿಂದಿನಿಂದ ಶಾಲಾ ಅಭ್ಯಾಸದಲ್ಲಿ ಸಮಾವೇಶವಾದವು. ಪಠ್ಯೇತರ ಚಟುವಟಿಕೆಗಳೆಂದು ಆಟ, ವಿನೋದಗಳು ಶಾಲೆಯ ನಂತರ ಬೇಕಾದರೆ ಬರಬಹುದಾಗಿತ್ತು. ಮಗುವಿನ ಸರ್ವತೋಮುಖ ವಿಕಾಸವಾಗಲಿ, ಸಾಮಾಜಿಕ ವಿಕಾಸವಾಗಲಿ, ವ್ಯಕ್ತಿ ವಿಕಾಸವಾಗಲಿ, ಪ್ರಜಾಪ್ರಭುತ್ವದ ಶಿಕ್ಷಣವಾಗಲಿ ಆ ಕಾಲದ ಶಾಲೆಗಳ ಗುರಿಯಾಗಿರಲಿಲ್ಲ. ಅವೆಲ್ಲ ತಲೆಹರಟೆಯೆಂದೇ ಅವರ ಭಾವನೆ. ಸಾಮ್ರಾಜ್ಯಶಾಹಿ ಶಿಕ್ಷಣದ ವ್ಯವಸ್ಥೆಯಲ್ಲಿ ವ್ಯಕ್ತಿ ಸ್ವಾತಂತ್ರ್ಯ, ಪ್ರಜಾತಂತ್ರ ಈ ಮಾತುಗಳು ಬರ್ಜಣ, ಪ್ರಗತಿಗಾಮಿ ವಿಚಾರಗಳಲ್ಲವೆ?

ಅದಕ್ಕಾಗಿ ಶಾಲೆಯ ಆರು ತಾಸುಗಳನ್ನೂ ಸಂಕುಚಿತ ಅಭ್ಯಾಸ ಪತ್ರಿಕೆಗೇ ಮೀಸಲಾಗಿಡಬೇಕಾಗಿತ್ತು. ಹಾಗಾದರೆ ಇಷ್ಟೆಲ್ಲ ವೇಳೆ ಕಳೆಯುವದು ಹೇಗೆ? ಓದು ಬರೆಹ ಲೆಕ್ಕಗಳು ವಿಶೇಷ ಸಮಯವನ್ನು ಕಳೆಯಲು ಅನುಕೂಲವಾದವು. ಅದರಲ್ಲಿಯೂ ಗಣಿತವು ಈ ದಿಶೆಯಲ್ಲಿ ಉಪಯುಕ್ತ ಸಾಧನವಾಯಿತು. ತುದಿ ಮೊದಲಿಲ್ಲದ ಅಂಕಿ ಸಂಖ್ಯೆಗಳ ಲೆಕ್ಕಚಾರಗಳನ್ನು ಪೂರ್ವ ಆಲೋಚನೆಯಿಲ್ಲದೆ ಕೊಡಲು ಬರುವದೆಂದು ಪಠ್ಯಪುಸ್ತಕ ಬರೆಯುವವರಿಗೆ ಹಾಗೂ ಶಿಕ್ಷಕರಿಗೆ ಹೊಳೆಯಿತು. ಹೀಗಾಗಿ ವಿವೇಕಕ್ಕೆ ಸರಿ ಬರದ ವ್ಯವಹಾರದಲ್ಲಿ ಎಂದೂ ಕಾಣದ ಹಾಸ್ಯಾಸ್ಪದವಾದ ಕಾಲ್ಪನಿಕ ಲೆಕ್ಕಗಳಿಗೇನು ನಮ್ಮ ಪಠ್ಯಪುಸ್ತಕಗಳಲ್ಲಿ ಕೊರತೆ ಇರಲಿಲ್ಲ.

ಹೀಗಾಗಿ ಸಲ್ಲದ ಲೆಕ್ಕಗಳ ಸಂಖ್ಯೆ ಬೆಳೆಯಿತು. ಇಂತಹ ತುದಿ ಮೊದಲಿಲ್ಲದ ಲೆಕ್ಕಗಳ ಮೂಲಕ ಮಗುವಿನಲ್ಲಿ ಸತತೋದ್ಯೋಗ ಕಠಿಣ ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ, ವಿಚಾರಶಕ್ತಿ ಮುಂತಾದವು ಬೆಳೆದು ಜೀವನದುದ್ದಕ್ಕೂ ವ್ಯಾಪಿಸುವದೆಂದು ಶಿಕ್ಷಣ ತಜ್ಞರು ಪ್ರತಿಪಾದಿಸಿದರು.

ಗಣಿತ ಶಿಕ್ಷಣದ ಬಗ್ಗೆ ಹೊಸ ವಿಚಾರ

ವಿಲಿಯಮ್ ಜೇಮ್ಸ, ಬ್ರಿಗ್ಸ, ಫ್ರಾಂಕಲಿನ್, ಥಾರ್ನಡಾಯಿಕ ಮೊದಲಾದವರ ಸಂಶೋಧನೆಯ ಫಲವಾಗಿ ಯಾವದೊಂದು ವಿಷಯದಲ್ಲಿ ಪಡೆದ ಜಾಣತನ, ಮನೋಗುಣಗಳು ಅಭ್ಯಾಸದ ಇತರ ವಿಷಯಗಳಲ್ಲಿ ಇಲ್ಲವೆ ಜೀವನದ ಇತರ ರಂಗಗಳಲ್ಲಿ ಫಲಕಾರಿಯಾಗಿವೆಯೆಂದು ಕಂಡು ಬಂದಿದೆ. ಮುಖ್ಯವಾಗಿ ಗಣಿತವನ್ನು ನಿತ್ಯ ಜೀವನದಲ್ಲಿ ಅದರ ಉಪಯುಕ್ತತೆಯ ಮಹತ್ವವನ್ನರಿತು ಕಲಿಸುತ್ತೇವೆ ವಿನಃ ಅದರಿಂದ ಬರಬಹುದಾದ ಮಾನಸಿಕ ಸಿಸ್ತಿನ ತರಬೇತಿಗಾಗಿ ಅಲ್ಲವೆಂದು ಶಿಕ್ಷಣ ತಜ್ಞರು ಒತ್ತಿ ಹೇಳುತ್ತಾ ಬಂದಿದ್ದಾರೆ.

ಈಗ ಸಾಮಾಜಿಕ ವ್ಯಕ್ತಿವಿಕಾಸವೇ ಶಿಕ್ಷಣದ ಗುರಿಯಾಗಿದೆ. ಶಿಕ್ಷಣವು ಜೀವನಕ್ಕಾಗಿ ಜೀವನದ ಅಥವಾ ಜೀವಿಸುವಿಕೆಯ ಮುಖಾಂತರ ಸಾಗಬೇಕೆಂದೂ ಜೀವನ

ಚಟುವಟಿಕೆಗಳೆಲ್ಲ ಶಿಕ್ಷಣದ ಸಾಧನಗಳು ಹಾಗು ವಸ್ತುಗಳು ಆಗಬೇಕೆಂದೂ ಪ್ರತಿಪಾದಿಸಲಾಗುತ್ತದೆ. ಓದು ಬರೆಹ ಲೆಕ್ಕಗಳು ತುಂಬು ಜೀವನ ಸಾಗಿಸಲು ಸಾಧನಗಳು ಮಾತ್ರ. ಸಾಧ್ಯ ಅಥವಾ ಗುರಿಯಲ್ಲ. ಹೀಗಾಗಿ ಈಗ ಶಾಲೆಯಲ್ಲಿ ಕಲಿಸಬೇಕಾದ ವಿಷಯಗಳ ಸಂಖ್ಯೆ ಮಿತಿ ಮೀರಿದೆ. ಆದುದರಿಂದ ಕಲಿಸಬೇಕಾದ ವಿಷಯವನ್ನು ಸಾಮಾಜಿಕ ಉಪಯುಕ್ತತೆಗೆ ಅನುಗುಣವಾಗಿ ಅದರ ಸ್ಥಾನಮಾನ (Priority) ನಿರ್ಧರಿಸಬೇಕಾಗಿದೆ. ಇಂತಹ ಶಿಕ್ಷಣ ಕ್ರಮದಲ್ಲಿ ಹೊತ್ತು ಕಳೆಯುವ ಗೊಡ್ಡು ಪರಿಶ್ರಮಕ್ಕೆ ಅಥವಾ ಮಾನಸಿಕ ವಿಲಾಸಕ್ಕೆ ಅವಕಾಶವಿಲ್ಲ. ಈ ಮಾತು ಗಣಿತಕ್ಕೂ ಅನ್ವಯಿಸುವದು. ಆದುದರಿಂದ ಸಮಾಜೋಪಯೋಗಿ ಗಣಿತವೆಷ್ಟು? ಅದರಲ್ಲಿ ರೂಢಿ ಹೇಗೆ ಮಾಡಿಸಬೇಕು? ಗಣಿತದಲ್ಲಿ ಹೆಚ್ಚಿನ ಆಸಕ್ತಿಯುಳ್ಳವರಿಗೆ ಹಾಗು ಪ್ರೌಢ ಜೀವನದಲ್ಲಿ ಸಮಯ ಬಂದಾಗ್ಗೆ ಉಪಯೋಗ ಬೀಳುವ ತಂತ್ರಗಳನ್ನು ಎಲ್ಲಿ ಹುಡುಕಬೇಕು? ಮುಂತಾದ ಸಮಸ್ಯೆಗಳು ಗಣಿತ ತಜ್ಞರ ಮನಸೆಳೆದಿವೆ.

ಈ ದೃಷ್ಟಿಯಿಂದ ಶಾಲೆಯಲ್ಲಿ ಕಲಿಸುವ ಗಣಿತದಲ್ಲಿ ನಾಲ್ಕು ವಿಭಾಗಗಳನ್ನು ಮಾಡಿದ್ದಾರೆ.

೧) ಅವಶ್ಯಕ ರೂಢಿ ಮಾಡಿಸಬೇಕಾದ ಗಣಿತ
೨) ಸಮಸ್ಯಾತ್ಮಕ ಗಣಿತ
೩) ಕೇವಲ ತಿಳುವಳಿಕೆಗಾಗಿ (ಮನರಂಜನೆಗಾಗಿ) ಇರುವ ಗಣಿತ
೪) ಮುಂದೆ ಅವಶ್ಯ ಬೀಳುವ ಗಣಿತ

ಇದರಲ್ಲಿ ಮೊದಲಿನ ಎರಡು ಭಾಗಗಳನ್ನು ಮಾತ್ರ ವರ್ಗದಲ್ಲಿ ಹೆಚ್ಚಾಗಿ ಕಲಿಸಬೇಕು. ಇದೇ ನಮ್ಮ ಶಾಲೆಯಲ್ಲಿಯ ಗಣಿತ ಅಭ್ಯಾಸದ ಮುಖ್ಯ ವಸ್ತು. ಸಮಯಾನುಸಾರವಾಗಿ ಮಕ್ಕಳ ಕುತೂಹಲ ಕೆರಳಿದ ಗಣಿತದ ತುಸು ಗಡುಚಾದ ವಿಷಯಗಳನ್ನು ಕೇವಲ ತಿಳುವಳಿಕೆಗಾಗಿ (ಮನರಂಜನೆಯೆಂದು) ವರ್ಗದಲ್ಲಿ ವಿವೇಚಿಸುವದು. ಈ ಭಾಗದಲ್ಲಿ ರೂಢಿಯ ಅವಶ್ಯಕತೆಯಿಲ್ಲ. ಶಿಕ್ಷಕರೇ ಅಂಥ ಭಾಗಗಳನ್ನು ಬಿಡಿಸಿ ತೋರಿಸುವರು; ಹಾಗು ಚರ್ಚಿಸಿ ಅವುಗಳಲ್ಲಿ ಅಡಕವಾದ ತಂತ್ರವನ್ನು ತೋರಿಸುವರು. ಇದು ಮೂರನೆಯ ಭಾಗ. ನಿತ್ಯ ಜೀವನದಲ್ಲಿ ವ್ಯವಹಾರದಲ್ಲಿ ಬರುವ ತೂಕ ಅಳತೆಗಳ ಕೋಷ್ಟಕ ಅಂಕೆಗಳ ವರ್ಗ, ವರ್ಗಮೂಲ, ಬಡ್ಡಿ, ಕೂಲಿ ಶತಮಾನ ಮುಂತಾದವುಗಳ ಜಂತ್ರಿ ಇವುಗಳನ್ನು ಎಲ್ಲಿ ಹುಡುಕಬೇಕೆಂಬ ಜ್ಞಾನ ಮಕ್ಕಳಿಗಿರಬೇಕು. ಪ್ರತಿಯೊಂದ ಪಠ್ಯಪುಸ್ತಕದಲ್ಲಿ ಈ ಅವಶ್ಯಕ ಸಂಗತಿಗಳನ್ನು ಪುಸ್ತಕ ಕೊನೆಗೆ ಪರಿವಿಡಿಯಲ್ಲಿ ಕೊಡಬೇಕು. ಇದು ನಾಲ್ಕನೆಯ ಭಾಗ.

ಅಪೂರ್ಣಾಂಕಗಳು ಹಾಗೂ ಮಕ್ಕಳು

೧. ಹಿಂದೂ ಸಂಖ್ಯಾ ಪದ್ಧತಿಯಲ್ಲಿ ಅಂಕೆಗ ಸ್ಥಾನ ಕಲ್ಪನೆಯನ್ನು ಮಕ್ಕಳು ೧ ನೆಯ ವರ್ಗದಿಂದಲೆ ಕಲಿಯಲು ಆರಂಭಿಸುತ್ತಾರೆ. ಎರಡು (ಮೂರು) ವರ್ಗಗಳಲ್ಲಿ ಅದು ಗಟ್ಟಿಯಾಗುತ್ತದೆಂದು ಅನುಭವದಿಂ ಕಂಡು ಬಂದಿದೆ. ಅದೇ ವಿಚಾರವನ್ನು ಮುಂದುವರಿ ಯೋಗ್ಯ ಉಪಕರಣಗಳ ಮೂಲಕ ಒಂದೆರಡು ಸ್ಥಾನಗ ವರೆಗೆ ದಶಾಂಶ ಅಂಕೆಗಳ ಪರಿಚಯವನ್ನು ಮಾಡಿಕೊಡವದು ಕಠಿಣವಾಗಲಿಕ್ಕಿಲ್ಲ.

೨ ಪ್ರಾಥಮಿಕ ಮಟ್ಟದಲ್ಲಿ ವ್ಯವಹಾರಿ ಹಾಗ ದಶಾಂಶ ಅಪೂರ್ಣಾಂಕಗಳೆರಡನ್ನೂ ಅವುಗಳ ನಿತ್ಯೋ ಯುಕ್ತತೆಯ ದೃಷ್ಟಿಯಿಂದ ಮಾತ್ರ ಕಲಿಸಬೇಕು ವ್ಯವಹಾರಿ ಅಪೂರ್ಣಾಂಕಗಳಲ್ಲಿ $\frac{1}{2}$ ದಿಂದ $\frac{1}{8}$ ದ ವರೆ ಹಾಗು ದಶಾಂಶ ಅಪೂರ್ಣಾಂಕಗಳಲ್ಲಿ ಎರಡು ಸ್ಥಾನ ಅಂಕೆಗಳ ಬರೆಹ, ಓದು, ಬೇರೀಜು ಹಾಗು ವಜಾಬಾ ಇಷ್ಟನ್ನು ಮಾತ್ರ ಕಡ್ಡಾಯದ ಶಿಕ್ಷಣದ ಅವಧಿಯ ಕಲಿಸಬಹುದು. ಈ ಅಪೂರ್ಣಾಂಕಗಳ ಭಾಗಾಕಾರವನ್ನು ಪ್ರಾಥಮಿಕ ಮಟ್ಟದಲ್ಲಿ ಕಲಿಸುವದು ಸರಿಯಲ್ಲವೆಂದ ಸಂಶೋಧನೆಗಳು ಒತ್ತಿ ಹೇಳುತ್ತವೆ.

೩. ವ್ಯವಹಾರಿ ಹಾಗು ದಶಾಂಶ ಅಪೂರ್ಣಾಂಕಗಳ ಮೂಲ ಕಲ್ಪನೆಯಲ್ಲಿ ವಿಶೇಷ ವ್ಯತ್ಯಾಸವಿಲ್ಲ.

i) ಸಾದಾ ಅಪೂರ್ಣಾಂಕದಲ್ಲಿ ಒಂದು ವಸ್ತುವಿನಲ್ಲಿ ಬೇಕಾದಷ್ಟು ಸರಿಯಾದ ಭಾಗ ಮಾಡಿ ಕೆಲವು ಭಾಗ ತೆಗೆದುಕೊಳ್ಳುತ್ತೇವೆ.
ii) ಅದೇ ದಶಾಂಶ ಅಪೂರ್ಣಾಂಕದಲ್ಲಿ ಒಂದು ವಸ್ತುವಿನಲ್ಲಿ ೧೦ ಅಥವಾ ಅದರ ಪಟ್ಟುಗಳಲ್ಲಿ ಮಾತ್ರ ಸರಿಯಾದ ಭಾಗ ಮಾಡುತ್ತೇವೆ.

ಹೀಗೆ ಒಂದು ವಸ್ತುವಿನಲ್ಲಿ ಸರಿಯಾದ ಭಾಗ ಮಾಡಿ ಇಚ್ಛಿತ ಭಾಗಗಳನ್ನು ತೆಗೆದುಕೊಳ್ಳುತ್ತೇವೆಂಬ ಕಲ್ಪನೆಯು ಎರಡೂ ಬಗೆಯ ಅಪೂರ್ಣಾಂಕಗಳಿಗೆ ಸಾಮಾನ್ಯವಿದೆ.

೪. ನಿತ್ಯವೂ ತಾನು ತಿನ್ನುವ ರೊಟ್ಟಿ, ಹಣ್ಣು, ಬಳಸುವ ವಸ್ತುಗಳಲ್ಲಿ ಮಗುವಿಗೆ ಅರ್ಧ ($\frac{1}{2}$), ಗಿರ್ಧ ($\frac{1}{4}$) ಇವುಗಳ ಪರಿಚಯವು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಆಗುವದು. ಆದುದರಿಂದ $\frac{1}{2}$, $\frac{1}{4}$ ಇವುಗಳ ಕಲ್ಪನೆಯು ಮೊದಲು ಕೊಡಲು ಸುಲಭವಾಗುವದು.

ಅದೇ ೦.೫, ೦.೨೫ ಹಣ್ಣು ಅನ್ನುವದು ಕಠಿಣವಾದುದರಿಂದ ಈ ಕಲ್ಪನೆಯು ಮಗುವಿನ ಅನುಭವಕ್ಕೆ ಬರುವದಿಲ್ಲ. "ಒಂದು ಹಣ್ಣನ್ನೊ (ರೊಟ್ಟಿಯನ್ನೋ) ಸರಿಯಾಗಿ ಎರಡು ತುಂಡು ಮಾಡಿ, ಒಂದು ತುಂಡು ಮಗುವಿಗೆ ಕೊಟ್ಟು ನೀನು ಅರ್ಧ ಹಣ್ಣನ್ನು (ರೊಟ್ಟಿಯನ್ನು) ತೆಗೆದುಕೊಂಡಿರುವೆ. ಇನ್ನುಳಿದ ಅರ್ಧವನ್ನು ನಿನ್ನ ತಂಗಿ ತೆಗೆದುಕೊಳ್ಳಲಿ" ಎಂದು ಪ್ರತ್ಯಕ್ಷ ವ್ಯವಹಾರದಲ್ಲಿದ್ದುದನ್ನು ಅವನ ಗಮನಕ್ಕೆ ತರಬಹುದು. ಆದರೆ ದಶಾಂಶ ಪದ್ಧತಿಯಲ್ಲಿ "ಅರ್ಧ"ದ ಕಲ್ಪನೆಯು ಅಷ್ಟು ಸುಲಭವಲ್ಲ. ಒಂದು ಹಣ್ಣಿನಲ್ಲಿ ಅಥವಾ ಹಾಳೆಯಲ್ಲಿ ಸರಿಯಾದ ೧೦ ತುಂಡು ಮಾಡಿ ಅದರಲ್ಲಿ ೫ನ್ನು ತೆಗೆದುಕೊಂಡು ಇದು ಅರ್ಧ ಹಣ್ಣು ಅಥವಾ ಹಾಳೆ ಎಂದು ಹೇಳಬೇಕು. ವ್ಯವಹಾರದಲ್ಲಿ ಹೀಗೆ ಮಾಡುವದು ಅಪರೂಪ. ಗಿರ್ಧದ ಕಲ್ಪನೆಯಂತೂ ಇನ್ನೂ ಕ್ಲಿಷ್ಟವಾದುದು. ಒಂದು ವಸ್ತುವಿನಲ್ಲಿ ೧೦೦ ಭಾಗ ಮಾಡಿ ೨೫ ಭಾಗಗಳನ್ನು ತೆಗೆದುಕೊಂಡು ಅದಕ್ಕೆ ೪ರಲ್ಲೊಂದು ಪಾಲು ಅನ್ನಬೇಕು.

೫. ದಶಾಂಶ ಪದ್ಧತಿಯಲ್ಲಿ ಸಂಖ್ಯಾವಾಚನ ಹಾಗು ಲೇಖನಗಳನ್ನು ಗ್ರಹಿಸಿದ ಮೇಲೆ ಮುಂದಿನ ಲೆಕ್ಕಚಾರಗಳು ಬಹಳ ಸುಲಭ. $\frac{1}{2}+\frac{1}{4}$ ಇವುಗಳನ್ನು ಕೂಡಿಸಲು ಸಮಛೇದ ರೂಪ ಕೊಡಬೇಕು. $\frac{1}{4}+\frac{1}{4}=\frac{2}{4}=\frac{1}{2}$ ಎಂದು ಬಿಡಿಸಬೇಕು. $\frac{3}{4}+\frac{1}{6}$ ಇಂತಹ ಲೆಕ್ಕ ಮಾಡುವಾಗ ಸಮಛೇದ ರೂಪ ಕೊಡಲು ಲಘುತಮಸಾಧಾರಣಭಾಜ್ಯ ಅಥವಾ ಲ. ಸಾ. ಅವಯವವನ್ನು ಕಲಿಯುವ ಅವಶ್ಯಕತೆ ಇದೆ. ಆದರೆ ದಶಾಂಶ ಪದ್ಧತಿಯಲ್ಲಿ ಬೇರಿಜು ಮತ್ತು ವಜಾಬಾಕಿಗಳು ಬಹಳ ಸುಲಭ. ಆಯಾ ಅಂಕಿಗಳ ಸ್ಥಾನ ಮಹತ್ವವನ್ನು ಕಲಿತರಾಯಿತು. ಅದು ಪೂರ್ಣ ಅಂಕಿಗಳ ಸಾದಾ ಬೇರಿಜಿಗಿಂತ ತೀರ ಭಿನ್ನವಾಗಿಲ್ಲ.

ಅದರಂತೆ ದ. ಅಂಕಿಗಳ ಗುಣಾಕಾರವನ್ನು ವಿಶೇಷ ತೊಂದರೆಯಿಲ್ಲದೆ ಕಲಿಸಬಹುದು. ಆದರೆ ವ್ಯವಹಾರಿ ಹಾಗು ದಶಾಂಶ ಅಪೂರ್ಣಾಂಕಗಳ ಭಾಗಾಕಾರವು ಪ್ರಾಥಮಿಕ ಮಟ್ಟದಲ್ಲಿ (ಶಿಕ್ಷಣ ಮಟ್ಟದಲ್ಲಿ) ಅವ್ಯವಹಾರ್ಯವೆಂದು ಪಾಶ್ಚಾತ್ಯ ಶಿಕ್ಷಣ ತಜ್ಞರ ಮತವಿದೆ. ಭಾಗಾಕಾರಗಳನ್ನು ಕೇವಲ ಕುತೂಹಲದ ತೃಪ್ತಿಗಾಗಿ ವರ್ಗದಲ್ಲಿ ಶಿಕ್ಷಕರೇ ಮಾಡಿ ತೋರಿಸಬೇಕು. ಅದರಲ್ಲಿ ಹೆಚ್ಚಿನ ರೂಢಿಯು ಅವಶ್ಯಕತೆಯಿಲ್ಲ. ಕೆಲವು ಗಣಿತ ಶಿಕ್ಷಣ ತಜ್ಞರು ಅಪೂರ್ಣಾಂಕಗಳ ಗುಣಾಕಾರವನ್ನು ಸಹ ರೂಢಿ ಮಾಡದೆ ಹೀಗೆ ಕಲಿಯಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಇದಕ್ಕೆಲ್ಲ ಆಳವಾದ ಸಂಶೋಧನೆಗಳ ಆಧಾರಗಳಿವೆ.

ಅಪೂರ್ಣಾಂಕದ ಅಭ್ಯಾಸ ಪತ್ರಿಕೆ

ಕೆಲವು ಸೂಚನೆಗಳು

೩ ನೆಯ ವರ್ಗದ ಆರಂಭದಲ್ಲಿ: $\frac{1}{2}$, $\frac{1}{4}$, $\frac{1}{6}$, $\frac{1}{8}$ ಹಾಗು $2\frac{1}{4}$ ಮುಂ. ಅಪೂರ್ಣಾಂಕಗಳ ಕಲ್ಪನೆ. $\frac{1}{2}+\frac{1}{2}=1$; $\frac{1}{4}+\frac{1}{4}=\frac{2}{4}=\frac{1}{2}$; $\frac{1}{4}+\frac{2}{4}=\frac{3}{4}$; $\frac{3}{4}-\frac{1}{4}=\frac{2}{4}$ ಮುಂ. ಸುಲಭ ಲೆಕ್ಕಗಳನ್ನು ಕೊಡಬೇಕು.

ಎರಡನೆಯ ಷಾಣ್ಮಾಸಿಕದಲ್ಲಿ ಎರಡು ಸ್ಥಾನಗಳ ವರೆಗೆ ದಶಾಂಶ ಅಂಕಿಗಳ ಓದು ಹಾಗು ಬರಹಗಳನ್ನು ಮಾತ್ರ ಕಲಿಸಬೇಕು. ಹೊಸ ನಾಣ್ಯಗಳ ಸಹಾಯದಿಂದ ಆರಂಭಿಸುವದು ಒಳಿತು.

೪ ನೆಯ ವರ್ಗದಲ್ಲಿ: $\frac{1}{2}+\frac{1}{4}$, ಹಾಗು $\frac{1}{2}-\frac{1}{4}$; $\frac{3}{4}+\frac{1}{2}$ ಹಾಗು $\frac{3}{4}-\frac{1}{2}$; $\frac{1}{3}+\frac{1}{4}$ ಹಾಗು $\frac{1}{3}-\frac{1}{4}$ ಮುಂತಾದ $\frac{1}{8}$ ವರೆಗಿನ ಅಪೂರ್ಣಾಂಕಗಳು ಲ. ಸಾ. ಅ ಬರದಂಥವು. ಪೂರ್ಣಾಂಕ ಹಾಗು ಅಪೂರ್ಣಾಂಕಗಳನ್ನು ಪ್ರತ್ಯೇಕವಾಗಿ ಕೂಡಿಸುವದು ಹಾಗು ಕಳೆಯುವದು.

ದಶಾಂಶ ಅಪೂರ್ಣಾಂಕಗಳ ಬೇರೀಜು ಹಾಗು ವಜಾಬಾಕಿ ಎರಡು ದಶಾಂಶ ಸ್ಥಾನಗಳನ್ನೊಳಗೊಂಡ ಸಂಖ್ಯೆಗಳಲ್ಲಿ ಮಾತ್ರ ಇರಬೇಕು.

೫ ನೆಯ ವರ್ಗದಲ್ಲಿ ಅಪೂರ್ಣಾಂಕಕ್ಕೆ ಪೂರ್ಣಾಂಕ ಹಾಗು ಅಪೂರ್ಣಾಂಕದಿಂದ ಗುಣಾಕಾರ $\frac{1}{3}\times4$; $\frac{5}{6}\times\frac{1}{2}$, $\frac{3}{8}\times\frac{1}{3}$ ಮುಂತಾದ ಸುಲಭ ಗುಣಾಕಾರಗಳು. ಎರಡು ಪದಗಳಿಗೆ ಮಾತ್ರ ಮರ್ಯಾದಿತವಾಗಬೇಕು.

$1.2\times5=?$, $5.24\times6=?$ ಮುಂತಾದ ಅಪೂರ್ಣಾಂಕಕ್ಕೆ ಪೂರ್ಣಾಂಕದಿಂದ ಗುಣಾಕಾರಗಳು—

ಒಂದು ವಸ್ತುವಿನ ಬೆಲೆಯನ್ನು ದಶಕ ಪದ್ಧತಿಯಲ್ಲಿ ಕೊಟ್ಟಾಗ ಅಂತಹ ಅನೇಕ ವಸ್ತುಗಳ ಬೆಲೆ ತೆಗೆಯುವದು.

ಉದಾ:— ಒಂದು ವಾರ ಅರಿವೆಯ ಬೆಲೆ ೧.೨೪ ರೂ. ಆದರೆ ಮೂರು ವಾರ ಅರಿವೆಯ ಬೆಲೆ ಎಷ್ಟು?

ಸೂಚನೆ: ಅಪೂರ್ಣಾಂಕದ ಗುಣಾಕಾರದ ಲೆಕ್ಕಗಳನ್ನು ಆದಷ್ಟು ಹೆಚ್ಚಿನ ವಯಸ್ಸಿಗೆ ಆರಂಭಿಸಬೇಕೆಂದೂ ಕೆಲವು ಸಂಶೋಧನೆಗಳಿಂದ ಧ್ವನಿತವಾಗುತ್ತದೆ. ಪ್ರತ್ಯಕ್ಷ ಸನ್ನಿವೇಶಗಳಿಂದ ಹಾಗು ವಸ್ತುಗಳಿಂದ ಅಪೂರ್ಣಾಂಕಗಳ ಅಭ್ಯಾಸವನ್ನು ಮಾಡಿಸಬೇಕು.

ವನಮಹೋತ್ಸವ

ಶ್ರೀ ವೀರೇಶ ಹಿರೇಮಠ, ಬೆಳಗಾಂವ

ರಾಷ್ಟ್ರದಲ್ಲಿ 'ವನಮಹೋತ್ಸವ' ಆಂದೋಲನವು ಭರದಿಂದ ಸಾಗಿದೆ. ಜನ, ತಮ್ಮ ಮನಗಳನ್ನೆಲ್ಲ ಕ್ರೋಢೀಕರಿಸಿ, ವನ ಬೆಳೆಯಲು, ಮಹಾ ಉತ್ಸವಗಳನ್ನು ಸಾಂಗಗೊಳಿಸುವ ಸಂಗತಿಯನ್ನು ನಾವು ವೃತ್ತಪತ್ರಿಕೆಗಳ ಮೂಲಕ ಪದೇಪದೇ ಓದುತಲಿದ್ದೇವೆ. ಈ ಆಂದೋಲನದ ಮಹತಿಯನ್ನು ಕುರಿತು, ಶೈಕ್ಷಣಿಕ ದೃಷ್ಟಿಯಿಂದ ಶಿಕ್ಷಕರಿಗೆ ಉಪಯುಕ್ತವಾಗಬಹುದೆಂಬ ಭರವಸೆಯಿಂದ ಈ ವಿಚಾರ ಲಹರಿಯ 'ಸುಳಿ'ಯನ್ನು ಇಲ್ಲಿ ಹೊರ ಸೂಸಿದೆ.

ವನ ಎಂದರೆ ಬನ; ಉತ್ಸವ ಎಂದರೆ ಜನರಲ್ಲಿ ಹುದುಗಿದ ಉತ್ಸಾಹದ ಪ್ರತೀಕ, ನಮಗೆ ಬನಸಿರಿ ಬೇಕು. ಬನವಾಸಿ ಪಂಪನ ನಾಡು. ಸೀತೆ ಜಗದ್ವಂದ್ಯ ಶ್ರೀ ರಾಮನಿಗೆ ಬನಕ್ಕೆ ಕಳಿಸುವ ಬಯಕೆಯನ್ನು ವ್ಯಕ್ತಪಡಿಸಿದಳು. ಲವ–ಕುಶರು ಬನದಲ್ಲಿಯೇ ಬೆಳೆದರು. ಬನ ಕೋಗಿಲೆಗಳ ಬೀಡು. ಭರತನು ಸಿಂಹದ ಮರಿಯ ಕೂಡ ಚಿನ್ನಾಟ ವಾಡಿದ್ದು ಬನದಲ್ಲಿ. ಚಂದ್ರಹಾಸನ ಬಾಲ್ಯ ಬನದಲ್ಲಿ. ಆ ರಸಿಕ, ರೋಮಾಂಚನ ಕಾರಿಯಾದ ಕಥೆ ಎಲ್ಲರಿಗೂ ಗೊತ್ತು. ಧ್ರುವ ದೇವನನ್ನು ಕಂಡದ್ದು ನಿಸರ್ಗದ ಮಡಲಿನಲ್ಲಿ. ಬಸವಣ್ಣ ಸಂಗಮನನ್ನು ಆರಾಧಿಸಿದ್ದು ಬನದ ಬದಿಯಲ್ಲಿ. ಬದಾಮಿಯ ಬನಶಂಕರಿ, ಸರಸ್ವತಿ ಸರಸಿನ ದಂಡೆಯ ಮೇಲೆ ಎಲೆಬಾಳೆ ತೋಟಗಳ ಮಧ್ಯದಲ್ಲಿ. ಜಗತ್ತಿನ ಜಂಜಾಟಕ್ಕೆ ಬೇಸತ್ತ ಭಕ್ತ–ಜನವನ್ನು ಮುಗ್ಧ ಭಾವದಿಂದ ಕರೆಯುವಳು. ಜನ ಬನದ ಕಡೆಗೆ ಧಾವಿಸಿ ಹೋಗುವದು. ಅಲ್ಲಿಯ ಶಂಕರಿ ಕೇವಲ 'ಶಂಕರಿ'ಯಲ್ಲ. ಬನಶಂಕರಿ. ಘನವಂತನಾದ ಅಕಬರನು ಬನದಲ್ಲಿಯೇ ಜನಿಸಿದನಲ್ಲವೇ ? ವಿಶ್ವ ಶಾಂತಿಯನ್ನು ಕೋರಿದ ಕವೀಂದ್ರ 'ರವೀಂದ್ರ'ರ ಶಾಂತಿನಿಕೇತನವು ಬನದ ಮಡಲಿನಲ್ಲಿಯೇ. ಭಾರತೀಯರು ಬನಗಳ ಉಪಾಸಕರು. ಬಬ್ಬುಲ ಬಳಿಯಲ್ಲಿಯೇ " **ಬಬಲೇಶ್ವರ** ' ನಿರ್ಮಾಣವಾಗಿದೆ. ಬಿಲ–ಪತ್ರಿ ಭಾವುಕರಿಗೆ ಅಮೃತಾನಂದ.

ಇನ್ನೂ ನೋಡುವಾ–ಬನದ ಸಿರಿಯನ್ನು 'ಆರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶವುಂ' ಎಂದು ಪಂಪನು ಅಂದು ಹಾಡಿದನು. ಇಂದು ನಾವು ಹೀಗೆ ಹಾಡುವಾ.

ಬೆಳೆಸಲಡವಿ
ಏನು ನೆಡುವ ?
ಕಡಲ ಸುಳಿವ
ಹಡಗ ಕಂಬ
ತೊಲೆಯ ನೆಡುವ
ಜಂತೆ ಬೆಳೆವ
ಹಳ್ಳ ಹರಿವ
ಬಳಿ ಸೇತುವೆ
ಬೆಳೆಸಲಡವಿ.
ಏನ ಪಡೆದಿ ?
ಮುಗಿಲ ನೇರ್ಪ
ಹಗುರ ರೆಕ್ಕೆ
ಮನೆಗೆ ಕಿಟಕಿ
ನೆಲಕೆ ಹಲಗೆ
ಮೇಜು ಕರಡು
ಪುಸ್ತಕೆರಡು.

ಕಡಲಿನಲ್ಲಿ ಪಯಣಗೈಯ್ಯಲು ಹಡಗಗಳನ್ನು ರಚಿಸಿದ್ದು ಅಡವಿಯ ಕಟ್ಟಿಗೆಯಿಂದ. ಮನೆಯಲ್ಲಿ ತೊಲೆಗಳನ್ನು ಕೊರೆದದ್ದು ಕಟ್ಟಿಗೆಯಿಂದ. ಯಂತ್ರ ವಿಹಂಗಮ ವಾಹನವನ್ನು ಕಟ್ಟಿದ್ದು ಕಟ್ಟಿಗೆಯಿಂದ. ಕಿಟಕಿಗಳು ಕಟ್ಟಿಗೆಯಿಂದಲೇ. ಮೇಜು. ಖುರ್ಚಿ– ಇತ್ಯಾದಿಗಳು

ಕಟ್ಟಿಗೆಯಿಂದ. ನಾರ್ವೇದೇಶದ ಕಟ್ಟಿಗೆಯಿಂದಲೇ ಕಾಗದಗಳ ಸಿದ್ಧತೆ. ಭಯಂಕರವಾದ ಅಡವಿಗಳಲ್ಲಿ ಮನುಷ್ಯ ನ್ನು ನುಂಗುವ ಮರಗಳಿವೆ ಎಂದು ನಾವು ಕೇಳಿದ್ದೇವೆ.

ಹಿಂದುಸ್ಥಾನದ ವಾಯುವ್ಯ ಭಾಗದಲ್ಲಿದ್ದ ಅಡವಿಗ ಲ್ಲಿ ೫೦೦ ವರ್ಷದ ಕೆಳಗೆ ಮೊಗಲ ಬಾದಷಹ ಬಾಬ ನು ಖಡ್ಗ-ಮೃಗಗಳ ಬೇಟೆಯಾಡುತ್ತಿದ್ದನೆಂದೂ, ಡವಿಯಿಂದ ನಮ್ಮ ಮನೆಗಳನ್ನು ಸುಂದರವಾಗಿ ಸೊಗ ಗಿ ಮಾಡುವ ಸಾಗವಾನಿ, 'ಟರ್ಪೆಂಟೈನ್', ರಾಳ, ಬ್ಬರ, ನೀಲಗಿರಿ-ಎಲ್ಲವೂ ಅರಣ್ಯದ ಸೊತ್ತೆಂದೂ ನೂ ಮಸಾನಿಯವರು ಅಭಿಪ್ರಾಯ ಪಟ್ಟಿದ್ದಾರೆ'.

'ಆಯುರ್ವೇದ'ವು ನಮ್ಮ ನಾಡಿನ ಸೌಭಾಗ್ಯ. ನೇಕ ರೋಗ-ರುಜೆಗಳನ್ನು ನಿವಾರಿಸುವ ಔಷಧ ವನ ಸ್ಪತಿಗಳು ನಮ್ಮ ನಾಡಿನ ಕಾಡುಗಳಲ್ಲಿ ಬೆಳೆಯುವವು. ಳಗಾವ ಸಮೀಪದಲ್ಲಿದ್ದ "ವೈಜನಾಥ" ಕ್ಷೇತ್ರವು ನಿಜ ವಾಗಿಯೂ **"ವೈದ್ಯ—ನಾಥ"**

'ರಬ್ಬರ'ದ ಬಗ್ಗೆ ಮಸಾನಿಯವರು ಸುಂದರವಾಗಿ ಹೇಳಿದ್ದಾರೆ' ರಬ್ಬರು ನೋಡಿರಿ. ಒಂದಾನೊಂದು ಕಾಲಕ್ಕೆ ಸೀಸದ ಕಡ್ಡಿ ಗುರುತು ಅಳಿಸಲು ಮಾತ್ರವೇ ಬ್ಬರ್. ಅದರಿಂದಲೇ ಅದಕ್ಕೆ ಈ ಹೆಸರು ಬಂದುದು. ದೇ ಈಗ ರಬ್ಬರಿಲ್ಲದೆ ಹೋದರೆ ನಾವು ಕತ್ತಲೆಯಲ್ಲೂ. ಶ್ಶಬ್ದದಲ್ಲೂ ಮುಳುಗ ಬೇಕಾದೀತು: ವಿದ್ಯುತ್ತನ್ನು ವಮಾಗಿ ಸೆರೆಹಿಡಿವುದು ರಬ್ಬರು. ಅದಿಲ್ಲದಿದ್ದರೆ ಬೀದಿ ೀಪ ಆರಿಹೋದಾವು: 'ಟೆಲಿಫೋನ್' "ಟ್ರಿಂಗ್ ಟ್ರಿಂಗ್ ಬಾರಿಸಲಿಕ್ಕೇ ಇಲ್ಲ."

ಕಾಗದ ಸಿದ್ಧವಾಗುವದು ಕಟ್ಟಿಗೆಯಿಂದ. ಪ್ರತಿ ಯೊಂದು ಗ್ರಾಮದಲ್ಲಿ, ಅಡವಿಯನ್ನು ಬೆಳೆಸಲು 'ಬನ ವನ್ನು ಬೆಳೆಸಲು' ಕೊಂಚ ನೆಲ ಮೀಸಲಾಗಿರಿಸುವದು ಹಿತಕಾರಿ. ಬನದ ಮಹಿಮೆ ವರ್ಣನಾತೀತ. ಬನದ ಹಾಡು ಹೀಗಿದೆ;

'ಮಾವು ನೆಡು ಹುಣಿಸೆ ನೆಡು ನೆಡು ಬಾಳೆ'
ತೂಗ್ಯಾವು ತನಿವಣ್ಣು ರೆಂಬೆ ಮೇಲೆ;
ಮಂದಾರ ಹಚ್ಚಚ್ಚ ಹೂವಿಗೆ
ತುಳಸೀಯು ಬೆಳಸಲ್ಲಿ ತೋಟ್ದಾಗೆ
ನೀರ್ಹನಿಸು ಬಿಡಥಾಂಗೆ
ಬಾಡ್ಯಾವು ನಿಲಥಾಂಗೆ,
ಅಡವೀಯ ಗಿಡವೆಲ್ಲ ಬೆಳದಾವೊ
ಕಡುನಂಬಿ ಹೃದನನ್ನ ನಿಂತಾವೊ;
ಬಾಡಾವು ಬಾಡಾವು ಕಾಡಸಸಿ
ಬೆಳೆದಾವು ಬೆಳೆದಾವು ದೇವಸಸಿ

ಹಿಮಾಲಯದ ಅಡವಿಗಳಲ್ಲಿ ಉತ್ತಮವಾದ ದೇವ ದಾರು. ಸಿಂಗಾಡ '[ಚೆಸ್ಟ್ ನಟ್] 'ಓಕ್' 'ಸರ್ವೆ' ಮರಗಳು, ಬಿದಿರು ಮೆಳೆಗಳು ಇವೆ.

ಮರಗಳಿಂದ ನಾವು ಒಂದು ಅತ್ಯುನ್ನತವಾದ ಪಾಠವನ್ನು ಕಲಿಯಬಹುದು. ಮರಗಳು ದಾರಿಕಾರಂಗೆ ನೆಳಲನ್ನು ನೀಡಿ, ಮನಶ್ಶಾಂತಿಯನ್ನು ಪ್ರಸಾದಿಸುವಂತೆ ಮಾನವ ಮರದಂತೆ ಆಗಬೇಕು. ಮರವನ್ನು ಹಲವರು ದೇವರೆಂದು ಭಾವಿಸಿ ಪೂಜಿಸುವರು. ಹಾವುಗಳು ಮರವನ್ನು ಸುತ್ತು ಹಾಕುವವು. ಮಂಗಗಳು 'ಮರಗಳ ಟೊಂಗೆಗಳಲ್ಲಿ ಚೆಲ್ಲಾಟವಾಡುವವು. ಗೋವುಗಳು ಬಿಸಿಲಿನ ಬೇಗೆಯಿಂದ ಬಳಲಿ ಬಾಯಾರಿ. ಮೆಲಕಾಡಿ ಸುತ್ತ ನಿಲ್ಲುವವು ಶುಕ-ಸಾರಿಕೆ, ಕಾಗೆ-ಗುಬ್ಬಿಗಳು ತಮ್ಮ ವಿಶ್ರಾಂತಿ-ಧಾಮಗಳನ್ನು, ಭವನಗಳನ್ನು ರಚಿಸಿ ಕೊಳ್ಳುವವು. ಬೀದಿಯಲ್ಲಿ ಗುರಿಯಿಲ್ಲದೆ ಅಲೆದಾಡುವ "ಡೊಂಕ ಬಾಲದ ನಾಯಕರು" ಮರದಡಿಯಲ್ಲಿ ಹಲವು ಕೆಲವು ಸಲ ಹೊಲಸು ಮಾಡುವರು. ಮರಗಳು ಇವೆಲ್ಲವುಗಳಿಂದ ಹಿಗ್ಗುವದೂ ಇಲ್ಲ. ತಗ್ಗುವದೂ ಇಲ್ಲ. ಹೀಗೆ ಇರಬೇಕು ಮಾನವ ಜೀವನ! ಮರಗಳ ವೇದ ವಾಣಿ "ಬಂದಿದ್ದು ಬರಲಿ ಗೋವಿಂದನ ದಯವೊಂದಿರಲಿ" ಎಂಬಂತೆ ಮಾನವೀ ಧರ್ಮದ ಸೂತ್ರವಾಗಬೇಕು, ಮರಗಳಂತೆ. ಮಾನವರ ಮನಗಳು ಎತ್ತರವಾಗಬೇಕು. ಕಟ್ಟಿಗೆಯ ಮುಖಾಂತರ ಮರಗಳು ಪ್ರಯೋಜನಕಾರಿ, ಹಿತಕಾರಿ. ಅಡಿನೆಗಳಿಂದ ಮಾನವನ ಸಂಸ್ಕೃತಿ. ಅಗ್ನಿ ಪೂಜೆ, ಭರತವರ್ಷದ ಸಂಪ್ರದಾಯ. ಹುಟ್ಟಿದಂದಿನಿಂದ ಸಾಯುವವರೆಗೆ ಅಗ್ನಿ-ನಾರಾಯಣನು ನಮಗೆ ಅತ್ಯವಶ್ಯ.

'ವನಮಹೋತ್ಸವಕ್ಕೆ' ಜಯ ಜಯಕಾರ
"ಸತ್ಯಂ ಶಿವಂ ಸುಂದರಂ"

ಭಾಷಾಭ್ಯಾಸದ ಗೊತ್ತುಗುರಿಗಳು

ಲೇಖಕರು : ಶ್ರೀ ಮ. ಗು. ಹಂದ್ರಾಳ, ಬಿ.ಎ.(ಆನರ್ಸ),ಎಂ.ಎಡ್., [ದ್ವಿತೀಯ ವರ್ಗ]
ಪ್ರಾಧ್ಯಾಪಕರು, ಪ. ಜೀ. ಶಿ. ಕೇಂದ್ರ, ಧಾರವಾಡ.

ಭಾಷೆ ಎಂದರೆ ಕನ್ನಡ ನುಡಿ, ಕನ್ನಡಿಗರು ಆಡುವ ಭಾಷೆ, ಕರ್ನಾಟಕದಲ್ಲಿ ಜನಿಸಿದವರ ತಾಯ್ನುಡಿ ಎಂಬರ್ಥದಲ್ಲಿ ನುಡಿಸಿ, ವಿವೇಚನೆ ಮಾಡಲಾಗುವದು. ಆದುದರಿಂದ ಭಾಷಾಭ್ಯಾಸವೆಂದರೆ ಕನ್ನಡ ನಾಡಿನ ಮಕ್ಕಳು ತಮ್ಮ ಮಾತೃಭಾಷೆಯನ್ನು ಯಾಕೆ ಅರಿಯಬೇಕು; ಅಭ್ಯಸಿಸಬೇಕು, ಎಂತು ಅರಿಯಬೇಕು; ಇನಿತು ಅರಿತು, ಮುಂದೆನಿತು ಸಾಗಬೇಕು. ಈ ಮೊದಲಾದ ಸಮಸ್ಯೆಗಳನ್ನು ಕುರಿತು ನಾವು ಮೊಟ್ಟ ಮೊದಲು ಆಲೋಚಿಸಬೇಕಾಗುತ್ತದೆ.

‘ನುಡಿ’ ಎಂದರೇನು ? “ಮಾತು” (Speech) ಎಂದು ನೇರವಾಗಿ ಹೇಳಬಹುದು. ವ್ಯಕ್ತಿಯು ತನ್ನ ವಿಚಾರಕ್ಕೆ ಒಂದು ರೂಪು ಕೊಡುವನು. ಅದನ್ನು ಇತರರಿಗೆ ತಿಳುಹುವನು. ಅದು ಅವರಿಗೆ ತಿಳಿಯಬೇಕೆಂದೂ ಅಪೇಕ್ಷಿಸುವನು. ಇನ್ನೊಬ್ಬರಿಗೆ ತಿಳಿದಾಗ, ಅದಕ್ಕೆ ಅರ್ಥವಾಗುತ್ತಿದೆ. ಅದು ಒಂದು ‘ರೂಪ’ (Form) ಧರಿಸುತ್ತಿದೆ ಎಂದು ನಾವು ಹೇಳಬಹುದು. ಎಂದ ಮೇಲೆ ಅರ್ಥಬೋಧವಾಗುವ ಮಾತಿಗೆ (Meaningful speech) ‘ನುಡಿ’ (Language) ಎಂದು ಕರೆಯುತ್ತೇವೆ. (Language is the dress of thought) ನುಡಿಯು ವಿಚಾರದ ಹೊದಿಕೆಯಾಗಿದೆ. ಅರ್ಥಾತ್ ವಿಚಾರದ ರೂಪವಾಗಿದೆ. ಮಗುವು ತನ್ನ ವಿಚಾರವನ್ನು ಮೊಟ್ಟ ಮೊದಲು ವ್ಯಕ್ತಮಾಡುವದು ಮಾತಿನಿಂದಲೇ ! ಮಾತು ಭಾಷಾಭ್ಯಾಸದ ಮೊದಲ ಸೋಪಾನ,ಅಷ್ಟೇಅಲ್ಲ, ಅದು ನುಡಿಯ ತಳಹದಿ (Basis), ಕಾರಣ ನುಡಿಯ ಅಭ್ಯಾಸ ಕ್ರಮದ ಆರಂಭದಲ್ಲಿ ಗಮನಿಸಬೇಕಾದುದು ಮಗುವಿನ ನುಡಿ (child speech).

ಮಗುವು ಶಾಲೆಗೆ ಬರುವ ಪೂರ್ವದಲ್ಲಿಯೇ ಮಾತಿನ ಶಕ್ತಿಯನ್ನು ತುಸುಮಟ್ಟಿಗೆ ಗಳಿಸಿಕೊಂಡಿರುತ್ತಾನೆ. ಮನೆಯಲ್ಲಿ ತಾಯಿ-ತಂದೆಯರೊಡನೆ, ಅಕ್ಕ-ತಂಗಿಯರೊಡನೆ, ಅಣ್ಣ-ತಮ್ಮಂದಿರೊಡನೆ, ಓಣಿಯಲ್ಲಿ ಓರಿಗೆಯರೊಡನೆ ಅವನ ಒಡನಾಟ ಬೆಳೆದುಕೊಂಡು ಬಂದಿರುತ್ತದೆ. ತನಗಿಷ್ಟವಾದುದನ್ನು ಪಡೆಯಲು ನುಡಿಯು ಸಾಧನವೆಂಬ ಅರಿವು ಆಗುತ್ತಲಿದೆ. (As a means of communication of ideas) ಮಾತು ಬರುವ ಮುಂಚೆ, ಮಗು ತನ್ನ ಇಚ್ಛೆಯನ್ನು ಅತ್ತು ಸಾಧಿಸುತ್ತದೆ. ಅವನ ವ್ಯಕ್ತತೆಯು ಆ ಅವಸ್ಥೆಯಲ್ಲಿ ಅವನ ಅಳುವುದರಲ್ಲಿಯೇ ಮಾಡುತ್ತಿದೆ. ಅಳುವುದು (Expressive cry) ವಿಚಾರ-ಭಾವ ವಾಹಿನಿಯಾಗಿ ಪರಿಣಮಿಸುತ್ತದೆ. ಮಾತನಾಡಲು ಕಲಿತಂತೆ, ಮಗುವು ತನ್ನ ಶಬ್ದ ಭಾಂಡಾರ (Vocabulary) ವನ್ನು ಹೆಚ್ಚಿಸಿಕೊಳ್ಳುತ್ತಾನೆ. ತನ್ನ ವಿಚಾರವನ್ನು ತಿಳಿಯಪಡಿಸಲು ಆತುರನಾಗುತ್ತಾನೆ, ಇನ್ನೊಬ್ಬರ ವಿಚಾರವನ್ನೂ ತಿಳಿಯಲೂ ಹಾತೊರೆಯುತ್ತಾನೆ. ತನ್ನ ಆಟ-ನೋಟಗಳಲ್ಲಿ, ನಿತ್ಯ ವ್ಯವಹಾರಗಳಲ್ಲಿ ತನ್ನ ಮಾತಿನ ಕಲೆಯನ್ನು ಮೂಡಿಸಲು ಯತ್ನಿಸುತ್ತಾನೆ. ಮಾತು ತನ್ನ ಇಷ್ಟ ಪೂರ್ತಿಯ ಸಾಧನವೆಂಬ ಸಂಗತಿಯು ಇನ್ನಷ್ಟು ನಿಚ್ಚಳವಾಗುತ್ತಿದೆ. ಅಲ್ಲದೆ, ಆ ವಿಧದಲ್ಲಿ ಬೇರೆಯವರ ಸಹಕಾರವನ್ನು ಪಡೆಯುವ ಅತ್ಯುತ್ತಮ ಸಾಧನವಾಗಿಯೂ ಭಾಷೆಯು ಪರಿಣಮಿಸುತ್ತದೆ. ಹೀಗೆ ಭಾಷೆಯು ವ್ಯಕ್ತಿಯ ವಿಚಾರ ವಾಹಿನಿಯಾಗಿ ಹೊರಸೂಸಿ, ಸಾಮಾಜಿಕ ಸಂಪರ್ಕವನ್ನು ಪಡೆಯುವ ಉತ್ತಮ ಸಾಧನವಾಗಿ ರೂಪುಗೊಳ್ಳುತ್ತಲಿದೆ. ಅಂತೆಯೇ ಭಾಷಾಭ್ಯಾಸವು ಎಲ್ಲ ಅಭ್ಯಾಸ ವಿಷಯಗಳಿಗಿಂತ ಮೊದಲು ಆರಂಭವಾಗುತ್ತದೆ. ಅಷ್ಟೇ ಅಲ್ಲ! ಎಲ್ಲ ಅಭ್ಯಾಸ ವಿಷಯಗಳಿಗೂ ಅದು ಸಾಧನವಾಗುತ್ತಿದೆ. ಆದುದರಿಂದ ಮಾತೃಭಾಷಾಭ್ಯಾಸವು ಮಗುವಿನ ವಿದ್ಯಾಭ್ಯಾಸದ ತಳಹದಿಯಾಗಿದೆ. (Mother tongue is the basis of all learning) ಶಾಲೆಯ ಪಾಠ್ಯಕ್ರಮದಲ್ಲಿ (Curriculum) ಭಾಷಾಭ್ಯಾಸವು ಮೊದಲನೆಯ ಸ್ಥಾನವನ್ನು ಗಳಿಸುತ್ತಲಿದೆ.

ಭಾಷಾಭ್ಯಾಸದ ಮೊದಲ ಹಂತದಲ್ಲಿ ನಾವು ಗಮನಿಸಬೇಕಾದುದು ‘ಮಗುವಿನ ಮಾತು’ ಎಂದು ಮೇಲೆ ಹೇಳಲಾಗಿದೆ. ಅವನ ಮಾತು ಶುದ್ಧವೂ, ಸುಲಭವೂ, ಸುಲಲಿತವೂ, ಆಗಬೇಕಾದುದು ಅಗತ್ಯ. ಅವನು ಎಂತಾ

ದರೂ ಮಾತು ಕಲಿತರೆ ಸಾಕು ಎಂಬುದು ನಮ್ಮ ಇಷ್ಟವಿಲ್ಲ. ಅವನ ಮಾತಿನಲ್ಲಿ ಸ್ಪಷ್ಟತೆ (Clearness) ನಿರ್ದಿಷ್ಟತೆ (Accuracy) ಮಧುರತೆ, (Sweetness) ಇವು ಬೆಳೆದುಕೊಂಡು ಬರಬೇಕೆಂದು ನೀವು ಇಚ್ಛಿಸುವದಿಲ್ಲವೇ ? ನಿಮ್ಮ ಇಚ್ಛೆಯೇ ಅವನ ಶಿಕ್ಷಣದಲ್ಲಿ ಪರಿಣಮಿಸಬೇಕಾಗಿದೆ. ಮಾತುಗಾರಿಕೆ ಅರ್ಥಾತ್ ಮಾತಿನ ಕಲೆಯು ತಾಯ್ನುಡಿ ಬೋಧನೆಯ ಮೊದಲು ಗುರಿ.

ಮಗುವು ಮಾತನಾಡುವದನ್ನು ಕಲಿಯಲು ಹೋರಾಡುತ್ತಿರುವದೆಂಬುದನ್ನು ನಾವು ಅರಿಯಬೇಕಾದರೆ, ಅವನ ಆರಂಭದ ತೊದಲು ಮಾತುಗಳನ್ನು ನಿರೀಕ್ಷಿಸಬೇಕು. ಅವನ ಅಸ್ಪಷ್ಟ ಮಾತುಗಳಲ್ಲಿಯೂ ಅರ್ಧಮರ್ಧ ಶಬ್ದಗಳಲ್ಲಿಯೂ ಒಂದು ವಿಧವಾದ ಅರ್ಥವನ್ನು ತಾಯಿಯು ತಟ್ಟನೆ ಕಲ್ಪಿಸುತ್ತಾಳೆ. ಮಗುವಿನ ಬೇಡಿಕೆಗಳನ್ನು ಅರಿಯಲು ಹವಣಿಸುತ್ತಾಳೆ. ಮಾತನಾಡಬೇಕೆಂಬ ಹಂಬಲವು, ಅವನು ಬೆಳೆದಂತೆ, ಹೆಚ್ಚುತ್ತದೆ. ಶಾಲಾಭ್ಯಾಸ ಪ್ರಾರಂಭವಾಗುವ ವಯಸ್ಸಿಗೆ (೬+) ಅವನು ಮಾತನಾಡಲು ಕಲಿತಿರುತ್ತಾನೆ. ಆದರೆ ಅವನ ಮಾತುಗಳಲ್ಲಿ ಭಾಷಾದೃಷ್ಟಿಯಿಂದ ಎಷ್ಟೋ ದೋಷಗಳು ಕಾಣಿಸಿಕೊಳ್ಳುವವು. ಆದುದರಿಂದ ಅವನಿಗೆ ಮಾತಿನ ಕಲೆಯಲ್ಲಿ ಆರಂಭದ ತರಬೇತು ಕೊಡಬೇಕಾಗುವದು. ಶಬ್ದಗಳನ್ನು ಚೆನ್ನಾಗಿ ಉಚ್ಚರಿಸಲು, ತನ್ನ ವಿಚಾರಗಳನ್ನು ಶುದ್ಧವಾದ ಮಾತುಗಳಲ್ಲಿ ಹೆಣೆಯಲು ಅವನು ಸಾಧಿಸಬೇಕಾಗುವದು. ಈ ಸಾಧನೆಯಲ್ಲಿ ಅವನಿಗೆ ನೆರವು ನೀಡಬೇಕು. ಕವನಗಳ ಅಭ್ಯಾಸದಲ್ಲಿಯಂತೂ ಧ್ವನಿ ತರಬೇತು ಬಹಳಷ್ಟು ಬೇಕು. ಅವನ ಮಾತುಗಳಲ್ಲಿ ಇಂಪು, ಅವನ ಸ್ವರದಲ್ಲಿ ಸೊಂಪು ಸಹಜವಾಗಿಯೇ ಹೊರಹೊಮ್ಮುವಂತಾಗಬೇಕು. ಹಾಗಾದರೆ, ಮಗುವಿನ ನುಡಿ ಚೆಲುವಾಗಬೇಕು. ಅವನ ಮಾತಿನಲ್ಲಿ ಮಾಧುರ್ಯ ಮೂಡಿ ಬರಬೇಕು; ಎಂದು ಹಂಬಲಿಸುವದಾದರೆ, ಗುರುಗಳು ತಮ್ಮ ಉಚ್ಚಾರ, ತಮ್ಮ ಓದು ಇವೂ ಶುದ್ಧವಾಗಿರಬೇಕು; ಮಾದರಿಯಾಗಿರಬೇಕು ಎಂಬುದನ್ನೂ ಮರೆಯಕೂಡದು. ಮಕ್ಕಳು ಅನುಕರಣಪ್ರಿಯರು ತಮ್ಮ ಗುರು ಹಿರಿಯರನ್ನೇ ಆದರ್ಶಜೀವಿಗಳೆಂದು ಕಾಣುವರು. ಜೀವನದಲ್ಲಿ ಮಾತುಗಾರಿಕೆಗೆ ಬೆಲೆ ಬಹಳ ! ಅಷ್ಟಿಷ್ಟೆಂದು ಹೇಳಲು ಬರುವಂತಿಲ್ಲ ! ಇಂದಿನ ಮಕ್ಕಳು ನಾಳಿನ ನಾಗರಿಕರು ತಮ್ಮ ಪ್ರೌಢ ಜೀವನದಲ್ಲಿ ಅವರು ಯಾವ ಉಚ್ಚಸ್ಥಾನಕ್ಕೆ ಹೋಗಬಲ್ಲರೋ ಈಗ ತಿಳಿಯದು. ಈ ಆಶಾವಾದವನ್ನು ಅಪ್ಪಿ, ಮುನ್ನೋಟವನ್ನು ಮುಂದಿಟ್ಟುಕೊಂಡು, ಗುರುಗಳು ಮಕ್ಕಳಿಗೆ ಶಿಕ್ಷಣ ಕೊಡಬೇಕು; ಅವರ ಜೀವನವನ್ನು ರೂಪಿಸಬೇಕು. ಅವರು ಪ್ರತಿಭಾವಂತ ಕಲಾವಂತರಾಗಬೇಕು. ಶಾಲಾಭ್ಯಾಸದ ಅವಧಿಯಲ್ಲಿ ಅಭಿನಯ, ಸಂಭಾಷಣೆಗಳನ್ನು ಕಲಿಸಿ ಮಾತುಗಾರಿಕೆಯಲ್ಲಿ ತರಬೇತು ಮಾಡಬೇಕು. “ಮಾತುಬಲ್ಲವ ಮಾಣಿಕ ತಂದ, ಮಾತರಿಯದವ ಜಗಳತಂದ” ಎಂಬ ನಾಣ್ಣುಡಿಯ ನಿತ್ಯತೆಯು ನಿದರ್ಶನಕ್ಕೆ ಬರಬೇಕು. ಮಾತನಾಡುವ ಕಲೆಯು(The art of speaking) ಸ್ವಪ್ರಯತ್ನದಿಂದ, ಗುರು–ಹಿರಿಯರ ಬುದ್ಧಿಪೂರ್ವಕ ನೆರವಿನಿಂದ, ಓದಿನ ಸಂಸ್ಕಾರದಿಂದ ಹಸ್ತಗತವಾಗುತ್ತದೆ. ಭಾಷಾಭ್ಯಾಸದ ಮೊದಲ ಗುರಿಯಾದ ಮಾತಿನ ಕಲೆಯನ್ನು ಮಗುವು ಈ ಮುಮ್ಮುಖ ಮಾರ್ಗದಿಂದ ಕಲಿಯಬೇಕಾಗುತ್ತದೆ

ಮಗುವಿನ ವಿದ್ಯಾಭ್ಯಾಸದ ಸಂಸ್ಕಾರವು ಬರಿ ಅವನ ಮಾತಿನಲ್ಲಿಲ್ಲ; ಓದಿನಲ್ಲಿಲ್ಲ. ಅವನ ಬರೆಹದಲ್ಲಿಯೂ ಹುದುಗಿದೆ. ವ್ಯಕ್ತಿಗೆ ತನ್ನ ವಿಚಾರವನ್ನು ಪರರಿಗೆ ಸ್ಪಷ್ಟವಾದ ರೀತಿಯಲ್ಲಿ ತಿಳಿಸುವ ಸಾಧನವೆಂದರೆ ಬರೆಹವೇ ! ಒಬ್ಬನಿಗೆ ತನಗಿಷ್ಟವಿದ್ದವರೆಲ್ಲರನ್ನೂ ಒಂದೆಡೆ ಸೇರಿಸಿ, ತನ್ನ ವಿಚಾರಗಳನ್ನು ತಿಳುಹಲು ಸಾಧ್ಯವಾಗಲಿಕ್ಕಿಲ್ಲ, ಆದರೆ ಅವನು ತನ್ನ ವಿಚಾರಗಳನ್ನು ಬರೆಹ ರೂಪದಲ್ಲಿ ಪ್ರಕಟಿಸಿ, ಏಕಕಾಲಕ್ಕೆ ಅನೇಕರಿಗೆ ತಿಳಿಸಬಲ್ಲ. ಬರೆಹವು ಪ್ರಬಲ ವಿಚಾರ ವಾಹಿನಿಯಾಗಿದೆ, ಪರರ ವಿಚಾರಗಳನ್ನು ತಿಳಿಯಲು ಇಲ್ಲವೆ ಪರರಿಗೆ ನಮ್ಮ ವಿಚಾರಗಳನ್ನೂ ತಿಳಿಸಲು ಉತ್ತಮ ಸಾಧನವಾಗಿದೆ. ಜ್ಞಾನ ಸಂಪತ್ತನ್ನು ವಿಕಾಸ ಮಾಡಿಕೊಳ್ಳಲು ಬರೆಹವು ನೆರವಾಗುತ್ತದೆ. ಆದುದರಿಂದ ಮಕ್ಕಳನ್ನು ವಿದ್ಯಾಭ್ಯಾಸದ ಅವಧಿಯಲ್ಲಿ ಬರೆಹ ಕಲೆಯಲ್ಲಿ (Art of writing) ತರಬೇತು ಮಾಡುವದು ಅಗತ್ಯವು. ಇದುವೇ ಭಾಷಾಭ್ಯಾಸದ ಎರಡನೆಯ ಗುರಿ.

ಇನ್ನು ಮಕ್ಕಳ ಬರೆಹ ಸುಧಾರಿಸುವ ಬಗೆ ಯಾವುದು ? ಎಂಬುದನ್ನು ವಿಚಾರಿಸುವಾ. ಬರೆಹ ಕಲೆಯನ್ನು ಸಾಧಿಸಲು ಬರೆಯುವದೇ ಉತ್ತಮ ಮಾರ್ಗವೆಂದು ಅನುಭವ ಸಿದ್ಧಮಾತಾಗಿದೆ. ಈಸು ಕಲಿಯಲು ಅರ್ಕಿಮೆಡಿಸನ ಸಿದ್ಧಾಂತವನ್ನು ಅರಿತರೆ ಆಗದು. ನಾಯು

ಕಲ್ ಹೊಡೆಯುವದನ್ನು ಕಲಿಯಲು ಸಮತೋಲ ಸಿದ್ಧಾಂತವನ್ನು ತಿಳಿದರೆ ತೀರದು. ಈ ಕ್ರಿಯೆಗಳನ್ನು ಪ್ರತ್ಯಕ್ಷ ಮಾಡಿ, ಅನುಭವಗಳಿಸುತ್ತ ಕಲಿಯಬೇಕಾಗುವದು. ಆದುದರಿಂದ ಬರೆಹ ಕಲೆಯನ್ನು ಹಸ್ತಗತ ಮಾಡಿಕೊಳ್ಳಲೇ ಬೇಕಾದರೆ, ಬರೆಯುವದನ್ನು ಆರಂಭಿಸಲೇಬೇಕು. ಇದುವೇ ಪ್ರಥಮ ಸೋಪಾನ, ಬರೆಹದ ವಿವಿಧ ರೂಪಗಳನ್ನು ಕೊಟ್ಟು, ಬರೆಹದಲ್ಲಿ ತರಬೇತು ಮಾಡಬೇಕು. ಯಾವ ರೂಪ (Form) ಯಾರನ್ನು ಆಕರ್ಷಿಸುವದೋ ಆರಂಭದಲ್ಲಿ ತಿಳಿಯುವದಿಲ್ಲ. ಒಬ್ಬನಿಗೆ ಕವನವು ಮೆಚ್ಚುಗೆಯಾಗುವದು; ಇನ್ನೊಬ್ಬನಿಗೆ ಕಥೆ ಸೇರುತ್ತದೆ; ಮತ್ತೊಬ್ಬನಿಗೆ ನಿಬಂಧವು ಮೆಚ್ಚಿಗೆಯದಾಗುತ್ತದೆ. ಕಾರಣ ಆರಂಭದಿಂದಲೇ ಮಕ್ಕಳಿಗೆ ವಿವಿಧ ರೂಪಗಳನ್ನು ಒದಗಿಸಿ, ಬರೆಹ ಕಲೆಯಲ್ಲಿ ಪ್ರವೇಶ ಮಾಡಬೇಕಾಗುತ್ತದೆ.

ಕನ್ನಡ ಲಿಪಿಯು ಆಂಗ್ಲ ಲಿಪಿಯಂತೆ ಸುಲಭವಾಗಿಲ್ಲ. ಮೂಲಾಕ್ಷರಗಳು, ಕಾಗುಣಿತಾಕ್ಷರಗಳು, ಒತ್ತಕ್ಷರಗಳು ಇತ್ಯಾದಿ ಲಿಪಿಯಲ್ಲಿ ಸೇರಿಕೊಂಡಿವೆ. ಇವೆಲ್ಲವುಗಳ ಸರಿಯಾದ ಅಭ್ಯಾಸ ಆರಂಭದಲ್ಲಿ ಆಗಲೇಬೇಕಾಗುತ್ತದೆ. ಇಲ್ಲವಾದರೆ ಬರೆಹ ದೋಷಗಳು ಆರಂಭದಿಂದಲೇ ಉಳಿಯುತ್ತವೆ. ಅವುಗಳನ್ನು ಕ್ರಮೇಣ ತಪ್ಪಿಸುವದು ಕಠಿಣವೂ ಎನಿಸುತ್ತದೆ. ಬರೆಹವು ಶುದ್ಧವೂ, ಸುಲಲಿತವೂ, ಆಗಿರಬೇಕೆಂದು ಗುರುಗಳುಗಮನಿಸಬೇಕು. ಅಲ್ಲದೆ, ಬರೆಹವು ಅಂದವೂ, ಅಚ್ಚುಕಟ್ಟಾಗಿಯೂ ಇದ್ದರೆ ಇನ್ನಿಷ್ಟು ಒಳಿತು.

ಭಾಷೆ (Language) ಯೆಂದರೆ ನುಡಿಯು ರೀತಿ. (Method of expression) ಅದು ಮಾತಿನಲ್ಲಿ ಮತ್ತು ಬರೆಹದಲ್ಲಿ ವ್ಯಕ್ತವಾಗುತ್ತದೆ ಎಂಬುದನ್ನು ಮೇಲೆ ವಿವೇಚಿಸಲಾಯಿತು. ಆದರೆ ಭಾಷ್ಯಾಭ್ಯಾಸದ ಎಲ್ಲೆ (Limit) ಇಲ್ಲಿಗೆ ಮುಗಿಯಲಿಲ್ಲ. ಅದರ ವ್ಯಾಪ್ತಿಯು ಇನ್ನೂ ವಿಸ್ತೃತವಾಗಿದೆ. ನಿಜವಾದ ಭಾಷಾಭ್ಯಾಸವು (Language study) ಸಾಹಿತ್ಯದ (Literature) ಅಭ್ಯಾಸದಲ್ಲಿ ಅಡಕವಾಗಿದೆ. ಭಾಷೆ ಮತ್ತು ಸಾಹಿತ್ಯ ಇವು ಸಮಾನ ಅರ್ಥ ಹೇಳುವ ಶಬ್ದಗಳೆಂದು ಕೆಲವರು ತಿಳಿಯುವ ಸಂಭವವಿದೆ. ಇದು ತಪ್ಪು. ಭಾಷೆ ವಿಚಾರದ ಹೊದಿಕೆಯೆನೋ ನಿಜ; ವಿಚಾರ ವಾಹಿನಿಯೂ ಅಹುದು. ಆದರೆ ಅದು ಗ್ರಂಥದ ರೂಪದಲ್ಲಿ ಕಾಣಿಸಿಕೊಂಡರೆ ಮಾತ್ರ, ಅದು ಸಾಹಿತ್ಯವಾಗುತ್ತದೆ. ಸಾಹಿತ್ಯ ಪ್ರಪಂಚವು (The world of literature) ಇತ್ತೀಚೆಗೆ ಬಹುವಿಧವಾಗಿ ಬೆಳೆದುಕೊಂಡು ಬಂದಿದೆ. ಒಂದು ಉತ್ತಮ ಗ್ರಂಥವು ನೇರವಾಗಿ ಜೀವನದಿಂದ ವಿಕಸನ ಪಡೆಯುತ್ತದೆ. ಅದನ್ನು ಓದುವದರಿಂದ ಜೀವನದ ಹೊಸ ಸಂಬಂಧಗಳ ಸಾಮೀಪ್ಯಕ್ಕೆ ನಾವು ತಲುಪುತ್ತೇವೆ. ಜನತೆಯು ಜೀವನದಲ್ಲಿ ಕಂಡ, ಅವರು ಅನುಭವಿಸಿದ ಮತ್ತು ಅವರ ಸನಿಹದ ಹಾಗೂ ನಿತ್ಯ ಅವಸ್ಥೆಯನ್ನು ಆವರಿಸಿಕೊಂಡ ಸಂಗತಿಗಳ ಬಗೆಗೆ ಅವರ ವಿಚಾರಕ್ಕೆ ಹೊಳೆದ ಭಾವಕ್ಕೆ ಅನಿಸಿದ ವಿಷಯಗಳ ಸಂಗ್ರಹವೇ ಸಾಹಿತ್ಯವೆಂದು **ಹಡಸನ್‌ನು** ನಿರೂಪಿಸಿದ್ದಾನೆ. ಆದುದರಿಂದ ಭಾಷೆಯ ಮುಖಾಂತರ ಜೀವನದ ಆವಿಷ್ಕರಣದ ರೂಪವನ್ನು ಸಾಹಿತ್ಯವು ಧರಿಸುತ್ತದೆ. ಸಾಹಿತ್ಯವು ಜನಜೀವನದ ಕನ್ನಡಿಯೆಂದು ಹೇಳುವದೂ ಉಂಟು. (Literature is criticism of life) ಸಾಹಿತ್ಯವು ಜೀವನದ ವಿಮರ್ಶೆಯೆಂದು ಮ್ಯಾಥ್ಯೂ ಅರ್ನಾಲ್ಡನು ಹೇಳಿದ್ದಾನೆ.

ಜನಜೀವನದಲ್ಲಿ ಕಾಣಬರುವ ಲೋಪದೋಷಗಳನ್ನೂ, ಮೂಢ ನಂಬಿಕೆಗಳನ್ನೂ ತಪ್ಪು ಆಚಾರ-ವಿಚಾರಗಳನ್ನೂ, ಸಾಹಿತ್ಯವು ಎತ್ತಿ ತೋರಿಸಿ, ಜನ ಜೀವನದಲ್ಲಿ ನವ ಚೈತನ್ಯವನ್ನೇ ತುಂಬಿ ಜೀವನವನ್ನು ಹಸನ ಮಾಡಲು ಹವಣಿಸುತ್ತದೆ. ಆದರೆ, ಸಾಮಾಜಿಕ ಜೀವನದಲ್ಲಿ ಕೊಳೆಯನ್ನಷ್ಟೇ ತೋರಿಸುವದು ವಿಮರ್ಶೆಯ ಕ್ಷೇತ್ರವೆಂದು ತಿಳಿಯುವದು ತಪ್ಪು; ಅದು ಗುಣ-ದೋಷಗಳೆರಡನ್ನೂ ತೋರಿಸುವಂತಿರಬೇಕು. ಟೀಕೆಯೊಡನೆ ಸೂಕ್ತವಾದ, ವಿಧಾಯಕ ಸೂಚನೆಗಳೂ ಇರಬೇಕು. ಸಾಹಿತ್ಯವು ಜನಜೀವನದಲ್ಲಿಯ ಗುಣದೋಷಗಳ ಪರಿಶೀಲನೆ, ಸಾಧಕ-ಬಾಧಕ ಸಂಗತಿಗಳ ವಿಮರ್ಶೆ ಎಂದು ನೆನೆದಾಗ, ಅದರ ಗುರಿ ಹಿರಿದಾಗಿದೆ ಎಂಬುದು ಹೊಳೆಯದಿರದು. ಈ ವಿಶಾಲ ದೃಷ್ಟಿಯಿಂದ ಸಾಹಿತ್ಯದ ಅಭ್ಯಾಸವು ಸಾಗಬೇಕು; ಎಂದರೆ ವ್ಯಕ್ತಿಯ ಭಾಷಾ ಜ್ಞಾನವು ಬೆಳೆಯುವದು; ಅದರ ಜೊತೆಗೆ ಅವನಿಗೆ ಜೀವನದ ಅಭ್ಯಾಸವೂ ಆಗುವದು. ಸಾಹಿತ್ಯ ಪ್ರವಾಹವು ಬಹುಮುಖವಾಗಿ ಹರಿಯುತ್ತಿದೆ. ಕಥೆ–ಕಾದಂಬರಿ, ಕವನ-ಕಾವ್ಯ, ನಿಬಂಧ–ಪ್ರಬಂಧ ಮೊದಲಾದ ಶಾಖೆಗಳಲ್ಲಿ ಸಾಹಿತ್ಯ ಸೆಲೆಗಳೊಡೆದು, ಓದುಗರ ಮನಾನಂದಕ್ಕೆ ಕಾರಣವಾಗುತ್ತಿದೆ. ಇದಲ್ಲದೆ, ಸಾಹಿತಿಯು ಜೀವನದಲ್ಲಿಯ ತನ್ನ ಅನುಭವಗಳನ್ನು ತನಗಿಷ್ಟವೆನಿಸಿದ ರೂಪ

ವಲ್ಲಿ ಹೆಣೆಯಲು ವ್ಯಾಸಂಗ ಮಾಡಿ, ತನ್ನದೇ ಆದ ವಿಶಿಷ್ಟ ಶೈಲಿಯನ್ನು ಗಳಿಸಿಕೊಂಡಿರುತ್ತಾನೆ. ಅವನ ಶೈಲಿಯಲ್ಲಿ ಅವನ ವ್ಯಕ್ತಿತ್ವವು ಮೂಡಿ ಬರುತ್ತದೆ. (Style is an index of personality) ಭಾಷಾಭ್ಯಾಸದಿಂದ ಉತ್ತಮ ಕೃತಿಗಳ ಬಗೆಗೆ ಮಕ್ಕಳಿಗೆ ಪರಿಚಯವಾಗುತ್ತದೆ. ಅಲ್ಲದೆ, ಉತ್ತಮ ಸಾಹಿತಿಗಳ ಶೈಲಿಯ ಬಗೆಗೂ ಪರಿಜ್ಞಾನ ಉಂಟಾಗುತ್ತದೆ. ವಿದ್ಯಾಭ್ಯಾಸದ ಅವಧಿಯಲ್ಲಿ ಸಾಹಿತ್ಯಾಭಿರುಚಿ ಹುಟ್ಟಿ ಬೆಳೆಯಬೇಕಾದುದು ಅಗತ್ಯವು; ಕಾರಣ ಮಕ್ಕಳು ಸಾಹಿತ್ಯ ಕ್ಷೇತ್ರದಲ್ಲಿ ಪ್ರವೇಶ ಮಾಡುವದು ಭಾಷಾಭ್ಯಾಸದ ಮೂರನೆಯ ಗುರಿ.

ಭಾಷೆಯಲ್ಲಿ ಸ್ವಾಮಿತ್ವವನ್ನು ಪಡೆದು, ವ್ಯಕ್ತಿಯು ತನ್ನ ವ್ಯಕ್ತಿತ್ವವನ್ನೂ ತನ್ಮೂಲಕ ವಿಕಸನ ಮಾಡಿಕೊಳ್ಳಬಹುದು; ತನ್ನ ನುಡಿಯಲ್ಲಿ ತನ್ನ ವ್ಯಕ್ತಿತ್ವವನ್ನು ಪ್ರತಿಬಿಂಬಿಸಲೂ ಶಕ್ತನಾಗಬಹುದು. ಹೀಗೆ ವ್ಯಕ್ತಿಯು ತನ್ನ ವ್ಯಕ್ತಿತ್ವದ ವಿಕಸನ ಪ್ರಕಾಶನಗಳಿಗಾಗಿ ಭಾಷೆಯ ನೆರವನ್ನು ಪಡೆಯಬಹುದು. ಭಾಷೆಯು ಸಂಪರ್ಕದ ಸಾಧನವೂ ಅಹುದು. ಪರರಿಗೆ ತನ್ನ ವಿಚಾರಗಳನ್ನು ಅರುಹುವ, ಪರರ ವಿಚಾರಗಳನ್ನು ಅರಿಯುವ ಅತ್ಯುತ್ತಮ ಸಾಧನವೆಂದರೆ ಭಾಷೆ. ಪರರ ಮೇಲೆ ಪ್ರತಿಭೆಯನ್ನು ಬೀರಬಲ್ಲುದು ಭಾಷೆ ! ವ್ಯಕ್ತಿಯು ತನ್ನ ವ್ಯಕ್ತಿತ್ವದ ಪ್ರಭಾವವನ್ನು ಪರರ ಮೇಲೆ ಬೀರಲಿಕ್ಕೂ, ಪರರ ವ್ಯಕ್ತಿತ್ವದ ಪ್ರಭಾವದ ಅಳವಿನಲ್ಲಿ ತಾನು ಬೀಳಲಿಕ್ಕೂ ಭಾಷೆಯೇ ಮಾಧ್ಯಮವಾಗಿದೆ. ನುಡಿಯು ನಾಡಿನ ನಾಡಿ: ನಾಡಿನ ಶಕ್ತಿಯು ನುಡಿಯಲ್ಲಿ ಹುದುಗಿರುವದು. ನಾಡಿನ ಸಂಸ್ಕೃತಿಯು ನುಡಿಯಲ್ಲಿ ಹೆಣೆದುಕೊಂಡಿದೆ; ನುಡಿಯು ನಾಡಿನ ಸಂಸ್ಕೃತಿಯನ್ನು ಪೋಷಿಸುತ್ತದೆ. ಆದುದರಿಂದ ನುಡಿಯು ವ್ಯಕ್ತಿಯ ಹಾಗೂ ನಾಡಿನ ಸಾಂಸ್ಕೃತಿಕ ಬೆಳವಣಿಗೆಯ ಸಾಧನವು. ಜನಜೀವನದ ಉನ್ನತ ಮಟ್ಟವನ್ನು ಭಾಷೆಯ ಮುಖಾಂತರ ನಾವು ಅರಿಯುತ್ತೇವೆ. ಇನ್ನೂ ಎತ್ತರಕ್ಕೆ ಅದು ಹೋಗಬೇಕೆಂದು ನಾವು ಅಪೇಕ್ಷಿಸಿದಲ್ಲಿ, ಆ ದಿಶೆಯಲ್ಲಿ ನಾವು ಯತ್ನಿಸುತ್ತೇವೆ. ಆಗ ಭಾಷೆಯು ಸಾಧನವಾಗುತ್ತದೆ. ಪ್ರಾಚೀನ ಕಾಲದಿಂದ ಜನತೆಯು ತನ್ನ ಸಂಸ್ಕೃತಿಯನ್ನು ಭಾಷೆಯ ಮುಖಾಂತರವೇ ಪೋಷಿಸಿ, ಬೆಳೆಯಿಸಿ ಅದನ್ನು ಉಳಿಸಿಕೊಂಡು ಬಂದಿದೆ. ಭಾಷೆಯು ಸಂಸ್ಕೃತಿಯನ್ನು ಒಂದು ಕಾಲದಲ್ಲಿ ಸಂವರ್ಧನೆ ಮಾಡಿದೆ; ಇನ್ನೊಂದು ಕಾಲದಲ್ಲಿ ಸಂಸ್ಕೃತಿಯ ಪುನರುಜ್ಜೀವನವನ್ನು ಮಾಡಿದೆ. ನಾಡಿನ ಸಂಸ್ಕೃತಿಯ ಪಾಲನ-ಪೋಷಣ ಮಾಡುವಲ್ಲಿ ಮತ್ತು ನವನಾಗರಿಕತೆಯನ್ನುಂಟು ಮಾಡುವಲ್ಲಿ ನುಡಿಯ ಪಾತ್ರವು ಹಿರಿದಾಗಿದೆ. ಇದು ಭಾಷಾಭ್ಯಾಸದ ನಾಲ್ಕನೆಯ ಗುರಿ. ಭಾಷಾಭ್ಯಾಸದಲ್ಲಿ ತೊಡಗಿದ ವಿದ್ಯಾರ್ಥಿಗಳು ಈ ಹಿರಿ ಗುರಿಯನ್ನು ಅರಿತು ತಮ್ಮ ಭಾಷಾವ್ಯಾಸಂಗವನ್ನು ಮುಂದುವರಿಸಬೇಕು.

ಸೂಚನೆ

"ಜೀವನ ಶಿಕ್ಷಣ"ದ **ಈ ವರುಷದ** ವಿಶೇಷ ಸಂಚಿಕೆಯನ್ನು ಗಂ. ಮ. ಸ. ಟ್ರೇನಿಂಗ ಕಾಲೇಜದ ಶತಮಾನೋತ್ಸವದ ಅಂಗವಾಗಿ ಪ್ರಕಟಿಸಬೇಕೆಂದು ಸಂಪಾದಕ ಮಂಡಲವು ನಿರ್ಣಯಿಸಿರುವದರಿಂದ ನವ್ಹಂಬರ ತಿಂಗಳ ಸಂಚಿಕೆಯು ಹೊರಡುವದಿಲ್ಲ.

—ಪ್ರಧಾನ ಸಂಪಾದಕರು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ
ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು
ಶ್ರೀ ಜಿ. ಡಿ. ಪಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ
ದೊರೆಯುವದು. ಬೆಲೆ ೧—೧೨—೦ ಅಂಚೆವೆಚ್ಚ
ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ
ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ವಾಯ್. ರಾಣೆ

ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ವರ್ಣ ಸಂಧಿ! ಸಚಿತ್ರ ಗ್ರಂಥ !! ಸುಂದರ ಮುದ್ರಣ

“ ಶಿಕ್ಷಣ-ಶಿಕ್ಷಕ-ದರ್ಶನ”

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-
ಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿ
ಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾ
ಶ್ವವಿದ್ಯಾಲಯದ ಉಪ ಕುಲಪತಿಗಳಾದ ರ‍್ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದ
ಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿ
ಣ್ಣ ಬಣ್ಣಗಳಲ್ಲಿ ೪೧ ಫೋಟೊ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರ
ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಆಗಸ್ಟ ೫೭ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅ
ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

ದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಭಾರಾಳವಾದ ಕಮೀಷನ್. [**ಸುಂದರ ಪ್ರತಿ** ೪

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ:— ವಿಜಾಪುರ.

ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ ಶ್ರೀ ಗುರುನಾಥ ಜೋಶಿ ಅವರು. ತಮ್ಮ ಅ
ಅನುಭವದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿ
ಇದರಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದಿ
ಭಾಷಾಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭ
ಹಿಂದೀಯನ್ನು ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, ಪ್ರಿನ್ಸಿ
ವಿ. ಕೆ. ಗೋಕಾಕ ಅವರು ಸ್ವಾಗತಿಸಿದ್ದಾರೆ. ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿ
ಒಂದುನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

ಸುದ್ದಿಗಳು

ಕಾಕೋಳ: ದಿ. ೨೧–೮–೫೭ ರಂದು ಈ ಗ್ರಾಮ ಲ್ಲಿ ವ್ಹಿ. ಪಿ. ಸಿ. ಯಿಂದ ಕಟ್ಟಿಸಲಾದ ಶ್ರೀ ಕಾಲ್ಮೇಶ್ವರ ಾಚನಾಲಯದ ಹೊಸ ಕಟ್ಟಡದ ಪ್ರಾರಂಭೋತ್ಸವವು ರೋಗ್ಯ ಮಂತ್ರಿಗಳಾದ ಶ್ರೀ ಆರ್. ಎಂ. ಪಾಟೀಲರಿಂದ ಡೆಯಿತು.

ಇಟಗಿ : ಪ್ರತಿ ವರುಷದಂತೆ ನಮ್ಮ ಶಾಲೆಯಲ್ಲಿ ಚರ್ಚಾ-ಕೂಟದ ಉದ್ಘಾಟನೆಯನ್ನು ಶ್ರೀ ಸಿ. ಬಿ. ಬೆಲ್ಲದ ರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಜರುಗಿಸಲ್ಪಟ್ಟಿತು.

ಹಿರೇಬೂದಿಹಾಳ– ದಿ. ೨೮–೭–೧೯೫೭ ರಂದು ಈ ಭಾಗದ ಉಪ-ಶಿಕ್ಷಣಾಧಿಕಾರಿಗಳ ಪ್ರಯತ್ನದ ಫಲ ಾಗಿ "ಶಾರದಾ ವಾಚನಾಲಯವು" ಈ ಜಿಲ್ಹೆಯ ಮಾ| ್ಯ| ಅ| ರಾದ ಶ್ರೀ ಬಿ. ಎನ್. ಜೇರೆಯವರಿಂದ ಉದ್ಘಾ ನೆಯಾಯಿತು.

ಗೋಲಗೇರಿ : ಈ ಗ್ರಾಮದಲ್ಲಿ ಶ್ರೀ ಗೊಲ್ಲಾಳೇ ್ವರ ವಾಚನಾಲಯಕ್ಕೆ ಕೆಳಗೆ ಕಾಣಿಸಿದ ಮಹನೀಯರು ನ ಸಹಾಯ ಸಲ್ಲಿಸಿದ್ದಾರೆ.

೪ ರೂಪಾಯಿ ಸಲ್ಲಿಸಿದವರು:– ಶ್ರೀಗಳಾದ ಬಿ. ರ್ನಾಳ ೨) ಎಸ್. ದೇವರಮನಿ.

೧ ರೂ. ಸಲ್ಲಿಸಿದವರು:– ಶ್ರೀ ಎಸ್. ರಡ್ಡೇವಾಡಗಿ

೨ ರೂ. ಸಲ್ಲಿಸಿದವರು:-ಶ್ರೀಗಳಾದ ಬಿ. ಯಂಕಂಚಿ, ಸ್. ಪಟ್ಟಣಸೆಟ್ಟಿ, ಬಿ. ಸಜ್ಜನ, ಎಸ್. ಕರ್ನಾಳ, ನ್. ಡಿ. ಕರ್ನಾಳ, ಆರ್. ಸತ್ಯಾಳ, ಎ. ಯಂಕಂಚಿ, ಮ್. ಗಣಪೂರ, ಆರ್. ಎಸ್. ಕೊಪ್ಪಾ.

ಕೋಡಮುಚಗಿ : ದಿ. ೪–೮–೫೭ರಂದು ಚತುರ್ಥ ್ರೀಡಾ ಮಹೋತ್ಸವವು ಇಲ್ಲಿಯ ಡಾ. ಕೆ. ಆರ್. ಕುಲ ರ್ಣಿಯವರ ಹಿರಿತನದಲ್ಲಿ ಜರುಗಿತು.

ಹಾವೇರಿ : ದಿ. ೧೦–೮–೫೭ರಂದು ಇಲ್ಲಿಯ ು. ಗಂ. ಶಾಲೆಯಲ್ಲಿ ಈ ಸಲದ ಮುಲ್ಕೀ ಪರೀಕ್ಷೆ ಪರಿ ಣಾಮವು ನೂರಕ್ಕೆ ನೂರು ಆದ ಬಗ್ಗೆ ಊರವರಿಂದ ಈ ಾಲೆಯ ಶಿಕ್ಷಕರಿಗೆ ಅಭಿವಂದನೆ ಸಲ್ಲಿಸಲು ಸಭೆ ಸೇರಿತ್ತು.

ಮಾಂಜರಿ: ದಿ. ೩೦–೭–೫೭ ರಂದು ಶ್ರೀ ಶಾರ ಾದೇವಿಯ ಪೂಜಾ ಸಮಾರಂಭವು ಒಳ್ಳೇ ವಿಜೃಂಭಣೆ ಯಿಂದ ಜರುಗಿತು. ಅಂದು 'ಅಶಿಕ್ಷಿತರ ಗೋಳು' ಎಂಬ ಏಕಾಂಕ ನಾಟಕವು ಕ. ಗಂ. ಶಾಲೆಯ ವಿದ್ಯಾರ್ಥಿಗಳಿಂದ ಭಿನಯಿಸಲ್ಪಟ್ಟಿತು.

ಅರಿದಡೆ ಶರಣ

ಸಮತೆ, ಸುಪ್ರೀತಿ, ಸತ್ಯದಾಚರಣೆಗಳು
ಶಿವನ ಸಾನ್ನಿಧ್ಯಕಾಗಿರುವ ಸೋಪಾನಗಳು
ಆ ಲೋಕ, ಈ ಲೋಕ, ತ್ರಿಲೋಕ ಬೇರಿಲ್ಲ
ದೇವ-ದಾನವರಿವರು ಬೇರೆ ಇನ್ನೆಲ್ಲಿಯಿಲ್ಲ
ತನ್ನ ತಾನರಿಯಲಿಕೆ, ಮನಸಾಕ್ಷಿ ನಡಿಯಲಿಕೆ
ಅನುಭಾವಿ ಹುಡುಕಿದನು ಸನ್ನೀತಿ ಕಲ್ಪಕತೆ.
ಈ ಬಾಳು ಹಾಳಲ್ಲ. ಸಂತೆ ಕಂತೆಯೂ ಅಲ್ಲ
ಅರಿತು ನಡೆ, ಕಹಿಯು ಸಿಹಿಯಹುದು ಬೇವು-ಬೆಲ್ಲ.

"ಆಚಾರವೇ ಸ್ವರ್ಗ ಅನಾಚಾರವೆ ನರಕ"
ಇದನರಿತು ನಡೆವವಗೆ ಬೇರಿಹುದೆ ನಾಶ?
ಏಸು ಬುದ್ಧರು ಬಸವ ಗಾಂಧೀಜಿ ಮಾನವರೆ?
ಅವರ ಅಂತಃಜ್ಯೋತಿಗಳಿಯಲಿಲ್ಲವೆ ತಿಮಿರೆ?
ಸ್ವಯಂ ಪ್ರಭೆಯೋ ಸತ್ಯ ದೇವ ರೂಪಹುದು.
ಈ ಬೆಳಕನರಿತವನೆ ಜೀವನ್ಮುಕ್ತನಹುದು:

—ಗುರುಲಿಂಗ ಕಾಪಸ, ಜಮಖಂಡಿ.

* * *

ಶಿಶು ಸಾಹಿತ್ಯದ ಸುಗ್ಗಿ !

ಸ್ನೇಹ ಪ್ರಕಾಶನದ ಅದ್ಭುತ ಪ್ರಗತಿ !!

ಪ್ರತಿಯೊಬ್ಬ ಕನ್ನಡ ಬಾಲಕ-ಬಾಲಕಿಯರೂ ಓದಿ
ನಲಿಯಬೇಕಾದ ಕವನ ಸಂಗ್ರಹಗಳು :

ಗುಲಾಬಿ ಗೊಂಚಲು	೦–೫–೦	ಸನದಿ ಶ್ರೀಕಾಂತ
ಗೃಹಪಂಚಮಿ	೦–೫–೦	ಬಿ ಎ. ಸನದಿ
ಜಿಲೇಬಿ ಝಣ್ ಝಣ್	೦–೫–೦	ಬಿ ಎ. ಸನದಿ
ಬಾಳಿನಬೆಳಕು(ಕಥೆಗಳು)	೦–೫–೦	ಎ ಜಿ. ಮುನೋಳಿ

—ಇವಲ್ಲದೆ—

'ಜಿವಳಿಮಲ್ಲಿಗೆ' 'ರಸಿಕಪಕ್ಷಿ' 'ಆಶಾಕಿರಣ'

ಇತ್ಯಾದಿ ಕವನ ಸಂಗ್ರಹಗಳಿಗಾಗಿ ಕೂಡಲೇ ಬರೆಯಿರಿ:

ಸ್ನೇಹ ಪ್ರಕಾಶನ, ಶಮನೇವಾಡಿ
(ಜಿ. ಬೆಳಗಾವಿ)

* * *

Regd No. B. 5

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧. ನನ್ನನಲ್ಲ (ಅಂತರ್ಮುಖಿಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ ೧–೧೨
೨. ಆತ್ಮಸಂಶೋಧನ (ದಿ. ಮ.ಧ.ರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ) ೧–೨೫
೩. ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ) ೧–೨೫
೪. ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು) ೧–೪೦
೫. ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ) ೧–೮೦
೬. ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿವೊಳಿಕೆ) ೦–೮೦
೭. ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ) ೧–೭೫
೮. ಮುಗಿಲ ಜೇನು (ಮಿಂಚಿನ ಶಲಾಕೆಯಂಥ ಕವನ ಸಂಕಲನ) ೧–೮೦
೯. ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು) ೧–೪೦
೧೦. ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ) ೧–೦೦
೧೧. ಬೆಟ್ಟದ ಹೊಳೆ (ಜೀವನ ಪ್ರಚೋದಕವಾದ ಕಾದಂಬರಿ) ೧–೪೦
೧೨. ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ) ೧–೪೦
೧೩. ಬಾಳಬಟ್ಟೆ (ಆಧುನಿಕ ಬಾಳಿನ ಬಂಡಾಟಕ್ಕೆ ಚಿಕಿತ್ಸೆ) ೧–೮೦
೧೪. ಪೂಜಾ (ಅತೀಂದ್ರಿಯ ಜಾಗ್ರತಿಯ ಮಿಸುಕು) ೦–೧೨
೧೫. ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ) ೧–೨೫
೧೬. ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ) ೧–೦೦

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆ ನಾವೇ ವಹಿಸುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿಜಾ

ಶ್ರೀ ಜಿ. ಎ. ಬಸವರಾಜ ಅವರ

ಬಯಲಿನುಡಿಯಲ್ಲಿ

ಬೆಲೆ : ೬೦ ನಯೆ

[ಕಥಾ ಸಂಕಲನ]

- ಕೇವಲ ೨–೮–೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ಬೆಲೆಯ ಕುಸುಮವನ್ನಾಗಿ **ಪಡೆಯಿರಿ.**
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ಸಾಹಿತ್ಯದ ಕೃತಿಗಳು ೪೦೦ ಪುಟಗಳಲ್ಲಿ.
- ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ¾ ಬೆಲೆಯಲ್ಲಿ ಕೊಡಲಾಗುವದು. (**ಅಂಚೆ ಬೇರೆ**)
- ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. **ಕೂಡಲೇ** ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಯ ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ವಿನಿಯೋಗಿಸಲಾಗಿದೆ.
- ★ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೩೦೦ **ಜನ ಶ್ರೇಷ್ಠ** ಸಾಹಿ ವಿವಿಧ ಕೃತಿ ಪರಿಚಯಗಳನ್ನೊಳಗೊಂಡ 'ಆಣೆಕಲ್ಲು' 'ಪುಟಚೆಂಡು' ಕಥೆ, ಕವನಗಳ ಪುಸ್ತಕಗಳು ನಿಮ್ಮಲ್ಲಿವೆ ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ. ಚಂದಾದಾರರಿಗೆ ಮಾತ್ರ ¾ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣೆಯ

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

Printed by Shri S. F. Kattimani, at Manohar Power Printing Press, Hubli. Edited
Published by Sjts. S. P. Patil, B. M. Shintri, S. R. Tatti & Smt. P. A. Bhaskar, at the Kann
Jeevan Shikshan Office, Govt. Training College for M

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ.

15/1/5



15/1/5

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಮಾನೋತ್ಸವದ

[illegible] ಸಂಚಿಕೆ

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್,
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡದ

ಗ್ರಾಹಕರ ಸಹಕಾರಿ ಸಂಘ, ಲಿ., ಧಾರವಾಡ

ನಮ್ಮಲ್ಲಿ ಶಾಲಿ-ಕಾಲೇಜುಗಳಿಗೆ ಉಪಯುಕ್ತವಾದ ಪಠ್ಯ ಪುಸ್ತಕಗಳು, ಪಾಠದ ಟಿಪ್ಪಣೆಗಳು, ಎಕ್ಸರಸಾಯಿಜ ಬುಕ್ ಮತ್ತು ಸ್ಟೇಶನರಿ ಇತ್ಯಾದಿ ಸಾಮಾನುಗಳು **ಯೋಗ್ಯ ಬೆಲೆಗೆ** ದೊರೆಯುತ್ತವೆ.

(೧) ಸಿ. ಎಸ್. ಪೂಜಾರ (೨) ಎಸ್. ಜಿ. ಸಾಣಿಗೇರ
(೩) ಎಮ್. ಸಿ ತಂಬದ
ಗೌರವ ಕಾರ್ಯದರ್ಶಿಗಳು

ಎಸ್. ಪಿ. ಪಾಟೀಲ
ಅಧ್ಯಕ್ಷ

ಶತಾಬ್ದಿ ಸಮಾರಂಭವನ್ನು ಉದ್ಘಾಟಿಸಿದ

ಪರಮಪೂಜ್ಯ ಶ್ರೀ. ಮ. ನಿ. ಪ್ರ. ಸ್ವ. ಮಹಾಶಿವಯೋಗಿಗಳು

ಬಂಥನಾಳ.

ಕಾಲೇಜದ ಬೆಳೆಗಳು



[illegible]— ಎಮ್. ಸಿ. ತಂಬದ

15/1/58

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ

ಶತಾಬ್ದಿ ಸಮಾರಂಭದ

ಸ್ಮಾರಕ ಸಂಪುಟ

ಗಂ.ಸ.ಟ್ರೇನಿಂಗ ಕಾಲೇಜ. ಧಾರವಾಡ
ಶತಾಬ್ದಿ ಸಮಾರಂಭ.
೧೯೫೭

ಬೆಲೆ : ೧ ರೂ. ೫೦ ನ. ಪೈಸೆ

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! **ಸಚಿತ್ರ ಗ್ರಂಥ !!** **ಸುಂದರ ಮುದ್ರ**

“ ಶಿಕ್ಷಣ-ಶಿಕ್ಷಕ-ದರ್ಶನ”

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು **ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ** ಮಾನ್ಯ **ಮಂತ್ರಿವರ್ಯರಿಂದ, ರಾಜ್ಯಪಾಲ** **ಶಿಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ,** ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾ **ವಿಶ್ವವಿದ್ಯಾಲಯದ ಉಪ ಕುಲಪತಿಗಳಾದ** ರ‍್ಯಾಂಗ್ಲರ್ **ಶ್ರೀ** ಡಿ. ಸಿ. **ಪಾವಟೆಯವರು ಮುನ್ನುಡಿ** ಬರೆದ **ಅಮೋಘ** ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷ ಬಣ್ಣ ಬಣ್ಣಗಳಲ್ಲಿ ೪೧ **ಫೋಟೋ ಬ್ಲಾಕ್,** ಲೇಖನ, ಪರಿಚಯಗಳುಳ್ಳಂಥ ೪೭೫ **ಪುಟಗಳ ಅಮರ** ಸಾಹಿತ್ಯ! **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ** ಶೈಕ್ಷಣಿಕ ಗ್ರಂಥ.

ದಿ. ೧೫ ಆಗಸ್ಟ ೫೬ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅ ಯಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ

ವಿವರಗಳಿಗೆ ಇಂದೇ ಈಗಲೇ ಬರೆಯಿರಿ ಪ್ರೋತ್ಸಾಹನೆ ಕೊಡಿರಿ.

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಶನ್. **[ಸುಂದರ ಪ್ರತಿ ೪**

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ:— ವಿಜಾಪುರ.

ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರನಾಥ ಜೋಶಿ** ಅವರು. ತನ್ನ ಅನುಭವದಿಂದ ಅಲ್ಲಲ್ಲಿ **ಕನ್ನಡ** ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಇದರಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಭಾಷಾಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಹಿಂದೀಯನ್ನು ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ **ವ್ಹಿ. ಕೆ. ಗೋಕಾಕ** ಅವರು ಸ್ವಾಗತಿಸಿದ್ದಾರೆ. ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಒಂದುನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

ಜೀವನ ಶಿಕ್ಷಣ

ಸಂಪುಟ ೯೩ **ಸಂಚಿಕೆ ೬ ರಿಂದ ೮**

೧೯೫೭ **ನವಂಬರ–ಡಿಶಂಬರ–ಜನೆವರಿ** ೧೯೫೮

— ಪರಿವಿಡಿ —

ಅ.ನಂ.	ವಿಷಯ	ಲೇಖಕರು	ಪುಟ
೧	ಮಹನೀಯರಿಂದ ಬಂದ ಸಂದೇಶಗಳು ...	—	೧— ೩
೨	ಸಂಪಾದಕೀಯ ...	—	೪— ೮
೩	ಧಾರವಾಡ ಗ. ಮ. ಸರಕಾರಿ ಟ್ರೇನಿಂಗ ಕಾಲೇಜಿನ ಸಂಕ್ಷಿಪ್ತ ಇತಿಹಾಸ ...	ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ. ಧಾರವಾಡ	೯—೨೦
೪	ನಮ್ಮ ಮಾಸಿಕವು ...	ಶ್ರೀ ಶಿಂತ್ರಿ ಬಸಪ್ಪನವರು, ಬಿ.ಎ., ಬಿ.ಟಿ.	೨೦—೨೪
೫	ಲಿಂಗೈಕ್ಯ ಡೆಪ್ಯೂಟಿ ಚೆನ್ನಬಸವಪ್ಪನವರು ...	ಶ್ರೀ ಶಿಂತ್ರಿ ಬಸಪ್ಪನವರು, ಬಿ.ಎ., ಬಿ.ಟಿ.	೨೪—೨೮
೬	ವಿಲಿಯಮ್ ಅಲೆನ್ ರಸೆಲ್ ...	ಡಾ. ಆರ್. ಸಿ. ಹಿರೇಮಠ, ಎಂ.ಎ., ಪಿಎಚ್.ಡಿ.	೨೮—೩೧
೭	ಪ್ರಿನ್ಸಿಪಾಲ್ ಹುಯಿಲಗೋಳ ಭುಜಂಗರಾಯರು ...	ಪ್ರಿನ್ಸಿಪಾಲ ಆರ್. ವಾಯ್. ಧಾರವಾಡಕರ	೩೨—೩೪
೮	ಆಚಾರ್ಯ ವೆಂಕಟ ರಂಗೋ ಕಟ್ಟಿ ...	ಶ್ರೀ ಗುರುನಾಥ ಜೋಶಿ, ಧಾರವಾಡ	೩೫—೩೭
೯	ಕೀರ್ತಿಶಾಲಿಗಳಾದ ದಿವಾಣ ಬಹಾದ್ದೂರ ಶ್ರೀ ರೊದ್ದ ಶ್ರೀನಿವಾಸರಾಯರ ಸಂಕ್ಷಿಪ್ತ ಚರಿತ್ರೆ ...	ಶ್ರೀ ತಟ್ಟಿ ಶಾಮರಾಯರು, ಪ್ರಿನ್ಸಿಪಾಲ ಪ್ರಾ. ಶಿ. ಟ್ರೇ. ಕಾಲೇಜ, ನವಿಲುಗುಂದ	೩೭—೪೨
೧೦	ಪ್ರಿನ್ಸಿಪಾಲ ವಿನಾಯಕರಾವ ಜೋಶಿ ...	ಶ್ರೀ ಶಂ. ಪಿ. ಜೋಶಿ, ಧಾರವಾಡ	೪೨—೪೪
೧೧	ಅದ್ಭುತ ಸಾಹಸಿ ಶ್ರೀ ವೆಂಕಣ್ಣ ನಾಯಕರು ...	ಶ್ರೀ ಸ. ಪ. ಗಾಂವಕಾರ, ರಿಟಾಯರ್ಡ ಎ. ಓ. ಅಂಕೋಲೆ	೪೪—೫೧
೧೨	ಜೀವನ ಶಿಕ್ಷಣ ಪ್ರಸಾರದಲ್ಲಿ ಈ ಸಂಸ್ಥೆಯ ಪಾತ್ರ ...	ಶ್ರೀ ಕೆ. ಬಿ. ತೇರಗಾಂವಕರ, ಬಿ.ಎಸ್ಸಿ., ಬಿ.ಟಿ. ಪ್ರಿನ್ಸಿಪಾಲ, ಜಿ.ಬಿ.ಟಿ.ಸಿ. ಧಾರವಾಡ	೫೧—೫೬
೧೩	ಕಂಪ ಪದ್ಯಗಳು (ಕವನ) ...	ಶ್ರೀ ಸಿ. ನಾ. ಮಹಾಂತಣ್ಣವರ, ನಿವೃತ್ತ ಅ. ಡೆ. ವಿಜಾಪುರ	೫೬
೧೪	ಸರಕಾರಿ ಕನ್ನಡ ಗ. ಮ. ಮಹಾವಿದ್ಯಾಲಯದ ಶತಾಬ್ದಿ ಸಮಾರಂಭ ...	ಶ್ರೀ ಸಿ. ಎಚ್. ಜೇವೂರ, ಡೆಪ್ಯೂಟಿ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಧಾರವಾಡ ವಿಭಾಗ	೫೭—೬೦
೧೫	ಶಾಂತವೀರ ರಾಚದೇವ ಕಿತ್ತೂರ ...	ಶ್ರೀ ವೀರಭದ್ರಪ್ಪ ಕೊಪ್ಪಳ, ಎಂ.ಎ., ಬಿ.ಟಿ. ಧಾರವಾಡ	೬೦—೬೪
೧೬	ಟ್ರೇನಿಂಗ ಕಾಲೇಜದ ನೆನಹು ...	ಶ್ರೀ ಸಿ. ನಾ. ಮಹಾಂತಣ್ಣವರ ಅ. ಡೆ. ಎ. ಇನ್ಸಪೆಕ್ಟರ, ವಿಜಾಪುರ	೬೫—೬೭
೧೭	ಸೊಗವಾಗೆ ಗುರುಗಳ್ಗೆ, ಅಂದೇ ಭಾವಕಪೇಳ್ಗೆ! (ಕವನ) ...	ಶ್ರೀ ಪಂಡಿತ ಕವಲಿ	೬೭
೧೮	ನಾನು ಕಂಡ ಧಾರವಾಡ ಕನ್ನಡ ಟ್ರೇನಿಂಗ ಕಾಲೇಜು ...	ಡಾ. ಬಿ. ಎಸ್. ಗದ್ದಗಿಮಠ, ಎಂ.ಎ., ಪಿಎಚ್.ಡಿ.	೬೮—೬೯

ಅ.ನಂ.	ವಿಷಯ	ಲೇಖಕರು	ಪುಟ
೧೯	ನಮ್ಮ ಪ್ರಾಥಮಿಕ ಅಧ್ಯಾಪನ ಮಹಾವಿದ್ಯಾಲಯದ ದೀರ್ಘಸೇವೆ ...	ಶ್ರೀ ವೀ. ಬ. ಭದ್ರಣ್ಣವರ	೭೦—೭೧
೨೦	ನಮ್ಮ ವಿದ್ಯಾಮಂದಿರ (ಕವನ) ...	ಶ್ರೀ ಎಸ್. ಡಿ. ಇಂಚಲ, ಬಿ.ಎ.,ಬಿ.ಟಿ.ಬೆಳಗಾವಿ	೭೨
೨೧	ಮರೆಯಲಾಗದ ಮಹಾದಿನ ...	ಶ್ರೀ ಬಾ. ವಿ. ಭಾಂವಿಹಾಳ, ಬಯಲುವಾಡ	೭೩—೭೪
೨೨	ನನ್ನ ಟ್ರೇನಿಂಗ ಕಾಲೇಜದ ಅನುಭವಗಳು ...	ಶ್ರೀ ಮಿರ್ಜಿ ಅಣ್ಣಾರಾಯರು, ಶೇಡಬಾಳ	೭೪—೭೬
೨೩	ಟ್ರೇನಿಂಗ ಕಾಲೇಜದ ಸವಿನೆನಹುಗಳು ...	ಶ್ರೀ ಎನ್. ವ್ಹಿ. ಕುರಡಿ, ಧಾರವಾಡ	೭೬—೮೨
೨೪	ಧಾರವಾಡ ಗ. ಮ. ಸರಕಾರಿ ಟ್ರೇ. ಕಾಲೇಜದ ಬಗೆಗೆ (ಕವನ) ...	ಶ್ರೀ ವಿ. ನೆ. ತೊರ್ಕೆ, ಕುಮಟಾ	೮೨
೨೫	ನೂರು ವರುಷದ ತರುಣ ಸಂಸ್ಥೆ ...	ಶ್ರೀ ಸಿಂಪಿ ಲಿಂಗಣ್ಣ, ಚಡಚಣ	೮೩—೮೫
೨೬	ಧಾರವಾಡ ಗ. ಮ. ಟ್ರೇ. ಕಾಲೇಜದ ಕೆಲವು ಸವಿನೆನಪುಗಳು ...	ಶ್ರೀ ಆರ್. ಕೆ. ನಾಯಕ, ರಿಟಾಯರ್ಡ ಎ. ಓ. ಅಂಕೋಲಾ	೮೫—೮೬
೨೭	ನಾಡ ನಂದಾದೀಪ ಬೆಳಗುತಿದೆ (ಕವನ) ...	ಶ್ರೀ ಗುರುಲಿಂಗ ಕಾಪಸೆ, ಜಮಖಂಡಿ	೮೬
೨೮	ಸ್ಮೃತಿ ಸುಮನೋಂಜಲಿ ...	ಶ್ರೀ ಜಿ. ಕೆ. ಕೊಪ್ಪೀಕರ, ಬಿ.ಎ.(ಆನರ್ಸ್),ಬಿ.ಎಸ್‌ಸಿ.,ಎಮ್.ಇಡಿ. ಎಜ್ಯುಕೇಶನಲ್ ಇನ್ಸಪೆಕ್ಟರ, ಧಾರವಾಡ	೮೮—೯೦
೨೯	ವಿದ್ಯಾ ಜನನಿ (ಕವನ) ...	ಶ್ರೀ ಸ. ಜ. ಗಾಂವಕಾರ	೯೦
೩೦	ಧಾರವಾಡದ ಸವಿನೆನಪುಗಳು ...	ಶ್ರೀ ಮ. ರಾಮಸುಬ್ರಹ್ಮ್ಯ, ಬಿ.ಎ.,ಎಲ್.ಟಿ. ನಿವೃತ್ತ ಇನ್ಸಪೆಕ್ಟರ	೯೧—೯೨
೩೧	ಕಾಲೇಜದ ನನ್ನ ದಿನಚರಿ ...	ಶ್ರೀ ಪಿ. ಜಿ. ಹಿರೇಕೆಂಚನಗೌಡರ - ೨ನೇ ವರುಷದ ಶಿಕ್ಷಕ ವಿದ್ಯಾರ್ಥಿ	೯೨—೯೪
೩೨	ಟ್ರೇನಿಂಗ ಕಾಲೇಜದ ಬಗ್ಗೆ ಮಾತೃಭಾವನೆ ...	ಶ್ರೀ ಪಂಡಿತ ಕೇಶವ ಶರ್ಮಾ ಗಲಗಲಿ	೯೪—೯೬
೩೩	ಬರೆಹಗಾರಿಕೆಯ ಬೀಜಾರೋಪಣ ...	ಶ್ರೀ ಪಂಡಿತ ಪಿ. ಎ. ಕವಲಿ, ಧಾರವಾಡ	೯೬—೧೦೦

— ತಿದ್ದುಪಡೆ —

ಪುಟ ೧೭ ಕಾಲಂ ಒಂದು ಸಾಲು ೧೩ರಲ್ಲಿ
ಒಂದನೆಯ ವರುಷದ ವರ್ಗಗಳನ್ನು ಹೀಗಿರುವದನ್ನು
೨ನೆಯ ಹಾಗು ೩ನೆಯ ವರುಷದ ವರ್ಗಗಳನ್ನು ಎಂದು ತಿದ್ದಿ ಓದಿಕೊಳ್ಳಬೇಕು.

ಶತಾಬ್ಧಿ ಸಮಾರಂಭದ ಅಧ್ಯಕ್ಷತೆವಹಿಸಿದ

ರ್ಯಾಂಗ್ಲರ್ ಡಿ. ಸಿ. ಪಾವಟೆಯವರು, ಎಮ್.ಎ. (ಕೇಂಬ್ರಿಜ)



ಜೀವನ ಶಿಕ್ಷಣದ ಸಮ್ಮೇಳನದ ಅಧ್ಯಕ್ಷತೆ
ವಹಿಸಿದ
ಶ್ರೀ ಹುಕ್ಕೇರಿಕರ ರಾಮರಾಯರು



ತೈಲಚಿತ್ರಗಳ ಅನಾವರಣದ
ಮುಖ್ಯ ಅತಿಥಿಗಳಾದ
ಶ್ರೀ ಆಲೂರ ವೆಂಕಟರಾಯರು

ಸ್ಮಾರಕ ಸಂಪುಟದ ಪ್ರಕಟನೆಯ ಮುಖ್ಯ
ಅತಿಥಿಗಳಾದ ಆಸ್ಥಾನ ವಿದ್ವಾನ ಪಂಡಿತರತ್ನ
ಬಿ. ಶಿವಮೂರ್ತಿ ಶಾಸ್ತ್ರಿಗಳು

ಸಂದೇಶಗಳು

MINISTER FOR HEALTH
INDIA
NEW DELHI

ದಿನಾಂಕ ೧೯ನೇ ನವೆಂಬರ, ೧೯೫೭

ಇದೇ ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ ಧಾರವಾಡ ಕನ್ನಡ ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜದ ಶತಾಬ್ದಿ ಸಮಾರಂಭವು ಜರುಗಲಿದೆಯೆಂದು ಕೇಳಿ ಅತಿ ಸಂತೋಷವಾಗಿದೆ. ಪ್ರಾಥಮಿಕ ಶಿಕ್ಷಣದ ಕ್ಷೇತ್ರದಲ್ಲಿ ಈ ಸಂಸ್ಥೆಯು ಸಲ್ಲಿಸಿದ ಸೇವೆಯು ಸಂಸ್ಮರಣೀಯವಿದೆ. ಎಳೆ ಮಕ್ಕಳ ಶಿಕ್ಷಣದ ಅಭ್ಯುದಯಕ್ಕಾಗಿ ಮೀಸಲ್ಪಟ್ಟ ಈ ಸರಕಾರೀ ಟ್ರೇನಿಂಗ ಕಾಲೇಜು ಕಳೆದ ಒಂದು ಶತಮಾನದಲ್ಲಿ ಉಜ್ವಲ ಪ್ರಗತಿಯನ್ನು ಸಾಧಿಸಿದ ಸಂಗತಿಯು ಅಭಿಮಾನಾಸ್ಪದವಾಗಿದೆ. ಇಂಥ ಶುಭ ಪ್ರಸಂಗದಲ್ಲಿ ಧಾರವಾಡ ಕನ್ನಡ ಗಂಡು ಮಕ್ಕಳ ಸರಕಾರೀ ಟ್ರೇನಿಂಗ ಕಾಲೇಜು ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದು ಹಾರೈಸಲು ನನಗೆ ತುಂಬಾ ಹರ್ಷವೆನಿಸುತ್ತದೆ.

(ದ. ಪ. ಕರಮರಕರ)

ಕಂದಾಯ ಮಂತ್ರಿಗಳು, ಮೈಸೂರು ಸರಕಾರ
ಬೆಂಗಳೂರು,

೭—೧೧—೧೯೫೭

ಶ್ರೀ ಶಿಂತ್ರಿ ಅವರಿಗೆ,

ನಿಮ್ಮ ದಿನಾಂಕ ೮ರ ಪತ್ರ ತಲುಪಿತು.

ಧಾರವಾಡ ಕನ್ನಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನ ಶತಾಬ್ದಿ ಸಮಾರಂಭವನ್ನು ತಾವು ಜರುಗಿಸಲಿರುವದನ್ನು ತಿಳಿದು ತುಂಬಾ ಸಂತೋಷವಾಯಿತು. ತಾವು ಮಾಡುತ್ತಿರುವ ಕಾರ್ಯ ಅತ್ಯಂತ ಶ್ಲಾಘನೀಯವಾಗಿದೆ.

ಧಾರವಾಡದ ಟ್ರೇನಿಂಗ ಕಾಲೇಜು ಉತ್ತರ ಕರ್ನಾಟಕದ ಶೈಕ್ಷಣಿಕ ಅಭಿವೃದ್ಧಿಯ ಹಾಗು ಕನ್ನಡದ ಉನ್ನತಿಯ ಕೇಂದ್ರ ಸ್ಥಾನವಾಗಿ ಮಹತ್ತರ ಸೇವೆ ಸಲ್ಲಿಸಿದೆ. ಅಲ್ಲದೆ ಕನ್ನಡಕ್ಕಾಗಿ ದುಡಿದ ಹಲವಾರು ಧುರೀಣರನ್ನೂ ಈ ಸಂಸ್ಥೆಯು ಒದಗಿಸಿದೆ. ನೂರು ವರುಷಗಳಿಂದ ಉತ್ತರ ಕರ್ನಾಟಕದ ಸೇವೆಗೈಯುತ್ತಿರುವ ಈ ಸಂಸ್ಥೆಯನ್ನು, ಶತಾಬ್ದಿ ಸಮಾರಂಭದ ಮೂಲಕ ಗೌರವಿಸುತ್ತಿರುವದು ಯಥಾಯೋಗ್ಯವಾಗಿದೆ.

ಶತಾಬ್ದಿ ಸಮಾರಂಭ ವಿಜೃಂಭಣೆಯಿಂದ ಸಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ನಿಮ್ಮ
M. P. Patil
[ಮಲ್ಲನಗೌಡ ಪಾಟೀಲ]

ಬೆಂಗಳೂರು-೧
೧೬—೧೧—೫೭

ಆರ್. ಎಂ. ಪಾಟೀಲ, ಬಿ. ಎ., ಎಲ್‌ಎಲ್. ಬಿ.,
ಆರೋಗ್ಯ ಶಾಖೆಯ ಮಂತ್ರಿ, ಮೈಸೂರು ರಾಜ್ಯ.

ಧಾರವಾಡ ಕನ್ನಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಾಬ್ದಿಜೋತ್ಸವವನ್ನು ಇದೇ ಡಿಸೆಂಬರ ತಿಂಗಳಲ್ಲಿ ಜರುಗಿಸಲಾಗುವುದೆಂದು ಹಾಗೂ ಆ ಶುಭ ಪ್ರಸಂಗದಲ್ಲಿ ಸಮಾರಂಭದ ಅಂಗವಾಗಿ ಸ್ಮಾರಕ ಸಂಪುಟವನ್ನು ಪ್ರಸಿದ್ಧಿಸಲಾಗುವುದೆಂದೂ ತಿಳಿದು ನನಗೆ ಬಹಳ ಸಂತೋಷವಾಗಿದೆ.

ಈ ಸಂಸ್ಥೆಯು ಈ ವರೆಗೆ ಸ್ತುತ್ಯವಾದ ಕರ್ತವ್ಯ ದಕ್ಷತೆಯಿಂದ ಶಿಕ್ಷಣ ರಂಗದಲ್ಲಿ ಸೇವೆಸಲ್ಲಿಸುತ್ತ ಬಂದಿರುವುದೆಂಬುದಕ್ಕೆ ದೊಡ್ಡ ನಿದರ್ಶನ. ಸೇವಾಭಾವದಿಂದ ಪ್ರೇರಿತವಾದ ಈ ಕಾಲೇಜಿಗೆ, ಶಿಕ್ಷಣ ಕ್ಷೇತ್ರದಲ್ಲಿಯೂ, ತನ್ಮೂಲಕ ದೇಶಕ್ಕೂ, ಇನ್ನೂ ಹೆಚ್ಚಾಗಿ ಸೇವೆಸಲ್ಲಿಸುವ ಶಕ್ತಿಯನ್ನು ಅನುಗ್ರಹಿಸಲೆಂದು ದಯಾಘನನಾದ ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ.

R. M. Patil

ಉತ್ತರ ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಧಾರವಾಡದ ಗಂಡು ಮಕ್ಕಳ ಸರಕಾರೀ ಟ್ರೇನಿಂ ಕಾಲೇಜು ಬಹು ಮಹತ್ವದ ಪಾತ್ರವನ್ನಾಡಿದೆ. ಸುಮಾರು ಒಂದು ಒಂದೂವರೆ ಶತಮಾನದ ಹಿಂದೆ ಉತ್ತರ ಕರ್ನಾ ಕದ ಈ ಭಾಗದಲ್ಲಿ ಮರಾಠಿಯ ಪ್ರಭಾವ ವಿಶೇಷವಾಗಿದ್ದಿತು. ಕೋರ್ಟು ಕಚೇರಿಗಳ ಭಾಷೆ ಮರಾಠಿ. ಸರಕಾ ನೌಕರರು ವಿಶೇಷವಾಗಿ ಮಹಾರಾಷ್ಟ್ರದಿಂದ ಬಂದುದರಿಂದ ಮರಾಠಿಯನ್ನೇ ಮಾತನಾಡುತ್ತಿದ್ದರೆ ಆದುದರಿಂದ ಕಾಲದ ಬ್ರಿಟಿಷ್ ಅಧಿಕಾರಿಗಳಿಗೆ ಇದು ಕನ್ನಡದ ಭಾಗ; ಇಲ್ಲಿಯ ಜನರ ಮಾತೃಭಾಷೆ ಕನ್ನಡ ಎಂಬ ಕಲ್ಪನೆ ಬಾರ ಮರಾಠಿಯೇ ಇಲ್ಲಿಯ ಭಾಷೆಯೆಂದು ಭ್ರಮಿಸಿ ಈ ಭಾಗವನ್ನು ದಕ್ಷಿಣ ಮಹಾರಾಷ್ಟ್ರವೆಂದು ಕರೆದು ಮರಾಠಿ ಭಾಷೆ ಮುಖ್ಯ ಸ್ಥಾನವನ್ನು ಕೊಟ್ಟಿದ್ದರು. ಕನ್ನಡಿಗರ ಸುದೈವದಿಂದ,ರಸೆಲ್‌ರವರ ನಿಷ್ಪಕ್ಷಪಾತ ದೃಷ್ಟಿ, ಡೆಪ್ಯೂಟಿ ಚೆನ್ನಬಸ ನವರ ಕನ್ನಡದ ಅಭಿಮಾನ ಇವು ಒಂದುಗೂಡಿ ಕನ್ನಡದ ನಂದಾದೀವಿಗೆ ಮತ್ತೆ ಬೆಳಗುವಂತಾಯಿತು. ಧಾರವಾ ಬೆಳಗಾವ ಜಿಲ್ಹೆಗಳಲ್ಲಿ ಕನ್ನಡ ಶಾಲೆಗಳನ್ನು ಭರದಿಂದ ಪ್ರಾರಂಭಿಸಲಾಯಿತು. ತರಬೇತು ಹೊಂದಿದ ಶಿಕ್ಷಕರ ಆವ ಕತೆಯೆನಿಸಿ ಅದನ್ನು ಪೂರೈಸಲು ಈ ಟ್ರೇನಿಂಗ ಕಾಲೇಜು ಆರಂಭವಾಯಿತು. ಮೇಧಾವಿಗಳೂ, ಕರ್ತೃತ್ವಶಾಲಿಗಳ ಆಡಳಿತೆಯಲ್ಲಿ ನಿಪುಣರೂ ಆದ ಡೆಪ್ಯುಟಿ ಚೆನ್ನಬಸಪ್ಪನವರು ಈ ಸಂಸ್ಥೆಗೆ ಪ್ರಪ್ರಥಮ ಪ್ರಿನ್ಸಿಪಾಲರಾಗಿ ಬಂ ಅದಕ್ಕೆ ಒಳ್ಳೇ ಪರಂಪರೆಯನ್ನೂ ಹಾದಿಯನ್ನೂ ಹಾಕಿಕೊಟ್ಟರು. ಅಂದಿನಿಂದ ಒಂದು ನೂರು ವರ್ಷಗಳ ವರೆ ಈ ಕಾಲೇಜಿನಿಂದ ಕನ್ನಡದ ಅಭಿವೃದ್ಧಿಗೆ ನಾನಾಮುಖವಾದ ಸೇವೆಸಲ್ಲುತ್ತ ಬಂದಿದೆ; ಗಂಗಾಧರ ಮಡಿವಾಳೇಶ್ವ ತುರಮರಿ, ಶಾಂತವೀರ ರಾಚಿದೇವ ಕಿತ್ತೂರರಂತಹ ಶ್ರೇಷ್ಠ ಪ್ರತಿಯ ಕನ್ನಡ ಪಂಡಿತರ ಸಂಬಂಧ ಈ ಸಂಸ್ಥೆಗಿ ಲಕ್ಷಾವಧಿ ಶಿಕ್ಷಕರು ಇಲ್ಲಿ ಶಿಕ್ಷಣ ಪಡೆದು ನಾಡಿನ ಮೂಲೆ ಮೂಲೆಗಳಲ್ಲಿ ನೆಲೆಸಿ ತಮ್ಮ ಶಕ್ತ್ಯಾನುಸಾರ ನಾಡುನಾ ಗಳಿಗೆ ಸೇವೆ ಸಲ್ಲಿಸುತ್ತಿರುವರು.

ಇಂತಹ ಸಂಸ್ಥೆಯ ಶತಮಾನೋತ್ಸವವು ನೆರವೇರುತ್ತಿರುವದು ಉತ್ತರ ಕರ್ನಾಟಕದ ಜನತೆಗೆ ಒ ಅಭಿಮಾನದ ಸಂಗತಿ.

ಈ ಕಾಲೇಜು ಇತೋಪ್ಯತಿಶಯವಾಗಿ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇನೆ.

ಶಿ. ಚ. ನಂದಿಮಠ

ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜು ಉತ್ತರ ಕರ್ನಾಟಕದ ಸಾಂಸ್ಕೃತಿಕ ಜೀವನದಲ್ಲಿ ಂದು ವಿಶಿಷ್ಟ ವರ್ಚಸ್ಸನ್ನು ಬೀರಿದೆ. ಉಚ್ಚ ಶಿಕ್ಷಣದ ಕಾಲೇಜುಗಳು ಈ ಭಾಗದಲ್ಲಿ ಇಲ್ಲದಾಗ, ಇದ್ದ ಮಾಧ್ಯಮಿಕ ಾಲೆಗಳಲ್ಲಿ ಕನ್ನಡಕ್ಕೆ ಅಂತಹ ಸ್ಥಾನವಿಲ್ಲದಾಗ ಟ್ರೇನಿಂಗ ಕಾಲೇಜಿನ ಶಿಕ್ಷಕರೂ ವಿದ್ಯಾರ್ಥಿಗಳೂ ಕನ್ನಡದ ಪರಂಪರೆ ಯನ್ನು ಕಾಯ್ದುಕೊಂಡು ಬಂದರು. ಇಲ್ಲದಿದ್ದರೆ ಕನ್ನಡದ ಪುನರುಜ್ಜೀವನಕ್ಕೆ ಹೆಚ್ಚಿನಕಾಲ ಹಿಡಿಯಬಹುದಾಗಿತ್ತು. ರ್ವಶ್ರೀ ಗಳಗನಾಥ, ತುರಮರಿ, ಶಾಂತಕವಿ, ಮ. ಪ., ಪೂಜಾರ, ಶಂ. ಬಾ. ಜೋಶಿ ಇವರೇ ಮೊದಲಾದ ಲೇಖಕರ ೃತಿಗಳು ಈ ಪರಂಪರೆಗೆ ಸಾಕ್ಷಿಯಾಗಿವೆ.

ಟ್ರೇನಿಂಗ್ ಕಾಲೇಜಿನ ಕಟ್ಟಡದಲ್ಲಿಯೇ ಕರ್ನಾಟಕ ಕಾಲೇಜು-ಉತ್ತರ ಕರ್ನಾಟಕದ ಪ್ರಥಮ ಉಚ್ಚ ಕ್ಷಣದ ಸಂಸ್ಥೆ, ಪ್ರಾರಂಭವಾಯಿತು. ಅಲ್ಲಿಯೇ ಕರ್ನಾಟಕ ವಿಶ್ವವಿದ್ಯಾನಿಲಯವೂ ಸಹ ಮೊದಲು ತಲೆಯೆತ್ತಿತು.

ಹೀಗೆ ಟ್ರೇನಿಂಗ್ ಕಾಲೇಜಿನ ' ಇತಿಹಾಸ-ಭೂಗೋಲ 'ಗಳಲ್ಲಿ ಉತ್ತರ ಕರ್ನಾಟಕದ ಸಂಸ್ಕೃತಿಯು ಬೀಜ ರೂಪವಾಗಿ ಕಾಣಿಸಿಕೊಂಡು ಇಂದು ಮಹಾ ವೃಕ್ಷವಾಗಿ ಬೆಳೆದಿದೆ.

ಈ ಸಂಸ್ಥೆಯ ಶತಾಬ್ದಿಪೂರಕ ಸಮಾರಂಭದ ಸಮಯದಲ್ಲಿ ಕನ್ನಡಿಗರೆಲ್ಲರೂ ಅದರ ಇತಿಹಾಸವನ್ನು ಕೃತಜ್ಞತಾ ಪೂರ್ವಕವಾಗಿ ನೆನೆಯದಿರಲಾರರು.

ಧಾರವಾಡ
೩-೧೨-೫೭

ವಿ. ಕೃ. ಗೋಕಾಕ

ಪ್ರೀಯ ಪಾಟೀಲರೆ,

ನಿಮ್ಮ ಕಾಲೇಜದ ಶತಾಬ್ದಿ ಸಮಾರಂಭವು ಇದೇ ತಿಂಗಳ ನೆರವೇರುವದೆಂದು ತಿಳಿದು ಅತ್ಯಾನಂದ ವಾಯಿತು. ಈ ಸಮಾರಂಭದ ಅಂಗವಾಗಿ ದಿವಂಗತ ಡೆ. ಚನ್ನಬಸಪ್ಪನವರ, ದಿವಾನ ಬಹಾಸ್ದೂರ ರೊದ್ದರಾಯರ ಹಾಗೂ ನಿಮ್ಮ ಸಂಸ್ಥೆಯ ಅದ್ವಿತೀಯ ಹಳೆಯ ವಿದ್ಯಾರ್ಥಿಯಾದ ಶ್ರೀ ವಿ. ಎಚ್. ನಾಯಕರ ತೈಲಚಿತ್ರಗಳ ಅನಾವರಣ, ಜೀವನ ಶಿಕ್ಷಣದ ಸಮ್ಮೇಲನ ಹಾಗೂ ಸ್ಮಾರಕ ಸಂಪುಟದ ಪ್ರಕಟನೆ ಇವೆಲ್ಲ ಕಾರ್ಯಕ್ರಮಗಳನ್ನು ಇಟ್ಟುಕೊಂಡಿರುವದು ನಿಜವಾಗಿಯೂ ಸ್ತುತ್ಯವಾದುದು. ಈ ಬಗ್ಗೆ ನಿಮಗೆ ಹಾರ್ದಿಕ ವಂದನೆಗಳು. ಕಳೆದ ಒಂದು ಶತಮಾನಕಾಲದಲ್ಲಿ ಕನ್ನಡ ನಾಡು ನುಡಿಗಳಿಗೆ ಅಮೋಘವಾದ ಸೇವೆಯನ್ನು ಸಲ್ಲಿಸಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸಿದ ಮಹಾಶ್ರೇಯಸ್ಸು ನಿಮ್ಮ ಕಾಲೇಜಕ್ಕೆ ಯಥೇಚ್ಛವಾಗಿ ಸಲ್ಲುತ್ತದೆ. ಕನ್ನಡ ನಾಡಿನಲ್ಲಿ ಕನ್ನಡತನವು ಅಳಿದು ಹೋಗುವ ಕಾಲದಲ್ಲಿ ನಿಮ್ಮ ಸಂಸ್ಥೆಯು ಜನ್ಮತಾಳಿ ಅದ್ವಿತೀಯ ಸಾಹಸಿಗಳಾದ ದಿವಂಗತ ಡೆ. ಚನ್ನಬಸಪ್ಪನವರು ಆಗಿನ ಇನಸ್ಪೆಕ್ಟರರಾದ ರಸೆಲ್ ಸಾಹೇಬರು ಮುಂತಾದ ಮಹಾನುಭಾವರ ಪರಿಶ್ರಮದಿಂದ ಪೋಷಿಸಲ್ಪಟ್ಟು ಕರ್ನಾಟಕ ಕಾಲೇಜು ಪ್ರಾರಂಭವಾಗುವವರೆಗೆ ಇದೊಂದೇ ಉಚ್ಚ ಶಿಕ್ಷಣ ಸಂಸ್ಥೆಯಾಗಿ ಆಧುನಿಕ ಕನ್ನಡ ಸಾಹಿತ್ಯಕ್ಕೆ ಕನ್ನಡಿಗರ ಜಾಗ್ರತಿಗೆ ಭದ್ರವಾದ ಅಡಿಗಲ್ಲನ್ನು ಹಾಕಿತು. ಆ ಬಗ್ಗೆ ಇತ್ತ ಕಡೆಯ ಕನ್ನಡಿಗರೆಲ್ಲರೂ ನಿಮ್ಮ ಸಂಸ್ಥೆಗೆ ಉಪಕೃತರು. ಈ ತರದ ಮಹದುಪಕಾರವನ್ನು ನೆನೆಯಲು ನೀವು ಕೈಕೊಂಡ ಶತಾಬ್ದಿ ಸಮಾರಂಭವು ಒಳ್ಳೆ ವಿಜೃಂಭಣೆಯಿಂದ ಸಾಗಿ ಎಲ್ಲ ದೃಷ್ಟಿಯಿಂದಲೂ ಯಶಸ್ವಿಯಾಗಲೆಂದು ನಾನು ಹಾರೈಸದಿರೆನು.

ನಿಮ್ಮ
ಚ ಉತಂಗಿ

— ಸಂಪಾದಕೀಯ —

ಶತಾಬ್ದಿ ಸಮಾರಂಭ

ಹಿನ್ನೆಲೆ:– ೧೯೫೮ರ ಮೇ ತಿಂಗಳ ಕೊನೆಗೆ ಈ ಂಸ್ಥೆಯ ಸಂಚಾಲಕತ್ವ ಹಾಗೂ ಈ ಪತ್ರಿಕೆಯ ್ರಧಾನ ಸಂಪಾದಕತ್ವಗಳೆರಡೂ ನಮ್ಮ ಕಡೆಗೆ ಬಂದವು· ದಾದನಂತರ ಕೆಲವು ತಿಂಗಳಲ್ಲಿಯೇ ಶಿಕ್ಷಣ ಖಾತೆಯ ರಿಷ್ಠಾಧಿಕಾರಿಗಳಾದ ಡಾಯರೆಕ್ಟರರಿಂದ ಪರಿಪತ್ರವೊಂದು ಬಂದಿತು. ಅದರ ಪ್ರಕಾರ ಮುಂಬೈ ಸರಕಾರ ವರು ಶಿಕ್ಷಣ ಖಾತೆಯ ಶತಾಬ್ದಿ–ಸ್ಮಾರಕಗ್ರಂಥವೊಂ ನ್ನು ಪ್ರಕಟಿಸುವ ಯೋಜನೆಯನ್ನು ಕೈಕೊಂಡಿದ್ದರು. ಬೇರೆ ಬೇರೆ ಸಂಸ್ಥೆಗಳ ಸಂಚಾಲಕರಿಗೆ ತಿಳಿಸಿ ತಮ್ಮ ಸಂಸ್ಥೆಗಳ ಸಂಕ್ಷಿಪ್ತ ಇತಿಹಾಸವನ್ನೂ ಅಲ್ಲಿ ನಡೆಯುತ್ತಿರುವ ಮುಖ್ಯವಾದ ಚಟುವಟಿಕೆಗಳ ಬಗೆಗೆ ಮಾಹಿತಿಯನ್ನೂ ಮತ್ತು ಆ ಸಂಸ್ಥೆಗಳಲ್ಲಿ ಆಗಿ ಹೋದ ಗಣ್ಯ ವ್ಯಕ್ತಿಗಳ ಚಿತ್ರಗಳನ್ನೂ ಕಳಿಸಲಿಕ್ಕೆ ಕೇಳಿದ್ದರು. ಈ ಕಾರಣದಿಂದ ಈ ಸಂಸ್ಥೆಯ ಹಿಂದಿನ ಕಾಗದಪತ್ರಗಳನ್ನು ಪರಿಶೀಲಿಸುವ ಪ್ರಸಂಗವು ಬಂದೊದಗಿತು. ಆ ಸುಮಾರಕ್ಕೆ ನಮ್ಮ ಶ್ವವಿದ್ಯಾಲಯದ ಉಪಕುಲಪತಿಗಳೂ ಮುಂಬೈ ರಾಜ್ಯದ ಶಿಕ್ಷಣ ಖಾತೆಯ ಹಿಂದಿನ ಡಾರೆಕ್ಟರರೂ ಆದ ರ್‍ಯಾಂಗ್ಲರ್ ಪಾವಟೆಯವರ ಭೆಟ್ಟಿಗೆ ಹೋದಾಗ ಅವರು ಈ ಕಾಲೇಜದ ಉಜ್ವಲವಾದ ಪರಂಪರೆಯ ಮಾತನ್ನೆತ್ತಿ ಒಂದು ಸೂಚನೆಯನ್ನಿತ್ತರು. ಕೈ. ವಾ. ಡೆಪ್ಯೂಟಿ ಚೆನ್ನಬಸಪ್ಪನವರು ಈ ಸಂಸ್ಥೆಯ ಪ್ರಿನ್ಸಿಪಾಲರಾಗಿದ್ದರೆಂಬ ಬಗ್ಗೆ ತಾವು ಡಾರೆಕ್ಟರರಿದ್ದಾಗ ಕೇಳಿದ್ದರೂ ತಮಗೆ ಆ ಬಗೆಗೆ ಅಧಿಕೃತ ಕಾಗದ ಪತ್ರಗಳು ದೊರಕಲಿಲ್ಲವೆಂದೂ ಹೇಳುತ್ತ ಸಾಧ್ಯವಾದರೆ ನಾವು ಆ ಸಂಗತಿಯ ಬಗ್ಗೆ ಹೆಚ್ಚಿನ ವಿವರಗಳನ್ನು ಸಂಗ್ರಹಿಸಿದರೆ ತಮಗೆ ಸಂತೋಷವಾಗುವದೆಂದು ತಿಳಿಸಿದರು. ಶಿಕ್ಷಣ ಖಾತೆಯವರ ಪರಿಪತ್ರದ ಪ್ರಕಾರ ಕಾಲೇಜದ ಇತಿಹಾಸವನ್ನು ತಯಾರಿಸುವದು ಅಗತ್ಯವಾದಾಗ ಉಪಕುಲಪತಿಗಳಿಂದ ಈ ಪ್ರಕಾರ ಸೂಚನೆ ಬಂದಿದ್ದರಿಂದ ಈ ಸಂಸ್ಥೆಯ ಹಿಂದಿನ ಪತ್ರವ್ಯವಹಾರಗಳನ್ನು ಹೆಚ್ಚು ಕೂಲಂಕಷವಾಗಿ ನೋಡುವದು ಅತ್ಯವಶ್ಯವಾಯಿತು. ಇದಕ್ಕನುಕೂಲವಾಗುವಂತೆ ಚಳಿಗಾಲದ ಬಿಡುವೂ ಬಂದಿತು. ಶತಮಾನದ ಹಿಂದಿನ ಕಾಗದ ಪತ್ರಗಳೆಲ್ಲವೂ ಸಿಗಲಿಲ್ಲವಾದರೂ ಉಪಲಬ್ಧವಿರುವ ಕೆಲವನ್ನು ಮತ್ತು ಈ ಮಾಸ ಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ನೋಡುತ್ತ ಹೋದಂತೆ ಈ ಸಂಸ್ಥೆಯ ಹಿರಿಮೆಯ ನೈಜವಾದ ಕಲ್ಪನೆಯಾಗಹತ್ತಿತು.

ಈ ಭಾಗದ ಮಾತೃ ಭಾಷೆಯಾದ ಕನ್ನಡವು ದುರವಸ್ಥೆಗೆ ಸಿಕ್ಕು ಅಳಿದು ಹೋಗುವ ಸಂಕಟಕಾಲದಲ್ಲಿ ಈ ಸಂಸ್ಥೆಯು ಜನ್ಮ ತಾಳಿತೆಂಬುದು ನಿಸ್ಸಂದೇಹವಾಯಿತು. ಕನ್ನಡ ಶಿಕ್ಷಕರನ್ನು ತಯಾರಿಸಲು ಸ್ಥಾಪಿಸಲ್ಪಟ್ಟ ಈ ಸಂಸ್ಥೆಯ ಬಾಲ್ಯಾವಸ್ಥೆಯಲ್ಲಿ ಕನ್ನಡ ತರುಣರು ಆಕರ್ಷಿಸಲ್ಪಡದ್ದರಿಂದಲೂ ಮರಾಠಿ ಉಮೆದವಾರರೇ ಹೆಚ್ಚಾಗಿ ಈ ಸಂಸ್ಥೆಯಲ್ಲಿ ಕಲಿಯುವವರಾಗಿದ್ದರಿಂದಲೂ ಮರಾಠಿ ಭಾಷೆಗೆ ಪ್ರಾಶಸ್ತ್ಯವಿದ್ದುದರಿಂದಲೂ ಈ ಕನ್ನಡ ಸಂಸ್ಥೆ ಕನ್ನಡಿಗರ ಪಾಲಿಗೆ ಇದ್ದೂ ಇಲ್ಲದಂತಾಗಿತ್ತು. ಇಂಥ ಚಿಂತಾಜನಕ ಪರಿಸ್ಥಿತಿಯಲ್ಲಿ ಡೆ. ಚೆನ್ನಬಸಪ್ಪನವರು ಅದರ ಪ್ರಿನ್ಸಿಪಾಲರಾಗಿ ನೇಮಿಸಲ್ಪಟ್ಟಿದ್ದರಿಂದ ಅಮೃತದಂಥ ದಿವ್ಯ ಔಷಧವು ದೊರೆತು ಬಾಲ್ಯದ ರೋಗಗಳೆಲ್ಲ ಮಾಯವಾಗಿ ಯೌವನದ ಲಕ್ಷಣಗಳು ಸುಸ್ಪಷ್ಟವಾಗಿ ಕಾಣಿಸತೊಡಗಿದವು ಸಂಸ್ಥೆ ಉಳಿಯಿತು, ಬೆಳೆಯಿತು, ಅದರ ಶತಾಬ್ದಿ ಸಮಾರಂಭದ ಸುಯೋಗವೂ ಬಂದಿತು.

ಡೆಪ್ಯೂಟಿ ಚೆನ್ನಬಸಪ್ಪನವರ ಭಾವ ಚಿತ್ರದ ಅನಾವರಣ:—

ಕನ್ನಡ ನಾಡಿಗೆ ಈ ಸಂಸ್ಥೆಯಿಂದಾದ ಅಪಾರ ಉಪಕಾರವನ್ನೂ ಕನ್ನಡ ಭಾಷೆ ಸಾಹಿತ್ಯ ಹಾಗೂ ಶಿಕ್ಷಣಗಳ ಅಭಿವೃದ್ಧಿಯ ಕಾರ್ಯದಲ್ಲಿ ಡೆ. ಚೆನ್ನಬಸಪ್ಪನವರು ಪ್ರಿನ್ಸಿಪಾಲರಾಗಿಯೂ ಡೆ. ಇನಸ್ಪೆಕ್ಟರರಾಗಿಯೂ ಕೆಲಸ ಮಾಡುವಾಗ, ವಹಿಸಿದ ಘನವಾದ ಪಾತ್ರ ಇವುಗಳ ಅರಿವು ಈಗಿನವರಾದ ನಮಗೆ ಆಗಬೇಕಾದುದು ಅತ್ಯಗತ್ಯವೆಂದು ತಿಳಿದು ಎರಡು ಯೋಜನೆಗಳನ್ನು ಕೈಕೊಳ್ಳಲು ನಿರ್ಧರಿಸಿದೆವು.ಈಕಾಲೇಜದ ಮಂದಿರದಲ್ಲಿ ಡೆ.ಚೆನ್ನಬಸಪ್ಪ

ನವರ ಭಾವ ಚಿತ್ರವನ್ನಿರಿಸುವದು ಮೊದಲನೆಯದು. ಈ ಸಂಸ್ಥೆಯ ಶತಾಬ್ದಿ ಸಮಾರಂಭವನ್ನಾಚರಿಸುವದು ಎರಡನೆಯದು. ಮೊದಲನೆಯ ವಿಚಾರವನ್ನು ಕೂಡಲೇ ಕಾರ್ಯಗತ ಮಾಡುವ ಉದ್ದೇಶನ್ನಿಟ್ಟುಕೊಂಡು ನಾವು ರ್‍ಯಾಂಗ್ಲರ ಪಾವಟೆಯವರನ್ನು ಮತ್ತೊಮ್ಮೆ ಭೆಟ್ಟಿಯಾಗಿ ಡೆ. ಚೆನ್ನಬಸಪ್ಪನವರು ಈ ಸಂಸ್ಥೆಯ ಪ್ರಿನ್ಸಿಪಾಲರಾಗಿದ್ದುದು ನಿಜವೆಂದೂ, ೧೯೨೮ರಲ್ಲಿ ಕೆಲವು ಗಣ್ಯ ಪ್ರಿನ್ಸಿಪಾಲರ ಭಾವ ಚಿತ್ರಗಳ ಅನಾವರಣ ನಡೆದ ಸಂದರ್ಭದಲ್ಲಿ ಹಿಂದಿನ ಪ್ರಿನ್ಸಿಪಾಲರಾದ ಡೆ. ಚೆನ್ನಬಸಪ್ಪನವರ ಹಾಗೂ ಇನ್ನುಳಿದವರ ಭಾವ ಚಿತ್ರಗಳನ್ನೂ ಕಾಲೇಜದ ಸಭಾಮಂದಿರದಲ್ಲಿಡುವ ಬಗೆಗೆ ಪ್ರಸ್ತಾಪ ನಡೆದಿತ್ತೆಂದೂ ಹೇಳಿದಾಗ್ಗೆ, ಅವರು ತುಂಬಾ ಸಂತೋಷಗೊಂಡು ನಮ್ಮ ಕಾಲೇಜದಲ್ಲಿ ಡೆ. ಚೆನ್ನಬಸಪ್ಪನವರ ಭಾವಚಿತ್ರವಿರುವದರಲ್ಲಿ ತುಂಬಾ ಔಚಿತ್ಯವುಂಟೆಂದು ಹೇಳಿದರು. ಆ ಬಗೆಗೆ ಅವಶ್ಯವಾದ ಕ್ರಮವು ಕೈಕೊಳ್ಳಲ್ಪಟ್ಟು ಸಿದ್ಧತೆಗಳೆಲ್ಲವೂ ನಡೆದವು. ಈ ಸಮಾರಂಭವು ೧೯೫೫ರ ಜಾನೇವರಿ ತಿಂಗಳ ದಿ. ೧೩ ರಂದು ಕಾಲೇಜದ ಸಭಾಮಂದಿರದಲ್ಲಿ ಆಗಿನ ಶಿಕ್ಷಣ ಮಂತ್ರಿಗಳಾದ ಮಾನ್ಯ ದಿನಕರರಾವ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಒಳ್ಳೇ ವಿಜೃಂಭಣೆಯಿಂದ ನಡೆಯಿತು. ಈ ಸಮಾರಂಭದ ಹೆಚ್ಚಿನ ವಿವರಗಳು ಈ ಪತ್ರಿಕೆಯ ೧೯೫೫ರ ಫೇಬ್ರುವರಿ ತಿಂಗಳ ಸಂಚಿಕೆಯಲ್ಲಿ ಪ್ರಕಟವಾಗಿವೆ.

ಶತಾಬ್ದಿ ಸಮಾರಂಭದ ಬಗೆಗೆ ಪತ್ರ ವ್ಯವಹಾರ

೧೯೫೭ಕ್ಕೆ ಈ ಸಂಸ್ಥೆಗೆ ನೂರು ವರುಷಗಳು ತುಂಬುತ್ತಿದ್ದವಾದ್ದರಿಂದ ಇದರ ಶತಾಬ್ದಿ ಸಮಾರಂಭವನ್ನು ಆ ವರುಷದಲ್ಲಿಯೇ ಜರುಗಿಸುವ ವಿಚಾರದಿಂದ ಸುದೀರ್ಘವಾದ ಯೋಜನೆಯೊಂದನ್ನು ತಯಾರಿಸಿ ಅದನ್ನು ಮಂಜೂರಿಗಾಗಿ ನಮ್ಮ ಖಾತೆಯ ಮೇಲಧಿಕಾರಿಗಳಿಗೆ ೧೯೫೫ರಲ್ಲಿ ಸಾದರ ಪಡಿಸಲಾಯಿತು. ಹೀಗೆ ಈ ಮಹಾ ಕಾರ್ಯದ ಬಗೆಗೆ ಪತ್ರವ್ಯವಹಾರಗಳು ಪ್ರಾರಂಭವಾದವು. ಆ ಮೇಲೆ ನಾವು ಕಳಿಸಿದ ಯೋಜನೆಯ ಬಗೆಗೆ ನಮ್ಮ ಮೇಲಧಿಕಾರಿಗಳು ಹಲವು ಬಗೆಯ ಮಾಹಿತಿಯನ್ನು ಕಳಿಸಲು ಕೇಳಿದರು. ಅದು ನಿತ್ಯದಂತೆ ನಡೆಯುವ ಮಾತಾಗಿದ್ದುದರಿಂದ ಉಪಲಬ್ಧವಿರುವ ಎಲ್ಲ ಮಾಹಿತಿಯನ್ನೂ ಕಳಿಸಲಾಯಿತು. ಆದರೂ ಅವರು ಒಂದು ಪ್ರಶ್ನೆಯನ್ನೆತ್ತಿ ಈ ಸಂಸ್ಥೆಯ ವಾರ್ಷಿಕ ತಪಾಸಣೆಯ ವರದಿಗಳಲ್ಲಿ ಸ್ಥಾಪನಾ ವರುಷವು ೧೮೬೧ ಎಂದು ಕಾಣಿಸಲ್ಪಟ್ಟಿರುವದರಿಂದ ಅದರ ಶತಾಬ್ದಿಯನ್ನು ೧೯೬೧ ರಲ್ಲಿ ನೆರವೇರಿಸಬೇಕೆಂದು ಉತ್ತರಿಸಿದರು. ಇದು ಅವರ ತಿಳುವಳಿಕೆಯಂತೆ ಸರಿ ಕಂಡರೂ ಈ ಸಂಸ್ಥೆಯು ೧೮೫೭ ರಲ್ಲಿಯೇ ಕೆಲಸ ಪ್ರಾರಂಭಿಸಿತೆನ್ನುವ ಬಗೆಗೆ ಸಾಕಷ್ಟು ಅಧಿಕೃತವಾದ ಆಧಾರಗಳು ಸಿಗುವಾಗ ಅದನ್ನು ಹೇಗೆ ಅಲಕ್ಷಿಸಬೇಕು ?

ಇದನ್ನೆಲ್ಲ ಸ್ಪಷ್ಟ ಮಾಡುವದಕ್ಕಾಗಿ ಇನ್ನೂ ಹೆಚ್ಚಿನ ಸಂಗತಿಗಳನ್ನು ಮೇಲಧಿಕಾರಿಗಳ ಗಮನಕ್ಕೆ ತಂದರೂ ಅದರಿಂದ ಯಾವ ಪ್ರಯೋಜನವೂ ಆಗಲಿಲ್ಲ. ಈ ಪ್ರಕಾರ ಕಾಗದ ಪತ್ರಗಳು ನಡೆದಾಗ ರಾಜ್ಯಗಳ ಪುನರ್ಘಟನೆ ಬಂದುಬಿಟ್ಟಿತು. ಆದುದರಿಂದ ಈ ಸಮಸ್ಯೆಯು ಕೆಲವು ಕಾಲ ಹಾಗೇ ಉಳಿಯಬೇಕಾಯಿತು. ಮುಂದೆ ನಮ್ಮ ಹೊಸ ರಾಜ್ಯದ ಶಿಕ್ಷಣ ಖಾತೆಯ ಡಾಯರೆಕ್ಟರರು ಇಲ್ಲಿಗೆ ಬಂದಾಗ್ಗೆ ನಾವು ಕೈಕೊಂಡ ಶತಾಬ್ದ ಸಮಾರಂಭದ ಯೋಜನೆಯನ್ನು ಅವರೆದುರಿಗೆ ಪ್ರಸ್ತಾಪಿಸಲಾಯಿತು. ಈ ಯೋಜನೆಯನ್ನು ನಮ್ಮ ಭಾಗದ ಡೆ. ಡಾಯರೆಕ್ಟರರ ಮುಖಾಂತರ ತಮ್ಮ ಕಡೆಗೆ ಸಾದರ ಪಡಿಸಲಿಕ್ಕೆ ನಮಗೆ ಸೂಚಿಸಿ, ಎಲ್ಲ ಕಾಗದ ಪತ್ರಗಳನ್ನು ಪರಿಶೀಲಿಸಿ ಅಭಿಪ್ರಾಯವನ್ನು ಕಳಿಸಲಿಕ್ಕೆ ಡೆ. ಡಾಯರೆಕ್ಟರರಿಗೂ ತಿಳಿಸಿದರು. ಆ ಪ್ರಕಾರ ನಮ್ಮ ಜಿಲ್ಲೆಯ ಶಿಕ್ಷಣಾಧಿಕಾರಿಗಳೂ ಡೆ. ಡಾಯರೆಕ್ಟರರೂ ನಾವು ಕಳಿಸಿದ ಕಾಗದ ಪತ್ರಗಳನ್ನು ಪರಿಶೀಲಿಸಿದ ನಂತರ ಈ ಸಂಸ್ಥೆಯ ಕೆಲಸವು ಎಷ್ಟೇ ಚಿಕ್ಕ ಸ್ವರೂಪದಲ್ಲಿಯೇ ಆಗಲಿ ೧೮೫೭ ರಲ್ಲಿ ಪ್ರಾರಂಭವಾಯಿತೆಂಬುವ ನಿರ್ಣಯಕ್ಕೆ ಬಂದು ಡಾಯರೆಕ್ಟರರ ಕೊನೆಯ ಮಂಜೂರಿಯ ನಿರೀಕ್ಷಣೆಯ ಮೇರೆಗೆ ಪೂರ್ವ ಸಿದ್ಧತೆಯನ್ನು ಮಾಡಬೇಕೆಂದು ನಮಗೆ ತಿಳಿಸಿದರು.

ಕಾರ್ಯಕಾರಿ ಸಮಿತಿಯ ರಚನೆ

ಒಂದು ಬಗೆಯ ಪ್ರಾರಂಭದ ಅಡಚಣಿ ದೂರಾದರೂ ಶತಾಬ್ದಿ ಸಮಾರಂಭದ ಪೂರ್ವಸಿದ್ಧತೆಗಾಗಿ ಯಾವ ಕ್ರಮವನ್ನು ಕೈಕೊಳ್ಳಬೇಕೆಂಬದು ಮತ್ತೊಂದು ಸಮಸ್ಯೆಯಾಗಿ ಪರಿಣಮಿಸಿತು. ಅದರ ಪರಿಹಾರಕ್ಕಾಗಿ ಯೋಗ್ಯ ಸಲಹೆ ಸೂಚನೆಗಳನ್ನು ಪಡೆಯಲು ನಾವು ಜಿಲ್ಹಾ ಶಿಕ್ಷಣಾಧಿಕಾರಿಗಳ, ಪದವೀಧರರ ಜೀವನ ಶಿಕ್ಷಣ ಕೇಂದ್ರದ ಪ್ರಿನ್ಸಿಪಾಲರ ಹಾಗೂ ನಮ್ಮ ಭಾಗದ ಡೆ.

ಡಾಯರೆಕ್ಟರರ ನೆರವನ್ನು ಮೇಲಿಂದಮೇಲೆ ಕೇಳಿಕೊಳ್ಳಬೇಕಾಯಿತು. ಆ ದೃಷ್ಟಿಯಿಂದ ಅವರೆಲ್ಲರ ಸಹಾನುಭೂತಿ ಸಹಕಾರಗಳು ನಮಗೆ ಯಾವಾಗಲೂ ದೊರೆತಿದ್ದುದರಿಂದ ನಾವು ಕೈಕೊಂಡ ಕೆಲಸವು ಮತ್ತಿಷ್ಟು ಹಗುರಾಯಿತು. ಶತಾಬ್ದಿ ಸಮಾರಂಭದ ಪೂರ್ವ ತಯಾರಿ ಕೆಲಸವೆಲ್ಲವೂ ಈ ಸಂಸ್ಥೆಯ ಹಿಂದಿನ ವಿದ್ಯಾರ್ಥಿಗಳ ಮುಖಾಂತರ ನಡೆಯುವದು ಒಳಿತೆಂದು ಅವರು ಅಭಿಪ್ರಾಯ ಪಟ್ಟರು. ಅದರನ್ವಯ ಕಳೆದ ಆಗಸ್ಟ ತಿಂಗಳಲ್ಲಿ ಕರೆಯಲ್ಪಟ್ಟ ಈ ಕಾಲೇಜದ ಹಿಂದಿನ ವಿದ್ಯಾರ್ಥಿಗಳ, ಪ್ರಾಧ್ಯಾಪಕರ ಹಾಗೂ ಶಿಕ್ಷಣಾಭಿಮಾನಿಗಳ ಸಭೆಯಲ್ಲಿ ಹನ್ನೊಂದು ಜನರ ಕಾರ್ಯಕಾರಿ ಸಮಿತಿಯು ರಚಿಸಲ್ಪಟ್ಟು, ಮುಂದಿನ ಕ್ರಮವನ್ನು ಅದರ ಮುಖಾಂತರ ಕೈಕೊಳ್ಳಲಾಯಿತು. ಹಳೆಯ ವಿದ್ಯಾರ್ಥಿಗಳೂ ಲ್ಯಡ್ಮಿನಿಸ್ಟ್ರೇಟೀವ್ ಆಫೀಸರ್ ಕೆಲಸದಿಂದ ನಿವೃತ್ತಿಯಾದಮೇಲೆ ಸಾರ್ವಜನಿಕ ಕಾರ್ಯಗಳಲ್ಲಿ ಗಣ್ಯ ಪಾತ್ರವಹಿಸಿದವರೂ ಮುಂಬೈ ರಾಜ್ಯದ ಹಿಂದಿನ ಪಾರ್ಲಿಮೆಂಟರಿ ಸೆಕ್ರೆಟರಿಗಳೂ ಆದ ಶ್ರೀ ಸ. ಪ. ಗಾಂವಕಾರರು ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾಗಿಯೂ, ಹಳೆಯ ವಿದ್ಯಾರ್ಥಿಗಳೂ ನಮ್ಮ ಖಾತೆಯ ಹಿರಿಯ ಹುದ್ದೆಗಳಿಂದ ನಿವೃತ್ತಿಹೊಂದಿದವರೂ ಆದ ೯ ಸ್ಥಳೀಯ ಜನರು ಸಮಿತಿಯ ಸದಸ್ಯರಾಗಿಯೂ ಕಾಲೇಜದ ಪ್ರಿನ್ಸಿಪಾಲರು ತಮ್ಮ ಸ್ಥಾನ ಬಲದಿಂದ ಕಾರ್ಯದರ್ಶಿಗಳಾಗಿಯೂ ಕಾರ್ಯ ಪ್ರಾರಂಭಿಸಿದರು.

ಸಮಾರಂಭದ ಪೂರ್ವ ಸಿದ್ಧತೆ ಹಾಗೂ ನಿಧಿಸಂಗ್ರಹ

ಕಾರ್ಯಕಾರಿ ಸಮಿತಿಯು ಮೊದಲನೆಯ ಸಭೆಯಲ್ಲಿ ಸುದೀರ್ಘವಾದ ಮನವಿಯೊಂದನ್ನು ತಯಾರಿಸಿ ಶತಾಬ್ದಿ ಸಮಾರಂಭದ ಯೋಜನೆಯ ವಿವರಗಳನ್ನು ಹಳೆಯ ವಿದ್ಯಾರ್ಥಿಗಳ, ಶಿಕ್ಷಕರ ಹಾಗೂ ಜನಸಾಮಾನ್ಯರೆದುರಿಗೆ ತಂದು, ಆ ಬಗೆಗೆಅವರ ಸೂಚನೆಗಳನ್ನೂ ಧನಸಹಾಯವನ್ನೂ ಕೇಳಿಕೊಳ್ಳಲಾಯಿತು. ನಮ್ಮ ಭಾಗದ ನಾಲ್ಕೂ ಜಿಲ್ಹೆಗಳಲ್ಲಿಯ ಸ್ಕೂಲ ಬೋರ್ಡುಗಳ ಚೇರಮನ್ನರು ಸಮಿತಿಯ ಬಿನ್ನಹದ ಮೇರೆಗೆ ಒಂದು ಸಂಯುಕ್ತ ಹೇಳಿಕೆಯನ್ನು ಕೊಟ್ಟು, ಶತಾಬ್ದಿ ಸಮಾರಂಭದ ಯೋಜನೆಯನ್ನು ಸ್ವಾಗತಿಸಿ, ಅದಕ್ಕೆ ತಮ್ಮ ಹೃತ್ಪೂರ್ವಕ ಬೆಂಬಲವನ್ನಿತ್ತಿದ್ದಲ್ಲದೆ, ತಮ್ಮ ತಮ್ಮ ಬೋರ್ಡುಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗೆ ಸಲಹೆಗಳನ್ನಿತ್ತು, ಈ ಪವಿತ್ರ ಕಾರ್ಯದಲ್ಲಿ ಅವರೆಲ್ಲರೂ ತನುಮನಧನಗಳಿಂದ ಸಹಕರಿಸಲು ಮುಂದೆ ಬರಬೇಕೆಂದು ವಿನಂತಿಸಿಕೊಂಡರು. ಹೀಗೆ ಶತಾಬ್ದಿ ಸಮಾರಂಭದ ಪೂರ್ವಸಿದ್ಧತೆಯು ಆರಂಭವಾಯಿತು. ಸಪ್ಟಂಬರ ತಿಂಗಳಲ್ಲಿ ನಿಧಿ ಸಂಗ್ರಹದ ಕೆಲಸವು ಪ್ರಾರಂಭವಾಗಿ ನವ್ಹಂಬರ ತಿಂಗಳ ಕೊನೆಗೆ, ಶತಾಬ್ದ ಸಮಾರಂಭವನ್ನು ನಮ್ಮ ಯೋಜನೆಯಂತೆ ಜರುಗಿಸಲು ಹತ್ತುವ ಖರ್ಚಿಗೆ ಸಾಕಾಗುವಷ್ಟು ಹಣವು ಸಂಗ್ರಹವಾಯಿತಲ್ಲದೆ ಶಿಕ್ಷಕರನೇಕರಿಂದ ಹೆಚ್ಚಿನ ಸಹಾಯದ ಭರವಸೆಯೂ ಬರಹತ್ತಿತು. ಈ ಸಂಸ್ಥೆಯ ಬಗೆಗೆ ಅದರ ಹಳೆಯ ವಿದ್ಯಾರ್ಥಿಗಳಲ್ಲಿದ್ದ ಅಭಿಮಾನ, ಗೌರವಗಳು ಅಪಾರವಾಗಿವೆ. ಆದುದರಿಂದ ಕೇಂದ್ರ ಸ್ಥಳಗಳಲ್ಲಿದ್ದ ಶಿಕ್ಷಕರು ಧನ ಸಹಾಯ ನೀಡಲು ಕೂಡಲೆ ಮುಂದೆ ಬಂದರು. ನಾಲ್ಕೂ ಜಿಲ್ಹೆಗಳ ಮೂಲೆ ಮೂಲೆಗಳಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಹಳೆಯ ವಿದ್ಯಾರ್ಥಿಗಳಿಗೆ ನಾವು ಕೈಕೊಂಡ ಯೋಜನೆಯ ಬಗೆಗೆ ಸರಿಯಾದ ಕಲ್ಪನೆ ಇರದ ಮೂಲಕವಾಗಲಿ ಅಥವಾ ವೈಯಕ್ತಿಕವಾಗಿ ನಿಧಿ ಸಂಗ್ರಹಿಸಲು ನಮ್ಮಿಂದ ಪ್ರತ್ಯೇಕವಾದ ಸಿಬ್ಬಂದಿಯ ವ್ಯವಸ್ಥೆ ಇಲ್ಲದಮೂಲಕವಾಗಲಿ ನಾವು ಅಪೇಕ್ಷಿಸಿದ ಮಟ್ಟಿಗೆ ಅಂಥವರಿಂದ ಸಹಾಯ ಬರಲು ತೊಂದರೆಯಾದರೂ ಸ್ಕೂಲಬೋರ್ಡ ಚೇರಮನ್ನರ, ಅದರಲ್ಲಿಯೂ ವಿಜಾಪುರ ಜಿಲ್ಹೆಯ ಚೇರಮನ್ನರ ವಿಶೇಷ ಪ್ರಯತ್ನ, ಹಳೆಯ ಶಿಕ್ಷಕ ಮಿತ್ರರ ಹಾಗೂ ಶಿಕ್ಷಕ-ವಿದ್ಯಾರ್ಥಿಗಳ ಕಳಕಳಿಯ ಪ್ರಚಾರ ಮತ್ತು ಈ ಸಂಸ್ಥೆಯ ಸ್ಥಾನಿಕ ಹಿತೈಷಿಗಳ ಹಾಗೂ ಶಿಕ್ಷಣಾಭಿಮಾನಿಗಳ ಬೆಂಬಲದ ಪರಿಣಾಮವಾಗಿ ನಿಧಿ ಸಂಗ್ರಹವು ಈ ತಿಂಗಳ ಮೊದಲನೆಯ ವಾರಾಂತ್ಯಕ್ಕೆ ೪೦೦೦ ರೂಪಾಯಿಗಳಿಗೆ ಸಮೀಪಿಸಿತೆಂದು ಕೃತಜ್ಞತಾ ಪೂರ್ವಕವಾಗಿ ಹೇಳುತ್ತೇವೆ. ಹೀಗಾಗಿ ಸಮಾರಂಭವನ್ನು ಈ ತಿಂಗಳ ಕೊನೆಯ ವಾರದಲ್ಲಿ ಜರುಗಿಸಬೇಕೆಂಬ ನಿರ್ಣಯಕ್ಕೆ ಬರಲು ಯಾವ ಅಡ್ಡಿಯೂ ಇಲ್ಲದಂತಾಯಿತು.

ಸಮಾರಂಭದ ದಿನಾಂಕ

ನಮ್ಮಂತೆ ಇನ್ನುಳಿದ ಕೆಲವು ಸಂಸ್ಥೆಗಳಿಗೂ ಕ್ರಿಸ್ತಮಸ್ ಹಬ್ಬದ ಬಿಡುವು ಇರುವದರಿಂದ ಸಮಾರಂಭವನ್ನು ಆ ಸೂಟಿಯ ದಿನಗಳಲ್ಲಿಯೇ ಜರುಗಿಸುವದು, ನಮಗೆ ಅನೇಕ ದೃಷ್ಟಿಯಿಂದ ಹೆಚ್ಚು ಅನುಕೂಲವಾಗಿ ತೋರಿತು.

ದುದರಿಂದ ಸಮಾರಂಭವು ಇದೇ ಡಿಸೆಂಬರ ೨೭ ಹಾಗು ೨೮ರಂದು ಜರಗುವದು. ಅದರ ಪ್ರಾರಂಭೋತ್ಸವವು ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದ ಪರಮಪೂಜ್ಯ ಶ್ರೀ. ಮ.ನಿ.ಪ್ರ.ಸ್ವ. ಮಹಾಶಿವಯೋಗಿಗಳು, ಬಂಥನಾಳ ಇವರ ದಿವ್ಯ ನೇತೃತ್ವದಲ್ಲಿ ನಡೆಯುವದು. ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ರ್‍ಯಾಂಗ್ಲರ ಡಿ. ಸಿ. ಪಾವಟೆಯವರು ಸಮಾರಂಭದ ಅಧ್ಯಕ್ಷರಾಗಲೊಪ್ಪಿರುವರು. ಧಾರವಾಡದ ಜನತಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಹುಕ್ಕೇರಿಕರ ರಾಮರಾಯರು ಜೀವನ ಶಿಕ್ಷಣ ಸಮ್ಮೇಲನದ ಅಧ್ಯಕ್ಷತೆವಹಿಸಲೂ, ತೈಲ ಚಿತ್ರಗಳ ಅನಾವರಣಕ್ಕೆ ಶ್ರೀ ಆಲೂರ ವೆಂಕಟರಾಯರೂ, ಸ್ಮಾರಕ ಸಂಪುಟದ ಪ್ರಕಟನೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಆಸ್ಥಾನ ವಿದ್ವಾನ್ ಪಂಡಿತರತ್ನ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಮುಖ್ಯ ಅತಿಥಿಗಳಾಗಿ ಬರಲು ದಯವಿಟ್ಟು ಒಪ್ಪಿರುವರು. ಈ ಪ್ರಕಾರ ಕನ್ನಡ ನಾಡಿನ ಮಠಾಧಿಪತಿಗಳೂ, ಶಿಕ್ಷಣ ತಜ್ಞರೂ ಹಾಗೂ ಸಾಹಿತಿಗಳೂ ನಮ್ಮ ಸಮಾರಂಭದಲ್ಲಿ ಹಿರಿಯತನ ವಹಿಸಲೊಪ್ಪಿ ಕೃಪೆ ಮಾಡಿರುವದರಿಂದ ಇದೊಂದು ಅಪೂರ್ವ ಸಂಧಿಯಾಗಿ ಪ್ರೇಕ್ಷಕರೂ ಪ್ರತಿನಿಧಿಗಳೂ ಬಹು ದೊಡ್ಡ ಪ್ರಮಾಣದಲ್ಲಿ ಬರಬಹುದೆಂಬ ಆಶೆ ದಿನಗಳೆದಂತೆ ಬಲಗೊಳ್ಳುತ್ತಿದೆ. ಈ ಸಂಸ್ಥೆಯನ್ನು ಬಿಟ್ಟು ಹೋದ ಬಳಿಕ ಪುನಃ ತಮ್ಮ ಮಾತೃ-ಸಂಸ್ಥೆಗೆ ಬಾರದಿದ್ದ ಸಾವಿರಾರು ಶಿಕ್ಷಕರಿಗೂ, ಈ ಸಮಾರಂಭದಲ್ಲಿ ಭಾಗ ವಹಿಸಲಿಚ್ಛಿಸಿ ಬರುವ ಶಿಕ್ಷಕ-ಶಿಕ್ಷಕಿಯರಿಗೂ ಶಿಕ್ಷಣಾಭಿಮಾನಿಗಳಿಗೂ ನಮ್ಮ ಸಂಸ್ಥೆ ಹಾಗೂ ಸಮಿತಿಯ ಪರವಾಗಿ ಹಾರ್ದಿಕ ಸ್ವಾಗತವನ್ನೀಯಲು ಅವರೆಲ್ಲರ ಬರವನ್ನು ಸಂತೋಷಾಭಿಮಾನ ಪೂರ್ವಕವಾಗಿ ನಿರೀಕ್ಷಿಸುತ್ತಿದ್ದೇವೆ. ನಾವು ಕೈಕೊಂಡ ಕಾರ್ಯವು ಒಳ್ಳೆ ಯಶಸ್ವಿಯಾಗಿ ಅತಿಥಿಗಳ ಆಗಮನ-ನಿರ್ಗಮನಗಳು ಸೌಖ್ಯಮಯವಾದರೆ ನಮಗೆ ಅಂತಹ ಭಾಗ್ಯಮತ್ತೊಂದಿಲ್ಲ. ನಮ್ಮ ಪ್ರಯತ್ನಗಳೆಲ್ಲವೂ ಫಲಿಸುವಂತೆ ದಯಾಘನನಾದ ಪರಮಾತ್ಮನು ಕೃಪೆದೋರಲಿ. ಇದೇ ನಮ್ಮ ಪೂಜೆ; ಇದೇ ನಮ್ಮ ಪ್ರಾರ್ಥನೆ.

ಸ್ಮಾರಕ ಸಂಪುಟ

ಕಾಲೇಜದ ಶತಾಬ್ದಿ ಸಮಾರಂಭವನ್ನು ಆಚರಿಸಬೇಕೆಂದು ನಿರ್ಣಯಿಸಿ ಕಾರ್ಯಕ್ರಮದ ರೂಪರೇಷೆಯನ್ನು ತಯಾರಿಸುವಾಗ ಸ್ಮಾರಕ ಸಂಪುಟದ ಪ್ರಕಟನೆಯೂ ಸಮಾರಂಭದ ಒಂದು ಮುಖ್ಯ ಅಂಗವಾಗಿ ನಡೆಯಬೇಕೆಂದು ಗೊತ್ತಾಯಿತು. ಈ ಸಂಗತಿಯನ್ನು ಲಕ್ಷದಲ್ಲಿಟ್ಟುಕೊಂಡು ನಾವು ಮೊದಲಿನ ಯೋಜನೆಯನ್ನು ತಯಾರಿಸಿದ್ದೆವು. ಕನ್ನಡ ನಾಡು-ನುಡಿಗಳ ಅಭಿವೃದ್ಧಿಗಾಗಿ ಈ ಸಂಸ್ಥೆಯು ಸಲ್ಲಿಸಿದ ಅಮೋಘವಾದ ಸೇವೆ, ಈ ಸಂಸ್ಥೆಯನ್ನು ಸ್ಥಾಪಿಸಿ ಬೆಳಸಿ ಉಳಿಸಿ ಕೀರ್ತಿವಂತರಾದ ಮಹಾನುಭಾವರ ಉಪಕಾರ ಸ್ಮರಣೆ, ಹಾಗು ಇಲ್ಲಿಂದ ಹೊರಬಿದ್ದ ಶಿಕ್ಷಕರ, ಲೇಖಕರ, ಸಾಹಿತಿಗಳ, ಕವಿಗಳ ಮುಂತಾದ ನಾಡು-ನುಡಿಯ ಶಿಲ್ಪಿಗರ ಪರಿಚಯ ಇವೆಲ್ಲವುಗಳನ್ನೂ ಸಾರ್ವಜನಿಕರೆದುರಿಗೆ ತರುವ ಉದ್ದೇಶದಿಂದ ನವ್ಹಂಬರ, ಡಿಸೆಂಬರ, ಜನೆವರಿ ಈ ಮೂರು ತಿಂಗಳ ನಿತ್ಯ ಸಂಚಿಕೆಗಳನ್ನು ಹೊರಡಿಸದೆ, ಅವುಗಳ ಬದಲು ಸ್ಮಾರಕ ಸಂಪುಟವೊಂದನ್ನು ಹೊರಡಿಸುವದು ಶತಾಬ್ದಿ ಸಮಾರಂಭದ ದೃಷ್ಟಿಯಿಂದ ಅವಶ್ಯವೂ ಔಚಿತ್ಯಪೂರ್ಣವೂ ಆಗಿ ತೋರಿತು. ಆದುದರಿಂದ ಈ ಸ್ಮಾರಕ ಸಂಪುಟದಲ್ಲಿ ಕಾಲೇಜದ ಇತಿಹಾಸ, ಶಿಕ್ಷಣದ ಬೆಳವಣಿಗೆ ಹಾಗೂ ಅದರ ನೂರು ವರುಷಗಳ ದೀರ್ಘಕಾಲದಲ್ಲಿ ನಡೆದ ಸ್ಥಿತ್ಯಂತರ ಇವೇ ಮೊದಲಾದ ಮುಖ್ಯ ಘಟನೆಗಳಿಗೆ ಮಾತ್ರ ಪ್ರಾಶಸ್ತ್ಯ ಕೊಡಲಾಗಿದೆ.

ವಂದನಾರ್ಪಣೆ.

ಸ್ಮಾರಕ ಸಂಪುಟದ ಬಗೆಗೆ ನಾವು ಇಟ್ಟುಕೊಂಡ ಉದ್ದೇಶಗಳು ಸಾಧಿಸಲು ನಾನಾ ಬಗೆಯ ಲೇಖಗಳು ಅವಶ್ಯವಾದವು. ಅವುಗಳನ್ನು ಸಂಗ್ರಹಿಸಲು ಮುಂಚಿತವಾಗಿಯೇ ಯೋಗ್ಯ ಕ್ರಮ ಕೈಕೊಳ್ಳಲಾಯಿತು. ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಹೆಸರು ಪಡೆದ ಮಹಸೀಯರಿಗೂ ಈ ಸಂಸ್ಥೆಯ ಹಿಂದಿನ ಪ್ರಾಧ್ಯಾಪಕರಿಗೂ ಹಳೆಯ ವಿದ್ಯಾರ್ಥಿಗಳಿಗೂ ಪತ್ರಗಳನ್ನು ಬರೆದು ಈ ಸಂಸ್ಥೆಯಿಂದ ನಡೆದ ಶಿಕ್ಷಣ ಪ್ರಸಾರ, ಸಾಹಿತ್ಯದ ಬೆಳವಣಿಗೆ, ಇಲ್ಲಿ ಆಗಿಹೋದ ಗಣ್ಯ ಅಧ್ಯಾಪಕರ ಹಾಗೂ ಮುಖ್ಯಾಧ್ಯಾಪಕರಿಂದ ನಡೆದ ನಾಡಸೇವೆ, ಇವೇ ಮೊದಲಾದ ವಿಷಯಗಳ ಬಗೆಗೆ ಲೇಖನಗಳನ್ನು ಕಳಿಸಲಿಕ್ಕೆ ವಿನಂತಿಸಿಕೊಂಡೆವು. ಅದೇ ಪ್ರಕಾರ ಇಲ್ಲಿಂದ ಹೊರಬಿದ್ದ ಹಳೆಯ ವಿದ್ಯಾರ್ಥಿಗಳಿಗೂ ತಮ್ಮ ಸವಿ ನೆನಹುಗಳನ್ನು ಚಿತ್ರಿಸುವ ಲೇಖಗಳನ್ನಾಗಲೀ ಕವನಗಳನ್ನಾಗಲೀ ಕಳಿಸಬೇಕೆಂದು ಬಿನ್ನವಿಸಿಕೊಂಡೆವು. ನಮ್ಮ ಕರೆಗೆ

ಒಗೊಟ್ಟು ಅನೇಕ ಮಹನೀಯರು ವಿಚಾರ-ವೈವಿಧ್ಯ ರಸ-ಭಾವಗಳಿಂದ ತುಂಬಿದ ಲೇಖಗಳನ್ನೂ ಸವಿನೆನಪುಗಳನ್ನೂ ಕವನಗಳನ್ನೂ ಕಳಿಸಿ ನಮಗೆ ಮಹದುಪಕಾರ ಮಾಡಿದ್ದಾರೆ. ಆದರೆ ಸ್ಮಾರಕ ಸಂಪುಟದ ಗಡುತರವನ್ನು ಹೆಚ್ಚಿಸುವದು ಆರ್ಥಿಕ ದೃಷ್ಟಿಯಿಂದ ಸಾಧ್ಯವಾಗದ್ದರಿಂದ ಎಲ್ಲ ಲೇಖನಗಳನ್ನೂ ಸವಿನೆನಪುಗಳನ್ನೂ ಕವನಗಳನ್ನೂ ಸೇರಿಸುವದು ಅಸಾಧ್ಯವಾಯಿತು. ಆದುದರಿಂದ ಹಲವಾರು ಮಹನೀಯರ ಕ್ಷಮೆಯನ್ನು ಕೇಳುತ್ತೇವೆ. ಈ ಸ್ಮಾರಕ ಸಂಪುಟವನ್ನು ತಯಾರಿಸಲು ಅವಶ್ಯವಾದ ಲೇಖನಗಳನ್ನೂ ಸವಿನೆನಪುಗಳನ್ನೂ ಕವನಗಳನ್ನೂ ಕಳಿಸಿ ನಮಗೆ ಅಮೌಲ್ಯವಾದ ನೆರವನ್ನು ನೀಡಿದ ಮಹನೀಯರೆಲ್ಲರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ಸಕಾಲದಲ್ಲಿ ಬಂದ ಶುಭ-ಸಂದೇಶಗಳನ್ನೂ ಈ ಸಂಪುಟದಲ್ಲಿ ಸೇರಿಸಬೇಕೆಂಬ ಮನಸ್ಸುಳ್ಳವರಾಗಿದ್ದದರಿಂದ ನಮ್ಮ ನಾಡ ಮುಖಂಡರು ತಮ್ಮ ಸಂದೇಶಗಳನ್ನು ಕಳಿಸಿ ನಮ್ಮ ಉದ್ದೇಶಪೂರೈಸುವಂತೆ ಮಾಡಿದುದಕ್ಕೆ ಅವರಿಗೂ ನಮ್ಮ ವಂದನೆಗಳು.

ಈ ಸಂಪುಟವು ಸರ್ವಾಂಗ ಸುಂದರವಾಗಿ ಎಲ್ಲರ ಮೆಚ್ಚುಗೆಗೂ ಪಾತ್ರವಾಗಲು ಹುಬ್ಬಳ್ಳಿಯ ಮನೋಹರ ಪಾವರ ಪ್ರಿಂಟಿಂಗ ಪ್ರೆಸ್ಸಿನ ಶ್ರೀ ಸಿ. ಪ. ಕಟ್ಟಿಮನೆಯವರ ದೀರ್ಘ ಪರಿಶ್ರಮವೇ ಮುಖ್ಯವೆಂಬುದನ್ನು ನಾವು ಇಲ್ಲಿ ಕಾಣಿಸಿ, ಅವರು ನಮ್ಮೀ ಕಾರ್ಯದಲ್ಲಿ ನೀಡಿದ ಸೂಚನೆ, ಸಹಾಯ, ಸಹಕಾರಗಳ ಬಗೆಗೆ ನಾವು ಅವರಗೆ ತುಂಬಾ ಉಪಕೃತರು. ಹಿಂದಿನ ಪ್ರಿನ್ಸಿಪಾಲರ ಚಿತ್ರಗಳನ್ನು ಈ ಸಂಪುಟದಲ್ಲಿ ಮುದ್ರಿಸಲು ಸಾಧ್ಯವಾಗುವಂತೆ ಅವರ ಆಪ್ತ ಮಿತ್ರರಿಂದ ಬಂದ ಸಹಾಯಕ್ಕೂ ನಾವು ಋಣಿಯಾಗಿದ್ದೇವೆ. ಒಟ್ಟಿನಲ್ಲಿ ಈ ಸ್ಮಾರಕ ಸಂಪುಟವನ್ನು ತಯಾರಿಸುವ ಭಾರಮಯವಾದ ಕಾರ್ಯದಲ್ಲಿ ನೆರವು ನೀಡಿದ ಎಲ್ಲ ಮಹನೀಯರಿಗೂ ಸಂಪಾದಕ ಮಂಡಲದ ಸದಸ್ಯರಿಗೂ ನಮ್ಮ ಅನಂತಾನಂತ ಕೃತಜ್ಞತೆಗಳು.

ಕೊನೆಯದಾಗಿ ಇಂತಹ ಅನಂತಾನಂತ ಶತಾಬ್ದಿ ಸಮಾರಂಭಗಳು ನಮ್ಮಸಂಸ್ಥೆಗೆ ಬರಲೆಂಬುದೇ ಮುನ್ನೋಟದ ಮಂಗಲವು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೇಟ ಗ್ರೇಡ ಮುಂ. ಡ್ರಾಯಿಂಗ ಪರಿಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ
ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು
ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ ದೊರೆಯುವದು. **ಬೆಲೆ ೧—೧೨—೦** ಅಂಚೆವೆಚ್ಚ ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

ಶಿಶು ಸಾಹಿತ್ಯದ ಸುಗ್ಗಿ !

ಸ್ನೇಹ ಪ್ರಕಾಶನದ ಅದ್ಭುತ ಪ್ರಗತಿ !!

ಪ್ರತಿಯೊಬ್ಬ ಕನ್ನಡ ಬಾಲಕ-ಬಾಲಕಿಯರೂ ಓದಿ ನಲಿಯಬೇಕಾದ ಕವನ ಸಂಗ್ರಹಗಳು :

ಗುಲಾಬಿ ಗೊಂಚಲು	೦—೫—೦	ಸನದಿ ಶ್ರೀಕಾಂತ
ಗೃಹಪಂಚಮಿ	೦—೫—೦	ಬಿ ಎ. ಸನದಿ
ಜಿಲೇಬಿ ಝುಣ್ ಝುಣ್	೦—೫—೦	ಬಿ. ಎ. ಸನದಿ
ಬಾಳಿನಬೆಳಕು(ಕಥೆಗಳು)	೦—೫—೦	ಎ. ಬಿ. ಮುನೋ

—ಇವಲ್ಲದೆ—

‘ಐದಳಮಲ್ಲಿಗೆ’ ‘ರಸಿಕಪಕ್ಷಿ’ ‘ಆಶಾಕಿರಣ’

ಇತ್ಯಾದಿ ಕವನ ಸಂಗ್ರಹಗಳಿಗಾಗಿ **ಕೂಡಲೇ** ಬರೆಯಿರಿ:

ಸ್ನೇಹ ಪ್ರಕಾಶನ, ಶಮನೇವಾಡಿ
(ಜಿ. ಬೆಳಗಾವಿ)



ಪ್ರಿನ್ಸಿಪಾಲ ಚೆನ್ನಬಸಪ್ಪನವರು ಬ. ಧಾರವಾಡ



ಶ್ರೀ ಡಿ. ಎಚ್. ನಾಯಿಕ, ವಿದ್ಯಾರ್ಥಿ (೧೮೯೬-೯೯)



ಪ್ರಿನ್ಸಿಪಾಲ ಶ್ರೀನಿವಾಸ ರೊದ್ದರಾಯರು

ಶಿಕ್ಷಣ ಮಂತ್ರಿಗಳಾದ ಮಾನ್ಯ ಶ್ರೀ ವೆಂಕಟಪ್ಪನವರು ದಿನಾಂಕ ೧೭-೧೨-೫೭ ರಂದು ಕಾಲೇಜವನ್ನು ಸಂದರ್ಶಿಸಿದಾಗಿನ ದೃಶ್ಯಗಳು

ಫೋಟೊ ತೆಗೆದವರು— ಎಸ್. ಸಿ. ತಂಬದ

ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ

ಸಂಕ್ಷಿಪ್ತ ಇತಿಹಾಸವು

೧ ಉದಯ

ಮೊದಲಿನ ೮-೧೦ ವರುಷಗಳ ಕಾಗದ ಪತ್ರಗಳೆಲ್ಲವೂ ಸಿಗುವದಿಲ್ಲವಾದ್ದರಿಂದ ಕಾಲೇಜದ ಪ್ರಾರಂಭದ ಬಗೆಗೆ ಉಪಲಬ್ಧವಿದ್ದ ಸಂಗತಿಗಳನ್ನೇ ಅವಲಂಬಿಸಬೇಕಾಗಿದೆ.

ದಿನಾಂಕ ೩–೧೧–೧೮೯೦ರಂದು ಕಾಲೇಜಿನಲ್ಲಿ ನಡೆದ ಪ್ರಮಾಣ ಪತ್ರಗಳ ವಿತರಣ ಸಮಾರಂಭದಲ್ಲಿ ಆಗಿನ ಪ್ರಿನ್ಸಿಪಾಲರಾದ ರಾವಸಾಹೇಬ ಕರಂದಿಕರರವರು ಪ್ರಾಸ್ತಾವಿಕ ಭಾಷಣ ಮಾಡುತ್ತಾ ಕಾಲೇಜದ ಬಗೆಗೆ ಈ ಪ್ರಕಾರ ಹೇಳಿರುವರು.

ಈ ಕಾಲೇಜು ಸನ್ ೧೮೫೬ನೆಯ ಇಸವಿಯಲ್ಲಿ ನಾರ್ಮಲ್ ಕ್ಲಾಸ್ ಎಂಬ ಹೆಸರಿನಿಂದ ಧಾರವಾಡದಲ್ಲಿ ಸ್ಥಾಪಿಸಲ್ಪಟ್ಟಿತು. ಮುಂದೆ ಸನ್ ೧೮೬೦ನೆಯ ಇಸವಿಯಲ್ಲಿ ಅದು ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರ ಸ್ಟೇಶನವಾದ ಬೆಳಗಾಂವಿಗೆ ಒಯ್ಯಲ್ಪಟ್ಟಿತು. ಸನ್ ೧೮೬೪ನೆಯ ಇಸವಿಯಲ್ಲಿ ವಿದ್ಯಾಖಾತೆಯ ಅಧಿಕಾರಿಗಳು ಕಾಲೇಜದ ಗೌರವವನ್ನೂ ಮಹತ್ವವನ್ನೂ ಲಕ್ಷಿಸಿ ಅದರಲ್ಲಿದ್ದ ಮಾಸ್ತರ ಜನರ ಸಂಬಳವನ್ನು ಹೆಚ್ಚು ಮಾಡಿ ಅವರ ಸ್ಥಿತಿಯನ್ನು ಸುಧಾರಿಸಿದರು.

೧೮೭೦ನೆಯ ವರುಷದಲ್ಲಿ ಅದಕ್ಕೆ ಪ್ರ್ಯಾಕ್ಟೈಸಿಂಗ ಸ್ಕೂಲನ್ನು ಜೋಡಿಸಿದರು. ಧಾರವಾಡ ಪಟ್ಟಣವು ಮುಂಬೈ ಇಲಾಖೆಗೆ ಸೇರಿದ ಕರ್ನಾಟಕ ಪ್ರಾಂತದ ಮಧ್ಯಸ್ಥಳವಾಗಿರುವದರಿಂದ ಇಂಥ ವಿದ್ಯಾಲಯವು ಇಲ್ಲಿಯೇ ಇರತಕ್ಕದ್ದು ಉಚಿತವೆಂದು ಗ್ರಹಿಸಿ ಈ ಜಿಲ್ಹೆಯ ಆಗಿನ ಹೆಸರಾದ ಕಲೆಕ್ಟರ ಮೆ|| ರಾಬರ್ಟಸನ್ ಸಾಹೇಬರು ಬಹು ಶ್ರಮಬಟ್ಟು ೫೦ ಸಾವಿರ ರೂಪಾಯಿಗಳನ್ನು ವರ್ಗಣಿಯಿಂದ ಕೂಡಿಸಿ ಈ ಭವ್ಯವಾದ ಇಮಾರತಿಯನ್ನು ಕಟ್ಟಿಸಿದರು. ಮತ್ತು ಸನ್ ೧೮೭೫ನೆಯ ಇಸವಿಯಲ್ಲಿ ಕಾಲೇಜನ್ನು ಬೆಳಗಾಂವಿಯಿಂದ ಧಾರವಾಡಕ್ಕೆ ತಿರುಗಿ ತರಿಸಿದರು.

ಈ ಕಾಲೇಜು ಧಾರವಾಡದಲ್ಲಿಯೇ ಉದಯವಾಯಿತೆಂಬ ಬಗೆಗೆ ಶ್ರೀ ವೆಂಕಟ ರಂಗೋ ಕಟ್ಟಿಯವರು ಈ ಕೆಳಗಿನಂತೆ ಬರೆದಿದ್ದಾರೆ :—

ಟ್ರೇನಿಂಗ ಸ್ಕೂಲ

ಮೊದಲು ೧೮೫೫ರಲ್ಲಿ ೩ ರೂ. ಗಳ ಶಿಷ್ಯವೇತನದ ಮೇಲೆ ಧಾರವಾಡ ಕನ್ನಡ ಸಾಲೆಯ ಶಿಕ್ಷಕರ ಮೇಲ್ವಿಚಾರಣೆಯ ಕೆಳಗೆ ೧೦ ವಿದ್ಯಾರ್ಥಿಗಳನ್ನು ಆರಿಸಿದರು. ಅಷ್ಟೇ ವೇತನದಿಂದ ೧೮೫೬ರಲ್ಲಿ ೧೦ ವಿದ್ಯಾರ್ಥಿಗಳನ್ನು ಹೆಚ್ಚಿಗೆ ತೆಗೆದುಕೊಂಡರು. ಅದನ್ನು ೧೮೬೧ರ ಜನೇವರಿ ತಿಂಗಳಲ್ಲಿ ಬೆಳಗಾಂವಿಗೆ ಸ್ಥಳಾಂತರಿಸಿ ವಿದ್ಯಾರ್ಥಿಗಳ ಸಂಖ್ಯೆಯನ್ನು ೧೨ಕ್ಕೆ ಇಳಿಸಿ ಅವರ ವೇತನವನ್ನು ೩ ರೂಪಾಯಿಗಳಿಂದ ೫ ರೂಪಾಯಿಗಳಿಗೆ ಏರಿಸಿದರು.

ಈ ಅವತರಣಿಕೆಗಳನ್ನು ಆಧಾರವಾಗಿಟ್ಟುಕೊಂಡರೆ ಈ ಸಂಸ್ಥೆಯು ಇ. ಸ. ೧೮೫೬ರೊಳಗೆ ಧಾರವಾಡದಲ್ಲಿ ಉಗಮವಾಯಿತೆಂಬುದು ಸ್ಪಷ್ಟವಾಗುತ್ತದೆ. ಇದೇ ಅಭಿಪ್ರಾಯವನ್ನು ದೃಢೀಕರಿಸಲಿಕ್ಕೆ ಇನ್ನೂ ಹಲವಾರು ಸಂಗತಿಗಳು ಸಿಗುತ್ತವೆ; ಅವನ್ನೆಲ್ಲ ಇಲ್ಲಿ ವಿವರಿಸುವದು ಅನವಶ್ಯಕವಾಗಿದ್ದರೂ ಒಂದನ್ನು ಮಾತ್ರ ಹೇಳಬೇಕಾಗುತ್ತದೆ. ಸರಕಾರದಿಂದ ತಯಾರಿಸಲ್ಪಟ್ಟ ಧಾರವಾಡ ಜಿಲ್ಹೆಯ ಗ್ಯಾಜಿಟೀಯರದಲ್ಲಿ ೧೮೫೬ರಲ್ಲಿ ಧಾರವಾಡದಲ್ಲಿ ಒಂದು ಟ್ರೇನಿಂಗ ಸಂಸ್ಥೆ ಇತ್ತೆಂದು ಉಲ್ಲೇಖವಾಗಿದೆ. ಸದರಿ ವರ್ಗವು ಉಮೇದವಾರರ ವರ್ಗವೆಂದು ತಿಳಿಯಲ್ಪಟ್ಟು ಅದನ್ನು ಧಾರವಾಡದ ಕನ್ನಡ ಸಾಲೆಗೆ ಜೋಡಿಸಿದ್ದರು. ಈ ವರ್ಗಕ್ಕೆ ಈಗಿನಂತೆ ನಿಶ್ಚಿತವಾದ ಅಭ್ಯಾಸ ಪತ್ರಿಕೆ ಇದ್ದಂತೆ ಕಾಣುವದಿಲ್ಲ. ಅಭ್ಯಾಸ ಪತ್ರಿಕೆ ಇರದಿದ್ದರೂ ಅವರಿಗೆ ಭಾಷೆ, ಗಣಿತ ಹಾಗೂ ಶಾಲಾ ಪದ್ಧತಿ ಈ ವಿಷಯಗಳಲ್ಲಿ ಪ್ರತ್ಯಕ್ಷ ಅನುಭವ ಕೊಡಲ್ಪಡುತ್ತಿತ್ತು.

೨ ಬೆಳಗಾಂವಿಗೆ ಸ್ಥಳಾಂತರ

೧೮೫೮ರ ವರೆಗೆ ಪ್ರಾಥಮಿಕ ಶಿಕ್ಷಣಕ್ಕೆ ನಿಶ್ಚಿತ ಸ್ವರೂಪವಿರಲಿಲ್ಲ. ಆಗ ಶಾಲೆಗಳನ್ನು ತಪಾಸ ಮಾಡುವವರು ವರುಷಕ್ಕೆ ಒಂದೆರಡು ಸಾರೆ ಪುಣೆಯಿಂದಲೇ ಬರುತ್ತಿದ್ದರು. ಈ ಸಂದರ್ಭದಲ್ಲಿ 'ಟೇಕರ' ಎಂಬವರ ಹೆಸರು ದೊರೆಯುತ್ತದೆ. ೧೮೫೮ರ ನಂತರ ಈ ಭಾಗಕ್ಕೆ ಒಬ್ಬ ಇನಸ್ಪೆಕ್ಟರರು ನೇಮಿಸಲ್ಪಟ್ಟು ಆಗಿದ್ದ ಕೆಲವೇ ಶಾಲೆಗಳ ಮೇಲ್ವಿಚಾರಣೆಯು ಅವರಿಂದ ನಡೆಯುತ್ತಿತ್ತು. ಆಗ

ಇನಸ್ಪೆಕ್ಟರರ ಮುಖ್ಯ ಕಚೇರಿಯು ಬೆಳಗಾಂವಿಯಲ್ಲಿದ್ದುದರಿಂದ ಈ ಉಮೇದವಾರರ ವರ್ಗವನ್ನು ಅಲ್ಲಿಗೆ ಸ್ಥಳಾಂತರಿಸಿ, ೧೮೬೧ನೆಯ ಜನೇವರಿ ೭ರಿಂದ ವರ್ಗದ ಕೆಲಸವು ಅಲ್ಲಿಯೇ ನಡೆಯಿತು. ಧಾರವಾಡದಲ್ಲಿ ೧೦ ಉಮೇದವಾರರಿಂದ ಪ್ರಾರಂಭವಾಗಿ ಮರುವರ್ಷ ಅದರ ಸಂಖ್ಯೆ ೨೦ಕ್ಕೆ ಬೆಳೆಯಿತು. ಆದರೆ ವರ್ಗವು ಬೆಳಗಾಂವಿಗೆ ಹೋದ ಮೇಲೆ ಅದರ ಸಂಖ್ಯೆಯು ಪುನಃ ಕಡಿಮೆಯಾಗಿ ೧೫ಕ್ಕೆ ಇಳಿಸಲ್ಪಟ್ಟಿತು. ಅವರ ಶಿಷ್ಯವೇತನವು ಮಾತ್ರ ೩ ರೂಪಾಯಿಗಳಿಂದ ೫ ರೂಪಾಯಿಗಳಿಗೆ ಏರಿಸಲ್ಪಟ್ಟಿತು.

೩ ಹೊಸ ಯೋಜನೆ

೧೮೬೧ರಲ್ಲಿ ೧೫ಕ್ಕೆ ಇಳಿಸಲ್ಪಟ್ಟ ವಿದ್ಯಾರ್ಥಿಗಳ ಸಂಖ್ಯೆಯು ಮರುವರುಷ ಹೆಚ್ಚಾಯಿತು. ಯಾಕೆಂದರೆ ಆ ವರುಷ ಡಾಯರೆಕ್ಟರರಿಂದ ಹೊಸದೊಂದು ಯೋಜನೆಯು ತಯಾರಾಗಿ ಜಾರಿಯಲ್ಲಿ ಬಂದಿತು. ನಾರ್ಮಲ್ ಸ್ಕೂಲದಲ್ಲಿಯ ವಿದ್ಯಾರ್ಥಿಗಳ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದ ಶಿಕ್ಷಕರಾಗಿ ಕೆಲಸ ಮಾಡದಂಥವರಿಗೂ ನಾರ್ಮಲ್ ಸ್ಕೂಲಿನಲ್ಲಿ ಪ್ರವೇಶ ದೊರೆಯುವದೆಂದು ಪ್ರಸಿದ್ಧ ಮಾಡಿದರು. ಇನಸ್ಪೆಕ್ಟರರೂ ಮತ್ತು ಡೆಪ್ಯೂಟಿ ಇನಸ್ಪೆಕ್ಟರರೂ ಹಳ್ಳಿಗಳಲ್ಲಿ ಪ್ರವಾಸ ಮಾಡುವಾಗ ತಮಗೆ ಯೋಗ್ಯಕಂಡ ವಿದ್ಯಾರ್ಥಿಗಳನ್ನು ಕಾಲೇಜಕ್ಕೆ ಕಳಿಸಹತ್ತಿದರು. ಅಂಥವರಿಗೆ ವಿದ್ಯಾರ್ಥಿ ವೇತನವೂ ಸಿಗಹತ್ತಿತು. ಹೀಗಾಗಿ ೧೮೬೩ರಲ್ಲಿ ಈ ನಾರ್ಮಲ್ ಸ್ಕೂಲಿನಲ್ಲಿ ಎರಡು ವರ್ಗಗಳಾದವು. ಈ ವಿದ್ಯಾರ್ಥಿಗಳಲ್ಲಿ ಕೆಲವರು ೬ ತಿಂಗಳವರೆಗೆ ಅಭ್ಯಾಸಮಾಡಿ ತಮ್ಮ ಶಿಕ್ಷಣವನ್ನು ಮುಗಿಸಿ ಹಳ್ಳಿಯ ಶಾಲೆಗಳಿಗೆ ಶಿಕ್ಷಕರಾಗಿ ಹೋಗುತ್ತಿದ್ದರು. ಹೆಚ್ಚು ಬುದ್ಧಿಮತ್ತೆಯುಳ್ಳ ವಿದ್ಯಾರ್ಥಿಗಳನ್ನು ಹೆಚ್ಚಿನ ಅಭ್ಯಾಸಕ್ಕಾಗಿ ಅಲ್ಲಿಯೇ ಇಟ್ಟುಕೊಳ್ಳುತ್ತಿದ್ದರು. ಅಂಥವರು ೧೮ ತಿಂಗಳು ಹೆಚ್ಚಿಗೆ ಅಲ್ಲಿ ಇರಬೇಕಾಗುತ್ತಿತ್ತು. ಅವರು ಗಣಿತ, ವಿಜ್ಞಾನ, ಇತಿಹಾಸ. ಭೂಗೋಲ, ಸಂಸ್ಕೃತ ಮೊದಲಾದ ವಿಷಯಗಳನ್ನು ಆಳವಾಗಿ ಅಭ್ಯಾಸ ಮಾಡಬೇಕಾಗುತ್ತಿತ್ತು. ಈ ಪ್ರಕಾರ ಅಭ್ಯಾಸ ಮಾಡಿದವರನ್ನು ದೊಡ್ಡ ಊರುಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಲು ಕಳಿಸುತ್ತಿದ್ದರು. ಬರಬರುತ್ತ ೩ನೆಯ ವರ್ಗವು ಜೋಡಿಸಲ್ಪಟ್ಟಿತು. ಹೀಗಾಗಿ ಅಲ್ಲಿಯ ಶಿಕ್ಷಣ ಮಟ್ಟ ಕ್ರಮೇಣ ಹೆಚ್ಚಾಗುತ್ತ ನಡೆಯಿತು. ಶಿಕ್ಷಕರಾಗಿ ಕೆಲಸ ಮಾಡಲು ಒಪ್ಪಿ, ನಾರ್ಮಲ್ ಸ್ಕೂಲಿಗೆ ಬಂದವರಿಗೆ ವಿದ್ಯಾರ್ಥಿ ವೇತನ ದೊರೆಯುತ್ತಿತ್ತು. ಅಂಥವರು ಶಿಕ್ಷಣ ಪದ್ಧತಿಯನ್ನು ಕಲಿಯುತ್ತಿದ್ದರಲ್ಲದೆ ಮುಂದೆ ಪ್ರ್ಯಾಕ್ಟಿಸಿಂಗ ಸ್ಕೂಲ ಜೋಡಿಸಲ್ಪಟ್ಟನಂತರ ಅಲ್ಲಿ ದಿನಾಲು ಒಂದು ತಾಸಿನವರೆಗೆ ಕಲಿಸುವ ರೂಢಿಯನ್ನು ಮಾಡಬೇಕಾಗುತ್ತಿತ್ತು.

೪ ನಾರ್ಮಲ್ ಸ್ಕೂಲಿನ ಪರಿಸ್ಥಿತಿ

೧೮೬೫ ನೆಯ ಇಸ್ವಿಯ ಆಜ್ಞೆಯ ಪ್ರಕಾರ ಮುಂಬಯಿ ರಾಜ್ಯದಲ್ಲಿ ಎಲ್ಲ ನಾರ್ಮಲ್ ಸ್ಕೂಲುಗಳ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದಂತೆ ಕಂಡರೂ ಬೆಳಗಾಂವಿಯ ನಾರ್ಮಲ್ ಸ್ಕೂಲಿನಲ್ಲಿ ಆ ಹುಕುಮಿನಿಂದ ಅಷ್ಟೇನೂ ಪರಿಣಾಮವಾಗಲಿಲ್ಲ. ಆಗಿನ ವರದಿಗಳನ್ನು ನೋಡಲಾಗಿ, ಆ ನಾರ್ಮಲ್ ಸ್ಕೂಲಿಗೆ ಬರಲಿಚ್ಛಿಸುವ ವಿದ್ಯಾರ್ಥಿಗಳ ಸಂಖ್ಯೆ ತೀರ ಕಡಿಮೆ. ಆಗ ಶಿಕ್ಷಣ ಕೆಲಸಕ್ಕೆ ಆಕರ್ಷಿಸಲ್ಪಟ್ಟ ಕನ್ನಡ ತರುಣರು ಸಾಕಷ್ಟಿರಲಿಲ್ಲವೆಂದೆನ್ನಬೇಕು. ಯಾಕೆಂದರೆ ೧೮೫೭ ರಿಂದ ೧೮೬೩ರ ವರೆಗೆ ಈ ನಾರ್ಮಲ್ ಸ್ಕೂಲಿನಲ್ಲಿ ಹೆಚ್ಚಾಗಿ ಮರಾಠಿ ಉಮೇದವಾರರು ಇದ್ದರೆಂದೂ ಅವರಿಂದಲೇ ಆ ಸ್ಕೂಲಿಗೆ ಜೀವದಾನ ದೊರೆತಿತ್ತೆಂದೂ ಕಾಣುತ್ತದೆ. ಹಾಗಿರುವದರಲ್ಲಿ ಆಶ್ಚರ್ಯವೇನೂ ಇದ್ದಿಲ್ಲ. ಯಾಕೆಂದರೆ ಕನ್ನಡ ತರುಣರಿಗೆ ಶಿಕ್ಷಕರಾಗಬೇಕೆಂದು ಹವ್ಯಾಸವಿರಲಿಲ್ಲ, ಹೀಗಿದ್ದಾಗ ಅವರನ್ನು ಆ ನಾರ್ಮಲ್ ಸ್ಕೂಲ ಆಕರ್ಷಿಸುವದೆಂತು? ಆದುದರಿಂದ ರತ್ನಾಗಿರಿ ಕಡೆಯ ಕೊಂಕಣದ ಉಮೇದವಾರರಿಗೆ ಅಲ್ಲಿ ಪ್ರವೇಶ ಕೊಡಲಾಯಿತು. ಆಗ ನಾರ್ಮಲ್ ಸ್ಕೂಲಿನಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಶ್ರೀ ವೆಂಕಟ ರಂಗೋ ಕಟ್ಟಿಯವರು, ಅವರ ಮಾತೃಭಾಷೆ ಕನ್ನಡವಾಗಿದ್ದರೂ ಪುಣೆಯಲ್ಲಿ ಮರಾಠಿ ನಾರ್ಮಲ್ ಸ್ಕೂಲಿನಲ್ಲಿ ಅಭ್ಯಾಸ ಮಾಡಿದವರೂ ಅಲ್ಲಿಯೇ ಕೆಲವು ವರುಷ ಶಿಕ್ಷಕರಾಗಿ ಕೆಲಸ ಮಾಡಿದವರೂ ಆಗಿದ್ದುದರಿಂದ ಬೆಳಗಾಂವಿ ನಾರ್ಮಲ್ ಸ್ಕೂಲಿನಲ್ಲಿ ಮರಾಠಿ ಉಮೇದವಾರರಿಗೆ ಅಭ್ಯಾಸ ಮಾಡಲು ಅನಾನುಕೂಲವಾಗಿರಲಿಲ್ಲ. ಕನ್ನಡ ಶಾಲೆಗಳಿಗೆ ಶಿಕ್ಷಕರನ್ನು ತಯಾರಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಈ ತರಬೇತಿ ಕೇಂದ್ರದಲ್ಲಿ ಕನ್ನಡ ಉಮೇದವಾರರಿಲ್ಲದಿರುವದು ದುರ್ದೈವದ ಸಂಗತಿ! ಹೀಗಾಗಿ ಕನ್ನಡಿಗರ ಪಾಲಿಗೆ ಆ ನಾರ್ಮಲ್ ಸ್ಕೂಲ ಇದ್ದೂ ಇಲ್ಲದಂತಾಗಿತ್ತು! ಇಂಥ ಚಿಂತಾಜನಕ ಸ್ಥಿತಿಯಲ್ಲಿದ್ದ ನಾರ್ಮಲ್ ಸ್ಕೂಲನ್ನು ಉಳಿಸಿ ಅದನ್ನು ಕನ್ನಡ

ಶಿಕ್ಷಕರಿಗೆ ಉಪಯೋಗಿಸಿಕೊಳ್ಳುವದೊಂದು ದೊಡ್ಡ ಸಮಸ್ಯೆಯಾಗಿತ್ತೆಂದು ಸಹಜವಾಗಿ ಕಾಣುತ್ತದೆ.

೫ ನಾರ್ಮಲ್ ಸ್ಕೂಲಿನ ಅಭಿವೃದ್ಧಿ

೧೮೬೪ರ ಜನೇವರಿ ತಿಂಗಳಲ್ಲಿ ಧಾರವಾಡದವರೂ ಕಟ್ಟಾ ಕನ್ನಡಾಭಿಮಾನಿಗಳೂ ಆದ ಶ್ರೀ ಚನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರು ಆ ಸಂಸ್ಥೆಯ ಪ್ರಿನ್ಸಿಪಾಲರೆಂದು ನೇಮಿಸಲ್ಪಟ್ಟರು. ಮುಂದೆ ಈ ಮಹಾನುಭಾವರೇ ಡೆಪ್ಯೂಟಿ ಚನ್ನಬಸಪ್ಪನವರೆಂದು ಪ್ರಸಿದ್ಧರಾಗಿ ಕನ್ನಡ ಕುಲೋದ್ಧಾರದ ಅಡಿಗಲ್ಲನ್ನಿಟ್ಟರು. ಇವರು ಪುಣೆ ಎಂಜಿನೀಯರಿಂಗ್ ಕಾಲೇಜದಲ್ಲಿ ಉನ್ನತ ಪರೀಕ್ಷೆಯಲ್ಲಿ ಗೌರವ ಸ್ಥಾನಪಡೆದು, ಪಾಸಾಗಿ ಆ ಕಾಲೇಜದಲ್ಲಿಯೇ ಪ್ರಾಧ್ಯಾಪಕರಾಗಿ ಕೆಲವು ಕಾಲ ಕೆಲಸ ಮಾಡಿದರು. ಇವರು ಬೆಳಗಾಂವಿಯ ನಾರ್ಮಲ್ ಸ್ಕೂಲಿನ ಪ್ರಿನ್ಸಿಪಾಲರಾಗಿ ಕೆಲಸ ಮಾಡಲು ದೊರೆತಿದ್ದುದು ಕನ್ನಡ ನಾಡಿನ ಭಾಗ್ಯವೆಂದೇ ಹೇಳಬೇಕು. ಇವರು ಆ ಸ್ಕೂಲಿನ ಸ್ಥಿತಿಯ ಬಗೆಗೆ ಹೀಗೆ ಬರೆಯುತ್ತಾರೆ:– "ನಾನು ೧೮೬೪ರ ಜಾನೇವಾರಿ ತಿಂಗಳ ೨೧ರಂದು ಇಲ್ಲಿ ಹಾಜರ ಆದಾಗ ೧೨ ಹಾಗೂ ೧೪ ಜನ ವಿದ್ಯಾರ್ಥಿಗಳ ಎರಡು ವರ್ಗಗಳಿದ್ದವು. ಇವರಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳು ಕೊಂಕಣಿಗಳಾಗಿದ್ದು ಅವರಲ್ಲಿ ಕೆಲವರು ಒಂದು ವರ್ಷದ ವರೆಗೆ ಶಾಲೆಯಲ್ಲಿದ್ದರೂ ಮೊದಲಿನ ೯ ಅಂಕಿಗಳನ್ನು ಎಣಿಸಲು ಸಹ ಬಾರದಿರುವದು ನನಗೆ ಆಶ್ಚರ್ಯಕರವಾಗಿ ತೋರಿತು. ಕನ್ನಡ ಶಿಕ್ಷಕರನ್ನು ತಯಾರಿಸುವ ಈ ಸಂಸ್ಥೆಯಲ್ಲಿ ಇಂಥವರಿಗೆ ಹೇಗೆ ಪ್ರವೇಶ ದೊರೆಯಿತೆಂಬದು ತಿಳಿಯದಾಯಿತು. ವಿಚಾರಿಸಲಾಗಿ ಕನ್ನಡ ಮಾತೃಭಾಷೆಯಾದ ಯೋಗ್ಯ ಉಮೇದವಾರರು ಸಿಗುವದು ಕಠಿಣವಾಗಿತ್ತೆಂದು ಕಾಣಿಸಿತು. ಆದರೆ ನಾನು ಇಲ್ಲಿಗೆ ಬಂದನಂತರ ಶುದ್ಧ ಕನ್ನಡಿಗರಾದ ೨೫ ಉಮೇದವಾರರು ದೊರೆತರೆಂದು ಹೇಳಲು ಸಂತೋಷವೆನಿಸುತ್ತದೆ.

ಆಗ ಡೆಪ್ಯೂಟಿ ಚನ್ನಬಸಪ್ಪನವರಿಗೆ ಮುಖ್ಯವಾಗಿ ಎರಡು ಸಮಸ್ಯೆಗಳು ಎದುರಿಸಿದಂತೆ ಕಾಣುತ್ತದೆ:– ೧. ಜನಸಾಮಾನ್ಯರಲ್ಲಿ ಶಿಕ್ಷಣದ ಬಗೆಗೆ ಜಾಗ್ರತಿಯುಂಟಾಗಿ ಯೋಗ್ಯ ತರುಣರು ಶಿಕ್ಷಕರಾಗಿ ಕೆಲಸ ಮಾಡಲು ಮುಂದೆ ಬರುವದು. ೨. ನಾರ್ಮಲ್ ಸ್ಕೂಲಿಗೆ ಬಂದ ವಿದ್ಯಾರ್ಥಿಗಳ ಶಿಕ್ಷಣ ಸರಿಯಾಗಿ ಸಾಗಿ ನಾರ್ಮಲ್ ಸ್ಕೂಲನ್ನು ಬೆಳಿಸಿ ಅದರ ಸ್ಥಾನ–ಮಾನಗಳನ್ನು ಹೆಚ್ಚಿಸುವದು. ಅವರು ಬಹಳ ಶ್ರಮಬಟ್ಟು ಇವೆರಡನ್ನೂ ಸಾಧಿಸಿದರು. ಅವರು ಅಲ್ಲಿಗೆ ಬಂದಂದಿನಿಂದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತ ನಡೆಯಿತಲ್ಲದೆ ಸ್ವಲ್ಪ ಕಾಲದಲ್ಲಿಯೇ ಅಲ್ಲಿ ಕನ್ನಡ ವಿದ್ಯಾರ್ಥಿಗಳಿಗೆ ಮಾತ್ರ ಪ್ರಾಶಸ್ತ್ಯ ಸಿಗುವಂತೆ ಮಾಡಿದರು. ಆಗ ಕಾಲೇಜದಲ್ಲಿ ಓದು, ಬರಹ ಮತ್ತು ಲೆಖ್ಖ ಇವೇ ಮುಖ್ಯ ವಿಷಯಗಳಾಗಿದ್ದವು. ಇವುಗಳ ಜ್ಞಾನವು ಚನ್ನಾಗಿ ಆಗುವಂತೆ ಡೆ. ಚನ್ನಬಸಪ್ಪನವರು ನೋಡಿಕೊಂಡರು.

೬ ಮಠಪತ್ರಿಕೆಯ ಪ್ರಾರಂಭ

ಈ ಕಾಲೇಜ ಹಾಗು ಶಿಕ್ಷಣದ ಬಗೆಗೆ ಪ್ರಚಾರ ಕೆಲಸವನ್ನು ಕೈಕೊಂಡರು. ಆಗಿದ್ದ ಹಲ–ಕೆಲವು ಶಾಲೆಗಳಲ್ಲಿಯ ಶಿಕ್ಷಕರಿಗೆ ತಮ್ಮ ದೈನಂದಿನ ಕೆಲಸದಲ್ಲಿ ಸಹಾಯವಾಗುವಂತೆ ಸೂಚನೆಗಳನ್ನು ಕಳಿಸಿ ಮಾರ್ಗದರ್ಶನ ಮಾಡಿದರು. ೧೮೬೪ರಲ್ಲಿ ವಿದ್ಯಾಖಾತೆಯವರಿಂದ ಪ್ರಾರಂಭಿಸಲ್ಪಟ್ಟ "Bombay Educational Record" ಎಂಬ ಮಾಸಿಕ ಪತ್ರಿಕೆಯನ್ನೇ ಆಧಾರವಾಗಿಟ್ಟುಕೊಂಡು ಪ್ರಿನ್ಸಿಪಾಲರಾದ ಶ್ರೀ ಚನ್ನಬಸಪ್ಪನವರೂ ಅವರ ಸಹಾಯಕರಾದ ಶ್ರೀ ಗಂಗಾಧರ ಮಡಿವಾಳೇಶ್ವರ ತೂರಮರಿಯವರೂ ಕೂಡಿ ಈಗ "ಜೀವನ ಶಿಕ್ಷಣ"ವೆಂಬ ಹೆಸರಿನಿಂದ ಪ್ರಕಟವಾಗುತ್ತಿರುವ ಮಾಸಿಕವನ್ನು ಪ್ರಾರಂಭಿಸಿದರು. ಅದರ ಮೊಟ್ಟಮೊದಲಿನ ಸಂಚಿಕೆಯು "ಮಠಪತ್ರಿಕೆ" ಎಂಬ ಅರ್ಥಗರ್ಭಿತವಾದ ಹೆಸರಿನಿಂದ ೧೮೬೫ನೆಯ ಮೇ ತಿಂಗಳ ದಿನಾಂಕ ೧ರಂದು ಹೊರಬಂದಿತು. ಇದರ ಮುಖಾಂತರ ಶಿಕ್ಷಣ ಖಾತೆಗೆ ಸಂಬಂಧಿಸಿದ ಎಲ್ಲ ಸುದ್ದಿ ಸಮಾಚಾರಗಳನ್ನು ಶಿಕ್ಷಕರಿಗೆ ಕೊಡಲಾಗುತ್ತಿತ್ತು. ಡೆ. ಚನ್ನಬಸಪ್ಪನವರು ಪುಣೆಯ ಎಂಜನೀಯರಿಂಗ ಕಾಲೇಜದಲ್ಲಿ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ಬಂದವರಾಗಿದ್ದರಿಂದಲೂ ಆಗ ಪುಣೆಯಲ್ಲಿದ್ದ ಮರಾಠಿ ಟ್ರೇನಿಂಗ ಕಾಲೇಜಕ್ಕೆ ಉನ್ನತ ಗೌರವ ಸ್ಥಾನ ಕೊಡಲ್ಪಟ್ಟಿದ್ದರಿಂದಲೂ ಬೆಳಗಾವಿಯ ನಾರ್ಮಲ್ ಸ್ಕೂಲನ್ನು ಸಹ ಪುಣೆಯ ಮರಾಠಿ ಟ್ರೇನಿಂಗ ಕಾಲೇಜದ ದರ್ಜೆಗೆ ಎತ್ತರಿಸಬೇಕೆಂದು ತಮ್ಮ ಮೇಲಧಿಕಾರಿಗಳಿಗೆ ಒತ್ತಾಯ ಮಾಡಿದರು. ಇದರ ಪರಿಣಾಮವಾಗಿ ೧೮೬೪ ಮತ್ತು ೧೮೬೫ರಲ್ಲಿ ಬೆಳಗಾವಿ ನಾರ್ಮಲ್ ಸ್ಕೂಲನ್ನು ಕಾಲೇಜ ಎಂಬ ಹೆಸರಿನಿಂದ ಕರೆಯುವ ರೂಢಿ ಬಿದ್ದು

೧೮೬೬ರಲ್ಲಿ ಆ ಬಗೆಗೆ ಅಧಿಕೃತವಾದ ಅಜ್ಞೆಯೂ ಸರಕಾರದಿಂದ ಬಂದಿತು. ಒಳ್ಳೇ ಅಸಮಾಧಾನಕರವಾದ ಪರಿಸ್ಥಿತಿಯಲ್ಲಿದ್ದ ನಾರ್ಮಲ್ ಸ್ಕೂಲನ್ನು ಉಳಿಸಿದ ಹಾಗೂ ಅಲ್ಲಿ ಅಭ್ಯಾಸ ಮಾಡಲು ಕನ್ನಡ ತರುಣರೇ ಬರುವಂತೆ ಮಾಡಿದ ಪೂರ್ಣ ಶ್ರೇಯಸ್ಸು ಡೆಪ್ಯೂಟಿ ಚನ್ನಬಸಪ್ಪನವರಿಗೆ ಸಲ್ಲುತ್ತವೆ. ಮೇಲಧಿಕಾರಿಗಳಕೂಡ ಪತ್ರವ್ಯವಹಾರ ನಡೆಸಿ ನಾರ್ಮಲ್ ಸ್ಕೂಲಿಗೆ ಕಾಲೇಜದ ದರ್ಜೆಯನ್ನು ತಂದುಕೊಟ್ಟ ಶ್ರೇಯಸ್ಸು ಅವರದೇ. "ಜೀವನ ಶಿಕ್ಷಣ"ದ ಪ್ರಾರಂಭದ ಪತ್ರಿಕೆಯಾದ"ಮಠ ಪತ್ರಿಕೆ"ಯ ಪ್ರಪ್ರಥಮ ಸಂಚಾಲಕರೂ ಅವರೇ. ಹೀಗೆ ಕಾಲೇಜಿನ ಉಜ್ವಲ ಭವಿಷ್ಯತ್ತಿನ ಭದ್ರವಾದ ತಳಹದಿಯನ್ನು ಹಾಕಿ ಕನ್ನಡಿಗರಲ್ಲಿ ತಮ್ಮ ಮಾತೃಭಾಷೆಯ ಅಭಿಮಾನ, ಕನ್ನಡ ಸಾಹಿತ್ಯದ ಅಭಿವೃದ್ಧಿ ಹಾಗೂ ಕನ್ನಡ ಶಿಕ್ಷಣದ ಪ್ರಸಾರ ಇವೆಲ್ಲ ಮಹಾಕಾರ್ಯಗಳನ್ನು ಸಾಧಿಸುವ ಪ್ರಯತ್ನದಲ್ಲಿ ತಮ್ಮ ಪ್ರಾಣಾರ್ಪಣಮಾಡಿ ಕನ್ನಡಿಗರಿಗೆ ಮಹದುಪಕಾರ ಮಾಡಿದ್ದಾರೆ. ಅವರು ೧೮೬೬ರಲ್ಲಿ ಬೆಳಗಾವಿಯ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ವರ್ಗಾಯಿಸಲ್ಪಟ್ಟ ನಂತರ ಹೊನ್ನಾವರ ಇಂಗ್ಲೀಷ ಶಾಲೆಯಲ್ಲಿ ಶಿಕ್ಷಕರಾಗಿದ್ದ ಶ್ರೀ ವೆಂಕಟ ರಂಗೋ ಕಟ್ಟಿಯವರು ತಾತ್ಪೂರ್ತಿಕ ಪ್ರಿನ್ಸಿಪಾಲರೆಂದು ನೇಮಿಸಲ್ಪಟ್ಟರು. ೧೮೬೭ರಲ್ಲಿ ಶ್ರೀ ಕಟ್ಟಿಯವರು ಕನ್ನಡ ಟ್ರಾನ್ಸಲೇಟರರೆಂದು ನೇಮಿಸಲ್ಪಟ್ಟು ಅಲ್ಲಿಯೇ ವ್ಹಾಯಿಸ್ ಪ್ರಿನ್ಸಿಪಾಲರಾಗಿದ್ದರು. ಶ್ರೀ ಬಿ. ಕೆ. ಹುಯಿಲಗೋಳಕರರು ಪ್ರಿನ್ಸಿಪಾಲರೆಂದು ನೇಮಣೂಕ ಹೊಂದಿದರು. ಮೊದಲು ಟ್ರಾನ್ಸಲೇಟರರೆಂದು ಕೆಲಸಮಾಡುತ್ತಿದ್ದ ಶ್ರೀ ಗಂಗಾಧರ ಮಡಿವಾಳೇಶ್ವರ ತೂರಮರಿಯವರು ಮುಂದೆ ಅಸಿಸ್ಟಂಟ ಕನ್ನಡ ಟ್ರಾನ್ಸಲೇಟರರೆಂದು ಕೆಲಸಮಾಡಹತ್ತಿದರು.

೭ ರಸೆಲ್ ಸಾಹೇಬರ ಆಗಮನ

ಬೆಳಗಾಂವ ಜಿಲ್ಲೆಯ ಡೆಪ್ಯೂಟಿ ಇನಸ್ಪೆಕ್ಟರರಾದ ಮೇಲೆ ಡೆ. ಚನ್ನಬಸಪ್ಪನವರು ಶಿಕ್ಷಣ ಪ್ರಸಾರ ಕಾರ್ಯವನ್ನು ಒಳ್ಳೇ ಜೋರಿನಿಂದ ಸಾಗಿಸಿದರು. ಕನ್ನಡ ಸಾಹಿತ್ಯದ ಬಗೆಗೆ ಅವರಿಗೆ ತುಂಬಾ ನಿಷ್ಠೆ. ಆಗ ಈ ಭಾಗದಲ್ಲಿ ಮರಾಠಿ ಭಾಷೆಯ ವರ್ಚಸ್ಸು ಬಹಳ ಕಡೆಗೆ ವ್ಯಾಪಿಸಿತ್ತು. ಅದರ ಪ್ರಾಬಲ್ಯವನ್ನು ನ್ಯಾಯವಾದ ರೀತಿಯಲ್ಲಿ ಕಡಿಮೆ ಮಾಡಿ ಕನ್ನಡ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಲು ಹಗಲಿರುಳು ದುಡಿದರು. ಕನ್ನಡ ಪಠ್ಯಪುಸ್ತಕಗಳ ಅಭಾವವಿರುವಾಗ ಶ್ರೀ ಗಂಗಾಧರ ಮಡಿವಾಳೇಶ್ವರ ತೂರಮರಿ, ಶ್ರೀ ವೆಂಕಟ ರಂಗೋ ಕಟ್ಟಿ ಹಾಗೂ ಶ್ರೀ ಶಾಂತವೀರ ಕಿತ್ತೂರ ಇವರ ಸಹಾಯದಿಂದ ಪಠ್ಯಪುಸ್ತಕಗಳನ್ನೂ ಉದ್ಗ್ರಂಥಗಳನ್ನೂ ತಯಾರಿಸಿಕೊಂಡರು. ನಾರ್ಮಲ್ ಸ್ಕೂಲಿನ ಸ್ಥಾನಮಾನಗಳು ಸುಧಾರಿಸಿದಂತೆ ಅಲ್ಲಿಯ ವಿದ್ಯಾರ್ಥಿಗಳಿಗೆ ಸಿಗುವ ವೇತನವೂ ೫ ರೂ.ಗಳಿಂದ ೭ ರೂ.ಗಳವರೆಗೆ ಹೆಚ್ಚಿಸಲ್ಪಟ್ಟಿತು. ೧೮೬೬ನೆಯ ಎಪ್ರಿಲ್ ತಿಂಗಳಲ್ಲಿ ೪೭ ಹಾಗೂ ೧೮೬೭ನೆಯ ಎಪ್ರಿಲ್ ತಿಂಗಳಲ್ಲಿ ೪೯ ಜನ ವಿದ್ಯಾರ್ಥಿಗಳಿದ್ದರು.

೧೮೬೬–೧೮೬೭ನೆಯ ವರುಷದಲ್ಲಿ ೩ ವರ್ಗಗಳಿದ್ದವು. ಉಳಿದ ವಿಷಯಗಳೊಡನೆ ಮರಾಠಿಯನ್ನೂ ಕಲಿಸುತ್ತಿದ್ದರು. ವಿದ್ಯಾರ್ಥಿಗಳು ತಮ್ಮ ಅಭ್ಯಾಸವನ್ನು ಮುಗಿಸಿ ಶಾಲೆಗಳಿಗೆ ಹೋದಮೇಲೆ ಕನಿಷ್ಟಪಕ್ಷ ೩ ವರುಷಗಳವರೆಗಾದರೂ ಶಿಕ್ಷಕರಾಗಿ ಕೆಲಸಮಾಡುವ ನಿರ್ಬಂಧವಿತ್ತು. ೧೮೬೪ರಿಂದ ಕನ್ನಡ ತರುಣರು ಹೆಚ್ಚುಹೆಚ್ಚಾಗಿ ಕಾಲೇಜಕ್ಕೆ ಬಂದಂತೆ ಮರಾಠಿ ಉಮೇದವಾರರ ಸಂಖ್ಯೆ ಕಡಿಮೆಯಾಗಹತ್ತಿತು. ೧೮೬೫ರಿಂದ ಈ ಭಾಗದಲ್ಲಿ ಇನಸ್ಪೆಕ್ಟರರೆಂದು ಕೆಲಸಮಾಡುತ್ತಿದ್ದ ರಸೆಲ್ ಸಾಹೇಬರು ಕನ್ನಡ ಭಾಷೆಯ ಶೋಚನೀಯ ಸ್ಥಿತಿಯನ್ನು ಕಂಡು ಅದನ್ನುದ್ಧರಿಸಲು ನಿಶ್ಚಯಿಸಿ ಆ ಪವಿತ್ರ ಕಾರ್ಯದಲ್ಲಿ ತನು–ಮನ–ಧನಗಳಿಂದಲೂ ಶ್ರಮಿಸಿದರು. ರಸೆಲ್ ಸಾಹೇಬರು ಆ ಬಗೆಗೆ ೧೮೬೫–೧೮೬೬ನೆಯ ವರುಷದ ವರದಿಯಲ್ಲಿ ಕೆಳಗಿನಂತೆ ಬರೆಯುತ್ತಾರೆ:—

ಮಹಾರಾಷ್ಟ್ರ ಹಾಗೂ ಗುಜರಾಥಗಳಲ್ಲಿ ಮರಾಠಿ ಹಾಗೂ ಗುಜರಾಥಿ ಭಾಷೆಗಳಿಗಿರುವ ಸ್ಥಾನವನ್ನು ಈ ಭಾಗದಲ್ಲಿ ಕನ್ನಡಕ್ಕೆ ಸಾಗುವಂತೆ ಮಾಡುವದೊಂದು, ಹೋದ ವರುಷ (ಮುಂಬರುವ ಕೆಲವು ಕಾಲದ ವರೆಗೂ) ನಾನು ಇಟ್ಟುಕೊಂಡ ಗುರಿಗಳಲ್ಲೊಂದಾಗಿತ್ತು. ಅದನ್ನು ಸಾಧಿಸಲು ಕೆಳಗಿನ ಕ್ರಮವನ್ನು ತೆಗೆದುಕೊಳ್ಳಲಾಯಿತು. ಮೊದಲಿದ್ದ ಡೆಪ್ಯೂಟಿ ಇನಸ್ಪೆಕ್ಟರರ ಬದಲು ಬೆಳಗಾವಿ ಹಾಗೂ ಕಾರವಾರ ಜಿಲ್ಲೆಗಳಿಗೊಬ್ಬ ಶುದ್ಧ ಕನ್ನಡಿಗನನ್ನು ನೇಮಿಸಲಾಯಿತು. ಡೆಪ್ಯೂಟಿ ಇನಸ್ಪೆಕ್ಟರರೆಂದು ನೇಮಿಸಲ್ಪಟ್ಟ ಡೆಪ್ಯೂಟಿ ಚನ್ನಬಸಪ್ಪನವರೇ ಮೊದಲಿನ ಕನ್ನಡಿಗರು. ರಸೆಲ್ ಸಾಹೇಬರು ನಾರ್ಮಲ್ ಸ್ಕೂಲನ್ನು ಟ್ರೇನಿಂಗ ಕಾಲೇಜದ ದರ್ಜೆಗೆ ಎತ್ತರಿಸುವ ವಿಷಯದಲ್ಲಿ ಡೆ. ಚನ್ನಬಸಪ್ಪನವರ ಪ್ರಯತ್ನಗಳಿಗೆ ಪೂರ್ಣ ಬೆಂಬಲಿಸುತ್ತಿದ್ದರು. ಮತ್ತು ಒಳ್ಳೇ ಸಮರ್ಥ

ರಾದ ಕನ್ನಡ ಶಿಕ್ಷಕರನ್ನು ನೇಮಿಸಿ ಕಾಲೇಜದಲ್ಲಿ ಶಿಕ್ಷಣ ಸರಿಯಾಗಿ ಸಾಗಲು ಅವಶ್ಯವಿದ್ದ ಸಾಮುಗ್ರಿಗಳನ್ನು ಒದಗಿಸಿಕೊಟ್ಟರು. ವಿದ್ಯಾರ್ಥಿಗಳಿಗೆ ಪಾಠಗಳನ್ನು ಕಲಿಸುವ ರೂಢಿಯಾಗಲೆಂದು ಬೆಳಗಾವಿಯ ಶಾಲೆಗಳಲ್ಲಿ ವಿದ್ಯಾರ್ಥಿಗಳು ಪಾಠಗಳನ್ನು ಕೊಡುವ ವ್ಯವಸ್ಥೆಮಾಡಿದರು.

೮ ಅಭ್ಯಾಸಪತ್ರಿಕೆಯಲ್ಲಿ ಬದಲಾವಣೆ

ಈ ಯೋಜನೆಯು ೧೮೬೯ರ ವರೆಗೆ ನಡೆದು ಮುಂದೆ ಕಾಲೇಜಗಳ ಅಭ್ಯಾಸ ವಿಷಯಗಳಲ್ಲಿ ಹಲಕೆಲವು ಬದಲಾವಣೆಗಳಾದವು. ಆಗಿನ ಡಾಯರೆಕ್ಟರರಾದ ಸರ್ ಅಲೆಕ್ಝಾಂಡರ ಗ್ರ್ಯಾಂಟ ಇವರ ಅಭಿಪ್ರಾಯದಲ್ಲಿ ಕಾಲೇಜುಗಳಲ್ಲಿ ಇಂಗ್ಲೀಷ ಅಭ್ಯಾಸವನ್ನು ಮಾಡಿಸುವದು ಅವಶ್ಯವೆನಿಸಿತು. ಆದುದರಿಂದ ಅಲ್ಲಿ ದೇಶಭಾಷೆಯ ಅಭ್ಯಾಸಕ್ಕೆ ಪ್ರಾಶಸ್ತ್ಯ ದೊರೆಯುವಂತೆ ಯೋಚಿಸಲಾಯಿತು. ೧೮೬೯ರಲ್ಲಿ ಡಾಯರೆಕ್ಟರರಾಗಿ ಬಂದ ಸರ್ ಜೆ. ಬಿ. ಪೀಲರೂ ಟ್ರೇನಿಂಗ ಕಾಲೇಜಗಳಿಗೆ ಸಮ್ಬಂಧಿಸಿದ ಕಾಯದೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದರು.

ವೇತನದ ಪ್ರಮಾಣವನ್ನು ೧–೨–೩ ವರ್ಗಗಳಿಗೆ ಕ್ರಮವಾಗಿ ೫–೬–೭ ರೂಪಾಯಿಗಳೆಂದು ಗೊತ್ತುಮಾಡಿದರು. ದೇಶಭಾಷೆಯಲ್ಲಿ ೫ ವರ್ಗಗಳನ್ನು ಮುಗಿಸಿದ ಉಮೇದವಾರರಿಗೆ ಪ್ರವೇಶ ಪರೀಕ್ಷೆಯನ್ನಿಟ್ಟು ಅದರಲ್ಲಿ ಪಾಸಾದವರನ್ನು ಮಾತ್ರ ಟ್ರೇನಿಂಗ ಕಾಲೇಜದಲ್ಲಿ ತೆಗೆದುಕೊಳ್ಳುತ್ತಿದ್ದರು. ವಿದ್ಯಾರ್ಥಿ ವೇತನವನ್ನು ಪಡೆದವರು ತಮ್ಮ ಟ್ರೇನಿಂಗ ಮುಗಿದ ಮೇಲೆ ಕೆಲವು ವರುಷ ಕೆಲಸ ಮಾಡಲು ಕರಾರ ಪತ್ರಗಳನ್ನು ಬರಕೊಡಬೇಕಾಯಿತು. ಮೊದಲನೆಯ ವರ್ಗದಲ್ಲಿ ಪ್ರಾಥಮಿಕ ಶಾಲೆಗಳ ೫ ವರ್ಗಗಳ ಉಜಳಣಿಯಾಗುತ್ತಿತ್ತು. ಈ ವರ್ಗಕ್ಕೆ ಪೂರ್ವ ತಯಾರಿ ವರ್ಗವೆನ್ನುತ್ತಿದ್ದರು. ಇದಾದ ಮೇಲೆ ಒಂದನೆಯ ವರುಷದ ವರ್ಗಕ್ಕೆ, ಸುಲಭವಾದ ಗಣಿತ, ಕನ್ನಡ, ಸಂಸ್ಕೃತ, ಇತಿಹಾಸ, ಭೂಗೋಲ, ಜೋತಿಷ್ಯಶಾಸ್ತ್ರ, ಭೂರಚನಾಶಾಸ್ತ್ರ, ಶಿಕ್ಷಣ ಪದ್ಧತಿ, ಡ್ರಾಯಿಂಗ ಮತ್ತು ತಾಲೀಮು ಈ ವಿಷಯಗಳನ್ನು ಕಲಿಸುವದಲ್ಲವೆ ಶಾಲೆಗಳಲ್ಲಿಯ ನಾಲ್ಕು ವರ್ಗಗಳಲ್ಲಿ ಕಲಿಸುವ ರೂಢಿಯನ್ನು ಮಾಡಿಸುತ್ತಿದ್ದರು. ಎರಡನೆ ವರುಷದ ವರ್ಗದವರು ಮೇಲೆ ಹೇಳಿದ ವಿಷಯಗಳ ಹೆಚ್ಚಿನ ಅಭ್ಯಾಸ ಮುಗಿಸಿ ಹೊರಗೆ ಹೋಗುವ ತರಬೇತಿ ಹೊಂದಿದ ಶಿಕ್ಷಕರಲ್ಲಿ ಎರಡು ವರ್ಗಗಳಾದವು. ೧೮೬೯ನೆಯ ವರುಷದ ತರವಾಯ ತರಬೇತಿ ಹೊಂದದ ಶಿಕ್ಷಕರು ಕಾಲೇಜದ ಸರ್ಟಿಫಿಕೇಟನ್ನು ಪಡೆಯದಿದ್ದರೆ ಅವರು ಕೆಲಸದಲ್ಲಿ ಉಳಿಯಲನರ್ಹರಾಗಿದ್ದರು. ಈ ಹೊಸ ವ್ಯವಸ್ಥೆಯ ಪರಿಣಾಮವಾಗಿ ಕಾಲೇಜದಲ್ಲಿ ಕೆಲಸ ಬೆಳೆಯಿತು ಆದುದರಿಂದ ಅಲ್ಲಿಯ ಶಿಕ್ಷಕರ ಸಂಖ್ಯೆಯನ್ನು ಬೆಳೆಸಿದರು.

೯ ಅಭ್ಯಾಸ ಪತ್ರಿಕೆಯಲ್ಲಿ ಹೊಸ ವಿಷಯಗಳ ಸೇರ್ಪಡೆ

೧೮೭೧ರ ನಂತರ ಮುಸಲ್ಮಾನ ವಿದ್ಯಾರ್ಥಿಗಳಿಗೆ ಉರ್ದು ವಿಷಯವನ್ನು ಕಲಿಸಲು ಒಬ್ಬ ಉರ್ದು ಶಿಕ್ಷಕನನ್ನು ನೇಮಿಸಿದ್ದರಿಂದ ಉರ್ದು ವಿದ್ಯಾರ್ಥಿಗಳಿಗೆ ಕಾಲೇಜಕ್ಕೆ ಬರಲು ಉತ್ತೇಜನ ದೊರೆಯಿತು. ಅದೇ ರೀತಿ ಸಂಸ್ಕೃತವನ್ನು ಕಲಿಸಲು ಒಬ್ಬ ಸಂಸ್ಕೃತ ಶಿಕ್ಷಕನನ್ನು ನೇಮಿಸಲಾಯಿತು.

೧೮೭೦ರಲ್ಲಿ ಕಾಲೇಜಕ್ಕೆ ಜೋಡಿಸಲ್ಪಟ್ಟ ಪ್ರ್ಯಾಕ್ಟಿಸಿಂಗ ಸ್ಕೂಲಿನ ಮೇಲ್ವಿಚಾರಣೆಗಾಗಿ ಮತ್ತೊಬ್ಬ ಶಿಕ್ಷಕನನ್ನು ನೇಮಿಸಿದರು. ಮುಂದೆ ಕೆಲವು ದಿವಸಗಳಲ್ಲಿ ತಾಲೀಮು ಹಾಗೂ ಡ್ರಾಯಿಂಗ ಈ ವಿಷಯಗಳನ್ನು ಕಲಿಸುವದರ ಸಲುವಾಗಿ ಬೇರೆ ಶಿಕ್ಷಕರು ನೇಮಿಸಲ್ಪಟ್ಟರು. ಇಲ್ಲಿಯವರೆಗೆ ಕಿಲ್ಲೇದಲ್ಲಿದ್ದ ಕಾಲೇಜು ಊರೊಳಗಿನ ಒಂದು ಇಮಾರತಿಗೆ ಸ್ಥಳಾಂತರಿಸಲ್ಪಟ್ಟಿತು. ಶಿಕ್ಷಕರ ಸಂಖ್ಯೆ ಹೆಚ್ಚಾದುದರಿಂದಲೂ, ಕಾಲೇಜಕ್ಕೆ ಊರೊಳಗೆ ಇಮಾರತಿ ಸಿಕ್ಕದ್ದರಿಂದಲೂ ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ ಹೆಚ್ಚು ಅನುಕೂಲವಾಯಿತು. ೧೮೭೧ರ ನಂತರ ಕಾಲೇಜದ ವತಿಯಿಂದ ಎರಡು ರಾತ್ರಿಶಾಲೆಗಳು ನಡೆಸಲ್ಪಡುತ್ತಿದ್ದವು.

೧೦ ಕೊನೆಯ ಸ್ಥಳಾಂತರ

ಇ. ಸ. ೧೮೬೧ರಲ್ಲಿ ಈ ಕಾಲೇಜು ಧಾರವಾಡದಿಂದ ಬೆಳಗಾಂವಿಗೆ ಸ್ಥಳಾಂತರಿಸಲ್ಪಟ್ಟಿತೆಂದು ಮೇಲೆ ಹೇಳಿದೆ. ಹಾಗೆ ಮಾಡಲು ಒಂದೇ ಮುಖ್ಯ ಕಾರಣವಾಗಿತ್ತು. ಈಗ, ಈ ಭಾಗದ ಇನಸ್ಪೆಕ್ಟರರ ಕಚೇರಿ ಬೆಳಗಾಂವಿಯಲ್ಲಿದ್ದುದರಿಂದ ಕಾಲೇಜು ಇನಸ್ಪೆಕ್ಟರರ ನೇತೃತ್ವದಲ್ಲಿ ನಡೆಯುವದು ಆಡಳಿತದ ದೃಷ್ಟಿಯಿಂದ ಹೆಚ್ಚು ಅನುಕೂಲವಾಗುವದೆಂದು ತಿಳಿಯಲಾಗಿತ್ತು. ೧೮೬೪ ರಿಂದ ಈಚೆಗೆ ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಅಲ್ಲಿ ಹೆಚ್ಚಾಗುತ್ತ ನಡೆ

ವರೂ ಆಸ್ಥೆಯುಳ್ಳ ಕನ್ನಡ ತರುಣರನ್ನು ಹೆಚ್ಚು ಪ್ರಮಾಣದಿಂದ ಬರಮಾಡಿಕೊಳ್ಳಲು ಬೆಳಗಾವಿಯು ಬಹಳ ಮಟ್ಟಿಗೆ ಅನಾನುಕೂಲವಾದದ್ದೆಂದು, ರಸೆಲ್‌ಸಾಹೇಬರಿಗೆ ಮನದಟ್ಟಾಯಿತು, ಬೆಳಗಾವಿಯು ಕನ್ನಡನಾಡಿನ ಮಧ್ಯಸ್ಥಳವಾಗಿದ್ದರಿಂದ ಪೂರ್ವ ಭಾಗದಿಂದ ಬರುವಂಥ ವಿದ್ಯಾರ್ಥಿಗಳಿಗೆ ಅದು ಬಹುದೂರವಾಗಿ ಹೆಚ್ಚು ಅನಾನುಕೂಲವಾಗಿತ್ತು. ಮೇಲಾಗಿ ಮರಾಠಿ ಭಾಷೆಯ ವರ್ಚಸ್ಸುಳ್ಳ ಮಹಾರಾಷ್ಟ್ರದ ಭಾಗಕ್ಕೆ ಬೆಳಗಾವಿಯು ಸಮೀಪವಾಗಿದ್ದರಿಂದ ಕನ್ನಡ ವಾಙ್ಮಯದ ಬೆಳವಣಿಗೆಗೆ ಅದು ಅಷ್ಟು ಅನುಕೂಲವಾಗಿರಲಿಲ್ಲ. ಈ ಎರಡು ಕಾರಣಗಳನ್ನು ಮುಂದೆಮಾಡಿ ರಸೆಲ್ ಸಾಹೇಬರು ಮೇಲಧಿಕಾರಿಗಳಿಗೆ ಬರೆದು ಟ್ರೇನಿಂಗ ಕಾಲೇಜು ಹುಬ್ಬಳ್ಳಿ ಇಲ್ಲವೆ ಧಾರವಾಡದಲ್ಲಿರುವದು ಅವಶ್ಯವೆಂದು ಸೂಚಿಸಿದರು. ಸರಕಾರವು ಅವರ ವರದಿಯನ್ನು ಪರಿಶೀಲಿಸಿ ಕಾಲೇಜನ್ನು ಹುಬ್ಬಳ್ಳಿ ಇಲ್ಲವೆ ಧಾರವಾಡಕ್ಕೆ ಸಾಧ್ಯವಾದಷ್ಟು ಬೇಗನೆ ಪುನಃ ತರುವದನ್ನು ನಿಶ್ಚಯಿಸಿದರು. ಆದರೆ ಯೋಗ್ಯವಾದ ಇಮಾರತನ್ನು ದೊರಕಿಸುವದೊಂದೇ ಅಡಚಣಿಯಾಗುತ್ತಿತ್ತು. ಆ ಕಾರಣದಿಂದಲೇ ಕಾಲೇಜನ್ನು ಸ್ಥಳಾಂತರಿಸುವದರಲ್ಲಿ ತಡವಾಗಹತ್ತಿತು. ಆಗ ಧಾರವಾಡದ ಕಲೆಕ್ಟರರಾಗಿದ್ದ ಶ್ರೀ ಇ. ಪಿ. ರಾಬರ್ಟಸನ್‌ರವರು ಶೈಕ್ಷಣಿಕ ವಿಷಯಗಳಲ್ಲಿ ಹೆಚ್ಚು ಆಸಕ್ತಿಯುಳ್ಳವರಾಗಿದ್ದರು. ಅವರು ಬಹಳ ಶ್ರಮವಹಿಸಿ ಸಾರ್ವಜನಿಕರಿಂದ ೫೦ ಸಾವಿರ ರೂಪಾಯಿಗಳನ್ನು ಸಂಗ್ರಹಿಸಿ ಈಗಿದ್ದ ಕಾಲೇಜದ ಇಮಾರತುಗಳಲ್ಲಿ ಕೆಲವನ್ನು ಕಟ್ಟಿಸಿದರು. ಈ ಇಮಾರತುಗಳು ೧೮೭೫ನೆಯ ವರುಷದ ಜೂನತಿಂಗಳಲ್ಲಿ ತಯಾರಾದ್ದರಿಂದ ಕೊನೆಗೊಮ್ಮೆ ಕಾಲೇಜು ಬೆಳಗಾಂವಿಯಿಂದ ಧಾರವಾಡಕ್ಕೆ ತರಲ್ಪಟ್ಟಿತು. ಜೂನ ಮೊದಲನೆಯ ವಾರದಲ್ಲಿ ಹೊಸ ಇಮಾರತುಗಳು ಕಾಲೇಜದ ಪ್ರಿನ್ಸಿಪಾಲರ ವಶಕ್ಕೆ ಬಂದವಾದರೂ ವರ್ಗದ ಕೋಣೆಗಳು ಸರಿಯಾದ ಸ್ಥಿತಿಯಲ್ಲಿಲ್ಲದ್ದರಿಂದ ವರ್ಗಗಳು ಕೆಲವು ದಿವಸ ಹಾಯಸ್ಕೂಲಿನಲ್ಲಿಯೇ ನಡೆದಂತೆ ಕಾಣುತ್ತದೆ. ೧೪ ವರುಷಗಳ ಹಿಂದೆ ಬೆಳಗಾಂವಿಗೆ ಒಯ್ಯಲ್ಪಟ್ಟ ಕಾಲೇಜ ಧಾರವಾಡಕ್ಕೆ ಬಂದಿತು.

೧೧ ಅಭ್ಯಾಸ ಪತ್ರಿಕೆಯಲ್ಲಿ ಮತ್ತೆ ಬದಲಾವಣೆ

೨–೩ ವರುಷಗಳ ನಂತರ ಕಾಲೇಜಕ್ಕೆ ಸಂಬಂಧಿಸಿದ ಕಾಯದೆಗಳಲ್ಲಿ ಮತ್ತೆ ಬದಲಾವಣೆಗಳಾದವು. ಕಾಲೇಜನ್ನು ಸೇರಲು ನಡೆಯುತ್ತಿದ್ದ ಪ್ರವೇಶ ಪರೀಕ್ಷೆಯನ್ನು ತೆಗೆದು ಹಾಕಲಾಯಿತು. ಇತ್ತೀಚಿಗೆ ಕನ್ನಡ ಶಾಲೆಗಳಲ್ಲಿ ೫ನೆಯ ಇಯತ್ತೆಯ ವರೆಗಿದ್ದ ಕ್ರಮವನ್ನು ೬ನೆಯ ಇಯತ್ತೆಯ ವರೆಗೆ ಬೆಳೆಸಿದರು. ೬ನೆಯ ಇಯತ್ತೆಯು ಎಲ್ಲಕ್ಕೂ ಹೆಚ್ಚಿನ ವರ್ಗವಾಗಿದ್ದು ಅದನ್ನು ಮುಗಿಸಿದ ವಿದ್ಯಾರ್ಥಿಗಳು ಮುಲ್ಕೀ ಪರೀಕ್ಷೆಗೆ ಕೂಡ್ರಬೇಕಾಗುತ್ತಿತ್ತು. ಈ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಲ್ಲಿ ಹೆಚ್ಚು ಗುಣಗಳನ್ನು ಪಡೆದವರಿಗೆ ಕಾಲೇಜದಲ್ಲಿ ಪ್ರವೇಶ ದೊರೆಯಹತ್ತಿತು. ಕಾಲೇಜದಲ್ಲಿ ಮೊದಲಿನಂತೆಯೇ ಮೂರು ವರ್ಗಗಳಿದ್ದವು. ಮೊದಲನೆಯ ವರ್ಗದಲ್ಲಿ ಸಂಸ್ಕೃತ, ಭೌತಿಕ ಶಾಸ್ತ್ರ, ಶಾಲಾ ವ್ಯವಸ್ಥೆ ಮೊದಲಾದ ವಿಷಯಗಳನ್ನು ಕಲಿಸುತ್ತ ೧ ರಿಂದ ೬ನೆಯ ಇಯತ್ತೆಗಳ ವರೆಗಿನ ವಿಷಯಗಳ ಉಜಳಣಿ ನಡೆಯುತ್ತಿತ್ತು. ೨ನೇ ಹಾಗೂ ೩ನೆಯ ವರ್ಗಗಳಿಗೆ ಶಿಕ್ಷಣ ಪದ್ಧತಿ, ಗಣಿತ, ಕನ್ನಡ, ಇತಿಹಾಸ, ಭೂಗೋಲ, ಸಂಸ್ಕೃತ ಮತ್ತು ಸೃಷ್ಟಿ ಶಾಸ್ತ್ರದ ಹೆಚ್ಚಿನ ಭಾಗ ಈ ವಿಷಯಗಳು ಕಲಿಸಲ್ಪಡುತ್ತಿದ್ದವು. ೩ನೆಯ ,ವರುಷದ ವರ್ಗದವರು ಡ್ರಾಯಿಂಗ ಹಾಗೂ ತಾಲೀಮನ್ನು ಕಲಿಯಬೇಕಾಗುತ್ತಿತ್ತು. ಕಾಲೇಜದ ಸರ್ಟಿಫಿಕೇಟು ದೊರೆಯಬೇಕಾದರೆ ಪ್ರತಿಯೊಬ್ಬರು ಕಾಲೇಜದಲ್ಲಿ ಕನಿಷ್ಠ ಪಕ್ಷ ಎರಡು ವರುಷಗಳ ವರೆಗಾದರೂ ಅಭ್ಯಾಸ ಮಾಡ ಬೇಕಾಗುತ್ತಿತ್ತು. ಪ್ರವೇಶ ಪರೀಕ್ಷೆಯನ್ನು ತೆಗೆದು ಹಾಕಿದ ನಂತರ ಆಯಾ ಜಿಲ್ಹೆಗಳ ಡೆಪ್ಯೂಟಿ ಇನಸ್ಪೆಕ್ಟರರೇ ಕಾಲೇಜಕ್ಕೆ ವಿದ್ಯಾರ್ಥಿಗಳನ್ನು ಆರಿಸಿ ಕಳಿಸುತ್ತಿದ್ದರು. ಈ ಕ್ರಮದಿಂದ ಯೋಗ್ಯ ವಿದ್ಯಾರ್ಥಿಗಳು ಕಾಲೇಜಕ್ಕೆ ಬಾರದ್ದರಿಂದ ಅಂಥವರ ಬಗೆಗೆ ಖರ್ಚಾದ ಹಣವು ಅಪವ್ಯಯವಾಗುವದೆಂದು ತಿಳಿದು, ೧೮೮೬ರ ಸುಮಾರಕ್ಕೆ ಪ್ರವೇಶ ಪರೀಕ್ಷೆಯನ್ನು ಮತ್ತೆ ಪ್ರಾರಂಭಿಸಿದರು. ಹಿಂದಿನಿಂದ ಪೂರ್ವ ತಯಾರಿ ವರ್ಗಕ್ಕೆ ಒಂದನೆಯ ವರುಷದ ವರ್ಗವೆಂತಲೂ ಉಳಿದೆರಡು ವರ್ಗಗಳಿಗೆ ೨ನೆಯ ಹಾಗೂ ೩ನೆಯ ವರುಷಗಳ ವರ್ಗವೆಂತಲೂ ಕರೆಯಹತ್ತಿದರು. ವರುಷದ ಕೊನೆಗೆ ನಡೆದ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪಡೆದ ಗುಣಗಳ ಮೇಲೆ ಅವರನ್ನು ಕಾಲೇಜದಲ್ಲಿ ಇಟ್ಟುಕೊಳ್ಳುವದು ಇಲ್ಲವೆ ಆ ವರುಷದ ಸರ್ಟಿಫಿಕೇಟನ್ನು ಕೊಟ್ಟು ಹೊರಗೆ ಕಳಿಸುವದು ನಿರ್ಧಾರವಾಗಹತ್ತಿತು. ಒಂದನೆಯ ವರುಷದ ಸರ್ಟಿಫಿಕೇಟ ಪಡೆದ ವಿದ್ಯಾರ್ಥಿಗಳು ೯ ರೂ.ಗಳ ಪಗಾರದ ಮೇಲೆ ಹೊರಗೆ ಹೋಗುತ್ತಿದ್ದರು.

೧೨ ಔದ್ಯೋಗಿಕ ಶಿಕ್ಷಣದ ಪ್ರಾರಂಭ

೧೮೮೮ ನೆಯ ವರುಷದಲ್ಲಿ ಧಾರವಾಡದ ಕಲೆಕ್ಟರರಾದ ಶ್ರೀ ವಿಂಟರವರು ಕಾಲೇಜದ ಬಗೆಗೆ ಹೆಚ್ಚು ಆಸ್ಥೆಯುಳ್ಳವರಾಗಿದ್ದರು. ಅವರ ಅಭಿಪ್ರಾಯದಲ್ಲಿ ಶಿಕ್ಷಣ ಸಂಸ್ಥೆಗಳಲ್ಲಿ ಔದ್ಯೋಗಿಕ ಶಿಕ್ಷಣಕ್ಕೂ ಸ್ಥಾನವಿರಬೇಕಾಗಿತ್ತು. ಆದುದರಿಂದ ತಮ್ಮ ಇಚ್ಛೆಯನ್ನು ಕಾರ್ಯಗತ ಮಾಡುವದಕ್ಕಾಗಿ ಟ್ರೇನಿಂಗ ಕಾಲೇಜದಲ್ಲಿ ಔದ್ಯೋಗಿಕ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ಸರಕಾರಕ್ಕೆ ವರದಿ ಮಾಡಿದರು. ಸರಕಾರದವರು ಅವರ ಸೂಚನೆಯನ್ನು ಮನ್ನಿಸಿ ಟ್ರೇನಿಂಗ ಕಾಲೇಜದಲ್ಲಿ ಔದ್ಯೋಗಿಕ ಶಿಕ್ಷಣವನ್ನು ಕೊಡಲು ತಮ್ಮ ಒಪ್ಪಿಗೆಯನ್ನಿತ್ತರು. ಆಗ ಧಾರವಾಡಕ್ಕೆ ಆಗಮಿಸಿದ್ದ ಮುಂಬಯಿ ಇಲಾಖೆಯ ಗವ್ಹರ್ನರರಾದ ಲಾರ್ಡ ರೇ ಅವರು ಶ್ರೀ ವಿಂಟರವರ ಪ್ರಯತ್ನಗಳ ಫಲವಾಗಿ ಕಾಲೇಜನ್ನು ಸಂದರ್ಶಿಸಿದರು. ಅವರ ಸಂದರ್ಶನದ ಸ್ಮಾರಕಕ್ಕಾಗಿ ಕಾಲೇಜದಲ್ಲಿ ಔದ್ಯೋಗಿಕ ಶಿಕ್ಷಣವನ್ನು ಪ್ರಾರಂಭಿಸಬೇಕೆಂದು ಸರಕಾರಕ್ಕೆ ತಿಳಿಸಿ ಕಾಲೇಜದಲ್ಲಿ ಬಡಿಗತನ ಹಾಗೂ ಕಮ್ಮಾರಿಕೆಯನ್ನು ಕಲಿಸುವವರ ಸಲುವಾಗಿ ಇಬ್ಬರು ಶಿಕ್ಷಕರು ನೇಮಿಸಲ್ಪಟ್ಟರು. ಅಂದಿನಿಂದ ಔದ್ಯೋಗಿಕ ವರ್ಗಗಳು ಕಾಲೇಜದಲ್ಲಿ ನಡೆಯಹತ್ತಿದವು. ಬರಬರುತ್ತ ಈ ವರ್ಗಗಳಿಗೆ ಹೆಚ್ಚು ಮಹತ್ವ ಸಿಗಹತ್ತಿದ್ದರಿಂದ ಈ ವರ್ಗಗಳನ್ನು ನಡೆಯಿಸಲು ಒಂದು ಸ್ವತಂತ್ರವಾದ ಇಮಾರತು ಅವಶ್ಯವಾಯಿತು. ಅದನ್ನೇ ಲಕ್ಷಿಸಿ ಖಾತೆಯವರು ೧೦ ಸಾವಿರ ರೂ. ಗಳನ್ನು ಖರ್ಚುಮಾಡಿ ಒಂದು ಭವ್ಯವಾದ ಮಂದಿರವನ್ನು ಕಟ್ಟಿಸಿದರು. ಅದಕ್ಕೆ ಬಹಳ ದಿವಸಗಳ ವರೆಗೆ "ಸ್ಲಾಯಿಡ್ ಹಾಲ್" ಎಂದೆನ್ನುತ್ತಿದ್ದರು. ಅದೇ ಈಗ "ಕ್ರ್ಯಾಪ್ಟ ಹಾಲ್" ಎಂದು ಕರೆಯಲ್ಪಡುತ್ತದೆ. ಈ ಹೊಸ ಇಮಾರತು ಸನ್ ೧೯೦೩ರಲ್ಲಿ ಗವ್ಹರ್ನರರಾಗಿದ್ದ ಸರ್ ಜೇಮ್ಸ್ ಮಾಂಟೇಥ್ ಇವರಿಂದ ಉದ್ಘಾಟಿಸಲ್ಪಟ್ಟಿತು. ಈ ಶುಭ ಪ್ರಸಂಗದ ನೆನಪಿಗಾಗಿ ಸರ್ ಜೇಮ್ಸ್ ಮಾಂಟೇತ್‌ರವರ ಹೆಸರಿನಿಂದ ಒಂದು ಮ್ಯಾನ್ಯುವಲ್ ಟ್ರೇನಿಂಗ ಪಾರಿತೋಷಕವು ಕೊಡಲ್ಪಡಹತ್ತಿತು. ಮುಂದೆ ಈ ವರ್ಗಗಳು ಬಂದಾದನಂತರ ಆ ಪಾರಿತೋಷಕದ ವಿತರಣೆಯು ನಿಂತುಬಿಟ್ಟಿತು. ೧೯ನೆಯ ಶತಮಾನವು ಮುಗಿಯುತ್ತ ಬಂದಂತೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗುತ್ತ ನಡೆಯಿತು.

೧೩ ಅಭ್ಯಾಸ ಪತ್ರಿಕೆಯಲ್ಲಿ ಒಕ್ಕಲತನಕ್ಕೆ ಸ್ಥಾನ

ಈ ಶತಮಾನ ಪ್ರಾರಂಭವಾಗುವ ಪೂರ್ವದಲ್ಲಿಯೇ ವಿದ್ಯಾರ್ಥಿಗಳ ಸಂಖ್ಯೆ ನೂರಕ್ಕೆ ಮಿಕ್ಕಿತ್ತು. ಕಾಲೇಜಕ್ಕೆ ಬರತಕ್ಕ ವಿದ್ಯಾರ್ಥಿಗಳು ಹಳ್ಳಿಯವರೇ ಆಗಿದ್ದು ತಮ್ಮ ಅಭ್ಯಾಸವನ್ನು ಮುಗಿಸಿದ ನಂತರ ಹಳ್ಳಿಯ ಶಾಲೆಗಳಿಗೆ ಹೋಗಬೇಕಾದುದರಿಂದ ಒಕ್ಕಲತನದ ಬಗೆಗೆ ಅವರಿಗೆ ಸರಿಯಾದ ಮಾಹಿತಿ ಇದ್ದರೆ, ಹಳ್ಳಿಗಳಲ್ಲಿ ಅದರ ಉಪಯೋಗ ಹೆಚ್ಚಾಗುವದೆಂದು ಭಾವಿಸಿ ೧೯೦೪ ರಲ್ಲಿ ಕಾಲೇಜದ ಅಭ್ಯಾಸ ಪತ್ರಿಕೆಯಲ್ಲಿ ಒಕ್ಕಲತನ ವಿಷಯವನ್ನು ಸೇರಿಸಿದರು. ಅದರ ಸಲುವಾಗಿ ಒಬ್ಬ ಶಿಕ್ಷಕರನ್ನೂ ನೇಮಿಸಿದರು.ವಿದ್ಯಾರ್ಥಿಗಳು ಹೊಲದಲ್ಲಿ ಪ್ರತ್ಯಕ್ಷ ಕೆಲಸ ಮಾಡಲು ಅನುಕೂಲವಾಗುವಂತೆ ಒಂದು ಹೊಲವನ್ನು ಸಹ ಕಾಲೇಜಕ್ಕೆ ದೊರಕಿಸಿಕೊಟ್ಟರು. ಈ ವಿಷಯದ ಅಭ್ಯಾಸವು ಸುಮಾರು ೧೦ ವರುಷಗಳ ವರೆಗೆ ನಡೆದು ಮುಂದೆ ಅದರ ಬದಲಾಗಿ ಶಾಲೆಯ ತೋಟ ಹಾಗೂ ಪ್ರಕೃತಿ ವಿಮರ್ಶೆ ಎಂಬೆರಡು ವಿಷಯಗಳು ಕಲಿಸಲ್ಪಡಹತ್ತಿದವು. ಇ. ಸ. ೧೯೦೦ ರಿಂದ ಕಾಲೇಜದ ಅಭ್ಯಾಸ ಪತ್ರಿಕೆಯಲ್ಲಿ ಗಾಯನವನ್ನೂ ಸೇರಿಸಬೇಕೆಂಬ ಸೂಚನೆಯೂ ಮಾಡಲ್ಪಟ್ಟಿತು. ಆದರೆ ೧೯೦೫ರ ವರೆಗೆ ಆ ಶಿಕ್ಷಣವು ಪ್ರತ್ಯಕ್ಷ ರೂಢಿಯಲ್ಲಿ ಬರಲಿಲ್ಲ. ಆಗ ಇನಸ್ಪೆಕ್ಟರರಾಗಿದ್ದ ಶ್ರೀ ಸಹಸ್ರಬುದ್ಧೆ ಇವರಿಗೆ ಗಾಯನವು ಮೆಚ್ಚಿನ ವಿಷಯವಾಗಿದ್ದುದರಿಂದ ಅದಕ್ಕೆ ಉತ್ತೇಜನ ದೊರೆತು, ಒಬ್ಬ ಗಾಯನ ಶಿಕ್ಷಕನನ್ನು ನೇಮಿಸಿದರು. ಇದು ಕೆಲವು ಕಾಲದ ವರೆಗೆ ಐಚ್ಛಿಕ ವಿಷಯವಾಗಿ ಈಗ ಅದನ್ನು ಪ್ರತಿಯೊಬ್ಬರೂ ಕಲಿಯಬೇಕಾಗಿದೆ.

೧೪ ಕಾಲೇಜದ ಮುಖ್ಯ ಕಟ್ಟಡ ಹಾಗು ವಿದ್ಯಾರ್ಥಿಗಳ ಪರಮಾವಧಿ ಸಂಖ್ಯೆ

ಇ. ಸ. ೧೯೧೦ರಲ್ಲಿ ಟ್ರೇನಿಂಗ ಕಾಲೇಜದ ಕಾಯ್ದೆಗಳಲ್ಲಿ ಪುನಃ ತಿದ್ದುಪಡಿಗಳಾದವು. ಶಿಕ್ಷಕರ ವೇತನ ದರಗಳು ಹೆಚ್ಚಾದವು. ಒಂದನೆಯ ವರುಷದ ಸರ್ಟಿಫಿಕೇಟನ್ನು ಪಡೆದವರಿಗೆ ೧೨ ರೂ. ಯ ಆರಂಭದ ಸಂಬಳವು ಸಿಗುತ್ತಿತ್ತು. ೨ನೆಯ ವರುಷದ ವಿದ್ಯಾರ್ಥಿಗಳಿಗೆ ೧೫ ರೂಪಾಯಿಗಳು ಸಿಗಹತ್ತಿದವು. ೧೯೧೦ರ ಸುಮಾರಕ್ಕೆ ವಿದ್ಯಾರ್ಥಿಗಳ ಸಂಖ್ಯೆ ೨೫೦ಕ್ಕೆ ಸಮೀಪಿಸಿದ್ದರಿಂದ ಕಾಲೇಜಿನ ವರ್ಗಗಳಿಗೆ ಹೆಚ್ಚಿನ ಸ್ಥಳಾವಕಾಶವು ಬೇಕಾಯಿತು.

ಆದ್ದರಿಂದ ಕಾಲೇಜದ ಮುಖ್ಯ ಕಟ್ಟಡವು (ಈಗ ಕರ್ನಾಟಕ ವಿಶ್ವವಿದ್ಯಾಲಯದವರ ವಶದಲ್ಲಿದೆ.) ೧೯೧೩ರಲ್ಲಿ ಸಿದ್ಧವಾಯಿತು. ಅದನ್ನು ತಯಾರಿಸಲು ಸರಕಾರದವರು ೧ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿದರು. ೧೯೧೮ರ ಸುಮಾರಕ್ಕೆ ಎಲ್ಲ ವಿದ್ಯಾರ್ಥಿಗಳ ವೇತನವು ೧೫ ರೂ. ಗಳೆಂದು ಗೊತ್ತಾಯಿತು. ಪ್ರಾಥಮಿಕ ಶಿಕ್ಷಕರ ಪಗಾರ ಸುಧಾರಿಸಿದ ದರಗಳು ಜಾರಿಯಲ್ಲಿ ಬಂದವು. ೧ನೆಯ, ೨ನೆಯ ಹಾಗೂ ೩ನೆಯ ವರುಷಗಳ ಸರ್ಟಿಫಿಕೇಟುಗಳನ್ನು ಪಡೆದ ಶಿಕ್ಷಕರ ಆರಂಭದ ಸಂಬಳಗಳು ಅನುಕ್ರಮವಾಗಿ ೩೦, ೩೫ ಹಾಗೂ ೪೦ ರೂಪಾಯಿಗಳಂತೆ ಸಿಗಹತ್ತಿದವು. ಈ ರೀತಿಯಿಂದ ಶಿಕ್ಷಕರ ಸಂಬಳಗಳು ಒಮ್ಮೆಲೇ ಹೆಚ್ಚಾಗಲು ಆಗ ನಡೆದ ಮಹಾಯುದ್ಧವು ಕಾರಣವಾಗಿರಲು ಸಾಕು. ಅಂದಿನಿಂದ ಶಾಲೆಗಳ ಸಂಖ್ಯೆ ಹೆಚ್ಚಾಗಹತ್ತಿದ್ದರಿಂದ ಹೆಚ್ಚು ಜನ ಶಿಕ್ಷಕರು ಅವಶ್ಯವಾಗಿ ಬೇಕಾಯಿತು. ಆ ಪೂರೈಕೆಯನ್ನು ಪೂರೈಸಲು ಉಳಿದ ಮೂರು ಜಿಲ್ಹೆಗಳಲ್ಲಿಯೂ ನಾರ್ಮಲ್ ಸ್ಕೂಲಗಳು ಒಂದು ವರುಷದ ವರೆಗೆ ನಡೆದು ೧೯೨೧ರಲ್ಲಿ ಕೊನೆಗೊಂಡವು.

೧೫ ೨ನೆಯ ಹಾಗು ೩ನೆಯ ವರ್ಷಗಳ ವರ್ಗಗಳನ್ನು ನಿಲ್ಲಿಸಿದ್ದು

೧೯೧೯ರ ನಂತರ ಕಾಲೇಜದಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳ ಸಂಖ್ಯೆಯು ೬೦೦ಕ್ಕೆ ಮುಟ್ಟಿ ಸರಕಾರಕ್ಕೆ ವೆಚ್ಚದ ಭಾರವು ಅತಿಯಾಗಿ ಕಾಣಿಸಿತು. ಅದರಿಂದ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿಮೆ ಮಾಡಲು ನಿಶ್ಚಯಿಸಿ ಅದನ್ನು ೧೯೨೩ರಲ್ಲಿ ಕೃತಿಕ್ಕೆ ತಂದರು. ೧೯೨೪ನೆಯ ಇಸ್ವಿಯಲ್ಲಿ ೨ ನೆಯ ಹಾಗೂ ೩ ನೆಯ ವರುಷಗಳ ವರ್ಗವನ್ನು ಕಡಿಮೆ ಮಾಡಿದರು.ಮರುವರುಷ ಕೇವಲ ೩೪ ವಿದ್ಯಾರ್ಥಿಗಳಿಂದ ಕೂಡಿದ ಒಂದನೆಯ ವರುಷದ ವರ್ಗವು ಮಾತ್ರ ಉಳಿಯಿತು. ಮತ್ತು ಪ್ರಾಥಮಿಕ ಶಿಕ್ಷಣ ಕಾಯದೆಯಲ್ಲಿ ದೊಡ್ಡ ಬದಲಾವಣೆಯಾಗಿ ಪ್ರಾಥಮಿಕ ಶಾಲೆಗಳ ಆಡಳಿತೆಯು ಜಿಲ್ಹಾ ಲೋಕಲ್ ಬೋರ್ಡುಗಳಿಗೆ ಕೊಡಲ್ಪಟ್ಟಿತು. ವಿದ್ಯಾರ್ಥಿಗಳನ್ನು ಕಾಲೇಜಕ್ಕೆ ಆರಿಸುವ ಹೊಣೆಯನ್ನು ಸ್ಕೂಲ ಬೋರ್ಡುಗಳಿಗೇ ಬಿಟ್ಟು ಕೊಡಲಾಯಿತು. ಈ ಪ್ರಕಾರ ಒಂದೆರಡು ವರುಷಗಳ ಹಿಂದೆ ೬೦೦ಕ್ಕಿಂತಲೂ ಹೆಚ್ಚು ವಿದ್ಯಾರ್ಥಿಗಳಿದ್ದ ಈ ಕಾಲೇಜದಲ್ಲಿ ಕೇವಲ ೩೪ ವಿದ್ಯಾರ್ಥಿಗಳ ಒಂದೇ ವರ್ಗವು ಉಳಿಯುವಂತಾಯಿತು. ಮುಂದಿನ ೨-೩ ವರುಷಗಳಲ್ಲಿ ಈ ವರ್ಗವೂ ಸಹ ಬಂದಾಗುವ ಪರಿಸ್ಥಿತಿಯುಂಟಾದುದು ದುರ್ದೈವದ ಸಂಗತಿ.

೧೬ ಬಂದಾದ ಕಾಲೇಜದ ಪುನರ್ಜೀವನ

೧೯೨೭ರ ಹೊಸ ಧೋರಣೆಯ ಪರಿಣಾಮವಾಗಿ ಅಹಮದಾಬಾದದ ಗಂ. ಟ್ರೇ. ಕಾಲೇಜ ಹಾಗೂ ಈ ಕಾಲೇಜನ್ನು ಸರಕಾರದವರು ಬಂದು ಮಾಡಿದರು. ಈ ಸಂಸ್ಥೆಯನ್ನು ನಿಲ್ಲಿಸುವ ಆಜ್ಞೆ ಬಂದಾಗ ಈ ಸಂಸ್ಥೆಯಿಂದ ಹೊರಬಿದ್ದ ಸಾವಿರಾರು ಶಿಕ್ಷಕರಿಗೂ ಪ್ರಾಧ್ಯಾಪಕರಿಗೂ ಹಾಗೂ ಜನ ಸಾಮಾನ್ಯರಿಗೂ ಅತೀವ ಕಳವಳವುಂಟಾಯಿತು.

ಕರ್ನಾಟಕದ ಹಿರಿಯರು ಸುಮ್ಮನೆ ಕೂಡ್ರಲಿಲ್ಲ. ಈ ಕಾಲೇಜನ್ನುಳಿಸಿಕೊಳ್ಳಲು ೧೯೦೧ ರಿಂದ ೧೯೦೮ ರ ವರೆಗೆ ಪ್ರಿನ್ಸಿಪಾಲರೂ ಅನೇಕ ಸ್ಥಾನಿಕ ಸಂಸ್ಥೆಗಳ ಅಧ್ಯಕ್ಷರೂ ಕಾಯದೆ ಮಂಡಳದ ಸದಸ್ಯರೂ ಕರ್ನಾಟಕ ಕಾಲೇಜದ ಸ್ಥಾಪಕರಲ್ಲೊಬ್ಬರೂ ಕರ್ನಾಟಕದ ಪಿತಾಮಹರೂ ಆದ ದಿವಾನ ಬಹಾದ್ದೂರ ರೊದ್ದರಾಯರು ಟೊಂಕಕಟ್ಟಿ ನಿಂತರು.

ಕಾಲೇಜದ ಕೆಲಸದಿಂದ ವಿಶ್ರಾಂತಿ ಹೊಂದಿ ಎಷ್ಟೋ ವರುಷಗಳಾಗಿದ್ದರೂ ದಿ. ಬ. ರೊದ್ದರಾಯರು ಈ ಕಾಲೇಜಕ್ಕೆ ಒಳ್ಳೇ ನಿಕಟ ಸಂಬಂಧವನ್ನಿಟ್ಟುಕೊಂಡಿದ್ದರು. ಈ ಸಂಸ್ಥೆಯಲ್ಲಿ ಯಾವ ಸಂಭ್ರಮ, ಸತ್ಕಾರಗಳು ನಡೆದರೂ ತಪ್ಪದೇ ಅವೆಲ್ಲವುಗಳಲ್ಲಿ ಹಾಜರಿರುವವರೂ ನಾಲ್ಕು ಮಾತುಗಳನ್ನಾಡುವವರೂ ಅವರೇ. ದಿ. ಬಹಾದ್ದೂರವರು ಕಾಲೇಜನ್ನು ಉಳಿಸಿಕೊಳ್ಳಲಿಕ್ಕೆ ಒಂದು ದೊಡ್ಡ ಚಳವಳಿಯನ್ನೇ ಹೂಡಿದರು. ಆಗ ಮುಂಬಯಿ ವಿಧಾನ ಸಭೆಯ ಸದಸ್ಯರಾದ ಸರ್. ಎಸ್. ಟಿ. ಕಂಬಳಿಯವರು ಹಾಗು ಶ್ರೀ ವಿಶ್ವನಾಥ ಜೋಗ ಇವರ ನೆರವನ್ನು ಪಡೆದರು. ದಿ. ಬಹಾದ್ದೂರರು ಈ ಕಾಲೇಜದ ಅವಶ್ಯಕತೆಯ ಬಗೆಗೆ ಸುದೀರ್ಘವಾದ ಪತ್ರವೊಂದನ್ನು ಗವ್ಹರ್ನರರಿಗೆ ಸಲ್ಲಿಸಿದರು. ಸರ್ ಎಸ್. ಟಿ. ಕಂಬಳಿಯವರೂ ಈ ಕಾಲೇಜನ್ನು ಪುನಃ ಪ್ರಾರಂಭಿಸಲು ವಿಧಾನ ಸಭೆಯಲ್ಲಿ ಒಂದು ಗೊತ್ತುವಳಿಯನ್ನು ತಂದರು. ಕಾಲೇಜನ್ನು ಬಂದುಮಾಡಿದ ಆಜ್ಞೆಯ ವಿರುದ್ಧವಾಗಿ ದಿ. ಬಹಾದ್ದೂರರಿಂದ ಹೂಡಿದ ಚಳವಳಿ ಕರ್ನಾಟಕದ ಇನ್ನುಳಿದ ಹಿರಿಯರ ಸಹಕಾರ ಸಹಾನುಭೂತಿ, ಕರ್ನಾಟಕದಿಂದ ಆರಿಸಿಹೋದ ವಿಧಾನ ಸಭೆಯ ಸದಸ್ಯರ

ಪ್ರಯತ್ನ ಹಾಗು ಸರಕಾರದಲ್ಲಿದ್ದ ಸರ್. ಎಸ್. ಟಿ. ಕಂಬಳಿಯವರ ವರ್ಚಸ್ಸು ಇವೆಲ್ಲವುಗಳ ಪರಿಣಾಮವಾಗಿ ಕಾಲೇಜು ಪುನಃ ತನ್ನ ಕೆಲಸವನ್ನು ಪ್ರಾರಂಭಿಸಿತು. ಆಗ ಕನ್ನಡಿಗರಿಗಾದ ಸಂತೋಷಕ್ಕೆ ಮಿತಿ ಇರಲಿಲ್ಲ. ಕನ್ನಡ ಭಾಷೆಯ ಅಭಿವೃದ್ಧಿಯ ಉಗಮಸ್ಥಳವಾದ ಈ ಹಿರಿಯ ಸಂಸ್ಥೆಗೆ ಬಂದ ಆಪತ್ತು ದೂರಾಯಿತು. ಕರ್ನಾಟಕದ ಎಲ್ಲ ಸ್ಕೂಲ ಬೋರ್ಡುಗಳು ಸಾಲೆಗಳ ಸಂಖ್ಯೆಯನ್ನು ಬೆಳಿಸಿ ಟ್ರೇನಿಂಗ ಪಡೆದ ಶಿಕ್ಷಕರ ಬೇಡಿಕೆಗೆ ಬಲವನ್ನಿತ್ತರು. ಇದರ ಪರಿಣಾಮವಾಗಿ ಈ ಸಂಸ್ಥೆಯು ಶೀಘ್ರವಾಗಿ ಮೊದಲಿನಂತೆ ಬೆಳೆಯುವ ಲಕ್ಷಣಗಳು ಕಂಡವು.

೧೭ ಸಂಕುಚಿತಗೊಂಡ ಕಾಲೇಜದ ವಿಸ್ತರಣೆ

೧೯೨೪ ರಿಂದ ೧೯೩೬ರ ವರೆಗೆ ಈ ಸಂಸ್ಥೆಯಲ್ಲಿ ಒಂದನೆಯ ವರುಷದ ವರ್ಗಗಳನ್ನು ತೆರೆಯದ ಹೊರತು ಕನ್ನಡಿಗರಿಗೆ ಸಮಾಧಾನವಿರಲಿಲ್ಲ. ಈ ೧೨ ವರುಷಗಳ ಕಾಲದ ಕಷ್ಟದೆಸೆಯನ್ನು ನೀಗಿಸಿ ಇದರ ಪುನರುದ್ಧಾರವನ್ನು ಮಾಡುವ ಸುಸಂಧಿಯು ಮುಂಬೈ ಪ್ರಾಂತದಲ್ಲಿ ಕನ್ನಡಿಗರೊಬ್ಬರು ಮಂತ್ರಿಗಳಾದಮೇಲೆ ಲಭಿಸಿತು. ಸರ್ ಎಸ್. ಟಿ. ಕಂಬಳಿಯವರು ೧೯೩೧ ರಲ್ಲಿ ಮಂತ್ರಿಗಳಾದರು. ಮುಂದೆ ಶಿಕ್ಷಣ ಖಾತೆಯೂ ಅವರಿಗೆ ಕೊಡಲ್ಪಟ್ಟಿತು. ಆಗ ಕನ್ನಡಿಗರ ಬಯಕೆಯನ್ನು ಪೂರೈಸಲು ಅವರಿಗೆ ಸಾಧ್ಯವಾಯಿತು. ಇಸವಿ ಸನ್ ೧೯೩೫ನೆಯ ಜೂನ ತಿಂಗಳ ದಿ. ೨೪ ರಂದು ೨ನೆಯ ಹಾಗೂ ೩ನೆಯ ವರುಷಗಳ ವರ್ಗಗಳನ್ನು ಉದ್ಘಾಟಿಸುವ ಸಮಾರಂಭವು ಅವರ ಅಮೃತ ಹಸ್ತದಿಂದಲೇ ನಡೆಯಿತು. ಈ ಸಮಾರಂಭವು ಒಳ್ಳೇ ವಿಜೃಂಭಣೆಯಿಂದ ನೆರವೇರಿಸಿದಂತೆ ಆಗಿನ ವರದಿಗಳಿಂದ ತಿಳಿದು ಬರುತ್ತದೆ. ಈ ಸಮಾರಂಭವು ನಡೆದ ೩ ವರುಷಗಳ ನಂತರ ಅಭ್ಯಾಸ ಪತ್ರಿಕೆಯಲ್ಲಿ ಮತ್ತೆ ಬದಲಾವಣೆಯನ್ನು ಮಾಡಿ ಮೂರೂ ವರುಷಗಳ ಅಭ್ಯಾಸವನ್ನು ಎರಡೇ ವರುಷಗಳಲ್ಲಿ ಮುಗಿಸುವ ಯೋಜನೆಯನ್ನು ಜಾರಿಯಲ್ಲಿ ತಂದರು. ಹೀಗಾಗಿ ಕಾಲೇಜದಲ್ಲಿ ಪುನಃ ಒಂದನೆಯ ಹಾಗೂ ಎರಡನೆಯ ವರುಷದ ವರ್ಗಗಳು ಮಾತ್ರ ಉಳಿದವು. ಅಂದಿನಿಂದ ಇಲ್ಲಿಯವರೆಗೂ ಎರಡೇ ವರ್ಗಗಳು ಇರುತ್ತವೆ.

೧೮ ಜೀವನ ಶಿಕ್ಷಣದ ಪ್ರಯೋಗ

೧೯೪೦ ರಿಂದ ಸುಮಾರು ೧೦ ವರುಷಗಳವರೆಗೆ ಎರಡು ವರುಷಗಳ ಸಾದಾ ಶಿಕ್ಷಣವು ನಡೆಯಿತು. ಆ ೧೦ ವರುಷಗಳ ಅವಧಿಯಲ್ಲಿ ಆದ ಮಹತ್ವದ ಬದಲಾವಣೆಯೆಂದರೆ ಕಾಲೇಜದ ಅಭ್ಯಾಸ ಪತ್ರಿಕೆಯಲ್ಲಿ ಜೀವನ ಶಿಕ್ಷಣದ ಸೇರ್ಪಡೆ. ಪೂಜ್ಯ ಬಾಪೂಜಿಯವರ ಆಶೀರ್ವಾದ ಪಡೆದ ವರ್ಧಾ ಶಿಕ್ಷಣದ ಯೋಜನೆಗೆ ಮೂಲ ಶಿಕ್ಷಣವೆಂತಲೂ ಅದನ್ನೇ ಇತ್ತೀಚೆಗೆ ಜೀವನ ಶಿಕ್ಷಣವೆಂತಲೂ ಕರೆಯುತ್ತೇವೆ. ಈ ಯೋಜನೆಯು ನಿಶ್ಚಿತ ಸ್ವರೂಪಕ್ಕೆ ಬಂದದ್ದು ೧೯೩೭ ರಲ್ಲಿ. ಮರು ವರುಷ ಅಂದರೆ ೧೯೩೮ ರಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರದಲ್ಲಿದ್ದ ಪ್ರಾಂತಗಳೆಲ್ಲವೂ ಒಟ್ಟುಗೂಡಿ “ಹಿಂದುಸ್ತಾನೀ ತಾಲೀಮು ಸಂಘ” ಎಂಬ ಹೊಸ ಸಂಸ್ಥೆಯನ್ನು ಸೇವಾ ಗ್ರಾಮದಲ್ಲಿ ಸ್ಥಾಪಿಸಿ ಅದರ ಮಾರ್ಗದರ್ಶನದಿಂದ ಜೀವನ ಶಿಕ್ಷಣವನ್ನು ಕಾರ್ಯರೂಪಕ್ಕಿಳಿಸುವ ಪ್ರಯೋಗವು ಮೊದಲು ೧೯೩೯ ರಲ್ಲಿ ಕೈಕೊಳ್ಳಲ್ಪಟ್ಟಿತು. ಆ ನಂತರ ಶಿಕ್ಷಣ ತಜ್ಞರಿಂದ ಈ ಯೋಜನೆಯ ಬಗೆಗೆ ದೀರ್ಘವಾದ ಕೂಲಂಕಷ ವಿಮರ್ಶೆ ನಡೆದು ಜೀವನ ಶಿಕ್ಷಣದ ಮೂಲ ತತ್ವಗಳು ಪಾಶ್ಚಾತ್ಯ ಹಾಗೂ ಪೌರ್ವಾತ್ಯ ಶಿಕ್ಷಣ ತಜ್ಞರಿಂದ ಮಾನ್ಯತೆ ಪಡೆದವು. ಹೀಗಾಗಿ ಜೀವನ ಶಿಕ್ಷಣದ ಅಭ್ಯಾಸ ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭವಾಯಿತು. ಅದರಲ್ಲಿ ತರಬೇತಿ ಕೊಡಲು ಮೊದಲು ಪ್ರಾಥಮಿಕ ಶಿಕ್ಷಕರ ಸಲುವಾಗಿ ಆ ಮೇಲೆ ಪದವೀಧರರ ಸಲುವಾಗಿ ತರಬೇತಿ ಕೇಂದ್ರಗಳು ಉದಯವಾದವು. ಈ ಯೋಜನೆಯು ಧಾರವಾಡದಲ್ಲಿ ೧೯೩೯ ರಲ್ಲಿ ಪ್ರಾರಂಭವಾಯಿತು. ಮೊದಲು ಪ್ರಾಯೋಗಿಕ ಕ್ಷೇತ್ರವೊಂದನ್ನು ಆರಿಸಿಕೊಂಡು ಅಲ್ಲಿ ಜೀವನ ಶಿಕ್ಷಣದ ಪ್ರಯೋಗವನ್ನು ಮಾಡಲಾಯಿತು. ಆ ಮೇಲೆ ತರಬೇತನ್ನು ಪಡೆದ ಶಿಕ್ಷಕರು ದೊರೆತಂತೆ ಒಕ್ಕಲತನ ಹಾಗೂ ನೂಲುವ ಚಟುವಟಿಕೆಗಳನ್ನು ಪ್ರಾಥಮಿಕ ಶಾಲೆಗಳಲ್ಲಿ ಪ್ರಾರಂಭಿಸಿದರು. ಪ್ರಾಥಮಿಕ ಶಿಕ್ಷಕರಿಗೆ ಈ ಯೋಜನೆಯಲ್ಲಿ ತರಬೇತನ್ನು ಕೊಡಲು ಕಾಲೇಜದ ಆವಾರದಲ್ಲಿಯೇ ವರ್ಧಾ ಶಿಕ್ಷಣ ಅಧ್ಯಾಪನ ಕೇಂದ್ರವೂ (ಬಿ.ಟಿ.ಸಿ.) ಮತ್ತು ೧೯೪೮ ರಲ್ಲಿ ಪದವೀಧರರ ಸಲುವಾಗಿ ಮೂಲ ಶಿಕ್ಷಣ (ಜಿ.ಬಿ.ಟಿ.ಸಿ.) ಕೇಂದ್ರವೂ ನಡೆದವು. ಇವೆರಡು ಸಂಸ್ಥೆಗಳು ಈ ಕಾಲೇಜದ ಆವಾರದಲ್ಲಿಯೇ ನಡೆಯುತ್ತಿದ್ದದರಿಂದಲೂ ಮತ್ತು ವರ್ಧಾ ಶಿಕ್ಷಣವನ್ನು ಕ್ರಮೇಣವಾಗಿ ಎಲ್ಲ ಶಾಲೆಗಳಲ್ಲಿ ಪ್ರಾರಂಭಿಸುವದು ರಾಷ್ಟ್ರೀಯ ಧೋರಣೆಯಾಗಿದ್ದರಿಂದಲೂ ಮೂಲ ಶಿಕ್ಷಣದ ವರ್ಚಸ್ಸು ತಾನಾಗಿಯೇ ಕಾಲೇಜದ ಎಲ್ಲ ಚಟುವಟಿಕೆಗಳ ಮೇಲೆ

ಬಿದ್ದಿತು. ಹೀಗಾಗಿ ಈ ಸಂಸ್ಥೆಯು ಮೂಲ ಶಿಕ್ಷಣದ ಕ್ಷೇತ್ರದಲ್ಲಿ ೧೯೪೭ರಲ್ಲಿ ತನ್ನ ಮೊದಲನೆಯ ಹೆಜ್ಜೆಯನ್ನು ಇಟ್ಟಿತೆಂದು ಹೇಳಬಹುದು. ಅನಂತರ ಕಾಲೇಜದ ದೈನಂದಿನ ಶಿಕ್ಷಣ ಕ್ರಮದಲ್ಲಿ ಪಠ್ಯೇತರ ಚಟುವಟಿಕೆಗಳಿಗೂ ಸ್ಥಾನ ದೊರೆಯಿತು. ಪದವೀಧರರ ಕೇಂದ್ರವು ನಮ್ಮ ಕಾಲೇಜದ ಆವಾರದಲ್ಲಿ ಬಂದಂದಿನಿಂದಂತೂ ಕಾಲೇಜದ ಚಟುವಟಿಕೆಗಳಲ್ಲಿ ಹೊಸ ಸ್ಫೂರ್ತಿಯುಂಟಾಯಿತು. ತುಸು ಹೆಚ್ಚು ಕಡಿಮೆ ಈ ಸಂಸ್ಥೆಯಲ್ಲಿಯೂ ಪದವೀಧರರ ಕೇಂದ್ರದ ನಿತ್ಯ ಜೀವನ ಕ್ರಮವೇ ನಡೆಯಲಾರಂಭಿಸಿತು. ೧೯೪೯ ರಲ್ಲಿ ಜೀವನ ಶಿಕ್ಷಣದ ತತ್ವಗಳನ್ನು ಟ್ರೇನಿಂಗ ಕಾಲೇಜದ ಅಭ್ಯಾಸ ಪತ್ರಿಕೆಯಲ್ಲಿ ಸಮಾವೇಶ ಮಾಡಿದ್ದರಿಂದ ಅಲ್ಲಿಯ ವರೆಗೆ ಸ್ವತಂತ್ರವಾಗಿ ನಡೆದ ವರ್ಧಾ ಅಧ್ಯಾಪನ ಕೇಂದ್ರವು ಈ ಕಾಲೇಜದಲ್ಲಿಯೇ ಐಕ್ಯವಾಯಿತು. ೧೯೫೧ ರಲ್ಲಿ ಹೊರಬಿದ್ದ ಶಿಕ್ಷಕರು ಜೀವನ ಶಿಕ್ಷಣದ ವಿಷಯಗಳನ್ನೊಳಗೊಂಡ ಅಭ್ಯಾಸ ಪತ್ರಿಕೆಯನ್ನೇ ಅನುಸರಿಸಿದವರಾಗಿದ್ದರು. ಅಂದಿನಿಂದ ಈ ಕಾಲೇಜನ್ನು ಬೇಸಿಕ್ ಟ್ರೇನಿಂಗ ಕಾಲೇಜ ಎಂದು ಕರೆಯುವದು ರೂಢಿಯಲ್ಲಿ ಬಂದಿತು. ಜೀವನ ಶಿಕ್ಷಣದ ಅಭ್ಯಾಸ ಪತ್ರಿಕೆಯು ಬಳಕೆಯಲ್ಲಿ ಬಂದಂದಿನಿಂದ ಒಕ್ಕಲತನ, ನೇಯಿಗೆ ಇವೆರಡುಮುಖ್ಯ ಮೂಲೋದ್ಯೋಗಗಳು ಕೈತೋಟ, ನೂಲುವದು, ರಟ್ಟಿನ ಕೆಲಸ ಈಮೂರು ಉಪ ಮೂಲೋದ್ಯೋಗಗಳು ಕಲಿಸಲ್ಪಟ್ಟು ಉಳಿದೆಲ್ಲ ವಿಷಯಗಳ ಅಭ್ಯಾಸವು ಮೊದಲಿನಂತೆ ನಡೆಯುತ್ತದೆ. ರೂಢಿ ಪಾಠಗಳು ಸಮವಾಯ ಪದ್ಧತಿಯಿಂದಲೇ ಸಾಗುತ್ತವೆ. ನಿತ್ಯ ಜೀವನ ಕ್ರಮದಲ್ಲಿ ಪ್ರಾರ್ಥನೆ, ಸಫಾಯಿ, ಸ್ವಾವಲಂಬನ, ಸಾಂಘಿಕ ಜೀವನ ಇವೆಲ್ಲವುಗಳಿಗೆ ಮಹತ್ವದ ಸ್ಥಾನ ದೊರೆತಿದೆ. ಈ ಅಭ್ಯಾಸ ಪತ್ರಿಕೆಯನ್ನು ಎಸ್.ಎಸ್.ಸಿ. ಪಾಸಾದವರು ಒಂದು ವರುಷದಲ್ಲಿಯೂ ಪಿ. ಎಸ್. ಸಿ. ಪಾಸಾದವರು ಎರಡು ವರುಷಗಳಲ್ಲಿಯೂ ಮುಗಿಸಬೇಕಾಗಿತ್ತು. ೧೯೫೨ರ ಜೂನ ತಿಂಗಳಿಂದ ಹೊಸದೊಂದು ಯೋಜನೆ ಪ್ರಾರಂಭವಾಯಿತು. ಎರಡು ತರದ ಅಭ್ಯಾಸ ಪತ್ರಿಕೆಗಳು ರೂಢಿಯಲ್ಲಿವೆ. ಈ ಮೊದಲು ಎಸ್.ಎಸ್.ಸಿ. ಪಾಸಾದವರಿಗೂ ಪಿ.ಎಸ್.ಸಿ. ಪಾಸಾದವರಿಗೂ ಒಂದೇ ಅಭ್ಯಾಸ ಪತ್ರಿಕೆಯಿತ್ತೆಂದು ಮೇಲೆ ಹೇಳಿದೆ. ಆದರೆ ಈಗ ಅವರಿಗೆ ಬೇರೆ ಬೇರೆ ತರದ ಅಭ್ಯಾಸ ಪತ್ರಿಕೆಗಳಿವೆ. ಎಸ್.ಎಸ್.ಸಿ ಪಾಸಾದವರಿಗೂ ಎರಡು ವರುಷಗಳ ಅಭ್ಯಾಸ ಪತ್ರಿಕೆ ಇದ್ದು ಅದರ ಮಟ್ಟ ಹೆಚ್ಚಿನದಾಗಿದೆ. ಅದನ್ನು ಪಾಸಾದವರಿಗೆ ಹಿರಿಯ ಪ್ರಮಾಣ ಪತ್ರ ಕೊಡಲಾಗುವದು. ಕಾಲೇಜದಲ್ಲಿ ಮಾತ್ರ ಪಿ.ಎಸ್.ಸಿ. ಪಾಸಾದವರ ವರ್ಗವಿರುವದರಿಂದ ಕಿರಿಯ ಪ್ರಮಾಣ ಪತ್ರದ ಅಭ್ಯಾಸ ಕ್ರಮವು ಅನುಸರಿಸಲ್ಪಡುತ್ತದೆ.

೧೯ ಶತಾಬ್ದಿ ಸಮಾರಂಭ

ಈ ಮೂರು ನಾಲ್ಕು ವರುಷಗಳಲ್ಲಿ ಕಾಲೇಜದ ಅಭ್ಯಾಸ ಹಾಗೂ ದೈನಂದಿನ ವಿಷಯಗಳಲ್ಲಿ ಕೆಲವು ಉಪಯುಕ್ತ ಬದಲಾವಣೆಗಳಾದವು. ಕಾಲೇಜದ ನಿತ್ಯ ಜೀವನವು ಸಾಂಘಿಕ ಜೀವನ ಹಾಗೂ ಜವಾಬ್ದಾರಿ ತತ್ವಗಳಂತೆ ನಡೆಯುತ್ತಿರುವದೊಂದು ಇಲ್ಲಿಯ ವೈಶಿಷ್ಟ್ಯ. ಪ್ರಜಾಪ್ರಭುತ್ವದ ತತ್ವಗಳಲ್ಲಿಯೂ ಆಚರಣೆಯಲ್ಲಿಯೂ ಶಿಕ್ಷಕ ವಿದ್ಯಾರ್ಥಿಗಳಿಗೆ ಅನುಭವವನ್ನು ಒದಗಿಸಿಕೊಡುವ ಉದ್ದೇಶದಿಂದ ಅವರ ಚಟುವಟಿಕೆಗಳೆಲ್ಲವೂ ಪಾರ್ಲಮೆಂಟಿನ ಪದ್ಧತಿಯಿಂದ ನಡೆದಿವೆ. ಆರು ತಿಂಗಳಿಗೊಮ್ಮೆ ಕೆಳಮನೆಯ ಪ್ರತ್ಯಕ್ಷ ಚುನಾವಣೆ, ಮೇಲ್ಮನೆಯ ಅಪ್ರತ್ಯಕ್ಷ ಚುನಾವಣೆ, ಮುಖಂಡನ ಆಯ್ಕೆ, ಮಂತ್ರಿಮಂಡಲದ ರಚನೆ, ಖಾತೆಗಳ ಹಂಚಿಕೆ, ಪಾರ್ಲಮೆಂಟ ಹಾಗೂ ಮಂತ್ರಿಮಂಡಲದ ಸಭೆಗಳು ಒಳ್ಳೇ, ಸ್ವಾರಸ್ಯವಾಗಿ ನಡೆದಿರುತ್ತವೆ. ಶಿಕ್ಷಕ ವಿದ್ಯಾರ್ಥಿಗಳು ಇವೆಲ್ಲ ಚಟುವಟಿಕೆಗಳಲ್ಲಿ ಆಸ್ಥೆಯಿಂದ ಭಾಗವಹಿಸುತ್ತಿರುವದರಿಂದ ಕಾಲೇಜದ ನಿತ್ಯ ಜೀವನವು ಸಾಮರ್ಥ್ಯ, ಶಿಸ್ತು, ಸಂಘಟನೆಗಳಿಂದ ಸುಗಮವಾಗಿ ನಡೆಯಲು ಸಾಧ್ಯವಾಗಿದೆ.

೧೯೫೫ನೇ ಜನೆವರಿ ತಿಂಗಳಲ್ಲಿ ಒಳ್ಳೇ ಮಹತ್ವವಾದ ಸಮಾರಂಭ ನಡೆಯಿತು. ಈ ಸಂಸ್ಥೆಯ ಮೊಟ್ಟಮೊದಲಿನ ಪ್ರಿನ್ಸಿಪಾಲರಾದ ಡಿ. ಚೆನ್ನಬಸಪ್ಪನವರ ಭಾವಚಿತ್ರದ ಅನಾವರಣವು ಆಗಿನ ಶಿಕ್ಷಣಮಂತ್ರಿಗಳಾದ ಶ್ರೀ ದಿನಕರ ದೇಸಾಯಿಯವರ ಅಮೃತ ಹಸ್ತದಿಂದ ನಡೆಯಿತು. ಮರುವರುಷ ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ಇಲ್ಲಿಯವರೆಗೆ ಒಂದೇ ಭಾಗವಿದ್ದ ಮೊದಲನೆಯ ವರ್ಗದಲ್ಲಿ ಮತ್ತೊಂದು ಭಾಗವು ಪ್ರಾರಂಭವಾಯಿತು. ಅದರಿಂದ ಹೆಚ್ಚು ಮಕ್ಕಳಿಗೆ ಪ್ರವೇಶ ದೊರೆತು ಸಾರ್ವಜನಿಕರ ಬೇಡಿಕೆ ಪೂರೈಸಲಾಯಿತು. ಕೆಲವು ದಿನಗಳಿಂದ ನಡೆಯುತ್ತ ಬಂದ ಪುಸ್ತಕ ಭಾಂಡಾರವನ್ನು ಪುನರ್ಘಟಿಸಲಾಯಿತು. ಅವಶ್ಯವಿದ್ದ ಶೇರುಗಳನ್ನು ಶಿಕ್ಷಕರಿಂದಲೂ ಶಿಕ್ಷಕ ವಿದ್ಯಾರ್ಥಿಗಳಿಂದಲೂ ಕೂಡಿಸಿದ್ದರಿಂದ ಭಾಂಡಾ

ರವು ಸಹಕಾರಿ ಕಾಯ್ದೆಯನ್ವಯ ರಜಿಸ್ಟರ ಮಾಡಲ್ಪಟ್ಟಿತು. ಹೀಗಾಗಿ ಶಿಕ್ಷಕ ವಿದ್ಯಾರ್ಥಿಗಳಿಗೆ ಅವಶ್ಯವಿರುವ ವಸ್ತುಗಳು ಇಲ್ಲಿಯೇ ಸಿಗುವಂತಾದವು. ಈ ಸಹಕಾರಿ ಭಾಂಡಾರದ ಆಡಳಿತವನ್ನು ಸಾಗಿಸುವದರಲ್ಲಿ ಶಿಕ್ಷಕವಿದ್ಯಾರ್ಥಿಗಳಿಗೆ ಪ್ರಮುಖ ಸ್ಥಾನವಿರುವದರಿಂದ ಅವರಿಗೆ ಸಹಕಾರಿ ತತ್ವಗಳ ಮಾಹಿತಿಯಾಗಲು ಅನುಕೂಲವಾಯಿತು. ಈ ಭಾಂಡಾರಕ್ಕೆ ವರ್ಷಾಂತ್ಯದಲ್ಲಿ ದೊರೆಯುವ ಲಾಭದ ಕೆಲವು ಭಾಗವು ವಿದ್ಯಾರ್ಥಿಗಳ ಉಪಯೋಗಕ್ಕೆಂದು ದಾನದ ರೂಪವಾಗಿ ಸಿಗುತ್ತಿರುವದೂ ಹೆಚ್ಚಿನ ಸೌಕರ್ಯವನ್ನುಂಟುಮಾಡಿದೆ. ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ಓದುತ್ತಿರುವ ಎಳೆ ಮಕ್ಕಳಿಗೆ ಮೋಹಕರವಾದ ವಾತಾವರಣವನ್ನುಂಟು ಮಾಡಲು ಕಾಲೇಜ ಆವಾರದಲ್ಲಿದ್ದ ತೋಟಗಳನ್ನು ವಿಸ್ತೃತ ಮಾಡಿ ಚಿಕ್ಕ ಪ್ರಮಾಣದ ಪ್ರಾಣಿ ಸಂಗ್ರಹಾಲಯವನ್ನೂ ಪ್ರಾರಂಭಿಸಲಾಗಿದೆ. ಒಕ್ಕಲತನದ ಅಭ್ಯಾಸವು ಸರಿಯಾಗಿ ಸಾಗಲು ಕಾಲೇಜದ ವಶದಲ್ಲಿದ್ದ ಭೂಮಿಯು ಕಡಿಮೆಯಾಗಿತ್ತಲ್ಲದೆ, ಕಲೆಕ್ಟರರ ಕಂಪೌಂಡಿನಲ್ಲಿದ್ದ ಭೂಮಿಯನ್ನೂ ಬಿಟ್ಟುಕೊಡಬೇಕಾಯಿತು. ಈ ಅಡಚಣೆಯನ್ನು ದೂರಮಾಡುವದಕ್ಕೋಸ್ಕರ ಕಾಲೇಜದ ಹಿಂದಿನ ಭಾಗಕ್ಕೆ ಒಳ್ಳೇ ಸಮೀಪವಾದ ಲ್ಯಾಂಡರಿಕಾರ್ಡ್ಸ್ ಕಚೇರಿಯ ಆವಾರದಲ್ಲಿದ್ದ ಪಡ ಭೂಮಿಯನ್ನು ಸರಕಾರದವರ ಕಡೆಯಿಂದ ವರ್ಗಾಯಿಸಿಕೊಂಡು ಸಾಗುವಳಿ ಮಾಡಿಕೊಳ್ಳಲಾಯಿತು. ಇದರ ಮತ್ತು ಹಾಸ್ಟೆಲಕ್ಕೆ ಹೊಂದಿ ಇದ್ದ ಕಾಲೇಜದ ಹೊಲದ ನಡುವೆ ಇರುವ ಡಾ. ಮಹಿಷಿಯವರ ಹೊಲವನ್ನು ಕಾಲೇಜದ ಉಪಯೋಗಕ್ಕೆ ತಗೆದುಕೊಳ್ಳಲಾಯಿತು. ಇದಲ್ಲದೆ ಹೆಣ್ಣು ಮಕ್ಕಳ ಹಾಯಸ್ಕೂಲಿನ ಹಿಂದೆ ಇರುವ ಹೊಲವೂ ವಿಸ್ತರಿಸಲ್ಪಟ್ಟಿತು. ಒಟ್ಟು ೧೪ ಎಕರೆಗಳಷ್ಟು ಭೂಮಿಯನ್ನು ಒಕ್ಕಲತನಕ್ಕೆ ಉಪಯೋಗ ಮಾಡಿಕೊಳ್ಳಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡಲಾಯಿತು. ಮಟ್ಟಿ ಹೊಡೆಯುವ ಇಲ್ಲವೆ ನೀರನ್ನು ಹೊರಗೆ ಹಾಕುವ ಪಂಪಿನ ವ್ಯವಸ್ಥೆ ಇಲ್ಲದ್ದರಿಂದ ಹಿಂಗಾರಿಯ ಬೆಳೆಯನ್ನು ತೆಗೆದುಕೊಳ್ಳಲು ಸಾಧ್ಯವಿರಲಿಲ್ಲ. ಸ್ವಲ್ಪ ಭೂಮಿಯಲ್ಲಾದರೂ ನೀರಾವರಿಯಿಂದ ಬೆಳೆಯನ್ನು ತಗೆದುಕೊಳ್ಳಲು ಅನುಕೂಲವಾಗುವಂತೆ ಪ್ರಯತ್ನ ಮಾಡಬೇಕಾಯಿತು. ಅದು ಅಭ್ಯಾಸ ಪತ್ರಿಕೆಯ ಪ್ರಕಾರ ಅವಶ್ಯವೂ ಆಗಿತ್ತು.

ಕಾಲೇಜದ ಹಿಂದಿನ ಭಾಗದಲ್ಲಿ ಎಷ್ಟೋ ವರುಷಗಳಿಂದ ಉಪಯೋಗವಾಗದೇ ಇದ್ದ ದೊಡ್ಡ ಹೊಂಡವನ್ನು ದುರಸ್ತ ಮಾಡಿಸಿ ಅದರ ನೀರನ್ನು ಪ್ರ್ಯಾಕ್ಟಿಸಿಂಗ ಸ್ಕೂಲಿನ ತೋಟಕ್ಕೂ ಕಾಲೇಜದ ಹೊಲಕ್ಕೂ ಒಯ್ಯಲು ಅನುಕೂಲವಾಗುವಂತೆ ಸಿಮಿಂಟಿನ ಕಾಲುವೆಗಳು ಶಿಕ್ಷಕ ವಿದ್ಯಾರ್ಥಿಗಳ ಶ್ರಮದಾನದಿಂದಲೇ ತಯಾರಿಸಲ್ಪಟ್ಟಿದ್ದರಿಂದ ಸುಮಾರು ೧ ಎಕರೆಯಷ್ಟು ಭೂಮಿಯಲ್ಲಿ ಚಳಿಗಾಲದ ಬೆಳೆಯನ್ನು ತೆಗೆದು ಕೊಳ್ಳಲು ಒಳ್ಳೇ ಅನುಕೂಲವಾಯಿತು. ಶಿಕ್ಷಕ ವಿದ್ಯಾರ್ಥಿಗಳಿಂದ ತಯಾರಾದ ಖಾದೀ ಅರಿವೆಗೆ ಬಣ್ಣ ಹಾಕಲಿಕ್ಕೂ, ವಿದ್ಯಾರ್ಥಿಗಳಿಗೆ ಬಣ್ಣಕೊಡುವ ಪದ್ಧತಿಯನ್ನು ಕಲಿಸಲಿಕ್ಕೂ ಸಾಧ್ಯವಾಗುವ ಉದ್ದೇಶದಿಂದ ಈ ಸಂಸ್ಥೆಯಲ್ಲಿ ಬಣ್ಣದ ಕೇಂದ್ರವೂ ತೆರೆಯಲ್ಪಟ್ಟಿತು. ಈ ಕೇಂದ್ರದಲ್ಲಿ ಜಿಲ್ಲೆಯ ಉಳಿದ ಶಾಲೆಗಳಲ್ಲಿ ತಯಾರಾದ ಅರಿವೆಗೆ ಬಣ್ಣಹಾಕುವ ವ್ಯವಸ್ಥೆ ಇದೆ. ಕಾಲೇಜದ ನಿತ್ಯಜೀವನದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರಾಮುಖ್ಯ ಸ್ಥಾನವಿರುವದರಿಂದ ಸಭೆಗಳೂ, ವಿವಿಧ ವಿನೋದಾವಳಿಗಳೂ ನಾಟಕಗಳೂ ಮೇಲಿಂದ ಮೇಲೆ ನಡೆಯುತ್ತವೆ. ಇವೆಲ್ಲ ನಡೆಯಲು ಕಾಲೇಜದಲ್ಲಿ ದೊಡ್ಡ ಮಂದಿರ ಇರುವದಾದರೂ ಅದಕ್ಕೊಂದು ಯೋಗ್ಯವಾದ ರಂಗ ಮಂಟಪ ಇಲ್ಲದಿರುವದು ಒಂದು ದೊಡ್ಡ ಕೊರತೆಯಾಗಿತ್ತು. ಅದನ್ನು ಹೋಗಲಾಡಿಸಲು ೧೯೫೭ರಲ್ಲಿ ಸ್ವಲ್ಪ ಖರ್ಚಿನಲ್ಲಿಯೇ ಕಾಲೇಜದ ಸಾಂಸ್ಕೃತಿಕ ಚಟುವಟಿಕೆಗಳಿಗೆ ಉಪಯೋಗವಾಗುವಂತೆ ಆ ಮಂದಿರದಲ್ಲಿ ರಂಗ ಮಂಟಪವೊಂದನ್ನು ನಿಲ್ಲಿಸಲಾಯಿತು. ಕಾಲೇಜದ ಮುಂದಿನ ಹಾಗೂ ಹಿಂದಿನ ತೋಟಗಳನ್ನು ವಿಸ್ತರಿಸುವದರಿಂದ ಅವುಗಳಿಗೆ ಸಾಕಷ್ಟು ನೀರನ್ನು ಪೂರೈಸಲು ಒಂದು ಹೌದಿನ ಅವಶ್ಯಕತೆಯೂ ಆಯಿತು. ಈ ಬೇಡಿಕೆಯನ್ನೂ ಸಹ ಶಿಕ್ಷಕ ವಿದ್ಯಾರ್ಥಿಗಳ ಶ್ರಮದಾನದಿಂದಲೇ ಪೂರೈಸಿಕೊಳ್ಳಲಾಯಿತು. ಹಿಂಭಾಗದಲ್ಲಿದ್ದ ತೋಟದ ಮಧ್ಯದಲ್ಲಿ ಶಿಕ್ಷಕ ವಿದ್ಯಾರ್ಥಿಗಳು ಒಂದು ಕಾರಂಜಿಯನ್ನು ತಯಾರಿಸಿದರು. ಅದನ್ನು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ರ್‍ಯಾಂಗ್ಲರ ಪಾವಟೆಯವರು ದಿ. ೨–೧೦–೧೯೫೭ ರಂದು ಗಾಂಧಿ ಜಯಂತಿಯ ಶುಭ ಮುಹೂರ್ತದಲ್ಲಿ ಉದ್ಘಾಟಿಸಿದರು. ಈ ವರುಷವೂ ಶಿಕ್ಷಕ ವಿದ್ಯಾರ್ಥಿಗಳು ಶ್ರಮದಾನದ ಕಾರ್ಯವನ್ನು ಮುಂದುವರಿಸಿ ಪ್ರ್ಯಾಕ್ಟಿಸಿಂಗ ಸ್ಕೂಲಿನ ಮುಂದೆ ಒಂದು ದೊಡ್ಡ ಕಟ್ಟೆಯನ್ನು ಕಟ್ಟಿ ಅಲ್ಲಿಯೇ ಈ ಕಾಲೇಜದ ಶತಮಾನೋತ್ಸವವು ನಡೆಯುವಂತೆ ಶಿಕ್ಷಕ ವಿದ್ಯಾರ್ಥಿಗಳು ಉತ್ಸಾಹದಿಂದ ಕಾರ್ಯ ಸಾಗಿಸಿದ್ದಾರೆ. ಮತ್ತೊಂದು

ಹೆಚ್ಚಿನ ಸಂತೋಷದ ಸಂಗತಿಯೆಂದರೆ ಈ ಸಂಸ್ಥೆಗೆ ವಿದ್ಯುದ್ದೀಪಗಳ ಪೂರೈಕೆ. ಮೊದಲಿನ ಜಾಗತಿಕಯುದ್ಧದವರೆಗೂ ವಿದ್ಯಾರ್ಥಿಗಳು ವಸತಿಗೃಹದಲ್ಲಿ ಸಮೆಗಳನ್ನು ಉಪಯೋಗಿಸುತ್ತಿದ್ದರು. ಆ ಮೇಲೆ ಕಂದೀಲುಗಳು ಬಳಕೆಯಲ್ಲಿ ಬಂದವು. ಕಳೆದ ೩೫ ವರುಷಗಳಲ್ಲಿ ಎಲ್ಲ ಕಡೆಗೂ ವಿದ್ಯುದ್ದೀಪಗಳು ಉಪಯೋಗಿಸಲ್ಪಡುವಾಗ ಇಂಥ ದೊಡ್ಡ ಸಂಸ್ಥೆಯಲ್ಲಿ ಆ ಸೌಕರ್ಯವು ಇಲ್ಲದಿರುವದೊಂದು ಬಹುದೊಡ್ಡ ಅಡಚಣೆಯಾಗಿತ್ತು. ಕಳೆದ ಮೂರು ವರುಷಗಳ ದೀರ್ಘ ಪ್ರಯತ್ನದ ಫಲವಾಗಿ ಅತ್ಯವಶ್ಯವಾಗಿದ್ದ ವಿದ್ಯುದ್ದೀಪಗಳು ಈ ಸಂಸ್ಥೆಯಲ್ಲಿ ಹೋದ ಅಕ್ಟೋಬರ ದಿನಾಂಕ ಎರಡರಂದು ಪ್ರಾರಂಭವಾದವು. ಈ ಕಾಲೇಜಕ್ಕೆ ೧೯೫೭ರಲ್ಲಿ ನೂರು ವರುಷಗಳು ತುಂಬಿದವಾದ್ದರಿಂದ ಶತಮಾನೋತ್ಸವವನ್ನು ಜರುಗಿಸುವ ಭಾರವು ಈಗಿನ ಶಿಕ್ಷಕ ವಿದ್ಯಾರ್ಥಿಗಳ ಹಾಗೂ ಪ್ರಾಧ್ಯಾಪಕರ ಮೇಲೆ ಬಿದ್ದಿತು. ಆಬಗೆಗೆ ನಾವೆಲ್ಲರೂ ಹುರುಪು ಹುಮ್ಮಸುಗಳಿಂದ ಮುಂದೆ ಬಂದು ಈ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ ಸಮಿತಿಯೊಂದನ್ನು ರಚಿಸಿ, ಕಳೆದ ವರುಷ ನಡೆಯಬೇಕಾಗಿದ್ದ ಈ ಮಹಾ ಸಮಾರಂಭವನ್ನು ಇದೇ ಡಿಸೆಂಬರ ಕೊನೆಯ ವಾರದಲ್ಲಿ ಜರುಗಿಸಲು ಎಲ್ಲ ಸಿದ್ಧತೆಗಳನ್ನೂ ನಡಿಸಿದ್ದೇವೆ. ಈ ಸಂಸ್ಥೆಯಿಂದ ಹೊರಬಿದ್ದ ಸಾವಿರಾರು ಶಿಕ್ಷಕರ ಹಾಗೂ ಶಿಕ್ಷಣಾಭಿಮಾನಿಗಳ ನೆರವಿನಿಂದ ಈ ಪವಿತ್ರ ಸಮಾರಂಭವು ಯಶಸ್ವಿಯಾಗುವದೆಂದು ಹಾರೈಸಿ ಈ ಸಂಸ್ಥೆಯ ನೂರು ವರುಷಗಳ ಸಂಕ್ಷಿಪ್ತ ಇತಿಹಾಸವನ್ನು ಇಲ್ಲಿಗೆ ಮುಗಿಸುವೆವು.

ನಮ್ಮ ಮಾಸಿಕವು

(ಹುಟ್ಟು ಹಾಗೂ ಬೆಳವಣಿಗೆ)

ಲೇಖಕರು : **ಶ್ರೀ ಶಿಂತ್ರಿ ಬಸಪ್ಪನವರು**

ಗಂಡು ಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜದ ಶತಾಬ್ದಿ ಸಮಾರಂಭದ ಸವಿನೆನಹಿಗಾಗಿ 'ಜೀವನ ಶಿಕ್ಷಣ' ಮಾಸಿಕವು, ಸ್ಮಾರಕಸಂಪುಟವಾಗಿ ಆ ಶುಭ ಪ್ರಸಂಗದಲ್ಲಿ ಪ್ರಕಟಗೊಳ್ಳುತ್ತಿರುವದು ಅದರ ಸಂಪಾದಕ ಮಂಡಲದ ಸದಸ್ಯರಿಗೂ, ಪೋಷಕರಿಗೂ, ಶಿಕ್ಷಕ–ಶಿಕ್ಷಕಿಯರಿಗೂ, ಓದುಗರಿಗೂ ಹೇಳತೀರದಷ್ಟು ಹಿಗ್ಗಾಗಿರಲು ಸಾಕು. ಸ್ಮಾರಕಸಂಪುಟದ ಪ್ರಕಟನೆಯು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪಂಡಿತರತ್ನ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳವರ ಅಮೃತ ಹಸ್ತದಿಂದ ಆ ಸುಪ್ರಸಂಗದಲ್ಲಿ ಜರುಗುತ್ತಿರುವದು ನಮ್ಮೆಲ್ಲರ ಹಿಗ್ಗನ್ನು ಇನ್ನಷ್ಟು ಹಿಗ್ಗಿಸುತ್ತಿದೆ. ಈ ಮಾಸಿಕವು ಆ ಕಾಲೇಜದೊಂದು ಮುಖ್ಯ ಅಂಗವಾಗಿದ್ದುಕೊಂಡು ಅದಕ್ಕೆ ಹೆಚ್ಚಿನ ಮೆರಗನ್ನು ತಂದು ಕೊಟ್ಟಿದೆ. ಇದರ ಕಾರ್ಯಾಲಯವು ಆ ಕಾಲೇಜದಲ್ಲಿಯೇ ಇದೆ. ಪ್ರಾರಂಭದಿಂದಲೂ ಈ ಪತ್ರಿಕೆಯ ಸಂಪಾದಕರು ಆ ಕಾಲೇಜದ ಪ್ರಿನ್ಸಿಪಾಲರೇ ಆಗಿರುವ ಸಂಪ್ರದಾಯವಿದೆ. ಹಲವು ಸಲ ಪ್ರಿನ್ಸಿಪಾಲರಿಗೆ ಅವರ ಮ್ಯಾನೇಜರರೆಂದು ಕರೆದ ಉಲ್ಲೇಖಗಳೂ ಇವೆ. ಈಗ ಮಾತ್ರ ಇದಕ್ಕೊಂದು ಸಂಪಾದಕ ಮಂಡಲವಿದ್ದು ಅದರಲ್ಲಿ ಐದು ಜನ ಸದಸ್ಯರಿರುವರು. ಪ್ರಿನ್ಸಿಪಾಲರವರು ಅದರ ಪ್ರಧಾನ ಸಂಪಾದಕರು ಮತ್ತು ಧಾರವಾಡ ಜಿಲ್ಹೆಯ ಎಜ್ಯುಕೇಶನಲ್ ಇನ್‌ಸ್ಪೆಕ್ಟರರವರು ಅದರ ಸಂಚಾಲಕರು. ಇವರಲ್ಲದೆ ಓರ್ವರು ಸರಕಾರಿ ಮತ್ತು ಈರ್ವರು ಸರಕಾರೇತರ ಸದಸ್ಯರಿರುವರು. ಕಾಲೇಜವು ಹಿಗ್ಗಿದಾಗ, ಈ ಪತ್ರಿಕೆಯೂ ಹಿಗ್ಗಿದೆ; ಅದು ಕುಗ್ಗಿದಾಗ, ಇದೂ ಸಹ ಕುಗ್ಗಿದೆ. ಅರ್ಥಾತ್, ಇದರ ಏರಿಳಿತಗಳು ಕಾಲೇಜದ ಹಿಗ್ಗು–ಕುಗ್ಗುಗಳನ್ನವಲಂಬಿಸಿವೆ. ಆದುದರಿಂದ, ಕಾಲೇಜದ ಶತಸಾಂವತ್ಸರಿಕೋತ್ಸವದ ಸುಸಂದರ್ಭದಲ್ಲಿ ಈ ಪತ್ರಿಕೆಯ ವೃತ್ತಾಂತವನ್ನು ಸ್ವಲ್ಪದರಲ್ಲಿ ವಿವರಿಸುವದರ ಔಚಿತ್ಯವು ನಮ್ಮ ಓದುಗರಿಗೆ ಹೊಳೆಯದೆ ಇರಲಾರದು.

ಹುಟ್ಟು

ಈ ಪತ್ರಿಕೆಯು ೧೮೬೫ನೆಯ ಇಸವಿ ಮೇ ತಿಂಗಳ ೧ನೆಯ ದಿನಾಂಕ ಬೆಳಗಾವಿಯಲ್ಲಿಯ ಟ್ರೇನಿಂಗ್ ಸಂಸ್ಥೆ (೧೮೫೭ರಲ್ಲಿ ಧಾರವಾಡದಲ್ಲಿ ಜನ್ಮವೆತ್ತಿದ ಈ ಸಂಸ್ಥೆಯು ೧೮೬೧ರಲ್ಲಿ ಬೆಳಗಾವಿಗೆ ವರ್ಗಾಯಿಸಲ್ಪಟ್ಟಿತು; ಮತ್ತು

ಮುಂದ ೧೮೭೫ರಲ್ಲಿ ಅದು ಪುನಃ ಧಾರವಾಡಕ್ಕೆ ಸ್ಥಳಾಂತರಿಸಲ್ಪಟ್ಟಿತು.)ಯಲ್ಲಿ 'ಮಠಪತ್ರಿಕೆ'ಯೆಂಬ ಅಭಿಧಾನದಿಂದ ಉದಯ ಹೊಂದಿ ಉತ್ತರ ಕರ್ನಾಟಕದ ಪತ್ರಿಕಾವ್ಯವಸಾಯಕ್ಕೆ ನಾಂದಿಯಾಗಿ ಪರಿಣಮಿಸಿತೆಂಬಂತೆ ತೋರುತ್ತಿದೆ. ಮಠಪತ್ರಿಕೆಯೆಂಬ ಹೆಸರನ್ನು ಕೇಳಿದ ಕೂಡಲೆ ಈಗಿನವರಿಗೆ ಅಚ್ಚರಿಯೆನಿಸಬಹುದು. ಮಠವೆಂದರೆ ಸಾಲೆ. ಆ ಕಾಲದಲ್ಲಿ ಸಾಲೆಗಳೆಲ್ಲ ಮಠಗಳಲ್ಲಿಯೇ ಇರುತ್ತಿದ್ದವು. ಈಗ ಎಷ್ಟೋ ಮಠಗಳಿಗೆ 'ಸಾಲಿಮಠ' ಎಂದು ಹೆಸರಿರುವದು ಆ ಮಾತಿಗೆ ಸಾಕ್ಷಿಯಾಗಿ ನಿಂತಿದೆ. ಮಠಗಳಲ್ಲಿದ್ದ ಅಯ್ಯನವರು ವಿದ್ಯಾರ್ಜನೆಗೋಸ್ಕರ ಮಠಕ್ಕೆ ಬಂದ ಮಕ್ಕಳಿಗೆಲ್ಲ ಜಾತಿ–ಮತ, ಪಕ್ಷ–ಪಂಗಡ, ಮೇಲುಕೀಳು, ಮುಂತಾದ ಭೇದಭಾವಗಳನ್ನೆಣಿಸದೆ ವಿದ್ಯಾದಾನ ಮಾಡುತ್ತಿದ್ದರು. ಆಗಿನ ಮಠಗಳು ಗುರುಕುಲಗಳಾಗಿದ್ದವು. ಆದುದರಿಂದ, ಮಠಪತ್ರಿಕೆಯೆಂದರೆ ಶಾಲಾ ಪತ್ರಿಕೆಯೆಂದರ್ಥವಾಗುತ್ತಿದೆ. ಈ ಪತ್ರಿಕೆಯು ಉಗಮ ಹೊಂದಿದಾಗ ಲಿಂಗೈಕ್ಯ ಡೆಪ್ಯೂಟಿ ಚನ್ನಬಸಪ್ಪನವರು ೧೮೬೪ನೆಯ ಇಸವಿಯಿಂದ ಬೆಳಗಾವಿಯಲ್ಲಿಯ ಟ್ರೇನಿಂಗ್ ಸಂಸ್ಥೆಯ ಪ್ರಪ್ರಥಮ ಪ್ರಿನ್ಸಿಪಾಲರಾಗಿದ್ದರು. ಅವರೇ ೧೮೬೫ರಲ್ಲಿ ಈ ಪತ್ರಿಕೆಯ ಪ್ರಪ್ರಥಮ ಸಂಪಾದಕರು ಇಲ್ಲವೆ ಸಂಚಾಲಕರಾದರು. ಆಗ ಬೆಳಗಾವಿಯಲ್ಲಿ 'ಸಮಾಚಾರ' ಎಂಬ ಹೆಸರಿನದೊಂದು ಮುದ್ರಣಾಲಯವಿತ್ತು. ಅದರಲ್ಲಿ ಮೊದಲಿನ ಆರು ವರ್ಷಗಳ ವರೆಗೆ ಇದು ಲಿಥೋಗ್ರಾಫ್ (ಶಿಲಾಮುದ್ರಣ) ಪದ್ಧತಿಯಂತೆ ಕೈಯಿಂದ ಬರೆಯಲ್ಪಟ್ಟು ಛಾಪಿಸಲ್ಪಡುತ್ತಿತ್ತು. ೧೮೭೧ನೆಯ ಇಸವಿಯಿಂದೀಚೆಗೆ ಇದು ಈಗಿನಂತೆ ಅಚ್ಚುಗೊಳಿಸಲ್ಪಡಹತ್ತಿತು. ಲಿಥೋಗ್ರಾಫ್ ಪದ್ಧತಿಯಂತೆ ಮುದ್ರಣ ಹೊಂದಿದ ಸಂಪುಟಗಳ ಪ್ರತಿಗಳು ಈ ಪತ್ರಿಕೆಯ ಕಾರ್ಯಾಲಯದಲ್ಲಿವೆ. ಆಗಿನ ಸಂಚಿಕೆಗಳಲ್ಲಿಯ ವಿಷಯಾನುಕ್ರಮಣಿಕೆಯನ್ನವಲೋಕಿಸಿದರೆ, ಮೊದಲಿನ ಒಂದೆರಡು ವಿಷಯಗಳು ಶೈಕ್ಷಣಿಕವಿದ್ದು ಉಳಿದೆಲ್ಲವುಗಳು ವಿದ್ಯಾ ಇಲಾಖೆಯಿಂದ ಹೊರಟ ಸರಕ್ಯೂಲರುಗಳು, ಶಿಕ್ಷಕರ ವರ್ಗಾವರ್ಗಿಗಳು, ನೌಕರರಿಗೆ ವಿಧಿಸಲ್ಪಟ್ಟ ಶಿಕ್ಷೆಗಳು, ಟ್ರೇನಿಂಗ್ ಹೊಂದಿದ ಶಿಕ್ಷಕರ ನೇಮಣೂಕಿಗಳು, ಇವೇ ಕಂಡು ಬರುತ್ತಿವೆ.

ಸ್ಥಿತ್ಯಂತರಗಳು

ಈ ಮಾಸಿಕದ ಹೆಸರಿನಲ್ಲಿ ಮತ್ತು ವರ್ಷಗಳ ಆರಂಭದಲ್ಲಿ ಕಾಲಕಾಲಕ್ಕೆ ಬದಲಾವಣೆಗಳಾಗುತ್ತ ಬಂದಿವೆ. ಅವುಗಳನ್ನಿಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಮೊದಲಿನ ಎರಡು ವರ್ಷಗಳ ವರೆಗೆ ಈ ಮಾಸಿಕದ ವರುಷವು ಮೇ ತಿಂಗಳ ೧ನೆಯ ದಿನಾಂಕದಿಂದ ಪ್ರಾರಂಭವಾಗುತ್ತಿದ್ದುದು ಸಂಚಿಕೆಗಳ ಅನುಕ್ರಮ ನಂಬರುಗಳಿಂದ ಸ್ಪಷ್ಟವಾಗಿ ಕಂಡು ಬರುತ್ತಿದೆ. ಆದರೆ ೧೮೬೭ರಿಂದ ಅದು ಎಪ್ರೀಲ ತಿಂಗಳ ೧ನೆಯ ದಿನಾಂಕದಿಂದ ಪ್ರಾಂರಭವಾಗಹತ್ತಿತು; ಮತ್ತು ಆ ದಿನಾಂಕದಿಂದ ಅದಕ್ಕೆ 'ಶಾಲಾಪತ್ರಿಕೆ'ಯೆಂಬ ನಾಮಕರಣವಾಯಿತು. ಮುಂದೆ ೧೮೭೧ರ ಅಕ್ಟೋಬರದಿಂದ ಅದಕ್ಕೆ 'ಕನ್ನಡ ಶಾಲಾ ಪತ್ರಿಕೆ' ಯೆಂಬ ಹೆಸರಿಡಲಾಯಿತು. ೧೮೭೫ರಲ್ಲಿ ಕಾಲೇಜವು ಧಾರವಾಡಕ್ಕೆ ಸ್ಥಳಾಂತರಿಸಲ್ಪಟ್ಟಿತು. ಅದರಗೂಡ ನಮ್ಮ ಮಾಸಿಕವೂ ಧಾರವಾಡಕ್ಕೆ ಬಂದಿತೆಂದು ಹೇಳುವದು ಅನವಶ್ಯಕ. ಮಾಸಿಕವು ಧಾರವಾಡಕ್ಕೆ ವರ್ಗಾಯಿಸಲ್ಪಟ್ಟಿದ್ದರೂ ಮುದ್ರಣದ ಕಾರ್ಯವು ಮಾತ್ರ ಬೆಳಗಾವಿಯಲ್ಲಿಯ 'ಸಮಾಚಾರ' ಮುದ್ರಣಾಲಯದಲ್ಲಿಯೇ ಮುದ್ರಣವನ್ನು ಹೊಂದುತ್ತಿತ್ತು. ೧೮೭೭ನೆಯ ಇಸವಿಯಿಂದ ಅದು ಮುದ್ರಣವನ್ನು ಧಾರವಾಡದಲ್ಲಿ ಹೊಂದಲು ಪ್ರಾರಂಭಿಸಿತು. ೧೮೭೧ ರಿಂದ ೧೯೩೯ರ ವರೆಗೆ ಅದು 'ಕನ್ನಡ ಶಾಲಾ ಪತ್ರಿಕೆ'ಯೆಂಬ ಹೆಸರಿನಿಂದ ಅವ್ಯಾಹತವಾಗಿ ಸಾಗಿಬಂದಿದೆ. ೧೮೮೦ನೆಯ ಇಸವಿಯಿಂದ ೧೯೧೮ರ ವರೆಗೆ ಅದರ ವರ್ಷವು ಜಾನೇವಾರಿಯಿಂದ ಪ್ರಾರಂಭವಾಗಿ ೧೯೧೯ರಿಂದ ಅದು ಪುನಃ ಎಪ್ರೀಲದಿಂದ ಪ್ರಾರಂಭವಾಗಿದೆ.

೧೯೩೯ರ ಎಪ್ರೀಲದಿಂದ ಈ ಮಾಸಿಕವು ರೂಪಾಂತರಹೊಂದಿ 'ಕನ್ನಡ ಪ್ರಾಥಮಿಕ ಶಿಕ್ಷಣ' ವೆಂಬ ಹೆಸರನ್ನು ಧರಿಸಿತು. ಅಲ್ಲಿಯ ವರೆಗೆ ಮಹಿಳೆಯರಿಗೋಸ್ಕರ ಪ್ರತ್ಯೇಕವಾಗಿ ಹೊರಡುತ್ತಿದ್ದ 'ಕನ್ನಡ ಶಿಕ್ಷಿಕೆ'ಯೂ ಮತ್ತು 'ಕನ್ನಡ ಶಾಲಾ ಪತ್ರಿಕೆ'ಯೂ ಅಂದಿನಿಂದ 'ಕನ್ನಡ ಪ್ರಾಥಮಿಕ ಶಿಕ್ಷಣ'ದಲ್ಲಿ ವಿಲೀನಗೊಂಡವು; ಮತ್ತು ಎಂಟು ಪುಟಗಳು ಸ್ತ್ರೀಶಿಕ್ಷಣಕ್ಕೋಸ್ಕರ ಮೀಸಲಾಗಿಡಲ್ಪಟ್ಟವು. ೧೯೪೨ರಲ್ಲಿ ದ್ವಿತೀಯ ವಿಶ್ವಮೇಧದ ಜಳವು ನಮ್ಮ ಮಾಸಿಕಕ್ಕೆ ತಾಗದೆ ಬಿಡಲಿಲ್ಲ. ಕಾಗದದ ತುಟಾಗ್ರತೆಯು ವಿಪರೀತವಾಗಿ ಬೆಳೆದಿದ್ದರಿಂದ ಅದು ಮುಚ್ಚಲ್ಪಡುವವರಲ್ಲಿತ್ತು. ಆದರೆ, ಆಗಿನ ಪ್ರಿನ್ಸಿಪಾಲರು ಸರಕಾರಕ್ಕೆ ಪತ್ರಗಳ ಮೇಲೆ ಪತ್ರಗಳನ್ನು ಬರೆದು ಬಹಳಷ್ಟು ಹೆಣಗಾಡಿದ್ದರಿಂದ ಅದು ತ್ರೈಮಾಸಿಕವಾಗಿ ಪರಿಣಮಿಸಿತು. ಅದು ಹಾಗೂ ಹೀಗೂ ಜೀವ ಹಿಡಿದುಕೊಂಡು ೧೯೪೮ರ ವರೆಗೆ ತ್ರೈಮಾಸಿಕವಾಗಿಯೇ ಉಳಿಯಿತು.

೧೯೪೮ರಲ್ಲಿ ಮತ್ತೆ ಮೂರು ಬದಲಾವಣೆಗಳಾದವು. ಅಲ್ಲಿಯ ವರೆಗೆ ಎಪ್ರೀಲದಿಂದ ಪ್ರಾರಂಭವಾಗುತ್ತಿದ್ದ ಈ ಮಾಸಿಕದ ವರ್ಷವು ಜೂನ ತಿಂಗಳದಿಂದ ಪ್ರಾರಂಭವಾಗಿ ಈಗಲೂ ಸಹ ಅದರಂತೆ ಸಾಗಿದೆ. ಅಲ್ಲಿಯ ವರೆಗೆ ಮಾಸಿಕದ ಮುಖ ಪುಟದ ಮೇಲಿರುತ್ತಿದ್ದ 'ಇದರಲ್ಲಿ ಕನ್ನಡ ಶಿಕ್ಷಕಿಯೂ ಕನ್ನಡ ಶಾಲಾ ಪತ್ರಿಕೆಯೂ ಸಮಾವೇಶಗೊಂಡಿವೆ'ಯೆಂಬ ತಲೆಬರಹವು ಈ ಇಸವಿಯ ಜೂನ ತಿಂಗಳದಿಂದ ಮಾಯವಾಯಿತು. ಮೇಲೆ ಹೇಳಿದಂತೆ ಐದು ವರ್ಷಗಳ ವರೆಗೆ ತ್ರೈಮಾಸಿಕವಾಗಿದ್ದ ಈ ಪತ್ರಿಕೆಯು ಪುನಃ ಮಾಸಿಕವಾಗಿ ಈ ತಿಂಗಳದಿಂದ ಪ್ರತಿ ತಿಂಗಳು ಹೊರಡಲು ಪ್ರಾರಂಭಿಸಿತು.

ಹೊಸ ಘಟನೆ

ಸ್ವಾತಂತ್ರ್ಯಾನಂತರ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಆಡಳಿತಗಳ ಯಂತ್ರಗಳಲ್ಲಿ ಪ್ರಜಾಪ್ರಭುತ್ವಕ್ಕೊಗ್ಗುವ ತಿದ್ದುಪಡಿಗಳು ಹೇರಳವಾಗಿ ಆಗುತ್ತ ಬಂದಿವೆ, ಈಗಲೂ ಆಗುತ್ತಿವೆ, ಮುಂದಾದರೂ ಆಗುವವು. ಕಾಲ ಕಾಲಕ್ಕೆ ತಕ್ಕ ಮಾರ್ಪಾಟುಗಳಾಗುವದು ರಾಷ್ಟ್ರಹಿತದ ದೃಷ್ಟಿಯಿಂದ ವಿಹಿತವು. ಅದಕ್ಕೆ ನಮ್ಮ ಮಾಸಿಕವು ಅಪವಾದವಾಗಿಲ್ಲ. ೧೯೫೦ನೆಯ ಇಸವಿಯಲ್ಲಿ ಈ ಮಾಸಿಕದ ಆಡಳಿತದಲ್ಲಿ ಮಹತ್ವಪೂರ್ಣವಾದೊಂದು ಹೊಸ ಘಟನೆಯು ಜಾರಿಯಲ್ಲಿ ಬಂದಿತು. ಅಲ್ಲಿಯ ವರೆಗೆ ಈ ಮಾಸಿಕದ ವ್ಯವಸ್ಥಾಪಕರೂ ಸಂಪಾದಕರೂ ಸರಕಾರಿ ಅಧಿಕಾರಿಗಳೇ ಇರುತ್ತಿದ್ದರು. ಇದನ್ನು ಹೆಚ್ಚು ಜನಪ್ರಿಯ ಮಾಡುವ ಮತ್ತು ಇದರ ಮಟ್ಟವನ್ನು ಹೆಚ್ಚು ಎತ್ತರಿಸುವ ಉದ್ದೇಶಗಳಿಂದ ಆ ವರುಷದಿಂದ ಇದರ ಸಂಪಾದಕ ಮಂಡಲದಲ್ಲಿ ಈರ್ವರು ಸರಕಾರೇತರ ಸದಸ್ಯರನ್ನು ಸೇರಿಸಿಕೊಳ್ಳಲಾಯಿತು. ೧೯೫೦ನೆಯ ಇಸವಿಯ ಮೇ ತಿಂಗಳ ೩ನೆಯ ದಿನಾಂಕದ ಜಿ. ಆರ್. ಈ. ಡಿ. ನಂಬರ ೮೪೫೯ರಲ್ಲಿ ಅದರ ವಿವರಗಳು ಸರಕಾರದಿಂದ ಕೊಡಲ್ಪಟ್ಟಿವೆ. ಅಂದಿನಿಂದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರವರು ಸಂಪಾದಕ ಮಂಡಲದ ಸಂಚಾಲಕರಾಗಿಯೂ ಕಾಲೇಜದ ಪ್ರಿನ್ಸಿಪಾಲರವರು ಪ್ರಧಾನ ಸಂಪಾದಕರಾಗಿಯೂ ಉಳಿದವರು ಸದಸ್ಯರಾಗಿಯೂ ಉಳಿದಿದ್ದಾರೆ.

'ಜೀವನ ಶಿಕ್ಷಣ'

೧೯೫೬ನೆಯ ಇಸವಿ ನವಂಬರ ೧ನೆಯ ದಿನಾಂಕ ಕನ್ನಡಿಗರ ಕನಸು ನನಸಾಯಿತಷ್ಟೇ. ಕರ್ನಾಟಕ ರಾಜ್ಯೋದಯದೊಂದಿಗೆ ಈ ಮಾಸಿಕಕ್ಕೆ 'ಜೀವನ ಶಿಕ್ಷಣ'ವೆಂಬ ನಾಮಕರಣವಾಯಿತು. ಜೀವನ ಶಿಕ್ಷಣವೆಂದರೆ ಮಹಾತ್ಮಾ ಗಾಂಧಿಯವರಿಂದ ಪ್ರಾರಂಭಿಸಲ್ಪಟ್ಟ ಮೂಲ ಶಿಕ್ಷಣವು. ಮೂಲ ಶಿಕ್ಷಣವು ರಾಷ್ಟ್ರೀಯ ಶಿಕ್ಷಣವೆಂದು ಮಹಾತ್ಮರು ಸಾರಿದ್ದುದು ಸರ್ವಶ್ರುತವಿದೆ; ಮತ್ತು ಕೇಂದ್ರ ಸರಕಾರವು ಅದನ್ನು ಒಪ್ಪಿಕೊಂಡಿದೆ. ಮೂಲ ಶಿಕ್ಷಣವು ಮಗುವಿನ ದೈನಂದಿನ ಜೀವನದ ಅನುಭವಗಳೊಂದಿಗೆ ಸಾಗುತ್ತಿರುವದರಿಂದ ಅದಕ್ಕೆ ಜೀವನ ಶಿಕ್ಷಣವೆಂದು ಕರೆಯಲಾಗುತ್ತಿದೆ. ನಮ್ಮ ಮಾಸಿಕದಲ್ಲಿ ಇತ್ತಿತ್ತಲಾಗಿ ಜೀವನ ಶಿಕ್ಷಣದ ಬಗೆಗೆ ಲೇಖಗಳು ವೆಗ್ಗಳವಾಗಿ ಪ್ರಕಟಗೊಳ್ಳುತ್ತಿರುವದರಿಂದ ಅದಕ್ಕೆ 'ಜೀವನ ಶಿಕ್ಷಣ'ವೆಂಬ ನಾಮಕರಣವಾದುದು ಎಲ್ಲ ದೃಷ್ಟಿಗಳಿಂದಲೂ ಸಮಂಜಸವಾಗಿದೆ. ಈ ಮಾಸಿಕವು ಈಗ ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಹೆಗಳಲ್ಲಷ್ಟೇ ಸುಳಿದಾಡುತ್ತಲಿರುವದರಿಂದ ಅದರ ಕಾರ್ಯಕ್ಷೇತ್ರವು ಬಹು ಚಿಕ್ಕದಾಗಿದೆ. ಅದನ್ನು ಆದಷ್ಟು ತೀವ್ರವಾಗಿ ಹಿಗ್ಗಿಸುವದು ಸರಕಾರದ ಕರ್ತವ್ಯವಾಗಿದೆ. ಕಾರಣವೆಂದರೆ, ಜೀವನ ಶಿಕ್ಷಣವು ಇನ್ನು ಮೇಲೆ ಸಾರ್ವತ್ರಿಕವಾಗುವದರಲ್ಲಿದೆ. ಈ ನಮ್ಮ ನಾಲ್ಕು ಜಿಲ್ಹೆಗಳು ಮೂಲ ಶಿಕ್ಷಣದಲ್ಲಿ ಮಾಡಿದಷ್ಟು ಪ್ರಗತಿಯು ನಮ್ಮ ಹೊಸ ರಾಜ್ಯದ ಉಳಿದ ಜಿಲ್ಹೆಗಳಲ್ಲಾದಂತಿಲ್ಲ; ಮಾತ್ರವಲ್ಲದೆ, ಹಲವು ಜಿಲ್ಹೆಗಳಲ್ಲಿ ಇಲ್ಲವೆಂದರೂ ಸಲ್ಲುವದು. ವಸ್ತುಸ್ಥಿತಿಯು ಹೀಗಿರುವಾಗ ವಿದ್ಯಾ ಇಲಾಖೆಯ ಮಂತ್ರಿಗಳೂ ಅಧಿಕಾರಿಗಳೂ ನಮ್ಮ ರಾಜ್ಯದ ಉಳಿದ ಜಿಲ್ಹೆಗಳ ಪ್ರಾಥಮಿಕ ಸಾಲೆಗಳನ್ನು ನಮ್ಮ ಮಾಸಿಕದ ಚಂದಾದಾರರಾಗುವಂತೆ ನಿರೂಪಿಸಿದರೆ ಅದರ ಕಾರ್ಯವಲಯವು ವಿಸ್ತರಿಸುವದರಲ್ಲಿ ಸಂದೇಹವಿಲ್ಲ. ನಮ್ಮ ಮಾಸಿಕಕ್ಕೆ ಆ ಜಿಲ್ಹೆಗಳಲ್ಲಿ ಪ್ರವೇಶವನ್ನು ಒದಗಿಸಿಕೊಟ್ಟರೆ, ಅಲ್ಲಿಯ ಶಿಕ್ಷಕ–ಶಿಕ್ಷಕಿಯರಿಗೆ ಹೊಸ ಶಿಕ್ಷಣದ ಬಗೆಗೆ ಅದು ಚನ್ನಾಗಿ ಅರಿವನ್ನುಂಟು ಮಾಡಿಕೊಟ್ಟು ಅವರ ಮನಸುಗಳನ್ನು ಆ ಶಿಕ್ಷಣಕ್ಕೋಸ್ಕರ ತೀವ್ರವಾಗಿ ಹದಗೊಳಿಸಬಲ್ಲದು. ಆದುದರಿಂದ, ಅಧಿಕಾರಿಗಳು ಈ ವಿಷಯದತ್ತ ಬೇಗನೆ ಗಮನವೀಯುವದೊಳಿತು.

ವಂತಿಗೆ ಮತ್ತು ಪ್ರಸಾರ

ಬಿಡಿ ಪ್ರತಿಗೆ ಒಂದಾಣೆ ಬೆಲೆಯಿದ್ದ ಉಲ್ಲೇಖವು ದೊರೆತಿದೆ; ಆದರೆ, ಆಗ ವಾರ್ಷಿಕ ವಂತಿಗೆಯು ಎಷ್ಟಿತ್ತೆಂಬುದರ ಆಧಾರವು ಸಿಕ್ಕಿಲ್ಲ. ಅದು ಬಹುತರವಾಗಿ

ಎಂಟು ಆಣೆ ಇದ್ದಿರಬೇಕೆಂಬುದು ನಮ್ಮ ಊಹೆ. ಬಿಡಿ ಪ್ರತಿಗೆ ಎರಡಾಣೆ ಬೆಲೆ ಇದ್ದಾಗ, ವಾರ್ಷಿಕ ವರ್ಗಣಿಯು ೧೫ ಆಣೆ ಇದ್ದು ಅದು ಮುಂದೆ ೧ ರೂಪಾಯಿ ೨ ಆಣೆಗಳಿಗೆ ಏರಿದೆ. ದಿನಗಳೆದಂತೆ ವಾರ್ಷಿಕ ವಂತಿಗೆಯು ೧ ರೂ. ೮ ಆಣೆಗಳಿಗೆ ಏರಿಸಲ್ಪಟ್ಟಿದೆ; ಆಮೇಲೆ ೨ ರೂ. ಆಗಿದೆ ಮತ್ತು ಕೊನೆಗೆ ೪ ರೂ.ಗಳಿಗೆ ಬಂದು ಮುಟ್ಟಿದೆ. ಕಾಗದದ ಖರ್ಚು, ಸಿಬ್ಬಂದಿಯ ಪಗಾರ, ಮುದ್ರಿಸುವ ವೆಚ್ಚ, ಇವು ಬೆಳೆದಂತೆ ವಂತಿಗೆಯು ಮೇಲೇರುತ್ತಿದೆಯೆಂಬುದು ಸುಸ್ಪಷ್ಟವೇ ಇದೆ. ಈಗ ವಾರ್ಷಿಕ ಚಂದಾ ಹಣವು ೪ ರೂಪಾಯಿ ಇದೆ ಮತ್ತು ಬಿಡಿ ಪ್ರತಿಯ ಬೆಲೆ ೬ ಆಣೆ ಇದೆ. ಈಗಿನ ಕಾಗದದ ಬೆಲೆಯನ್ನೂ, ಮುದ್ರಣದ ದರವನ್ನೂ ಸಿಬ್ಬಂದಿಯ ಪಗಾರವನ್ನೂ, ಟಪಾಲಿನ ಖರ್ಚನ್ನೂ ಗಣನೆಗೆ ತಂದುಕೊಂಡರೆ, ನಮ್ಮ ಮಾಸಿಕದ ಈಗಿನ ವಾರ್ಷಿಕ ವಂತಿಗೆಯು ಅತಿ ಕಡಿಮೆಯಿರುವದೆಂಬುದನ್ನು ಮನಗಾಣಿಸಿ ಕೊಡುವ ಅವಶ್ಯಕತೆಯೇ ಇಲ್ಲ. ಪತ್ರಿಕೆಗಳ ಸಾಂಪತ್ತಿಕ ಸ್ಥಿತಿಯು ಅವುಗಳ ಪ್ರಸಾರವನ್ನವಲಂಬಿಸಿರುತ್ತದೆಯಷ್ಟೇ. ಪ್ರಸಾರವು ಹೆಚ್ಚಾದಂತೆ ಪ್ರತಿಗಳನ್ನು ಹೆಚ್ಚಾಗಿ ಹೊರಡಿಸಬೇಕಾಗುವದು. ಪ್ರತಿಗಳ ಸಂಖ್ಯೆಯು ಬೆಳೆದಂತೆ ಮುದ್ರಣದ ವೆಚ್ಚವು ಇಳಿಯುವದು. ಮುದ್ರಣದ ವೆಚ್ಚವು ಇಳಿದಂತೆ ಆರ್ಥಿಕ ಸ್ಥಿತಿಯು ಏರುತ್ತ ನಡೆಯುವದು ಸ್ವಾಭಾವಿಕ. ಈ ಪತ್ರಿಕೆಯು ಹುಟ್ಟಿದಾಗ ಎಷ್ಟು ಪ್ರತಿಗಳು ಹೊರಡುತ್ತಿದ್ದವೆಂಬುದು ಎಷ್ಟು ಶೋಧಿಸಿದರೂ ಗೊತ್ತಾಗಲೊಲ್ಲದು. ೧೮೭೩ರಲ್ಲಿ ಮಾತ್ರ ೪೫೫ ಪ್ರತಿಗಳು ಪ್ರತಿ ತಿಂಗಳು ಅಚ್ಚಾಗುತ್ತಿದ್ದವೆಂಬುದರ ಆಧಾರವು ಆಗಿನ ಪ್ರಿನ್ಸಿಪಾಲರ ರಿಪೋರ್ಟಿನಲ್ಲಿ ಸಿಕ್ಕಿದೆ. ೧೯೪೨ರಲ್ಲಿ ಪ್ರತಿ ತಿಂಗಳು ೧೩೦೦ ಪ್ರತಿಗಳು ಹೊರಡುತ್ತಿದ್ದವೆಂಬುದರ ಉಲ್ಲೇಖವೂ ಸಿಕ್ಕಿದೆ. ೧೮೭೩ ರಿಂದ ೧೯೪೨ರ ವರೆಗಿನ ಇಸವಿಗಳಲ್ಲಿ ಪ್ರತಿ ತಿಂಗಳು ಮುದ್ರಿಸಲ್ಪಡುತ್ತಿದ್ದ ಪ್ರತಿಗಳ ಸಂಖ್ಯೆಯು ಎಲ್ಲಿಯೂ ಸಿಗವಲ್ಲದಾಗಿದೆ. ೧೯೫೩ರಲ್ಲಿ ಪ್ರತಿ ತಿಂಗಳು ಹೊರಡುತ್ತಿದ್ದ ಪ್ರತಿಗಳ ಸಂಖ್ಯೆಯು ೧೩೨೫ ಇತ್ತು ಮತ್ತು ೧೯೫೪ರ ಕೊನೆಗೆ ಅದು ೧೫೦೦ ವರೆಗೆ ಏರಿತು. ಆದರೆ ಈಗ ೧೯೫೭ರಲ್ಲಿ ೨,೦೦೦ ಪ್ರತಿಗಳು ಪ್ರತಿ ತಿಂಗಳು ಅಚ್ಚಾಗುತ್ತಲಿವೆ. ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಹೆಗಳಲ್ಲಿಯ ಎಷ್ಟೋ ಪ್ರಾಥಮಿಕ ಶಾಲೆಗಳಿಗೆ ನಮ್ಮ ಪತ್ರಿಕೆಯು ಹೋಗುವದಿಲ್ಲ. ಆದುದರಿಂದ ಜಿಲ್ಹಾ ಹಾಗೂ ಮುನಸಿಪಲ್ ಸ್ಕೂಲ ಬೋರ್ಡುಗಳು ತಮ್ಮ ತಮ್ಮ ಆಡಳಿತಕ್ಕೊಳಪಟ್ಟಿರುವ ಪ್ರತಿಯೊಂದು ಪ್ರಾಥಮಿಕ ಶಾಲೆಯನ್ನು ಈ ಪತ್ರಿಕೆಗೆ ಚಂದಾದಾರರನ್ನಾಗಿ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಆಯಾ ಬೋರ್ಡುಗಳ ಆಡಳಿತಗಾರರಿಗೆ ಬಿನ್ನವಿಸಿಕೊಳ್ಳುತ್ತೇವೆ.

ಆರ್ಥಿಕ ಪರಿಸ್ಥಿತಿ

ಈ ಪತ್ರಿಕೆಗೆ ಕಾಯ್ದಿಟ್ಟ ನಿಧಿಯ ಅಭಾವವು ಪ್ರಾರಂಭದಿಂದಲೂ ಇದ್ದುದು ಕಂಡುಬರುತ್ತಿದೆ. ಗಳಿಕೆ-ಬಳಿಕೆಗಳನ್ನು ಮೇಳುಗೂಡಿಸುತ್ತ ಬಂದ ಸಂಪ್ರದಾಯವು ೧೮೭೩ನೆಯ ಇಸವಿಯಲ್ಲಿ ಆಗಿನ ಪ್ರಿನ್ಸಿಪಾಲರು ಮೇಲಿನ ಅಧಿಕಾರಿಗಳಿಗೆ ಮಾಡಿದ ರಿಪೋರ್ಟೊಂದರಲ್ಲಿ ವಿವರಿಸಲ್ಪಟ್ಟಿದೆ. ಆದುದರಿಂದ, ಈ ಪತ್ರಿಕೆಯ ಸಾಂಪತ್ತಿಕ ಸ್ಥಿತಿಯು ಹುಟ್ಟಿದಾಗಿನಿಂದಲೂ ಸಮಾಧಾನಕರವಿಲ್ಲ. ಇದರ ಕಾರ್ಯಕ್ಷೇತ್ರವು ಅತಿ ಚಿಕ್ಕದಾಗಿರುವದರಿಂದ ಇದರ ಪ್ರಸಾರಕ್ಕೆ ಎಡೆಯಿಲ್ಲದಾಗಿದೆ. ೧೯೫೨ರ ಸುಮಾರಿಗೆ ಇದರ ಆರ್ಥಿಕ ಪರಿಸ್ಥಿತಿಯು ಪೂರಾ ಹದಗೆಟ್ಟಿತು. ಮಿತವ್ಯಯದ ಕ್ರಮಗಳೆಲ್ಲ ಕೂಡಲೆ ಕೈಕೊಳ್ಳಲ್ಪಟ್ಟವು. ಸದಸ್ಯರ ಗೌರವ ವೇತನಗಳು ತಗ್ಗಿಸಲ್ಪಟ್ಟವು. ಮತ್ತು ಆಡಳಿತದ ವೆಚ್ಚದಲ್ಲಿ ಶಕ್ಯವಿದ್ದಷ್ಟು ಕಾಟಕಸರನ್ನು ಮಾಡಲಾಯಿತು. ಚಂದಾದಾರರ ಸಂಖ್ಯೆಯನ್ನು ಹೆಚ್ಚಿಸಲು ಸಂಪಾದಕ ಮಂಡಲವು ಮಿತಿಮೀರಿ ಹೆಣಗಾಡಿತು. ತತ್ಪರಿಣಾಮದಿಂದ ಸಾಂಪತ್ತಿಕ ಸ್ಥಿತಿಯು ಕಳೆದ ಸುಮಾರು ನಾಲ್ಕುವರ್ಷಗಳಿಂದ ಭರದಿಂದ ಸುಧಾರಿಸುತ್ತ ನಡೆದಿದೆ. ೧೯೫೪ರ ಜೂನಲ್ಲಿ ೨೫೮೫ ರೂಪಾಯಿ ಕೊನೆಯ ಸಿಲ್ಕು ಇದ್ದದ್ದು ಈ ವರುಷದ ಜೂನದಲ್ಲಿ ೬೮೧೧ ರೂಪಾಯಿಗಳಿಗೆ ಬಂದು ಮುಟ್ಟಿದೆ. ೧೯೫೮ರ ಜೂನಕ್ಕೆ ಅದು ೮೦೦೦ ರೂಪಾಯಿಗಳಿಗೆ ಏರಬಹುದೆಂದು ನಂಬಲಾಗಿದೆ.

ಕೊನೆಯ ಮಾತು

ಪ್ರಾರಂಭದಲ್ಲಿ ನಮ್ಮ ಮಾಸಿಕದ ಉದ್ದೇಶವು ಹೆಚ್ಚಾಗಿ ಶಿಕ್ಷಣ ಖಾತೆಯ ಆಡಳಿತಕ್ಕಷ್ಟೇ ಪರಿಮಿತಿಗೊಂಡಿತ್ತಾದರೂ ಕ್ರಮೇಣ ತನ್ನ ಉದ್ದೇಶವನ್ನು ವಿಸ್ತರಿಸುತ್ತ ಈಗ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ವಿಷಯಗಳ ಬಗೆಗೂ ಲೇಖಗಳನ್ನು ಪ್ರಕಟಿಸುತ್ತಲಿದೆ. ರಾಜ್ಯಕೀಯ ರಂಗವೊಂದನ್ನು ಬಿಟ್ಟು ಉಳಿದೆಲ್ಲ ರಂಗಗಳಲ್ಲಿಯ ರಾಷ್ಟ್ರಪೋಷಕ ಚಟುವಟಿಕೆಗಳ ಬಗೆಗೆ ಲೇಖಗಳು ಇತ್ತಿತ್ತಲಾಗಿ ತಲೆ

೧೯೪೮ರಲ್ಲಿ ಮತ್ತೆ ಮೂರು ಬದಲಾವಣೆಗಳಾದವು. ಅಲ್ಲಿಯ ವರೆಗೆ ಎಪ್ರೇಲದಿಂದ ಪ್ರಾರಂಭವಾಗುತ್ತಿದ್ದ ಈ ಮಾಸಿಕದ ವರ್ಷವು ಜೂನ ತಿಂಗಳದಿಂದ ಪ್ರಾರಂಭವಾಗಿ ಈಗಲೂ ಸಹ ಅದರಂತೆ ಸಾಗಿದೆ. ಅಲ್ಲಿಯ ವರೆಗೆ ಮಾಸಿಕದ ಮುಖ ಪುಟದ ಮೇಲಿರುತ್ತಿದ್ದ 'ಇದರಲ್ಲಿ ಕನ್ನಡ ಶಿಕ್ಷಿಕೆಯೂ ಕನ್ನಡ ಶಾಲಾ ಪತ್ರಿಕೆಯೂ ಸಮಾವೇಶಗೊಂಡಿವೆ'ಯೆಂಬ ತಲೆಬರಹವು ಈ ಇಸವಿಯ ಜೂನ ತಿಂಗಳದಿಂದ ಮಾಯವಾಯಿತು. ಮೇಲೆ ಹೇಳಿದಂತೆ ಐದು ವರ್ಷಗಳ ವರೆಗೆ ತ್ರೈಮಾಸಿಕವಾಗಿದ್ದ ಈ ಪತ್ರಿಕೆಯು ಪುನಃ ಮಾಸಿಕವಾಗಿ ಈ ತಿಂಗಳದಿಂದ ಪ್ರತಿ ತಿಂಗಳು ಹೊರಡಲು ಪ್ರಾರಂಭಿಸಿತು.

ಹೊಸ ಘಟನೆ

ಸ್ವಾತಂತ್ರ್ಯಾನಂತರ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಆಡಳಿತಗಳ ಯಂತ್ರಗಳಲ್ಲಿ ಪ್ರಜಾಪ್ರಭುತ್ವಕ್ಕೊಗ್ಗುವ ತಿದ್ದುಪಡಿಗಳು ಹೇರಳವಾಗಿ ಆಗುತ್ತ ಬಂದಿವೆ, ಈಗಲೂ ಆಗುತ್ತಿವೆ, ಮುಂದಾದರೂ ಆಗುವವು. ಕಾಲಕಾಲಕ್ಕೆ ತಕ್ಕ ಮಾರ್ಪಾಟುಗಳಾಗುವದು ರಾಷ್ಟ್ರಹಿತದ ದೃಷ್ಟಿಯಿಂದ ವಿಹಿತವು. ಅದಕ್ಕೆ ನಮ್ಮ ಮಾಸಿಕವು ಅಪವಾದವಾಗಿಲ್ಲ. ೧೯೫೦ನೆಯ ಇಸವಿಯಲ್ಲಿ ಈ ಮಾಸಿಕದ ಆಡಳಿತದಲ್ಲಿ ಮಹತ್ವಪೂರ್ಣವಾದೊಂದು ಹೊಸ ಘಟನೆಯು ಜಾರಿಯಲ್ಲಿ ಬಂದಿತು. ಅಲ್ಲಿಯ ವರೆಗೆ ಈ ಮಾಸಿಕದ ವ್ಯವಸ್ಥಾಪಕರೂ ಸಂಪಾದಕರೂ ಸರಕಾರಿ ಅಧಿಕಾರಿಗಳೇ ಇರುತ್ತಿದ್ದರು. ಇದನ್ನು ಹೆಚ್ಚು ಜನಪ್ರಿಯ ಮಾಡುವ ಮತ್ತು ಇದರ ಮಟ್ಟವನ್ನು ಹೆಚ್ಚು ಎತ್ತರಿಸುವ ಉದ್ದೇಶಗಳಿಂದ ಆ ವರುಷದಿಂದ ಇದರ ಸಂಪಾದಕ ಮಂಡಲದಲ್ಲಿ ಈರ್ವರು ಸರಕಾರೇತರ ಸದಸ್ಯರನ್ನು ಸೇರಿಸಿಕೊಳ್ಳಲಾಯಿತು. ೧೯೫೦ನೆಯ ಇಸವಿಯ ಮೇ ತಿಂಗಳ ೩ನೆಯ ದಿನಾಂಕದ ಜಿ. ಆರ್. ಈ. ಡಿ. ನಂಬರ ೮೪೫೯ರಲ್ಲಿ ಅದರ ವಿವರಗಳು ಸರಕಾರದಿಂದ ಕೊಡಲ್ಪಟ್ಟಿವೆ. ಅಂದಿನಿಂದ ಎಜ್ಯುಕೇಶನಲ್ ಇನ್ಸ್‌ಪೆಕ್ಟರರವರು ಸಂಪಾದಕ ಮಂಡಲದ ಸಂಚಾಲಕರಾಗಿಯೂ ಕಾಲೇಜದ ಪ್ರಿನ್ಸಿಪಾಲರವರು ಪ್ರಧಾನ ಸಂಪಾದಕರಾಗಿಯೂ ಉಳಿದವರು ಸದಸ್ಯರಾಗಿಯೂ ಉಳಿದಿದ್ದಾರೆ.

'ಜೀವನ ಶಿಕ್ಷಣ'

೧೯೫೬ನೆಯ ಇಸವಿ ನವೆಂಬರ ೧ನೆಯ ದಿನಾಂಕ ಕನ್ನಡಿಗರ ಕನಸು ನನಸಾಯಿತಷ್ಟೇ. ಕರ್ನಾಟಕ ರಾಜ್ಯೋದಯದೊಂದಿಗೆ ಈ ಮಾಸಿಕಕ್ಕೆ 'ಜೀವನ ಶಿಕ್ಷಣ'ವೆಂಬ ನಾಮಕರಣವಾಯಿತು. ಜೀವನ ಶಿಕ್ಷಣವೆಂದರೆ ಮಹಾತ್ಮಾ ಗಾಂಧಿಯವರಿಂದ ಪ್ರಾರಂಭಿಸಲ್ಪಟ್ಟ ಮೂಲ ಶಿಕ್ಷಣವು. ಮೂಲ ಶಿಕ್ಷಣವು ರಾಷ್ಟ್ರೀಯ ಶಿಕ್ಷಣವೆಂದು ಮಹಾತ್ಮರು ಸಾರಿದ್ದುದು ಸರ್ವಶ್ರುತವಿದೆ; ಮತ್ತು ಕೇಂದ್ರ ಸರಕಾರವು ಅದನ್ನು ಒಪ್ಪಿಕೊಂಡಿದೆ. ಮೂಲ ಶಿಕ್ಷಣವು ಮಗುವಿನ ದೈನಂದಿನ ಜೀವನದ ಅನುಭವಗಳೊಂದಿಗೆ ಸಾಗುತ್ತಿರುವದರಿಂದ ಅದಕ್ಕೆ ಜೀವನ ಶಿಕ್ಷಣವೆಂದು ಕರೆಯಲಾಗುತ್ತಿದೆ. ನಮ್ಮ ಮಾಸಿಕದಲ್ಲಿ ಇತ್ತಿತ್ತಲಾಗಿ ಜೀವನ ಶಿಕ್ಷಣದ ಬಗೆಗೆ ಲೇಖಗಳು ವೆಗ್ಗಳವಾಗಿ ಸ್ಫುಟಗೊಳ್ಳುತ್ತಿರುವದರಿಂದ ಅದಕ್ಕೆ 'ಜೀವನ ಶಿಕ್ಷಣ'ವೆಂಬ ನಾಮಕರಣವಾದುದು ಎಲ್ಲ ದೃಷ್ಟಿಗಳಿಂದಲೂ ಸಮಂಜಸವಾಗಿದೆ. ಈ ಮಾಸಿಕವು ಈಗ ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಹೆಗಳಲ್ಲಷ್ಟೇ ಸುಳಿದಾಡುತ್ತಲಿರುವದರಿಂದ ಅದರ ಕಾರ್ಯಕ್ಷೇತ್ರವು ಬಹು ಚಿಕ್ಕದಾಗಿದೆ. ಅದನ್ನು ಆದಷ್ಟು ತೀವ್ರವಾಗಿ ಹಿಗ್ಗಿಸುವದು ಸರಕಾರದ ಕರ್ತವ್ಯವಾಗಿದೆ. ಕಾರಣವೆಂದರೆ, ಜೀವನ ಶಿಕ್ಷಣವು ಇನ್ನು ಮೇಲೆ ಸಾರ್ವತ್ರಿಕವಾಗುವದರಲ್ಲಿದೆ. ಈ ನಮ್ಮ ನಾಲ್ಕು ಜಿಲ್ಹೆಗಳು ಮೂಲ ಶಿಕ್ಷಣದಲ್ಲಿ ಮಾಡಿದಷ್ಟು ಪ್ರಗತಿಯು ನಮ್ಮ ಹೊಸ ರಾಜ್ಯದ ಉಳಿದ ಜಿಲ್ಹೆಗಳಲ್ಲಾದಂತಿಲ್ಲ; ಮಾತ್ರವಲ್ಲದೆ, ಹಲವು ಜಿಲ್ಹೆಗಳಲ್ಲಿ ಇಲ್ಲವೆಂದರೂ ಸಲ್ಲುವದು. ವಸ್ತುಸ್ಥಿತಿಯು ಹೀಗಿರುವಾಗ ವಿದ್ಯಾ ಇಲಾಖೆಯ ಮಂತ್ರಿಗಳೂ ಅಧಿಕಾರಿಗಳೂ ನಮ್ಮ ರಾಜ್ಯದ ಉಳಿದ ಜಿಲ್ಹೆಗಳ ಪ್ರಾಥಮಿಕ ಸಾಲೆಗಳನ್ನು ನಮ್ಮ ಮಾಸಿಕದ ಚಂದಾದಾರರಾಗುವಂತೆ ನಿರೂಪಿಸಿದರೆ ಅದರ ಕಾರ್ಯವಲಯವು ವಿಸ್ತರಿಸುವದರಲ್ಲಿ ಸಂದೇಹವಿಲ್ಲ. ನಮ್ಮ ಮಾಸಿಕಕ್ಕೆ ಆ ಜಿಲ್ಹೆಗಳಲ್ಲಿ ಪ್ರವೇಶವನ್ನು ಒದಗಿಸಿಕೊಟ್ಟರೆ, ಅಲ್ಲಿಯ ಶಿಕ್ಷಕ–ಶಿಕ್ಷಕಿಯರಿಗೆ ಹೊಸ ಶಿಕ್ಷಣದ ಬಗೆಗೆ ಅದು ಚನ್ನಾಗಿ ಅರಿವನ್ನುಂಟು ಮಾಡಿಕೊಟ್ಟು ಅವರ ಮನಸುಗಳನ್ನು ಆ ಶಿಕ್ಷಣಕ್ಕೋಸ್ಕರ ತೀವ್ರವಾಗಿ ಹದಗೊಳಿಸಬಲ್ಲದು. ಆದುದರಿಂದ, ಅಧಿಕಾರಿಗಳು ಈ ವಿಷಯದತ್ತ ಬೇಗನೆ ಗಮನವೀಯುವದೊಳಿತು.

ವಂತಿಗೆ ಮತ್ತು ಪ್ರಸಾರ

ಬಿಡಿ ಪ್ರತಿಗೆ ಒಂದಾಣೆ ಬೆಲೆಯಿದ್ದ ಉಲ್ಲೇಖವು ದೊರೆತಿದೆ; ಆದರೆ, ಆಗ ವಾರ್ಷಿಕ ವಂತಿಗೆಯು ಎಷ್ಟಿತ್ತೆಂಬುದರ ಆಧಾರವು ಸಿಕ್ಕಿಲ್ಲ. ಅದು ಬಹುತರವಾಗಿ

ಎಂಟು ಆಣೆ ಇದ್ದಿರಬೇಕೆಂಬುದು ನಮ್ಮ ಊಹೆ. ಬಿಡಿ ಪ್ರತಿಗೆ ಎರಡಾಣೆ ಬೆಲೆ ಇದ್ದಾಗ, ವಾರ್ಷಿಕ ವರ್ಗಣಿಯು ೧೫ ಆಣೆ ಇದ್ದು ಅದು ಮುಂದೆ ೧ ರೂಪಾಯಿ ೨ ಆಣೆಗಳಿಗೆ ಏರಿದೆ. ದಿನಗಳೆದಂತೆ ವಾರ್ಷಿಕ ಮಂತಿಗೆಯು ೧ ರೂ. ೮ ಆಣೆಗಳಿಗೆ ಏರಿಸಲ್ಪಟ್ಟಿದೆ; ಆಮೇಲೆ ೨ ರೂ. ಆಗಿದೆ ಮತ್ತು ಕೊನೆಗೆ ೪ರೂ.ಗಳಿಗೆ ಬಂದು ಮುಟ್ಟಿದೆ. ಕಾಗದದ ಖರ್ಚು, ಸಿಬ್ಬಂದಿಯ ಪಗಾರ, ಮುದ್ರಿಸುವ ವೆಚ್ಚ, ಇವು ಬೆಳೆದಂತೆ ವಂತಿಗೆಯು ಮೇಲೇರುತ್ತಿದೆಯೆಂಬುದು ಸುಸ್ಪಷ್ಟವೇ ಇದೆ. ಈಗ ವಾರ್ಷಿಕ ಚಂದಾ ಹಣವು ೪ ರೂಪಾಯಿ ಇದೆ ಮತ್ತು ಬಿಡಿ ಪ್ರತಿಯ ಬೆಲೆ ೬ ಆಣೆ ಇದೆ. ಈಗಿನ ಕಾಗದದ ಬೆಲೆಯನ್ನೂ, ಮುದ್ರಣದ ದರವನ್ನೂ ಸಿಬ್ಬಂದಿಯ ಪಗಾರವನ್ನೂ, ಟಪಾಲಿನ ಖರ್ಚನ್ನೂ ಗಣನೆಗೆ ತಂದುಕೊಂಡರೆ, ನಮ್ಮ ಮಾಸಿಕದ ಈಗಿನ ವಾರ್ಷಿಕ ವಂತಿಗೆಯು ಅತಿ ಕಡಿಮೆಯಿರುವದೆಂಬುದನ್ನು ಮನಗಾಣಿಸಿ ಕೊಡುವ ಅವಶ್ಯಕತೆಯೇ ಇಲ್ಲ. ಪತ್ರಿಕೆಗಳ ಸಾಂಪತ್ತಿಕ ಸ್ಥಿತಿಯು ಅವುಗಳ ಪ್ರಸಾರವನ್ನವಲಂಬಿಸಿರುತ್ತದೆಯಷ್ಟೇ. ಪ್ರಸಾರವು ಹೆಚ್ಚಾದಂತೆ ಪ್ರತಿಗಳನ್ನು ಹೆಚ್ಚಾಗಿ ಹೊರಡಿಸಬೇಕಾಗುವದು. ಪ್ರತಿಗಳ ಸಂಖ್ಯೆಯು ಬೆಳೆದಂತೆ ಮುದ್ರಣದ ವೆಚ್ಚವು ಇಳಿಯುವದು. ಮುದ್ರಣದ ವೆಚ್ಚವು ಇಳಿದಂತೆ ಆರ್ಥಿಕ ಸ್ಥಿತಿಯು ಏರುತ್ತ ನಡೆಯುವದು ಸ್ವಾಭಾವಿಕ. ಈ ಪತ್ರಿಕೆಯು ಹುಟ್ಟಿದಾಗ ಎಷ್ಟು ಪ್ರತಿಗಳು ಹೊರಡುತ್ತಿದ್ದವೆಂಬುದು ಎಷ್ಟು ಶೋಧಿಸಿದರೂ ಗೊತ್ತಾಗಲೊಲ್ಲದು. ೧೮೭೩ರಲ್ಲಿ ಮಾತ್ರ ೪೫೯ ಪ್ರತಿಗಳು ಪ್ರತಿ ತಿಂಗಳು ಅಚ್ಚಾಗುತ್ತಿದ್ದವೆಂಬುದರ ಆಧಾರವು ಆಗಿನ ಪ್ರಿನ್ಸಿಪಾಲರ ರಿಪೋರ್ಟಿನಲ್ಲಿ ಸಿಕ್ಕಿದೆ. ೧೯೪೨ರಲ್ಲಿ ಪ್ರತಿ ತಿಂಗಳು ೧೩೦೦ ಪ್ರತಿಗಳು ಹೊರಡುತ್ತಿದ್ದವೆಂಬುದರ ಉಲ್ಲೇಖವೂ ಸಿಕ್ಕಿದೆ. ೧೮೭೨. ರಿಂದ ೧೯೪೨ರ ವರೆಗಿನ ಇಸವಿಗಳಲ್ಲಿ ಪ್ರತಿ ತಿಂಗಳು ಮುದ್ರಿಸಲ್ಪಡುತ್ತಿದ್ದ ಪ್ರತಿಗಳ ಸಂಖ್ಯೆಯು ಎಲ್ಲಿಯೂ ಸಿಗವಲ್ಲದಾಗಿದೆ. ೧೯೫೩ರಲ್ಲಿ ಪ್ರತಿ ತಿಂಗಳು ಹೊರಡುತ್ತಿದ್ದ ಪ್ರತಿಗಳ ಸಂಖ್ಯೆಯು ೧೩೨೫ ಇತ್ತು ಮತ್ತು ೧೯೫೪ರ ಕೊನೆಗೆ ಅದು ೧೫೦೦ ವರೆಗೆ ಏರಿತು. ಆದರೆ ಈಗ ೧೯೫೭ರಲ್ಲಿ ೨,೦೦೦ ಪ್ರತಿಗಳು ಪ್ರತಿ ತಿಂಗಳು ಅಚ್ಚಾಗುತ್ತಲಿವೆ. ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಹೆಗಳಲ್ಲಿಯ ಎಷ್ಟೋ ಪ್ರಾಥಮಿಕ ಸಾಲೆಗಳಿಗೆ ನಮ್ಮ ಪತ್ರಿಕೆಯು ಹೋಗುವದಿಲ್ಲ. ಆದುದರಿಂದ ಜಿಲ್ಹಾ ಹಾಗೂ ಮುನಸಿಪಲ್ ಸ್ಕೂಲ ಬೋರ್ಡುಗಳು ತಮ್ಮ ತಮ್ಮ ಆಡಳಿತಕ್ಕೊಳಪಟ್ಟಿರುವ ಪ್ರತಿಯೊಂದು ಪ್ರಾಥಮಿಕ ಸಾಲೆಯನ್ನು ಈ ಪತ್ರಿಕೆಗೆ ಚಂದಾದಾರರನ್ನಾಗಿ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಆಯಾ ಬೋರ್ಡುಗಳ ಆಡಳಿತಗಾರರಿಗೆ ಬಿನ್ನವಿಸಿಕೊಳ್ಳುತ್ತೇವೆ.

ಆರ್ಥಿಕ ಪರಿಸ್ಥಿತಿ

ಈ ಪತ್ರಿಕೆಗೆ ಕಾಯ್ದಿಟ್ಟ ನಿಧಿಯ ಅಭಾವವು ಪ್ರಾರಂಭದಿಂದಲೂ ಇದ್ದುದು ಕಂಡುಬರುತ್ತದೆ. ಗಳಿಕೆ-ಬಳಿಕೆಗಳನ್ನು ಮೇಳುಗೂಡಿಸುತ್ತ ಬಂದ ಸಂಪ್ರದಾಯವು ೧೮೭೩ನೆಯ ಇಸವಿಯಲ್ಲಿ ಆಗಿನ ಪ್ರಿನ್ಸಿಪಾಲರು ಮೇಲಿನ ಅಧಿಕಾರಿಗಳಿಗೆ ಮಾಡಿದ ರಿಪೋರ್ಟೊಂದರಲ್ಲಿ ವಿವರಿಸಲ್ಪಟ್ಟಿದೆ. ಆದುದರಿಂದ, ಈ ಪತ್ರಿಕೆಯ ಸಾಂಪತ್ತಿಕ ಸ್ಥಿತಿಯು ಹುಟ್ಟಿದಾಗಿನಿಂದಲೂ ಸಮಾಧಾನಕರವಿಲ್ಲ. ಇದರ ಕಾರ್ಯಕ್ಷೇತ್ರವು ಅತಿ ಚಿಕ್ಕದಾಗಿರುವದರಿಂದ ಇದರ ಪ್ರಸಾರಕ್ಕೆ ಎಡೆಯಿಲ್ಲದಾಗಿದೆ. ೧೯೫೨ರ ಸುಮಾರಿಗೆ ಇದರ ಆರ್ಥಿಕ ಪರಿಸ್ಥಿತಿಯು ಪೂರಾ ಹದಗೆಟ್ಟಿತು.' ಮಿತವ್ಯಯದ ಕ್ರಮಗಳೆಲ್ಲ ಕೂಡಲೆ ಕೈಕೊಳ್ಳಲ್ಪಟ್ಟವು. ಸದಸ್ಯರ ಗೌರವ ವೇತನಗಳು ತಗ್ಗಿಸಲ್ಪಟ್ಟವು. ಮತ್ತು ಆಡಳಿತದ ವೆಚ್ಚದಲ್ಲಿ ಶಕ್ಯವಿದ್ದಷ್ಟು ಕಾಟಕಸರನ್ನು ಮಾಡಲಾಯಿತು. ಚಂದಾದಾರರ ಸಂಖ್ಯೆಯನ್ನು ಹೆಚ್ಚಿಸಲು ಸಂಪಾದಕ ಮಂಡಲವು ಮಿತಿಮೀರಿ ಹೆಣಗಾಡಿತು. ತತ್ಪರಿಣಾಮದಿಂದ ಸಾಂಪತ್ತಿಕ ಸ್ಥಿತಿಯು ಕಳೆದ ಸುಮಾರು ನಾಲ್ಕುವರ್ಷಗಳಿಂದ ಭರದಿಂದ ಸುಧಾರಿಸುತ್ತ ನಡೆದಿದೆ. ೧೯೫೪ರ ಜೂನಲ್ಲಿ ೨೫೮೫ ರೂಪಾಯಿ ಕೊನೆಯ ಸಿಲ್ಕು ಇದ್ದದ್ದು ಈ ವರುಷದ ಜೂನದಲ್ಲಿ ೬೮೧೧ ರೂಪಾಯಿಗಳಿಗೆ ಬಂದು ಮುಟ್ಟಿದೆ. ೧೯೫೮ರ ಜೂನಕ್ಕೆ ಅದು ೮೦೦೦ ರೂಪಾಯಿಗಳಿಗೆ ಏರಬಹುದೆಂದು ನಂಬಲಾಗಿದೆ.

ಕೊನೆಯ ಮಾತು

ಪ್ರಾರಂಭದಲ್ಲಿ ನಮ್ಮ ಮಾಸಿಕದ ಉದ್ದೇಶವು ಹೆಚ್ಚಾಗಿ ಶಿಕ್ಷಣ ಖಾತೆಯ ಆಡಳಿತಕ್ಕಷ್ಟೇ ಪರಿಮಿತಿಗೊಂಡಿತ್ತಾದರೂ ಕ್ರಮೇಣ ತನ್ನ ಉದ್ದೇಶವನ್ನು ವಿಸ್ತರಿಸುತ್ತ ಈಗ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಸಾಹಿತ್ಯಿಕ ವಿಷಯಗಳ ಬಗೆಗೂ ಲೇಖಗಳನ್ನು ಪ್ರಕಟಿಸುತ್ತಲಿದೆ. ರಾಜ್ಯಕೀಯ ರಂಗವೊಂದನ್ನು ಬಿಟ್ಟು ಉಳಿದೆಲ್ಲ ರಂಗಗಳಲ್ಲಿಯ ರಾಷ್ಟ್ರಪೋಷಕ ಚಟುವಟಿಕೆಗಳ ಬಗೆಗೆ ಲೇಖಗಳು ಇತ್ತಿತ್ತಲಾಗಿ ತಲೆ

ದೋರುತ್ತಲಿರುವದು ಆನಂದದ ಸಂಗತಿ. ಶಿಕ್ಷಣದಲ್ಲಿಯ ಹೊಸ ಹೊಸ ಪ್ರಯೋಗಗಳಿಗಂತೂ ಇದರಲ್ಲಿ ಅಗ್ರಸ್ಥಾನವು ಆವಾಗಲೂ ಮೀಸಲಾಗಿದೆ. ಆ ಪ್ರಯೋಗಗಳು ಸರಕಾರದ ಮನ್ನಣೆಯನ್ನು ಮಾತ್ರ ಮುಂಚಿತವಾಗಿ ಪಡೆದುಕೊಂಡವುಗಳಾಗಿರಬೇಕು. ಕಳೆದ ೯೩ ವರ್ಷಗಳಿಂದ ಮುಂಬಯಿ ಕರ್ನಾಟಕದ ಜಿಲ್ಹೆಗಳಿಗೆ ಈ ಮಾಸಿಕವು ಬಿಟ್ಟೂ ಬಿಡದೆ ಸಲ್ಲಿಸಿದ ಸೇವೆಯು ನಿಜಕ್ಕೂ ಅಪಾರವಾದುದಾಗಿದೆ; ವಿಶೇಷತಃ ಶಿಕ್ಷಣ ಪ್ರಪಂಚಕ್ಕರ್ಪಿಸಿದ ಸೇವೆಯು ವರ್ಣನಾತೀತವಾಗಿದೆ. ಜನತೆಗೆ ಸೇವೆಯನ್ನು ಸಲ್ಲಿಸಲು ಆಸ್ಪದವನ್ನೊದಗಿಸಿ ಕೊಟ್ಟವರೆಂದರೆ ಮೂಲತಃ ಸ್ಕೂಲ ಬೋರ್ಡುಗಳ ಆಡಳಿತಗಾರರು. ಆ ಸಹೃದಯರಾದ ಆಡಳಿತಗಾರರೇ ನಮ್ಮ ಪತ್ರಿಕೆಯ ಪೋಷಕರು. ಅವರ ಪ್ರೇಮಾಂತಃಕರುಣದ ಸಹಾಯ ಸಹಕಾರಗಳ ಬಲದಿಂದಲೇ ಪತ್ರಿಕೆಯು ಎದೆಯುಬ್ಬಿ ಈ ವರೆಗೆ ಕೆಲಸ ಮಾಡಿತು; ಈಗಲೂ ಮಾಡುತ್ತಿದೆ. ಮುಂದಾದರೂ ಮಾಡುವದು. ವಿದ್ಯಾ ಇಲಾಖೆಯ ಅಧಿಕಾರಿಗಳ ಬೆಂಬಲವೂ ಇದಕ್ಕೆ ಸಾಕಷ್ಟಿದೆ. ಈ ಸಂದರ್ಭದಲ್ಲಿ ಪತ್ರಿಕೆಯು ತನ್ನ ಪೋಷಕರಿಗೂ, ಹಿತೈಷಿಗಳಿಗೂ, ಓದುಗರಿಗೂ, ತುಂಬಿದ ಹೃದಯದಿಂದ ಧನ್ಯವಾದಗಳನ್ನರ್ಪಿಸುತ್ತಿದೆ. ೧೯೬೫ನೆಯ ಇಸವಿಗೆ ಈ ಮಾಸಿಕಕ್ಕೆ ನೂರು ವರ್ಷಗಳು ತುಂಬುವವು. ಆಗ ಇದರ ನೂರನೆಯ ವರ್ಷದ ವರ್ಧಂತಿಯು ಅತ್ಯಂತ ಅಟ್ಟಹಾಸದಿಂದ ಜರುಗಲೆಂದು ಹಾರೈಸುತ್ತೇವೆ.

ಲಿಂಗೈಕ್ಯ ಡೆಪ್ಯೂಟಿ ಚೆನ್ನಬಸವಪ್ಪನವರು

(ಟ್ರೇನಿಂಗ ಕಾಲೇಜದ ಪ್ರಪ್ರಥಮ ಪ್ರಿನ್ಸಿಪಾಲರು)

ಲೇಖಕರು : **ಶ್ರೀ ಶಿಂತ್ರಿ ಬಸಪ್ಪನವರು**

ಪ್ರಸ್ತಾವನೆ.

ಅವರ ಪೂರ್ಣಹೆಸರು ಶ್ರೀ ಚೆನ್ನಬಸವಪ್ಪ ಬಸಲಿಂಗಪ್ಪ ಧಾರವಾಡ ಎಂದು ಇದೆ. ಆದರೆ, ಅವರು ಬಹಳ ದಿನಗಳ ವರೆಗೆ ಅಂದರೆ ೧೮೬೬ ರಿಂದ ೧೮೮೧ರ ವರೆಗೆ ಡೆಪ್ಯೂಟಿ ಎಜ್ಯೂಕೇಶನಲ್ ಇನ್‌ಸ್ಪೆಕ್ಟರರೆಂದು ಕೆಲಸ ಮಾಡಿದುದರಿಂದ ಜನರೆಲ್ಲ ಅವರು ಡೆಪ್ಯೂಟಿ ಚೆನ್ನಬಸವಪ್ಪನವರೆಂದೇ ಕರೆಯುವ ವಾಡಿಕೆಯಿತ್ತು. ೧೯ನೆಯ ಶತಮಾನದಿಂದ ಉತ್ತರಾರ್ಧದಲ್ಲಿ ಅವರಷ್ಟು ಜನಪ್ರಿಯ ಅಧಿಕಾರಿಗಳು ಬೇರೊಬ್ಬರು ಆವ ಖಾತೆಯಲ್ಲಿಯೂ ಆಗಿರಲಿಲ್ಲ. ಕನ್ನಡಿಗರ ಹಾಗೂ ಕನ್ನಡ ಭಾಷೆಯ ಏಳ್ಗೆಯ ಬಗೆಗೆ ಅವರು ಅಹೋರಾತ್ರಿ ನಿಃಸ್ವಾರ್ಥಬುದ್ಧಿಯಿಂದ ಹೆಣಗಾಡಿದುದೇ ಅವರ ಲೋಕಪ್ರಿಯತೆಯ ಮೂಲ ಕಾರಣವಾಗಿದೆ. ಆಗ ಅವರು ಆಡಿದ ಪಾತ್ರವನ್ನರಿಯುವದಾದರೆ, ಆಗಿನ ಕಾಲದ ಕರ್ನಾಟಕದ ಪರಿಸ್ಥಿತಿಯನ್ನವಲೋಕಿಸುವದೊಳಿತು. ಕರ್ನಾಟಕವು ಶೈಕ್ಷಣಿಕ ದೃಷ್ಟಿಯಿಂದ ಆಗ ಬಹಳ ಹಿಂದುಳಿದಿತ್ತು. ಈಗಿನ ಮುಂಬಯಿ ರಾಜ್ಯದಲ್ಲಿಯ ದಕ್ಷಿಣ ಭಾಗವು ಅಂದರೆ ಉತ್ತರ ಕರ್ನಾಟಕವು ೧೮೧೮ ನೆಯ ಇಸವಿಯ ವರೆಗೆ ಪೇಶವೆಯವರ ಆಳಿಕೆಗೆ ಒಳಪಟ್ಟಿತ್ತು. ಆಮೇಲೆ ಅದು ಬ್ರಿಟಿಶರ ರಾಜ್ಯದಲ್ಲಿ ಸೇರ್ಪಡೆಯಾಯಿತು. ಆಗ ಅಲ್ಲೊಂದು ಇಲ್ಲೊಂದು ಅಯ್ಯನವರ ಮಠಗಳಲ್ಲಿ ಗುರುಕುಲ ಪದ್ಧತಿಯ ಶಾಲೆಗಳಿದ್ದವು. ಜಾತಿ-ಧರ್ಮ-ಕುಲ-ಗೋತ್ರಗಳನ್ನೆಣಿಸದೆ ಶಾಲೆಗೆ ಬಂದ ಮಕ್ಕಳಿಗೆಲ್ಲ ಅಯ್ಯನವರು ವಿದ್ಯಾದಾನ ಮಾಡುತ್ತಿದ್ದರು. ಈಗ "ಸಾಲಿಮಠ" ಎಂದು ಎಷ್ಟೋ ಜನರ ಅಡ್ಡಹೆಸರಿರುವುದೇ ಈ ಮಾತಿಗೆ ಸಾಕ್ಷಿಯಾಗಿದೆ. ಬಹುತರವಾಗಿ ಅವರು ಹಳೆಗನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ನುರಿತವರಿರುತ್ತಿದ್ದರಲ್ಲದೆ ಮರಾಠಿ ಭಾಷೆಯನ್ನು ಅರಿತವರಿರುತ್ತಿದ್ದರು. ಯಾಕಂದರೆ, ಪೇಶವೆಯವರ ಆಳಿಕೆಯ ಪ್ರಭಾವದಿಂದ ಆಗಿನ ಶಿಕ್ಷಣದ ಮಾಧ್ಯಮವು ಮರಾಠಿಯೇ ಆಗಿರುತ್ತಿತ್ತು. ಹೋದ ಶತಮಾನದಲ್ಲಿ ನಮ್ಮ ದೇಶದಲ್ಲೆಲ್ಲ ಅದೆಷ್ಟೋ ಸುಧಾರಕರೂ ಶಿಕ್ಷಣತಜ್ಞರೂ ಉದಯಿಸಿದರು. ಶ್ರೀ ಚೆನ್ನಬಸವಪ್ಪ ಬಸಲಿಂಗಪ್ಪ ಧಾರವಾಡರವರು ಅವರಲ್ಲೊಬ್ಬರು. ನಿರ್ಜೀವವಾಗಿದ್ದ ಕನ್ನಡ ಭಾಷೆಯಲ್ಲಿ ಆಗ ಜೀವಕಳೆಯನ್ನು ತುಂಬಿ ಅದನ್ನು ಪುನರುಜ್ಜೀವನಗೊಳಿಸಿದವರು ಅವರೇ. ಈಗಿನ ನಮ್ಮಲ್ಲಿಯ ಗಂಡು ಮಕ್ಕಳ ಸರ

ಕಾರಿ ಟ್ರೇನಿಂಗ ಕಾಲೇಜದ ಉಗಮವು ೧೮೫೭ರಲ್ಲಾಗಿದೆ. ಅದರ ಪ್ರಥಮ ಪ್ರಿನ್ಸಿಪಾಲರು ಶ್ರೀ ಚೆನ್ನಬಸವಪ್ಪನವರೇ ಆಗಿದ್ದರು. ನಮಗೆ ದೊರೆತ ವಿವರಗಳಿಂದ ಅಂತಹವರ ವ್ಯಕ್ತಿ ಪರಿಚಯವನ್ನು ನಮ್ಮ ಓದುಗರಿಗೆ ಮಾಡಿ ಕೊಡಲು ಇಲ್ಲಿ ಪ್ರಯತ್ನಿಸಲಾಗಿದೆ. ಧಾರವಾಡ ಹಾಗೂ ಬೆಳಗಾವಿ ಜಿಲ್ಲೆಗಳ ಗ್ಯಾಝೆಟಿಯರದಿಂದಲೂ ಕನ್ನಡ ಪ್ರಾಥಮಿಕ ಶಿಕ್ಷಣದ ರಿಕಾರ್ಡುಗಳಿಂದಲೂ ಶಿವಾನುಭವ ಗ್ರಂಥಮಾಲೆಯಿಂದಲೂ ನಮಗೆ ವಿವರಗಳು ದೊರೆತಿವೆ. ಆಯಾ ಪತ್ರಿಕೆಗಳಿಗೆಲ್ಲ ನಾವು ಋಣಿಯಾಗಿರುವೆವು.

ಬಾಲ್ಯ ಮತ್ತು ಶಿಕ್ಷಣ

ಬೆಳಗಾವಿ ಜಿಲ್ಲೆಯೊಳಗೆ ತಾಲೂಕಿನ ಸ್ಥಳವಾದ ಗೋಕಾವಿಯು ಅವರ ಮನೆತನದ ಮೂಲಸ್ಥಾನವು. ಅವರ ತಂದೆ ಶ್ರೀ ಬಸಲಿಂಗಪ್ಪನವರು, ವ್ಯಾಪಾರಕ್ಕೋಸ್ಕರ ಧಾರವಾಡಕ್ಕೆ ಬಂದು ಅಲ್ಲಿಯೇ ತಳವೂರಿದರು. ಅವರ ತಾಯಿಯವರ ಹೆಸರು ಶ್ರೀಮತಿ ತಿಪ್ಪವ್ವ. ಆ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳಿದ್ದರು. ಅವರಿಬ್ಬರ ಹೆಸರು ಚೆನ್ನಬಸವಪ್ಪ ಎಂದು ಇದ್ದುದರಿಂದ ಹಿರಿಯನಿಗೆ ದೊಡ್ಡ ಚೆನ್ನಬಸವಪ್ಪ ಕಿರಿಯನಿಗೆ ಸಣ್ಣ ಚೆನ್ನಬಸವಪ್ಪ ಎಂದು ಕರೆಯುತ್ತಿದ್ದರು. ಕಿರಿಯರಾದ ಶ್ರೀ ಚೆನ್ನಬಸವಪ್ಪನವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿ ಕೆಲಸ ಮಾಡಿ ನಿವೃತ್ತಿಯನ್ನು ಹೊಂದಿದರು. ಹಿರಿಯವರಾದ ಹಾಗೂ ನಮ್ಮ ಕಥಾನಾಯಕರಾದ ಶ್ರೀ ಚೆನ್ನಬಸವಪ್ಪನವರು ಧಾರವಾಡದಲ್ಲಿ ದಿನಾಂಕ ೧—೧೧—೧೮೩೩ರಂದು ಜನ್ಮ ತಾಳಿದರು. ಅವರು ಆರು ವರ್ಷದ ಮಗುವಿದ್ದಾಗ ಅವರ ತಂದೆಯವರು ಲಿಂಗದೊಳಗಾದರು. ಆ ಮೇಲೆ ಮನೆತನದ ಭಾರವೆಲ್ಲ ಅವರ ತಾಯಿಯವರ ಮೇಲೆ ಬಿತ್ತು. ಆಗ ಅವರ ತಾಯಿಯವರಿಂದ ಹೊರಹೊಮ್ಮಿದ ಎದೆಗಾರಿಕೆಯು ನಿಜಕ್ಕೂ ಹೊಗಳತಕ್ಕಂತಹದಿದೆ. ತಮ್ಮ ಪತಿಯ ಮರಣದ ತರುವಾಯ ನಾಲ್ಕೂ ಕಡೆಯಿಂದ ಬಂದಡರಿದ ಎಡರು ತೊಡರುಗಳನ್ನು ಧೈರ್ಯದಿಂದ ಎದುರಿಸಿ ಅವುಗಳನ್ನೆಲ್ಲ ಒಂದೊಂದನ್ನಾಗಿ ನೀಗಿ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ನಿರ್ಧಾರವನ್ನು ಕೈಕೊಂಡರು. ಶ್ರೀಯುತರು ಧಾರವಾಡದಲ್ಲಿ ಶ್ರೀ ಶಿವರುದ್ರಯ್ಯನವರಿಂದ ಮಠದಲ್ಲಿ ನಡಿಸಲ್ಪಡುತ್ತಿದ್ದ ಹಳೆಯ ಪದ್ಧತಿಯ ಸಾಲೆಗೆ ಸೇರ್ಪಡೆಯಾದರು. ತುಂಟತನಕ್ಕೂ ಕಿಡಿಗೇಡಿತನಕ್ಕೂ ಅವರು ಸಾಲೆಯಲ್ಲಿಯೂ ಮನೆಯಲ್ಲಿಯೂ ಓಣಿಯಲ್ಲಿಯೂ ಹೆಸರಾಗಿದ್ದರು. ಅವರ ತುಂಟತನಕ್ಕೆ ಗುರುಗಳು ಬೇಸತ್ತಿದ್ದರೂ ಅವರ ಚುರುಕುಬುದ್ಧಿಗೆ ಬಹಳಷ್ಟು ಮೆಚ್ಚಿದ್ದರು. ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಮೇಲೆ ಇಂಗ್ಲೀಷವನ್ನು ಕಲಿಯಬೇಕೆಂಬ ಬಲವು ಅವರಮನಸ್ಸಿನಲ್ಲುದಯಿಸಿತು. ಆಗ ಇಂಗ್ಲೀಷವನ್ನು ಕಲಿಯಲು ಮುಂಬಯಿ ಇಲ್ಲವೆ ಪುಣೆ ಪಟ್ಟಣಕ್ಕೆ ನಡೆದು ಹೋಗಬೇಕಾಗುತ್ತಿತ್ತು. ಒಂದು ದಿನ ಊಟಕ್ಕೆ ಕುಳಿತಾಗ ಪುಣೆ ಪಟ್ಟಣಕ್ಕೆ ಹೋಗಿ ಇಂಗ್ಲೀಷವನ್ನು ಕಲಿಯಬೇಕೆಂಬ ತಮ್ಮ ಅಭಿಲಾಷೆಯನ್ನು ತಮ್ಮ ತಾಯಿಗೆ ವ್ಯಕ್ತಪಡಿಸಿದರು. ಆದರೆ ಅವರ ತಾಯಿಯು ಮಗನ ಮಾತನ್ನು ಅಷ್ಟೊಂದು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಅದೇ ದಿನ ರಾತ್ರಿ ತಮ್ಮ ತಾಯಿಗೆ ನಿದ್ದೆ ಹತ್ತಿದ ಕೂಡಲೇ ತಾಯಿಯ ಪೆಟ್ಟಿಗೆಯಲ್ಲಿದ್ದ ೩ ರೂಪಾಯಿ ೧೦ ಆಣೆಗಳನ್ನು ತಕ್ಕೊಂಡು ಯಾರಿಗೂ ಹೇಳದೆ ಕೇಳದೆ ಪುಣೆಯ ಹಾದಿಯನ್ನು ಹಿಡಿದು ಒಬ್ಬಂಟಿಗರಾಗಿ ನಡೆದರು. ಹಾದಿಯಲ್ಲಿ ಗೋಕಾವಿಯು ಹತ್ತಿತು. ಅಲ್ಲಿದ್ದ ತಮ್ಮ ಕಕ್ಕಂದಿರನ್ನು ಸಹಾಯಮಾಡಲು ಕೇಳಿಕೊಂಡರು. ಅವರು ಹಚ್ಚಿಕೊಳ್ಳಲಿಲ್ಲ. ಅದೇ ಊರಲ್ಲಿ ಅವರ ತಂದೆಯ ಹಳೆ ಮಿತ್ರರೂ ಶ್ರೀಮಂತರೂ ಆಗಿದ್ದ ಗೃಹಸ್ಥರೊಬ್ಬರು ಅವರಲ್ಲಿ ಉದಯಿಸಿದ್ದ ಜ್ಞಾನಾರ್ಜನೆಯ ಹಸಿವನ್ನು ನೋಡಿ ತುಂಬಾ ಆನಂದಪಟ್ಟು ಅವರಿಗೆ ೫೦ ರೂಪಾಯಿಗಳ ಸಹಾಯಧನವನ್ನಿತ್ತರು. ಆ ಹಣದ ಸಹಾಯದಿಂದ ಪಾದಚಾರಿಯಾಗಿ ಪುಣೆ ಪಟ್ಟಣವನ್ನು ಮುಟ್ಟಿದರು. ಆ ಪಟ್ಟಣದಲ್ಲಿ ಸುದೈವದಿಂದ ಅವರಿಗೆ ಶ್ರೀ ಗೋವಿಂದರಾವ ಮೆಹೇಂದಳೆಕರ ಎಂಬ ಉದಾರ ಸ್ವಭಾವದ ಶ್ರೀಮಂತರ ಸಂಪರ್ಕವಾಯಿತು. ಅಲ್ಲಿ ಅವರು ಇರುವ ವರೆಗೆ ಆ ಸದ್ಗೃಹಸ್ಥರು ಅವರಿಗೆ ಅವ್ಯಾಹತವಾಗಿ ಸಹಾಯವನ್ನು ಸಲ್ಲಿಸಿದರು. ಇಂಗ್ಲೀಷ ಸಾಲೆಯೊಂದರಲ್ಲಿ ತಮ್ಮ ಹೆಸರನ್ನು ಹಚ್ಚಿಸಿ ಕೂಡಲೇ ತಮ್ಮ ತಾಯಿಯವರನ್ನು ತಮ್ಮಲ್ಲಿಗೆ ಕರೆಯಿಸಿಕೊಂಡರು. ಧಾರವಾಡಕ್ಕೆ ಮರಳುವ ವರೆಗೆ ಅಂದರೆ ೧೮೫೫ರ ವರೆಗೆ ಇಬ್ಬರೂ ಅಲ್ಲಿಯೇ ಇದ್ದರು. ಹಾಯಸ್ಕೂಲಿನ ವಿದ್ಯಾಭ್ಯಾಸವು ಮುಗಿದ ಕೂಡಲೆ ಎಂಜನಿಯರಿಂಗ ಕಾಲೇಜವನ್ನು ಸೇರಿ ಕೊನೆಯ ಪರೀಕ್ಷೆಯನ್ನು ಮೇಲು ನಂಬರು ಪಡೆದು ಉತ್ತೀರ್ಣರಾದರು. ಅವರ ಕುಶಾಗ್ರ ಬುದ್ಧಿಗೆ ಮೆಚ್ಚಿ ಆ ಕಾಲೇಜದಲ್ಲಿ ಪ್ರಾಧ್ಯಾಪಕರೆಂದು ಅವರನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡರು. ವಿಲಾಯತಿಯಲ್ಲಿ ಹೆಚ್ಚಿನ ವಿದ್ಯಾಭ್ಯಾಸ

ಕ್ಕೋಸ್ಕರ ಹಿಂದುಸ್ತಾನ ಸರಕಾರದವರು ನಮ್ಮ ದೇಶದಿಂದ ಒಟ್ಟು ಐದು ಜನ ಎಂಜಿನಿಯರಿಂಗ ಸ್ಕಾಲರರನ್ನು ಆರಿಸಿದ್ದರು. ಅವರಲ್ಲಿ ಶ್ರೀಯುತರೊಬ್ಬರಾಗಿದ್ದರು. ಆದರೆ ಸರಕಾರದವರ ಆ ವಿಚಾರವು ಕಾರ್ಯಗತವಾಗದೆ ಅಲ್ಲಿಗೇ ನಿಂತು ಬಿಟ್ಟಿತು.

ಸರಕಾರಿ ನೌಕರಿ

ಅವರು ಸನ್ ೧೮೫೫ರಲ್ಲಿ ಧಾರವಾಡಕ್ಕೆ ಮರಳಿದರೆಂಬುದನ್ನು ಮೇಲೆ ಹೇಳಿದೆಯಷ್ಟೇ. ಕೂಡಲೆ ಅವರು ಪೋಸ್ಟ ಖಾತೆಯಲ್ಲಿ ಸೇರ್ಪಡೆಯಾದರೂ ಸಹ ಅಲ್ಲಿ ಬಹಳ ದಿನಗಳ ವರೆಗೆ ಇರಲಿಲ್ಲ. ಅದನ್ನು ಬಿಟ್ಟುಗೊಟ್ಟು ಶಿಕ್ಷಣ ಖಾತೆಯನ್ನು ಸೇರಿದರು. ಧಾರವಾಡದಲ್ಲಿ ಸನ್ ೧೮೫೬ರಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ "ನಾರ್ಮಲ್ ಕ್ಲಾಸ" (Normal Class) ಎಂಬ ಹೆಸರಿನ ಸಂಸ್ಥೆಯ ಹೆಡ್ ಮಾಸ್ತರರೆಂದು ಅವರ ನೇಮಣೂಕಿಯಾಯಿತೆಂಬಂತೆ ತೋರುತ್ತಿದೆ. ನಾರ್ಮಲ್ ಕ್ಲಾಸ ಅಂದರೆ ಶಿಕ್ಷಕರಿಗೆ ಶಿಕ್ಷಣದಲ್ಲಿ ತರಬೇತಿ ಕೊಡುವ ವರ್ಗವು. ಅದುವೇ ಈಗಿನ ನಮ್ಮಲ್ಲಿಯ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಉಗಮವು. ಆ ಕಾಲಕ್ಕೆ ಎಜ್ಯುಕೇಶನಲ್ ಇನಸ್ಪೆಕ್ಟರರ ಕಚೇರಿಯು ಬೆಳಗಾಂವಿಯಲ್ಲಿದ್ದುದರಿಂದ ಆ ಕ್ಲಾಸು ಮುಂದೆ ಸನ್ ೧೮೬೧ರಲ್ಲಿ ಬೆಳಗಾಂವಿಗೆ ಸ್ಥಳಾಂತರಿಸಲ್ಪಟ್ಟಿತು. ಸನ್ ೧೮೬೪ನೆಯ ಇಸವಿಯಲ್ಲಿ ಅವರು ಆ ಟ್ರೇನಿಂಗ ಸ್ಕೂಲಿನ ಪ್ರಿನ್ಸಿಪಾಲರೆಂದು ನಿಯಮಿಸಲ್ಪಟ್ಟರು. ಆದುದರಿಂದ ಶ್ರೀ ಚೆನ್ನಬಸವಪ್ಪನವರು ಈಗಿನ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಪ್ರಥಮ ಪ್ರಿನ್ಸಿಪಾಲರೆಂದು ಅವರ ಹೆಸರು ಆ ಸಂಸ್ಥೆಯ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿದಿದೆ. ಇದು ನಿಜಕ್ಕೂ ಕನ್ನಡಿಗರೆಲ್ಲರಿಗೆ ಅಭಿಮಾನ ಪಡತಕ್ಕ ಸಂಗತಿಯು. ೧೮೬೬ರಲ್ಲಿ ಅವರು ಬೆಳಗಾಂವಿಯ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ನೇಮಿಸಲ್ಪಟ್ಟು ಅಲ್ಲಿ ೧೮೬೯ರ ವರೆಗೆ ಕೆಲಸ ಮಾಡಿದರು. ೧೮೬೯ರಲ್ಲಿ ಧಾರವಾಡದ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ವರ್ಗಾಯಿಸಲ್ಪಟ್ಟು ಅಲ್ಲಿ ಕೊನೆಯ ಉರಿಸಿನ ವರೆಗೆ ಸೇವೆ ಸಲ್ಲಿಸಿದರು. ದಿನಾಂಕ ೪–೧–೧೮೮೧ ರಂದು ಇಹಲೋಕ ಯಾತ್ರೆಯನ್ನು ಮುಗಿಸಿ ಲಿಂಗೈಕ್ಯರಾದರು. ಆಗ ಅವರು ೪೭ ವರ್ಷದ ಪ್ರಾಯದವರಿದ್ದರು. ಧಾರವಾಡದಲ್ಲಿ ಆಗ ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿದ್ದ ಶ್ರೀ ರಸೆಲ್ ಸಾಹೇಬರವರು ಒಂದೆರಡು ಸಲ ದೀರ್ಘಾವಧಿಯ ರಜೆಯನ್ನು ತಕ್ಕೊಂಡು ವಿಲಾಯತಿಗೆ ಹೋದಾಗ ಶ್ರೀಯುತರು ಆ ಹುದ್ದೆಯಲ್ಲಿ ತಾತ್ಪೂರ್ತಿಕವಾಗಿ ಆ ರಜೆಯ ಅವಧಿಗಳಲ್ಲಿ ನಿಯಮಿಸಲ್ಪಟ್ಟಿದ್ದರು.

ಡೆಪ್ಯೂಟಿ ಹುದ್ದೆಯಲ್ಲಿಯ ಸೇವೆ

ಅವರು ವಿಶ್ರಾಂತಿಯಿಲ್ಲದೆ ದುಡಿಯುವವರು. ಶಿಕ್ಷಕರಿಗೆ ಮಾರ್ಗದರ್ಶನ ಮಾಡುತ್ತ ಅವರ ಕೆಲಸದ ಮೇಲ್ವಿಚಾರಣೆ ಮಾಡುವದಕ್ಕೋಸ್ಕರ ಅವರು ಬಿಟ್ಟೂ ಬಿಡದೆ ಜಿಲ್ಹೆಯ ತುಂಬೆಲ್ಲ ಪ್ರವಾಸ ಮಾಡುತ್ತಿದ್ದರು. ಶಿಕ್ಷಕರು ಅವರಿಗೆ ಅಂಜಿ ನಡುಗುತ್ತಿದ್ದರೂ ಸಹ ಅವರು ಯಾರಿಗೂ ಅಪಾಯ ಮಾಡಲಿಲ್ಲ. ಕಳಕಳಿಯಿಂದ ಕೆಲಸ ಮಾಡಿದವರಿಗೆ ಪ್ರೋತ್ಸಾಹಿಸುತ್ತಿದ್ದರು. ತಪ್ಪು ಮಾಡಿದ ಶಿಕ್ಷಕರು ತಮ್ಮ ತಪ್ಪನ್ನು ಒಪ್ಪಿಕೊಂಡರೆ ಕೂಡಲೇ ಅವರನ್ನು ಕ್ಷಮಿಸುತ್ತಿದ್ದರು. ನಿಷ್ಪಕ್ಷಪಾತತನಕ್ಕಂತೂ ಅವರು ಹೆಸರಾಗಿದ್ದರು. ಅವರ ಖಾಸ ತಮ್ಮಂದಿರು ಅವರ ಕೈಕೆಳಗೆ ಕನ್ನಡ ಸಾಲೆಯ ಶಿಕ್ಷಕರಾಗಿದ್ದರು. ಅವರ ಯೋಗ್ಯತೆಗಿಂತ ಹೆಚ್ಚಿನ ಸ್ಥಳವನ್ನು ಅವರಿಗೆ ಕೊಡಲಿಲ್ಲ. ಶಿಕ್ಷಕವರ್ಗಕ್ಕೆಲ್ಲ ಅವರು ಒಳ್ಳೇ ಪ್ರಿಯರಾಗಿದ್ದರು. ಅವರ ಮೇಲಿನ ಅಧಿಕಾರಿಯಾಗಿದ್ದ ಶ್ರೀ ರಸೆಲ್ ಸಾಹೇಬರವರು ಅವರನ್ನು ಯಾವಾಗಲೂ ಗೌರವಾದರಗಳಿಂದ ಕಾಣುತ್ತಿದ್ದರು. ಫಿರ್ತಿಯ ಮೇಲಿದ್ದಾಗ ಪ್ರತಿಯೊಂದು ಹಳ್ಳಿಯಲ್ಲಿ ಸಭೆಗೂಡಿಸಿ ಮಕ್ಕಳನ್ನು ಸಾಲೆಗೆ ಕಳುಹಲು ಹಳ್ಳಿಗರ ಮನವೊಲಿಸುತ್ತಿದ್ದರು. ಭಾಷಣ ಮಾಡುವ ಕಲೆಯು ಅವರಿಗೆ ದೇವದತ್ತವಾಗಿತ್ತು. ಗಂಭೀರ ಧ್ವನಿ, ಮನೋಹರವಾದ ವ್ಯಕ್ತಿತ್ವಗಳಿಂದ ಅವರ ಮಾತುಗಾರಿಕೆಗೆ ಮತ್ತಿಷ್ಟು ಕಳೆ ಬರುತ್ತಿತ್ತು. ಆದುದರಿಂದ, ಅವರ ವ್ಯಾಖ್ಯಾನಗಳು ಹಳ್ಳಿಗರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುತ್ತಿದ್ದುದು ಅಶ್ಚಿಸ್ಟಲ್ಲ. ಅಗತ್ಯವಿದ್ದಲ್ಲೆಲ್ಲ ಹೊಸದಾಗಿ ಕನ್ನಡ ಸಾಲೆಗಳನ್ನು ತೆರೆದರು. ಮಕ್ಕಳ ಹಾಜರಿಯು ಭರದಿಂದ ಏರಲಿಕ್ಕೆ ಹತ್ತಿತು. ಸುದೈವದಿಂದ ಅವರ ಮೇಲಧಿಕಾರಿಯಾಗಿದ್ದ ಶ್ರೀ ರಸೆಲ್ ಸಾಹೇಬರವರು ಮಕ್ಕಳಿಗೆ ಶಿಕ್ಷಣವು ತಾಯ್ನುಡಿಯ ಮುಖಾಂತರ ಸಿಗಬೇಕು. ತಾಯ್ನುಡಿಗೆ ಪ್ರಾಮುಖ್ಯತೆಯಿರಬೇಕು ಎಂಬ ತತ್ವಕ್ಕೆ ಅಂಟಿಕೊಂಡಿದ್ದರಾದುದರಿಂದ ಶ್ರೀ ಚೆನ್ನಬಸವಪ್ಪನವರು ಪ್ರಾಥಮಿಕ ಶಿಕ್ಷಣ ಪ್ರಸಾರಕ್ಕೋಸ್ಕರ

ಅಹೋರಾತ್ರಿ ನಡೆಯಿಸಿದ್ದ ಭಗೀರಥ ಪ್ರಯತ್ನಗಳಿಗೆಲ್ಲ ತಮ್ಮ ಹಾರ್ದಿಕ ಬೆಂಬಲವನ್ನು ಕೊಟ್ಟರು. ೧೮೫೫-೫೬ನೆಯ ಸಾಲಿನಲ್ಲಿ ಬೆಳಗಾಂವಿ, ವಿಜಾಪುರ ಮತ್ತು ಧಾರವಾಡ ಜಿಲ್ಹೆಗಳಲ್ಲಿ ಕನ್ನಡ ಸಾಲೆಗಳ ಒಟ್ಟು ಸಂಖ್ಯೆಯು ಅನುಕ್ರಮವಾಗಿ ೧೩, ೯ ಮತ್ತು ೧೨ ಇತ್ತು. ಅದೇ ಸಂಖ್ಯೆಯು ೧೮೮೨ರಲ್ಲಿ ಅನುಕ್ರಮವಾಗಿ ೧೭೭, ೧೫೦ ಮತ್ತು ೩೪೧ಕ್ಕೆ ಏರಿತು. ಧಾರವಾಡ ಜಿಲ್ಹೆಯ ಸಂಖ್ಯೆಯು ಎಲ್ಲಕ್ಕೂ ಹೆಚ್ಚು ಏರಿತು. ಯಾಕೆಂದರೆ, ಶ್ರೀ ಚೆನ್ನಬಸವಪ್ಪನವರು ಆ ಜಿಲ್ಹೆಯಲ್ಲಿ ಡೆಪ್ಯೂಟಿ ಕೆಲಸವನ್ನು ಅವ್ಯಾಹತವಾಗಿ ೧೮೬೯ ರಿಂದ ೧೮೮೧ರ ವರೆಗೆ ಮಾಡಿದರು. ಅಂದಿನಿಂದ ಆ ಜಿಲ್ಹೆಯ ಪ್ರಾಥಮಿಕ ಶಿಕ್ಷಣ ತನ್ನ ಮುಂದಡಿಯನ್ನು ಕಾಯ್ದುಕೊಂಡು ಬಂದಿದೆ.

ಕನ್ನಡ ಭಾಷೆಗೆ ಸಲ್ಲಿಸಿದ ಕಾಣಿಕೆ

ಅವರ ತಾಯ್ನುಡಿ ಕನ್ನಡ. ಪುಣೆಯಲ್ಲಿ ಬಹಳ ವರುಷಗಳವರೆಗಿದ್ದುದರಿಂದ ಮರಾಠಿ ಭಾಷೆಯು ಅವರಿಗೆ ಚನ್ನಾಗಿ ಬರುತ್ತಿತ್ತು. ಕನ್ನಡದ ಬಗೆಗೆ ಜನರಲ್ಲಿ ಮನೆ ಮಾಡಿಕೊಂಡಿದ್ದ ಅನಾದರ ವೃತ್ತಿಯು ಅವರ ಮನಸ್ಸಿಗೆ ಬಹಳ ನೋವನ್ನುಂಟು ಮಾಡಿತು. ಐತಿಹಾಸಿಕ ಕಾರಣಗಳಿಗೋಸ್ಕರ ಮರಾಠಿ ಭಾಷೆಯು ಸಾರ್ವಜನಿಕ ಜೀವನದ ಎಲ್ಲ ರಂಗಗಳಲ್ಲಿ ಪ್ರಮುಖ ಸ್ಥಾನವನ್ನಾಕ್ರಮಿಸಿತ್ತು. ಆಗಿನ ದೊಡ್ಡ ದೊಡ್ಡ ಅಧಿಕಾರಸ್ಥರೆಲ್ಲ ಮರಾಠಿಗರೇ ಆಗಿದ್ದರು. ವ್ಯಾಪಾರಸ್ಥರೆಲ್ಲ ತಮ್ಮ ವ್ಯವಹಾರಗಳನ್ನೂ ಲೆಕ್ಕ ಪತ್ರಗಳನ್ನೂ ಮರಾಠಿಯಲ್ಲಿಯೇ ಸಾಗಿಸುತ್ತಿದ್ದರು. ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ಮರಾಠಿಯನ್ನು ಕಲಿಯಲು ಹುರಿದುಂಬಿಸುತ್ತಿದ್ದರು. ಸಾರಾಂಶವೇನಂದರೆ, ಕನ್ನಡಿಗರಿಗೆ ತಾವು ಕನ್ನಡಿಗರೆಂಬ ಅರಿವೇ ಇದ್ದಿಲ್ಲ. ಸುತ್ತಲೂ ಆವರಿಸಿದ್ದ ನಿರುತ್ತೇಜಕ ಪರಿಸ್ಥಿತಿಯನ್ನೂ ಕನ್ನಡಕ್ಕೆ ಪ್ರಾಪ್ತವಾದ ಗಂಡಾಂತರವನ್ನೂ ಮನಗಂಡು ಹೆಚ್ಚೆಚ್ಚು ಕನ್ನಡ ಸಾಲೆಗಳನ್ನು ತೆರೆದು ಶಿಕ್ಷಣವೆಲ್ಲ ಕನ್ನಡದಲ್ಲಿಯೇ ಸಾಗಬೇಕೆಂಬ ನಿಯಮವನ್ನು ಮಾಡಿದರು. ಕನ್ನಡವು ಬರುತ್ತಿದ್ದರೂ ಸಹ ಮರಾಠಿಯಲ್ಲಿ ಮಾತನಾಡಲು ಹವಣಿಸುವವರನ್ನು ಕೂಡಲೆ ನಿರ್ಬಂಧಿಸಿ ಕನ್ನಡದಲ್ಲಿ ಮಾತನಾಡಲು ಹೇಳುತ್ತಿದ್ದರು. ಆಗಿನ ಕನ್ನಡ ಶಿಕ್ಷಕರಿಗೆ ಮೋಡಿ ಲಿಪಿಯಲ್ಲಿ ಸಹಿ ಮಾಡುವ ಚಟವಿತ್ತು. ಅವರಿಗೆಲ್ಲ ಕನ್ನಡದಲ್ಲಿಯೇ ಸಹಿ ಮಾಡಬೇಕೆಂದು ಕಟ್ಟಾಜ್ಞೆಯನ್ನು ಕೊಟ್ಟರು. ಕನ್ನಡ ಶಾಲೆಗಳಲ್ಲಿ ಅಂಕಿ-ಮಗ್ಗಿಗಳನ್ನು ಆಗ ಮರಾಠಿಯಲ್ಲಿ ಕಲಿಸುತ್ತಿದ್ದರು. ಅವುಗಳನ್ನು ಕನ್ನಡದಲ್ಲಿಯೇ ಕಲಿಸಬೇಕೆಂಬ ಒತ್ತಾಯವನ್ನು ಹೇರಿದರು. ಜನರಲ್ಲಿ ಕನ್ನಡದ ಬಗೆಗೆ ಪ್ರೇಮವೂ ಆಸಕ್ತಿಯೂ ಹುಟ್ಟುವಂತೆ ಮಾಡಿದರು. ಕನ್ನಡ ಸಾಲೆಗಳಲ್ಲಿ ಪಠ್ಯಪುಸ್ತಕಗಳ ಕೊರತೆಯಿತ್ತು. ಅದನ್ನು ನೀಗುವದಕ್ಕಾಗಿ ದೊಡ್ಡ ದೊಡ್ಡ ಪಂಡಿತರನ್ನೂ ಬರೆಹಗಾರರನ್ನೂ ಕಲೆ ಹಾಕಿ ಅವರ ಕಡೆಯಿಂದ ಪಠ್ಯ ಹಾಗೂ ಪಠ್ಯೇತರ ಹೊತ್ತಿಗೆಗಳನ್ನು ಬರೆಯಿಸಿದರು. ತಾವೂ ಗಣಿತವನ್ನು ಕುರಿತು ಎರಡು ಪಠ್ಯ ಪುಸ್ತಕಗಳನ್ನು ಬರೆದಿದ್ದಾರೆ. ಆ ಪಂಡಿತರನ್ನೂ ಬರೆಹಗಾರರನ್ನೂ ಹಾಯಸ್ಕೂಲುಗಳಲ್ಲಿಯ ಹಾಗೂ ಟ್ರೇನಿಂಗ ಕಾಲೇಜದಲ್ಲಿಯ ಅಸಿಸ್ಟಂಟ ಮಾಸ್ತರ ಜಾಗೆಗಳಿಗೆ ಸಿಫಾರಸು ಮಾಡಿ ನೇಮಣೂಕಿ ಮಾಡಿಸುತ್ತಿದ್ದರು. ಅವರಲ್ಲಿ ಹಲವರನ್ನು ಇಲ್ಲಿ ಉದಾಹರಿಸಬಹುದು :— ಶ್ರೀ ಗಂಗಾಧರ ಮಡಿವಾಳೇಶ್ವರ ತೂರಮರಿ, ಶ್ರೀ ವೆಂಕಟ ರಂಗೋ ಕಟ್ಟಿ, ಶ್ರೀ ಶಾಂತವೀರ ರಾಚಿದೇವ ಕಿತ್ತೂರ, ಶ್ರೀ ಶೇಷೋ ರಾಮಚಂದ್ರ ಚೂರಮರಿ, ಶ್ರೀ ವೀರಭದ್ರ ಮಡಿವಾಳೇಶ್ವರಪ್ಪ ಪಂಡಿತ, ಶ್ರೀ ಭುಜಂಗರಾವ ಹುಯಿಲಗೋಳ, ಶ್ರೀ ಪಾಂಡುರಂಗ ಚಿಂತಾಮಣ ಪೇಟಕರ ಮುಂತಾದವರು. ಅವರಿಗೆ ರೆವ್ಹರಂಡ ಝಿಗ್ಲರ ಎಂಬ ಹೆಸರಿನ ಪಾದ್ರಿ ಸಾಹೇಬರ ಸಂಪರ್ಕವಾಗಿ ಅವರಿಗೆ ಇಂಗ್ಲೀಷ ಕನ್ನಡ ನಿಘಂಟನ್ನು ಬರೆಯಲು ಪ್ರೋತ್ಸಾಹಿಸಿದರು. ಆಗ ಕನ್ನಡದಲ್ಲಿ ಅಚ್ಚು ಹಾಕುವ ಯಂತ್ರಗಳಿರಲಿಲ್ಲ. ಅದಕ್ಕೋಸ್ಕರ ಜನರನ್ನು ಹುಡುಕಿ ಹುರಿದುಂಬಿಸಿ ಅಚ್ಚು ಹಾಕುವ ಯಂತ್ರಗಳನ್ನಿಡಿಸಿದರು. ಈ ಪ್ರಕಾರ ೨೫ ವರ್ಷಗಳ ವರೆಗೆ ನಿಃಸ್ವಾರ್ಥ ಬುದ್ಧಿಯಿಂದ ಕನ್ನಡಕ್ಕೂ ಕರ್ನಾಟಕಕ್ಕೂ ಹೇಳತೀರದಷ್ಟು ಸೇವೆಯನ್ನು ಸಲ್ಲಿಸಿ ಕನ್ನಡ ನುಡಿಯ ಪುನರುಜ್ಜೀವನದ ಜನಕರಾಗಿ ಅದಕ್ಕೋಸುಗ ಭದ್ರವಾದ ತಳಹದಿಯನ್ನು ಹಾಕಿಟ್ಟರು. ಕನ್ನಡಿಗರು ಅವರ ಅಮೌಲ್ಯ ಸೇವೆಯನ್ನು ಮರೆಯುವದೆಂತು?

ಕೊನೆಯ ಮಾತು

೧೯೫೬ರ ಜಾನೇವರಿ ತಿಂಗಳ ೧೩ನೆಯ ದಿನಾಂಕ ಅವರ ಭಾವಚಿತ್ರದ ಅನಾವರಣ ಸಮಾರಂಭವು ಟ್ರೇನಿಂಗ ಕಾಲೇಜದ ಪ್ರಾರ್ಥನಾ ಮಂದಿರದಲ್ಲಿ ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಗಳಾದ ಸನ್ಮಾನ್ಯ ದಿನಕರರಾವ ದೇಸಾಯಿಯವರ ಅಮೃತ ಹಸ್ತದಿಂದ ವಿಜೃಂಭಣೆಯಿಂದ ಜರು

ಗಿತಷ್ಟೇ. ಆ ಸಂಸ್ಥೆಯ ಪ್ರಪ್ರಥಮ ಪ್ರಿನ್ಸಿಪಾಲರ ಭಾವಚಿತ್ರವನ್ನು ಪ್ರಾರ್ಥನಾ ಮಂದಿರದಲ್ಲಿಟ್ಟು ಗೌರವಿಸುವದು ಆ ಸಂಸ್ಥೆಗೊಂದು ಹೆಮ್ಮೆಯ ಮಾತು. ಹಾಗೆ ಮಾಡಿದ್ದಕ್ಕಾಗಿ ಅದು ಅಭಿನಂದನಾರ್ಹವಿದೆ. ಅದರಂತೆ ಸ್ಥಳಿಕ ಸಂಸ್ಥೆಯೊಂದು ಅವರ ಹೆಸರನ್ನು ಈ ಮೊದಲೇ ಶಾಶ್ವತಗೊಳಿಸಿದೆ. ಅದರ ಹೆಸರನ್ನು ಇಲ್ಲಿ ಉಲ್ಲೇಖಿಸಿದರೆ ಅದು ಅಪ್ರಸ್ತುತವಾಗಲಾರದೆಂದು ನಮ್ಮ ನಂಬುಗೆ. ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯ ಉಪಸಂಸ್ಥೆಯಾದ ಸಾಹಿತ್ಯ ಸಮಿತಿಯು ಕನ್ನಡ ಸಾಹಿತ್ಯಕ್ಕೆ ಅವರು ಸಲ್ಲಿಸಿದ ಅಪಾರವಾದ ಸೇವೆಯನ್ನು ಮನದಂದು ಅವರ ಹೆಸರನ್ನು ಸ್ಮಾರಕಗೊಳಿಸಲು ಲಿಂಗಾಯತ ನಗರ ಭವನದಲ್ಲಿಯ ತನ್ನ ಲಾಯಬ್ರರಿಗೆ "ಡೆಪ್ಯೂಟಿ ಚೆನ್ನಬಸವಪ್ಪ ಲಾಯಬ ರಿ" ಎಂದು ನಾಮಕರಣ ಮಾಡಿದೆ.

ಅವರು ಆದರ್ಶ ಶಿಕ್ಷಕರೂ ಅಹುದು; ಪ್ರತಿಭಾವಂತ ಗಣಿತಜ್ಞರೂ ಅಹುದು; ಸಾರ್ವಜನಿಕಕಾರ್ಯಕರ್ತರೂ ಅಹುದು; ಸುಧಾರಕರೂ ಅಹುದು; ಉತ್ತರ ಕರ್ನಾಟಕದ ಆಧುನಿಕ ಪ್ರಪ್ರಥಮ ಶಿಕ್ಷಣ ತಜ್ಞರೂ ಅಹುದು; ನಾಮಾಂಕಿತ ವಾಗ್ಮಿಗಳೂ ಅಹುದು; ಕನ್ನಡದ ಹುಲಿಯೂ ಅಹುದು; ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಪ್ರಪ್ರಥಮ ಪ್ರಿನ್ಸಿಪಾಲರೂ ಅಹುದು; ಇಂತಪ್ಪ ಶ್ರೀ ಚೆನ್ನಬಸವಪ್ಪನವರ ಹೆಸರು ಚಿರಸ್ಮರಣೀಯವಾಗಿದೆ.

ವಿಲಿಯಮ್ ಅಲೆನ್ ರಸೆಲ್

ಉತ್ತರ ಕರ್ನಾಟಕದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪುನರುಜ್ಜೀವನವನ್ನು ಎಸಗಿದ ಮಹಾಪುರುಷರಲ್ಲಿ ರಸೆಲ್‌ಸಾಹೇಬರಿಗೆ ಅಗ್ರಸ್ಥಾನ ಸಲ್ಲುತ್ತದೆ. ಅವರು ಭಾರತಕ್ಕೆ ಬಂದುದು ಕ್ರಿ. ಶ. ೧೮೬೦ರಲ್ಲಿ ಮೊದಲು ಪುಣೆಯ ಡೆಕ್ಕನ್ ಕಾಲೇಜದ ಪ್ರಿನ್ಸಿಪಾಲರಾಗಿ ನೇಮಕ ಹೊಂದಿದರು. ಅಲ್ಲಿ ಎರಡು ವರ್ಷ ಕೆಲಸ ಮಾಡುತ್ತಿರುವಾಗಲೇ ಕ್ರಿ. ಶ. ೧೮೬೨ರಲ್ಲಿ ಅವರನ್ನು ಮುಂಬಯಿ ಇಲಾಖೆಯ ಮಧ್ಯಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ನಿಯಮಿಸಿದರು. ಅಲ್ಲಿಯೂ ಎರಡು ವರ್ಷ ಕೆಲಸ ಮಾಡಿ ಕ್ರಿ. ಶ. ೧೮೬೪ರಲ್ಲಿ ಇದೇ ಇಲಾಖೆಯ ಉತ್ತರ ಭಾಗಕ್ಕೆ ಕಾಯಂ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ಹೋದರು. ಅಲ್ಲಿ ಒಂದು ವರ್ಷ ಉಳಿದು ಕ್ರಿ. ಶ. ೧೮೬೫ನೆಯ ಇಸವಿ ಮೇ ತಿಂಗಳಲ್ಲಿ ಇವರು ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರೆಂದು ವರ್ಗವಾಗಿ ಬಂದರು. ಅಲ್ಲಿಂದ ಈ ದಕ್ಷಿಣ ಭಾಗದಲ್ಲಿಯೇ ೨೦ ವರ್ಷಗಳ ವರೆಗೆ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ಉಳಿದು ಕನ್ನಡವನ್ನುದ್ಧರಿಸಿದ ಪುಣ್ಯಪುರುಷರೆಂಬ ಕೀರ್ತಿಗೆ ಭಾಗಿಗಳಾದರು.

ಉತ್ತರ ಕರ್ನಾಟಕವೆಂದು ಕರೆಯುತ್ತಿರುವ ಈ ಭಾಗವನ್ನು ಆಗ ದಕ್ಷಿಣ ಮಹಾರಾಷ್ಟ್ರವೆಂದು ಕರೆಯುತ್ತಿದ್ದರು. ಈ ಹೆಸರು ಮೊನ್ನೆ ಮೊನ್ನೆಯವರೆಗೂ ಉಳಿದುದು ಅನೇಕರ ಅವಗಾಹನೆಯಲ್ಲಿರಬಹುದು. ಈ ನಾಡಿನ ಜನತೆಯ ಭಾಷೆ ಕನ್ನಡವಾಗಿದ್ದರೂ ಮರಾಠಿಯ ಪ್ರಭಾವ ಎಲ್ಲೆಲ್ಲಿಯೂ ಕಂಡುಬರುತ್ತಿತ್ತು. ಇದು ಪೇಶ್ವೆಯರ ಆಳಿಕೆಯ ಪ್ರಭಾವವೆಂದು ಬೇರೆ ಹೇಳಬೇಕಿಲ್ಲ. ಮಳೆ ನಿಂತರೂ ಮರದಹನಿ ನಿಲ್ಲದೆಂಬಂತೆ ಪೇಶ್ವೆಯರ ಆಳಿಕೆ ನಿಂತು ಬ್ರಿಟಿಷರ ಅರಸೊತ್ತಿಗೆ ಆರಂಭವಾದರೂ ಮರಾಠಿಯ ಪ್ರಭಾವ ನಿಂತಿರಲಿಲ್ಲ. ಎಲ್ಲ ಅಧಿಕಾರಿಗಳು ಮಹಾರಾಷ್ಟ್ರದವರು. ಮಕ್ಕಳು ಶಾಲೆಗಳಲ್ಲಿ ಕಲಿಯುವ ಭಾಷೆ ಮರಾಠಿ, ಕೋರ್ಟು-ಕಚೇರಿಗಳ ಭಾಷೆ ಮರಾಠಿ, ವ್ಯಾಪಾರಸ್ಥರು ಲೆಕ್ಕಪತ್ರಗಳನ್ನಿಡುವ ಭಾಷೆ ಮರಾಠಿ, ಯುರೋಪಿಯನ್ ಅಧಿಕಾರಿಗಳೊಡನೆ ಅವರ ಕೈಕೆಳಗಿನ ಅಧಿಕಾರಿಗಳೂ ಮತ್ತಿತರರೂ ಮಾತನಾಡುತ್ತಿದ್ದ ಭಾಷೆ ಮರಾಠಿ ಸರಕಾರೀ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳಿಸುತ್ತಿದ್ದ ಪಾಲಕರು ಅವರು ಮರಾಠಿಯನ್ನೇ ಕಲಿಯಬೇಕೆಂದು ಅಪೇಕ್ಷಿಸುತ್ತಿದ್ದರು, ಕನ್ನಡಕ್ಕೆ ಸಾಹಿತ್ಯವಿದೆ, ಸಂಸ್ಕೃತಿಯಿದೆ ಎಂಬುದರ ಅರಿವೇ ಆಗ ಯಾರಿಗೂ ಇರಲಿಲ್ಲ. ಇದ್ದ ಕೆಲವರಿಗೆ ಅನುಕೂಲ ಪರಿಸ್ಥಿತಿಯಿರಲಿಲ್ಲ. ಕನ್ನಡದ ಅಭ್ಯಾಸವನ್ನು ನಿರಂತರವಾಗಿ ನಡೆಸಿಕೊಂಡು ಬಂದವರೆಂದರೆ ವೀರಶೈವ ಅಯ್ಯನವರು. ಅಯ್ಯನವರ ಶಾಲೆಗಳೆಂದು ಇತ್ತೀಚಿನವರೆಗೂ ವೀರಶೈವರ ಮಠಗಳಲ್ಲಿ ಕನ್ನಡ ಶಾಲೆಗಳು ಕಂಡುಬರುತ್ತಿದ್ದುವು. ಅಷ್ಟೇ ಏಕೆ ಮಠವೆಂಬ ಪದಕ್ಕೇ ಶಾಲೆ ಎಂಬ ಅರ್ಥ ರೂಢವಾಗಿದೆ. ಧಾರವಾಡದ ಸರಕಾರಿ ಟ್ರೇನಿಂಗ ಕಾಲೇಜದಿಂದ ಹೊರ

ಡುತ್ತಿರುವ ಮಾಸಪತ್ರಿಯ ಪೊಟ್ಟಮೊದಲಿನ ಹೆಸರು ಮಠಪತ್ರಿಕೆಯೆಂಬುದಾಗಿತ್ತು. ಹೀಗೆ ಎಷ್ಟೋ ದಿವಸಗಳ ವರೆಗೆ ಕನ್ನಡದ ಅಭ್ಯಾಸವು ವೀರಶೈವ ಮಠಗಳಿಗೆ ಮಾತ್ರ ನಿಯಂತ್ರಿತವಾಗಿತ್ತೆಂದು ಆಚಾರ್ಯ ವೆಂಕಟ ರಂಗೋ ಕಟ್ಟಿಯವರು ತಮ್ಮ ಒಂದು ವರದಿಯಲ್ಲಿ ಹೇಳಿರುತ್ತಾರೆ. "The study of Kannada was confined to a few Lingayat priests.

ಕನ್ನಡಿಗರು ತಮ್ಮ ಅಂಕಿತಕ್ಕಾಗಿಯೂ ಸಹ ಮರಾಠಿಯನ್ನೇ ಬಳಸುತ್ತಿದ್ದುದು ಆಗ ಬಹುತರ ಎಲ್ಲ ಕಡೆಗೂ ಕಂಡು ಬರುತ್ತಿತ್ತು. ಆರೆ ಅರಸು, ಮುಸಲ್ಮಾನ ಸರಸು, ಕನ್ನಡ ಬಿರುಸು ಎಂಬ ರೂಢಿಯ ಮಾತು ಆ ಕಾಲದ ಕನ್ನಡಿಗರ ಸ್ವಾಭಿಮಾನ ಶೂನ್ಯತೆಯ ದ್ಯೋತಕ ವಲ್ಲವೇ ? ಹೀಗೆ ನಿಶೆಯ ನೀರವತೆಯಲ್ಲಿ ಕನ್ನಡ ಜನತೆ ನಿಮಗ್ನವಾಗಿರುವಾಗ ಬೆಳಕನ್ನು ಬೀರಲು ಬಂದ ಭಾಸ್ಕರ ನಂತೆ ರಸೆಲ್‌ಸಾಹೇಬರು ಇಲ್ಲಿಗೆ ಆಗಮಿಸಿದರು.

ರಸೆಲ್ ಅವರು ಮಾಡಿದ ಪೊಟ್ಟಮೊದಲಿನ ಮಹಾಕಾರ್ಯವೆಂದರೆ ಈ ಭಾಗದ ಜನತೆಯ ಭಾಷೆ ಕನ್ನಡವೆಂಬುದನ್ನು ಕಂಡು ಹಿಡಿದುದು, ಕನ್ನಡ ಸಾಹಿತ್ಯ ಸಂಸ್ಕೃತಿಗಳ ಹಿರಿಮೆಯನ್ನು ಅರಿತುದು; ಡೆಪ್ಯುಟಿ ಚೆನ್ನ ಬಸವಪ್ಪನವರಂತಹ ಪ್ರಭಾವಶಾಲಿ ಕನ್ನಡಾಭಿಮಾನಿಗಳನ್ನು ಕಂಡು ಹಿಡಿದುದು. ಈ ತ್ರಿಕೂಟ ಯೋಗದಿಂದಲೇ ಕನ್ನಡ ಉಳಿಯಿತು ! ಬಾಳಿತು !! ಬೆಳೆಯಿತು !!! ರಸೆಲ್ ಸಾಹೇಬರು ಕನ್ನಡಕ್ಕೆ ನೀಡಿದ ಸೇವೆಯನ್ನು ಬಣ್ಣಿಸುವ ಶಕ್ತಿ ಶಬ್ದಕ್ಕಿಲ್ಲ. ಕಂಡುಗವನ್ನು ಬಳ್ಳದಲ್ಲಿ ಅಳೆದಂತೆ ಅದನ್ನಿಲ್ಲಿ ಸಂಕ್ಷೇಪವಾಗಿ ವಿವರಿಸಲಾಗಿದೆ.

೧. ಕನ್ನಡ ಟ್ರೇನಿಂಗ ಕಾಲೇಜು

ಕನ್ನಡದ ಶಿಕ್ಷಕರನ್ನು ತರಬೇತುಗೊಳಿಸುವುದಕ್ಕಾಗಿ ಬೆಳಗಾಂವಿಯಲ್ಲಿದ್ದ ನಾರ್ಮಲ್ ಸ್ಕೂಲು ರಸೆಲ್ ಸಾಹೇಬರ ಆಳಿಕೆ ಆರಂಭವಾದೊಡನೆಯೇ ಟ್ರೇನಿಂಗ ಕಾಲೇಜದ ರೂಪುವಡೆಯಿತು. ರಸೆಲ್‌ಸಾಹೇಬರು ತಮ್ಮ ೧೮೬೫–೬೬ನೆಯ ಸಾಲಿನ ವರದಿಯಲ್ಲಿಯೇ ಈ ವಿಷಯವಾಗಿ ಹೀಗೆ ಬರೆದಿರುವರು. ಕನ್ನಡವನ್ನು ಕಲಿಸಲು ಯೋಗ್ಯರಾದ ಶಿಕ್ಷಕರನ್ನು ನಾನು ಹುಡುಕುತ್ತಿದ್ದೇನೆ. ಈ ತಿಂಗಳು ಬೆಳಗಾಂವಿಯ ಟ್ರೇನಿಂಗ ಸ್ಕೂಲಿನಲ್ಲಿ ಕನ್ನಡ ಮಾಸ್ತರರ ಸ್ಥಾನಕ್ಕೆ ಅತ್ಯಂತ ಯೋಗ್ಯರಾದ ಒಬ್ಬ ಶಿಕ್ಷಕರನ್ನು ನಿಯಮಿಸಿದ್ದೇನೆ. ಈ ವರ್ಷ ಈ ಬೆಳಗಾಂವಿಯ ಟ್ರೇನಿಂಗ ಸ್ಕೂಲನ್ನು ಪುಣೆ, ಅಹಮ್ಮದಾಬಾದಗಳಲ್ಲಿರುವ ಟ್ರೇನಿಂಗ ಕಾಲೇಜುಗಳ ಮಟ್ಟಕ್ಕೆ ಏರಿಸಲು ಬೇಕಾದ ಹಣದ ಯೋಜನೆಯನ್ನು ಮಾಡಿದ್ದೇನೆ.

"I have this year budgeted for means to put the Belgaum training school on the same footing as a vernacular college as those of Poona and Ahmadabad"

೨. ಕನ್ನಡ ಡೆಪ್ಯುಟಿ ಇನಸ್ಪೆಕ್ಟರರು ಮತ್ತು ಕನ್ನಡ ಶಿಕ್ಷಕರು.

ಮಹಾರಾಷ್ಟ್ರ ಗುಜರಾಥಗಳಲ್ಲಿರುವ ಶಾಲೆಗಳಲ್ಲಿ ಮರಾಠಿ ಗುಜರಾಥಿ ಭಾಷೆಗಳಿಗೆ ಇರುವ ಸ್ಥಾನ, ಉತ್ತರ ಕರ್ನಾಟಕದಲ್ಲಿಯ ಶಾಲೆಗಳಲ್ಲಿ ಕನ್ನಡಕ್ಕೆ ಪ್ರಾಪ್ತವಾಗಬೇಕೆಂಬುದು ರಸೆಲ್‌ಸಾಹೇಬರ ಹೆಬ್ಬಯಕೆಯಾಗಿದ್ದಿತು. ಅದಕ್ಕಾಗಿ ಅವರು ಕನ್ನಡದ ಬಗೆಗೆ ಉಜ್ವಲ ಅಭಿಮಾನವುಳ್ಳವರೂ ಮೇಧಾವಿಗಳೂ ಬೆಳಗಾಂವಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ ಆಗಿದ್ದ ಡೆಪ್ಯೂಟಿ ಚೆನ್ನಬಸವಪ್ಪನವರನ್ನು ಬೆಳಗಾಂವ ಕಾರವಾರ ಭಾಗಕ್ಕೆ ಡೆಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರ ಅಂತಾ ನಿಯಮಿಸಿದರು. ರಸೆಲ್ ಸಾಹೇಬರು ಡೆಪ್ಯೂಟಿ ಚೆನ್ನಬಸವಪ್ಪ ಇವರು ಆ ಕಾಲದಲ್ಲಿ ಕನ್ನಡದ ಎರಡು ಕಣ್ಣುಗಳಂತೆ ಕೆಲಸ ಮಾಡತೊಡಗಿದರು. ಉಳಿದ ಇಬ್ಬರು ಡೆಪ್ಯೂಟಿ ಇನಸ್ಪೆಕ್ಟರರೂ ಶಿಕ್ಷಕರೂ ಕನ್ನಡದ ಕಡೆಗೆ ಹೆಚ್ಚು ಗಮನ ಕೊಡುವಂತೆ ಒತ್ತಾಯಪಡಿಸಿದರು. ೧೮೭೮ನೆಯ ಇಸವಿಯಲ್ಲಿ ಭುಜಂಗರಾವ ಹುಯಿಲಗೋಳ ಎಂಬವರು ಬೆಳಗಾಂವಿ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರಾಗಿದ್ದಾಗ ರಂಗೋ ಗೋಪಾಲ ಎಂಬ ಕಾಲೇಜ ವಿದ್ಯಾರ್ಥಿಯು ಡೆಪ್ಯೂಟಿ ಇನಸ್ಪೆಕ್ಟರರ ಹುಕುಮಿನ ಮೇರೆಗೆ ತನ್ನ ಶಾಲೆಗೆ ಹಾಜರಾಗಿ ಆ ಬಗೆಗೆ ಪ್ರಿನ್ಸಿಪಾಲರ ಮುಖಾಂತರ ಡೆಪ್ಯೂಟಿ ಇನಸ್ಪೆಕ್ಟರರಿಗೆ ಮಾಡಿಕೊಂಡ ರಿಪೋರ್ಟಿನಲ್ಲಿ ಆತನು ತನ್ನ ಸಹಿಯನ್ನು ಮರಾಠಿಯಲ್ಲಿ ಮಾಡಿದ್ದನು. ಈ ರಿಪೋರ್ಟು ತಮ್ಮ ಕೈಗೆ ಬಂದೊಡನೆಯೇ ಮರಾಠಿ ಸಹಿಯನ್ನು ನೋಡಿ ಡೆಪ್ಯೂಟಿ ಇನಸ್ಪೆಕ್ಟರರಾದ ಚೆನ್ನಬಸವಪ್ಪನವರು ಹೀಗೆ ಬರೆಯುತ್ತಾರೆ.

ನಂ. 733/1868/69

ಪ್ರಿಯ ಭುಜಂಗರಾವ,

ಮರಾಠಿಯಲ್ಲಿ ಸಹಿ ಮಾಡುವದು ಅವಶ್ಯವಿಲ್ಲವೆಂದು ನಿಮ್ಮ ವಿದ್ಯಾರ್ಥಿಗಳಿಗೆ ತಿಳಿಸಬೇಕು. ಅವರ ಅಂಕಿತವು ಕನ್ನಡದಲ್ಲಿಯೇ ಇರುವುದು ಅತ್ಯವಶ್ಯವಿದೆ.

ನಿಮ್ಮ

ಬೆಳಗಾವ. ಚೆನಬಸಪ್ಪ ಧಾರವಾಡ

೨೨-೮-೬೮ ಡೆ. ಎ. ಇ. ಬೆಳಗಾವ.

ಈ ಹುಕುಮಿನ ಮಜಕೂರನ್ನು ಪ್ರಿನ್ಸಿಪಾಲ ಭುಜಂಗರಾಯರು ಸರಕ್ಯೂಲರ ಮೂಲಕ ಎಲ್ಲ ವಿದ್ಯಾರ್ಥಿಗಳಿಗೆ ತಿಳಿಸಿದರು.

ಇದೇ ಭುಜಂಗರಾಯರು ಪ್ರಿನ್ಸಿಪಾಲರಿದ್ದಾಗ ವಿದ್ಯಾರ್ಥಿಗಳ ಗಮನ ಮರಾಠಿಯ ಕಡೆಗೇ ಇನ್ನೂ ಹೆಚ್ಚಿದ್ದುದನ್ನು ಕಂಡು ಕ್ರಿ ಶ. ೧೮೭೦ರಲ್ಲಿ ಡೆಪ್ಯುಟಿ ಚೆನ್ನಬಸವಪ್ಪನವರು ಭುಜಂಗರಾಯರಿಗೆ ಬರೆದ ಒಂದು ಪತ್ರದಲ್ಲಿ ಹೀಗಿದೆ:

2/3/70
ನರಗುಂದ

ಪ್ರಿಯ ಭುಜಂಗರಾವ,

ಈಗ ನಮ್ಮ ಶಾಲೆಗಳಲ್ಲಿ ಮರಾಠಿಯನ್ನು ಕಲಿಸುವದು ಅವಶ್ಯವಿಲ್ಲ. ಶಿಕ್ಷಕರ ಯಶಸ್ಸು ಕೇವಲ ಅವರು ಕನ್ನಡವನ್ನು ಹೇಗೆ ಕಲಿಸುವರೆಂಬುದರ ಮೇಲೆಯೇ ಅವಲಂಬಿಸಿರುತ್ತದೆ. ಇದನ್ನು ನಿಮ್ಮ ಎಲ್ಲ ವಿದ್ಯಾರ್ಥಿಗಳ ಗಮನಕ್ಕೆ ಸ್ಪಷ್ಟವಾಗಿ ತಂದುಕೊಡಬೇಕು.

ನಿಮ್ಮ
ಚೆನಬಸಪ್ಪ ಧಾರವಾಡ
ಡೆ. ಎ. ಇ. ಧಾರವಾಡ

ಇದರ ಮೇಲಿಂದ ರಸೆಲ್ ಸಾಹೇಬರ ಆಳಿಕೆಯಲ್ಲಿ ಕನ್ನಡದ ಪುನರುಜ್ಜೀವನಕ್ಕಾಗಿ ಅವರೂ ಡೆ. ಚೆನ್ನಬಸಪ್ಪನವರೂ ಎಷ್ಟು ವಿಶ್ವಪ್ರಯತ್ನ ಮಾಡುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಇವರು ಶಾಲೆಗಳ ಅಭ್ಯಾಸ ಪತ್ರಿಕೆಯಲ್ಲಿ ಕನ್ನಡದ ಅಭ್ಯಾಸಕ್ಕೆ ಅತ್ಯಂತ ಯೋಗ್ಯವಾದ ಸ್ಥಾನ ದೊರೆಯುವಂತೆ ನೋಡಿಕೊಂಡರು. ಕನ್ನಡ ಶಿಕ್ಷಕರನ್ನು ತರಬೇತುಗೊಳಿಸುವುದಕ್ಕಾಗಿ ಬೆಳಗಾವಿಯ ನಾರ್ಮಲ್ ಸ್ಕೂಲು ಸ್ಥಾಪನವಾಗಿ ಮುಂದೆ ಕಾಲೇಜೂ ಆಯಿತು. ಆದರೆ, ಅಲ್ಲಿ ಕಲಿಸುವ ಮಾಸ್ತರರು ಮರಾಠಿಗರು, ಅವರಿಗೆ ಕನ್ನಡದ ಸರಿಯಾದ ಜ್ಞಾನವಿರಲಿಲ್ಲ; ಅಲ್ಲದೆ ಅದರ ಬಗೆಗೆ ಅವರು ಆಸ್ಥೆಯನ್ನೂ ಪರಿಶ್ರಮವನ್ನೂ ತೋರಲಿಲ್ಲ. ಇದರ ಪರಿಣಾಮವಾಗಿ ಅಲ್ಲಿ ಕನ್ನಡ ಉಮೇದುವಾರರ ಸಂಖ್ಯೆಯಾಗಲಿ, ಅವರ ಯೋಗ್ಯತೆಯಲ್ಲಿ ಪ್ರಗತಿಯಾಗಲಿ ಕಂಡು ಬರಲಿಲ್ಲ. ಸೂಕ್ಷ್ಮ ನಿರೀಕ್ಷರಾದ ರಸೆಲ್‌ರವರು ಇದನ್ನು ಕೂಡಲೇ ಗ್ರಹಿಸಿದರು. ಅದಕ್ಕಾಗಿ ಅಧಿಕಾರಿಗಳನ್ನೂ ಶಿಕ್ಷಕರನ್ನೂ ನೇಮಿಸಿಕೊಳ್ಳುವಾಗ ಅವರಿಗೆ ಸರಿಯಾದ ಕನ್ನಡ ಜ್ಞಾನ ಇದೆಯೋ ಇಲ್ಲೋ ಎಂಬುದನ್ನು ಮೊದಲು ಪರೀಕ್ಷಿಸುತ್ತಿದ್ದರು. ಈ ತತ್ವಕ್ಕನುಸರಿಸಿಯೇ ಬೆಳಗಾವ ಟ್ರೇನಿಂಗ ಕಾಲೇಜದಲ್ಲಿ ಮಾಸ್ತರರನ್ನು ನಿಯಮಿಸುವಾಗ ಮೊದಲನೆಯ ಹಾಗು ಎರಡನೆಯ ಎರಡೂ ಸ್ಥಳಗಳಿಗೂ ಉಚ್ಚ ಪದವೀಧರರಾದ ಇಬ್ಬರು ಕನ್ನಡಿಗರನ್ನೇ ನಿಯಮಿಸಿದರು. ಮತ್ತು ಕನ್ನಡ ಸಾಹಿತ್ಯದ ಬೆಳಕಿನಂತಿದ್ದ ಗಂಗಾಧರ ಮಡಿವಾಳೇಶ್ವರ ತೂರಮರಿಯವರನ್ನು ಕಾಲೇಜದ ೩ನೆಯ ಸ್ಥಳಕ್ಕೆ ನಿಯಮಿಸಿ ಆ ಸಂಸ್ಥೆಗೂ ಕನ್ನಡದ ಅಭ್ಯಾಸಕ್ಕೂ ಹೆಚ್ಚಿನ ಕಳೆಯನ್ನು ತಂದುಕೊಟ್ಟರು. ಈ ವ್ಯವಸ್ಥೆಯಿಂದ ಕಾಲೇಜದ ವಿದ್ಯಾರ್ಥಿಗಳ ಸಂಖ್ಯೆಯು ಬೆಳೆಯಿತಲ್ಲದೆ ವಿದ್ಯಾರ್ಥಿಗಳ ಯೋಗ್ಯತೆಯ ಮಟ್ಟದಲ್ಲಿಯೂ ಪ್ರಗತಿಯಾಯಿತು.

(೩) ಕನ್ನಡ ಪಠ್ಯ ಪುಸ್ತಕಗಳು:

ರಸೆಲ್ ಅವರು ಬರುವ ಪೂರ್ವದಲ್ಲಿ ಕನ್ನಡದಲ್ಲಿ ಮೊದಲಿನ ಮೂರು ಪಠ್ಯ ಪುಸ್ತಕಗಳನ್ನು ಮಾತ್ರ ರಚಿಸಲಾಗಿದ್ದಿತು. ಮರಾಠಿಯೊಡನೆ ಕನ್ನಡವನ್ನು ಕಲಿಸುತ್ತಿದ್ದ ಕೆಲವೇ ಕೆಲವು ಶಾಲೆಗಳಲ್ಲಿ ಮಂಗಳೂರಿನ ಮಿಶನರಿಯವರು ತಯಾರಿಸಿದ ಕನ್ನಡ ಪಠ್ಯಪುಸ್ತಕಗಳನ್ನು ಉಪಯೋಗಿಸುತ್ತಿದ್ದರು. ದಕ್ಷಿಣ ಭಾಗಕ್ಕಾಗಿ ಪುಣೆಯಿಂದ ಸ್ಥಳಾಂತರಿಸಿದ ಒಂದು ಕನ್ನಡ ಟ್ರಾನ್ಸಲೇಟರ ಸ್ಥಳಕ್ಕೆ ಒಬ್ಬ ಮರಾಠಿಯವನನ್ನೇ ನಿಯಮಿಸಲಾಗಿದ್ದಿತು. ರಸೆಲ್‌ರವರು ಈ ಕ್ರಮವಿಪರ್ಯಯವನ್ನು ಕಂಡು ಹಿಡಿದು ಆದಷ್ಟು ಶೀಘ್ರವೇ ಆ ಸ್ಥಳಕ್ಕೆ ಒಬ್ಬ ಕನ್ನಡಿಗನನ್ನು ನೇಮಿಸಿದರು. ಆಗಲೇ ಪ್ರಾರಂಭವಾಗಿದ್ದ ಮರಾಠಿ ಪಠ್ಯ ಪುಸ್ತಕಗಳ ಕನ್ನಡ ಭಾಷಾಂತರದ ಕಾರ್ಯವನ್ನು ಮುಂದುವರಿಸಲು ಆಜ್ಞಾಪಿಸಿದರು. ಈ ವಿಷಯವಾಗಿ ರಸೆಲ್ ಅವರು ಹೀಗೆ ಬರೆದಿರುವರು. ನಮ್ಮ ನಾಲ್ಕನೆಯ ಪಠ್ಯಪುಸ್ತಕ ಈಗ ಸಿದ್ಧವಾಗಿದೆ. ಐದನೆಯದು ಸಿದ್ಧವಾಗುತ್ತಲಿದೆ. ಹೀಗೆ ಮೂರೇ ಮೂರು ಪಠ್ಯಪುಸ್ತಕಗಳಿರುವ ಮೈಸೂರ ವಿಭಾಗಕ್ಕಿಂತಲೂ ನಮ್ಮ ಈ ಭಾಗದ ಪಠ್ಯ

ಪುಸ್ತಕದ ಕಾರ್ಯದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಲಾಗಿದೆ. ಬಹು ಬೇಗನೆ ಮರಾಠಿ ಗುಜರಾಥಿ ಭಾಷೆಗಳಲ್ಲಿರುವ ಪಠ್ಯಪುಸ್ತಕಗಳ ಮಟ್ಟಕ್ಕೆ ಈ ಭಾಗದ ಪಠ್ಯಪುಸ್ತಕಗಳೂ ಬರುವಂತೆ ನೋಡಿಕೊಳ್ಳಲಾಗುವದು.

(೪) ಶಿಕ್ಷಣ ಪ್ರಸಾರ.

ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ವಿದ್ಯಾರ್ಥಿಗಳ ಸಂಖ್ಯೆ ಭರದಿಂದ ಬೆಳೆಯುತ್ತ ನಡೆಯಿತು. ಒಳ್ಳೆಯ ಅಭಿಮಾನದ ಸಂಗತಿಯೆಂದರೆ:— ಒಂದೇ ವರ್ಷ (೧೮೬೬—೬೭) ದಲ್ಲಿ ಹೆಣ್ಣು ಮಕ್ಕಳ ೧೨ ಸಾಲೆಗಳನ್ನು ಸ್ಥಾಪಿಸಲಾಯಿತು. ೩೯೨ ಹುಡಿಗೆಯರು ಆಗ ಶಾಲೆಗೆ ಹೋಗುತ್ತಿದ್ದರು. ಇದೆಲ್ಲವೂ ರಸೆಲ್ಲರವರ ನಿಷ್ಪಕ್ಷಪಾತ ದೃಷ್ಟಿ, ಯೋಗ್ಯ ಆಡಳಿತೆ ಇವುಗಳ ಫಲವೆಂಬುದು ಸುಸ್ಪಷ್ಟವಿದೆ. ರಸೆಲ್‌ಸಾಹೇಬರ ಯೋಗ್ಯ ನಿರ್ಣಯ, ಹಾಗು ಸೂಕ್ಷ್ಮ ನಿರೀಕ್ಷಣೆಯ ಉತ್ತಮ ನಿದರ್ಶನವೆಂದರೆ, ಅವರು ಈ ನಾಡಿನ ಮುಖ್ಯ ಜನಾಂಗವೆಂದರೆ ವೀರಶೈವರು, ಉಳುವವರೂ ವರ್ತಕರೂ ಅವರೇ, ಅವರು ಮುಂದೆ ಬರದೆ ಈ ನಾಡಿನ ಪ್ರಗತಿ ಸಾಧಿಸದು. ಎಂಬುದನ್ನು ಕಂಡು ಹಿಡಿದುದು. ಈ ವಿಷಯವಾಗಿ ವೆಂಕಟರಂಗೋ ಕಟ್ಟಿ ಅವರು ಹೀಗೆ ನುಡಿದಿರುವರು:

> "The best illustration however of Mr. Russell"s sound judgment and keen perception is to be seen in his encouragement who were totally ignored by his predecessors though they formed the greater part of the population of this division"

(೫) ಮುದ್ರಣಾಲಯ.

ಇದುವರೆಗೂ ಕನ್ನಡದಲ್ಲಿ ಮುದ್ರಣ ಯಂತ್ರಗಳಿರಲಿಲ್ಲ. ಅಲ್ಲಲ್ಲಿ ಕಲ್ಲಚ್ಚಿನ ವ್ಯವಸ್ಥೆ ಮಾತ್ರ ಇದ್ದಿತು. ಕನ್ನಡದ ಅಚ್ಚಿಗೆ ಬೇಕಾದ ಮೊಳೆಗಳನ್ನು ಲಂಡನ್‌ದಿಂದ ತರಿಸಬೇಕೆಂದು ರಸೆಲ್ ಅವರು ವಿಶ್ವ ಪ್ರಯತ್ನ ಮಾಡಿದರು. ಆದರೆ, ಅದು ಸಾಧ್ಯವಾಗಲಿಲ್ಲ. ಅವರ ಕೈಕೆಳಗಿನ ಅಧಿಕಾರಿಯೊಬ್ಬನು ತನ್ನ ಬುದ್ಧಿಸಾಮರ್ಥ್ಯದಿಂದ ಕನ್ನಡದ ಮೊಳೆಗಳನ್ನು ಸಿದ್ಧಪಡಿಸಿದನು. ರಸೆಲ್‌ರವರು ಪರಮಾನಂದದಿಂದ ಬೆಳಗಾವಿಯಲ್ಲಿ ಮುದ್ರಣಾಲಯವನ್ನು ಸ್ಥಾಪಿಸಲು ಒಬ್ಬರಿಗೆ ಉತ್ತೇಜನ ಕೊಟ್ಟರು. ಅವನಿಗೆ ಉತ್ತೇಜನಾರ್ಥವಾಗಿ ತಾವು ಸ್ವತಃ ೨ ಸಾವಿರ ರೂಪಾಯಿ ಕೊಟ್ಟರಲ್ಲದೆ ಸರಕಾರದಿಂದಲೂ ೨ ಸಾವಿರ ರೂಪಾಯಿ ಸಹಾಯ ಧನ ಕೊಡಿಸಿದರು. ಈ ಸಹಕಾರದಿಂದ ೧೮೬೯ರಲ್ಲಿ ಕನ್ನಡ ಪುಸ್ತಕಗಳನ್ನು ಅಚ್ಚು ಹಾಕಲು ಅನುಕೂಲವಾದ ಒಂದು ಮುದ್ರಣಾಲಯವು ಬೆಳಗಾವಿಯಲ್ಲಿ ಸ್ಥಾಪಿತವಾಯಿತು. ಇದರಿಂದ ಕನ್ನಡದ ಪುನರ್ಜೀವನಕ್ಕೆ ವಿಶೇಷವಾದ ಪ್ರೋತ್ಸಾಹನ ದೊರೆಯಿತು.

ಹೀಗೆ ರಸೆಲ್‌ಸಾಹೇಬರು ಕನ್ನಡ ನುಡಿಗೆ, ನಾಡಿಗೆ ಜೀವಕಳೆಯನ್ನಿತ್ತರು. ಇದಕ್ಕೆ ಅವರ ನಿಷ್ಪಕ್ಷಪಾತದೃಷ್ಟಿ, ಸೂಕ್ಷ್ಮ ನಿರೀಕ್ಷಣೆ, ಯೋಗ್ಯ ಆಡಳಿತೆ ಇವೇ ಕಾರಣವೆಂದು ಈ ಮೊದಲೇ ಸ್ಪಷ್ಟಪಡಿಸಲಾಗಿದೆ. ಎಲ್ಲಕ್ಕೂ ಮೇಲಾಗಿ ಅವರ ಕನ್ನಡದ ಅಭಿಮಾನ ನಮ್ಮ ನಾಡಿನ ಇತಿಹಾಸದಲ್ಲಿ ಅತ್ಯಂತ ಸಂಸ್ಮರಣೀಯವಾದುದು. ಅವರು ಸ್ಥಾಪಿಸಿದ ವರ್ಧಪ್ರಾಯಿಜ ಇಂದಿಗೂ ಅವರ ಕೀರ್ತಿಯ ದ್ಯೋತಕವಾಗಿದೆ. ರಸೆಲ್‌ಸಾಹೇಬರು ಎಂದಿಗೂ ಯಾರ ಮನಸ್ಸನ್ನೂ ನೋಯಿಸುತ್ತಿರಲಿಲ್ಲವಂತೆ, ಬಿರುಸುಮಾತು ಅವರ ಬಾಯಿಯಿಂದ ಬಂದುದನ್ನೇ ಯಾರೂ ಕೇಳಲಿಲ್ಲವಂತೆ! ಅತಿ ತೀಕ್ಷ್ಣವಾದ ಹಾಸ್ಯದ ನುಡಿಗಳಿಂದಲೇ ಅಧಿಕಾರಿಗಳಲ್ಲಿ ಕಂಡು ಬರುವ ಕುಂದು ಕೊರತೆಗಳನ್ನು ತಿದ್ದುತ್ತಿದ್ದರಂತೆ !! ಮಾತು ಕಡಮೆ ಕೃತಿ ಬಹಳ !!! ರಸೆಲ್‌ರವರು ಬಹು ಜನಪ್ರಿಯರಾದುದು ಈ ಕಾರಣಕ್ಕಾಗಿ. ಜನಪ್ರಿಯರಾದುದರಿಂದಲೇ ಇಷ್ಟು ಮಹತ್ವದ ಬದಲಾವಣೆಗಳನ್ನು ಮಾಡಲು ಸಮರ್ಥರಾದರು. ಆಗ ಅವರಿಗೆ ಬಂದ ವಿರೋಧ ಪ್ರಬಲವಾಗಿರಲಿಕ್ಕೆ ಸಾಕು. ಅವರು ಕ್ರಾಂತಿಕಾರಕರಾದುದರಿಂದಲೇ ಶಾಂತಿಯುತವಾದ ಕ್ರಾಂತಿಯನ್ನೆಸಗಿ ಕನ್ನಡಕ್ಕೆ ಜೀವಕಳೆಯನ್ನು ಕೊಟ್ಟರು. "ರಸೆಲ್ಲರ ಆಡಳಿತೆಯಿಂದ ವೀರಶೈವರಿಗೆ ವಿಶೇಷ ಲಾಭವಾಗಿದೆ. ಅವರು ರಸೆಲ್ಲರ ಚಿರಸ್ಮರಣೆಗಾಗಿ ಒಂದು ಸ್ಮಾರಕವನ್ನು ನಿರ್ಮಿಸುವದು ಅವಶ್ಯ" ಎಂದು ವೆಂಕಟರಂಗೋ ಕಟ್ಟಿ ಅವರು ತಮ್ಮದೊಂದು ವರದಿಯಲ್ಲಿ ಬರೆದಿರುವರು. ವೀರಶೈವರಷ್ಟೇ ಏಕೆ, ಸಮಸ್ತ ಕನ್ನಡಿಗರೂ ಆಗ ಕನ್ನಡವನ್ನುಳಿಸಿದ ಪುಣ್ಯ ಪುರುಷರಾದ ರಸೆಲ್ ಹಾಗು ಡೆಪ್ಯೂಟಿ ಚೆನ್ನಬಸವಪ್ಪನವರಿಗೆ ವಿಶೇಷ ಋಣಿಯಾಗಿದ್ದಾರೆ. ಇಂದು ಬೆಳಗುತ್ತಿರುವುದು ಅಂದು ಹಚ್ಚಿದ ಕನ್ನಡದ ನಂದಾದೀಪ! ಆದುದರಿಂದ ಆ ಪುಣ್ಯ ಪುರುಷರನ್ನು ಸ್ಮರಿಸುವದು ನಮ್ಮೆಲ್ಲರ ಪ್ರಥಮ ಕರ್ತವ್ಯವು.

ಪ್ರಿನ್ಸಿಪಾಲ್ ಹುಯಿಲಗೋಳ ಭುಜಂಗರಾಯರು

(೧೮೬೭ರಿಂದ ೧೮೮೫)

ಲೇಖಕರು ಪ್ರಿನ್ಸಿಪಾಲ: **ಆರ್. ವಾಯ್. ಧಾರವಾಡಕರ**

ಇಮಾರತಿನ ತಳಪಾಯದ ಕಲ್ಲು ಎಷ್ಟೇ ಗಟ್ಟಿಯಾಗಿದ್ದರೂ, ಕಟ್ಟಡವನ್ನು ಕಾಣುವವರ ಕಣ್ಣಿಗೆ ಈ ಭೀಮ ಶಿಲೆಗಳು ಕಾಣದೆ ಬರಿಯ ಕಳಸವೇ ಅನೇಕ ಸಲ ಕಾಣುವುದುಂಟು. ಧಾರವಾಡದ ಗಂಡು ಮಕ್ಕಳ ಟ್ರೇನಿಂಗ್ ಕಾಲೇಜಿನ ಮೊದಲಿನ ಪ್ರಿನ್ಸಿಪಾಲರಲ್ಲಿ ಒಬ್ಬರಾಗಿದ್ದ ಶ್ರೀ ಹುಯಿಲಗೋಳ ಭುಜಂಗರಾಯರ ಚರಿತ್ರೆಯೂ ಇದಕ್ಕೊಂದು ನಿದರ್ಶನವಾಗಿದೆ.

ಮನೆತನ: ದಿವಂಗತ ಹುಯಿಲಗೋಳ ಭುಜಂಗರಾಯರ ಮೂಲ ಮನೆತನವು ಮದ್ರಾಸ ಕಡೆಯದೆಂದು ಕಂಡು ಬರುತ್ತದೆ. ಆಗಿನ ಕಂಪನಿ ಸರಕಾರದ ಕಾಲದಲ್ಲಿ ದಿವಂಗತರ ಪೂರ್ವಜರಿಗೆ ಫೋರ್ಟಸೆಂಟ್ ಜಾರ್ಜದ ಹತ್ತಿರ ದಾನವಾಗಿ ಕೊಟ್ಟ ಸ್ಥಳವೂ ಇತ್ತೆಂದು ಹೇಳುತ್ತಾರೆ. ಅವರ ಮನೆತನವು ಹಿರಿಯ ಮುಲ್ಕಿ ಅಧಿಕಾರಿಗಳದು. ಭುಜಂಗರಾಯರ ಮುತ್ತಜ್ಜರಾದ ಶ್ರೀನಿವಾಸರಾಯರೇ ಧಾರವಾಡದ ಕಡೆಗೆ ಮೊದಲು ಬಂದವರು. ಅವರು ಬಹುಶಃ ಕಂಪನಿ ಸರಕಾರದ ಸೇವೆಯಲ್ಲಿಯೇ ಬಂದಿರಬೇಕು. ಅವರ ಮಗ ಹಣಮಂತರಾಯರು. ಅವರು ಸರಕಾರದಲ್ಲಿ ದಫ್ತರದಾರರಾಗಿ ಕೆಲಸ ಮಾಡುತ್ತಿದ್ದರು. ಇವರ ಕಾಲಕ್ಕೇ ಲಾರ್ಡ ಎಲ್ಫಿನ್‌ಸ್ಟನ್‌ರ ಕಾಲಾವಧಿಯಲ್ಲಿ ಹುಯಿಲಗೋಳ, ಕಳಸಾಪುರ, ನಾಗಾವಿ ಜಾಗೀರುಗಳು ಈ ಮನೆತನಕ್ಕೆ ದೊರೆತುವು. ಈ ಹಣಮಂತರಾಯರ ಮಕ್ಕಳೇ ಕೃಷ್ಣರಾವ್ ಎನ್ನುವವರು. ಇವರು ಪುಣೆಯಲ್ಲಿ ಬಹುಕಾಲ "ದಫ್ತರದಾರರಾಗಿ" (ಅಂದರೆ ಕಲೆಕ್ಟರರ ಪರ್ಸನಲ್ ಅಸಿಸ್ಟಂಟ್‌ರಾಗಿ) ಕೆಲಸ ಮಾಡಿದರು. ಅವರ ಮಕ್ಕಳೇ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿದ್ದ ಭುಜಂಗರಾಯರು. ಭುಜಂಗರಾಯರಿಗೆ ನರಸಿಂಗರಾವ್, ಮಾಧವರಾವ, ಮತ್ತು ವಾಸುದೇವರಾವ್ ಎಂದು ಅಣ್ಣಂದಿರೂ, ಹಣಮಂತರಾವ್ ಎಂಬ ತಮ್ಮಂದಿರೂ ಇದ್ದ ಹಾಗೆ ಕಾಣುತ್ತದೆ. ಭುಜಂಗರಾಯರ ಪತ್ನಿಯವರು ಸಾಂಗಲಿಯ ಧಾರವಾಡಕರ ನಾಯಕ ಮನೆತನದವರು. ಅವರ ಹೆಸರು ನರಸೂಬಾಯಿ.

ಕಲಿತ ಉತ್ಪನ್ನದಾರರಿಗೆ ಸಮೀಚೀನವಾದ ನೌಕರಿಗಳು ಸಿಗುವ ಕಾಲವದು. ಭುಜಂಗರಾಯರು ಮನೆತನದಿಂದ ದೊಡ್ಡ ಉತ್ಪನ್ನದಾರರು. ಒಳ್ಳೆಯ ಆಕರ್ಷಕ ವ್ಯಕ್ತಿತ್ವವುಳ್ಳವರು. ಮೇಲಾಗಿ ಸ್ವತಃ ಅವರ ತಂದೆಯವರು ಪುಣೆಯಂಥ ಊರಿನಲ್ಲಿ ಉನ್ನತ ಅಧಿಕಾರಿಗಳಾಗಿದ್ದವರು. ಎಂದು ತಿಳಿದು, ಭುಜಂಗರಾಯರಿಗೆ ನೌಕರಿಯ ಬಗೆಗೆ ಯಾವ ಪ್ರಯತ್ನವನ್ನು ಮಾಡುವ ಅವಶ್ಯಕತೆಯೂ ಇರಲಿಲ್ಲ; ಅಷ್ಟೇ ಅಲ್ಲ; ಈ ಹಿನ್ನೆಲೆಯ ಮೂಲಕವೇ ಅವರು ಯಾವ ಅಧಿಕಾರಿಯ ಕೂಡವೂ ತುಂಬಾ ಸ್ವತಂತ್ರವಾಗಿ ವರ್ತಿಸುತ್ತಿದ್ದರೆಂದು ಹೇಳಲಾಗಿರುತ್ತದೆ.

ಶಿಕ್ಷಣ: ಭುಜಂಗರಾಯರು ಕಲಿತ ಶಾಲೆ ಯಾವುದೆಂಬುದು ತಿಳಿದು ಬಂದಿಲ್ಲ. ಅವರು ಪುಣೆಯ ಡೆಕ್ಕನ್ ಕಾಲೇಜಿನಲ್ಲಿ † ೧೮೫೩-೫೪ ರಲ್ಲಿ ವಿದ್ಯಾರ್ಥಿಗಳಾಗಿದ್ದು "ಲಿಟಲ್ ಗೋ" ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದರೆಂದು ಕಂಡು ಬರುತ್ತದೆ. † ಅವರ ಮನೆಯ ವಾಚನಾಲಯದಲ್ಲಿ ಅಳಿದುಳಿದ ಪುಸ್ತಕಗಳಲ್ಲಿ Intellectual Powers by Abercrombie ಎಂಬ ಪುಸ್ತಕವನ್ನು ಪುಣೆ ಕಾಲೇಜದ "ವಾರ್ಷಿಕ ಪರೀಕ್ಷೆಯಲ್ಲಿ ಅವರು ಯಶಸ್ವಿಯಾಗಿ ಉತ್ತೀರ್ಣರಾದ ಬಗ್ಗೆ ೧೮೫೨ ರಲ್ಲಿ ಪಾರಿತೋಷಿಕವಾಗಿ ಕೊಟ್ಟ ಗ್ರಂಥವಿದೆ. ಭುಜಂಗರಾಯರು ಮೇಧಾವಿಗಳೂ ಸ್ವತಂತ್ರ ವಿಚಾರಪರರೂ ಇದ್ದ ಬಗೆಗೆ ಅನೇಕರು ದೃಷ್ಟಾಂತಗಳನ್ನು ಹೇಳುತ್ತಾರೆ.

ನೌಕರಿ ಜೀವನ: ತಮ್ಮ ಶಿಕ್ಷಣದ ನಂತರ ಭುಜಂಗರಾಯರು ೧೪-೭-೧೮೫೬ ರಿಂದ ಮೂರು ತಿಂಗಳುಗಳ ವರೆಗೆ ೨೫ ರೂಪಾಯಿ ಪಗಾರದ ಮೇಲೆ ಮುಂಬೈಯಲ್ಲಿ ಶಿರಸ್ತೇದಾರರಾಗಿಯೂ; ೨೫-೧೦-೧೮೫೬ರಿಂದ ೧೮ ತಿಂಗಳುಗಳ ವರೆಗೆ ೧೦೦ ರೂಪಾಯಿಯ ಮೇಲೆ

ಹಿಂದಿನ ಪ್ರಿನ್ಸಿಪಾಲರು

ಶ್ರೀ ವೆಂ. ರಂ. ಕಟ್ಟಿ

ಶ್ರೀ ರಾ. ಬಾ. ಕರಂದಿಕರ

ಶ್ರೀ ವಿ. ಬಾ. ಜೋಶಿ

ಶ್ರೀ ರಾ. ಶ್ರೀ. ಕುಲಕರ್ಣಿ

ಹಿಂದಿನ ಪ್ರಿನ್ಸಿಪಾಲರು

ಶ್ರೀ ರಾ. ಮ. ಮುಂಶಿ

ಶ್ರೀ ರಾ. ನಾ. ಪೆರೂರ

ಶ್ರೀ ಹ. ಗೋ. ದೇಶಪಾಂಡೆ

ಶ್ರೀ ಪೆಂ. ಸ. ಮುಗದಲ

ಸುಪರಿಂಟೆಂಡಿಂಗ್ ಎಂಜಿನಿಯರ್ ಎನ್. ಡಿ. ಅವರ ಹೆಡ್ ಕ್ಲಾರ್ಕರೆಂದೂ; ೨೪–೧೧–೧೮೫೮ ರಿಂದ ೨೦ ತಿಂಗಳುಗಳ ವರೆಗೆ ೬೦ ರೂಪಾಯಿ ಪಗಾರದ ಮೇಲೆ, ಧಾರವಾಡದ ಆ್ಯಂಗ್ಲೋ ವ್ಹರ್ನ್ಯಾಕ್ಯುಲರ ಶಾಲೆಯ ಹೆಡ್ ಮಾಸ್ತರರೆಂದೂ; ಅನಂತರ ೬ ತಿಂಗಳಗಳ ವರೆಗೆ ೧೦೦ ರೂಪಾಯಿ ಪಗಾರದ ಮೇಲೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಪೋಲೀಸ್ ಇನ್ಸಪೆಕ್ಟರರೆಂದೂ; ಅನಂತರ ಸುಮಾರು ವರ್ಷಕಾಲ ಹತ್ತಿಯ ವ್ಯಾಪಾರ ವ್ಯವಹಾರದಲ್ಲೂ ಕೆಲಸ ಮಾಡಿ, ಸನ್ ೧೮೬೬ರ ಮಾರ್ಚ ೨೩ರಂದು ಬೆಳಗಾವಿಯ ಟ್ರೇನಿಂಗ್ ಕಾಲೇಜಿನ ಪ್ರಥಮ ಅಸಿಸ್ಟಂಟ್ ಮಾಸ್ತರರೆಂದು ನೇಮಕವಾದರು. ಅವರು ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿ ನೇಮಕವಾದದ್ದು ೧-೭-೧೮೬೭ ರಂದು. ಆಗ ಅವರ ಪಗಾರ ರೂ. ೧೫೦.

ಟ್ರೇನಿಂಗ ಕಾಲೇಜ ಪ್ರಿನ್ಸಿಪಾಲರಾಗಿ: ಭುಜಂಗರಾಯರು ಪ್ರಿನ್ಸಿಪಾಲರಾಗಿದ್ದಾಗ ಟ್ರೇನಿಂಗ್ ಕಾಲೇಜು ಇನ್ನೂ ಬೆಳಗಾವಿಯಲ್ಲಿಯೇ ಇದ್ದಿತು. ಆಗ ಟ್ರೇನಿಂಗ ಕಾಲೇಜಿನಲ್ಲಿ ೫೬ ವಿದ್ಯಾರ್ಥಿಗಳಿದ್ದರು. ಒಂದನೆಯ ವರ್ಷದಲ್ಲಿ ೩ ವರ್ಗಗಳಿದ್ದವು. ಕಾಲೇಜು ಬೆಳಗಾವಿಯಲ್ಲಿದ್ದಾಗ ಹೆಚ್ಚಾಗಿ ಮರಾಠಿ ಮಾತನಾಡುವ ವಿದ್ಯಾರ್ಥಿಗಳೇ ತರಬೇತಿಗಾಗಿ ಬರುವಂತೆ ಕಾಣುತ್ತಿದ್ದಿತು. ಮಿ| ರಸೆಲ್, ದಿವಂಗತ ಭುಜಂಗರಾವ್ ಮತ್ತು ಡೆಪ್ಯುಟಿ ಚೆನ್ನಬಸಪ್ಪನವರ ಕನ್ನಡದ ಅಭಿಮಾನದ ಮೂಲಕವೇ ಈ ವಿದ್ಯಾರ್ಥಿಗಳೆಲ್ಲ ಮರಾಠಿ ಮಾತನಾಡುವವರಾಗಿದ್ದರೂ ತಮ್ಮ ಶಿಷ್ಯವೇತನವನ್ನು ಸ್ವೀಕರಿಸುವಾಗ ಕನ್ನಡದಲ್ಲಿಯೇ ಸಹಿ ಮಾಡುತ್ತಿದ್ದರು. ಕನ್ನಡದ ಪ್ರಗತಿಗೆ ವಿಷಮವಾದ ಈ ವಾತಾವರಣವನ್ನು ಗುರುತಿಸಿಯೇ ಭುಜಂಗರಾಯರು ಟ್ರೇನಿಂಗ್ ಕಾಲೇಜು ಬೆಳಗಾವಿಯಿಂದ ಧಾರವಾಡಕ್ಕೆ ವರ್ಗವಾಗುವಂತೆ ಸೂಚಿಸಿದರು. ಅವರು ಈ ಬಗೆಗೆ ಸನ್ ೧೮೬೮ರಲ್ಲಿ ಅರ್ಪಿಸಿದ ವರದಿಯಲ್ಲಿ ಹೇಳಿದ ಮಾತುಗಳು ಮನನೀಯವಾಗಿವೆ- “ **ಟ್ರೇನಿಂಗ್ ಕಾಲೇಜು ಕನ್ನಡ ವಾಙ್ಮಯದ ಮಾತೃಸ್ಥಾನವು....** ರಸೆಲ್ ಸಾಹೇಬರ ಅಭಿಪ್ರಾಯದಂತೆ ಬೆಳಗಾಂವಿ ಈ ವಿಷಯದಲ್ಲಿ ಯೋಗ್ಯ ಸ್ಥಳವಲ್ಲವೆಂದು ನಾನಾದರೂ ಅಭಿಪ್ರಾಯ ಪಡುತ್ತೇನೆ. ಟ್ರೇನಿಂಗ್ ಕಾಲೇಜಿನ ಅವಸ್ಥೆ ನೀರ ಹೊರಗಿನ ಮೀನದಂತೆ ಆಗಿದೆ. ಬೆಳಗಾಂವಿ ಮಹಾರಾಷ್ಟ್ರ ದೇಶಕ್ಕೆ ಸಮೀಪವಾಗಿದ್ದ ಕನ್ನಡ ಸೀಮೆಯಲ್ಲಿರುವುದರಿಂದ ಈ ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಹೆಚ್ಚಾಗಿ ಮರಾಠಿಯನ್ನಾಡುವವರೇ ಇರುತ್ತಾರೆ. ಆದುದರಿಂದ ಈ ಸಂಸ್ಥೆಯನ್ನು ಧಾರವಾಡಕ್ಕೆ ಒಯ್ದರೆ ಅದಕ್ಕೆ ಹೆಚ್ಚಿನ ಸೌಕರ್ಯಗಳುಂಟಾಗುವವಲ್ಲದೆ ಅದರ ಕಾರ್ಯಕ್ಷೇತ್ರವೂ ಹೆಚ್ಚುವುದು. ಅಂದು ಶ್ರೀ ಹುಯಿಲಗೋಳರು ಕಂಡ ಕನಸು ನನಸಾದುದನ್ನು ಅನೇಕ ಪಂಡಿತರ ಚರಿತ್ರೆಯಿಂದ ನಾವು ಕಾಣುತ್ತೇವೆ.

ಭುಜಂಗರಾಯರೆಂದರೆ ದಿವಂಗತ ರಸೆಲ್‌ರವರಿಗೆ ತುಂಬಾ ಅಭಿಮಾನ. ಬಹುಶಃ ಅವರ ಪ್ರೇರಣೆಯ ಮೂಲಕವೇ ಅವರು ಟ್ರೇನಿಂಗ ಕಾಲೇಜದ ನೌಕರಿಯಲ್ಲಿ ೧೮ ವರ್ಷಗಳ ಸುದೀರ್ಘಕಾಲ ನಿಂತಂತೆ ಕಾಣುತ್ತದೆ. ಇವರ ಮನೆಯ ಸಣ್ಣ ಮಕ್ಕಳು ಕೂಡ ರಸೆಲ್‌ಸಾಹೇಬರ ಮನೆಯಲ್ಲಿಯೇ ದಿವಸಾನುದಿವಸ ಇರುತ್ತಿದ್ದರಂತೆ.

ವಿದ್ಯಾರ್ಥಿ ಪ್ರೇಮ ಪರೋಪಕಾರ : ಭುಜಂಗರಾಯರಿಗೆ ವಿದ್ಯಾರ್ಥಿಗಳೆಂದರೆ ತುಂಬಾ ಪ್ರೀತಿ. ಅದರಲ್ಲಿಯೂ ಮೇಧಾವಿಗಳಾದ ಬಡ ವಿದ್ಯಾರ್ಥಿಗಳನ್ನು ಕಂಡರಂತೂ ಅವರಿಗೆ ಹಿಡಿಸಲಾರದ ಆನಂದ. ದಿವಂಗತ ದೊಡ್ಡರಾಯರ ಬಹುಮುಖ ಕರ್ತೃತ್ವ ಶಕ್ತಿಯು ಕುದುರುವುದಕ್ಕೆ ಕಾರಣರಾದವರು ಭುಜಂಗರಾಯರೇ. ಸನ್ ೧೮೭೯ರಲ್ಲಿ ದೊಡ್ಡರಾಯರು ವಿದ್ಯಾರ್ಥಿಯಾಗಿ ಬೆಳಗಾಂವಿಯ ಟ್ರೇನಿಂಗ ಕಾಲೇಜನ್ನು ಸೇರಿದಾಗ ಅವರನ್ನು ಬರಮಾಡಿಕೊಂಡು ಪುರಸ್ಕರಿಸಿದವರು ಭುಜಂಗರಾಯರೇ; ಅದೇ ವರುಷ ದೊಡ್ಡರಾಯರು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತುಕೊಳ್ಳಬೇಕೆಂದು ನಿಶ್ಚಯಿಸಿದರು. ಆಗ ಮ್ಯಾಟ್ರಿಕ್ ಪರೀಕ್ಷೆ ನಡೆಯುತ್ತಿದ್ದುದು ಮುಂಬಯಿಯಲ್ಲಿ ಮಾತ್ರ. ಅಲ್ಲಿಯವರೆಗೆ ಹೋಗುವದೆಂತು ? ಈ ವಿದ್ಯಾರ್ಥಿ ಮುಂಬಯಿಗೆ ಹೋಗುವಂತೆ ಸಹಾಯ ಮಾಡಿದವರು ಭುಜಂಗರಾಯರೇ. ದುರ್ದೈವದಿಂದ ದೊಡ್ಡರಾಯರಿಗೆ ಮ್ಯಾಟ್ರಿಕ್ ಪರೀಕ್ಷೆಯಲ್ಲಿ ಪ್ರಥಮ ವರುಷ ಯಶ ದೊರಕಲಿಲ್ಲ. ಆಗ, ಪುನಃ ಅವರೂ ಅವರ ತಾಯಿಯವರೂ ಪುಣೆಯಲ್ಲಿಯೇ ಹುಯಿಲಗೋಳ ಮಾಧವರಾಯರ ಮನೆಯಲ್ಲಿದ್ದುಕೊಂಡು ವ್ಯಾಸಂಗವು ಪೂರ್ಣವಾಗುವಂತೆ ಮಾಡಿದರು. ಅಂತಲೇ ದೊಡ್ಡರಾಯರ ತಾಯಿಯವರಾದ ಸುಬ್ಬಮ್ಮನವರು **“ತಾವು ಉಣ್ಣುವ ಅನ್ನ ರಸೆಲ್ ಸಾಹೇಬರದು; ಹಚ್ಚುವ ದೀಪ ಭುಜಂಗರಾಯರದು”** ಎಂದು ಕೃತಜ್ಞತಾಪೂರ್ವಕವಾಗಿ ಹೇಳುತ್ತಿದ್ದರಂತೆ. ದಿವಂಗತ ದೊಡ್ಡರಾಯರ ನೇಮಕದ ಬಗೆಗೆ ಶಿಫಾರಸು ಮಾಡಿದವರೂ ಭುಜಂಗರಾಯರೇ.

ಭುಜಂಗರಾಯರು ದಕ್ಷ ಆಡಳಿತಗಾರರು; ಶಿಸ್ತಿನ ಪರಿಪಾಲಕರು, ಕಲಿಸುವುದರಲ್ಲಿ ತುಂಬಾ ನಿಪುಣರು. “ಅವರ ಧ್ವನಿ ಕರ್ಕಶ; ಕಳ್ಳಿಮೀಸೆಯನ್ನು ಬಿಟ್ಟದ್ದರಿಂದ ನೋಡಲಿಕ್ಕೆ ಮುಖವು ಉಗ್ರವಾಗಿ ತೋರುತ್ತಿತ್ತು” ಒಂದು ಸಲ ಚ್ಯಾಟ್‌ಫೀಲ್ಡರು ಶಿಕ್ಷಣ ಖಾತೆಯ ವರಿಷ್ಠ ರಾಗಿದ್ದಾಗ, ಯಾರೋ ಭುಜಂಗರಾಯರು ವರ್ಗಗಳನ್ನೇ ತೆಗೆದುಕೊಳ್ಳುವುದಿಲ್ಲವೆಂದು ದೂರಿದರಂತೆ. ಆದರೆ, ಸ್ವತಃ ಭುಜಂಗರಾಯರ ಕಲಿಸುವ ಕಲೆಯನ್ನು ಕಂಡ ಚ್ಯಾಟ್‌ಫೀಲ್ಡರು ಅವರ ಪಾಂಡಿತ್ಯವನ್ನು ತುಂಬಾ ಮೆಚ್ಚಿದರಂತೆ.

ರಾಯರ ಗ್ರಂಥಗಳು: ಭುಜಂಗರಾಯರು ಬರೆದ ಪುಸ್ತಕಗಳನ್ನು ನಮಗೆ ನೋಡಲು ಸಿಗಲಿಲ್ಲ. ಅವರು ಬರೆದ ಪ್ರಾಕೃತಿಕ ಭೂಗೋಲ ಮೊದಲಾದ ಪುಸ್ತಕಗಳ ಉಲ್ಲೇಖವನ್ನು ದಿವಂಗತ ಹನುಮಂತರಾವ್ ದೇಶಪಾಂಡೆಯವರು ಮಾಡಿದ್ದಾರೆ. ‘ಉದಯವಾಗಲಿ’ ಹುಯಿಲಗೋಳ ನಾರಾಯಣರಾಯರು ತಾವು ಧಾರವಾಡದಲ್ಲಿ ಶಾಲೆಯಲ್ಲಿದ್ದಾಗ ಭುಜಂಗರಾಯರಿಂದ ರಚಿತವಾದ ಪ್ರಾಕೃತಿಕ ಭೂಗೋಲವನ್ನು ಓದಿದ್ದಾಗಿ ನಮಗೆ ಬರೆದು ತಿಳಿಸುತ್ತಾರೆ. ಅದು ಲಿಥೋ ಅಚ್ಚುಕೂಟದಲ್ಲಿ ಮುದ್ರಿತವಾಗಿದ್ದಿತು. ಅವರಿಂದ ರಚಿತವಾದ ಇತರ ಪಠ್ಯಗ್ರಂಥಗಳ ಬಗ್ಗೆ ನಮಗೆ ವಿವರಗಳು ದೊರಕಲಿಲ್ಲ.

ಮನೆತನದ ಸಂಬಂಧಗಳು: ಭುಜಂಗರಾಯರ ಮನೆತನದ ಸಂಬಂಧಗಳು ಇತ್ತೀಚಿನ ವರೆಗೂ ಕರ್ನಾಟಕ ಮಹಾರಾಷ್ಟ್ರ ಮತ್ತು ಮೈಸೂರು ಮೂರೂ ಪ್ರಾಂತಗಳಲ್ಲಿವೆ. ಅವರ ಮೊಮ್ಮಕ್ಕಳಲ್ಲಿ ಒಬ್ಬ ಹೆಣ್ಣು ಮಗಳನ್ನು ಮೈಸೂರಿನ ಡೆಪ್ಯುಟಿ ಕಮಿಶನರರಾದ ಶ್ರೀ ಹೆಬ್ಬಿಕರ್ ಅವರಿಗೂ, (ಇವರ ಮಕ್ಕಳೇ ಈಗ ಬೆಳಗಾವಿಯಲ್ಲಿ ಡಿ. ಆಯ್. ಜಿ, ಆಗಿರುವರು.) ಮತ್ತೊಬ್ಬ ಹೆಣ್ಣು ಮಗಳನ್ನು ಕೊಲ್ಹಾಪುರ ಸಂಸ್ಥಾನದ ಗಗನಬಾವಡಾದ ಸಂಸ್ಥಾನಿಕರಿಗೂ ಮದುವೆ ಮಾಡಿ ಕೊಡಲಾಗಿತ್ತು. ಈಗ ಸದ್ಯ ಮುಂಬಯಿ ಸರಕಾರದ ಹಣಕಾಸಿನ ವಿಭಾಗದ ಸೀನಿಯರ್ ಅಧಿಕಾರಿಗಳಾದ ಶ್ರೀ ಎನ್. ಟಿ. ಮೋನೆ I. C. S. ಅವರೂ ಮತ್ತು ಸುಪ್ರಸಿದ್ಧ ದೇಶಭಕ್ತರಾದ ಶ್ರೀ ಆರ್. ಕೆ. ಪಾಟೀಲ I. C. S. (Resigned) ಅವರೂ ಶ್ರೀ ಹೆಬ್ಬೀಕರರ ಇಬ್ಬರು ಅಳಿಯಂದಿರು. ಹೀಗಾಗಿ ಶ್ರೀ ಭುಜಂಗರಾಯರ ಮನೆತನವು ಮೊದಲಿನಿಂದಲೂ ಪ್ರಗತಿಪರವಾದುದು.

ಮುಗಿಸುವ ಮುನ್ನ: ಕನ್ನಡದ ಅಭಿಮಾನಿಗಳಾಗಿ, ದಕ್ಷ ಆಡಳಿತಗಾರರೆಂದೆನಿಸಿಕೊಂಡ ಶ್ರೀ ಭುಜಂಗರಾಯರು ತಮ್ಮ ವಯಸ್ಸಿನ ೫೪ ನೆಯ ವರುಷದಲ್ಲಿಯೇ ನಿಧನರಾದುದು ಶಿಕ್ಷಣ ಕ್ಷೇತ್ರಕ್ಕಾದ ಒಂದು ಹಾನಿ. ಅವರಿನ್ನೂ ಟ್ರೇನಿಂಗ್ ಕಾಲೇಜಿನ ಪ್ರಿನ್ಸಿಪಾಲರಾಗಿರುವಾಗಲೇ ಮಧುಮೇಹ ರೋಗದಿಂದ ಸನ್ ೧೮೮೫ರ ಮೇ ತಿಂಗಳಲ್ಲಿ ನಿಧನ ಹೊಂದಿದರು. ಅವರ ನಂತರ ಆಗ ವ್ಹಾಯಿಸ್ ಪ್ರಿನ್ಸಿಪಾಲರಾದ ಅಣ್ಣಾರಾವ್ ಸ್ವಾದಿ ಅವರು ಪ್ರಿನ್ಸಿಪಾಲ್ ಅಧಿಕಾರವನ್ನು ಕೆಲ ಕಾಲ ವಹಿಸಿದರು. ಇಂತು ಕನ್ನಡದ ಪುರೋಗಾಮಿಗಳಾಗಿ ಕನ್ನಡದ ಹೆಸರುಳಿಯುವಂತೆ ಸಾಧನೆ ಮಾಡಿ ಕೃತಾರ್ಥರಾದ ಹಿರಿಯರೊಬ್ಬರ ಜೀವವು ಕಾಲನ ಅನಂತಗರ್ಭದಲ್ಲಿ ಲೀನವಾಯಿತು !

ಆಧಾರ: (i) ದಿ. ಬ. ರೊದ್ದ ಶ್ರೀನಿವಾಸರಾಯರ ಚರಿತ್ರೆ, (ii) ಶ್ರೀ ಎಸ್. ಕೆ. ಹುಯಿಲಗೋಳ ವಕೀಲ ಗದಗ (iii) ಶ್ರೀ ಡಿ. ಆರ್. ಹುಯಿಲಗೋಳ ಟೀಚರ್ ಅಗ್ರಿ. ಸ್ಕೂಲ, ವಿಜಾಪೂರ.

ದಿ. ಬ. ರೊದ್ದ ಶ್ರೀನಿವಾಸರಾಯರ ಚರಿತ್ರೆ ಪುಟ ೨೨, ೨೫

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ
ಶೇಲಾರ ಕೃತ
ಪ್ರಾಥಮಿಕ ಭೂಮಿತಿ
[ಕ್ಷೇತ್ರಫಲ ಘನಫಲ ಸಹಿತ]
೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.
ಬೆಲೆ: ೧ರೂ. ೮ಆಣೆ ಮಾತ್ರ
ದೊರೆಯುವ ಸ್ಥಳ:—
ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಆಚಾರ್ಯ ವೆಂಕಟ ರಂಗೋ ಕಟ್ಟಿ

ಲೇಖಕರು : **ಶ್ರೀ ಗುರುನಾಥ ಜೋಶಿ,** ಧಾರವಾಡ.

ವಿಜಯನಗರ ಸಾಮ್ರಾಜ್ಯದ ಅಳಿಗಾಲದಿಂದ ಮೊದಲುಗೊಂಡು ಹತ್ತೊಂಬತ್ತನೆಯ ಶತಮಾನದ ವರೆಗೆ ಕನ್ನಡ ನಾಡು ಘೋರ ಅಂಧಕಾರದಲ್ಲಿ ಕಾಣದಂತಾಗಿದ್ದಿತು. ಅದರ ಅಸ್ತಿತ್ವ ಹಾಗು ನುಡಿ ಒಮ್ಮೆಲೆ ಮಾಯವಾದಂತಾಗಿದ್ದುವು. ಕನ್ನಡ ಜನತೆಯಲ್ಲಿ ಘೋರ ನಿರಾಸೆಯು ವ್ಯಾಪಿಸಿದ್ದಿತು. ಅದರ ಒಡಲಲ್ಲಿ ತಳಮಳವು ಕುದಿಯುತ್ತಿದ್ದಿತು, ಅದರ ಮೈಯಲ್ಲಿ ಜಡತೆಯು ಬಂದಿದ್ದಿತು. ಆದರೆ ಇವು ಕನ್ನಡಿಗರನ್ನು ಹೇಡಿಗಳನ್ನಾಗಿ ಮಾಡಲಿಲ್ಲ. ಅವರಲ್ಲಿ ಅಡಗಿದ್ದ ಅಸಂತೋಷವು ಏಳ್ಗೆಯ ಮೆಟ್ಟಿಲಾಗಿ ಪರಿಣಮಿಸಿತು. ಕನ್ನಡ ಜನತೆಯ ಜಡತೆ ಹಾಗು ಅಸಂತೋಷವನ್ನು ದೂರಗೊಳಿಸಲು ಕನ್ನಡವೇ ತಾರಕ ಎಂದು ಆಗ ಕೆಲವರಿಗೆ ಎನಿಸಿತು. ಆದುದರಿಂದ ಅವರು ಮೊದಲು ಕನ್ನಡದ ಉದ್ಧಾರಕ್ಕಾಗಿ ಟೊಂಕ ಕಟ್ಟಿದರು. ಅವರೆಲ್ಲರ ಪ್ರಯತ್ನದಿಂದ ಕನ್ನಡ ಭಾಷೆಯ ಅಭ್ಯಾಸಕ್ಕೆ ಮೊದಲಾಯಿತು. ಅದರಿಂದಾಗಿ ಕನ್ನಡ ಜನತೆಯಲ್ಲಿ ಸಾವಕಾಶವಾಗಿ ಚೈತನ್ಯವು ಬರತೊಡಗಿತು. ಈ ಪ್ರಕಾರವಾಗಿ ಕನ್ನಡದ ಮುಖಾಂತರವಾಗಿ ಕನ್ನಡ ನಾಡಿನಲ್ಲಿ ನವ ಚೈತನ್ಯವನ್ನು ತುಂಬಿದ ಮಹನೀಯರಲ್ಲಿ ವೆಂಕಟ ರಂಗೋ ಕಟ್ಟಿಯವರೂ ಒಬ್ಬರು.

ಕನ್ನಡದ ಜನತೆಯಲ್ಲಿ ತನ್ನ ಅಮರ ಕೃತಿಯಾದ 'ಗದಾಯುದ್ಧ' ದಿಂದ ವೀರಶ್ರೀಯನ್ನು ತುಂಬಿದ ಕನ್ನಡದ ವೀರ ಮಹಾಕವಿ ರನ್ನನ ಊರಾದ ಮುದುವೊಳವೇ (ಮುಧೋಳವೇ) ವೆಂಕಟ ರಂಗೋ ಕಟ್ಟಿಯವರ ಹುಟ್ಟಿದೂರು. ಅಲ್ಲಿ ಅವರು ಒಂದು ಶುದ್ಧ ವೈದಿಕ ವೈಷ್ಣವ ಸಂಪ್ರದಾಯದ ಮನೆತನದಲ್ಲಿ ೧೮೩೩ರಲ್ಲಿ ಜನಿಸಿದರು. ತಮ್ಮ ಸೋದರ–ಮಾವಂದಿರ ಊರಾದ ಬಟಕುರಕಿಯಲ್ಲಿ ವೈದಿಕ ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಇವರು ಪುಣೆಗೆ ಹೋದರು. ಹೆಚ್ಚಿನ ವಿದ್ಯಾರ್ಜನೆಗಾಗಿ ಅಲ್ಲಿ ವಿಷ್ಣುಶಾಸ್ತ್ರಿ ಚಿಪಳೂಣಕರರಂಥ ಮಹಾನುಭಾವರ ಸಂಪರ್ಕದಲ್ಲಿ ಇವರು ಬಂದುದರಿಂದ ವಿಚಾರ ಕ್ರಾಂತಿಯಾಯಿತು, ಹಾಗು ಇವರ ಜೀವನಕ್ಕೆ ಹೊಸ ರೂಪ ಬಂದಿತು, ಹೊಸ ದಾರಿ ದೊರಕಿತು. ನಾಲ್ಕೈದು ವರುಷ ವಿದ್ಯಾಭ್ಯಾಸ ಮಾಡಿದ ನಂತರ ಅಲ್ಲಿಯ ಸರಕಾರಿ ಟ್ರೇನಿಂಗ ಕಾಲೇಜದಲ್ಲಿಯೆ ನೌಕರಿಯೂ ದೊರೆಕಿತು. ಅಲ್ಲಿಂದ ಇವರು ಹೊನ್ನಾವರಕ್ಕೆ ವರ್ಗವಾಗಿ ಬಂದರು. ಅಲ್ಲಿ ಇವರ ಪರಿಣತ ಮನಸ್ಸಿಗೆ ಇನ್ನೊಂದು ಅತ್ಯಂತ ಮಹತ್ವದ ವಿಷಯವು ಮನದಟ್ಟಾಯಿತು–ಯಾವುದೇ ಜನಾಂಗದ ಅಥವಾ ರಾಷ್ಟ್ರದ ಉದ್ಧಾರಕ್ಕೆ ಅದರ ಭಾಷೆಯೇ ಪ್ರಬಲವಾದ ಸಾಧನ ಎಂಬುದು. ಒಡನೆಯೆ ಮಹಾರಾಷ್ಟ್ರವನ್ನು ಕಟ್ಟ ತೊಡಗಿದವರ ಪ್ರಯಾಸದ ಚಿತ್ರ ಒಂದು ಕಡೆ, ತಮ್ಮ ತಾಯ್ನಾಡಿನ ಮಹಾಕವಿ ರನ್ನನ ಚಿತ್ರ ಇನ್ನೊಂದು ಕಡೆ ನಿಂತು, ಕನ್ನಡ ನಾಡಿನ ಉದ್ಧಾರಕ್ಕೆ ಕನ್ನಡವೇ ಪ್ರಬಲವಾದ ಸಾಧನ ಎಂದು ಎಚ್ಚರಿಸಿದಂತಾಯಿತು. ಕತ್ತಲು ಕವಿದ ಕಣ್ಣುಗಳು ತೆರೆದುವು, ಅಂತರಂಗದಲ್ಲಿ ಕನ್ನಡ ತಾಯ ವಿದ್ರೂಪ ಗೋಚರಿಸಿತು, ತಮ್ಮ ಮುಂದಿನ ಕರ್ತವ್ಯವೇನು ಎಂಬುದು ಜಗ್ಗನೆ ಹೊಳೆಯಿತು, ಕನ್ನಡ ನಾಡಿನ ಗತ ವೈಭವ ಎದುರು ನಿಂತಿತು. ಪುನಃ ಅದರ ವೈಭವವನ್ನು ಮರಳಿ ತರುವುದಕ್ಕಾಗಿ ಹೆಣಗು ಎಂದು ಹೇಳಿದಂತಾಯಿತು. ಈ ಅನುಭವವು ಆಗುವುದೊಂದೇ ತಡ, ಇವರು ಕನ್ನಡವನ್ನು ಕಲಿಯತೊಡಗಿದರು. ಅತ್ಯಂತ ಪರಿಶ್ರಮದಿಂದ ಕನ್ನಡದಲ್ಲಿ ಅಧಿಕಾರ ವಾಣಿಯನ್ನು ಪಡೆದರು. ಕೂಡಲೇ ಇವರಿಗೆ ತಮ್ಮ ಕನಸನ್ನು ಪೂರ್ಣಗೊಳಿಸಲು ಯೋಗ್ಯವಾದ ಕ್ಷೇತ್ರವೂ ಸಿಕ್ಕಿತು. ಬೆಳಗಾಂವಿಯ ನಾರ್ಮಲ್ ಸ್ಕೂಲಿಗೆ ವರ್ಗವಾಗಿ ಬಂದರು. ನಂತರ ಕನ್ನಡ ಟ್ರಾನ್ಸಲೇಟರ (ಭಾಷಾಂತರಕಾರ) ರಾಗಿ ಕೆಲವು ವರ್ಷ ಕಾರ್ಯ ಮಾಡಿದ ನಂತರ ಬೆಳಗಾಂವಿಯಿಂದ ಧಾರವಾಡಕ್ಕೆ ಸ್ಥಳಾಂತರ ಹೊಂದಿ ಬಂದ ಕನ್ನಡ ಟ್ರೇನಿಂಗ ಕಾಲೇಜದ ವ್ಹಾಯಿಸ ಪ್ರಿನ್ಸಿಪಾಲರಾದರು. ಬಳಿಕ ಅದರ ಪ್ರಿನ್ಸಿಪಾಲರೂ ಆದರು. ಇಪ್ಪತ್ತು ರೂಪಾಯಿಯಿಂದ ನೌಕರಿಯನ್ನು ಪ್ರಾರಂಭಿಸಿದ ಇವರಿಗೆ ಕರ್ತವ್ಯದಕ್ಷತೆ, ಪ್ರಾಮಾಣಿಕತನ, ಕನ್ನಡನಾಡನ್ನು ಕಟ್ಟಬೇಕೆಂಬ ಹಂಬಲ ಹಾಗು ಕನ್ನಡದ ಸೇವೆಯ ಪ್ರತಿಫಲವಾಗಿ ಆಗ ೩೦೦ ರೂಪಾಯಿ ಸಂಬಳದ ಸ್ಥಳವಾಗಿದ್ದ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರ ಸ್ಥಳವೂ ದೊರೆಯಿತು

'ಸಂಘೇ ಶಕ್ತಿಃ ಕಲೌಯುಗೇ' ಅಂದರೆ ಕಲಿಯುಗದಲ್ಲಿ ಸಂಘದಲ್ಲಿ ಶಕ್ತಿ ಇದೆ ಎಂಬುದೊಂದು ನಾಣ್ಣುಡಿಯು

ಸಂಸ್ಕೃತದಲ್ಲಿ ಇದೆ. ಕಲಿಯುಗದಲ್ಲಿ ನಾಡನ್ನು ಕಟ್ಟುವುದಕ್ಕೆ, ರಾಷ್ಟ್ರವನ್ನು ನಿರ್ಮಿಸುವುದಕ್ಕೆ ಒಂದು ಸಂಘವಾಗಲಿ, ಒಂದು ಸಂಸ್ಥೆಯಾಗಲಿ ಬೇಕು. ಇದನ್ನು ಮನಗಂಡ ವೆಂಕಟ ರಂಗೋ ಕಟ್ಟಿಯವರು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯನ್ನು ಮಾಡುವ ಕಾರ್ಯದಲ್ಲಿ ಅಂದಿನ ನಾಯಕರಿಗೆ ನೆರವಾದರು; ಸಂಘದ ಸದಸ್ಯರೂ, ಉಪಾಧ್ಯಕ್ಷರೂ, ಕೆಲವು ಕಾಲ ಅಧ್ಯಕ್ಷರೂ ಆಗಿದ್ದರು. ಹೀಗೆ ವೆಂಕಟ ರಂಗೋ ಕಟ್ಟಿಯವರು ಕನ್ನಡ ನುಡಿಯ ಮುಖಾಂತರ ಕರ್ನಾಟಕದ ನಿರ್ಮಾಣದ ಭವ್ಯ ಕನಸನ್ನು ಮನದಲ್ಲಿ ಮೂಡಿಸಿಕೊಂಡು ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಸಂಸ್ಥೆ ಹಾಗು ಕರ್ನಾಟಕ ವಿದ್ಯಾವರ್ಧಕ ಸಂಘ ಇವೆರಡರಿಂದಲೂ ತಮ್ಮ ಕಾರ್ಯವನ್ನು ಮುಂದುವರಿಸಿದರು. ಕನ್ನಡವನ್ನು ಉಳಿಸಿ ಅದನ್ನು ಪೋಷಿಸತೊಡಗಿದರು. ಅವರು ಈ ದಿಸೆಯಲ್ಲಿ ಮಾಡಿದ ಬಹುಮುಖ ಕಾರ್ಯ ಅದ್ಭುತವಾದುದಾಗಿದೆ, ಅನುಕರಣೀಯವಾಗಿದೆ.

ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ ಕನ್ನಡ ಭಾಷಾಂತರಕಾರರೂ ಆಗಿದ್ದಾಗ 'ಕನ್ನಡ ಶಾಲಾಪತ್ರಕ'ಕ್ಕೆ ಭಾಷೆಯ ದೃಷ್ಟಿಯಿಂದ ಮಹತ್ವವನ್ನು ಇವರು ಕೊಟ್ಟು ಅದರ ಉಪಯುಕ್ತತೆಯನ್ನು ಹೆಚ್ಚಿಸಿದರು. ವಿದ್ಯಾಖಾತೆಯ ಅಪ್ಪಣೆಯ ಮೇರೆಗೆ ಕನ್ನಡ ಪಠ್ಯಪುಸ್ತಕಗಳನ್ನು ರಚಿಸಿದರು. ಕನ್ನಡ ಭಾಷೆಯ ಕಡೆಗಷ್ಟೇ ಗಮನವೀಯದೆ ಜ್ಞಾನ ಪ್ರಸಾರದ ಕಡೆಗೂ ಕನ್ನಡ ನಾಡಿನ ಹಿರಿಮೆಯ ಕಡೆಗೂ ಇವರು ಲಕ್ಷ್ಯವಿತ್ತರು. ಜ್ಯೋತಿಷಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರ, ವನಸ್ಪತಿಶಾಸ್ತ್ರ, ಖನಿಜಶಾಸ್ತ್ರ, ಲಘುವ್ಯಾಕರಣ ಮುಂತಾದ ವಿಷಯಗಳನ್ನು ಕುರಿತು ಪ್ರಬಂಧ ಹಾಗು ಗ್ರಂಥ ಬರೆದರಲ್ಲದೆ ಕನ್ನಡ ಲೇಖಕರಿಗೆ ಒಂದು ಮೇಲ್ಪಂಕ್ತಿಯನ್ನು ಹಾಕಿ ಕನ್ನಡದ ಆಚಾರ್ಯ ಪುರುಷರಲ್ಲೊಬ್ಬರಾದರು. ಸವಾಯಿ ಮಾಧವರಾಯ (ನಾಟಕ), ನರತನು (ಶರೀರಶಾಸ್ತ್ರ), ವಿಧವಾವಪನ ಅನಾಚಾರ (ಶಾಸ್ತ್ರಾಧಾರಗಳಿಂದ ಬರೆದ ಪ್ರಬಂಧ), ಕರ್ನಾಟಕ ಗೆಝೆಟಿಯರ್ (ಇತಿಹಾಸ), ಉಪನ್ಯಾಸ ವಿದ್ಯೆ (ಪ್ರಬಂಧ), ರಸೆಲ್‌ಸಾಹೇಬರ ಆಡಳಿತ (ವಿದ್ಯಾಖಾತೆಯ ಐತಿಹಾಸಿಕ ಗ್ರಂಥ ಇಂಗ್ಲಿಷದಲ್ಲಿ), ಆರು ಬೆರಳಿನ ಕುರುಹು (ಸಾಮಾಜಿಕ ಕಾದಂಬರಿ), ಬರ್ಥೋಲ್ಡನ ಚರಿತ್ರೆ (ಮರಾಠಿಯಿಂದ ಕನ್ನಡದಲ್ಲಿ ಅನುವಾದ) ಮುಂತಾದ ಗ್ರಂಥಗಳನ್ನು ಬರೆದ ಈ ಪುಣ್ಯಪುರುಷರು 'ಕರ್ನಾಟಕ ಪತ್ರ'ವೆಂಬ ವಾರಪತ್ರಿಕೆಯನ್ನು ಹೊರಡಿಸಿ ಕರ್ನಾಟಕದ ಸರ್ವಾಂಗೀಣ ಉನ್ನತಿಯನ್ನು ಸಾಧಿಸಲು ಹೆಣಗಿದರು. ಇವೆಲ್ಲ ಲೇಖನಗಳು ಹಾಗು ಕೃತಿಗಳು ಅಚ್ಚು ಕಂಡಾಗಲೇ ಅವುಗಳ ಪ್ರಸಾರ ಇತೋಪ್ಯಧಿಕವಾಗುವುದು ನಿರ್ವಿವಾದವಾದುದು. ಅಂತೆಯೆ ಇವರು ಕನ್ನಡ ಅಚ್ಚಿನ ಮೊಳೆಗಳನ್ನು ೧೮೭೦ರಲ್ಲಿ ಬೆಳಗಾಂವಿಯಲ್ಲಿ ಎರಕಹೊಯ್ಸಿ ಕನ್ನಡ ಅಚ್ಚುಕೂಟವನ್ನು ಪ್ರಾರಂಭಿಸಿ ಕನ್ನಡದ ಪ್ರಸಾರಕ್ಕೆ ಇಂಬು ಮಾಡಿಕೊಟ್ಟರು.

ಈ ರೀತಿಯಾಗಿ ಆಚಾರ್ಯ ಕಟ್ಟಿಯವರು ಕನ್ನಡ ಭಾಷಾ ಸೇವೆಯನ್ನು ಮಾಡಿದರಲ್ಲದೆ ಕನ್ನಡ ನಾಡಿನ ಸಮಾಜ ಹಾಗೂ ಆರ್ಥಿಕ ಕ್ಷೇತ್ರದಲ್ಲಿಯೂ ತಮ್ಮ ಸೇವೆಯನ್ನು ಸಲ್ಲಿಸಿದರು. ಈ ಕಾರ್ಯಗಳಿಗೆ 'ಅವರ ವಿಧವಾ ಅನಾಚಾರ' ಎಂಬ ಪ್ರಬಂಧ, ಆಯುರ್ವೇದವನ್ನು ಅಭ್ಯಸಿಸಿ ಅದರಂತೆ ಜನತೆಗೆ ಔಷಧವನ್ನು ಪುಕ್ಕಟೆಯಾಗಿ ಕೊಡುವಿಕೆ, ಸಿಗೇಕಾಯಿಯ ಒಡಿಗಳನ್ನು ಸಿದ್ಧಪಡಿಸುವಿಕೆ, ಅಲ್ಯೂಮಿನಮ್ ಧಾತುವಿನಿಂದ ಕತ್ತರಿ-ಕತ್ತಿಗಳ ನಿರ್ಮಾಣ, ಮಣ್ಣಿನ ಹೂಜೆ ಹಾಗು ಪಾತ್ರೆಗಳ ನಿರ್ಮಾಣ ಮಂಗಳೂರಿನ ಮನೆಯ ಹಂಚುಗಳ ಮಾದರಿಯ ಹಂಚುಗಳ ತಯಾರಿಕೆ ಮುಂತಾದವುಗಳು ನಿದರ್ಶನಗಳಾಗಿವೆ.

ಕನ್ನಡ, ಮರಾಠಿ ಹಾಗು ಇಂಗ್ಲಿಷ ಈ ತ್ರಿಭಾಷೆಗಳ ಪಂಡಿತರಾಗಿ, ವಿದ್ಯಾನುರಾಗಿಗಳಾಗಿ, ಗ್ರಂಥಕರ್ತರಾಗಿ, ಪತ್ರಿಕಾ ಸಂಪಾದಕರಾಗಿ, ಸಮಾಜ ಸುಧಾರಕರಾಗಿ, ಉದ್ಯೋಗ-ವ್ಯವಸಾಯಗಳ ಪ್ರೋತ್ಸಾಹಕರಾಗಿ ಕನ್ನಡ ನಾಡಿನ ಗತವೈಭವವನ್ನು ಮರಳಿ ತಂದು ಕೊಡುವುದಕ್ಕಾಗಿ ಸತತವಾಗಿ ಹೋರಾಡಿ ಕನ್ನಡ ನಾಡನ್ನೂ ನುಡಿಯನ್ನೂ ಬೆಳಕಿಗೆ ತರುವಲ್ಲಿ ಯಶಸ್ವಿಗಳಾಗಿ ತುಂಬು ಜೀವನವನ್ನು ಕಳೆದು ೧೯೦೯ ಮೇ ೧೫ನೆಯ ತಾರೀಖಿನ ದಿನ ಕನ್ನಡ ನಾಡಿನ ಆತ್ಮದಲ್ಲಿ ತಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೊಟ್ಟು ತಮ್ಮ ಕಾರ್ಯಗಳಿಂದ ಇನ್ನೂ ಜೀವಿಸಿರುವ ಆಚಾರ್ಯ ವೆಂಕಟ ರಂಗೋ ಕಟ್ಟಿ ಅವರನ್ನು ತನ್ನ ಪ್ರಿನ್ಸಿಪಾಲರನ್ನಾಗಿ ಪಡೆದ ಧಾರವಾಡದ ಕನ್ನಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜೂ ಧನ್ಯ ಮತ್ತು ಈ ಸಂಸ್ಥೆಯನ್ನು ಸತ್ಕಾರ್ಯಕ್ಕಾಗಿ ಪಡೆದ ಆಚಾರ್ಯ ವೆಂಕಟ ರಂಗೋ ಕಟ್ಟಿಯವರೂ ಧನ್ಯರು! ಈ ಪುಣ್ಯಪುರುಷರ ಜೀವನದ ಆದರ್ಶದ ಬೆಳಕು ಹಾಗು ಇಂಥ ಪುರುಷರ ಜೀವನದ ಆದರ್ಶ ವಿಚಾರಗಳಿಂದ ಬೆಳೆದು

ನಿಂತ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನ ಸಂದೇಶ ಕನ್ನಡ ನಾಡು ನುಡಿಗಳ ಸೇವಕರಿಗೆ ಅಮರ ದಾರಿಯ ದೀಪವಾಗಿ ಹಾಗು ದೀಪಸ್ತಂಭವಾಗಿ ಬಾಳಲಿ ! ಆ ಬೆಳಕಿನಲ್ಲಿ ಕನ್ನಡ ನಾಡು ಹಾಗು ನುಡಿ ಗತವೈಭವವನ್ನು ಪುನಃ ಪಡೆದು ಮೆರೆಯಲಿ !

ಕೀರ್ತಿಶಾಲಿಗಳಾದ

ದಿವಾಣ ಬಹಾದ್ದೂರ ಶ್ರೀ ರೊದ್ದ ಶ್ರೀನಿವಾಸರಾಯರ ಸಂಕ್ಷಿಪ್ತ ಚರಿತ್ರೆ

ಲೇಖಕರು : **ಶ್ರೀ ಕಟ್ಟಿ ಶಾಮರಾಯರು**

(**ಶ್ರೀ ಎಚ್. ಜಿ. ದೇಶಪಾಂಡೆ**ಯವರು ಬರೆದ ಚರಿತ್ರೆಯ ಆಧಾರದಿಂದ)

ಬಾಲ್ಯವೂ ಶಿಕ್ಷಣವೂ

ನಮ್ಮ ಚರಿತ್ರನಾಯಕರು ೧೮೫೦ನೇ ಇಸವಿಯ ಸಪ್ಟಂಬರ ೧೭ನೆಯ ದಿನಾಂಕ ಮದಿಹಾಳದ ಮಡಿ ಶ್ರೀನಿವಾಸರಾಯರ ಮನೆಯಲ್ಲಿ ಹುಟ್ಟಿದರು. ಏಳು ವರುಷ ತುಂಬುವವರೆಗೆ ಯಾವ ವಿಧದ ತೊಂದರೆಯೂ ಇಲ್ಲದೆ ರಾಯರು ಸುಖವಾಗಿ ಬೆಳೆದರು. ಅವರ ಶಿಕ್ಷಣವು ಆರಂಭದಲ್ಲಿ ಮದಿಹಾಳದ ಒಂದು ಗಾಂವಠಿ ಶಾಲೆಯಲ್ಲಿ ನಡೆಯಿತು. ಈ ಶಾಲೆಯನ್ನು ಕೃಷ್ಣಾಜಿ ರಾಮಚಂದ್ರ ಸೊಲ್ಲಾಪುರ ಎಂಬವರು ಹಾಕಿದ್ದರು. ಅವರು ಕನ್ನಡ, ಮರಾಠಿ ಭಾಷೆಗಳ ಅಭ್ಯಾಸ ಮಾಡಿಸುತ್ತಿದ್ದರು. ಒಂದು ವರ್ಷ ಅಭ್ಯಾಸ ಮಾಡಲು ರಾಯರಿಗೆ ಕನ್ನಡ, ಮರಾಠಿ ಭಾಷೆಗಳ ಜ್ಞಾನವು ತಕ್ಕಮಟ್ಟಿಗೆ ಆಯಿತು. ಬಳಿಕ ಬಾಸೆಲ್ ಮಿಶನ್ನಿನವರು ಇಟ್ಟ ಇಂಗ್ಲಿಷ ಶಾಲೆಗೆ ರಾಯರು ಹೋದರು. ಇವರು ೧೬ ವರುಷದವರಿರುವಾಗಲೇ ಇವರ ಮದುವೆಯು ಗಂಗಸಮುದ್ರ ರಾಘವೇಂದ್ರರಾಯರ ಮಗಳೊಂದಿಗೆ ಆಯಿತು. ಅದೇ ಸುಮಾರಕ್ಕೆ ತೀರ್ಥರೂಪರು ಪರಲೋಕವಾಸಿಗಳಾದ್ದರಿಂದ ಆ ಚಿಕ್ಕ ವಯಸ್ಸಿನಲ್ಲಿಯೇ ರಾಯರು ಏನಾದರೂ ಒಂದು ಉದ್ಯೋಗವನ್ನು ಮಾಡಬೇಕಾಯಿತು. ಆದರೆ ಅವರ ವಯಸ್ಸು ಇನ್ನೂ ಸಣ್ಣದಿದ್ದುದರಿಂದ ಸರಕಾರದ ಯಾವ ಖಾತೆಯಲ್ಲಿಯೂ ನೌಕರಿ ದೊರೆಯುವಂತಿದ್ದಿಲ್ಲ. ಆದುದರಿಂದ ಅವರು ಒಂದು ಸಣ್ಣ ಗಾಂವಠಿ ಶಾಲೆಯನ್ನು ಹಾಕಿ ೮ ಹುಡುಗರನ್ನು ಕೂಡಿಸಿ ಅವರಿಗೆ ಶಿಕ್ಷಣ ಕೊಡುತ್ತಿದ್ದರು. ಪ್ರತಿಯೊಬ್ಬನು ಕೊಟ್ಟ ೮ ಆಣೆ ಫೀಯಿಂದ ಅವರಿಗೆ ತಿಂಗಳಿಗೆ ೪ ರೂ. ದೊರೆಯುತ್ತಿದ್ದುವು. ಆದರೆ ಈ ನಾಲ್ಕು ರೂಪಾಯಿಗಳಿಂದ ಅವರ ಮತ್ತು ಅವರ ತಾಯಿಯ ಚರಿತಾರ್ಥವನ್ನು ಸಾಗಿಸುವದು ಬಹುಕಷ್ಟವಾಯಿತು. ಅದರಿಂದ ಹೆಚ್ಚಿನ ಸಂಬಳದ ನೌಕರಿಯನ್ನು ದೊರಕಿಸಬೇಕೆಂದು ಹುಬ್ಬಳ್ಳಿಗೆ ಹೋಗಿ ನೋಡಲು ಅಲ್ಲಿಯ ಬಾಸೆಲ್ ಮಿಶನ್ ಪಾದ್ರಿಯು ೧೫ರೂ. ಸಂಬಳದ ಕೆಲಸವನ್ನು ಕೊಡುತ್ತೇನೆಂದು ಹೇಳಿದನು. ಅದಕ್ಕೆ ಒಪ್ಪಿಕೊಂಡು ರಾಯರು ಧಾರವಾಡಕ್ಕೆ ಬಂದರು. ಅವರ ತಾಯಿ ಅದೇ ವರುಷವೇ ವಿಧವೆಯಾದುದರಿಂದ ಧಾರವಾಡವನ್ನು ಬಿಟ್ಟು ಹುಬ್ಬಳ್ಳಿಯಲ್ಲಿ ಮನೆ ಮಾಡಲಿಕ್ಕೆ ಒಪ್ಪಲಿಲ್ಲ. **ಆದುದರಿಂದ ಅವರು ಪ್ರತಿದಿನವೂ ಧಾರವಾಡದಿಂದ ಹುಬ್ಬಳ್ಳಿಗೆ, ಹುಬ್ಬಳ್ಳಿಯಿಂದ ಧಾರವಾಡಕ್ಕೆ ೨೪ ಮೈಲು ನಡೆದು, ದಿನಕ್ಕೆ ೮ ಆಣೆಯಂತೆ ಸಂಬಳ ದೊರಕಿಸಬೇಕಾಯಿತು.**

ಮುಂದೆ ಹೆಚ್ಚಿನ ಶಿಕ್ಷಣ ಪಡೆಯಬೇಕೆಂದು ಬೆಳಗಾವಿಯ ಟ್ರೇನಿಂಗ ಕಾಲೇಜಿಗೆ ಹೋದರು. ಆಗ (೧೮೬೯) ಅಲ್ಲಿ ಹುಯಿಲಗೋಳ ಭುಜಂಗರಾಯರು ಪ್ರಿನ್ಸಿಪಾಲರಾಗಿದ್ದರು. ಅವರ ಕೈಕೆಳಗೆ ಒಂದು ವರುಷ ಅಭ್ಯಾಸ ಮಾಡಿ ಆಗಸ್ಟ ೧೮೬೯ರಲ್ಲಿ ಆದ ವಾರ್ಷಿಕ ಪರೀಕ್ಷೆಯಲ್ಲಿ ಅಗ್ರಸ್ಥಾನವನ್ನು ಪಡೆದರು. ಆಗ್ಗೆ ಟ್ರೇನಿಂಗ ಕಾಲೇಜಿನಲ್ಲಿ ೫೬ ಜನ ವಿದ್ಯಾರ್ಥಿಗಳಿದ್ದರು. ಇವರಲ್ಲಿ ೪೯ ಜನರು ಕನ್ನಡ ಮಾತೃಭಾಷೆಯವರು ಇದ್ದರು. ಉಳಿದ ೭ ಮಂದಿ ಮರಾಠಿ ಮಾತಾಡುವವರಾಗಿದ್ದರು. ಆದರೂ ಎಲ್ಲರೂ ಸಂಬಳದ ಪಾವತಿಯ ಮೇಲೆ ಕನ್ನಡ

ಸಂಸ್ಕೃತದಲ್ಲಿ ಇದೆ. ಕಲಿಯುಗದಲ್ಲಿ ನಾಡನ್ನು ಕಟ್ಟುವುದಕ್ಕೆ, ರಾಷ್ಟ್ರವನ್ನು ನಿರ್ಮಿಸುವುದಕ್ಕೆ ಒಂದು ಸಂಘವಾಗಲಿ, ಒಂದು ಸಂಸ್ಥೆಯಾಗಲಿ ಬೇಕು. ಇದನ್ನು ಮನಗಂಡ ವೆಂಕಟ ರಂಗೋ ಕಟ್ಟಿಯವರು ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯನ್ನು ಮಾಡುವ ಕಾರ್ಯದಲ್ಲಿ ಅಂದಿನ ನಾಯಕರಿಗೆ ನೆರವಾದರು; ಸಂಘದ ಸದಸ್ಯರೂ, ಉಪಾಧ್ಯಕ್ಷರೂ, ಕೆಲವು ಕಾಲ ಅಧ್ಯಕ್ಷರೂ ಆಗಿದ್ದರು. ಹೀಗೆ ವೆಂಕಟ ರಂಗೋ ಕಟ್ಟಿಯವರು ಕನ್ನಡ ನುಡಿಯ ಮುಖಾಂತರ ಕರ್ನಾಟಕದ ನಿರ್ಮಾಣದ ಭವ್ಯ ಕನಸನ್ನು ಮನದಲ್ಲಿ ಮೂಡಿಸಿಕೊಂಡು ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಸಂಸ್ಥೆ ಹಾಗು ಕರ್ನಾಟಕ ವಿದ್ಯಾವರ್ಧಕ ಸಂಘ ಇವೆರಡರಿಂದಲೂ ತಮ್ಮ ಕಾರ್ಯವನ್ನು ಮುಂದುವರಿಸಿದರು. ಕನ್ನಡವನ್ನು ಉಳಿಸಿ ಅದನ್ನು ಪೋಷಿಸತೊಡಗಿದರು. ಅವರು ಈ ದಿಸೆಯಲ್ಲಿ ಮಾಡಿದ ಬಹುಮುಖಿ ಕಾರ್ಯ ಅದ್ಭುತವಾದುದಾಗಿದೆ, ಅನುಕರಣೀಯವಾಗಿದೆ.

ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರೂ ಕನ್ನಡ ಭಾಷಾಂತರಕಾರರೂ ಆಗಿದ್ದಾಗ 'ಕನ್ನಡ ಶಾಲಾಪತ್ರಕ'ಕ್ಕೆ ಭಾಷೆಯ ದೃಷ್ಟಿಯಿಂದ ಮಹತ್ವವನ್ನು ಇವರು ಕೊಟ್ಟು ಅದರ ಉಪಯುಕ್ತತೆಯನ್ನು ಹೆಚ್ಚಿಸಿದರು. ವಿದ್ಯಾಖಾತೆಯ ಅಪ್ಪಣೆಯ ಮೇರೆಗೆ ಕನ್ನಡ ಪಠ್ಯಪುಸ್ತಕಗಳನ್ನು ರಚಿಸಿದರು. ಕನ್ನಡ ಭಾಷೆಯ ಕಡೆಗಷ್ಟೇ ಗಮನವೀಯದೆ ಜ್ಞಾನ ಪ್ರಸಾರದ ಕಡೆಗೂ ಕನ್ನಡ ನಾಡಿನ ಹಿರಿಮೆಯ ಕಡೆಗೂ ಇವರು ಲಕ್ಷ್ಯವಿತ್ತರು. ಜ್ಯೋತಿಷಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರ, ವನಸ್ಪತಿಶಾಸ್ತ್ರ, ಖನಿಜಶಾಸ್ತ್ರ, ಲಘುವ್ಯಾಕರಣ ಮುಂತಾದ ವಿಷಯಗಳನ್ನು ಕುರಿತು ಪ್ರಬಂಧ ಹಾಗು ಗ್ರಂಥ ಬರೆದರಲ್ಲದೆ ಕನ್ನಡ ಲೇಖಕರಿಗೆ ಒಂದು ಮೇಲ್ಪಂಕ್ತಿಯನ್ನು ಹಾಕಿ ಕನ್ನಡದ ಆಚಾರ್ಯ ಪುರುಷರಲ್ಲೊಬ್ಬರಾದರು. ಸವಾಯಿ ಮಾಧವರಾಯ (ನಾಟಕ), ನರತನು (ಶರೀರಶಾಸ್ತ್ರ), ವಿಧವಾವಪನ ಅನಾಚಾರ (ಶಾಸ್ತ್ರಾಧಾರಗಳಿಂದ ಬರೆದ ಪ್ರಬಂಧ), ಕರ್ನಾಟಕ ಗೆಝೆಟಿಯರ್ (ಇತಿಹಾಸ), ಉಪನ್ಯಾಸ ವಿದ್ಯೆ (ಪ್ರಬಂಧ), ರಸೆಲ್‌ಸಾಹೇಬರ ಆಡಳಿತ (ವಿದ್ಯಾಖಾತೆಯ ಐತಿಹಾಸಿಕ ಗ್ರಂಥ ಇಂಗ್ಲಿಷದಲ್ಲಿ), ಆರು ಬೆರಳಿನ ಕುರುಹು (ಸಾಮಾಜಿಕ ಕಾದಂಬರಿ), ಬರ್ಥೋಲ್ಡನ ಚರಿತ್ರೆ (ಮರಾಠಿಯಿಂದ ಕನ್ನಡದಲ್ಲಿ ಅನುವಾದ) ಮುಂತಾದ ಗ್ರಂಥಗಳನ್ನು ಬರೆದ ಈ ಪುಣ್ಯಪುರುಷರು 'ಕರ್ನಾಟಕ ಪತ್ರ'ವೆಂಬ ವಾರಪತ್ರಿಕೆಯನ್ನು ಹೊರಡಿಸಿ ಕರ್ನಾಟಕದ ಸರ್ವಾಂಗೀಣ ಉನ್ನತಿಯನ್ನು ಸಾಧಿಸಲು ಹೆಣಗಿದರು. ಇವೆಲ್ಲ ಲೇಖನಗಳು ಹಾಗು ಕೃತಿಗಳು ಅಚ್ಚು ಕಂಡಾಗಲೇ ಅವುಗಳ ಪ್ರಸಾರ ಇತೋಽಧಿಕವಾಗುವುದು ನಿರ್ವಿವಾದವಾದುದು. ಅಂತೆಯೆ ಇವರು ಕನ್ನಡ ಅಚ್ಚಿನ ಮೊಳೆಗಳನ್ನು ೧೮೭೦ರಲ್ಲಿ ಬೆಳಗಾಂವಿಯಲ್ಲಿ ಎರಕಹೊಯ್ಸಿ ಕನ್ನಡ ಅಚ್ಚುಕೂಟವನ್ನು ಪ್ರಾರಂಭಿಸಿ ಕನ್ನಡದ ಪ್ರಸಾರಕ್ಕೆ ಇಂಬು ಮಾಡಿಕೊಟ್ಟರು.

ಈ ರೀತಿಯಾಗಿ ಆಚಾರ್ಯ ಕಟ್ಟಿಯವರು ಕನ್ನಡ ಭಾಷಾ ಸೇವೆಯನ್ನು ಮಾಡಿದರಲ್ಲದೆ ಕನ್ನಡ ನಾಡಿನ ಸಮಾಜ ಹಾಗೂ ಆರ್ಥಿಕ ಕ್ಷೇತ್ರದಲ್ಲಿಯೂ ತಮ್ಮ ಸೇವೆಯನ್ನು ಸಲ್ಲಿಸಿದರು. ಈ ಕಾರ್ಯಗಳಿಗೆ 'ಅವರ ವಿಧವಾ ಅನಾಚಾರ' ಎಂಬ ಪ್ರಬಂಧ, ಆಯುರ್ವೇದವನ್ನು ಅಭ್ಯಸಿಸಿ ಅದರಂತೆ ಜನತೆಗೆ ಔಷಧವನ್ನು ಪುಕ್ಕಟೆಯಾಗಿ ಕೊಡುವಿಕೆ, ಸಿಗೇಕಾಯಿಯ ಬಡಿಗಳನ್ನು ಸಿದ್ಧಪಡಿಸುವಿಕೆ, ಅಲ್ಯೂಮಿನಮ್ ಧಾತುವಿನಿಂದ ಕತ್ತರಿ-ಕತ್ತಿಗಳ ನಿರ್ಮಾಣ, ಮಣ್ಣಿನ-ಹೂಜಿ ಹಾಗು ಪಾತ್ರೆಗಳ ನಿರ್ಮಾಣ ಮಂಗಳೂರಿನ ಮನೆಯ ಹಂಚುಗಳ ಮಾದರಿಯ ಹಂಚುಗಳ ತಯಾರಿಕೆ ಮುಂತಾದವುಗಳು ನಿದರ್ಶನಗಳಾಗಿವೆ.

ಕನ್ನಡ, ಮರಾಠಿ ಹಾಗು ಇಂಗ್ಲಿಷ ಈ ತ್ರಿಭಾಷೆಗಳ ಪಂಡಿತರಾಗಿ, ವಿದ್ಯಾನುರಾಗಿಗಳಾಗಿ, ಗ್ರಂಥಕರ್ತರಾಗಿ, ಪತ್ರಿಕಾ ಸಂಪಾದಕರಾಗಿ, ಸಮಾಜ ಸುಧಾರಕರಾಗಿ, ಉದ್ಯೋಗ-ವ್ಯವಸಾಯಗಳ ಪ್ರೋತ್ಸಾಹಕರಾಗಿ ಕನ್ನಡ ನಾಡಿನ ಗತವೈಭವವನ್ನು ಮರಳಿ ತಂದು ಕೊಡುವುದಕ್ಕಾಗಿ ಸತತವಾಗಿ ಹೋರಾಡಿ ಕನ್ನಡ ನಾಡನ್ನೂ ನುಡಿಯನ್ನೂ ಬೆಳಕಿಗೆ ತರುವಲ್ಲಿ ಯಶಸ್ವಿಗಳಾಗಿ ತುಂಬು ಜೀವನವನ್ನು ಕಳೆದು ೧೯೦೯ ಮೇ ೧೫ನೆಯ ತಾರೀಖಿನ ದಿನ ಕನ್ನಡ ನಾಡಿನ ಆತ್ಮದಲ್ಲಿ ತಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೊಟ್ಟು ತಮ್ಮ ಕಾರ್ಯಗಳಿಂದ ಇನ್ನೂ ಜೀವಿಸಿರುವ ಆಚಾರ್ಯ ವೆಂಕಟ ರಂಗೋ ಕಟ್ಟಿ ಅವರನ್ನು ತನ್ನ ಪ್ರಿನ್ಸಿಪಾಲರನ್ನಾಗಿ ಪಡೆದ ಧಾರವಾಡದ ಕನ್ನಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜೂ ಧನ್ಯ ಮತ್ತು ಈ ಸಂಸ್ಥೆಯನ್ನು ಸತ್ಕಾರ್ಯಕ್ಕಾಗಿ ಪಡೆದ ಆಚಾರ್ಯ ವೆಂಕಟ ರಂಗೋ ಕಟ್ಟಿಯವರೂ ಧನ್ಯರು! ಈ ಪುಣ್ಯಪುರುಷರ ಜೀವನದ ಆದರ್ಶದ ಬೆಳಕು ಹಾಗು ಇಂಥ ಪುರುಷರ ಜೀವನದ ಆದರ್ಶ ವಿಚಾರಗಳಿಂದ ಬೆಳೆದು

ನಿಂತ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜಿನ ಸಂದೇಶ ಕನ್ನಡ ನಾಡು ನುಡಿಗಳ ಸೇವಕರಿಗೆ ಅವರ ದಾರಿಯ ದೀಪವಾಗಿ ಹಾಗು ದೀಪಸ್ತಂಭವಾಗಿ ಬಾಳಲಿ ! ಆ ಬೆಳಕಿನಲ್ಲಿ ಕನ್ನಡ ನಾಡು ಹಾಗು ನುಡಿ ಗತವೈಭವವನ್ನು ಪುನಃ ಪಡೆದು ಮೆರೆಯಲಿ !

ಕೀರ್ತಿಶಾಲಿಗಳಾದ

ದಿವಾಣ ಬಹಾದ್ದೂರ ಶ್ರೀ ರೊದ್ದ ಶ್ರೀನಿವಾಸರಾಯರ ಸಂಕ್ಷಿಪ್ತ ಚರಿತ್ರೆ

ಲೇಖಕರು : **ಶ್ರೀ ತಟ್ಟಿ ಶಾಮರಾಯರು**

(**ಶ್ರೀ ಎಚ್. ಜಿ. ದೇಶಪಾಂಡೆ**ಯವರು ಬರೆದ ಚರಿತ್ರೆಯ ಆಧಾರದಿಂದ)

ಬಾಲ್ಯವೂ ಶಿಕ್ಷಣವೂ

ನಮ್ಮ ಚರಿತ್ರನಾಯಕರು ೧೮೫೦ನೇ ಇಸವಿಯ ಸಪ್ಟಂಬರ ೧೭ನೆಯ ದಿನಾಂಕ ಮದಿಹಾಳದ ಮುಡಿ ಶ್ರೀನಿವಾಸರಾಯರ ಮನೆಯಲ್ಲಿ ಹುಟ್ಟಿದರು. ಏಳು ವರುಷ ತುಂಬುವವರೆಗೆ ಯಾವ ವಿಧದ ತೊಂದರೆಯೂ ಇಲ್ಲದೆ ರಾಯರು ಸುಖವಾಗಿ ಬೆಳೆದರು. ಅವರ ಶಿಕ್ಷಣವು ಆರಂಭದಲ್ಲಿ ಮದಿಹಾಳದ ಒಂದು ಗಾಂವಠಿ ಶಾಲೆಯಲ್ಲಿ ನಡೆಯಿತು. ಈ ಶಾಲೆಯನ್ನು ಕೃಷ್ಣಾಜಿ ರಾಮಚಂದ್ರ ಸೊಲ್ಲಾಪುರ ಎಂಬವರು ಹಾಕಿದ್ದರು. ಅವರು ಕನ್ನಡ, ಮರಾಠಿ ಭಾಷೆಗಳ ಅಭ್ಯಾಸ ಮಾಡಿಸುತ್ತಿದ್ದರು. ಒಂದು ವರ್ಷ ಅಭ್ಯಾಸ ಮಾಡಲು ರಾಯರಿಗೆ ಕನ್ನಡ, ಮರಾಠಿ ಭಾಷೆಗಳ ಜ್ಞಾನವು ತಕ್ಕಮಟ್ಟಿಗೆ ಆಯಿತು. ಬಳಿಕ ಬಾಸೆಲ್ ಮಿಶನ್ನಿನವರು ಇಟ್ಟ ಇಂಗ್ಲಿಷ ಶಾಲೆಗೆ ರಾಯರು ಹೋದರು. ಇವರು ೧೬ ವರುಷದವರಿರುವಾಗಲೇ ಇವರ ಮದುವೆಯು ಗಂಗಸಮುದ್ರ ರಾಘವೇಂದ್ರರಾಯರ ಮಗಳೊಂದಿಗೆ ಆಯಿತು. ಅದೇ ಸುಮಾರಕ್ಕೆ ತೀರ್ಥರೂಪರು ಪರಲೋಕವಾಸಿಗಳಾದ್ದರಿಂದ ಆ ಚಿಕ್ಕ ವಯಸ್ಸಿನಲ್ಲಿಯೇ ರಾಯರು ಏನಾದರೂ ಒಂದು ಉದ್ಯೋಗವನ್ನು ಮಾಡಬೇಕಾಯಿತು. ಆದರೆ ಅವರ ವಯಸ್ಸು ಇನ್ನೂ ಸಣ್ಣದಿದ್ದುದರಿಂದ ಸರಕಾರದ ಯಾವ ಖಾತೆಯಲ್ಲಿಯೂ ನೌಕರಿ ದೊರೆಯುವಂತಿದ್ದಿಲ್ಲ. ಆದುದರಿಂದ ಅವರು ಒಂದು ಸಣ್ಣ ಗಾಂವಠಿ ಶಾಲೆಯನ್ನು ಹಾಕಿ ೮ ಹುಡುಗರನ್ನು ಕೂಡಿಸಿ ಅವರಿಗೆ ಶಿಕ್ಷಣ ಕೊಡುತ್ತಿದ್ದರು. ಪ್ರತಿಯೊಬ್ಬನು ಕೊಟ್ಟ ೮ ಆಣೆ ಫೀಯಿಂದ ಅವರಿಗೆ ತಿಂಗಳಿಗೆ ೪ ರೂ. ದೊರೆಯುತ್ತಿದ್ದುವು. ಆದರೆ ಈ ನಾಲ್ಕು ರೂಪಾಯಿಗಳಿಂದ ಅವರ ಮತ್ತು ಅವರ ತಾಯಿಯ ಚರಿತಾರ್ಥವನ್ನು ಸಾಗಿಸುವದು ಬಹುಕಷ್ಟವಾಯಿತು. ಅದರಿಂದ ಹೆಚ್ಚಿನ ಸಂಬಳದ ನೌಕರಿಯನ್ನು ದೊರಕಿಸಬೇಕೆಂದು ಹುಬ್ಬಳ್ಳಿಗೆ ಹೋಗಿ ನೋಡಲು ಅಲ್ಲಿಯ ಬಾಸೆಲ್ ಮಿಶನ್ ಪಾದ್ರಿಯು ೧೫ರೂ. ಸಂಬಳದ ಕೆಲಸವನ್ನು ಕೊಡುತ್ತೇನೆಂದು ಹೇಳಿದನು. ಅದಕ್ಕೆ ಒಪ್ಪಿಕೊಂಡು ರಾಯರು ಧಾರವಾಡಕ್ಕೆ ಬಂದರು. ಅವರ ತಾಯಿ ಅದೇ ವರುಷವೇ ವಿಧವೆಯಾದುದರಿಂದ ಧಾರವಾಡವನ್ನು ಬಿಟ್ಟು ಹುಬ್ಬಳ್ಳಿಯಲ್ಲಿ ಮನೆ ಮಾಡಲಿಕ್ಕೆ ಒಪ್ಪಲಿಲ್ಲ. **ಆದುದರಿಂದ ಅವರು ಪ್ರತಿದಿನವೂ ಧಾರವಾಡದಿಂದ ಹುಬ್ಬಳ್ಳಿಗೆ, ಹುಬ್ಬಳ್ಳಿಯಿಂದ ಧಾರವಾಡಕ್ಕೆ ೨೪ ಮೈಲು ನಡೆದು, ದಿನಕ್ಕೆ ೮ ಆಣೆಯಂತೆ ಸಂಬಳ ದೊರಕಿಸಬೇಕಾಯಿತು.**

ಮುಂದೆ ಹೆಚ್ಚಿನ ಶಿಕ್ಷಣ ಪಡೆಯಬೇಕೆಂದು ಬೆಳಗಾವಿಯ ಟ್ರೇನಿಂಗ ಕಾಲೇಜಿಗೆ ಹೋದರು. ಆಗ (೧೮೬೯) ಅಲ್ಲಿ ಹುಯಿಲಗೋಳ ಭುಜಂಗರಾಯರು ಪ್ರಿನ್ಸಿಪಾಲರಾಗಿದ್ದರು. ಅವರ ಕೈಕೆಳಗೆ ಒಂದು ವರುಷ ಅಭ್ಯಾಸ ಮಾಡಿ ಆಗಸ್ಟ ೧೮೬೯ರಲ್ಲಿ ಆದ ವಾರ್ಷಿಕ ಪರೀಕ್ಷೆಯಲ್ಲಿ ಅಗ್ರಸ್ಥಾನವನ್ನು ಪಡೆದರು. ಆಗ್ಗೆ ಟ್ರೇನಿಂಗ ಕಾಲೇಜಿನಲ್ಲಿ ೫೬ ಜನ ವಿದ್ಯಾರ್ಥಿಗಳಿದ್ದರು. ಇವರಲ್ಲಿ ೪೯ ಜನರು ಕನ್ನಡ ಮಾತೃಭಾಷೆಯವರು ಇದ್ದರು. ಉಳಿದ ೭ ಮಂದಿ ಮರಾಠಿ ಮಾತಾಡುವವರಾಗಿದ್ದರು. ಆದರೂ ಎಲ್ಲರೂ ಸಂಬಳದ ಪಾವತಿಯ ಮೇಲೆ ಕನ್ನಡ

ದಲ್ಲಿಯೇ ಸಹಿ ಮಾಡುತ್ತಿದ್ದರೆಂಬುದು ಆಗಿನ ತರುಣರ ಕನ್ನಡ ಭಾಷೆಯ ಅಭಿಮಾನದ ಒಂದು ಗುರುತು. ಈ ಶ್ರೇಯಸ್ಸಿಗೆ ಆಗಿನ ಅಧಿಕಾರಿಗಳೇ ಕಾರಣ. ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾಗಿದ್ದ ರಸೆಲ್ ಸಾಹೇಬರೂ, ಪ್ರಿನ್ಸಿಪಾಲರಾದ ಭುಜಂಗರಾಯರೂ ಡೆಪುಟಿಯವರಾದ ಚೆನ್ನಬಸಪ್ಪನವರೂ ಕನ್ನಡದ ಅಭಿಮಾನಿಗಳಾದುದರಿಂದ ಮರಾಠಿಯನ್ನಾಡುವವರು ಕೂಡ ಕನ್ನಡದಲ್ಲಿಯೇ ಸಹಿಯನ್ನು ಮಾಡುತ್ತಿದ್ದರು. ಈ ಅಧಿಕಾರಿಗಳು ಹೋದ ಬಳಿಕ ನಮ್ಮ ಶಾಲೆಗಳಲ್ಲಿ ಮರಾಠಿಯ ಪ್ರವೇಶವಾಯಿತು.

ಟ್ರೇನಿಂಗ ಕಾಲೇಜು ಬೆಳಗಾವಿಯಲ್ಲಿದ್ದುದರಿಂದ ಕನ್ನಡ ಭಾಷೆಯ ಅಭಿವೃದ್ಧಿಗೆ ಯಾವ ಯಾವ ಅನನುಕೂಲತೆಗಳಾಗಿರುವವೆಂಬ ವಿಷಯವಾಗಿ ಭುಜಂಗರಾಯರು ವಿಚಾರಾರ್ಹವಾದ ಅಭಿಪ್ರಾಯವನ್ನು ೧೮೬೮ನೆಯ ಇಸವಿಯ ವರದಿಯಲ್ಲಿ ವ್ಯಕ್ತಪಡಿಸಿದ್ದಾರೆ. ಅದೇ ನೆಂಪರಿ—

“ಟ್ರೇನಿಂಗ ಕಾಲೇಜು ಕನ್ನಡ ವಾಙ್ಮಯದ ಮಾತೃಸ್ಥಾನವು: ಈಗಿದ್ದ ಸಂಸ್ಥೆ ಮುಂದೆ ಸ್ಥಾಪಿಸಲ್ಪಡತಕ್ಕ ದೊಡ್ಡ ಸಂಸ್ಥೆಯ ಸಂಕ್ಷಿಪ್ತ ಸ್ವರೂಪವಾಗಿದೆ. ರಸೆಲ್ ಸಾಹೇಬರ ಅಭಿಪ್ರಾಯದಂತೆ ಬೆಳಗಾಂವಿ ಈ ವಿಷಯದಲ್ಲಿ ಯೋಗ್ಯಸ್ಥಳವಲ್ಲವೆಂದು ನಾನಾದರೂ ಅಭಿಪ್ರಾಯಪಡುತ್ತೇನೆ. ಹೀಗೆ ಟ್ರೇನಿಂಗ ಕಾಲೇಜಿನ ಅವಸ್ಥೆ ನೀರಿನ ಹೊರಗಿದ್ದ ಮೀನದಂತೆ ಆಗಿದೆ. ಬೆಳಗಾವಿ ಮಹಾರಾಷ್ಟ್ರ ದೇಶಕ್ಕೆ ಸಮೀಪವಾಗಿದ್ದ ಕನ್ನಡ ಸೀಮೆಯಲ್ಲಿರುವದರಿಂದ ಈ ಕಾಲೇಜಿಗೆ ಬರುವ ವಿದ್ಯಾರ್ಥಿಗಳು ಹೆಚ್ಚಾಗಿ ಮರಾಠಿಯನ್ನಾಡುವವರೇ ಇರುತ್ತಾರೆ. ಆದುದರಿಂದ ಈ ಸಂಸ್ಥೆಯನ್ನು ಧಾರವಾಡಕ್ಕೆ ಒಯ್ದರೆ ಅದಕ್ಕೆ ಹೆಚ್ಚಿನ ಸೌಕರ್ಯಗಳುಂಟಾಗುವದಲ್ಲದೆ ಅದರ ಕಾರ್ಯಕ್ಷೇತ್ರವೂ ಹೆಚ್ಚುವುದು.”

ಮುಂದೆ ರಾಯರು ಒಂದು ವರುಷ ಪುಣೆಯ ಹಾಯಸ್ಕೂಲಿನಲ್ಲಿ ಕಲಿತು ಇ. ಸ. ೧೮೭೦ರಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಪಾಸಾದರು. ಪುಣೆಯ ಹಾಯಸ್ಕೂಲಿನಲ್ಲಿದ್ದಾಗ ಸಂಸ್ಕೃತದ ಹೊರತಾಗಿ ಉಳಿದ ವಿಷಯಗಳಲ್ಲಿ ರಾಯರು ದ್ರವ್ಯಪಾರಿತೋಷಿಕಗಳನ್ನು ಪಡೆದು, ಆ ಹಣದಿಂದ ಪುಸ್ತಕ, ಫೀ ಮೊದಲಾದ ಶಿಕ್ಷಣದ ವೆಚ್ಚವನ್ನು ನಡಿಸುತ್ತಿದ್ದರು. ಮ್ಯಾಟ್ರಿಕ್ ಪರೀಕ್ಷೆಯಾದ ಮೇಲೆ ರಾಯರು ಉಚ್ಚ ಶಿಕ್ಷಣವನ್ನು ಪಡೆಯುವದಕ್ಕಾಗಿ ಪುಣೆಯ ಡೆಕ್ಕನ್ ಕಾಲೇಜನ್ನು ಸೇರಿದರು. ಅಲ್ಲಿ ಅಭ್ಯಾಸ ಮಾಡಿ ಬಿ.ಎ. ಪದವಿಯನ್ನು ಪಡೆಯಬೇಕೆಂದು ರಾಯರ ಇಚ್ಛೆಯಿದ್ದಿತು. ಆದರೆ ಅನೇಕ ಆಕಸ್ಮಿಕ ಕಾರಣಗಳಿಂದ ಅವರು ಈ ಇಚ್ಛೆಯನ್ನು ಬಿಟ್ಟು ಹೊಟ್ಟೆ ಹೊರಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಬೇಕಾಯಿತು. ಆದುದರಿಂದ ವಿದ್ಯಾಖಾತೆಯಲ್ಲಿ ಒಂದು ಕೆಲಸವನ್ನು ದೊರಕಿಸಿ ಧಾರವಾಡದಲ್ಲಿಯೇ ಇರಬೇಕೆಂದು ರಾಯರು ನಿಶ್ಚಯಿಸಿದರು. ಮುಲಕೀ ಖಾತೆಯಲ್ಲಿ ಕೆಲವು ತಿಂಗಳು ಕೆಲಸ ಮಾಡಿದಾಗ ಅವರಿಗೆ “ಕಲಘಟಗಿಯಲ್ಲಿ ಮೂರು ತಿಂಗಳು ಕೆಲಸ ಮಾಡುವದರೊಳಗೆ ಉಳಿದ ಕಾರಕೂನರ ಲಂಚಗುಳಿತನವನ್ನು ನೋಡಿ ನನಗೆ ಬಹಳ ಹೇಸಿಕೆಯುಂಟಾಯಿತು. ಕಳ್ಳರ ಕೂಟದಲ್ಲಿ ಇದ್ದರೆ ಸಂಭಾವಿತನಿಗೆ ಎಷ್ಟು ಅಸಹ್ಯವೆನಿಸಬಹುದೋ ಅಷ್ಟು ಅಸಹ್ಯವೆನಿಸಿತ್ತು.” ಎಂದು ತಮ್ಮ ಆತ್ಮ ಚರಿತ್ರೆಯಲ್ಲಿ ಹೇಳಿದ್ದಾರೆ. ಆದ್ದರಿಂದ ಅವರು ತಮ್ಮ ಕೆಲಸಕ್ಕೆ ರಾಜಿನಾಮೆಯನ್ನು ಕೊಟ್ಟು ವಿದ್ಯಾಖಾತೆಯಲ್ಲಿ ಸೇರಿದರು.

ಮೊದಲು ರಾಯರಿಗೆ ಕಾರವಾರ ಇಂಗ್ಲಿಷ ಶಾಲೆಯಲ್ಲಿ ೪೫ ರೂಪಾಯಿ ಸಂಬಳದ ಕೆಲಸವು ದೊರೆಯಿತು, (೧೮೭೨ ಜೂನ್) ಆ ಮೇಲೆ ಧಾರವಾಡ, ಸವಣೂರ ಹೈಸ್ಕೂಲುಗಳಲ್ಲಿ ಕೆಲಸ ಮಾಡಿ ಮತ್ತೆ ಧಾರವಾಡ ಹೈಸ್ಕೂಲಿಗೆ ಬಂದು ಅಲ್ಲಿ ೨೨ ತಿಂಗಳು (ಜನೆವರಿ ೧೮೭೪ ರಿಂದ ನವಂಬರ ೧೮೭೫) ಕೆಲಸ ಮಾಡಿದರು.

ಸಾರ್ವಜನಿಕ ಕಾರ್ಯದಲ್ಲಿ ಆಸಕ್ತಿ; ಮಿತ್ರಸಮಾಜ

೧೮೭೫ನೆಯ ಇಸವಿಯ ನವಂಬರ ತಿಂಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಹೊಸದೊಂದು ಅಸಿಸ್ಟಂಟ್ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಸ್ಥಳವು ಮಂಜೂರಾದ್ದರಿಂದ ಆ ಸ್ಥಳಕ್ಕೆ ಮೊದಲು ಶ್ರೀ ಇಂದಾಪುರಕರ ಎಂಬ ಪದವೀಧರನನ್ನು ನೇಮಿಸಿದರು. ಆದರೆ ಜಿಲ್ಲೆಯಲ್ಲಿ ಪ್ರವಾಸ ಮಾಡುವ ಕಠಿಣ ಕೆಲಸವು ಆ ಗೃಹಸ್ಥನಿಂದ ನೀಗದಂತಾಗಲು ಮಿ. ರಸೆಲ್ ಸಾಹೇಬರು (ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು) ಕನ್ನಡಬಲ್ಲ ಮನುಷ್ಯನನ್ನು ಆ ಸ್ಥಳಕ್ಕೆ ನೇಮಿಸಬೇಕೆಂದು ಗೊತ್ತು ಮಾಡಿದರು. ಇದೇ ಸಮಯದಲ್ಲಿ ಘಾಟಕ ಹೆಡ್‌ಮಾಸ್ತರರೂ, ಡೆಪ್ಯೂಟಿ ಚೆನ್ನಬಸಪ್ಪನವರೂ ರಾಯರನ್ನು ನೇಮಿಸಬೇಕೆಂದು ರಸೆಲ್ ಸಾಹೇಬರಿಗೆ ಆಗ್ರಹದಿಂದ ವಿನಂತಿ

ಮಾಡಿದುದರಿಂದ ರಾಯರು ಆ ಕೆಲಸಕ್ಕೆ ನೇಮಿಸಲ್ಪಟ್ಟರು.

೧೮೭೬–೭೭ನೆಯ ಇಸವಿಯಲ್ಲಿ ಹಿಂದುಸ್ತಾನದ ತುಂಬ ಅತಿ ಭಯಂಕರವಾದ ಬರವು ಬಿದ್ದಿತು. ವಿಜಾಪುರ ಮೊಗಲಾಯಿ ಮೊದಲಾದ ರುಕ್ಷಪ್ರದೇಶಗಳಿಂದ ಸಾವಿರಾರು ಜನರು ಧಾರವಾಡಕ್ಕೆ ಗುಳೇಕಟ್ಟಿಕೊಂಡು ಬಂದರು. ಆದ್ದರಿಂದ ಧಾರವಾಡದಲ್ಲಿ ಒಂದು ಕ್ಷಾಮ ನಿವಾರಕ ಸಂಘವನ್ನು ಮಾಡಿ ಕೂಳಿಲ್ಲದ ಜನರಿಗೆ ದಿನಾಲು ರೊಟ್ಟಿ ಹುಳಿಗಳನ್ನು ಕೊಡುತ್ತಿದ್ದರು. ರಾಯರೂ ಅವರ ಸ್ನೇಹಿತರಾದ ಶ್ರೀ ಜೋಶಿ (ದಿವಾಣ) ಕೃಷ್ಣರಾಯರೂ ಈ ಸಂಘದ ಸೆಕ್ರೆಟರಿಗಳಾದರು. ಹೈಸ್ಕೂಲ ಹೆಡ್‌ಮಾಸ್ತರರಾದ ಶ್ರೀ ಘಾಟಕ ವಿಠ್ಠಲರಾಯರು ಈ ಸಂಘದ ಅಧ್ಯಕ್ಷರಿದ್ದರು.

ಕೆಲಸದ ಪದ್ಧತಿ

ರಾಯರಿಗೆ ಜನರ ಪರಿಚಯ ಬಹಳ. ಒಮ್ಮೆ ಒಬ್ಬನನ್ನು ನೋಡಿದರೆಂದರೆ ಎಷ್ಟು ವರುಷಗಳಾದರೂ ಎಷ್ಟು ಅಂತರದಲ್ಲಿದ್ದರೂ ಅವನ ಗುರುತು ತಪ್ಪದೆ ಹಿಡಿಯುವರು. ಇದಲ್ಲದೆ ರಾಯರು ಶಿಕ್ಷಕನ ಮೋರೆಯನ್ನು ನೋಡಿದಕೂಡಲೇ ಅವನು ಮನಃಪೂರ್ವಕವಾಗಿ ದುಡಿಯುವನೋ ಇಲ್ಲವೋ ಎಂಬದನ್ನು ಹೇಳುವರು ಹೀಗಾಗಿ ಶಿಕ್ಷಕರಿಗೆ ಒಂದು ಪ್ರಕಾರದ ಅಂಜಿಕೆಯಿತ್ತು. ಇವರ ಭೂಗೋಲ ಜ್ಞಾನವು ವಿಶೇಷ ಪ್ರಕಾರದ್ದಿತ್ತು. ಸಂದಿಮೂಲೆಗಳೊಳಗಿನ ಪ್ರಶ್ನೆಗಳನ್ನು ಕೂಡ ಕೇಳುತ್ತಿದ್ದುದರಿಂದ ಧಾರವಾಡದ ಪ್ರಸಿದ್ಧ ವರ್ತಕರಾದ ಶ್ರೀ ತೆಂಗಿನಕಾಯಿ ಚೆನ್ನಮಲ್ಲಪ್ಪನವರು ರಾಯರಿಗೆ 'ಕಾಮಶ್ಚಾಟಕಾ' ಎಂದು ಚೇಷ್ಟೆಮಾಡುತ್ತಿದ್ದರಂತೆ. ಹೀಗೆರಾಯರು ನಾಲ್ಕು ವರ್ಷಗಳವರೆಗೆ ಅಸಿ. ಡೆಪ್ಯುಟಿಯ ಕೆಲಸಮಾಡಿ ಶಾಲೆಗಳನ್ನು ಸುಧಾರಿಸಿದರು. ಆದುದರಿಂದ ಅವರ ಮೇಲಿನ ಅಧಿಕಾರಿಗಳಾದ ಎಜ್ಯುಕೇಶನಲ್ ಇನ್ಸ್‌ಪೆಕ್ಟರರೂ ಡಾಯರೆಕ್ಟರರೂ ಇವರ ವಿಷಯದಲ್ಲಿ ಬಹಳ ಪ್ರೀತಿಯುಳ್ಳವರಾದರು.

ಮೇಲಧಿಕಾರಿಗಳ ಇಂತಹ ಸದಭಿಪ್ರಾಯಗಳಿದ್ದುದರಿಂದ ಅವರು ಮುಂದೆ ಬೇಗನೇ ಧಾರವಾಡ ಜಿಲ್ಲೆಯ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರರಾದದ್ದು ಸಹಜವೇ. ಆ ಕಾರ್ಯವನ್ನು ಅತ್ಯಂತ ಸಮರ್ಥರೀತಿಯಲ್ಲಿ ನಿರ್ವಹಿಸಿದರು. ಇವರ ವರಿಷ್ಠರು ಮೊಟ್ಟ ಮೊದಲಿನ ಡೆ. ಎ. ಇನ್ಸ್‌ಪೆಕ್ಟರರಾದ ಚೆನ್ನಬಸಪ್ಪನವರು ವಿದ್ಯೆಯಲ್ಲಿಯೂ ಕಾರ್ಯ ನಿರ್ವಹಣೆಯಲ್ಲಿಯೂ, ಕನ್ನಡದ ಅಭಿಮಾನದಲ್ಲಿಯೂ ಆದರ್ಶ ಪುರುಷರಾಗಿದ್ದರು. ಅವರು ಬೆಳಗಾಂವ ಧಾರವಾಡ ಜಿಲ್ಲೆಗಳಲ್ಲಿ ೧೮೬೭ ರಿಂದ ೧೪ ವರ್ಷ ಡೆಪ್ಯುಟಿ ಇನ್ಸ್‌ಪೆಕ್ಟರರಾಗಿದ್ದರು; ೧೮೮೧ರಲ್ಲಿ ತೀರಿಕೊಂಡರು. ಇವರ ವಿಷಯದಲ್ಲಿ ಡಾಯರೆಕ್ಟರರು ೧೮೮೦–೮೧ ಇಸವಿಯ ವಿದ್ಯಾಖಾತೆಯ ವರದಿಯಲ್ಲಿ ಬರೆದಿರುವದೇನೆಂದರೆ— ‘‘Mr. Chanbasappa in whom this department has lost much more than an honest experienced, able and zealous Inspecter died on 4th January 1881”

ರೊದ್ದರಾಯರು ಅವ್ಯಾಹತವಾಗಿ ಇಪ್ಪತ್ತುವರುಷ ಧಾರವಾಡ ಜಿಲ್ಲೆಯ ಡೆ. ಎ. ಇನ್ಸ್‌ಪೆಕ್ಟರರಾಗಿದ್ದುದರಿಂದ ಶಾಲೆಗಳ ಸಂಖ್ಯೆಯು ಮೊದಲು ೧೬೭ ಇದ್ದದ್ದು ನಾಲ್ಕುಮಡಿ ಬೆಳೆಯಿತು. ಸ್ತ್ರೀಯರು ಶಿಕ್ಷಕಿಯರಾದರೆ ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ಉಂಟಾಗುವದೆಂದು ತಿಳಿದು ರಾಯರೂ ೧೮೭೨ರಲ್ಲಿ ಧಾರವಾಡದ ಕಲೆಕ್ಟರರಾದ ಮ್ಯೂರ ಇವರ ಸಹಾಯದಿಂದ ಶಿಕ್ಷಕಿಯರನ್ನು ಸಿದ್ಧಪಡಿಸುವದಕ್ಕೆ 'ಫೀಮೇಲ್ ನಾರ್ಮಲ್ ಸ್ಕೂಲ್' ಎಂಬ ಸಂಸ್ಥೆಯನ್ನೂ ಪ್ರಾರಂಭಿಸಿದರು. ಸಂಸ್ಥೆಯು ಕ್ರಮದಿಂದ ವೃದ್ಧಿಯನ್ನು ಹೊಂದುತ್ತ ರಾಯರ ಪ್ರಯತ್ನದಿಂದ ೨೨ ವರ್ಷಗಳಾದ ಬಳಿಕ ಸ್ವತಂತ್ರ ಟ್ರೇನಿಂಗ್ ಕಾಲೇಜ್ ಆಯಿತು. ರಾಯರು ಈ ಅವಧಿಯಲ್ಲಿ ಡಿಸ್ಟ್ರಿಕ್ಟ್ ಲೋಕಲ್ ಬೋರ್ಡಿನ ಸಭಾಸದರಾಗಿದ್ದುದರಿಂದ ಶಾಲೆಗಳಿಗೆ ಹೊಸ ಕಟ್ಟಡಗಳನ್ನು ಕಟ್ಟಿಸುವ ಪ್ರಯತ್ನಗಳು ಜಾಗ್ರತೆಯಿಂದ ನಡೆದವು. ರೊದ್ದರಾಯರೆಂದರೆ ಪರಿಚಯವಿಲ್ಲವೆಂಬ ಯಾವ ಹಳ್ಳಿಯೂ ಧಾರವಾಡ ಜಿಲ್ಲೆಯಲ್ಲಿರಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಜನತೆಯಲ್ಲಿ ನೆಲೆಗೊಂಡ ಈ ವರ್ಚಸ್ಸೇ ಮುಂದೆ ಕಾಯದೆ ಕೌನ್ಸಿಲ್‌ನಲ್ಲಿಯೂ, ಡಿಸ್ಟ್ರಿಕ್ಟ್ ಲೋಕಲ್ ಬೋರ್ಡಿನಲ್ಲಿಯೂ ಕರ್ನಾಟಕ ಕಾಲೇಜದ ಸ್ಥಾಪನೆಯ ವಿಷಯದಲ್ಲಿಯೂ ಅವರ ಯಶಃಸಂಪಾದನೆಗೆ ಕಾರಣವಾಯಿತು.

ಟ್ರೇನಿಂಗ ಕಾಲೇಜಿನ ದಯಾಳು ಪ್ರಿನ್ಸಿಪಾಲರು

ವಿದ್ಯಾಖಾತೆಯಲ್ಲಿ ರಾಯರು ಡೆ. ಇನ್ಸ್‌ಪೆಕ್ಟರ

ರಾಗಿಯೂ ಟ್ರೇ. ಕಾಲೇಜಿನ ಪ್ರಿನ್ಸಿಪಾಲರಾಗಿಯೂ ಮಾಡಿದ ಅತ್ಯುತ್ತಮವಾದ ಕೆಲಸಕ್ಕಾಗಿ ಅವರಿಗೆ 'ರಾವ ಬಹಾದ್ದೂರ' ಪದವಿಯನ್ನು ದಯಪಾಲಿಸಬೇಕೆಂದು ಆಗಿನ ಡಾಯರೆಕ್ಟರರಾದ ಮಿ. ಜಾಯಿಲ್ಸ್‌ರವರು ಸರಕಾರಕ್ಕೆ ಬರೆದರು. ಸರಕಾರದವರು ಅದಕ್ಕೆ ಒಪ್ಪಿ ರಾಯರು ಪೆನ್‌ಶನ್ನಿನಮೇಲೆ ಹೋಗುವಮೊದಲು ಅವರಿಗೆ "ರಾವಬಹಾದ್ದೂರ" ಪದವಿಯನ್ನು ಕೊಟ್ಟರು. ಟ್ರೇ. ಕಾಲೇಜಿನ ಮೇಲೆ ರಾಯರಿಗಿದ್ದ ಅಭಿಮಾನವೂ ಪ್ರೇಮವೂ ಕೊನೆಯ ವರೆಗೆ ಸಂಪೂರ್ಣವಾಗಿದ್ದವು. ೧೯೩೨ನೆಯ ಇಸವಿಯಲ್ಲಿ ವಿದ್ಯಾಖಾತೆಯ ಡಾಯರೆಕ್ಟರರು ಆಗಿದ್ದ ಸಂಕ್ಷಿಪ್ತ ಸ್ವರೂಪದ ಟ್ರೇ. ಕಾಲೇಜನ್ನು ಕೂಡ ನಿಲ್ಲಿಸಿಬಿಡಬೇಕೆಂದು ಗೊತ್ತುಮಾಡಿದ್ದರು. ಈ ಸಂಗತಿಯು ರಾಯರಿಗೆ ತಿಳಿದ ಕೂಡಲೆ ಅವರು ಶಿಕ್ಷಣ ಮಂತ್ರಿಗಳನ್ನೂ ಗವರ್ನರರನ್ನೂ ಕಂಡು ಹೀಗೆ ಮಾಡುವದು ಶುದ್ಧ ಅನ್ಯಾಯವೆಂದು ಹೇಳಿ ಒಂದು ವಿನಂತಿ ಪತ್ರವನ್ನು ಕಳುಹಿಕೊಟ್ಟರು. ಅದರಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಟ್ರೇನಿಂಗಿನ ಅವಶ್ಯಕತೆ ಎಷ್ಟಿರುವದೆಂಬುದನ್ನು ಸಕಾರಣವಾಗಿ ವಿವರಿಸಿರುವರು. ರಾಯರ ಪ್ರಯತ್ನದಿಂದ ಸರಕಾರದವರು ಡಾಯರೆಕ್ಟರರ ವಿಚಾರವನ್ನು ಒಪ್ಪದೆ ಟ್ರೇನಿಂಗ ಸ್ಕೂಲನ್ನು ಮೊದಲಿನಂತೆ ನಡೆಯಿಸಿದರು.

ಕಾಯದೆ ಕೌನ್ಸಿಲಿನ ಸಭಾಸದರು

ಕರ್ನಾಟಕದ ಅಭಿಮಾನವುಳ್ಳ ಗೃಹಸ್ಥರು ದಕ್ಷಿಣ ಭಾಗದಿಂದ ಮುಂಬಯಿ ಕೌನ್ಸಿಲಿನಲ್ಲಿ ಲೋಕಪಕ್ಷದ ಪ್ರತಿನಿಧಿಯಾಗಿ ಆರಿಸಲ್ಪಡದೆ ಇದ್ದುದರಿಂದ ರಾಯರು ಕರ್ನಾಟಕದ ಹಿತವನ್ನು ಸಾಧಿಸಲಿಕ್ಕೆ ಕೌನ್ಸಿಲಿನಲ್ಲಿ ಸೇರುವದು ಅವಶ್ಯವೆಂದು ನಿಶ್ಚಯಿಸಿ, ಕೊನೆಯ ಹೆಚ್ಚಿನ ಸಂಬಳದ ಅರ್ಧದಷ್ಟು ಪೆನ್‌ಶನ್ ಸಿಕ್ಕುವಷ್ಟು ನೌಕರಿಯ ಅವಧಿಯು ಆಗದಿದ್ದರೂ, ೧೯೦೮ನೆಯ ಇಸವಿಯ ಜುಲೈ ತಿಂಗಳಲ್ಲಿ ಕಾರ್ಯನಿವೃತ್ತರಾಗಿ ಕೂಡಲೆ ಕೌನ್ಸಿಲಿಗೆ ಹುರಿಯಾಳಾಗಿ ನಿಂತರು. ಮಿ. ದಾಜಿ ಅಬಾಜಿ ಖರೆ ಇವರು ಕೌನ್ಸಿಲಿನಲ್ಲಿ ಬಹಳ ದಿವಸ ಕೆಲಸ ಮಾಡಿದವರಾಗಿದ್ದರೂ, ಕೊಂಕಣದ ಎಲ್ಲ ಮತಗಳು ಅವರಿಗೆ ದೊರೆಯುವ ಸಂಭವವು ವಿಶೇಷವಾದುದರಿಂದಲೂ ಕೌನ್ಸಿಲಿಗೆ ಆರಿಸಿ ಬರುವದಕ್ಕೆ ರಾಯರು ವಿಶೇಷ ಪ್ರಯತ್ನವನ್ನು ಮಾಡಬೇಕಾಯಿತು. ಕನ್ನಡ ಜಿಲ್ಲೆಗಳ ಜನರು ರಾಯರ ಕರ್ನಾಟಕದ ಅಭಿಮಾನವನ್ನೂ ಸಾರ್ವಜನಿಕ ವಿಷಯಗಳ ಬಗ್ಗೆ ಅವರಿಗಿದ್ದ ಜ್ಞಾನಾನುಭವಗಳನ್ನೂ, ತಮ್ಮ ಅಭಿಪ್ರಾಯಗಳನ್ನು ನಿರ್ದಾಕ್ಷಿಣ್ಯದಿಂದ ಸರಕಾರದ ಮುಂದಿಡುವ ಅವರ ಧೈರ್ಯವನ್ನೂ ಕಂಡು ತಮ್ಮ ಮತಗಳನ್ನೆಲ್ಲ ರಾಯರಿಗೆ ಅನುಕೂಲವಾಗಿ ಕೊಟ್ಟರು. ಖರೆ ಇವರು 'ಅಜೇಯವಾದ ಕೋಟೆ' ಎಂದು ತಿಳಿದುಕೊಂಡ ಕೊಂಕಣ ಭಾಗದಲ್ಲಿಯ ಜನರು ಕೂಡ ರಾಯರ ಗಾಂಭೀರ್ಯವನ್ನೂ, ಭಾಷಣ ಮಾಡುವ ಚಾತುರ್ಯವನ್ನೂ ನೋಡಿ ರಾಯರಿಗೇ ತಮ್ಮ ಮತಗಳನ್ನು ಕೊಟ್ಟರು. ಹೀಗೆ ಬಹುಮತದಿಂದ ರಾಯರು ೧೯೦೯ನೆಯ ಇಸವಿಯ ಜುಲೈ ತಿಂಗಳಲ್ಲಿ ಆರಿಸಲ್ಪಟ್ಟರು.

ಅವರು ಸಭಾಸದರಿದ್ದಾಗ ಕೌನ್ಸಿಲಿನಲ್ಲಿ ಅನೇಕ ವಿಷಯಗಳು ಚರ್ಚೆಗೆ ತಕ್ಕೊಳ್ಳಲ್ಪಟ್ಟಿದ್ದವು. ಅವುಗಳಲ್ಲಿ ಮುಖ್ಯವಾದವುಗಳೆಂದರೆ, ಹಾಯಸ್ಕೂಲಿನ ಹೆಡ್‌ಮಾಸ್ತರರ ಸಂಬಳ, ದೇಶಭಾಷೆಗಳ ಮುಖಾಂತರ ಶಿಕ್ಷಣ, ಹಾಯಸ್ಕೂಲುಗಳಲ್ಲಿರುವ ಫೀ ದರ, ಕುಡಿಯುವ ವ್ಯಸನದ ನಿಯಂತ್ರಣ, ಜೇಲಿನಿಂದ ಬಿಡುಗಡೆ ಹೊಂದಿದ ಜನರ ಸುಧಾರಣೆ, ವತನದಾರ ಕುಲಕರಣಿಯವರ ಹಕ್ಕು, ಕಾರವಾರ–ಹುಬ್ಬಳ್ಳಿ ರೇಲ್ವೆ, ಗೋಖಲೆಯವರ ಮರಣದ ಬಗ್ಗೆ ದುಃಖ ಪ್ರದರ್ಶನ, ರೂರಲ್ ಮತ್ತು ಫುಲ್ ಪ್ರಾಯಮರಿ ಶಾಲೆಗಳು ಇವು ಆಗಿದ್ದವು.

ಸಾಹಿತ್ಯ ಸೇವೆ

ರಾಯರು ಕರ್ನಾಟಕ ವಿದ್ಯಾವರ್ಧಕ ಸಂಘದ ಆಜೀವ ಸಭಾಸದರಾಗಿಯೂ ವ್ಹಾಯಿಸ ಪ್ರೆಸಿಡೆಂಟರಾಗಿಯೂ ಸಂಘದ ಕಾರ್ಯಕ್ಕೆ ಬಹಳ ಸಹಾಯ ಮಾಡಿದ್ದಾರೆ. ೧೯೧೫ರಲ್ಲಿ ಅವರು ಮೈಸೂರಿಗೆ ಹೋಗಿ ಶ್ರೀ ಚಾಮರಾಜಮಂದಿರ (ಕರ್ನಾಟಕ ವಿದ್ಯಾವರ್ಧಕ ಸಂಘದ ಕಟ್ಟಡ) ಕ್ಕಾಗಿ ೩೦೦೦ ರೂಪಾಯಿಗಳ ಸಹಾಯ ದ್ರವ್ಯವನ್ನು ಸಂಪಾದಿಸಿಕೊಂಡು ಬಂದರು. ರಾಯರು ಹೊಸಪೇಟೆಯಲ್ಲಿ ನೆರೆದ ಸಾಹಿತ್ಯ ಸಮ್ಮೇಲನಕ್ಕೆ ಅಧ್ಯಕ್ಷರಾಗಿದ್ದರು.

ಬಳ್ಳಾರಿ ಜಿಲ್ಲೆಯಲ್ಲಿ ತೆಲುಗಿನ ಪ್ರತಿಷ್ಠೆ, ಉತ್ತರ ಕರ್ನಾಟಕದಲ್ಲಿ ಮರಾಠಿಯ ಪ್ರತಿಷ್ಠೆ ಬೆಳೆಯುತ್ತಿದ್ದುದನ್ನು ಉಲ್ಲೇಖಿಸಿ ಅವರು ಆಗ ಮೈಸೂರಿನ ಸ್ಥಿತಿಯ ಬಗೆಗೆ ಹೀಗೆ ಹೇಳಿದ್ದಾರೆ:

"ಇನ್ನು ಸ್ವಚ್ಛ ಕರ್ನಾಟಕರೆಂದೂ ಅಚ್ಚಗನ್ನಡಿಗರೆಂದೂ ಸಗೌರವ ಅಭಿಮಾನ ತಾಳುವ ಮೈಸೂರವರ

ತಿ ಏನಾಗಿರುವದೆಂಬದನ್ನು ನಾವು ವಿಚಾರಿಸಿ ನೋಡುವ. ಅರಸಿನಿಂದ ಆಳಿನವರೆಗೆ ಎಲ್ಲರೂ ಒಂದೇ ಕನ್ನಡ ತಾಯಿಯ ಮಕ್ಕಳಾಗಿರುವರು. ಆದರೂ ಅಲ್ಲಿಯ ವೈಚಿತ್ರ್ಯವನ್ನು ಏನೆಂದು ಬಣ್ಣಿಸಬೇಕು? ಈಗಿನ ಮಹಾರಾಜರ ಪಿತಾಮಹರಾದ ಶ್ರೀ ಕೃಷ್ಣರಾಜ ಒಡೆಯರ ಕಾಲದಲ್ಲಿ, ಸುಮಾರು ೫೦ ವರುಷಗಳು ಬ್ರಿಟಿಶ ಅಧಿಕಾರಿಗಳ ಆಡಳಿತೆಗೆ ಮೈಸೂರು ಈಡಾಗಬೇಕಾದುದರಿಂದ, ಇಂಗ್ಲಿಷ ಭಾಷೆಯು ತನ್ನ ಅಖಂಡ ವರ್ಚಸ್ಸನ್ನು ಅಲ್ಲಿ ಒಂದೇಸವನೇ ಹೆಚ್ಚಿಸುತ್ತಲೇ ಇರುವದು. ಸಾಮಾನ್ಯವಾಗಿ ಅತ್ತ ಕಡೆಯ ಹೆಣ್ಣು ಮಕ್ಕಳು ಮಾತಾಡತಕ್ಕ ಕನ್ನಡದಲ್ಲಿ ೧೦ರೊಳಗೆ ೫-೬ ಇಂಗ್ಲಿಷ ಶಬ್ದಗಳು ಮಿಶ್ರವಾಗಿರುತ್ತವೆ. ಇದರಿಂದ ನಾವು ಅರಿತುಕೊಳ್ಳಬೇಕಾದ ಸಂಗತಿ ಏನೆಂದರೆ ಪರ ಭಾಷೆಗಳ ಅನಿಯಂತ್ರಿತ ಪ್ರತಿಷ್ಠೆಯು ಬೆಳೆಯುತ್ತ ಹೋದ ಹಾಗೆ ಅವು ನಮ್ಮ ಜನ್ಮ ಭಾಷೆಯನ್ನು ನಮ್ಮ ಅಡಿಗೆಯ ಮನೆಯಿಂದಲೂ ದೇವರ ಕೋಣೆಯಿಂದಲೂ ಹೊರದೂಡಹತ್ತುವವು. ಇಂಗ್ಲಿಷ ಭಾಷೆಯ ಅಧ್ಯಯನವೇ ಲೋಕ ಶಿಕ್ಷಣದ ಜೀವಕಳೆಯೆಂಬ ತಿಳಿವಳಿಕೆಯು ಎಲ್ಲ ಕಡೆಗೂ ದೃಢಮೂಲವಾಗಿ ನೆಲೆಗೊಂಡುದುದರಿಂದ ಮೈಸೂರ ಸರಕಾರದ ಶಿಕ್ಷಣ ಪದ್ಧತಿಯಾದರೂ ಅದೇ ಧೋರಣವನ್ನು ಅನುಸರಿಸಿ ಸಾಗಿತು. ಹೀಗೆ ಸುಮಾರು ಅರ್ಧ ಶತಮಾನದವರೆಗೆ ಪರಕೀಯ ಭಾಷೆಯ ವರ್ಚಸ್ಸು ಮೈಸೂರ ಜನರ ಮೇಲೆ ಅವ್ಯಾಹತವಾಗಿ ನೆಲೆಗೊಂಡ ಮೂಲಕ, ಮೊನ್ನೆ ಮೊನ್ನೆ, ಮೈಸೂರಿಗೆ ಸ್ವತಂತ್ರವಾದ ವಿದ್ಯಾಲಯವನ್ನು ಏರ್ಪಡಿಸಿಕೊಂಡದ್ದು ಕನ್ನಡ ಭಾಷೆಯ ಅಭಿವೃದ್ಧಿಗೆ ಉಪಯುಕ್ತವಾಗಿದೆ.'' ವಿದ್ವಾಂಸರನ್ನು ಕಂಡರೆ ರಾಯರಿಗೆ ಪ್ರೀತಿ ಬಹಳ. ವಿದ್ಯಾರ್ಥಿಗಳು ವಿದ್ಯಾಭ್ಯಾಸಕ್ಕಾಗಿ ನೆರವನ್ನು ಬೇಡ ಬಂದರೆ ಇವರು ಬಹಳ ಸಂತೋಷದಿಂದ ನೆರವಾಗುವರು. ಧಾರವಾಡ ಟ್ರೇನಿಂಗ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಮ. ಪ್ರ. ಪೂಜಾರ ಇವರು ಮೈಸೂರು ಕನ್ನಡ ಪಂಡಿತ ಪರೀಕ್ಷೆಯ ಕ್ಲಾಸಿಗೆ ಹೋಗಬೇಕೆಂದು ಅಪೇಕ್ಷಿಸಿ ರಾಯರ ಸಹಾಯವನ್ನು ಬೇಡಲು ರಾಯರು ಮೈಸೂರಿನ ವಿದ್ಯಾಖಾತೆಯ ಆಗಿನ ಡಾಯರೆಕ್ಟರರೂ ತಮ್ಮ ಮಿತ್ರರೂ ಆದ ಮಿ. ಎಚ್. ಜೆ. ಭಾಭಾ ಎಂಬ ಸದ್ಗೃಹಸ್ಥರಿಗೆ ಪತ್ರ ಬರೆದು ಅವರನ್ನು ಪಂಡಿತ ತರಗತಿಯ ಎರಡನೆಯ ವರ್ಷದ ಕ್ಲಾಸಿನಲ್ಲಿ ಸೇರಿಸಿಕೊಳ್ಳುವಂತೆ ಮಾಡಿದರು.

ಈ ಲೇಖವು ಶ್ರೀ ಎಚ್. ಜಿ. ದೇಶಪಾಂಡೆಯವರು ಪ್ರಸಿದ್ಧಿಸಿದ ಚರಿತ್ರೆಯ ಅತಿ ಸಂಕ್ಷಿಪ್ತರೂಪವಾಗಿದೆ. ಅದಕ್ಕೆ ಮುನ್ನುಡಿಯನ್ನು ಬರೆದ ಪ್ರೊ. ತಾಕಾಖಾವ್‌ದವರು ಶ್ರೀ ದೊಡ್ಡ ಶ್ರೀನಿವಾಸರಾಯರ ವಿಷಯವಾಗಿ ಹೀಗೆ ವರ್ಣಿಸಿದ್ದಾರೆ:—

"Think of his toilsome upward march from a position of extreme poverty and obscurity to that of the leader and spokesman of his province. Think of him as a conscientious schoolmaster, schooled in a system of rigid discipline, which he sought to impress upon all who came within the range of his Orbit. Think of him as the first Kannadiga representative in the Legislative Council of this Presidency. Think of him as the first elected President of the Dharwar Municipality and the first non-official President of the District Local Board of Dharwar Think of him as the hero of a hundred battles..........."

ದೊಡ್ಡರಾಯರು ತಮ್ಮ ಆಯುಷ್ಯವನ್ನೆಲ್ಲ ಕರ್ನಾಟಕ ಮಾತೆಯ ಸೇವೆಯಲ್ಲಿ ಕಳೆದು ೭೯ ವರ್ಷ ವಯಸ್ಸಿನವರಾಗಿ ೧೯೩೯ನೆಯ ಇಸವಿಯ ಆಗಸ್ಟ್ ತಿಂಗಳ ೪ನೆಯ ತಾರೀಖಿನ ದಿವಸ ಮಾನವ ಲೀಲೆಯನ್ನು ಮುಗಿಸಿದರು.

ಶ್ರೀ ಹೊನ್ನಾಪುರಮಠ ಗದಿಗೆಯ್ಯನವರು ಬರೆದು ಕಳುಹಿಸಿದ ತಮ್ಮ ನೆನಪುಗಳ ಕೊನೆಗೆ ರಾಯರ ಗುಣಗಳನ್ನು ವರ್ಣಿಸುವಾಗ ಹೀಗೆ ಬರೆದಿದ್ದಾರೆ:— " ದಿ. ಬ. ರವರು ಆರಂಭಿಸಿದ ಕೆಲಸವನ್ನು ಎಂದೂ ಬಿಡುತ್ತಿದ್ದಿಲ್ಲ. ಅವರು ನಿಗರ್ವಿಗಳೂ, ನಿಷ್ಪಕ್ಷಪಾತಿಗಳೂ, ನಿಷ್ಕಪಟಿಗಳೂ, ಗುಣಜ್ಞರೂ ಆಗಿದ್ದರು. ಇವರು ಮಾತಾಡುವಾಗ ಕಠೋರರೆಂದು ಕಾಣುತ್ತಿದ್ದರು. ಆದರೆ ಇವರ ಅಂತಃಕರಣವು ಬೆಣ್ಣೆಯಂತೆ ಮೃದುವಾಗಿತ್ತು. ಇವರು ಅನೇಕ ಗುಣಗಳಿಂದ ಅನುಕರಣೀಯರಾಗಿದ್ದರು. ಇವರು ಬಡವರಾಗಿ ಹುಟ್ಟಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಮಾತ್ರ

ಪಾಸಾಗಿದ್ದರೂ ತಮ್ಮ ಉದ್ಯೋಗ ಸಾಹಸಾದಿಗಳ ಬಲದಿಂದ ದೊಡ್ಡ ಯೋಗ್ಯತೆಯನ್ನು ಪಡೆದು ಅನೇಕರಿಗೆ ಅನೇಕರೀತಿಯಿಂದ ಉಪಕಾರಮಾಡಿ ಕೀರ್ತಿಯನ್ನು ಸಂಪಾದಿಸಿದರು. ಇವರ ಕೀರ್ತಿಯು ಚಿರಸ್ಮರಣೀಯವಾಗಿರುವದೆಂಬುದರಲ್ಲಿ ಸಂಶಯವಿಲ್ಲ. ಇಂತಹ ಮಹನೀಯರ ಚರಿತ್ರೆಯು ಯಾವಾಗಲೂ ಕರ್ನಾಟಕದ ತರುಣರಿಗೆ ಆದರ್ಶಪ್ರಾಯವಾಗಿದೆ. ”

ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲ
ಶ್ರೀ ವಿನಾಯಕರಾವ ಜೋಶಿಯವರು

ಲೇಖಕರು : **ಶಂ. ವಿ. ಜೋಶಿ**

ಟ್ರೇನಿಂಗ ಕಾಲೇಜದ ಶತಸಾಂವತ್ಸರಿಕೋತ್ಸವ ಸಮಿತಿಯವರು ನನ್ನ ತಂದೆಯವರ ಬಗೆಗೆ ಒಂದು ಲೇಖವನ್ನು ಕಳಿಸಬೇಕೆಂದು ನನ್ನನ್ನು ಕೇಳಿದ್ದಾರೆ. ಅದಕ್ಕಾಗಿ ನಾನು ಅವರಿಗೆ ತುಂಬ ಉಪಕೃತನಾಗಿದ್ದೇನೆ. ಆದರೆ ಈ ವಿಷಯಕ್ಕೆ ನನ್ನ ಸ್ವಂತ ಅನುಭವವು ಸಾಲದು ಯಾಕಂದರೆ ಆಗ ನಾನು ತೀರ ಚಿಕ್ಕವನಾಗಿದ್ದೆ. ಆದರೂ ಆ ಕಾಲದಲ್ಲಿದ್ದ ಹಿರಿಯರು, ಶಿಕ್ಷಕರು, ಹಾಗು ವಿದ್ಯಾರ್ಥಿಗಳಿಂದ ನಾನು ಕೇಳಿ ತಿಳಿದ ವಿಷಯಗಳನ್ನು ಸಂಗ್ರಹಿಸಿ ಇಲ್ಲಿ ಬರೆದಿರುತ್ತೇನೆ.

ಸಾಮಾನ್ಯವಾಗಿ ವಿನಾಯಕರಾಯರು ಪ್ರಿನ್ಸಿಪಾಲರಾಗಿದ್ದ ಕಾಲವು ಟ್ರೇನಿಂಗ ಕಾಲೇಜದ ಉತ್ಕರ್ಷದ ಕಾಲವಾಗಿತ್ತು. ಹೊಸ ಹೊಸ ಕಟ್ಟಡಗಳು ಆಗ ಕಟ್ಟಲ್ಪಟ್ಟವು. ವಿದ್ಯಾರ್ಥಿ ಶಿಕ್ಷಕರ ಸಂಖ್ಯೆ ಹೆಚ್ಚಿತು. ಶಿಕ್ಷಕರ ಸಂಬಳದ ಪ್ರಮಾಣವೂ ಬೆಳೆಯಿತು; ತನ್ಮೂಲಕ ಶಿಕ್ಷಕ ವೃತ್ತಿಗೆ ಹೆಚ್ಚು ಜನರು ಆಕರ್ಷಿತರಾದ್ದರಿಂದ ಟ್ರೇನಿಂಗ ಕಾಲೇಜದ ಮಹತ್ವವೂ ಹೆಚ್ಚಿತು. ಶಿಕ್ಷಕ ವಿದ್ಯಾರ್ಥಿಗಳಿಗೆ ಪ್ರವಾಸ ಸೌಕರ್ಯವನ್ನು ಒದಗಿಸಿ ಕೊಟ್ಟು ಅವರ ಜ್ಞಾನ ಭಾಂಡಾರವನ್ನು ಹೆಚ್ಚಿಸುವುದಕ್ಕೆ ಸರಕಾರವು ನೆರವಾಯಿತು. ಟ್ರೇನಿಂಗ ಕಾಲೇಜದಲ್ಲಿ ಶಿಕ್ಷಣೋಪಕರಣಗಳ ಪ್ರದರ್ಶನವನ್ನು ಏರ್ಪಡಿಸಿ ಶಿಕ್ಷಕರಿಗೆ ತಮ್ಮ ವ್ಯವಸಾಯದಲ್ಲಿ ಆಸ್ಥೆ ಉತ್ಸಾಹಗಳನ್ನು ಹೆಚ್ಚಿಸಲಾಯಿತು. ಕಾಲೇಜದಲ್ಲೊಂದು ವಸ್ತುಸಂಗ್ರಹಾಲಯವನ್ನು ಏರ್ಪಡಿಸಲಾಯಿತು. ಈ ಎಲ್ಲ ಸಂಗತಿಗಳ ಬಗೆಗೆ ಕಾಲೇಜದ ರಿಕಾರ್ಡಿನಲ್ಲಿ ತಕ್ಕಷ್ಟು ಆಧಾರಗಳು ದೊರೆಯಬಹುದು.

ರಾಯರು ೧೯೦೯ರಿಂದ ಸುಮಾರು ೭ ವರ್ಷಗಳ ಕಾಲ ಪ್ರಿನ್ಸಿಪಾಲರಾಗಿದ್ದರು. ಈ ಅವಧಿಯಲ್ಲಿ ಅವರು ಕಾಲೇಜದಲ್ಲಿ ಹಲವು ಸುಧಾರಣೆಗಳನ್ನು ಮಾಡಿದರು. ೧೯೧೧ರ ಆರಂಭದಲ್ಲಿ ಅಲಹಾಬಾದದಲ್ಲಿ ದೊಡ್ಡದೊಂದು ಪ್ರದರ್ಶನವು ನಡೆಯಿತು. ಆ ಪ್ರದರ್ಶನಕ್ಕೆ ಕಾಲೇಜದ ೪೦–೫೦ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಅಲ್ಲಿ ಸಂಗ್ರಹಿತವಾದ ಶಿಕ್ಷಣೋಪಕರಣಗಳನ್ನು ವಿದ್ಯಾರ್ಥಿ ಶಿಕ್ಷಕರಿಗೆ ತೋರಿಸಿಕೊಂಡು ಬಂದರು. ದಿಲ್ಲಿ, ಆಗ್ರಾ ಮುಂತಾದ ಐತಿಹಾಸಿಕ ಸ್ಥಳಗಳನ್ನು ಕಾಶಿ, ಗಯಾ ಮುಂತಾದ ಯಾತ್ರಾ ಸ್ಥಳಗಳನ್ನು ಸಂದರ್ಶಿಸಿ ಬಂದ ನಂತರ ಕಾಲೇಜದಲ್ಲಿ ಒಂದು ಶಿಕ್ಷಣೋಪಕರಣಗಳ ಪ್ರದರ್ಶನವನ್ನು ಏರ್ಪಡಿಸಿ ಶಿಕ್ಷಕರಿಗೆ ತಮ್ಮ ಕಾರ್ಯದಲ್ಲಿ ತುಂಬ ಉತ್ಸಾಹವನ್ನು ತುಂಬಿದರು. ಮತ್ತು ಕಾಲೇಜದಲ್ಲಿ ಶಿಕ್ಷಣೋಪಕರಣಗಳ ವಸ್ತು ಸಂಗ್ರಹಾಲಯವೊಂದನ್ನು ಕಾಯಂ ಆಗಿ ಇಡುವ ಯೋಜನೆಯನ್ನು ಮಾಡಿದರು.

ವಿನಾಯಕರಾಯರ ಆಳಿಕೆಯಲ್ಲಿ ಕಾಲೇಜವು ಶಿಸ್ತು ವ್ಯವಸ್ಥೆಗಳ ಪ್ರತೀಕವಾಗಿತ್ತು. ವಿದ್ಯಾರ್ಥಿ ಶಿಕ್ಷಕರು ತಮ್ಮ ಯಾವತ್ತೂ ದೈನಂದಿನ ಕಾರ್ಯಕಲಾಪಗಳನ್ನು ವ್ಯವಸ್ಥಿತವಾಗಿ ನಡೆಯಿಸುವರೆಂಬದನ್ನು ಪ್ರಿನ್ಸಿಪಾಲರು ಸ್ವತಃ ನೋಡುತ್ತಿದ್ದರು. ಕಾಲೇಜದ ಆವಾರದಲ್ಲಿ ಎಲ್ಲಿಯೂ ಕಸ ಕಡ್ಡಿಗಳು ಸಂಗ್ರಹವಾಗುವಂತಿಲ್ಲ. ವಿದ್ಯಾರ್ಥಿಗಳ ವಸತಿಗೃಹದ ಯಾವ ಭಾಗದಲ್ಲಿ ಒಂದು ಚುಟ್ಟದ ಕೊರೆಯು ರಾಯರ ಕಣ್ಣಿಗೆ ಬೀಳಕೂಡದು. ವಿದ್ಯಾರ್ಥಿಗಳು ಕ್ಲಾಸಿಗೆ ಹೋಗುವದು ಬರುವದು, ಊಟ ಉಣಿಸು, ಅಭ್ಯಾಸ ಸಿದ್ಧೆ ಇವಕ್ಕೆಲ್ಲ ತಕ್ಕ ಕಾಲಾವಧಿ ಶಿಸ್ತು ವ್ಯವಸ್ಥೆ ಇವು ಗೊತ್ತು ಮಾಡಲ್ಪಟ್ಟಿದ್ದವು. ಹಗಲು ಕ್ಲಾಸು ತಪ್ಪಿಸಿಯಾಗಲಿ ಇಲ್ಲವೆ ಸೂಟಿಯ ದಿನಗಳಲ್ಲಿ

ಯಾಗಲಿ ವಿದ್ಯಾರ್ಥಿಗಳು ಕೋಣೆಯಲ್ಲಿ ಮಲಗಲು ಸಾಧ್ಯವಿದ್ದಿಲ್ಲ. ಹೊಲಸು ಬಟ್ಟೆಗಳನ್ನು ಧರಿಸಿ ಕ್ಲಾಸಿಗೆ ಹೋಗುವ ವಿದ್ಯಾರ್ಥಿಗಳನ್ನು ಕಂಡರೆ ರಾಯರಿಗೆ ಬಲು ಕೋಪ.

ರಾಯರು ಸ್ವತಃ ಸಮಯ ನಿಷ್ಠರು, ಉಡಿಗೆ ತೊಡಿಗೆಗಳು ತೀರ ಸಾದಾ; ಬಿಳಿಯ ಧೋತರ, ಕೋಟು, ರುಮಾಲು, ಬಿಳಿಯ ಶಲ್ಲೆ, ಇವಿಷ್ಟೇ ಅವರ ಉಡುಪುಗಳು ಕಾಲೇಜದ ಕ್ಲಾಸಿನ ಗಂಟೆಯಾಗುವ ಮೊದಲೇ ರಾಯರು ಊಟ ಮುಗಿಸಿ ಬಾಯೊಳಗೆ ಅಡಿಕೆ ಯಾಲಕ್ಕಿ ಲವಂಗಗಳನ್ನು ಹಾಕಿಕೊಂಡು ತಮ್ಮ ಕಚೇರಿಯ ಕೋಣೆಯಲ್ಲಿ ಹಾಜರಿರುತ್ತಿದ್ದರು. ಅವರ ಕೋಣೆಯ ಎದುರಿಗೆ ಮೇಜಿನ ಮೇಲೆ ಶಿಕ್ಷಕರ ಹಾಜರಿ. ಶಿಕ್ಷಕರು ಅಲ್ಲಿ ಬಂದು ಸಹಿ ಮಾಡಿ, ತಾವು ಬಂದ ವೇಳೆಯನ್ನು ಹಾಜರಿಯಲ್ಲಿ ಕಾಣಿಸಬೇಕು. ಕಡೆಯ ಗಂಟೆ ಆದ ಕೂಡಲೆ ಶಿಪಾಯಿಯು ಆ ಹಾಜರಿಯನ್ನು ಒಯ್ದು ರಾಯರ ಸಹಿ ಮಾಡಿಸಬೇಕು. ತಡಮಾಡಿ ಬಂದ ಶಿಕ್ಷಕರು ರಾಯರ ಎದುರಿಗೆ ಬರದೆ ಗತ್ಯಂತರವೇ ಇಲ್ಲ. ಯಾರಾದರೂ ಶಿಕ್ಷಕರು ರಜೆಯ ಮೇಲೆ ಹೋಗುವದಿದ್ದರೆ ಮುನ್ನಾದಿನವೇ ರಜೆ ಪಡೆದುಕೊಳ್ಳಬೇಕು; ಮತ್ತು ಅಂದೇ ಅವರ ಆ ದಿನದ ಕೆಲಸದ ವ್ಯವಸ್ಥೆ ಗೊತ್ತಾಗಬೇಕು. ಏನಾದರೂ ಒಂದು ಆಕಸ್ಮಿಕ ಘಟನೆಯಿಂದ ಗೈರಹಾಜರ ಆಗಲೇ ಬೇಕಾದ, ಇಲ್ಲವೆ ತಡಮಾಡಿ ಬರಬೇಕಾದ ಶಿಕ್ಷಕರ ಹೇಳಿಕೆಯನ್ನು ಸಮಾಧಾನದಿಂದ ಕೇಳಿಕೊಂಡು ಅದು ಯೋಗ್ಯವಿದ್ದರೆ ಸಹಾನುಭೂತಿಪರ ಮಾತಾಡಿ ಕಳಿಸುವರು. ಅವರ ಹೇಳಿಕೆ ಅಯೋಗ್ಯವೆನಿಸಿದರೆ ಮೌನ ಒದರಾಟ ಚೀರಾಟ ಯಾವದೂ ಇಲ್ಲ. ಇದು ರಾಯರು ಸಿಟ್ಟಿಗೆದ್ದಿರುವ ಗುರುತು. ರಾಯರು ನಿರ್ದಯ ಸ್ವಭಾವದವರಲ್ಲ. ದಯಾವಂತರೆಂದು ತಮ್ಮ ಕರ್ತವ್ಯದಲ್ಲಿ ಚ್ಯುತಿ ತರುವ ಶಿಕ್ಷಕರ ಅಥವಾ ಇತರ ನೌಕರಜನರ ಬಗೆಗೆ ಅವರು ಅಯೋಗ್ಯ ಸಹಾನುಭೂತಿಯನ್ನು ತೋರಿಸುವವರಲ್ಲ. ಮಿತಿಮೀರಿದ ಕ್ಷಮೆ ತಾಳ್ಮೆಗಳನ್ನು ತೋರಿಸುವ ಅಧಿಕಾರಿಯನ್ನು ಅವು ಅನರ್ಹತೆಯ ಮಟ್ಟಕ್ಕೆ ಮುಟ್ಟಿಸುವವು ಎಂದು ರಾಯರು ಆಗಾಗ ಅನ್ನುತ್ತಿದ್ದರು.

ರಾಯರು ಎರಡನೆಯ ಮತ್ತು ಮೂರನೆಯ ವರ್ಷಗಳ.ವಿದ್ಯಾರ್ಥಿಗಳಿಗೆ ‘ಮಾನಸ ಶಾಸ್ತ್ರ’ವನ್ನು ಕಲಿಸುತ್ತಿದ್ದರು. ವಾರದಲ್ಲಿ ೧೦–೧೨ ಅವಧಿ (Period)ಗಳಷ್ಟು ಅವರು ಕಲಿಸಬೇಕಾಗುತ್ತಿತ್ತು. ಅವರು ವರ್ಗದ ಕೋಣೆಯ ಎದುರಿಗೆ ಇದ್ದೇ ಇರುವರು. ಬೇರೆ ಕೆಲವರು ಶಿಕ್ಷಕರು ಕಾರ್ಯವಸರದಲ್ಲಿದ್ದಾಗ ತಾವು ಹೋಗಬೇಕಾದ ವರ್ಗಕ್ಕೆ ಹೋಗಲು ತಡವಾದರೆ ಕ್ಲಾಸ ಸೆಕ್ರೆಟರಿಯು ಅವರಿದ್ದಲ್ಲಿಗೆ ಹೋಗಿ ಸೂಚನೆ ಕೊಡುವ ಪರಿಪಾಠವಿತ್ತು. ಕಲಿಸಬೇಕಾದ ವಿಷಯಗಳ ಟಿಪ್ಪಣಿ ಸಹಿತ ಬಂದು, ವಿವರಿಸತಕ್ಕದ್ದನ್ನೆಲ್ಲ ವಿವರಿಸಿ ವಿದ್ಯಾರ್ಥಿಗಳು ಟಿಪ್ಪಣಿ ಮಾಡಿಕೊಳ್ಳುವ ಅವಶ್ಯಕತೆಯಿದ್ದಾಗ ನಿಂತು ಸಾವಕಾಶವಾಗಿ ಮಾತಾಡಿ ಬರೆದು ಕೊಳ್ಳಲು ಅನುಕೂಲತೆ ಮಾಡಿಕೊಳ್ಳುತ್ತಿದ್ದರು. ತಮಗೆ ಕೊಟ್ಟ ಪರೀಕ್ಷೆಯ ಉತ್ತರದ ಕಾಗದಗಳನ್ನಂತೂ ಅತ್ಯಂತ ಜಾಗರೂಕತೆಯಿಂದ ಓದಿ ಗುಣಗಳನ್ನು ಕೊಡುವರು. ಒಂದು ಗುಣ ಕಡಿಮೆಯಾದರೆ ನಾಪಾಸು ಎಂದು ಪರಿಣಾಮ ಸಾರುವ ನಾವು ಗುಣಗಳನ್ನೇ ಕೊಡುವಾಗ ಅಲಕ್ಷ್ಯ ಮಾಡಿದರೆ ಹೇಗೆ ಎಂದು ಕೇಳುತ್ತಿದ್ದರು. ರಾಯರು ಗುಣಕೊಡುವ ವಿಷಯದಲ್ಲಿ ಇಷ್ಟು ಕಟ್ಟು ನಿಟ್ಟುಗಳನ್ನು ಇಟ್ಟುಕೊಂಡಿದ್ದರು.

ಮಾದರಿಯ ಪಾಠಗಳು, ಮಹತ್ವದ ಟೀಕಾ ಪಾಠಗಳು, ಬೋರ್ಡಿಂಗಿನ ಸಭೆಗಳು – ಇದಕ್ಕೆಲ್ಲ ರಾಯರು ಬಂದೇ ಬರುವರು. ಆದರೆ ಈ ಯಾವ ಕೆಲಸಕ್ಕೂ ರಾಯರು ತಡಮಾಡಿ ಬಂದ ಅಥವಾ ಅವರಿಗೆ ಪೂರ್ವ ಸೂಚನೆ ಕೊಟ್ಟಸಂದರ್ಭಗಳೇ ಇರುತ್ತಿರಲಿಲ್ಲ. ರಾಯರು ಇಷ್ಟು ಸಮಯ ನಿಷ್ಠರು !

ಸರಕಾರಿ ಸಿಪಾಯಿಗಳನ್ನು ತಮ್ಮ ಖಾಸಗಿ ಕೆಲಸಕ್ಕೆ ಉಪಯೋಗಿಸಿಕೊಳ್ಳಲು ರಾಯರು ಒಪ್ಪರು. ರಾಯರ ಮನೆಯ ಕೆಲಸಕ್ಕಾಗಿ ಯಾವಾಗಲೂ ಒಬ್ಬ ಆಳು ಇರುತ್ತಿದ್ದ. ಕಚೇರಿಯ ಕೆಲಸದ ಹೊರ್ತು ಬೇರೆ ಯಾವ ಕೆಲಸಕ್ಕೂ ರಾಯರು ಕಾಲೇಜದ ಸಿಪಾಯರನ್ನು ಉಪಯೋಗಿಸುತ್ತಿರಲಿಲ್ಲ.

ಬುದ್ಧಿವಂತರಾದ ಮತ್ತು ಕರ್ತವ್ಯನಿಷ್ಠ ವಿದ್ಯಾರ್ಥಿಗಳ ಬಗೆಗೆ ರಾಯರ ಅಭಿಮಾನ ಬಹಳ. ಪ್ರೀತಿ ವಿಶೇಷ. ಅವರು ನೌಕರಿಯ ಮೇಲೆ ಹೋದ ತರುವಾಯವೂ ಕೂಡ ಆ ಪ್ರೀತಿ ಅಭಿಮಾನಗಳು ಕಡಿಮೆ ಆಗುತ್ತಿರಲಿಲ್ಲ. ಅವರಿಗೆ ನೆರವಾಗಲು ರಾಯರು ಸದಾ ಸಿದ್ಧರಿರುತ್ತಿದ್ದರು. ಆದರೆ ಅಯೋಗ್ಯ ವಿದ್ಯಾರ್ಥಿಗಳ ಬಗೆಗೆ ರಾಯರು ಅಷ್ಟೇ ನಿಷ್ಠುರರಿರುತ್ತಿದ್ದರು. ಒಬ್ಬ ವಿದ್ಯಾರ್ಥಿಯು ಮೂರನೇ ವರ್ಷದ ಪರೀಕ್ಷೆಗೆ ಕುಳಿತಾಗ ಮೇಜಿನ ಒಳಗೆ ಪುಸ್ತಕ ಇಟ್ಟುಕೊಂಡು ನಕಲು ಮಾಡುವಾಗ ರಾಯರು ಕಂಡರು!

ಕೂಡಲೇ ಆ ವಿದ್ಯಾರ್ಥಿಯನ್ನು ಪರೀಕ್ಷಾ ಸ್ಥಳದಿಂದ ಹೊರ ದೂಡಿದರು. ಮುಂದಿನ ವಿಷಯಗಳಲ್ಲಿ ಪರೀಕ್ಷೆಗೆ ಕೂಡ್ರಗೊಡಲಿಲ್ಲ. ಎಜ್ಯುಕೇಶನಲ್ ಇನಸ್ಪೆಕ್ಟರರ ಅಪ್ಪಣೆ ಪಡೆದು ಮರುವರುಷ ಪರೀಕ್ಷೆಗೆ ಕುಳಿತಾಗ ಸಹ ಅವನನ್ನು ಬೇರೆ ಕೂಡ್ರಿಸಿ ಅವನಿಗೆ ನಾಚಿಕೆಯಾಗುವಂತೆ ಮಾಡಿದರು. ಅಯೋಗ್ಯರಿಗೆ ದಯತೋರಿಸುವದರಿಂದ ಅಯೋಗ್ಯ ವರ್ತನೆಗೆ ಪ್ರೋತ್ಸಾಹ ತೋರಿಸಿದಂತೆ; ಹಾವಿಗೆ ಹಾಲೆರೆದಂತೆ ಎಂದು ರಾಯರ ಅಭಿಪ್ರಾಯವಿತ್ತು.

ಬೋರ್ಡಿಂಗಿನ ವಿದ್ಯಾರ್ಥಿಗಳ ಹಣದ ವ್ಯವಸ್ಥೆಗಾಗಿಯೇ ಒಬ್ಬ ಕಾರಕೂನನಿದ್ದನು. ಅವರ ಸ್ಕಾಲರಶಿಪ್ಪು, ಊಟದ ವೆಚ್ಚ ಮುಂತಾದ ಲೆಕ್ಕಗಳನ್ನು ಅವನು ಇಡಬೇಕು. ರಾಯರು ಅವನ್ನು ತಪಾಸ ಮಾಡಿ ಸಹಿ ಮಾಡಬೇಕು. ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಹಣಕ್ಕೆ ರಾಯರು ಕೈಹಚ್ಚುವ ಹಾಗಿಲ್ಲ. ಕಾರಕೂನನು ಆ ಹಣ ತುಂಬಿದ ಚೀಲಕ್ಕೆ ಮೊಹರು ಮಾಡಿ ತಂದು ಸಾಯಂಕಾಲ ಟ್ರೆಜರಿಯಲ್ಲಿ ಇಟ್ಟು ಹೋಗಬೇಕು. ಮರುದಿನ ಕಚೇರಿಯ ಹೊತ್ತಿಗೆ ಬಂದು ಮೋಹರು ನೋಡಿ ತಿರುಗಿ ಒಯ್ಯಬೇಕು. ಆ ಚೀಲವನ್ನು ಕೂಡ ರಾಯರು ಕೈಯಿಂದ ಮುಟ್ಟರು. ಬೋರ್ಡಿಂಗಿನಲ್ಲಿ ವಿದ್ಯಾರ್ಥಿಗಳ ರಾತ್ರಿ ಊಟಕ್ಕೆ ಮೊಸರು ಕಡೆದು ಮಜ್ಜಿಗೆ ಮಾಡುವ ಪದ್ಧತಿಯಿತ್ತು. ಮತ್ತು ಆ ಬೆಣ್ಣೆಯನ್ನು ತೂಗಿ ರಾಯರ ಮನೆಗೆ ಕೊಡಬೇಕು. ಆ ಬೆಣ್ಣೆಯ ತೂಕವನ್ನು ತೊಲೆಗಳಲ್ಲಿ ಹೇಳಬೇಕು. ಶೇರು ಪಾವಶೇರುಗಳಲ್ಲಿ ಅಲ್ಲ. ೪೧ ತೊಲೆಯಾದರೆ ಅಷ್ಟೇ ಲೆಕ್ಕ ಕೊಡಬೇಕು. ವಾರಕ್ಕೊಮ್ಮೆ ಬೆಣ್ಣೆಯ ಲೆಕ್ಕವನ್ನು ವಿದ್ಯಾರ್ಥಿಯು ಒಯ್ಯಬೇಕು. ಇಷ್ಟು ಕಟ್ಟಾ ಲೆಕ್ಕಾಚಾರ ರಾಯರದು. ಹೆರವರದು ನಮಗೆ ಬೇಡ, ನಮ್ಮದನ್ನು ಹೆರವರಿಗೆ ಯಾಕೆ ಕೊಡಬೇಕು ಎಂದು ರಾಯರು ಕೇಳಬೇಕು.

'ಶಾಲಾಪತ್ರಕ'ವು ಆ ಕಾಲಕ್ಕೆ ಕೇವಲ ಪ್ರಿನ್ಸಿಪಾಲರ ಸೊತ್ತಾಗಿತ್ತು. ರಾಯರು ಶಾಲಾಪತ್ರಕದ ಆಕಾರ-ಪ್ರಕಾರಗಳಲ್ಲಿ ತುಂಬ ಸುಧಾರಣೆಗಳನ್ನು ಮಾಡಿದರು. ಈ ಮೊದಲು ಒಂದೂವರೆ ವರ್ಗಣಿ ಇದ್ದುದನ್ನು ಹೆಚ್ಚಿಸಿ ಎರಡು ರೂಪಾಯಿ ಮಾಡಿದರು, ಪುಟಗಳನ್ನು ಹೆಚ್ಚಿಸಿ ಒಳ್ಳೆಯ ಕಾಗದವನ್ನು ಉಪಯೋಗಿಸಿ ಶಿಕ್ಷಕರಿಗೆ ತಮ್ಮ ವ್ಯವಸಾಯದಲ್ಲಿ ಪ್ರಗತಿ ಪಡೆಯಲು ಅನುಕೂಲವಾಗುವಂತೆ ಲೇಖನಗಳನ್ನು ತಾವೇ ಬರೆದು, ತಜ್ಞರಿಂದ ಬರೆಯಿಸಿ ಪ್ರಕಟಿಸಬೇಕು. ಮರಾಠಿ ಮುಂತಾದ ಪರಭಾಷೆ ಪುಸ್ತಕ ಪತ್ರಿಕೆಗಳಿಂದ ಲೇಖನಗಳನ್ನು ಆರಿಸಿ ಯೋಗ್ಯ ಜನರಿಂದ ಅವನ್ನು ಭಾಷಾಂತರ ಮಾಡಿಸಿ ತಾವೇ ತಿದ್ದಿ ಪ್ರಕಟಿಸುವರು. ಕರಡು ಪತ್ರಿಕೆಗಳನ್ನು ತಿದ್ದುವ ಕೆಲಸವನ್ನು ಬೇರೆಯವರಿಗೆ ಒಪ್ಪಿಸುವದು ರಾಯರಿಗೆ ಗೊತ್ತೇ ಇಲ್ಲ. ಶಾಲಾ ಪತ್ರಕದ ಇತರ ವ್ಯವಸ್ಥೆಗಾಗಿ ಬೇರೆ ಒಬ್ಬ ಕಾರಕೂನನನ್ನು ಇಟ್ಟಿದ್ದರು. ಯಾರಾದರೂ ಶಿಕ್ಷಕರು ಒಳ್ಳೆಯ ಲೇಖನವನ್ನು ಬರೆದು ಕೊಟ್ಟರೆ ಅವರಿಗೆ ತಕ್ಕ ಸಂಭಾವನೆ ತಿಂಗಳು ಸಂಚಿಕೆ ಪ್ರಕಟವಾದಕೂಡಲೆ ಕೊಟ್ಟು ಬಿಡುವರು.

ಈ ರೀತಿಯಾಗಿ ರಾಯರು ಕಾಲೇಜದಲ್ಲಿ ಕೇವಲ ನಿರ್ಲಿಪ್ತತನದಿಂದ ವರ್ತಿಸಿ ಅದರ ಉತ್ಕರ್ಷಕ್ಕಾಗಿ ಹೆಣಗಿದರು. ಅದರ ಪ್ರತಿಫಲವಾಗಿ ಅವರಿಗೆ ಎಜ್ಯುಕೇಶನಲ್ ಇನಸ್ಪೆಕ್ಟರರ ಸ್ಥಾನ ಸಿಕ್ಕಿತು. ಒಳ್ಳೇ ಗೌರವದಿಂದ ತಾವು ಕೈಕೊಂಡ ಎಲ್ಲ ಕಾರ್ಯಗಳನ್ನು ನಿರ್ವಹಿಸುವ ಶಕ್ತಿ ಉತ್ಸಾಹ ಸದ್ಬುದ್ಧಿ ಮತ್ತು ಚಾರಿತ್ರ್ಯ ಅವರಲ್ಲಿ ಇದ್ದನೆಂದು ಆ ಕಾಲದ ಜನರು ಅವರನ್ನು ಬಾಯ್ತುಂಬ ಹೊಗಳುತ್ತಾರೆ. ನನಗೆ ಈ ಲೇಖನ ಬರೆಯುವ ಸುಯೋಗ ಒದಗಿಸಿ ಕೊಟ್ಟುದುದಕ್ಕಾಗಿ ಸಮಿತಿಯವರನ್ನು ಇನ್ನೊಮ್ಮೆ ಅಭಿನಂದಿಸುತ್ತೇನೆ.

ಅದ್ಭುತ ಸಾಹಸಿ ಶ್ರೀ ವೆಂಕಣ್ಣ ನಾಯಕರು

ಲೇಖಕರು : ಶ್ರೀ ಸ. ಪ. **ಗಾಂವಕಾರ**, ಅಂಕೋಲೆ.

'ಗೊನೆಹಳ್ಳಿ'ಯೆಂಬುದು ಉತ್ತರ ಕನ್ನಡ ಜಿಲ್ಲೆಯ ಒಂದು ಚಿಕ್ಕಹಳ್ಳಿ. ಇಂದಿಗೆ ಎಪ್ಪತ್ತೆಂಟು ವರುಷಗಳ ಹಿಂದೆ ಅದು ಕನ್ನಡ ಸುಪುತ್ರರೊಬ್ಬರಿಗೆ ಜನ್ಮ ಕೊಟ್ಟಿತು. ಆಗ ಹೊಸಬು ನಾಯಕರು ಅಲ್ಲಿಯ ಪಟೀಲರಾಗಿದ್ದರು. ಹೆಂಡತಿ ದೇವಮ್ಮ. ಈ ದಂಪತಿಗಳ ಉದರದಿಂದ ದಿವಂಗತ ವೆಂಕಣ್ಣ ನಾಯಕರು ಕ್ರಿ. ಶ. ೧–೨–೧೮೭೪ ರಂದು ಜನ್ಮಕ್ಕೆ ಬಂದರು. ಇವರೇ ನಮ್ಮ ಪ್ರಕೃತ ಚರಿತ್ರನಾಯಕರು.

ನಾಯಕರ ಪ್ರಾಥಮಿಕ ಶಿಕ್ಷಣ ಐದನೆಯ ಇಯತ್ತೆಯ ವರೆಗೆ ನೆರೆಹಳ್ಳಿಯಾದ ತೊರ್ಕೆಯ ಶಾಲೆಯಲ್ಲಿಯೂ, ಆರನೆಯ ಇಯತ್ತೆಯು ಬಂಕಿಕೊಡ್ಲ ಶಾಲೆಯಲ್ಲಿಯೂ ಸಾಗಿತು. ಯಾವಾಗಲೂ ವರ್ಗದಲ್ಲೆಲ್ಲ ಮೊದಲಿಗರಾಗಿರುತ್ತಿದ್ದ ಇವರು ೧೮೯೬ರಲ್ಲಿ ಮುಲ್ಕೀ ಪರೀಕ್ಷೆಗೆ ಕೂತು ಜಿಲ್ಹೆಗೇ ಮೊದಲಿಗರಾಗಿ ಉತ್ತೀರ್ಣರಾದರು. ಇಡೀ ಮುಂಬಯಿ ಕರ್ನಾಟಕಕ್ಕೆ ಒಂದೇ ಒಂದಾಗಿದ್ದ ಧಾರವಾಡದ ಸರಕಾರಿ ಟ್ರೇನಿಂಗ ಕಾಲೇಜಿನ ಪ್ರವೇಶ ಪರೀಕ್ಷೆಗೆ ಕೂತು ಅಲ್ಲಿಯೂ ಮೊದಲಿಗರಾಗಿ ಕಾಲೇಜನ್ನು ಸೇರಿ ೧೮೯೬ ರಿಂದ ೧೮೯೯ರ ವರೆಗೆ ಮೂರು ವರುಷ ಅಲ್ಲಿ ಶಿಕ್ಷಣ ಪಡೆದರು. ಈ ಮೂರು ವರುಷವೂ ಪ್ರತಿ ಪರೀಕ್ಷೆಯಲ್ಲಿಯೂ ಪ್ರಥಮ ಸ್ಥಾನವು ಅವರದೇ ಆಗಿತ್ತು.

ಟ್ರೇನಿಂಗ ಪಡೆದ ಬಳಿಕ ತೊರ್ಕೆ ಶಾಲೆಯ ಹೆಡ್ ಮಾಸ್ತರರಾಗಿ ಬಂದರು. ಅಲ್ಲಿಂದ ಮುಂದೆ ಹೆಗಡೆ ಶಾಲೆಗೆ ವರ್ಗಾಯಿಸಲ್ಪಟ್ಟರು. ಆದರೆ ಇಂಗ್ಲೀಷ ಕಲಿಯುವ ನಾಯಕರ ಲವಲವಿಕೆ ಅವರನ್ನು ಅಲ್ಲಿ ಇರಗೊಡಲಿಲ್ಲ. ಕಾರವಾರಕ್ಕೆ ವರ್ಗಮಾಡಿಸಿಕೊಂಡರು. ಅಲ್ಲಿ ಅವರಿಗೆ ಇಂಗ್ಲೀಷ ಅಭ್ಯಾಸಕ್ಕೆ ಅನುಕೂಲವಾಯಿತು. ಅದಾಗ ಶಿಕ್ಷಕವೃತ್ತಿಯಲ್ಲಿದ್ದು ಎರಡು ವರುಷವಾಗಿತ್ತು. ೧೯೦೧ ಡಿಶಂಬರದಲ್ಲಿ ಮ್ಯಾಟ್ರಿಕ್ ಪರೀಕ್ಷೆಗೆ ಕೂತು ಮುಂಬಯಿ ವಿಶ್ವವಿದ್ಯಾಲಯಕ್ಕೆ ಎಂಟನೆಯ ನಂಬರು ಪಡೆದು ಪಾಸಾದರು. ಅವರ ಪ್ರತಿಭೆಗೆ ಸರಿಯಾದ ದಾರಿ ದೊರೆತಂತಾಯಿತು. ೧೯೦೨ ಜನೆವರಿಯಲ್ಲಿ ಶಿಷ್ಯವೃತ್ತಿಯನ್ನು ಪಡೆದು ಎಲ್ಫಿನ್‌ಸ್ಟನ್ ಕಾಲೇಜ ಸೇರಿದರು. ಸಸ್ಯಶಾಸ್ತ್ರ ಮತ್ತು ಪ್ರಾಣಿಶಾಸ್ತ್ರಗಳನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಂಡು ಬಿ. ಎ. ಪರೀಕ್ಷೆಯಲ್ಲಿ ಮೂರು ನಂಬರದೊಳಗೆ ಬಂದು ಪಾಸಾದರು. ಹಾಗು ಎಲ್ಫಿನ್‌ಸ್ಟನ್ ಕಾಲೇಜಿನಲ್ಲಿ ದಕ್ಷಿಣಾಫೆಲೋ ಆದರು. ಈ ಎಲ್ಲ ಅವಧಿಯಲ್ಲಿಯೂ ಅವರ ಪ್ರತಿಭೆಯ ಮೇಲ್ಮೆಯು ತುಂಬ ಪ್ರಕಟವಾಗುತ್ತಿತ್ತು. ಇಷ್ಟೇ ಅಲ್ಲ, ಅವರ ಕಾಲೇಜ ಶಿಕ್ಷಣವು ಕೂಡ ಕೇವಲ ಶಿಷ್ಯವೃತ್ತಿಗಳ ಮೇಲೆಯೇ ಸಾಗಿತ್ತು. ೧೯೦೬ರ ಸಪ್ಟಂಬರದಲ್ಲಿ ಅವರು ದಕ್ಷಿಣಾಫೆಲೊ ಇರುವಾಗ ಕರ್ನಾಟಕದೊಳಗೆ ಒಕ್ಕಲುತನವನ್ನು ಅಭಿವೃದ್ಧಿಗೊಳಿಸುವ ದೆಸೆಯಿಂದ ಶೇಠ ಮಂಗಲದಾಸ ಶಿಷ್ಯವೃತ್ತಿಯನ್ನು ಪಡೆದು ಇಂಗ್ಲಂಡಿಗೆ ಹೋಗುವ ಸುಯೋಗವೂ ಕೂಡಿಬಂತು. ಆ ಕಾಲದ ಶಿಕ್ಷಣ ಖಾತೆಯ ಡೈರೆಕ್ಟರರಾದ ಶಾರ್ಪರವರು ಶ್ರೀ ನಾಯಕರ ಪ್ರತಿಭೆ, ಧೈರ್ಯ, ಸಾಹಸಗಳನ್ನು ಮೆಚ್ಚಿ ಜೊತೆಗೆ ಗವ್ಹರ್ನಮೆಂಟ ಸ್ಕಾಲರಶಿಪ್ ಕೂಡ ಕೊಡಿಸಿದರು. (G. R. R. D. No. 7664, 10-8-1906)

೧೯೦೬ರಲ್ಲಿ ಶ್ರೀ ನಾಯಕರು ಇಂಗ್ಲಂಡಿಗೆ ತೆರಳಿ ಅಲ್ಲಿ ೧೯೦೯ರ ವರೆಗೆ ಮೂರು ವರುಷಗಳ ಕಾಲ ಕೇಂಬ್ರಿಜ ವಿಶ್ವವಿದ್ಯಾಲಯದ ಸೇಂಟಜೋನ್ ಕಾಲೇಜದಲ್ಲಿ ಕಲಿತು ಅಲ್ಲಿಯ ಬಿ. ಎ. ಪದವಿಯನ್ನು ಪ್ರಶಸ್ತಿ (Distinction) ಸಹಿತವಾಗಿ ಪಡೆದರು. ಅಲ್ಲಿಯೂ ಕೂಡ ಒಂದು ಶಿಷ್ಯವೃತ್ತಿಯನ್ನು ಪಡೆದಿದ್ದರು. ಕೇಂಬ್ರಿಜ ಬಿ. ಎ.ದ ಜೊತೆಗೆ ಒಕ್ಕಲುತನ ಹಾಗು ಹೈನದ ವಿಷಯದಲ್ಲಿ ಎರಡು ಡಿಪ್ಲೊಮಾಗಳನ್ನು ಕೂಡ ಪಡೆದರು. (N. D. A. ಮತ್ತು N. D. D.)

೧೯೧೦ರ ಜನೆವರಿಯಲ್ಲಿ ಸ್ವದೇಶಕ್ಕೆ ಮರಳಿದರು. ಆಗ ಕೊಂಕಣ ವಿಭಾಗದ ಕೃಷಿಶಾಖೆಯ ಇನ್ಸಪೆಕ್ಟರರಾಗಿ ನೇಮಕ ಹೊಂದಿದರು. ೧೯೧೨ರಲ್ಲಿ ಅದೇ ಶಾಖೆಯ ಡೆ| ಡೈರೆಕ್ಟರರಾದರು. ೧೯೧೩ರಲ್ಲಿ ಈ ಕೆಲಸದ ಜೊತೆಗೆ ಸಹಕಾರಿ ಶಾಖೆಯ ಅಸಿಸ್ಟಂಟ ರಜಿಸ್ಟ್ರಾರರೆಂದು ಹೆಚ್ಚಿನ ಕೆಲಸವನ್ನೂ ಅವರಿಗೆ ಕೊಡಲಾಯಿತು. ೧೯೧೪ರಲ್ಲಿ ಕೃಷಿಶಾಖೆಯನ್ನು ಬಿಡಿಸಿ ಮುಂಬೈ ಪ್ರಾಂತದ ಸಹಕಾರಿ ಶಾಖೆಯ ನಾನ್‌ಕ್ರೆಡಿಟ್ ಸೊಸಾಯಿಟಿಯ ಸ್ಪೆಶಲ್ ಅಸಿಸ್ಟಂಟ ರಜಿಸ್ಟ್ರಾರರೆಂದು ಅವರನ್ನು ನೇಮಿಸಲಾಯಿತು. ಆ ಕೆಲಸದಲ್ಲಿ ೧೯೧೯ರ ಅಕ್ಟೋಬರ ತಿಂಗಳದ ವರೆಗೂ ಇದ್ದರು.

ಒಕ್ಕಲುತನದ ಖಾತೆಯಲ್ಲಿ ಕೆಲಸ ಮಾಡುತ್ತಿರುವಾಗ ಅನೇಕ ಬಗೆಯ ಹೊಸ ಉಪಕ್ರಮಗಳನ್ನೂ ಕೈಗೊಂಡರು. ಕೆಲವು ಜಿಲ್ಹೆಗಳಲ್ಲಿ ಪ್ರಾಯೋಗಿಕ ಫಾರ್ಮ್‌ಗಳನ್ನು ತೆರೆದರು ಉಳ್ಳೀಗಡ್ಡಿ ಮತ್ತು ನೆಲಗಡಲೆ ಇವುಗಳನ್ನು ವ್ಯಾಪಾರೀ ದೃಷ್ಟಿಯಿಂದ ಬೆಳೆಸಲು ಪ್ರೋತ್ಸಾಹವನ್ನಿತ್ತರು. ಕೃತ್ರಿಮ ಗೊಬ್ಬರವನ್ನು ಬಳಕೆಯಲ್ಲಿ ತಂದರು. ಒಕ್ಕಲಿಗರಿಗೆ ಗೊಬ್ಬರಕ್ಕಾಗಿ ಬೇಕಾಗುವ ಸೊಪ್ಪನ್ನು ಗೊತ್ತುಪಡಿಸಿದ ಬೆಟ್ಟದಿಂದ ತರಲು ಸರಕಾರದಿಂದ ಪ್ರತಿಬಂಧವಾಗದಂತೆ ಮಾಡಿಸಿಕೊಟ್ಟರು. ರೈತರಿಗೆ ಗೊಬ್ಬರಕ್ಕಾಗಿ ಬೇಕಾಗುವ ಉಪ್ಪಿನ ಮೇಲೆ ಕರತೆಗೆದುಕೊಳ್ಳದೆ ಪೂರೈಸುವದಕ್ಕೆ ಅನುವು ಮಾಡಿಕೊಟ್ಟರು. ಅದೂ ಅಲ್ಲದೆ ಮೀನು ಒಣಗಿಸುವ ಜಾಗೆಯಲ್ಲಿ (Fish curing yard) ಮೀನಿನೊಡನೆ ಹಾಳಾದ

ಉಪ್ಪನ್ನು ಕೂಡಿಸಿಡುವಂತೆ ಮಾಡಿ ಅದನ್ನು ರೈತರಿಗೆ ಉಪಯೋಗಕ್ಕಾಗಿ ಕೊಡುವಂತೆ ಮಾಡಿದರು.

ಕೃಷಿಶಾಖೆಯಲ್ಲಿ ಕೆಲಸ ಮಾಡುತ್ತಿರುವಾಗ ಸಹಕಾರಿ ಸಂಘದ ಮೂಲಕವೇ ಒಕ್ಕಲುತನದ ಅಭಿವೃದ್ಧಿ ಮಾಡಿ ಅತ್ಯಧಿಕ ಪ್ರಯೋಜನ ಪಡೆಯುವ ಶಕ್ಯತೆಗಳನ್ನು ಮೊಟ್ಟಮೊದಲು ಅವರು ಕಂಡುಕೊಂಡರು. ಆದುದರಿಂದ ಒಕ್ಕಲುತನದ ವಿಭಾಗದಲ್ಲಿ ಇರುವಾಗಲೇ ಸಹಕಾರಿ ಅಂದೋಲನದಲ್ಲಿ ಸಹಕರಿಸಿ ಕೆಲಸ ಮಾಡಿದರು. ಹೊಸ ವಿಚಾರಗಳನ್ನು ಹರಡಿ ಪ್ರಯೋಗದಲ್ಲಿ ತರಲು ಪ್ರಯತ್ನಿಸಿದರು. ಇದನ್ನು ಕಂಡು ಅಂದಿನ ಸಹಕಾರಿ ಸಂಘದ ರಜಿಸ್ಟ್ರಾರರಾದ ಶ್ರೀ ಯು. ಬ್ಯಾಂಕರು ನಾಯಕರ ವಿಷಯವಾಗಿ ಗವ್ಹರ್ನಮೆಂಟಿಗೆ ಬರೆದು ಕೃಷಿ ಶಾಖೆಯ ಜೊತೆಗೆ ಹೆಚ್ಚಿನ ವೇತನವಿಲ್ಲದೆ ಸಹಕಾರಿ ಸಂಘದ ಅಸಿಸ್ಟಂಟ ರಜಿಸ್ಟ್ರಾರರೆಂದು ನೇಮಕವಾಗುವಂತೆ ಮಾಡಿದರು. ಅವರ ಕೆಲಸವು ನಾನಾಮುಖವಾಗಿ ವಿಸ್ತರಿಸುವದನ್ನು ಕಂಡು ಪುನಃ ಕೃಷಿ ಶಾಖೆಯನ್ನು ಬಿಡಿಸಿ ೧೯೧೪ರಲ್ಲಿ ಮುಂಬಯಿ ಪ್ರಾಂತದ ನಾನ್‌ಕ್ರೆಡಿಟ್ ಸೊಸಾಯಿಟಿಯ ವಿಸ್ತರಣೆಯ ಸ್ಪೆಶಲ್ ಅಸಿಸ್ಟಂಟ ರಜಿಸ್ಟ್ರಾರರಾಗಿ ನೇಮಕವಾಗುವಂತೆ ಮಾಡಿಸಿದರು. ನಾಯಕರು ಸಹಕಾರಿ ಅಂದೋಲನದಲ್ಲಿ ಸಹಕರಿಸಿ ಕೆಲಸ ಮಾಡುವ ಹಾಗು ಸಂಪೂರ್ಣ ಪದಾರ್ಪಣಮಾಡುವ ಪೂರ್ವದಲ್ಲಿ ಸಹಕಾರಿ ಸಂಘಗಳೆಂದರೆ ಬರೀ ಸಾಲಕೊಡುವ ಸಂಘಗಳಾಗಿದ್ದವು. ೧೯೧೩ ರಿಂದ ೧೯೧೯ರ ವರೆಗಿನ ಆರು ವರುಷಗಳ ಅವಧಿಯಲ್ಲಿ ಅವರು ಸಹಕಾರಿ ಖಾತೆಯಲ್ಲಿ ಅದ್ಭುತವಾದ ಕೆಲಸವನ್ನು ಮಾಡಿ ತೋರಿಸಿದರು. ಅನೇಕ ಹೊಸ ಹೊಸ ಯೋಜನೆಗಳಿಗೆ ಕಾರಣರಾದರು. ನಾನ್‌ಕ್ರೆಡಿಟ್ ಕೋ-ಆಪರೇಟಿವ್ಹ ಚಳವಳಿಯನ್ನು ಪ್ರಾರಂಭಿಸಿ, ಅದರ ಮೂಲಕ ಹತ್ತಿಯ ಮಾರಾಟದ ಸಂಘ, ಹಾಲಿನ ಪೂರೈಕೆಯ ಸಂಘ, ಪಶು ಸಂಗೋಪನ ಸಂಘ, ಒಕ್ಕಲುತನದ ಹುಟ್ಟುವಳಿಯ ವಿಕ್ರಿ ಮತ್ತು ಮಾರಾಟದ ಸಂಘ, ಭೂ-ಸುಧಾರಣೆಯ ಸಂಘ, ಯಾಂತ್ರಿಕ ಹುಟ್ಟುವಳಿಯ ಸಂಘ, ಅನೇಕ ಕಸಬುಗಾರರ ಸಂಘ ಹೀಗೆ ಒಂದಲ್ಲ, ಎರಡಲ್ಲ ಅನೇಕ ಸಂಘಗಳ ಯೋಜನೆ, ನಿಯಮಾವಳಿಗಳನ್ನು ತಯಾರಿಸಿ ಹಲವನ್ನು ತಾವೇ ಕೃತಿಯಲ್ಲಿ ತಂದರು. ಅವುಗಳಲ್ಲಿ ಹುಬ್ಬಳ್ಳಿಯ ಕಾಟನ್–ಸೇಲ್ ಸೊಸಾಯಿಟಿಯೂ ಒಂದಾಗಿದೆ. ಅಂಥವು ಹಲವಾರು; ಅದೂ ಅಲ್ಲದೆ ಇಂದು ಜನತೆಗೆ ನಾನಾ ರೀತಿಯಲ್ಲಿ ಸಹಾಯ ಸಲ್ಲಿಸುತ್ತಿರುವ ಜಿಲ್ಹಾ ಸೆಂಟ್ರಲ್ ಬ್ಯಾಂಕುಗಳ ಸ್ಥಾಪನೆಗೂ ಅವರೇ ಕಾರಣರು. ಮಹಾರಾಷ್ಟ್ರ, ಕರ್ನಾಟಕ ಮತ್ತು ಮುಂಬಯಿ ನಗರಗಳಲ್ಲಿ ಸಹಕಾರಿ ಚಳವಳಿಯನ್ನು ವಿಸ್ತರಿಸಿದರು. ತಮ್ಮ ಅಧಿಕಾರ ಕ್ಷೇತ್ರದ ಜಿಲ್ಹೆಗಳಲ್ಲೆಲ್ಲ ಅನೇಕ ಸಹಕಾರಿ ಕಾರ್ಯಕರ್ತರನ್ನು ಆಕರ್ಷಿಸಿ ಅವರನ್ನು ತರಬೇತುಗೊಳಿಸಲು ಕಾರಣರಾದರು. ಈ ರೀತಿಯ ಅವರ ಉತ್ತಮವಾದ ಕೆಲಸಕ್ಕೆ ಜನತೆ, ಸರಕಾರಗಳೆರಡರಿಂದಲೂ ಪ್ರಶಂಸೆ ದೊರೆಯಿತು. ಆದರೂ ಕೂಡ ಕೊನೆಯಲ್ಲಿ ಸಹಕಾರಿ ಖಾತೆಯನ್ನೇ ಬಿಟ್ಟು ಹೋಗುವ ಒಂದು ಪ್ರಸಂಗ ಆಕಸ್ಮಿಕವಾಗಿ ಒದಗಿ ಬಂತು.

ಸಹಕಾರಿ ಖಾತೆಯ ಅಂದಿನ ರಜಿಸ್ಟ್ರಾರರಾದ ಯು. ಬ್ಯಾಂಕರು ೧೯೧೯ ಅಕ್ಟೋಬರದಲ್ಲಿ ರಜೆಯ ಮೇಲೆ ಹೋಗುವ ಪ್ರಸಂಗ ಬಂತು. ಆಗ ನಾಯಕರು ತಮ್ಮ ನ್ಯಾಯವಾದ ಹಕ್ಕುದಾರಿಕೆಯನ್ನು ಹಠಾತ್ತಾಗಿ ಆ ಜಾಗೆಯ ಬಗೆಗೆ ಮುಂದೆ ಇಟ್ಟರು. ಸರಕಾರವು ಕೇಳಲಿಲ್ಲ. ಆಗ ಆಯ್.ಸಿ. ಎಸ್. ಆಫೀಸರರ ಹೊರತು ಇತರರನ್ನು ಆ ಜಾಗೆಗೆ ನೇಮಿಸುತ್ತಿರಲಿಲ್ಲ. ನಾಯಕರಿಗೆ ಆ ಖಾತೆಯಲ್ಲಿ ಇದ್ದು ಹೆಚ್ಚಿನ ಪ್ರಯೋಜನವೂ ಸಿಗುವಂತೆ ಇರಲಿಲ್ಲ. ಹೀಗಾಗಿ ಕೂಡಲೇ ೧|| ವರುಷದ ರಜೆಯ ಮೇಲೆ ಇಂಗ್ಲಂಡಕ್ಕೆ ಹೋಗಿ ಬಾರ್-ಆಟ್-ಲಾ ಪದವಿ ಪಡೆದು ಬರಬೇಕೆಂದು ೧೯೧೯ನೆಯ ಅಕ್ಟೋಬರದಲ್ಲಿ ಹೊರಟೇ ಬಿಟ್ಟರು. ಈ ಮಧ್ಯೆ ತಮ್ಮನ್ನು ಬೇರೆ ಖಾತೆಗೆ ವರ್ಗ ಮಾಡಬೇಕೆಂದೂ ಕೇಳಿಕೊಂಡರು. ೧೯೦೬-೧೯೦೯ರ ಮಧ್ಯೆ ಕೆಂಬ್ರಿಜ್‌ದಲ್ಲಿ ಬಿ. ಎ. ಓದುತ್ತಿದ್ದಾಗಲೇ ಬಾರ್-ಎಟ್-ಲಾದ ಕೆಲವು ಟರ್ಮುಗಳನ್ನು ಕೂಡ ತುಂಬಿದ್ದರು. ಆದುದರಿಂದ ೧|| ವರುಷದಲ್ಲಿಯೇ ಲಿಂಕನ್ಸ ಇನ್ ಈ ಸಂಸ್ಥೆಯ ಬಾರ್-ಎಟ್-ಲಾ ಪರೀಕ್ಷೆಯಲ್ಲಿಯೂ ಪಾಸಾಗಿ ಅಲ್ಲಿಯೂ ಪ್ರಾವೀಣ್ಯ (Distinction) ವನ್ನು ಪಡೆದರು. ಇಂಗ್ಲಂಡದಲ್ಲಿದ್ದಾಗ ಅಲ್ಲಿಯ ಸಹಕಾರೀ ಸಂಸ್ಥೆಗಳ ಅಭ್ಯಾಸಕ್ಕಾಗಿ ಸರಕಾರದವರು ಅವರನ್ನು ಪ್ರತಿನಿಧಿಯನ್ನಾಗಿ ಆರಿಸಿದರು. ಅದರ ಫಲವಾಗಿ ಅವರು ಇಂಗ್ಲಂಡ, ಸ್ಕಾಟಲಂಡ, ಆಯರ್ಲಂಡ ಹಾಗು ಡೆನ್ಮಾರ್ಕ್, ಈ ದೇಶಗಳೊಳಗಿನ ಸಹಕಾರಿ ಸಂಸ್ಥೆಗಳನ್ನು ಸಂದರ್ಶಿಸಿ, ಅವುಗಳ ಅಭ್ಯಾಸವನ್ನು ಕೂಲಂಕಷವಾಗಿ ಮಾಡಿದರು. ಹಾಗು ೧೯೨೧ನೆಯ ಮೇ ತಿಂಗಳಲ್ಲಿ ಸ್ವದೇಶಕ್ಕೆ ಮರಳಿದರು. ಅವರು ಇಂಗ್ಲಂಡದಲ್ಲಿ ಇರುವಾಗಲೇ ಡೆಪ್ಯೂಟಿ

ಕಲೆಕ್ಟರರೆಂದು ನೇಮಿಸಲಾಗಿತ್ತು. ಆದರೂ ಕೂಡ ಅವರ ಹೊಸ ಅನುಭವದ ಪ್ರಯೋಜನವನ್ನು ಸರಕಾರವು ಪಡೆಯಬೇಕಾಗಿತ್ತು. ಹಾಗು ಆ ಅನುಭವದ ಸದುಪಯೋಗವಾಗಬೇಕಾಗಿತ್ತು. ಆದುದರಿಂದ ನಾಯಕರು ಮರಳಿ ಬಂದ ಕೂಡಲೇ ಸರಕಾರವು ಮುಂಬಯಿಯ ಕೇಂದ್ರ ಸಹಕಾರಿ ಸಂಸ್ಥೆಯ ಶಾಖೆಗಳನ್ನು ಸಂಘಟಿಸುವ ಯೋಜನೆಯೊಂದನ್ನು ಸಿದ್ಧಪಡಿಸುವ ವಿಶೇಷ ಕೆಲಸಕ್ಕೆ (Special duty) ಎಂದು ನೇಮಿಸಿತು. ನಾಯಕರು ತುಂಬ ಪರಿಶ್ರಮ ವಹಿಸಿ ಯೋಜನೆಯನ್ನು ಸಿದ್ಧಮಾಡಿ ಸರಕಾರದ ಮುಂದೆ ಇಟ್ಟರು. ಅದನ್ನು ಸರಕಾರವು ಮನ್ನಿಸಿತು. ಅದೂ ಅಲ್ಲದೆ ಸರಕಾರವು ತಮ್ಮದೊಂದು ಗೊತ್ತುವಳಿಯ ಮೂಲಕ ನಾಯಕರಿಗೆ ತಮ್ಮ ಧನ್ಯವಾದಗಳನ್ನು ತಿಳಿಸಿತು. (ಸರಕಾರದ ರಿಝೋಲ್ಯೂಶನ್ ನಂ ೪೩೩೪ ದಿನಾಂಕ ೨೬-೪-೧೯೩೩) ಅವರು ತಯಾರಿಸಿದ ಯೋಜನೆಯು ಸಹಕಾರಿ ಸಂಸ್ಥೆಯ ಮಾರ್ಗದಲ್ಲಿ (Land mark) ಮಹತ್ವದ ಹೆಜ್ಜೆಯೆಂದು ಹೇಳಲಾಗುತ್ತದೆ. ಅವರು ಆ ಯೋಜನೆಯಲ್ಲಿ ಸೂಚಿಸಿದ ಎಲ್ಲ ಸೂಚನೆಗಳನ್ನು ಕಾರ್ಯರೂಪದಲ್ಲಿ ತರಲಾಗಿದೆಯೆಂದು ಹೇಳಲಾಗುತ್ತಿದೆ. ಇಷ್ಟೇ ಅಲ್ಲ ಮೇಲೆ ಹೇಳಿದ ಸೆಂಟ್ರಲ್-ಕೋ-ಆಪರೇಟಿವ್ಹ್ ಸಂಸ್ಥೆಯು ನಾಯಕರ ಕೆಲಸವನ್ನು ಮುಕ್ತಕಂಠವಾಗಿ ಪ್ರಶಂಸಿಸಿತು.

೧೯೩೧ರಲ್ಲಿ ಧಾರವಾಡಕ್ಕೆ ಡೆಪ್ಯೂಟಿ ಕಲೆಕ್ಟರರಾಗಿ ಬಂದು, ಸುಮಾರು ೧೯೩೫ರ ವರೆಗೆ ಇದ್ದರು. ಆ ಕಾಲಕ್ಕೆ ಅವರು ಅಲ್ಲಿಯ ಸಹಕಾರ ಹಾಗು ಒಕ್ಕಲುತನದ ಅಭಿವೃದ್ಧಿಗಳಿಗೆ ಒಳ್ಳೆಯ ಪ್ರೋತ್ಸಾಹಕೊಟ್ಟರು. ಇದರ ಹೊರತಾಗಿ ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಅಷ್ಟೇ ಮುಂದಾಳಾಗಿ ಭಾಗವಹಿಸುತ್ತಿದ್ದರು. ಧಾರವಾಡದಲ್ಲಿರುವಾಗ ಕರ್ನಾಟಕ ವಿದ್ಯಾವರ್ಧಕ ಸಂಘವು ಕೆಲ ಮಟ್ಟಿಗೆ ಅದು ಸಂಕಟದಲ್ಲಿರುವಾಗ ಪುನಃ ಚೇತರಿಸಿ ನಿಲ್ಲುವಂತೆ ಮಾಡಿದರಂತೆ. ಕೆಲಕಾಲ ಅದರ ಅಧ್ಯಕ್ಷರೂ ಕೂಡ ಆಗಿದ್ದರಂತೆ. ಶಿಕ್ಷಣ ಸಂಸ್ಥೆಗಳಿಗೂ ಅವರು ಪ್ರೋತ್ಸಾಹ ನೀಡಿದ್ದುಂಟು. ಕರ್ನಾಟಕದಲ್ಲೆಲ್ಲ ಶಿಕ್ಷಣ ಸಂಸ್ಥೆಗಳನ್ನು ಕಟ್ಟುವದರಲ್ಲಿ ಸುವಿಖ್ಯಾತರಾದ ಶ್ರೀ ಎಚ್. ಎಫ್. ಕಟ್ಟಿಮನಿಯವರಿಗೆ ಕರ್ನಾಟಕದ ಗಡಿನಾಡಾದ ಸೊಲ್ಲಾಪುರದಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲು ಪ್ರೋತ್ಸಾಹಿಸಿದ್ದರಂತೆ. ಅದೂ ಅಲ್ಲದೆ ತಕ್ಕಮಟ್ಟಿಗೆ ನಿಧಿಯನ್ನೂ ಕೂಡ ಕೂಡಿಸಿಕೊಟ್ಟಿದ್ದರಂತೆ. ಇದೊಂದು ಕಟ್ಟಿಮನಿಯವರು ಅಂಕೋಲೆಯಲ್ಲಿ ಮಾಡಿದ ಭಾಷಣದಲ್ಲಿ ನಾನು ಕೇಳಿದ ಮಾತು. ಧಾರವಾಡದ ಸಿವ್ಹಿಲ್ ಆಸ್ಪತ್ರಿಯ ಆವಾರದಲ್ಲಿ ಲೇಡಿ ವಿಲ್ಸನ್ ಹೆರಿಗೆಯ ಕಟ್ಟಡಕ್ಕೆ ಅವರೇ ಕಾರಣವಂತೆ. ಹೀಗೆ ಒಂದಲ್ಲ, ಎರಡಲ್ಲ ಹಲವಾರು ಕೆಲಸಗಳಿಗಾಗಿ ಹೃದಯದಿಂದ ಓಗುಡುವುದು ಅವರ ಸ್ವಭಾವವಾಗಿ ಕೂತಿತ್ತು.

೧೯೩೫ರಲ್ಲಿ ವಿಜಾಪುರ ಜಿಲ್ಹೆಯ ಕಲೆಕ್ಟರರಾದರು. ಆಗ ಅವರ ಕಾರ್ಯವಂತೂ ಅನುಪಮೇಯವಾಗಿದೆ. ಹಾಗು ಸಂಸ್ಮರಣೀಯವಾಗಿದೆ. ಅದನ್ನು ಕಣ್ಣಾರೆ ಕಂಡ ಹಾಗು ಅದರ ಮಹತ್ವವನ್ನು ಚನ್ನಾಗಿ ಮನವರಿಕೆ ಮಾಡಿಕೊಂಡ ವಯೋವೃದ್ಧರೂ, ಜ್ಞಾನವೃದ್ಧರೂ ಆದ ಡಾ. ಹಳಕಟ್ಟಿಯಂಥವರ ಬಾಯಿಂದಲೇ ಕೇಳಬೇಕು. ವಿಜಾಪುರದಲ್ಲಿ ಅವರು ಸ್ಥಾಪಿಸಿದ "ವಿಲ್ಸನ್ ಎಂಟಿ ಫೆಮಿನ್ ಇನಸ್ಟಿಟ್ಯೂಟ ಎಂಬ ಸಂಸ್ಥೆಯು ಅವರ ಮಹತ್ವಪೂರ್ಣ ಕಾರ್ಯದ ಸಾಕ್ಷಿಯಾಗಿ ನಿಂತಿರುವದು. ಅವರ ಕಾರ್ಯವೇನೂ ನಿರ್ವಿಘ್ನವಾಗಿ ಸಾಗಿದ್ದಿತೆನ್ನುವಂತೆ ಇರಲಿಲ್ಲ. ಸರಕಾರಿ ಉದ್ಯೋಗಸ್ಥರು ಸಾರ್ವಜನಿಕ ರಂಗದಲ್ಲಿಯೂ ಕೈ ಹಾಕಿ ಕೆಲಸ ಮಾಡುವದು ಸರಿಯಲ್ಲವೆಂದು ಹೇಳುವವರ ಒಂದು ಪಂಗಡವೂ, ಹೆಚ್ಚಾಗಿ ಆಯ್. ಸಿ. ಎಸ್. ಅಧಿಕಾರಿಗಳ ಪಂಗಡವೂ ಇದ್ದೇ ಇತ್ತು. ಅಲ್ಲದೆ ಅಂಥವರಿಗೆ ಪೇಂಟರರಂಥ ಕಮೀಶನರರ ಮತವೂ ಅನುಕೂಲವಿತ್ತು. ನಿಮ್ಮ ಕೆಲಸ ಕೇವಲ ಕಾಯಿದೆ, ಸುವ್ಯವಸ್ಥೆ, ಆಡಳಿತ, 'ಇನ್ನಿತರ ಒಣ ಉಸಾಬರಿ ನಿಮಗೇಕೆ ? ಎಂದು ಅವರು ಎಷ್ಟೋ ಸಲ ಕೇಳಿದ್ದರಂತೆ. ಆದರೆ ಶ್ರೀ ನಾಯಕರ ಪ್ರೇರಣೆ ಹಾಗು ಒಲವುಗಳು ಬೇರೆ ತರವಾಗಿದ್ದವು. ಹುಟ್ಟಿದ ಮನೆಗೆಲಸ ಒಕ್ಕಲುತನ. ಅಭ್ಯಾಸ ಅನುಭವಗಳ ಪ್ರಾವಿಣ್ಯ ಪಡೆದದ್ದು ಒಕ್ಕಲುತನ ಹಾಗು ಸಹಕಾರ ಇವುಗಳಲ್ಲಿ. ಜಿಲ್ಹಾಧಿಪತಿಯಾಗಿ ಬಂದದ್ದು ಬರಗಾಲದ ಜಿಲ್ಹೆಯಾದ ವಿಜಾಪುರಕ್ಕೆ. ಹೀಗಿರುವಾಗ ಕೇವಲ ಆಡಳಿತದ ಚೌಕಟ್ಟಿನಲ್ಲಿ ಬಿದ್ದುಕೊಂಡಿರುವದು ಅವರಂತಹ ಭೀಮ ಸಾಹಸಿಗೆ ಎಂದೆಂದಿಗೂ ಸೇರದ ವಿಷಯ. ಅವರ ವಿದ್ಯಾರ್ಥಿ ದೆಸೆಯ ಪ್ರತಿಭೆ ಈಗ ಕೆರಳಿತು. ಜಿಲ್ಹೆಯ ಜಟಿಲವಾದ ಸಮಸ್ಯೆಗಳತ್ತ ಅವರ ಮನಸ್ಸು ಕೇಂದ್ರೀಕೃತವಾಯಿತು. ಜಿಲ್ಲೆಯ ಸುಧಾರಣೆಯ ಪ್ರಶ್ನೆ ಒಂದೊಂದಾಗಿ ಅವರ ಮುಂದೆ ಬಂದು ನಿಂತವು. ಅದನ್ನೆಲ್ಲ ಬಿಡಿಸುವ ಕಾರ್ಯವನ್ನು ಶ್ರೀ ನಾಯಕರು ಎತ್ತಿಕೊಂಡರು.

ಅವರು ಪ್ರಾರಂಭಿಸಿದ ಜಿಲ್ಹೆಯ ಅಭಿವೃದ್ಧಿ ಯೋಜನೆಗಳಿಗೆಲ್ಲ ಎಂಟಿ ಫೆಮಿನ್ ಸಂಸ್ಥೆಯೇ ಕೇಂದ್ರವಾಗಿತ್ತು. ಪ್ರತಿ ತಾಲೂಕಿನಲ್ಲಿ ಅದರ ಶಾಖೋಪಶಾಖೆಗಳು ಪಸರಿಸಬೇಕೆಂದು ಅವರ ಹಾರೈಕೆ ಇತ್ತು. ಒಕ್ಕಲುತನದ ಅಭಿವೃದ್ಧಿಯೇ ಅದರ ಮುಖ್ಯ ಉದ್ದೇಶವಾಗಿತ್ತು.

ವಿಜಾಪುರ ಜಿಲ್ಹೆಯು ಮೊದಲೇ ಬರಗಾಲದ ಜಿಲ್ಹೆಯು. ಅದರಲ್ಲಿಯೂ ಬಾದಾಮಿ, ಸಿಂದಗಿ, ಇಂಡಿ ತಾಲೂಕುಗಳು ಬೆಳಗಾಲದಲ್ಲಿಯೂ ಬರಗಾಲದ ತಾಲೂಕುಗಳು. ಮರಡಿ ಪ್ರದೇಶ ಬಹಳ. ಇಂತಹ ಪ್ರದೇಶದಲ್ಲಿ ನೆಲಗಡಲೆ (ಶೇಂಗಾ) ಬೆಳೆ ಮಾತ್ರ ಹುಲಸಾಗಿ ಬೆಳೆಯುವದೆಂದು ನಾಯಕರು ತಿಳಿದು ನೆಲಗಡಲೆ ಬೀಜವನ್ನು ತಾವೇ ಒದಗಿಸಿ ಕೊಟ್ಟು ಪಾಟೀಲರಿಗೆ, ಗೌಡರಿಗೆ ಒತ್ತಾಯ ಪಡಿಸಿ ಹೆದರಿಸಿ ಬಿತ್ತಿಸಿದರು. ಅದರ ಪರಿಣಾಮವಾಗಿ ತೀರ ಬಡ ರೈತರೂ ಕೂಡ ತುಂಬಾ ಸ್ಥಿತಿವಂತರಾಗಿದ್ದಾರೆ. ಮೊದ ಮೊದಲು ಕೆಲವೆಡೆಗಳಲ್ಲಿ ೧೦೦ ರೂಪಾಯಿಗಳಿಗೆ ೧೬ ಎಕರೆಗಳು ಸಿಗುವ ಭೂಮಿ ಇಂದು ಒಂದು ಎಕರೆಗೆ ೫-೬ ಸಾವಿರ ರೂಪಾಯಿಗಳನ್ನು ಕೊಟ್ಟರೂ ಕೂಡ ಸಿಗದಂತೆ ಆಗಿದೆ.

ವಿಜಾಪುರ ಜಿಲ್ಹೆಯು ಬರಗಾಲದ ಜಿಲ್ಹೆಯಷ್ಟೆ? ಆದರೆ ಕೆಲವು ತಾಲೂಕುಗಳಲ್ಲಿ ಬಾವಿಯನ್ನು ತೋಡಿಸಿದರೆ ನೀರು ಮೇಲೆಯೇ ಸಿಗುವದು. ಇದನ್ನು ಕಂಡುಹಿಡಿದು ಇಂಡಿ, ಸಿಂದಗಿ ಮೊದಲಾದ ತಾಲೂಕುಗಳಲ್ಲಿ ತೋಟಪಟ್ಟಿಗಳನ್ನು ಪ್ರಾರಂಭಿಸಿದರು. ತಗಾಯಿ ರೂಪದಿಂದ ಸಾಲ ಕೊಟ್ಟು ಬಾವಿಯನ್ನು ಅಗಿಸಲಿಕ್ಕೆ ಪ್ರಾರಂಭಿಸಿ, ಆ ಕೆಲಸವನ್ನು ತಾವು ನಿರೀಕ್ಷಿಸಿಯೇ ನಿರೀಕ್ಷಿಸುತ್ತಿದ್ದರು. ಇಡೀ ಒಂದೇ ಒಂದು ಇಂಡಿ ತಾಲೂಕಿಗೆ ೫ ಲಕ್ಷ ರೂಪಾಯಿಗಳ ತಗಾಯಿ ಸಾಲ ಕೊಡಿಸಿ ಬಾವಿಗಳನ್ನು ಅಗಿಯಿಸಿ ತೋಟಪಟ್ಟಿಯ ತಾಲೂಕನ್ನಾಗಿ ಮಾಡಿದ್ದಾರೆಂದು ಶ್ರೀ ಬೈತಮಂಗಲಕರ ಶ್ಯಾಮರಾಯರು ಹೇಳುವರು. ಇಂದು ಅಥರ್ಗಾದಲ್ಲಿ ೨೦೦ ಬಾವಿಗಳಿವೆಯಂತೆ; ೫೦ ಆಯಿಲ್ ಇಂಜನ್ನು ಇವೆಯಂತೆ; ಒಂದು ಎಕರೆ ಲಿಂಬಿಹಣ್ಣಿನ ತೋಟಕ್ಕೆ ೮-೯ ಸಾವಿರ ರೂಪಾಯಿಗಳ ವರೆಗೆ ಸವಾಲು ಒರುತ್ತದಂತೆ. ನೋಡಿರಿ ಎಂತಹ ಸೌಭಾಗ್ಯವಿದು.

ವಿಜಾಪುರ ಜಿಲ್ಲೆಯಲ್ಲಿ ಕುರುಬರ ಸಂಖ್ಯೆಯು ವಿಶೇಷವಾಗಿರುವದರಿಂದ ಕುರಿಗಳ ಸಂಗೋಪನೆ ಮಾಡಲು ಬಹಳ ಅನುಕೂಲ ಪ್ರದೇಶವು. ಆದುದರಿಂದ ಈ ವಿಷಯವಾಗಿ ತುಂಬಾ ವಿಚಾರ ಮಾಡಿ ಕುರಿಗಳ ಹೊಸ ಪೀಳಿಗೆಯನ್ನು ಅಭಿವೃದ್ಧಿಗೊಳಿಸುವದರಲ್ಲಿ ನಾಯಕರು ಬಹಳ ಸಾಹಸ ಮಾಡಿದರು. ಪಂಜಾಬ, ಕಾಶ್ಮೀರಗಳ ಕಡೆಯಿಂದ ಮೆರಿನೋ ಕುರಿಗಳನ್ನೂ ರಜಪೂತಸ್ತಾನದ ಕುರಿಗಳನ್ನೂ ತರಿಸಿ, ಬಡ ಕುರುಬರಿಗೆ ಪುಕ್ಕಟೆಯಾಗಿ ಹಂಚಿಕೊಟ್ಟು ಅವುಗಳ ಪೀಳಿಗೆಯು ಬೆಳೆಯುವಂತೆ ಮಾಡಿದರು. ರಜಪೂತಸ್ತಾನದ ಪೀಳಿಗೆ ಮಾತ್ರ ಯಶಸ್ವಿಯಾಯಿತು. ಉಣ್ಣೆಯಿಂದ ನಯವಾದ ಕಂಬಳಿಗಳನ್ನೂ, ಶಾಲುಗಳನ್ನೂ ತಯಾರಿಸಲು ಒಂದು ಸಂಶೋಧನ ಕೇಂದ್ರವನ್ನು ಸ್ಥಾಪಿಸಿ ಸರಕಾರವು ಒಬ್ಬ ಅಧಿಕಾರಿಯನ್ನೂ ಅದಕ್ಕೆ ನೇಮಿಸುವಂತೆ ಮಾಡಿದರು. ಅದರಿಂದ ಆ ಉದ್ಯೋಗಕ್ಕೆ ಸಾಕಷ್ಟು ಪ್ರೋತ್ಸಾಹವೂ ದೊರೆಯಿತು. ಈ ಸಂಬಂಧವಾಗಿ ಶ್ರೀಮಾನ್ ಹಳಕಟ್ಟಿಯವರು ಒಂದು ನಯವಾದ ತಾವು ಹೊತ್ತುಕೊಳ್ಳುವ ಬಿಳಿಯ ಕಂಬಳಿಯನ್ನು ತೋರಿಸಿ, ಅದು ಶ್ರೀ ನಾಯಕರ ಪರಿಶ್ರಮದ ಫಲವೆಂದು ತಿಳಿಸಿದರು.

ದನಗಳ ಸಂಗೋಪನಕ್ಕಾಗಿಯೂ ನಾಯಕರು ಅದೇ ಪ್ರಕಾರವಾಗಿ ಶ್ರಮವಹಿಸಿದರು. ಪ್ರತಿಯೊಂದು ತಾಲೂಕಿಗೆ ೨೦-೩೦ ಗೂಳಿಗಳನ್ನು ಪೂರೈಸಿ ದನಗಳ ಪೀಳಿಗೆಯನ್ನು ಸುಧಾರಿಸಲು ಅವರೇ ಮೊದಲಿಗರು. ಮತ್ತು ಆಯಾಯ ಊರುಗಳಿಗೆ ಸಂದರ್ಶನಕ್ಕೆ ತಾವೇ ಸ್ವತಃ ಅವುಗಳ ಪೀಳಿಗೆ ಹೇಗಾಗಿರುವದೆಂಬುದನ್ನು ಅವಲೋಕಿಸುತ್ತಿದ್ದರು. ಅಲ್ಲದೆ ಈ ವಿಷಯವಾಗಿ ಅಂದರೆ ಕುರಿ ಹಾಗು ಗೂಳಿಗಳ ವಿಶೇಷ ಆರೈಕೆಗೆ ವ್ಹೆಟರ್ನರಿ ಡಾಕ್ಟರರುಗಳಿಗೂ ಕೂಡ ವಿಶೇಷ ಲಕ್ಷ್ಯ ಪೂರೈಸಬೇಕೆಂದು ವಿಧಿಸಿದ್ದರು. ಸಾಂಗೋಲಿ, ಇಂಡಿ, ಈ ಪ್ರದೇಶದಲ್ಲಿ, ವಿಶೇಷವಾಗಿ ಭೀಮಾ ನದಿಯ ಪ್ರದೇಶದಲ್ಲಿ ಗೂಳಿಯ ಪೀಳಿಗೆಯನ್ನು ಮಾಡಿಸುತ್ತಿದ್ದರು. ಖಿಲಾರಿ ಹೋರಿಯ ಪೀಳಿಗೆಯೂ ಅಲ್ಲಿಂದಲೇ ತಂದದ್ದಾಗಿರುವದು.

ಕೋಳಿಗಳನ್ನು ಸಾಕುವ ಬಗೆಗೂ ಅದೇ ಪ್ರಕಾರ ಪ್ರೋತ್ಸಾಹವನ್ನು ಕೊಟ್ಟರು. ಇಂದಿಗೆ ವಿಜಾಪೂರ ಜಿಲ್ಹೆಯಿಂದ ಬೇರೆ ಕಡೆಗೆ ಹೋಗುವಷ್ಟು ತತ್ತಿಗಳು ಬೇರಾವ ಜಿಲ್ಹೆಯಲ್ಲಿಯೂ ಹೋಗುವದಿಲ್ಲೆಂದು ತಿಳಿಯುತ್ತದೆ. ಬಡ ಜನರಿಗೆ ಇದೊಂದು ಸುಲಭವಾಗಿ ಸಾಧಿಸಬಹುದಾದ ಉದ್ಯೋಗವು. ಇದನ್ನು ದೊಡ್ಡ

ಪ್ರಮಾಣದ ಮೇಲೆ ಅವರೇ ಇಲ್ಲಿ ಮೊದಲು ಮಾಡಿದರು.

ವಿಜಾಪುರದಲ್ಲಿ ಒಡ್ಡಿನ ಜೊತೆಗೆ ಸಾಸಮನ್ನರ ಹೆಸರು ಜೋಡಿಯಾಗಿದೆ. ಮೊಟ್ಟ ಮೊದಲು ಒಡ್ಡು ಹಾಕುವದನ್ನು ಪ್ರಾರಂಭ ಮಾಡಿದವರು ಶ್ರೀ ನಾಯಕರೇ. ಒಡ್ಡು ಹಾಕುವದರಿಂದಲೇ ಕಡಿಮೆ ಮಳೆಯಾಗುವ ಪ್ರದೇಶದಲ್ಲಿ ನೀರನ್ನು ಹಿಡಿದಿಟ್ಟು ಹೆಚ್ಚಿನ ಪ್ರಯೋಜನವನ್ನು ಮಾಡಿಕೊಳ್ಳುವಿಕೆಯನ್ನು ತಿಳಿಸಿಹೇಳಿದರು. ಇಷ್ಟೇ ಅಲ್ಲ ಒಡ್ಡು ಎಂಬ ಶಬ್ದವು ಇಂಗ್ಲಿಷ ಭಾಷೆಯಲ್ಲಿ ಪ್ರಚಾರವಾಗಲಿಕ್ಕೂ ಇವರೇ ಕಾರಣರಾದರು. ಇವರ ತರುವಾಯ ಹದಿನೈದು ವರ್ಷಗಳ ಮೇಲೆ ವಿಜಾಪುರದಲ್ಲಿ ಕಲೆಕ್ಟರರಾಗಿ ಬಂದ ಶ್ರೀ ಡೆನ್ನಿಸ್ ಎಂಬವರು ಬರಗಾಲದಲ್ಲಿ ಕ್ಷಾಮ ಪೀಡಿತರಿಗೆ ರಸ್ತೆ ಗಿಸ್ತೆಗಳನ್ನು ಮಾಡುವದಕ್ಕೆ ಹಚ್ಚುವದಕ್ಕಿಂತ ಒಡ್ಡು ಕಟ್ಟುವದೊಂದೇ ಮುಖ್ಯ ಕೆಲಸ ಎಂದು ಒತ್ತಿ ಹೇಳಿರುವರು. ಈ ಡೇನ್ನಿಸ್ ಕಲೆಕ್ಟರರಿಗೂ ಶ್ರೀ ಸೋಸ್‌ಮನ್ನರಿಗೂ ಸ್ನೇಹ ಸಂಬಂಧವಿತ್ತು. ಶ್ರೀ ಡೆನ್ನಿಸ್‌ರಿಂದ ಸೊಸಮನ್ನರು ಒಡ್ಡಿನ ಕಲ್ಪನೆಯನ್ನು ಪಡೆದು ತಮ್ಮದೊಂದು ಯೋಜನೆಯನ್ನು ಕಮೀಶನರರ ಮುಂದೆ ಇಟ್ಟರು. ಶ್ರೀ. ನಾಯಕರ ಯೋಜನೆಯನ್ನೇ ಶ್ರೀ ಸೊಸಮನ್ನರು ಮುಂದುವರಿಸಿದ್ದರು.

ಒಕ್ಕಲಿಗರು ಮೊದಮೊದಲು ಎಲ್ಲ ಕಡೆಗೂ ಎತ್ತಿನಿಂದ ತುಳಿಸಿ ಕಾಳುಗಳನ್ನು ಒಕ್ಕುತ್ತಿದ್ದರು. ಕಲ್ಲಿನ ಬಂಡಿಗಳಿಂದ ಕಾಳುಗಳನ್ನು ಬೇರ್ಪಡಿಸುವ ಕೆಲಸವನ್ನು ಸುರುಮಾಡಿಸಿದವರು ಶ್ರೀ ನಾಯಕರವರು. ಈ ಹೊತ್ತು ಇಡೀ ಜಿಲ್ಲೆಯಲ್ಲಿಯೇ ಕಲ್ಲಿನ ಉಳಕಗಳನ್ನು ಉಪಯೋಗಿಸುವರು. ಕಟ್ಟಿಗೆಯ ನೇಗಿಲುಗಳಿಗೆ ಅಮಂಗಲವೆಂದು ಹೇಳಿ ಕಬ್ಬಿಣದ ನೇಗಿಲಗಳನ್ನೇ ಬಳಕೆಯಲ್ಲಿ ತರಬೇಕೆಂದು ಹೇಳುತ್ತಿದ್ದರಂತೆ.

ವನಮಹೋತ್ಸವವು ಆಧುನಿಕ ಉತ್ಸವಗಳಲ್ಲಿ ಒಂದಾಗಿದೆ; ಆದರೆ ಅದನ್ನು ಮೂಲತಃ ಪ್ರಾರಂಭಿಸಿದವರು ವಿಜಾಪೂರ ಜಿಲ್ಲೆಯ ಶ್ರೀ ನಾಯಕ ಕಲೆಕ್ಟರರವರು. ಅದೊಂದು ವನಮಹೋತ್ಸವವೆಂದು ಅವರು ಪ್ರಾರಂಭಿಸಲಿಲ್ಲ. ಗಿಡ ಮರಗಳಿಲ್ಲದ ಬರಗಾಲದ ಜಿಲ್ಲೆಯಲ್ಲಿ ಅದೊಂದು ತೀರ ಅವಶ್ಯಕ ಕಾರ್ಯವೆಂದು ಅವರು ಪ್ರಾರಂಭಿಸಿದ್ದರು. ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಗೌಡ ಕುಲಕರ್ಣಿಯವರು ಪ್ರತಿ ವರ್ಷ ಎಷ್ಟು ಗಿಡಗಳನ್ನು ಹಚ್ಚಿದ್ದರೆಂದೂ, ಅವುಗಳಲ್ಲಿ ಎಷ್ಟು ಉಳಿದಿರುವವೆಂದೂ ತಮ್ಮ ಕಾಗದ ಪತ್ರದಲ್ಲಿ ನಮೂದಿಸ ಬೇಕಾಗಿತ್ತಂತೆ. ಹಾಗೂ ಶ್ರೀ ನಾಯಕರು ಜಮಾಬಂದಿಗಾಗಿ ಹಳ್ಳಿಗೆ ಹೋದಾಗ ಇವೆಲ್ಲವುಗಳ ವಿಷಯವಾಗಿ ಅಂದರೆ ತಮ್ಮ ಯೋಜನೆಯಂತೆ ಜರುಗಿದ ಎಲ್ಲ ಚಟುವಟಿಕೆಗಳ ನಿರೀಕ್ಷಣೆ ಮಾಡಿಯೇ ಬರುತ್ತಿದ್ದರು. ಗಿಡಗಳನ್ನು ನೆಡುವದಕ್ಕಿಂತ ಉಳಿಸುವದಕ್ಕೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದರು.

ಗ್ರಾಮಗಳ ಅಭಿವೃದ್ಧಿಯ ವಿಷಯವಾಗಿ ಎಲ್ಲ ಬಗೆಯ ಅಂಕೆ ಸಂಖ್ಯೆಗಳನ್ನು ಕೂಡಿಸುವ ಏರ್ಪಾಡನ್ನು ಕೂಡ ಆ ಕಾಲದಲ್ಲಿಯೇ ಮಾಡಿದ್ದರು. ಅದಕ್ಕೆ ಬೇಕಾಗುವ ಪತ್ರಿಕೆಗಳನ್ನು ಮುದ್ರಿಸಿ ಎಲ್ಲ ಗ್ರಾಮಗಳಿಗೂ ಹಂಚಲಾಗುತ್ತಿತ್ತು ಮತ್ತು ಈ ಬಗೆಗೆ ಎಲ್ಲ ಮಾಹಿತಿಗಳನ್ನು ಕೂಡಿಸಿಡಲು ಗೌಡ ಕುಲಕರ್ಣಿಯವರಿಗೆ ವಿಧಿಸಲಾಗಿತ್ತು. ಇದರಿಂದ ಯಾವ ಹಳ್ಳಿಯಲ್ಲಿ ಅಭಿವೃದ್ಧಿ ಕಾರ್ಯವು ಆಗತಕ್ಕದ್ದೆಂದು ಕಂಡುಹಿಡಿದು ಕೂಡಲೇ ಅತ್ತಕಡೆಗೆ ಲಕ್ಷ್ಯವನ್ನು ಪೂರೈಸುತ್ತಿದ್ದರು.

ಎಲ್ಲಕ್ಕೂ ಹೆಚ್ಚಾಗಿ ಅವರ ವಿಷಯವಾಗಿ ಜನರು ಲಕ್ಷದಲ್ಲಿಡುವ ಸುಧಾರಣೆಯ ಸಂಗತಿಯೆಂದರೆ, ಡಬ್ಬುಗಳ್ಳಿಯ ನಾಶ. ವಿಜಾಪುರ ಜಿಲ್ಲೆಯಲ್ಲಿ ಡಬ್ಬುಗಳ್ಳಿಯು ಬಹಳೇ ಪ್ರಬಲವಾಗಿ ಹಬ್ಬಿಕೊಂಡಿತ್ತು. ಇಲ್ಲಿ ಬರುವದಕ್ಕಿಂತ ಮುಂಚಿತವಾಗಿ ಅವರು ಧಾರವಾಡ ಜಿಲ್ಲೆಯಲ್ಲಿ ಈ ಡಬ್ಬುಗಳ್ಳಿಯ ನಾಶವನ್ನು ಪ್ರಾರಂಭಿಸಿದ್ದರು. ವಿಜಾಪುರ ಜಿಲ್ಲೆಯಲ್ಲಿಯೂ ಅದನ್ನು ಮುಂದುವರಿಸಿದ್ದರು. ಡಬ್ಬುಗಳ್ಳಿಯು ಆಗ ಬರಗಾಲದ ಜೊತೆಗೆ ಒಕ್ಕಲುತನದ ಒಂದು ವೈರಿಯೇ ಆಗಿತ್ತು. ಶ್ರೀ ನಾಯಕರು ಈ ಡಬ್ಬುಗಳ್ಳಿಯನ್ನು ನಾಶ ಮಾಡಲಿಕ್ಕೆ ಹಚ್ಚಿದ್ದರಿಂದ "ಡಬ್ಬುಗಳ್ಳಿಯ ಕಲೆಕ್ಟರ" ಎಂಬ ಹೆಸರು ಪ್ರಾಪ್ತವಾಗಿತ್ತು. ವಿಜಾಪುರಕ್ಕೆ ಬಂದ ಗವ್ಹರ್ನರ ವಿಲ್ಸನ ಸಾಹೇಬರು ತಿರುಗಿ ಹೋಗುವಾಗ ಇಂಡಿ ಸ್ಟೇಶನ್ ಸಮೀಪದಲ್ಲಿ ದೊಡ್ಡ ದೊಡ್ಡ ರಾಶಿಯಾಗಿ ಕೂಡಿಸಿದ ಡಬ್ಬುಗಳ್ಳಿ ರಾಶಿಗಳಿಗೆ ಬೆಂಕಿ ಹಚ್ಚಿದ ನೋಟವನ್ನು ಗಾಡಿನಿಲ್ಲಿಸಿ ನೋಡಿ ಹೋದರಂತೆ. ಅಂದು ಡಬ್ಬುಗಳ್ಳಿಯ ಪ್ರದರ್ಶನವಾಗಿತ್ತು. ಇಂದು ಡಬ್ಬುಗಳ್ಳಿ ಆಸ್ಟ್ರೇಲಿಯಾದ ಒಂದು ವಿಧದ ಹುಳದಿಂದ ಸಂಪೂರ್ಣ ನಾಶವಾಗಿ, ಕಾಣಲಿಕ್ಕೆ ಅಪರೂಪವೂ ಆಗಿದೆ. ಎಲ್ಲವೂ ಕಾಲ ಮಹಿಮೆ.

ಒಕ್ಕಲಿಗರು ಗೊಬ್ಬರ ಕುಣಿಗಳನ್ನು ಮಾಡಲು ಎಲ್ಲ ಹಳ್ಳಿಗಳಿಗೂ ವಿಧಿಸಿದ್ದರು. ಅಂಥ ಎಷ್ಟೋ ಮಾದ

ರಿಯ ಕುಣಿಗಳನ್ನು ತಯಾರಿಸಿದ್ದರು. ಬರಗಾಲದ ಕಾಲದಲ್ಲಿ ದನಕರುಗಳಿಗೆ ನೆರವಾಗಲೆಂದು ಲಕ್ಷಗಟ್ಟಲೆ ರೂಪಾಯಿ ವೆಚ್ಚಮಾಡಿ ಮೇವಿನ ದೊಡ್ಡ ದೊಡ್ಡ ಬಣವಿಗಳನ್ನು ಸಿದ್ಧಮಾಡಿ ಇಡುತ್ತಿದ್ದರು. ಆ ಕಾಲದ ಅರ್ಥಸಚಿವರಾದ ಸರ್ ಚುನಿಲಾಲ ಮೆಹತಾರವರಿಂದ ಈ ಬಗೆಗೆ ವಿಶೇಷವಾದ ಸವಲತ್ತುಗಳನ್ನು ಅವರು ಪಡೆದುಕೊಂಡಿದ್ದರು.

ಶ್ರೀ ನಾಯಕರ ಬಗೆಗೆ ವಿವರಿಸಿದ ಎಲ್ಲ ಬಗೆಯ ಕಾರ್ಯರೂಪಗಳಿಗೆ ವಿಜಾಪುರದೊಳಗಿನ ‘ಎಂಟಿ ಫೆಮಿನ್’ ಸಂಸ್ಥೆಯೇ ಕೇಂದ್ರವಾಗಿದ್ದಿತೆಂಬುದನ್ನು ಮರೆಯಲಾಗದು. ಮುಂಬಯಿ ಗವ್ಹರ್ನರರಾಗಿದ್ದ ಶ್ರೀ ವಿಲ್ಸನ್ನರು ಒಮ್ಮೆ ಈ ಸಂಸ್ಥೆಗೆ ಭೆಟ್ಟಿಕೊಟ್ಟ ಪ್ರಸಂಗವು ಅವರ ಸಹಕಾರಿಗಳ ಮನಸ್ಸಿನಲ್ಲಿ ಚಿರಸ್ಮರಣೀಯವಾಗಿರುವದು. ಆ ಕಾಲದಲ್ಲಿ ಜಿಲ್ಲೆಯೊಳಗಿನ ಎಲ್ಲ ಬಗೆಯ ಬೆಳೆ ಹಾಗು ಕೈಗಾರಿಕೆಗಳ ಉತ್ತಮವಾದ ಪ್ರದರ್ಶನವನ್ನು ಅವರು ಏರ್ಪಡಿಸಿದ್ದನ್ನು ನೋಡಿ ಗವ್ಹರ್ನರ ಸಾಹೇಬರು ಅಚ್ಚರಿಗೊಂಡಿದ್ದರಂತೆ. ಇಂಥ ಸಂಸ್ಥೆಯ ಸಂದರ್ಶನವನ್ನು ಪೇಂಟರ (ಕಮೀಶನರ) ಸಾಹೇಬರ ಬೆಂಬಲವಿದ್ದ ಕೆಲವರು ಕೂಡಿ ಗವ್ಹರ್ನರ ಸಂದರ್ಶನದ ಪಟ್ಟಿಯಲ್ಲಿ ಸೇರಿಸಿರಲಿಲ್ಲ. ಮತ್ತು ಗವ್ಹರ್ನರರನ್ನು ಬೇರೆ ದಾರಿಯಿಂದ ಕರೆದೊಯ್ಯಲಾಯಿತು. ಆದರೆ ಕೆಲವು ಪ್ರಮುಖ ವ್ಯಕ್ತಿಗಳು ಈ ಸಂಸ್ಥೆಯು ನೋಡತಕ್ಕದ್ದೆಂದು ಹೇಳಿದ ಮೂಲಕ ಗವ್ಹರ್ನರ ಸಾಹೇಬರು ಅದನ್ನು ನೋಡಿ ಮೆಚ್ಚಿಕೊಳ್ಳುವ ಯೋಗವು ಸಂಭವಿಸಿತು ಎಂದು ಹೇಳಲಾಗುತ್ತಿದೆ. ಆ ಪ್ರದರ್ಶನದಲ್ಲಿ ಉತ್ತಮವಾದ ಜೋಳದ ತೆನೆಗಳನ್ನು ನೋಡಿ “ನಾಯಕರೇ, ಇದು ಒಡ್ಡಿನ ಬೆಳೆಯೇ ?” ಎಂದು ಕೇಳಿದರಂತೆ.

ಶ್ರೀ ನಾಯಕರು ಒಬ್ಬ ಆದರ್ಶ ಸಹಕಾರ ವಿಭಾಗದ ಕುಶಲ ಕಾರ್ಯಕರ್ತರೂ ಜನತೆಯ ಕಲ್ಯಾಣ ಕಾರ್ಯದಲ್ಲಿ ತೊಡಗಿದ ಅಪೂರ್ವವಾದ ಕಲೆಕ್ಟರರೂ ಆಗಿದ್ದರೆಂಬುದನ್ನು ಮೇಲಿನ ಸಂಗತಿಗಳಿಂದ ಅರಿತುಕೊಳ್ಳಬಹುದು. ಇದಕ್ಕಿಂತಲೂ ಮಿಗಿಲಾದ ಅವರ ಪ್ರೀತಿಯ ವಿಷಯವು ಬೇರೊಂದಿತ್ತು. ಅದೆಂದರೆ ಕರ್ನಾಟಕದ ಏಕೀಕರಣದ ವಿಷಯ. ಕಲೆಕ್ಟರರಾಗಿದ್ದರೂ ಕೂಡ ನಡುವೆ ಬಿಡುವನ್ನು ಮಾಡಿಕೊಂಡು ಬಳ್ಳಾರಿ, ಹೊಸಪೇಟೆ, ಅನಂತಪೂರ, ಮೈಸೂರು, ಮಂಗಳೂರು ಮೊದಲಾದ ಕಡೆಗಳಲ್ಲಿ ಹೋಗಿ ಮುಖಂಡರಿಗೆ ಭೆಟ್ಟಿಯಾಗಿ ಬಂದಿದ್ದರು. ಹಾಗು ಏಕೀಕರಣದ ವಿಷಯವಾಗಿ ನಿರೀಕ್ಷಣೆ ಮಾಡಿಕೊಂಡು ಅಲ್ಲಲ್ಲಿಯ ಮುಖಂಡರೊಡನೆ ಮಾತಾಡಿಕೊಂಡು ಬಂದಿದ್ದರು. ಬ್ರಿಟಿಶ ಕರ್ನಾಟಕ ಅಸೋಸಿಯೇಶನ್ ಎಂಬ ಸಂಸ್ಥೆಯು ಸ್ಥಾಪಿತವಾಗಲಿಕ್ಕೂ ಅವರೇ ಪ್ರೇರಕರಾಗಿದ್ದರು. ಸಾಯಮನ್ ಕಮೀಶನ್ ಭಾರತಕ್ಕೆ ಬಂದಾಗ ಅವರು ಜತ್ತ ಸಂಸ್ಥಾನದ ಆಡಳಿತಗಾರರಾಗಿದ್ದುದರಿಂದ ಅಲ್ಲಿಯ ಹಿಂದಿನ ಇಂಗ್ಲೀಷ ಕಲೆಕ್ಟರರು ಬರೆದ ಸಂಗತಿಗಳ ಆಧಾರವನ್ನು ಇಟ್ಟುಕೊಂಡು ಕರ್ನಾಟಕದ ಏಕೀಕರಣದ ವಿಷಯವಾಗಿ ಆ ಕಮೀಶನ್ನಿಗೂ ಒಂದು ವರದಿಯನ್ನು ಕಳಿಸಿದ್ದರು. ಆಗ ನಾಡವರ ಮಹಾಸಭೆಯ ಅಧ್ಯಕ್ಷರಾಗಿದ್ದುದರಿಂದ ಆ ಸಭೆಯ ವತಿಯಿಂದಲೂ ಒಂದು ಮನವಿಯನ್ನು ಕಳಿಸಿದ್ದರು. ಬ್ರಿಟಿಶ ಕರ್ನಾಟಕದ ಅಸೋಸಿಯೇಶನ್‌ದ ವತಿಯಿಂದ ರಾ. ಬ. ಬಿ. ಎಲ್. ಪಾಟೀಲರು ಈಗಿನ ನ್ಯಾಯಮೂರ್ತಿ ಶ್ರೀ ಎಸ್. ಎಸ್. ಮಳೀಮಠರು ಹಾಗು ಎಸ್. ಟಿ. ಪಾಟೀಲರು, ಈ ಮೂವರು ಪ್ರತಿನಿಧಿಗಳಾಗಿ ಪುಣೆಗೆ ಹೋಗಿ ಕಮೀಶನ್ನಿನ ಮುಂದೆ ತಮ್ಮ ಸಾಕ್ಷಿಯನ್ನು ನುಡಿದು ಬಂದಿದ್ದರು. ಆ ಕಾಲದಲ್ಲಿ ಏಕೀಕರಣವು ಆಗಿಯೇ ತೀರಬಹುದೆಂದು ಶ್ರೀ ನಾಯಕರಿಗೆ ಮನವರಿಕೆಯಾಗಿತ್ತು. ಮುಂದೆ ನಮ್ಮಲ್ಲಿಂದ ಆರಿಸಿಕೊಂಡವರೊಬ್ಬರು ದುಂಡು ಮೇಜಿನ ಪರಿಷತ್ತಿಗೆ ಹೋಗದ್ದರಿಂದ ಏಕೀಕರಣವು ಮುಂದೆ ಬೀಳುವ ಪ್ರಸಂಗ ಬಿತ್ತೆಂದು ಕೆಲವರ ಅಭಿಪ್ರಾಯ. ಕಮೀಶನ್ನಿನ ಕಾರ್ಯದ ವಿಷಯದಲ್ಲಿ ನಮ್ಮ ಕಾಂಗ್ರೆಸ್ಸಿನವರು ಅಸಹಕಾರ ಮಾಡಿದ್ದರೂ ಬ್ರಿಟಿಶ ಕರ್ನಾಟಕದ ಮಟ್ಟಿಗೆ ಏಕೀಕರಣವು ಸಾಧ್ಯವಿದ್ದಿತೆಂಬುದು ಎಷ್ಟೋ ಜನರಿಗೆ ಅನಿಸುತ್ತದೆ. ರಾಜಾ ಪರ್ಲಖಿಮಿಡಿಯವರ ಪ್ರಯತ್ನದಿಂದ ಚಿಕ್ಕದಾದ ಓಡಿಸಾ ಪ್ರಾಂತವೂ ಅದೇ ಪ್ರಕಾರ ಸಿಂಧವೂ ಮುಂದೆ ಪ್ರತ್ಯೇಕಿಸಲ್ಪಟ್ಟುದನ್ನು ನಾವು ಕಾಣುತ್ತೇವೆ. ಅಂದು ಕನ್ನಡಿಗರು ದೊಡ್ಡ ತಪ್ಪು ಮಾಡಿದರೆಂದು ಎಷ್ಟೋ ದೊಡ್ಡ ಜನರ ಅಭಿಪ್ರಾಯ ಈಗಲೂ ಇದೆ. ಶ್ರೀ ನಾಯಕರು ವಿಜಾಪುರದಲ್ಲಿ ಕಲೆಕ್ಟರರಿರುವಾಗಲೇ ಹಾಗು ತಮ್ಮ ಕಾರ್ಯರೂಪದ ನಡುವೆ ತೊಡಗಿರುವಾಗಲೇ ಒಮ್ಮಿಂದೊಮ್ಮೆಲೇ ಕಾಯಿಲೆ ಬಿದ್ದು ತಮ್ಮ ವಯಸ್ಸಿನ ೫೦ನೆಯ ವರುಷದಲ್ಲಿ ಅಂದರೆ ೧೯೩೯ನೆಯ ಇಸವಿ ಡಿಶಂಬರದಲ್ಲಿ ದೈವಾಧೀನರಾದರು. ಅವರಿಗೆ ಇನ್ನೂ ಎಷ್ಟೋ ಸುಧಾರಣೆಗಳನ್ನು ಮಾಡುವದು ಮನಸ್ಸಿನಲ್ಲಿ

ಇತ್ತು. ಆದರೆ ಎಲ್ಲವೂ ದೈವಾಧೀನವೆಂಬುದನ್ನು ಕೊನೆಗೆ ಒಪ್ಪಲೇಬೇಕು.

ಶ್ರೀ ವೆಂಕಣ್ಣಾ ನಾಯಕರ ಜೀವನದೊಳಗಿನ ಮುಖ್ಯವಾದ ಕೆಲವು ಅಂಶಗಳನ್ನು ಇಲ್ಲಿ ನಮೂದಿಸಲು ಪ್ರಯತ್ನಿಸಲಾಗಿದೆ. ಇದರ ಮೇಲಿಂದ ಅವರು ಯಾವ ಪ್ರಕಾರದ ವ್ಯಕ್ತಿಗಳಾಗಿದ್ದರೆಂಬುದನ್ನು ಸಹಜವಾಗಿ ಊಹಿಸಬಹುದು. ಏನೂ ಅನುಕೂಲವಿಲ್ಲದ ಪರಿಸ್ಥಿತಿಯಲ್ಲಿ ಒಂದು ತೀರ ಚಿಕ್ಕ ಹಳ್ಳಿಯಲ್ಲಿ ಹುಟ್ಟಿ ಒಬ್ಬ ಪ್ರಾಥಮಿಕ ಶಿಕ್ಷಕರಾಗಿ ದುಡಿದು ತಮ್ಮ ಅಪ್ರತಿಮವಾದ ಪ್ರತಿಭೆ ಹಾಗು ಅಮೋಘವಾದ ಸಾಹಸದಿಂದ ಅತ್ಯುಚ್ಚವಾದ ಶಿಕ್ಷಣವನ್ನು ಸಂಪಾದಿಸಿ ಅದರ ಮೂಲಕವಾಗಿ ಪ್ರಾಪ್ತವಾದ ಅಧಿಕಾರದ ಅವಕಾಶದಲ್ಲಿ ತಮ್ಮ ವಿದ್ಯೆಯು ಸಾಫಲ್ಯವನ್ನು ಜನಹಿತಕ್ಕಾಗಿ ಹಾಗು ಪರೋಪಕಾರಕ್ಕಾಗಿ ಯಾವ ಪ್ರಕಾರವಾಗಿ ನೆರವೇರಿಸಿದರು ಎಂಬುದಕ್ಕೆ ಶ್ರೀ ವೆಂಕಣ್ಣಾ ನಾಯಕರ ಜೀವನ ಚರಿತ್ರೆಯು ಆದರ್ಶವಾಗಿ ನಿಲ್ಲ ಬಲ್ಲುದಲ್ಲದೆ ಉತ್ಕಟವಾದ ಸ್ಫೂರ್ತಿಯ ನೆಲೆಯಾಗಬಲ್ಲದೆಂಬುವದಕ್ಕೆ ಯಾವ ಸಂದೇಹವೂ ಇಲ್ಲ.

ಕೊನೆಯದಾಗಿ ಒಂದೆರಡು ಮಾತು. ಶ್ರೀ ವೆಂಕಣ್ಣಾ ನಾಯಕರನ್ನು ನಾನು ಚನ್ನಾಗಿ ಬಲ್ಲೆ. ನನ್ನಂತೆ ಅವರನ್ನು ಅನೇಕರು ಬಲ್ಲರು. ಕೆಲವರಂತೂ ಅವರು ಮಾಡಿದ ಕೆಲಸವನ್ನು ಹೇಳಿ ತಣಿಯರು. ಅವರ ಕಾರ್ಯಕುಶಲತೆ, ಅವರ ಕಾರ್ಯಕ್ಷಮತೆ ಹಾಗಿತ್ತು. ಅವರ ಮೇಲೆ ಅವರು ಮಾಡಿದ ಕಾರ್ಯ, ಬೀರಿದ ಪ್ರಭಾವ ಅಂತಹದು. ಅಂದು ಅವರ ಕಂಡ ಮುಂಬೆಳಕು ಇಂದು ನಾವು ಕಾಣುವ ಮುಂಬೆಳಕಿಗಿಂತಲೂ ಮುಂದಾಗಿಯೇ ಇತ್ತೆನ್ನಬಹುದು. ಇಂದಿನ ಸಮಾಜವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣೆಯ ಯೋಜನೆಗಳೆಲ್ಲ ಅವರು ಕೈಕೊಂಡ ಕಾರ್ಯಗಳ ಪ್ರತಿಕೃತಿ ಎಂಬಂತೆ ಇವೆ. ಕರ್ನಾಟಕವೆಂದರೆ ತೀರಿತು; ಮೈಮರೆತು ಮಾತಾಡುತ್ತಿದ್ದರು. ಅದಕ್ಕೊಂದು ಎಲ್ಲೆ ಇರಲಿಲ್ಲ. ಎಲ್ಲ ಮಾತುಗಳು ಕೊನೆಗೆ ಕರ್ನಾಟಕವನ್ನು ಆವರಿಸಿದ ಭಾರತ ಹಾಗು ವಿಶ್ವದ ಮಾತುಗಳು. ಅವರಂತೆ ಇಡಿದಾದ ಕರ್ನಾಟಕವನ್ನು ಪ್ರೇಮಾದರಗಳಿಂದ ಕಂಡವರು ಕಡಿಮೆ. ಹಿಂದೊಮ್ಮೆ ಕೀರ್ತನ ಕೇಸರಿ ಶಿವಮೂರ್ತಿ ಶಾಸ್ತ್ರಿಗಳು ಕಾರವಾರಕ್ಕೆ ಬಂದಾಗ ಒಂದು ಮಾತು ಅಂದದ್ದು ಮುಸಮುಸಕಾಗಿ ಈಗಲೂ ನೆನಸಿದ್ದಂತೆ ಇದೆ. ಶ್ರೀ ಶಾಸ್ತ್ರಿಗಳು ಅವರನ್ನು ಕಾಣಲು ಹೋಗಿದ್ದರಂತೆ. ನಾಯಕರು ಪಟ್ಟದಕಲ್ಲು, ಐಹೊಳೆ, ಬಾದಾಮಿ ಮೊದಲಾದವನ್ನು ನೋಡಿದ್ದೀರಾ? ಇಲ್ಲವಾದರೆ ಅವುಗಳನ್ನೆಲ್ಲ ನೋಡಿ ಬಂದು ಕೀರ್ತನೆ ಮಾಡಿರಿ ಎಂದು ಸಲಹೆ ಕೊಟ್ಟರಂತೆ. ತಮ್ಮ ಕರ್ನಾಟಕ ವಿಜಯ ಕೀರ್ತನೆಗೆ ಇದೇ ನಾಂದಿಯೆಂದು ಶಾಸ್ತ್ರಿಗಳು ಮನವಾರೆ ಹೇಳುತ್ತಿದ್ದರು. ಶ್ರೀ ನಾಯಕರು ನಿಧನ ಹೊಂದುವ ಪೂರ್ವದ ಅವರಿಗೂ ಸರಕಾರಕ್ಕೂ ನಡೆದ ಕಾಗದ ಪತ್ರಗಳನ್ನು ನೋಡಿದಲ್ಲಿ, ಅವರು ವಿಜಾಪುರದಿಂದಲೇ ಆದಷ್ಟು ತೀವ್ರ ಸೇವಾನಿವೃತ್ತವಾಗಬೇಕೆಂಬ ಆಕಾಂಕ್ಷೆಯುಳ್ಳವರಿದ್ದರೆಂದು ಕಾಣುವದು. ಆದಷ್ಟು ಬೇಗ ಸೇವಾನಿವೃತ್ತರಾಗಿ ಬಂದು ಧಾರವಾಡದಲ್ಲಿ ನಿಂತು ಸಾರ್ವಜನಿಕ ಜೀವನದಲ್ಲಿ ಭಾಗಿಯಾಗುವ ಭಾಗ್ಯವನ್ನು ಬಯಸಿದ್ದರು. ಅದು ಕೂಡಿ ಬರಲಿಲ್ಲ. ಆ ಮಾತು ಬೇರೆ. ಕರ್ನಾಟಕದ ಇತಿಹಾಸ ಬರೆಯಬೇಕೆಂದು ಕೆಲವು ಟಿಪ್ಪಣಿಗಳನ್ನು ಮಾಡಿಟ್ಟಿದ್ದನ್ನು ನಾನು ನೋಡಿದ್ದೆ. ಅವು ಎಲ್ಲಿ ಬಿದ್ದಿವೆಯೊ ನಾನರಿಯೆ. ಇವರ ಜೀವನ ಸ್ಮೃತಿಯನ್ನು ಪರಿಶೋಧಿಸಿ ಬರೆದರೆ ನಾಯಕರು ಒಂದು ವ್ಯಕ್ತಿ ಅಲ್ಲ ಒಂದು ಸಂಸ್ಥೆ ಎಂಬ ಮಾತು ನಿದರ್ಶನಕ್ಕೆ ಬರುವದರಲ್ಲಿ ಸಂದೇಹವಿಲ್ಲ.

ಜೀವನ ಶಿಕ್ಷಣ ಪ್ರಸಾರದಲ್ಲಿ ಈ ಸಂಸ್ಥೆಯ ಪಾತ್ರ

ಲೇಖಕರು : **ಶ್ರೀ ಕೆ. ಬಿ. ತೇರಗಾಂವಕರರು,** ಬಿ.ಎಸ್‌ಸಿ.,ಬಿ.ಟಿ.
ಪ್ರಿನ್ಸಿಪಾಲರು ಪದವೀಧರರ ಜೀವನ ಶಿಕ್ಷಣ ಕೇಂದ್ರ, ಧಾರವಾಡ.

೧೮೫೭ರಲ್ಲಿ ಕೇವಲ ಒಂಬತ್ತು ವಿದ್ಯಾರ್ಥಿಗಳಿಂದ 'ಟ್ರೇನಿಂಗಸ್ಕೂಲ' ಎಂಬ ಹೆಸರಿನಿಂದ ಪ್ರಾರಂಭವಾದ ಈ ಸಂಸ್ಥೆಯು ಕನ್ನಡನಾಡಿನ ಶಿಕ್ಷಣ ಪ್ರಪಂಚಕ್ಕೇನೇ ಒಂದು ತವರುಮನೆಯಂತಿದೆ ಎಂದು ಹೇಳಬಹುದು. ಅಂದಿನಿಂದ ಇಂದಿನ ವರೆಗೆ ನಡೆದ ಶಿಕ್ಷಣ ತರಬೇತಿಯಲ್ಲಿ, ಶಿಕ್ಷಣ ಪ್ರಸಾರದಲ್ಲಿ, ಶಿಕ್ಷಣ ಪ್ರಯೋಗಗಳಲ್ಲಿ, ಹೊಸ

ಹೊಸ ಪದ್ಧತಿಗಳ ಅನುಷ್ಠಾನದಲ್ಲಿ, ಶೈಕ್ಷಣಿಕ ಸಂಶೋಧನಗಳಲ್ಲಿ, ಅಭ್ಯಾಸ ಪತ್ರಿಕೆಗಳನ್ನು ರೂಪಿಸುವಲ್ಲಿ ಅತಿ ಮಹತ್ವದ ಪಾತ್ರವನ್ನಾಡುತ್ತ ಈ ಸಂಸ್ಥೆಯು ಬೆಳೆದು ಬಂದಿದೆ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಕನ್ನಡ ಗಂಡು ಮಕ್ಕಳ ಸ. ಟ್ರೇನಿಂಗ ಕಾಲೇಜವು ಕರ್ನಾಟಕದ ಪ್ರಾಥಮಿಕ ಶಿಕ್ಷಣದ ತಾಯಿ ಸಂಸ್ಥೆಯಾಗಿದೆಯೆಂದು ತಿಳಿದರೆ ಅತಿಶಯೋಕ್ತಿಯಾಗಲಾರದು. ಪ್ರತಿಯೊಂದು ಶಿಕ್ಷಣ ಪ್ರಯೋಗಕ್ಕೂ ಮುಂದಾಗುತ್ತಿರುವ ಈ ಸಂಸ್ಥೆಯು ಜೀವನ ಶಿಕ್ಷಣ ಪ್ರಸಾರಕ್ಕೂ ಹೆಮ್ಮೆಯಿಂದ ದುಡಿಯುತ್ತಲಿದೆ ಎಂಬ ಸಂಗತಿಯು ಕಳೆದ ಎಂಟುಹತ್ತು ವರುಷಗಳಿಂದ ಅದರ ಕಾರ್ಯ ಕಲಾಪಗಳನ್ನು ಸಂತತವಾಗಿ ನಿರೀಕ್ಷಿಸುವವರಿಗೆ ಹೊಳೆಯದೆ ಇರದು. ಅದನ್ನು ನಿಕಟ ಸಂಬಂಧದಿಂದ ಅವಲೋಕಿಸುವ ಸಂಧಿಯು ಈ ಲೇಖಕನಿಗೂ ಒದಗಿ ಬಂದಿದೆ.

ಗಾಂಧೀಜಿಯಿಂದ ಪ್ರಣೀತವಾದ ಮೂಲಶಿಕ್ಷಣದ ಮೊದಲ ಸಮ್ಮೇಲನವು ಕ್ರಿ. ಶ. ೧೯೩೭ನೆಯ ಅಕ್ಟೋಬರ ತಿಂಗಳಲ್ಲಿ ವರ್ಧಾದಲ್ಲಿ ಸೇರಿದ್ದಿತು. ಆ ಸಮ್ಮೇಲನಕ್ಕೆ ಉಪಸ್ಥಿತರಿರಲು ಆ ಸಮಯದಲ್ಲಿ ಈ ಸಂಸ್ಥೆಯ ಪ್ರಿನ್ಸಿಪಾಲರು ತಮ್ಮ ಸ್ವಂತ ವೆಚ್ಚದಿಂದ ವರ್ಧಾಯಾತ್ರೆ ಕೈಕೊಂಡು ಬಂದರು. ಅಲ್ಲಿ ಸೇರಿದ ಸಮ್ಮೇಲನವು 'ಜೀವನ ಶಿಕ್ಷಣವು' ಪ್ರಾಥಮಿಕ ಶಿಕ್ಷಣದ ಮೆಟ್ಟಲಿನಲ್ಲಿ ಮಾತೃ ಭಾಷೆಯ ಮೂಲಕ ಕಾಲಾಂತರದಲ್ಲಿ ಎಲ್ಲ ಮಕ್ಕಳಿಗೂ ದೊರಕಬೇಕೆಂದೂ, ಭಾರತದ ಪುನರುದ್ಧಾರಕ್ಕೆ ಆ ಶಿಕ್ಷಣ ಪದ್ಧತಿಯೇ ತಾರಕವೆಂಬ ನಿರ್ಣಯವನ್ನು ಸ್ವೀಕರಿಸಿತು. ಅದರ ಯೋಗ್ಯ ದರ್ಶನ ಮಾಡಿಸಲು ಮೊದಲು ಕೆಲಜನ ಶಿಕ್ಷಕರಿಗೆ ವರ್ಧಾದಲ್ಲಿ ತರಬೇತಿ ಈಯಬೇಕೆಂಬ ನಿರ್ಣಯವೂ ಆಯಿತು. ತದನುಸಾರವಾಗಿ ಮಾಧ್ಯಮಿಕ ಶಿಕ್ಷಕರಿಗೆ ೩ ವಾರಗಳ ಒಂದು ತರಬೇತಿಯನ್ನು ಕೊಡುವ ಉಪಕ್ರಮವು ಆರಂಭವಾಯಿತು. ಮೊಟ್ಟಮೊದಲು ಆ ಶಿಕ್ಷಣದ ದೀಕ್ಷೆ ಪಡೆಯಲು ೧೯೩೮ನೆಯ ಜನೆವರಿ ತಿಂಗಳಲ್ಲಿ ಈ ಸಂಸ್ಥೆಯ ವತಿಯಿಂದ ಒಬ್ಬ ಶಿಕ್ಷಕರು ಹೋಗಿ ಬಂದರು. ಮರುವರ್ಷ ಜನೆವರಿ ತಿಂಗಳಲ್ಲಿ ವರ್ಧಾಯಾತ್ರೆಯನ್ನು ಕೈಕೊಳ್ಳುವ ಸುಯೋಗವು ಇದೇ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ನನಗೆ ಒದಗಿ ಬಂದಿತು. ಮುಂದೆ ಕೆಲದಿನಗಳಲ್ಲಿಯೇ ಈ ಸಂಸ್ಥೆಯ ಆವಾರದಲ್ಲಿಯೇ ಪ್ರಾಥಮಿಕ ಶಿಕ್ಷಕರಿಗೆ ಈ ಹೊಸ ಶಿಕ್ಷಣದ ಮಾರ್ಗದಲ್ಲಿ ತರಬೇತಿ ಕೊಡಲು 'ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರ'ವೆಂಬ ಹೆಸರಿನಿಂದ ಒಂದು ಹೊಸ ಸಂಸ್ಥೆಯು ಫೆಬ್ರುವರಿ ೧೯೩೯ರಲ್ಲಿ ಸ್ಥಾಪನೆಯಾಯಿತು.

ಜೀವನ ಶಿಕ್ಷಣವನ್ನು ಹೆಚ್ಚು ವ್ಯಾಪಕಗೊಳಿಸುವದರ ಸಲುವಾಗಿ ಮುಂಬೈ ಸರಕಾರವು ಪುಣೆಯಲ್ಲಿ ಟ್ರೇನಿಂಗ ಕಾಲೇಜದಲ್ಲಿ ದುಡಿಯುತ್ತಿರುವಂಥವರ ಸಲುವಾಗಿ, ಅ. ಡಿ. ಎ. ಇ. ರವರ ಸಲುವಾಗಿ ಒಂದು ಅಲ್ಪಾವಧಿ ತರಬೇತಿಯನ್ನು ೧೯೪೬-೪೭ರಲ್ಲಿ ಪ್ರಾರಂಭಿಸಿತು. ಈ ಸಂಸ್ಥೆಯಿಂದ ಕೆಲವು ಶಿಕ್ಷಕರು ಹೋಗಿ ಮರಳಿ ಬಂದು ಈ ಸಂಸ್ಥೆಯಲ್ಲಿಯೇ ಸರಕಾರದ ಆದೇಶದೊಂದಿಗೆ ಜೀವನ ಶಿಕ್ಷಣದ ಒಂದೊಂದೇ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿಳಿಸಲು ಯತ್ನಿಸುತ್ತಿದ್ದರು.

ಕ್ರಿ. ಶ. ೧೯೪೭ನೆಯ ಜುಲೈ ತಿಂಗಳಲ್ಲಿ ಮುಂಬೈ ಸರಕಾರವು ಸ್ನಾತಕರರಿಗಾಗಿ ಜೀವನ ಶಿಕ್ಷಣದಲ್ಲಿ ಪೂರ್ಣಾವಧಿಯ ತರಬೇತಿ ಕೊಡಲು ಒಂದು ಕಾಲೇಜನ್ನು ಸ್ಥಾಪಿಸಿತು. ಆಗ ಈ ಸಂಸ್ಥೆಯಲ್ಲಿ ಕೆಲಸ ಮಾಡುತ್ತಲಿದ್ದ ಒಬ್ಬಿಬ್ಬರು ತರಬೇತಿಗಾಗಿ ಬೆಳಗಾವಿಗೆ ಹೋದರು. ೧೯೪೮ರಲ್ಲಿ ಆ ತರಬೇತಿ ಸಂಸ್ಥೆಯಿಂದ ಹೊರಬಿದ್ದ ಮೂರು–ನಾಲ್ಕು ಜನ ತರುಣ ಪದವೀಧರರು ಈ ಸಂಸ್ಥೆಗೆ ಬಂದು ಹಿರಿಯರಾದವರ ಮಾರ್ಗದರ್ಶನದಲ್ಲಿ ಹೊಸ ಶಿಕ್ಷಣದ ವಾತಾವರಣವನ್ನು ಶಿಕ್ಷಕ ವಿದ್ಯಾರ್ಥಿಗಳಲ್ಲಿ ಬೀರಹತ್ತಿದರು.

೧೯೪೮ರ ಜೂನ ತಿಂಗಳಿನಲ್ಲಿ ಬೆಳಗಾವಿಯ ಪದವೀಧರರ ಜೀವನ ಶಿಕ್ಷಣ ಕೇಂದ್ರವು ಮುಚ್ಚಿಹೋಗಿ ಅದರ ಸ್ಥಳದಲ್ಲಿ ಪ್ರಾದೇಶಿಕ ತಳಹದಿಯ ಮೇಲೆ ಮೂರು ಕೇಂದ್ರಗಳು ದೊರೆತವು. ಕನ್ನಡ ನಾಡಿಗಾಗಿ ಈ ಮಹಾಸಂಸ್ಥೆಯ ಆವಾರದಲ್ಲಿಯೇ ಪದವೀಧರರ ಜೀವನ ಶಿಕ್ಷಣ ಕೇಂದ್ರವು ಆರಂಭವಾಯಿತು. ಆಗ ಈ ಸಂಸ್ಥೆಯಲ್ಲಿ ಕೆಲಸಮಾಡುತ್ತಲಿದ್ದ ಒಬ್ಬಿಬ್ಬರು ಟ್ರೇನಿಂಗಿಗೆ ಹೋದರು. ಹಾಗು ಮುಂದೆ ಪ್ರತಿವರ್ಷ ಈ ಸಂಸ್ಥೆಯು ಅಧ್ಯಾಪಕ ಮಂಡಲದಲ್ಲಿ ಪೂರ್ಣ ತರಬೇತಿಗಾಗಿ ಹೋಗಹತ್ತಿದರಲ್ಲದೆ; ಪೂರ್ಣ ತರಬೇತಿ ಹೊಂದಿದ ಶಿಕ್ಷಕರ ಪ್ರಮಾಣವು ಹೆಚ್ಚಾಗುತ್ತ ಹೋಯಿತು.

೧೯೪೮ರಲ್ಲಿ ಈ ಸಂಸ್ಥೆಯ ಪ್ರಿನ್ಸಿಪಾಲರು ಆಗಲೇ ದೀಕ್ಷೆಗೊಂಡು ಬಂದ ತಮ್ಮ ಸಹೋದ್ಯೋಗಗಳ ನೆರವಿನಿಂದ ಹೊಸ ಶಿಕ್ಷಣದ ಪ್ರಯೋಗವನ್ನು ಆರಂಭಿಸಿದರು. ೧೯೪೮-೪೯ರಲ್ಲಿ ಮೂಲೋದ್ಯೋಗ ಹಾಗು ಸಾಂಘಿಕ

ಜೀವನವನ್ನು ಮಾತ್ರ ಪ್ರಯೋಗದಲ್ಲಿ ತರಲಾಯಿತು. ಮುಂದೆ ಸಮವಾಯ ಪಾಠಗಳಲ್ಲಿ ತರಬೇತಿಯನ್ನು ಕೊಡಲಾಯಿತು.

೧೯೪೯ ನೆಯ ಜುಲೈ ತಿಂಗಳವು ಈ ಸಂಸ್ಥೆಯ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿದೆ ಎಂದು ಹೇಳಬಹುದು. ಮುಂಬೈ ಸರಕಾರವು ಇದನ್ನು ಪೂರ್ಣ ಜೀವನ ಶಿಕ್ಷಣ ತರಬೇತಿ ಕೇಂದ್ರವನ್ನಾಗಿ ಪರಿವರ್ತಿಸಿತು. 'ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರ'ವೂ ಇದರಲ್ಲಿಯೇ ಲೀನವಾಯಿತು. ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರದ ಪ್ರಿನ್ಸಿಪಾಲರೇ ಈ ಸಂಸ್ಥೆಯ ಪ್ರಿನ್ಸಿಪಾಲರೆಂದು ನೇಮಕಗೊಂಡರು. ಆಗಲೇ ಜೀವನ ಶಿಕ್ಷಣದ ಮಾರ್ಗದರ್ಶನದಲ್ಲಿ ನುರಿತವರಾದ ಪ್ರಿನ್ಸಿಪಾಲರಿಗೆ ಈ ದೊಡ್ಡ ಸಂಸ್ಥೆಯನ್ನು ಜೀವನ ಶಿಕ್ಷಣ ಧ್ಯೇಯಗಳತ್ತ ನಡೆಯಿಸಿಕೊಂಡು ಹೋಗಲು ಕಠಿಣವೆನಿಸಲಿಲ್ಲ. ಅಂದಿನಿಂದ ಈ ಸಂಸ್ಥೆಯು ಜೀವನ ಶಿಕ್ಷಣದ ಮುನ್ನಡೆಗಾಗಿ ಪರಿಶ್ರಮಿಸುತ್ತಲಿದೆ, ಇಲ್ಲಿಂದ ತರಬೇತಿಯನ್ನು ಪೂರ್ಣಗೊಳಿಸಿಕೊಂಡು ಹೊರಬೀಳುತ್ತಿರುವ ಶಿಕ್ಷಕ ಬಂಧುಗಳಲ್ಲಿ ಒಂದು ಹೊಸ ದೃಷ್ಟಿಕೋನವನ್ನು ತಂದುಕೊಡಲು ಹೆಣಗುತ್ತಿದೆ.

ಇಲ್ಲಿಯ ಜೀವನ ಕ್ರಮ

ಎಲ್ಲರೂ ಕೂಡಿ ಬಾಳೋಣ; ಎಲ್ಲರೂ ಸುಖವಾಗಿರೋಣ ಎಂಬುದು ಭಾರತೀಯರ ಜೀವನದ ಸೂತ್ರವು. ಪರಸ್ಪರರ ಹಕ್ಕುಗಳ ಅರಿವನ್ನು ಮಾಡಿಕೊಂಡು ಸುಖಿಯಾದ ಸಹಜೀವನವನ್ನು ನಡೆಯಿಸಿಕೊಂಡು ಹೋಗುವದು ಒಂದು ಕಲೆಯಿದ್ದಂತೆ; ಅದನ್ನು ಕರಗತ ಮಾಡಿಕೊಳ್ಳುವದೆಂದರೆ ಒಂದುಜೀವನ ಮೌಲ್ಯವನ್ನು ದೊರಕಿಸಿಕೊಂಡಂತೆಯೇ ಸೈ! ಇಲ್ಲಿಯ ಕುಟುಂಬ ಪದ್ಧತಿಯ ಜೀವನ ಕ್ರಮವು ಅಂಥ ಒಂದು ಮೌಲ್ಯವನ್ನು ವಿದ್ಯಾರ್ಥಿಗಳಲ್ಲಿ ಬೇರೂರಿಸಲು ಹೆಣಗುತ್ತಿದೆ. ಇದು ಸಂತತವಾದ ರೂಢಿಯಿಂದ ಬರುತ್ತಿದೆ. ಆ ರೂಢಿಗಾಗಿಯೇ ತರಬೇತಿ ಸಂಸ್ಥೆಗಳಲ್ಲಿ ಇಂದು ಕೌಟುಂಬಿಕ ಜೀವನವು ಅವಶ್ಯವೆನಿಸಿದೆ. ಕೂಡಿ ಇರುವುದು, ಕೂಡಿ ಕೆಲಸ ಮಾಡುವದು, ಕೂಡಿ ಉಣ್ಣುವದು ಇಲ್ಲಿಯ ಕೌಟುಂಬಿಕ ಜೀವನದ ಕಾರ್ಯ ಪದ್ಧತಿಯು. ಇದು ಪರಸ್ಪರರಲ್ಲಿ ಪ್ರೇಮ, ಸಹಕಾರ, ಬಂಧುತ್ವ, ಸಹಿಷ್ಣುತೆ ಮೊದಲಾದ ಗುಣಗಳನ್ನು ಕಲಿಸಿ ಕೊಡುತ್ತದಲ್ಲದೆ ಬಳಗದವರನ್ನು ತೇಜಸ್ವಿಗಳನ್ನಾಗಿ ಮಾಡುತ್ತಿದೆ. ಇಲ್ಲಿ ನಿತ್ಯದಲ್ಲಿ ಇನ್ನೂರು ಜನರು 'ಸಹನೌಭುನಕ್ತು' ಎಂಬ ಮಂತ್ರ ಪಠನದಿಂದ ಜಾತಿ ಮತ ಪಂಥಗಳ ಭೇದವಿಲ್ಲದಲೆ ಒಂದೇ ಮನೆಯವರಂತೆ ಉಣ್ಣುತ್ತಲಿರುವರು. ಎಲ್ಲ ಕಾರ್ಯಕ್ರಮಗಳೂ ಬೆಳಗಿನಲ್ಲಿ ಪ್ರಾರ್ಥನೆಯಿಂದ ಪ್ರಾರಂಭವಾಗುತ್ತವೆ. ಇಲ್ಲಿಯ ಸಾಮೂಹಿಕ ಪ್ರಾರ್ಥನೆಯು ಎಂಥ ನಾಸ್ತಿಕನನ್ನೂ, ತನ್ನ ಅಚಲ ಅಭಿಪ್ರಾಯವನ್ನು ಕದಡದೇ ಬಿಡದು. ವೈಯಕ್ತಿಕ ಹಾಗು ಸಾಮೂಹಿಕ ಸ್ವಚ್ಛತೆಯ ಕಾರ್ಯಕಲಾಪಗಳು, ಊಟದ ವ್ಯವಸ್ಥೆ ಮಾಡುವದು, ಅಡಿಗೆಯವರಿಗೆ ನೆರವು ನೀಡುವುದು, ಶುಚಿಗೊಳಿಸುವುದು, ಪದಾರ್ಥಗಳನ್ನು ಕೊಳ್ಳುವದು ಮುಂತಾದ ಎಲ್ಲ ಕಾರ್ಯಕಲಾಪಗಳೂ ಶಿಕ್ಷಕ ವಿದ್ಯಾರ್ಥಿಗಳಿಂದಲೇ ನೆರವೇರುತ್ತಿವೆ.

ಮೂಲೋದ್ಯೋಗಗಳು

ಜೀವನ ಶಿಕ್ಷಣವು ಉದ್ಯೋಗಮೂಲವಾದುದು. ಕೃತಿಪ್ರಧಾನವಾದ ಈ ಜೀವನ ಶಿಕ್ಷಣ ಪದ್ಧತಿಯು ಬಾಳಿಗೊಂದು ಊರುಗೋಲನ್ನು ಕೊಡುತ್ತದಲ್ಲದೆ, ಜೀವನದಲ್ಲಿ ಧುತ್ತೆಂದು ನಿಲ್ಲುವ ನನಃ ಕ್ಷಿಎಂಬ ಪ್ರಶ್ನೆಯನ್ನು ಅತ್ಯಂತ ಸಮರ್ಥ ರೀತಿಯಿಂದ ಎದುರಿಸಲು ಮಕ್ಕಳಲ್ಲಿ ಧೈರ್ಯವನ್ನು ಕುದುರಿಸುತ್ತದೆ. ಮಕ್ಕಳಿಗೆ ಉದ್ಯೋಗದ ಪರಿಚಯ ಮಾಡಿ ಕೊಡಲಿರುವ ಶಿಕ್ಷಕ ವಿದ್ಯಾರ್ಥಿಗಳು ಮೊದಲು ತರಬೇತಿ ಸಂಸ್ಥೆಗಳಲ್ಲಿ ಆ ಉದ್ಯೋಗದ ಮೂಲಗಳನ್ನು ಅರಿಯಬೇಕಾಗುತ್ತದೆ. ತದನುಗುಣವಾಗಿ ಈ ಸಂಸ್ಥೆಯಲ್ಲಿ ಅಭ್ಯಸಿಸುತ್ತಿರುವ ಶಿಕ್ಷಕ ವಿದ್ಯಾರ್ಥಿಗಳು ತಮ್ಮ ಒಲವಿನಂತೆ ಆಯ್ದುಕೊಳ್ಳಬಹುದಾದ ಎರಡು ಮುಖ್ಯ ಉದ್ಯೋಗಗಳಲ್ಲಿ ತರಬೇತಿ ಪಡೆಯಬೇಕಾಗುವದು. (೧) ಒಕ್ಕಲುತನ, (೨) ನೂಲುನೆಯ್ಗೆ. ಒಕ್ಕಲುತನಕ್ಕೆ ಬೇಕಾದ ಭೂಮಿ ಹಾಗು ಉಳಿದ ಸೌಕರ್ಯಗಳೂ ಇರುವವು. ಒಕ್ಕಲುತನವನ್ನು ತಮ್ಮ ಮುಖ್ಯ ಉದ್ಯೋಗವನ್ನಾಗಿ ಆರಿಸಿಕೊಂಡ ಶಿಕ್ಷಕ ವಿದ್ಯಾರ್ಥಿಗಳು ತಮ್ಮ ಎರಡು ವರ್ಷಗಳ ಅವಧಿಯಲ್ಲಿ ಸಾಕಷ್ಟು ಪ್ರಾಯೋಗಿಕ ಕೆಲಸವನ್ನು ಮಾಡಿ, ಆಹಾರೋತ್ಪಾದನೆಯನ್ನು ಮಾಡುವರಲ್ಲದೆ, ತಾತ್ವಿಕ ಜ್ಞಾನವನ್ನು ಸಾಕಷ್ಟು ದೊರಕಿಸಿಕೊಳ್ಳುವರು. ನೂಲು ನೆಯ್ಗೆಯನ್ನು ತಮ್ಮ ಮುಖ್ಯ ಉದ್ಯೋಗವನ್ನಾಗಿ ಆರಿಸಿಕೊಂಡ ಶಿಕ್ಷಕ ವಿದ್ಯಾರ್ಥಿಗಳು ತಮ್ಮ ತರಬೇತಿಯ ಅವಧಿಯಲ್ಲಿ ಕನಿಷ್ಠಪಕ್ಷ ಹತ್ತು ವಾರ ಅರಿವೆಯನ್ನು ನೇಯುವರಲ್ಲದೆ, ಅದಕ್ಕೆ ಬೇಕಾಗುವ ನೂಲನ್ನೂ ತಾವೇ ಸಿದ್ಧಗೊಳಿಸಿಕೊಂಡು ಅದರ

ಎಲ್ಲ ಶಾಸ್ತ್ರೀಯ ಜ್ಞಾನವನ್ನೂ ಮಾಡಿಕೊಳ್ಳುವರು. ಜೊತೆಗೆ ಕೈತೋಟ, ರಟ್ಟಿನ ಕೆಲಸಗಳೂ ಇಲ್ಲಿ ಉಪ ಮೂಲೋದ್ಯೋಗಗಳಾಗಿದ್ದು ಶಿಕ್ಷಕ ವಿದ್ಯಾರ್ಥಿಗಳು ಅಲ್ಪ ಮಟ್ಟಿಗೆ ಆ ಉದ್ಯೋಗಗಳ ಜ್ಞಾನವನ್ನು ಮಾಡಿಕೊಳ್ಳುವರು. ಮೂಲೋದ್ಯೋಗವು ಈ ಸಂಸ್ಥೆಯಲ್ಲಿ ಪ್ರಗ ಪಥದಲ್ಲಿ ಸಾಗಿದೆಯೆಂಬ ಸಂಗತಿಯು ಕೆಳಗಿನ ಕೆಲ ಅಂಕಿ ಸಂಖ್ಯೆಗಳನ್ನು ಗಮನಿಸಿದಲ್ಲಿ ಗೊತ್ತಾಗುವದು.

ನೂಲು—ನೇಯ್ಗೆ

ವರ್ಷಗಳು	ವಿ. ಸಂಖ್ಯೆ	ಅ. ಹುಟ್ಟುವಳಿ		ಆದಾಯ	ವೆಚ್ಚ	ಲಾಭ	ಪ್ರತಿ ವಿದ್ಯಾರ್ಥಿಗಾದ ಲಾಭ
		ಯಾ.	ಇಂ.				
೧೯೫೨-೫೩	೪೧	೪೩೪	೦	೮೨೨- ೭- ೦	೫೯೬-೧೧-೦	೨೨೫-೧೨- ೦	೫- ೮- ೦
೧೯೫೩-೫೪	೪೨	೫೧೮	೧೫	೯೩೨-೧೫-೧೧	೫೨೯-೧೧-೦	೪೦೩- ೪-೧೧	೯-೧೩- ೪
೧೯೫೪-೫೫	೪೩	೫೧೮	೧೫	೮೮೪- ೩- ೯	೪೪೭- ೬-೦	೪೩೬-೧೩- ೯	೧೦- ೨- ೬
೧೯೫೫-೫೬	೩೯	೫೪೨	೪	೧೦೦೧-೧೧- ೬	೪೭೨- ೨-೦	೫೩೨- ೯- ೬	೧೪- ೦- ೩
೧೯೫೬-೫೭	೪೧	೬೩೦	೧	೧೦೭೨ ೨೦ ನಪೈ.	೫೩೫ ೧೦ ನಪೈ.	೫೩೭ ೧೦ ನಪೈ.	೧೩ ೧೦ ನಪೈ.

ಈ ಆಯವ್ಯಯದ ಸಿಂಹಾವಲೋಕನದಿಂದ ನೂಲು ನೆಯ್ಗೆಯ ಪ್ರಗತಿಯಲ್ಲಿ ಈ ಸಂಸ್ಥೆಯು ಮುನ್ನಡೆಯುತ್ತಿರುವ ಸಂಗತಿಯು ದೃಗ್ಗೋಚರವಾಗುವದು.

ಒಕ್ಕಲುತನ

ವರುಷಗಳು	ವಿ. ಸಂಖ್ಯೆ	ಆದಾಯ	ವೆಚ್ಚ	ಲಾಭ	ಪ್ರತಿ ವಿ. ಲಾಭ
೧೯೫೨-೫೩	೧೨೮	೪೭೬-೧೦- ೩	೩೮೯- ೭- ೦	೮೬-೧೪- ೦	೦-೧೦- ೯
೧೯೫೩-೫೪	೧೩೭	೧೮೫೫-೧೪- ೬	೨೦೨-೧೪- ೦	೧೬೫೩- ೦- ೬	೧೨- ೧- ೦
೧೯೫೪-೫೫	೧೨೮	೧೯೪೩-೧೦- ೩	೩೩೭- ೧- ೦	೧೬೦೬= ೯- ೩	೧೨- ೮- ೯
೧೯೫೫-೫೬	೧೧೮	೧೨೪೪- ೬- ೯	೬೦೦- ೨- ೯	೬೪೪- ೪- ೦	೫- ೪- ೯
೧೯೫೬-೫೭	೧೧೩	೨೦೨೨-೧೩- ೬	೧೨೧೧- ೯- ೩	೮೧೧- ೪- ೩	೭- ೦- ೬

ಈ ಆಯವ್ಯಯ ಪತ್ರಿಕೆಯ ಅವಲೋಕನದಿಂದ ಈ ಸಂಸ್ಥೆಯಲ್ಲಿ ಮೂಲೋದ್ಯೋಗಗಳ ಪ್ರಗತಿಯ ಒಂದು ಕಲ್ಪನೆಯು ವಾಚಕರಿಗಾಗಲು ಸಾಕು. ಹೊಲದ ಕ್ಷೇತ್ರವು ಹೆಚ್ಚಾಗಿ ನೀರಿನ ಸೌಕರ್ಯವು ಉಂಟಾದರೆ ಈ ಉತ್ಪನ್ನವನ್ನು ಇನ್ನೂ ಹೆಚ್ಚಿಸಲು ಸಾಧ್ಯವಿದೆ.

ಸಾಂಸ್ಕೃತಿಕ ಚಟುವಟಿಕೆಗಳು

ವರುಷದುದ್ದಕ್ಕೂ ಸಾಕಷ್ಟು ಸಾಂಸ್ಕೃತಿಕ ಚಟುವಟಿಕೆಗಳನ್ನು ನಡೆಯಿಸಿಕೊಂಡು ಹೋಗುತ್ತಿರುವದುಂಟು. ಗಾಂಧಿಜಯಂತಿ, ಸ್ವಾತಂತ್ರ್ಯ ದಿನಾಚರಣೆ, ಪ್ರಜಾರಾಜ್ಯದಿನೋತ್ಸವ, ಮಹಾತ್ಮರಾದವರ ಜಯಂತಿ, ಪುಣ್ಯತಿಥಿಗಳನ್ನು ಆಚರಿಸಿ, ವಿದ್ವಾಂಸರ, ವಿದುಷಿಯರ, ರಾಜಕಾರಣಿಗಳ, ಕವಿಗಳ, ಸಾಹಿತ್ಯಜ್ಞರ, ಕಲಾವಂತರ, ಪ್ರಾಧ್ಯಾಪಕರ, ಶಿಕ್ಷಣತಜ್ಞರ, ಅಧಿಕಾರಿಗಳ, ಅನುಭಾವಿಗಳ, ಶಿವಶರಣರ ಭಾಷಣಗಳನ್ನೂ ಪ್ರವಚನಗಳನ್ನೂ ಏರ್ಪಡಿಸಿ, ಲಾವಣಿಕಾರರನ್ನು ಆಮಂತ್ರಿಸಿ, ಕೀರ್ತನಕಾರರಿಂದ ಕೀರ್ತನಗಳನ್ನು ಮಾಡಿಸಿ, ವಕ್ತೃತ್ವ ಸಂಘವನ್ನು ಸ್ಥಾಪಿಸಿ ಪ್ರವಾಸಗಳನ್ನು ಕೈಕೊಂಡು, ನೃತ್ಯ, ನಾಟಕ ಮೊದಲಾದ ವಿವಿಧ ಮನರಂಜನೆಯ ಕಾರ್ಯಕ್ರಮಗಳನ್ನು ಹಮ್ಮಿ, ಕೈಬರೆಹದ ಪತ್ರಿಕೆಯನ್ನು ಹೊರಡಿಸಿ, ಸಂಸ್ಕೃತಿಯ ಪ್ರಸಾರವನ್ನು ಸಂಸ್ಥೆಯು ಮಾಡುತ್ತಿರುವದಲ್ಲದೆ, ಶಿಕ್ಷಕ ವಿದ್ಯಾರ್ಥಿಗಳು ತಮ್ಮ ಶಾಲೆಗೆ ಮರಳಿದ ನಂತರ, ಅವನ್ನು ಹೇಗೆ ಸಂಘಟಿಸಿ, ಸಾಗಿಸಿಕೊಂಡು ಹೋಗಬೇಕೆಂಬ ಬಗೆಗೆ ತರಬೇತನ್ನೂ ಒದಗಿಸುತ್ತವೆ. ಇಲ್ಲಿಂದ ಹಳ್ಳಿಗಳಿಗೆ ಮರಳುವಾಗ ಸಂಸ್ಕೃತಿಯ ಸಂವಾಹಕರಾಗಿಯೇ ಹೊರಬೀಳುವರು.

ಸಾಧಿಸಿದ ಪ್ರಗತಿ

ಈ ಸಂಸ್ಥೆಯಲ್ಲಿ ಜೀವನ ಶಿಕ್ಷಣ ಕ್ರಮವು ಪ್ರಾರಂಭವಾಗಿ ಸುಮಾರು ಎಂಟು ವರುಷಗಳಾಗಿವೆ. ಈ ಅಲ್ಪ ಸಮಯದ ಅವಧಿಯಲ್ಲಿ ಸಾಗಿದ ಕಾರ್ಯಕಲಾಪಗಳಿಂದ ಅಲ್ಲಿಯ ಜೀವನ ಶಿಕ್ಷಣದ ಪ್ರಗತಿಯನ್ನು ಅಳೆಯುವದು ಸರಿಯಾಗಲಾರದು.ಆದರೂ ವಿಮರ್ಶಾತ್ಮಕ ದೃಷ್ಟಿಯಿಂದ ಕಂಡ ಕೆಲವು ಮಾತುಗಳನ್ನು ಎತ್ತಿತೋರಿಸಲೇಬೇಕು. ಯಾವುದೇ ಒಂದು ಕೆಲಸವನ್ನು ಕಾರ್ಯರೂಪದಲ್ಲಿ ತರುವದಕ್ಕಿಂತ ಮುಂಚಿತವಾಗಿ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಯ ದೃಷ್ಟಿಯಿಂದ ನೋಡಿದರೆ ಸಾಕಷ್ಟು ಪ್ರಗತಿಯನ್ನು ಸಾಧಿಸಿದೆ ಎಂದು ಹೇಳಬಹುದು. ಜೀವನ ಶಿಕ್ಷಣವನ್ನು ಕಾರ್ಯರೂಪದಲ್ಲಿ ತರಲು ಬೇಕಾದ ತರಬೇತಿ ಹೊಂದಿದ ಶಿಕ್ಷಣ ವೃಂದ, ಇತರ ಸಲಕರಣೆಗಳು, ಸಾಹಿತ್ಯ ಪಾಠಸಾಲೆ ಮುಂತಾದವುಗಳು ತೃಪ್ತಿಕರವಾಗಿ ಸಿದ್ಧಗೊಂಡಿವೆ. ಬೆಳೆಯುತ್ತಿರುವ ಈ ಸಂಸ್ಥೆಗೆ ಬೇಕಾದ ಸ್ಥಳವು ಮಾತ್ರ ಸಾಕಷ್ಟಿಲ್ಲದಾಗಿದೆ. ತನ್ನ ಸ್ವಂತದ ಇಮಾರತಿಗಳು, ಇತರ ಕಟ್ಟಡಗಳು ಇತರ ಸಂಸ್ಥೆಯವರಿಗೆ ಕೊಡಲಾಗಿರುವದರಿಂದ ಭರದಿಂದ ಮುಂದುವರಿಯಬೇಕೆನ್ನುವ ಈ ಸಂಸ್ಥೆ ಇದ್ದುದರಲ್ಲಿಯೇ ತನ್ನ ಪ್ರಗತಿಯನ್ನು ಕಂಡುಕೊಳ್ಳಬೇಕಾಗಿದೆ· ಸ್ವಾವಲಂಬನ ದೃಷ್ಟಿಯಿಂದ ನೋಡಲಾಗಿ ಇಲ್ಲಿಯ ಸರಾಸರಿ ಶಿಕ್ಷಕ ವಿದ್ಯಾರ್ಥಿಗಳ ವಾರ್ಷಿಕ ಉತ್ಪನ್ನವು ಪ್ರತಿವರ್ಷ ಏರುತ್ತ ಹೋಗಿದೆ. ಇದನ್ನು ಮೂಲೋದ್ಯೋಗದ ವಿಭಾಗದಲ್ಲಿ ಐದು ವರುಷಗಳ ಅಂಕಿ ಸಂಖ್ಯೆಗಳಿಂದ ದಿಗ್ದರ್ಶಿಸಲಾಗಿದೆ.

ಪ್ರತಿಯೊಬ್ಬ ಶಿಕ್ಷಕ ವಿದ್ಯಾರ್ಥಿಯು ವಸತಿ ಗೃಹದಲ್ಲಿಯೇ ಇರಬೇಕೆಂಬ ಕಡ್ಡಾಯವಿದೆ. ಆದರೆ ಸಾಕಷ್ಟು ಕೊಠಡಿಗಳಿರದ್ದರಿಂದ ಎಲ್ಲರೂ ಒಂದೆಡೆಗೇ ಇರುವದು ದುಸ್ತರವಾಗಿದೆ. ಆದರೂ ಶಿಕ್ಷಕ ವಿದ್ಯಾರ್ಥಿಗಳು ಸಾಂಘಿಕ ಜೀವನದ ಕೆಲ ಮಾತುಗಳನ್ನಾದರೂ ಕೂಡಿಯೇ ಇದ್ದುಕೊಂಡು ಅನುಭವಿಸುತ್ತಿರುವರು. ಶಿಕ್ಷಕರ ತರಬೇತಿಯಲ್ಲಿ ಅವಶ್ಯವಾಗಿ ನೋಡಬೇಕಾದ ದೃಷ್ಟಿಕೋನದಲ್ಲಾದ ಬದಲಾವಣೆ ಹಾಗು ತಾಂತ್ರಿಕ ಜ್ಞಾನ ಇವುಗಳ ವಿಷಯವಾಗಿ ಹೇಳಬೇಕೆಂದರೆ ಈ ೮; ೧೦ ವರುಷಗಳಲ್ಲಿ ಅನೇಕ ವರ್ಷಗಳಿಂದ ನಡೆದು ಬಂದ ರೂಢ ನಂಬಿಗೆ, ಅಂಧ ವಿಶ್ವಾಸಗಳಲ್ಲಿ ಬದಲಾವಣೆ ಕಂಡು ಬರುತ್ತಿದೆ. ನಮ್ಮ ದೇಶದಲ್ಲಿ ಸ್ವಾತಂತ್ರ್ಯೋತ್ತರ ಶಿಕ್ಷಣದಲ್ಲಿ ಆಗಬೇಕಾದ ಶೈಕ್ಷಣಿಕ ಬದಲಾವಣೆಗಳ ಅರಿವು ಹಾಗು ಶಿಕ್ಷಕನ ಹೊಣೆಗಾರಿಕೆಗಳ ಬಗೆಗೆ ತಿಳವಳಿಕೆಯುಂಟಾಗುತ್ತ ನಡೆದಿದೆ, ಎಂದು ಹೇಳಬಹುದು. ತಾಂತ್ರಿಕ ದೃಷ್ಟಿಯಿಂದ ನೋಡಲಾಗಿ ಜೀವನ ಶಿಕ್ಷಣವೇ ತೀರ ಹೊಸದಾಗಿರುವದರಿಂದ ಅದನ್ನು ಸರಿಯಾಗಿ ಜೀರ್ಣಿಸಿಕೊಳ್ಳಲು ತುಸು ಕಾಲಾವಧಿಯು ಬೇಕಾಗುತ್ತದೆ. ಆ ದೃಷ್ಟಿಯಿಂದ ಪರಿಶ್ರಮ ನಡೆಯುತ್ತಿದೆ.

ಹಿಂದಿನ ಮುಂಬೈ ರಾಜ್ಯದ ಜೀವನ ಶಿಕ್ಷಣ ಸಂಸ್ಥೆಗಳ ಮೂಲೋದ್ಯೋಗ ವಸ್ತುಗಳ ಪ್ರದರ್ಶನದಲ್ಲಿ ಧಾರವಾಡ ಜಿಲ್ಲೆಗೆ ಮೊದಲನೆಯ ಸ್ಥಾನ ಗಳಿಸಿ ಕೊಡುವದರಲ್ಲಿಯೂ, ಟ್ರೇನಿಂಗ ಸಂಸ್ಥೆಗಳ ಮೂಲೋದ್ಯೋಗ ವಸ್ತು ಪ್ರದರ್ಶನಗಳಲ್ಲಿ ಹೆಚ್ಚಿನ ಪ್ರಶಸ್ತಿಯನ್ನು ದೊರಕಿಸುವದರಲ್ಲಿಯೂ, ಈ ಸಂಸ್ಥೆಯ ಪಾತ್ರವು ಎದ್ದು ಕಾಣುವಂತಿದೆ. ಶಿಕ್ಷಣಾಧಿಕಾರಿಗಳು ಪ್ರತಿ ವರುಷವೂ ಈ ಸಂಸ್ಥೆಯನ್ನು ತಪಾಸಿಸುವದುಂಟು. ಅದರ ಪ್ರಗತಿಯ ಬಗೆಗೆ ಕಾಲ ಕಾಲಕ್ಕೆ ತಮ್ಮ ಸಲಹೆ ಸೂಚನೆಗಳನ್ನು ಕೊಟ್ಟು ಮಾರ್ಗದರ್ಶನ ಮಾಡುತ್ತಿರುವದಲ್ಲದೆ ತಮ್ಮ ಅಭಿಪ್ರಾಯಗಳನ್ನೂ ವ್ಯಕ್ತಪಡಿಸುತ್ತಿರುವದುಂಟು.

೧೯೫೩-೫೪ನೆಯ ಸಾಲಿನಲ್ಲಿ ತಪಾಸಣೆಯನ್ನು ನಡೆಯಿಸಿದ ನಂತರ ವರದಿಯಲ್ಲಿ ಈ ರೀತಿಯ ಒಂದು ಅಭಿಪ್ರಾಯವಿದೆ. ಹೊಸ ಶಿಕ್ಷಣಾಂದೋಲನದ ಮೂಲಭೂತ .ತತ್ವಗಳನ್ನು, ಶಿಕ್ಷಕ ವಿದ್ಯಾರ್ಥಿಗಳಲ್ಲಿ ಬೇರೂರಿಸಲು, ದೇಶಸೇವೆಯ ಒಂದು ಚೈತನ್ಯವನ್ನು ಅವರಲ್ಲಿ ಜಾಗ್ರತಗೊಳಿಸಲು; ಹೊಸ ಅಭ್ಯಾಸ ಪತ್ರಿಕೆಯನ್ನು ಬಳಿಕೆಯಲ್ಲಿ ತಂದು, ಸಾಧಿಸಿದ ಪ್ರಗತಿಯ ಅಂಶವು ಗಣನೀಯವಾಗಿದೆ.

ಸೂಕ್ಷ್ಮ ಪರಿಶೀಲನೆಯ ತರುವಾಯ ಹೊರಟ ಇಂಥ ಕೆಲ ಅಭಿಪ್ರಾಯಗಳು ಜೀವನ ಶಿಕ್ಷಣದಲ್ಲಿ ಈ ಸಂಸ್ಥೆಯು ವಹಿಸುತ್ತಿರುವ ಕಾರ್ಯದ ದೃಷ್ಟಿಯಿಂದ ಒಳ್ಳೇ ಸಂತೋಷದಾಯಕವೂ ಉತ್ಸಾಹ ವರ್ಧಕವೂ ಇರುವವು. ಅಲ್ಲದೆ ಈ ಸಂಸ್ಥೆಗೆ ಅನೇಕ ಶಿಕ್ಷಣ ತಜ್ಞರೂ ಶಿಕ್ಷಣಾಧಿಕಾರಿಗಳೂ, ಸೂಕ್ಷ್ಮ ವಿಮರ್ಶಕರೂ ಅಭ್ಯಾಸುಗಳೂ ಆಗಾಗ ಭೆಟ್ಟಿಕೊಡುತ್ತಿರುವರು. ಆ ಆ ಸಂದರ್ಭದಲ್ಲಿ ಆ ಮಹನೀಯರೂ ಕೂಡ ಇದರ ಪ್ರಗತಿಯ ಬಗೆಗೆ ತಮ್ಮ ಸಮಾಧಾನದ, ಮೆಚ್ಚುಗೆಯ ಉದ್ಗಾರಗಳನ್ನೇ ತೆಗೆದದ್ದುಂಟು. ಅಂಥವರಲ್ಲಿ ದಿವಂಗತ ಬಿ. ಜಿ. ಖೇರ, ರ್‍ಯಾಂಗ್ಲರ ಡಿ. ಸಿ. ಪಾವಟೆ, ಶ್ರೀ ಜಿ. ರಾಮಚಂದ್ರನ್ ಕು. ಇಂದುಮತಿ ಶೇಠ, ಶ್ರೀ ಜೆ. ಪಿ. ಕುಮಾರಪ್ಪ

ಶ್ರೀ ಭಾಂಡಾರಕರ, ಶ್ರೀ ಹುಕ್ಕೇರಿಕರ, ಶ್ರೀ ಕಡಿದಾಳ ಮಂಜಪ್ಪನವರು, ಶ್ರೀಮತಿ ಗ್ರೇಸ ಟಕ್ಕರ ಮುಂತಾದ ಮಹನೀಯರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. ಈ ಮಹನೀಯರು ವ್ಯಕ್ತಗೊಳಿಸಿದ ಅಭಿಪ್ರಾಯಗಳೆಡೆಗೆ ಹೊರಳಿದರೆ, ಇಲ್ಲಿಯ ಚಟುವಟಿಕೆಗಳ ಬಗೆಗೆ ಹಾಗು ಸಾಧಿಸಿದ ಪ್ರಗತಿಯ ಬಗೆಗೆ ನಿಚ್ಚಳವಾದ ಕಲ್ಪನೆ ಬರುವದು.

ಉಪಸಂಹಾರ

ಒಟ್ಟಿನಲ್ಲಿ ಈ ಸಂಸ್ಥೆಯು ಗಾಂಧೀಜಿಯವರ ಮೂಲ ಶಿಕ್ಷಣವನ್ನು ಶಿಕ್ಷಕ ವಿದ್ಯಾರ್ಥಿಗಳಲ್ಲಿ ರಕ್ತಗತ ಮಾಡಲು ತುಂಬಾ ಶ್ರಮಿಸುತ್ತಲಿದೆ. ಇಲ್ಲಿಯ ದುಡಿತವು ಜೇನ್ನೊಣದ ದುಡಿತವನ್ನು ಹೋಲುತ್ತಲಿದೆ ಎಂದು ಹೇಳಬಹುದು. ನಾಳಿನ ನಾಗರಿಕರನ್ನು ಸಿದ್ಧಗೊಳಿಸುವ ಗುರುತಮ ಭಾರವು ಪ್ರಾಥಮಿಕ ಶಿಕ್ಷಣದ ಭಾರವನ್ನು ಹೊತ್ತವರ ಮೇಲಿದೆ. ಜೀವನ ಶಿಕ್ಷಣವು ಸಮಗ್ರ ಜೀವನವನ್ನು ರೂಪಿಸುವದರಿಂದ ನಾಳಿನ ನಾಗರಿಕರಾಗಬೇಕಾದ ಬಾಲಕರಿಗೆ ಯೋಗ್ಯ ಮಾರ್ಗದರ್ಶನ ಹಾಗು ಶಿಕ್ಷಣ ಅಗತ್ಯದ್ದಾಗಿವೆ. ಪ್ರತಿ ವರುಷವೂ ಸುಮಾರು ಒಂದು ನೂರು ಜನ ಶಿಕ್ಷಕ ವಿದ್ಯಾರ್ಥಿಗಳು ಈ ಸಂಸ್ಥೆಯಿಂದ ಹೊಸ ಶಿಕ್ಷಣದ ದೃಷ್ಟಿಕೋನವನ್ನು ತಂದುಕೊಂಡು ಹೊರ ಬೀಳುತ್ತಿರುವದುಂಟು. ಕಳೆದ ಎಳೆಂಟು ವರುಷಗಳಲ್ಲಿ ಎಳೆಂಟು ನೂರು ಜನ ಶಿಕ್ಷಕ ಬಾಂಧವರು ಆ ರೀತಿಯ ಒಂದು ವಾತಾವರಣವನ್ನು ತಾಳಿ ಹೊರ ಬಿದ್ದಿರುವರು. ವರುಷದ ಕೊನೆಗೆ ಸ್ನಾತಕರರಿಗೆ ಪ್ರಶಸ್ತಿ ಪ್ರದಾನ ಸಮಾರಂಭವೊಂದು ನಡೆಯುವಂತೆ, ಇಲ್ಲಿಂದ ಹೊರಬೀಳುತ್ತಲಿರುವ ಶಿಕ್ಷಕ ವಿದ್ಯಾರ್ಥಿಗಳಿಗಾಗಿ ‘ದೀಪ-ದಾನ’ವೆಂಬ ಒಂದು ಗಂಭೀರ ಸಮಾರಂಭವೂ ನೆರವೇರುವುದು. ಆ ಸಮಾರಂಭವು ಶಿಕ್ಷಕರಲ್ಲಿ ಒಂದು ರೀತಿಯ ಜಾಗೃತಿಯನ್ನುಂಟು ಮಾಡುವದೆಂದು ಹೇಳಬಹುದು. ಜೀವನ ಶಿಕ್ಷಣ ಪ್ರಸಾರದಲ್ಲಿ ಈ ಸಂಸ್ಥೆಯ ಪಾತ್ರವು ಗಣನೀಯವಾಗಿದೆಯೆಂಬ ಅಂಶವು ಮೇಲಿನ ಕೆಲಮಾತುಗಳಿಂದ ವಾಚಕರಿಗೆ ಸ್ಪಷ್ಟವಾಗಲು ಸಾಕೆಂದು ಭಾವಿಸುವ. ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಸಮಯದಲ್ಲಿ ಈ ಸಂಸ್ಥೆಯು ‘ಜೀವೇತಶರದಃ ಸಹಸ್ರಂ !” ಎಂದು ಹಾರೈಸುವೆ.

ಕಂದ ಪದ್ಯಗಳು

ಕಾಲೇಜದ ವಿಷಯಗಳಂ|
ಲಾಲಿಸಿ ಕೇಳುತ ಮನನವ ಮಾಡಿಕೊಳುತ್ತಂ||
ಸಲೆ ಸುಜ್ಞಾನವ ಬೆಳೆಸಲು|
ಸೌಲಭ್ಯೋಪಾಯದಿಂದ ಕಲಿಸಲು ಬರ್ಕುಂ ||೧||

ನವ ಶಿಕ್ಷಣ ಪದ್ಧತಿಯದು|
ನವ ಶತಕಾಬ್ದಿಯ ಸುಯೋಗ ಶುಭಕಾಲಕೊಳಂ||
ವಿವಿಧೋಪಕರಣದಿಂದಂ|
ಸುವಿಧಾನ ಸುಲಭ ಸುಮಾರ್ಗ ಪಿಡಿದಪುದಾಗಳ್ ||೨||

ಕನ್ನಡ ನಾಡಿನ ಪ್ರೌಢತೆ|
ಕನ್ನಡ ಭಾಷಾ ಪ್ರಬುದ್ಧ ಪಂಡಿತರಿಂ ಕೇಳ್||
ಕನ್ನಡ ಕಾವ್ಯಕಲಾಪಂ|
ಸನ್ನುತ ಕನ್ನಡ ಸುಭಾಷೆಯೊಳ್ ಸಂದಿಪುದೈ ||೩||

ನೇತ್ರಾನಂದದ ಶಿಕ್ಷಣ|
ಸೂತ್ರಮೆನಿಪ ಚಿತ್ರಕುಶಲ ವಿದ್ಯಾಗುರುಗಳ್||
ಪುತ್ರರವೋಲ್ ಭಾವಿಸುತಂ|
ಚಿತ್ರಸುವಿದ್ಯಾವಿಕಾಸ ಗೆಯ್ಯುತ್ತಿರ್ದರ್ ||೪||

ಶಾರೀರಿಕ ಸಾಧನಮಂ|
ತೋರುವ ಗುರುವಿನ ಸಹಾಯ ಸಂಪದದಿಂದಂ ||
ನರನಾಡಿ ಬಲಂ ಬೆಳೆಯುತ|
ಪರಮೋತ್ಸಾಹದ ಕೃತಿಗಳು ಕಾಣುವವಲ್ತೇ ||೫||

ಬಡ ವಿದ್ಯಾರ್ಥಿಗಳೆಲ್ಲರ್|
ಬೆಡಗಿನ ಶಿಕ್ಷಣ ಪಡೆಯಲು ಬಪ್ಪುದು ಸಹಜಂ||
ಪಿಡಿದಾ ಶಿಕ್ಷಕ ವೃತ್ತಿಯ|
ಪಡೆದರ್ ಪುಣ್ಯವ ನಿಜಸುಖ ನಿರುತಂಪೊಂದಲ್ ||೬||

ಶಿಕ್ಷಣ ಶಾಸ್ತ್ರಕ್ರಮಮಂ|
ದಕ್ಷತೆಯಿಂ ವಹಿಸಿ ಪೂರ್ಣಗೆಯ್ಯುವ ಮನುಜಂ||
ರಕ್ಷಕನವನೀತಳದೊಳ್|
ಅಕ್ಷಯ ಸುಖದಾತ ಪೂತನವನೇಧನ್ಯಂ ||೭||

ಸಿ. ನಾ. ಮಹಾಂತಣ್ಣವರ
ನಿವೃತ್ತ ಅ. ಡೆ. ವಿಜಾಪುರ

ಹಿಂದಿನ ಪ್ರಿನ್ಸಿಪಾಲರು

ಶ್ರೀ ದ. ವಿ. ಕಾಳೆ



ಶ್ರೀ ಹ. ಸು. ತೊರಗಲ್ಲ

ಶ್ರೀ ರಾ. ಕೇ ಮಡಿಮನ



ಶ್ರೀ ಹು. ಬ. ಉಮದಿ

ಶ್ರೀ ಶ್ರೀ. ಗು. ಭೈಚವಾಳ

ಹಿಂದಿನ ಪ್ರಿನ್ಸಿಪಾಲರು

ಶ್ರೀ ಎಸ್. ಆರ್. ಜೋಶಿ

ಶ್ರೀ ರಂ. ಕೃ. ಲಕ್ಕುಂಡಿ

ಶ್ರೀ ಆರ್. ವ್ಹಿ. ದೇಸಾಯಿ

ಶ್ರೀ ಕೇ. ಗು. ಕುರ್ತಕೋಟಿ

ಸರಕಾರೀ ಕನ್ನಡ ಗಂಡು ಮಕ್ಕಳ ಮಹಾವಿದ್ಯಾಲಯದ ಶತಾಬ್ದಿ ಸಮಾರಂಭ

ಬರೆಹಗಾರರು : **ಶ್ರೀ ಸಿದ್ಧಲಿಂಗಪ್ಪ ವಿರುಪಾಕ್ಷಪ್ಪ ಜೇವೂರ,** ಎಮ್‌. ಎಡ್‌. (ಮುಂಬಯಿ)
ಡೆಪ್ಯುಟಿ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್, ಧಾರವಾಡ ವಿಭಾಗ, ಧಾರವಾಡ.

ಉತ್ತರ ಕರ್ನಾಟಕದಲ್ಲಿ ಶಿಕ್ಷಣ, ಸಾಹಿತ್ಯ ಮತ್ತು ಸಂಸ್ಕೃತಿ ಇವುಗಳ ಅಭಿವೃದ್ಧಿಗಾಗಿ ತಳಹದಿಯ ಕೆಲಸ ಮಾಡಿದ ಅತೀ ಹಳೆಯ ಸಂಸ್ಥೆಯೆಂದರೆ ಧಾರವಾಡದ ಸ. ಕನ್ನಡ ಗಂ. ಮ. ಕಾಲೇಜು. ಸದ್ಯಕ್ಕೆ ಧಾರವಾಡ ಮತ್ತು ಉಳಿದ ದೊಡ್ಡ ಊರುಗಳಲ್ಲಿ ವಿಶ್ವವಿದ್ಯಾಲಯಕ್ಕೆ ಜೋಡಿಸಿದ ದೊಡ್ಡ ದೊಡ್ಡ ಮಹಾವಿದ್ಯಾಲಯಗಳು ಇರುವದು ನಿಜ. ಕರ್ನಾಟಕ ವಿಶ್ವವಿದ್ಯಾಲಯವೂ ಧಾರವಾಡದಲ್ಲಿ ಅಸ್ತಿತ್ವದಲ್ಲಿ ಬಂದು ಎಂಟೊಂಭತ್ತು ವರ್ಷಗಳಾದವು. ಸುಮಾರು ೧೮೦ರಷ್ಟು ಮಾಧ್ಯಮಿಕ ಸಾಲೆಗಳು ಮತ್ತು ಬೇರೆ ಎಷ್ಟೋ ಶೈಕ್ಷಣಿಕ ಮತ್ತು ತಾಂತ್ರಿಕ ಸಣ್ಣ ಸಂಸ್ಥೆಗಳೂ ಇರುವವು. ಸುಮಾರು ಐದಾರು ಸಾವಿರ ಪ್ರಾಥಮಿಕ ಸಾಲೆಗಳು ಈ ಭಾಗದ ಮೂಲೆ ಮೂಲೆಗಳಲ್ಲಿಯೂ ಹರಡಿರುವವು. ಆದರೆ ಇವೆಲ್ಲವುಗಳು ಅಸ್ತಿತ್ವದಲ್ಲಿ ಬರಲಿಕ್ಕೆ ಮತ್ತು ಸುಗಮವಾಗಿ ಬೆಳೆಯಲಿಕ್ಕೆ ಧಾರವಾಡದ ಗಂಡುಮಕ್ಕಳ ಕಾಲೇಜವೇ ಮುಖ್ಯ ಮಾತಾಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

೧೯ನೆಯ ಶತಮಾನದ ಆರಂಭದಲ್ಲಿ ಶಿಕ್ಷಣವು ಬೋರ್ಡ ಆಫ್ ಎಜ್ಯುಕೇಶನ್ ಎಂಬ ಸಂಸ್ಥೆಯ ಅಧೀನಕ್ಕೆ ಒಳಪಟ್ಟದ್ದಾಗಿತ್ತು. ಕ್ರಿ. ಶ. ೧೮೪೨ರ ವರೆಗೆ ಪ್ರಾಥಮಿಕ ಶಿಕ್ಷಕರ ತರಬೇತಿಯ ಬಗೆಗೆ ವಿಶೇಷ ಲಕ್ಷ್ಯ ಕೊಟ್ಟದ್ದು ಕಂಡುಬರುವದಿಲ್ಲ. ಈ ಭಾಗದ ಶಿಕ್ಷಕರು ಪುಣೆ ಮೊದಲಾದ ದೊಡ್ಡ ಊರುಗಳಿಗೆ ಹೋಗಿ ತರಬೇತಿಹೊಂದಿ ಬರುತ್ತಿದ್ದರು. ಬಹುಶಃ ಅವರ ತರಬೇತಿ ಮರಾಠಿಯಲ್ಲಿ ಆಗುತ್ತಿತ್ತು. ಧಾರವಾಡದಲ್ಲಿ ಕನ್ನಡ ಗಂಡು ಮಕ್ಕಳ ತರಬೇತಿ–ವರ್ಗ ಆರಂಭವಾದ ಮೇಲೆ ಮರಾಠಿ ವಿಷಯವೂ ಒಂದು ಕಲಿಯಬೇಕಾದ ವಿಷಯವಾಗಿತ್ತೆಂದು ನಾವು ಇಲ್ಲಿ ಮರೆಯಕೂಡದು. ಆ ಕಾಲಕ್ಕೆ ಈ ಭಾಗದಲ್ಲಿ ಮರಾಠಿ ಭಾಷೆ ಇನ್ನೂ ಹೆಚ್ಚು ಪ್ರಚಾರದಲ್ಲಿದ್ದ ಕಾರಣ ಈ ಸಂಗತಿ ಕಂಡುಬರುವದು. ಆ ಕಾಲಕ್ಕೆ ಶಿಕ್ಷಕ ವೃತ್ತಿಯೆಂದರೆ ಪರಂಪರವಾಗಿ ಬಂದಂತಹ ಹೋರೆಯಾಗಿತ್ತು. ಸುಮಾರು ಕ್ರಿ. ಶ. ೧೮೫೫ಕ್ಕೆ ಬೋರ್ಡ ಆಫ್ ಎಜ್ಯುಕೇಶನದ ಅಂದಾಜಿನ ಪ್ರಕಾರ ಸುಮಾರು ೨೦೮ ಕನ್ನಡ ಮತ್ತು ಮರಾಠೀ ಸಂಸ್ಥೆಗಳು ಹಾಗೂ ೫ ಇಂಗ್ಲೀಷ ಶಾಲೆಗಳು ಇದ್ದ ಬಗೆಗೆ ತಿಳಿದು ಬರುತ್ತದೆ. ಅವುಗಳಲ್ಲಿ ಕೇವಲ ಒಂದೇ ಹೆಣ್ಣುಮಕ್ಕಳಿಗಾಗಿ ಇದ್ದು, ಎರಡು ಮಾತ್ರ ಹಿಂದುಳಿದ ವರ್ಗಗಳ ಸಲುವಾಗಿ ನಡೆಯುತ್ತಿದ್ದವು. ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಕೇವಲ ೧೩,೭೮೪. ಇಷ್ಟು ವಿದ್ಯಾರ್ಥಿಗಳ ಸಂಖ್ಯೆಯನ್ನು ಸಧ್ಯಕ್ಕೆ ನಮ್ಮ ಈ ಭಾಗದ ಒಂದೇ ದೊಡ್ಡ ಊರಲ್ಲಿ ಕಾಣಬಹುದು. ಸ್ವಾಭಾವಿಕವಾಗಿ ಇಂಥ ಸಾಲೆಗಳಲ್ಲಿ ಕೆಲಸ ಮಾಡುವವರ ಸಂಖ್ಯೆ ಬಹಳೇ ಕಡಿಮೆಯಾಗಿತ್ತು ಎಂದು ಹೇಳುವ ಆವಶ್ಯಕತೆಯಿಲ್ಲ. ಆದುದರಿಂದ ೧ನೆಯ ಮೇ ೧೮೫೫ಕ್ಕೆ ಡಾಯರೆಕ್ಟೊರೆಟ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್ ಎಂಬ ಸರಕಾರೀ ಆಫೀಸು ಆರಂಭವಾದ ಮೇಲೆ ದಕ್ಷಿಣ ಭಾಗದ ಆಕ್ಟಿಂಗ ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಕ್ಯಾಪ್ಟನ್ ಜೆ. ಎಫ್. ಲೆಸ್ಟರ ಅವರು ತಾ. ೨೭ನೆಯ ಫೆಬ್ರುವರಿ ೧೮೫೬ರಲ್ಲಿ ಹೀಗೆ ಅಂದದ್ದು ಸ್ವಾಭಾವಿಕಃ– "And there cannot, I think, be a doubt, that until we have a better set of teachers, there will be very little real use in rapidly extending our vernacular schools. What we want is more Normal schools and candidates teachers' classes" (Report of the D.P.I., Bombay, 1855-56 P. 240.)

" ನಮಗೆ ಹೆಚ್ಚು ಉತ್ತಮ ಗುರುಗಳ ವೃಂದ ದೊರಕುವ ವರೆಗೆ, ವೇಗದಿಂದ ದೇಶೀ ಸಾಲೆಗಳನ್ನು ಬೆಳೆಯಿಸುವದರಲ್ಲಿ ಸ್ವಲ್ಪ ಮಾತ್ರ ನಿಜವಾದ ಪ್ರಯೋಜನ ಎಂಬುವದರಲ್ಲಿ ಸಂದೇಹವಿಲ್ಲ, ಎಂದು ನನಗೆ ತೋಚು

ತ್ತದೆ. ನಮಗೆ ಬೇಕಾದದ್ದು ಏನೆಂದರೆ ತರಬೇತಿಯ ಸಾಲೆಗಳ ಮತ್ತು ಗುರುಗಳ ತರಬೇತಿಯ ವರ್ಗಗಳ ಹೆಚ್ಚಿನ ಸಂಖ್ಯೆ" (ಕ್ರಿ. ಶ. ೧೮೫೫–೫೬ನೆಯ ಡಾಯರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ್‌ರವರ ವರದಿ ಪು. ೨೪೦) ಇಂಥ ಪರಿಸ್ಥಿತಿಯಲ್ಲಿ ಆ ಕಾಲಕ್ಕೆ ನಮ್ಮ ಸಾಲೆಗಳಲ್ಲಿ ಕೇವಲ ಶಿಕ್ಷಕ ವೃತ್ತಿಯ ಮನೆತನಗಳಲ್ಲಿ ಇದ್ದವರೇ ಗುರುಗಳಾಗುತ್ತಿದ್ದರು. ಅವರಿಗೆ ಸರ್ವಸಾಮಾನ್ಯ ಸಂಗತಿಗಳು ಬರುತ್ತಿದ್ದರೆ ಸಾಕು. "The Masters are a poor illiterate set of men who are perhaps only school-masters because their fathers and their grand-fathers were before them and what they teach is only what has been taught them by their fore-fathers" (I bid).

" ಗುರುಗಳು ಬಡ ಮತ್ತು ನಿರಕ್ಷರರ ತಂಡ. ಅವರು ಒಂದು ವೇಳೆ, ಅವರ ತಂದೆಗಳು ಅಥವಾ ಅಜ್ಜಂದಿರು ಅವರ ಹಿಂದೆ ಗುರುಗಳಿದ್ದದರಿಂದ, ಗುರುಗಳಾಗಿದ್ದಾರೆ. ಮತ್ತು ಅವರು ಕಲಿಸುವದೇನೆಂದರೆ ಅವರು ಪುರಾತನರಿಂದ ಕಲಿತದ್ದೇ (ಅದೇ ವರದಿ).

ಯಾವದೇ ತರದ ನಿರ್ದಿಷ್ಟ ಅರ್ಹತೆ ಗುರುಗಳಿಗೆ ಇರುತ್ತಿದ್ದಿಲ್ಲ. ಅಂತೆಯೇ ಒಮ್ಮೊಮ್ಮೆ ಅರ್ಧಮರ್ಧ ತರಬೇತಿ ಹೊಂದಿದ ನಂತರ ,ಅವರನ್ನು ಬೇಡಿಕೆ ಪೂರೈಸಲು ಗುರುಗಳೆಂದು ನೇಮಿಸಲಾಗುತ್ತಿತ್ತು. "In Consequence of the great demand for the masters for the schools, which had been established in the Dharwar sub-division, Mr. Baker was obliged to send out a few months after opening of the class, all the young men in it and place them at once in charge of schools. These young men were not by any means fully competent, but they were better than any others that could be found and they were accordingly at once employed" (I bid).

" ಧಾರವಾಡ ಉಪವಿಭಾಗದಲ್ಲಿಯ ಸಾಲೆಗಳಿಗೆ ಬೇಕಾದ ಹೆಚ್ಚಿನ ಬೇಡಿಕೆಯ ಪರಿಣಾಮವಾಗಿ ವರ್ಗವು ಆರಂಭವಾದ ಕೆಲವೊಂದು ತಿಂಗಳ ತರುವಾಯವೇ, ಮಿ. ಬೇಕರ ಅವರಿಗೆ ಅದರಲ್ಲಿಯ ಎಲ್ಲ ತರುಣರನ್ನು ಕೂಡಲೇ ಕಳಿಸಿ ಸಾಲೆಗಳ ವ್ಯವಸ್ಥೆಗೆ ನಿಯಮಿಸುವ ಅನಿವಾರ್ಯ ಪ್ರಸಂಗ ಬಂದಿತು. ಈ ತರುಣರು ಪೂರ್ಣ ಯಾವ ರೀತಿಯಿಂದಲೂ ಕರ್ತಬಗಾರರಾಗಿರಲಿಲ್ಲ. ಆದರೆ ಲಭ್ಯವಿರುವ ಉಳಿದವರಿಗಿಂತ ಹೆಚ್ಚು ಯೋಗ್ಯರಿದ್ದರು. ಮತ್ತು ಆ ಪ್ರಕಾರ ತ್ವರಿತವಾಗಿ ನಿಯಮಿಸಲ್ಪಟ್ಟರು. (ಅದೇ ವರದಿ)

ಈ ಪರಿಸ್ಥಿತಿ ತಿಳಿದುಕೊಂಡೇ ಹಳೆಯ ಮುಂಬಯಿ ರಾಜ್ಯದಲ್ಲಿ ಭಾಷಾವಾರ ೩ ತರಬೇತಿಯ ಕೇಂದ್ರಗಳನ್ನು ಸರಕಾರದವರು ಸ್ಥಾಪಿಸಿದ್ದರು. ಧಾರವಾಡದಲ್ಲಿ ಇಂಥ ಒಂದು ಸಂಸ್ಥೆಯ ಆವಶ್ಯಕತೆ ಬಹಳೇ ಇದ್ದುದರಿಂದ ಕ್ರಿ. ಶ. ೧೮೫೬ನೆಯ ಸುಮಾರು ಫೆಬ್ರುವರಿ ತಿಂಗಳಲ್ಲಿ ಈ ಸಂಸ್ಥೆಯನ್ನು ತೆರೆಯಲಾಯಿತು. ಅದರಲ್ಲಿ ೧೦ ವಿದ್ಯಾರ್ಥಿಗಳು ಪ್ರತಿ ತಿಂಗಳ ೩ ರೂಪಾಯಿ ಶಿಷ್ಯವೇತನದ ಮೇಲೆ ತರಬೇತಿ ಹೊಂದುತ್ತಿದ್ದರು.

"The third school is at Dharwar and is immediately under the direction of the E. I. or his Deputy. It was opened about a month before the close of the official year (**i. e. 1955-56**) under report. The number of students in it is limited to ten. These are all stipendiary, receiving each three Rupees per mensem". (I bid P. 242)

"ಮೂರನೆಯ ಸಾಲೆಯು ಧಾರವಾಡದಲ್ಲಿ ಇರುವದು ಮತ್ತು ಅದು ನೇರವಾಗಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರ ಅಥವಾ ಅವರ ಉಪಾಧಿಕಾರಿಗಳ ದಿಗ್ದರ್ಶನದಲ್ಲಿರುವದು. ವರದಿಯ ವರುಷ (**ಅಂದರೆ ೧೮೫೫–೫೬**) ಮುಗಿಯುವದಕ್ಕಿಂತಲು ಒಂದು ತಿಂಗಳ ಮುಂಚಿತವಾಗಿ ಅದನ್ನು ತೆರೆಯಲಾಯಿತು. ಅದರಲ್ಲಿಯ ವಿದ್ಯಾರ್ಥಿಗಳ ಸಂಖ್ಯೆ ೧೦ಕ್ಕೆ ನಿರ್ಬಂಧಿಸಲ್ಪಟ್ಟಿದೆ. ಅವರೆಲ್ಲರು ಪ್ರತಿಯೊಬ್ಬರು ಪ್ರತಿತಿಂಗಳಿಗೆ ೩ ರೂಪಾಯಿ ಶಿಷ್ಯವೇತನ ಪಡೆಯುವವರು ಇರುತ್ತಾರೆ." (ಅದೇ ವರದಿ ಪು. ೨೪೨)

ಇಂಥ ಹಳೆಯ ಸಂಸ್ಥೆಯು ಸ್ವರ್ಗಸ್ಥರಾದ ಶ್ರೀ ಡೆಪ್ಯುಟಿ ಚೆನ್ನಬಸಪ್ಪ, ಶ್ರೀ ವೆ. ರಂ. ಕಟ್ಟಿ, ಶ್ರೀ ರೊದ್ದ ಮೊದಲಾದ ಪ್ರಭೃತಿಗಳನ್ನು ತನ್ನ ಹಿರಿಯ ಸಂಚಾಲಕರೆಂದು ದೊರಕಿಸಿಕೊಳ್ಳಲು ಸಾಧ್ಯ ಮಾಡಿಕೊಂಡಿತು. ಒಬ್ಬೊಬ್ಬ ಈ ಮಹನೀಯರು ಕರ್ನಾಟಕದ ಪುನರುಜ್ಜೀವನದಲ್ಲಿ ಮಾಡಿದ ಸೇವೆ ಪವಾಡವೆಂದೆನಿಸಿಕೊಳ್ಳುವದು. ಡೆಪ್ಯುಟಿ ಚೆನ್ನಬಸಪ್ಪನವರು ಸಾಲೆಗಳ ಏಳ್ಗೆಯನ್ನು ಸರ್ವತೋಮುಖವಾಗಿ ಮಾಡಿದ್ದಾರೆ, ಶ್ರೀ ವೆ. ರಂ. ಕಟ್ಟಿಯವರು ಕನ್ನಡಕ್ಕೆ ನಾನಾಬಗೆಯ ಪುಸ್ತಕಗಳನ್ನು ಭಾಷಾಂತರಿಸಿ, ಕನ್ನಡ ಜನಕ್ಕೆ ಮಾರ್ಗ ಕಲ್ಪಿಸಿಕೊಟ್ಟರು. ಶ್ರೀ ಶ್ರೀನಿವಾಸ ರೊದ್ದ ಅವರು ಕನ್ನಡ ಜನತೆಗೆ ಮಾಡಿದ ಸೇವೆ ಅವರು ಕರ್ನಾಟಕ ಕಾಲೇಜು ಆರಂಭಮಾಡಲಿಕ್ಕೆ ಮಾಡಿದ ಪ್ರಯತ್ನವೇ ಸಾಕ್ಷಿ. ಇಂಥ ಉಚ್ಚಮಟ್ಟಿನ ಹಿರಿಯ ಸಂಚಾಲಕರು ಈ ಸಂಸ್ಥೆಯಲ್ಲಿ ಇದ್ದು ಅದರ ಪ್ರಗತಿಗೆ ಸರ್ವರೀತಿಯಿಂದಲೂ ಕಾರಣೀಭೂತರಾಗಿ ಈ ಸಂಸ್ಥೆಯನ್ನು ಉತ್ತರ ಕರ್ನಾಟಕದ ಸಂಸ್ಕೃತಿ ಹರಡಿಸುವ ಕೇಂದ್ರವನ್ನಾಗಿ ಮಾಡಿದರು. ಅಂತೆಯೇ ಆರಂಭಕ್ಕೆ ಕರ್ನಾಟಕ ಕಾಲೇಜ ಮತ್ತು ಕರ್ನಾಟಕ ವಿಶ್ವವಿದ್ಯಾಲಯ ಇವುಗಳು ಈ ಸಂಸ್ಥೆಯಲ್ಲಿಯೇ ನಡೆಯುತ್ತಲಿದ್ದವೆಂದು ತಿಳಿಯಲು ಅದರ ಮೇಲ್ಮೆ ಮತ್ತು ಪ್ರಭಾವ ನಮಗೆ ತೋಚದೆ ಇರಲಾರವು. ಇಂಥ ಸಂಸ್ಥೆಗಳಿಗೆ ಕನ್ನಡ ಗಂಡು ಮಕ್ಕಳ ಕಾಲೇಜು ತವರು ಮನೆಯಾಗಿದೆ. ಕರ್ನಾಟಕ ಕಾಲೇಜು ಕೆಲವರ್ಷಗಳ ನಂತರ ತನ್ನ ಭವ್ಯ ಕಟ್ಟಡಕ್ಕೆ ಹೋಗಿ ತನ್ನದೇ ಆದ ಒಂದು ಸಣ್ಣ ಊರನ್ನೇ ಕಟ್ಟಿಕೊಳ್ಳಲಿಕ್ಕೆ ಹತ್ತಿದೆ. ಕರ್ನಾಟಕ ವಿಶ್ವವಿದ್ಯಾಲಯವು ಮುಂಬಯಿಯ ಟೌನ ಹಾಲಿನಲ್ಲಿ ಹುಟ್ಟಿದರೂ, ಅದರ ತೊಟ್ಟಿಲ ಹಾಕುವ ಪ್ರಸಂಗ ಈ ಸಂಸ್ಥೆಯ ಆವಾರದಲ್ಲಿಯೇ ಆಯಿತು. ಅದು ಈಗ ತಾಯಿ ಮೊಲೆಯುಂಡು ಘೋಟಾಮಹಾಬಳೇಶ್ವರದಲ್ಲಿ ದಿಗಿಲುಬಡಿಸುವ ಮಗುವಿನ (infant terrible) ಹಾಗೆ ಶಿಕ್ಷಣ ತಜ್ಞರೂ ಮತ್ತು ಮೇಧಾವಿಗಳೂ ಆದ ಶ್ರೀ ದಾದಾಸಾಹೇಬ ಪಾವಟೆ ಅವರ ನೇತೃತ್ವದಲ್ಲಿ ರಭಸದಿಂದ ಬೆಳೆಯುತ್ತಲಿದೆ.

ನಮ್ಮ ಈ ಭಾಗದಲ್ಲಿ, ಈ ಶತಕದ ಸುಮಾರು ಮಧ್ಯದಲ್ಲಿ, ಕನ್ನಡ ಗಂಡು ಮಕ್ಕಳ ಸಂಸ್ಥೆಯಂತಹ ೧೮–೧೯ ಸಂಸ್ಥೆಗಳಾಗ, ಈಗ ಸದ್ಯಕ್ಕೆ ೧೩ ಸಂಸ್ಥೆಗಳು ಇರುವದು ಕಂಡುಬರುವದು. ಹಳೆಯ ಮುಂಬಯಿ ರಾಜ್ಯದಲ್ಲಿ ಒತ್ತಾಯದ ಶಿಕ್ಷಣ ಆರಂಭಮಾಡುವ ಉದ್ದೇಶ ಅರಿತು, ಈ ಭಾಗದಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಇಷ್ಟು ಸಂಸ್ಥೆಗಳ ಮುಖಾಂತರ ಹೆಚ್ಚು ಪ್ರಮಾಣದಲ್ಲಿ ತರಬೇತಿಕೊಡುವ ಪ್ರಯತ್ನ ಕೆಲವು ವರ್ಷಗಳ ಹಿಂದೆ ನಡೆದದ್ದೂ ತಿಳಿದ ವಿಷಯವಾಗಿದೆ. ಸದ್ಯಕ್ಕೆ ಎಲ್ಲವೂ ಜೀವನ ಶಿಕ್ಷಣ ತರಬೇತಿ ಕೇಂದ್ರಗಳಾಗಿವೆ. ಈ ತರಬೇತಿಯನ್ನು ಕೊಡಲು ಇದೇ ಸಂಸ್ಥೆ ಈ ಭಾಗದಲ್ಲಿ ಅಗ್ರಗಣ್ಯವಾಗಿತ್ತೆಂದು ಹೇಳಲು ಯಾವದೇ ಶಂಕೆ ಇಲ್ಲ. ಮಹಾತ್ಮಾಜಿಯವರು ಜೀವನ ಶಿಕ್ಷಣದ ಕಹಳೆ ಊದಿದ ನಂತರ, ಪ್ರಾಥಮಿಕ ಶಿಕ್ಷಕರನ್ನು ಜೀವನ ಶಿಕ್ಷಣದಲ್ಲಿ ತರಬೇತಿಗೊಳಿಸಲು ಇದೇ ಸಂಸ್ಥೆಯನ್ನು ಉಪಯೋಗಿಸಲಾಗುತ್ತಿತ್ತು. ಈ ಸಂಸ್ಥೆಯ ಆವಾರಿನಲ್ಲಿಯೇ ಅದು ನಡೆಯುತ್ತಿತ್ತು. ಸದ್ಯಕ್ಕೆ ಪದವೀಧರರ ಜೀವನ ಶಿಕ್ಷಣ ಸಂಸ್ಥೆ, ಈ ಮಹಾವಿದ್ಯಾಲಯದ ಸನ್ನಿಧಿಯಲ್ಲಿಯೇ ಹುಟ್ಟಿ ಅಲ್ಲಿಯೇ ಇನ್ನೂ ಪೋಷಿಸಲ್ಪಟ್ಟಿದ್ದಾಗಿದೆ. ಹೀಗೆ ಆರಂಭದಿಂದಲೂ ಈ ಸಂಸ್ಥೆಯ ಹಿರಿಮೆ ಒಡೆದು ಕಾಣುವದು.

ಹೋದ ವರುಷ ನಡೆಯಬೇಕಾದ ಶತಸಂವತ್ಸರಿ ಸಮಾರಂಭ ರಾಜ್ಯ ಪುನರ್ಘಟನೆ, ಮತ್ತಿ ಕೆಲವು ಅನಿವಾರ್ಯಕಾರಣಗಳ ಮೂಲಕ ಈ ವರ್ಷ ಮುಂದೆ ಬಿದ್ದು, ಇದೇ ವರ್ಷ ಡಿಸೆಂಬರ ತಿಂಗಳಲ್ಲಿ ನಡೆಯುವದು ಆನಂದದ ಸಂಗತಿ. ಕೇವಲ ಒಂಭತ್ತು ಹತ್ತು ವಿದ್ಯಾರ್ಥಿಗಳಿಂದ ಆರಂಭವಾಗಿ ಪ್ರತಿ ವರುಷ ಸುಮಾರು ಎರಡುನೂರು ಶಿಕ್ಷಕರನ್ನು ತಯಾರಿಸಿ ಸಾವಿರಾರು ಗುರುಗಳಿಗೆ ದೀಕ್ಷೆ ಇತ್ತದ್ದನ್ನು ನೆನೆದರೆ ಭೂಮಿ ಆಕಾಶಗಳ ಅಂತರ ಗೋಚರವಾಗುವದು. ಸಾವಿರಾರು ಹಳೆಯ ವಿದ್ಯಾರ್ಥಿಗಳು, ಸದ್ಯದ ವಿದ್ಯಾರ್ಥಿಗಳು, ಶಿಕ್ಷಣಾಭಿಮಾನಿಗಳು, ಸಾರ್ವಜನಿಕರು ಹೆಮ್ಮೆಬಟ್ಟು ಶತಾಬ್ದಿ ಸಂವತ್ಸರ ಆಚರಿಸಲಿಕ್ಕೆ ಆತ್ಮ ಸಂತೋಷದಿಂದ ಮುಂದೆ ಬಂದದ್ದು, ಈ ಸಂಸ್ಥೆಯ ಬಗೆಗೆ ಅವರ ಆದರ ಅಭಿಮಾನಗಳು ಸುಸ್ಪಷ್ಟವಾಗುತ್ತವೆ. ಇಲ್ಲಿ ತರಬೇತಿ ಹೊಂದಿದ ಮತ್ತು ಸಂಬಂಧಿಸಲ್ಪಟ್ಟ ಜನರು, ನಾನಾ ಕ್ಷೇತ್ರಗಳಲ್ಲಿ ತಮ್ಮ ಹಿಂದೆ ಹೊಳೆಬೆಳಕನ್ನು ಬಿಟ್ಟಿದ್ದಾರೆ. ಒಬ್ಬರಂತೂ ಜಿಲ್ಹೆಯ ಕಲೆಕ್ಟರರಾಗಿ ನಿವೃತ್ತರಾಗಿದ್ದರು. ಸಂಸ್ಥೆಗೆ ಹೋದ ಕೂಡಲೇ, ಅದು ಈ ಎಲ್ಲ ಮಾತುಗಳ ಮನವರಿಕೆ, ತನ್ನ ಗಂಭೀರ ಮತ್ತು ಪ್ರಭಾವಪೂರ್ಣವಾದ ಪರಿಣಾಮದಿಂದ ಎಲ್ಲರ ಮೇಲೆ ಅವಶ್ಯವಾಗಿ ಬೀರುತ್ತಿದೆ. ಅದನ್ನು ಹುಟ್ಟಿಸಿ ಸಲುಹಿದ ಮಹನೀಯರ ಭಾವಚಿತ್ರಗಳು ಸಂಸ್ಥೆಯ ಹಿನ್ನೆಲೆಯನ್ನು ಸಜೀವ ಮಾಡಿ, ಅವರು ಮಾಡಿದ

ಪ್ರಯತ್ನ ಮತ್ತು ಸಾಹಸ ಒಂದು ರೋಮಾಂಚಕಾರಕ ಕತೆಯನ್ನಾಗಿ ಮಾಡಿ ತೋರಿಸುತ್ತದೆ. ಇಂಥ ತಾಯಿ ಸಂಸ್ಥೆಯನ್ನು ನಾವು ಆದರಿಸುವದು ನಮ್ಮನ್ನು ನಾವೇ ಆದರಿಸಿಕೊಂಡಂತೆ. ಸ್ವರಾಜ್ಯ ಸಿಕ್ಕು ಎಲ್ಲ ಕ್ಷೇತ್ರಗಳಲ್ಲಿ ಹೊಸ ಜೀವ ಬರುವ ಈ ಸಂಧಿ ಕಾಲದಲ್ಲಿ ಅವಳ ಹರಿಕೆ **ಇನ್ನೂ ಹೆಚ್ಚು ಫಲವತ್ತಾಗಲಿ ಮತ್ತು ಅವಳ ಹೆಸರು ಇನ್ನೂ ಪ್ರಜ್ವಲಿತವಾಗಿ ಕನ್ನಡಮ್ಮನು ತಾನು ಅಪ್ಪಿಕೊಂಡ ಎಲ್ಲ ಮಕ್ಕಳು ಸುಖಿಗಳಾಗಲಿ ಎಂದು ಹಾರೈಸುವದೇ ನಮ್ಮೆಲ್ಲರ ಸ್ವಭಾವ ಸಹಜವಾದ ಬಯಕೆ.**

(ದಪ್ಪವಾಗಿ ತೋರಿಸಿದ ಮಾತುಗಳು ನಮ್ಮವು)

ಶಾಂತವೀರ ರಾಚಿದೇವ ಕಿತ್ತೂರ

ಲೇಖಕರು: **ಶ್ರೀ ವೀರಭದ್ರಪ್ಪ ಕೊಪ್ಪಳ,** ಎಂ. ಎ., ಬಿ. ಟಿ., ಧಾರವಾಡ.

ಶಾಂತವೀರ ರಾಚಿದೇವ ಕಿತ್ತೂರ ಅವರು ಜನಿಸಿದುದು ಕಿತ್ತೂರಿನ ಕಟ್ಟಿಮಠದವರ ವಂಶದಲ್ಲಿ. ಇವರ ಬಾಲ್ಯ ವಿದ್ಯಾಭ್ಯಾಸಗಳ ವಿಷಯವಾಗಿಯಾಗಲಿ ಇಲ್ಲವೆ ವಿದ್ಯಾವಂತರಾಗಿ ಮುಂದೆ ಒಂದು ಗಣ್ಯ ಸ್ಥಾನವನ್ನು ಗಳಿಸಿಕೊಂಡು ಜೀವನ ನೌಕೆಯನ್ನು ಸಾಗಿಸುತ್ತಿದ್ದ ವಿಷಯವಾಗಿಯಾಗಲಿ ದೊರೆಯುವ ವಿವರಗಳು ಉಲ್ಲೇಖಗಳು ಬಹು ವಿರಳ. ಧಾರವಾಡದಲ್ಲಿರುವ ಅವರ ಮೊಮ್ಮಗಳು ಶ್ರೀಮತಿ ಪಾರ್ವತೀದೇವಿ ಶಾಂತವೀರ ಕಟ್ಟಿಮಠ ಅವರಲ್ಲಿ ಅಸಮಗ್ರವಾಗಿ ಬರೆದಿಟ್ಟಿದ್ದ ಟಿಪ್ಪಣಿಗಳಿಂದ ಹಾಗು ಶಾಂತವೀರ ಅವರ ಸಂಪರ್ಕದಲ್ಲಿ ಬಂದ ಮಹನೀಯರ ಚರಿತ್ರೆಗೆ ಸಂಬಂಧಪಟ್ಟ ಹಲಕೆಲವು ಸಂದರ್ಭ ಸಂಗತಿಗಳಿಂದ ಈ ಅವರ ಚರಿತ್ರೆಯನ್ನು ಅರಿತುಕೊಳ್ಳಬೇಕಾಗಿದೆ.

ಕಿತ್ತೂರಿನ ಕಟ್ಟಿಮಠದ ಹುಚ್ಚರಾಚಿದೇವ (ರಾಚಯ್ಯ) ಸ್ವಾಮಿಗಳಿಗೆ ಚಿಕ್ಕರಾಚಯ್ಯ (ರಾಚಿದೇವ) ಎಂಬ ಒಬ್ಬ ತಮ್ಮನಿದ್ದನು. ಶಿವಗಂಗಾದೇವಿ ಎಂಬಾಕೆ ಆತನ ಧರ್ಮಪತ್ನಿ.[೧] ಇವರ ಹೊಟ್ಟೆಯಲ್ಲಿ ಶಾಂತವೀರ ಅವರು ಕ್ರಿ. ಶ. ೧೮೭೦ರಲ್ಲಿ ಜನಿಸಿದರು.[೨] ಇವರಿಗೆ ಅಪೃಶ್ಯಯ್ಯ ಎಂಬ ಒಬ್ಬ ಅಣ್ಣನೂ ಚೆನ್ನಬಸವಯ್ಯ, ಸೊಲಬಯ್ಯ ಎಂಬ ತಮ್ಮಂದಿರೂ ಇದ್ದರು. ತಂದೆ ಚಿಕ್ಕರಾಚಿದೇವನು ಸಂಸ್ಕೃತ, ಕನ್ನಡ ಭಾಷೆಗಳಲ್ಲಿ ನಿಷ್ಣಾತನಾಗಿದ್ದನೆಂದೂ ತಾಯಿ ಶಿವಗಂಗಾದೇವಿಯು ಬಸವಪುರಾಣ, ರಾಜಶೇಖರ ವಿಳಾಸ ಮುಂತಾದ ಕಾವ್ಯಗಳೊಳಗಿನ ಪದ್ಯಗಳನ್ನು ಸರಾಗವಾಗಿ ಮುಖಪಾಠ ಅನ್ನುತ್ತಿದ್ದರೆಂದೂ ತಿಳಿದುಬರುತ್ತದೆ. ಇದರಿಂದ ಬೆಳೆಯುತ್ತಿರುವ ಮಗುವಿನ ಎಳೆ ಮನಸ್ಸಿನ ಮೇಲೆ ಒಳ್ಳೆಯ ಸಂಸ್ಕೃತಿಯಾಗಿರಲು ಸಾಕು. ಇದಲ್ಲದೆ ಕಟ್ಟಿಮಠದಲ್ಲಿ ದಿನಾಲು ನಡೆಯುತ್ತಿದ್ದ ಪುರಾಣ ಪುಣ್ಯಕಥಾಶ್ರವಣದ ಪ್ರಭಾವವು ಮಗುವಿನ ಮೇಲೆ ಅಮಿತವಾದ ಪ್ರಭಾವವನ್ನು ಬೀರಿರಬೇಕು. ಚಿಕ್ಕರಾಚಿದೇವನು ಮಲ್ಲಸರ್ಜನು ಸ್ಥಾಪಿಸಿದ ಸಂಸ್ಕೃತ ಪಾಠಶಾಲೆಯಲ್ಲಿ ಬಹುತರವಾಗಿ ಉಪಾಧ್ಯಾಯನಾಗಿರಬೇಕು. ಈ ವಿದ್ಯಾವಂತರಿಂದ ಪಾಠಪ್ರವಚನಗಳು ದೊರೆಯುತ್ತಿರಬಹುದಾದ ಈ ಪಾಠಶಾಲೆಯಲ್ಲಿ ಶಾಂತವೀರನು ಬಾಲ್ಯದಲ್ಲಿ ಅಭ್ಯಾಸವನ್ನು ಸಾಗಿಸಿದನು. ಮಲ್ಲಸರ್ಜದೊರೆಯ ಮಗ ಶಿವಲಿಂಗರುದ್ರಸರ್ಜನೂ ಸಂಸ್ಕೃತದಲ್ಲಿ ತುಂಬಾ ಪಾರಂಗತರಾಗಿದ್ದ ಗರಗದ ಶ್ರೀ ಮಡಿವಾಳ ಸ್ವಾಮಿಗಳೂ ಈತನ ಸಹಪಾಠಿಗಳಾಗಿದ್ದರೆಂದು ಹೇಳುತ್ತಾರೆ. ಇದರಂತೆ ಗಂಗಾಧರ ಮಡಿವಾಳೇಶ್ವರ ತೂರಮರಿ ಅವರೂ, ಡೆಪ್ಯೂಟಿ ಚೆನ್ನಬಸಪ್ಪನವರೂ ಬಹುತರವಾಗಿ ಇದೇ ಪಾಠಶಾಲೆಯಲ್ಲಿ ಓದಿ ಈತನ ಸಹಪಾಠಿಗಳಾಗಿದ್ದಿರಬೇಕೆಂದು ಊಹಿಸಬಹುದಾಗಿದೆ. ದೊರೆಯ ಮಗನೊಡನಿದ್ದ ಗೆಳೆತನ ಮತ್ತು ಕಟ್ಟಿಮಠದ ಹುಚ್ಚರಾಚಿದೇವ ಸ್ವಾಮಿಗಳಿಗೂ ಚಿಕ್ಕರಾಚಿದೇವನಿಗೂ ಕಿತ್ತೂರಿನ ಅರಮನೆಯೊಡನಿದ್ದ ನಿಕಟ ಸಂಬಂಧ ಇವುಗಳಿಂದಾಗಿ ಶಾಂತವೀರನು ಅರಮನೆಯಲ್ಲಿ ಆತಂಕವಿಲ್ಲದೆ ಪ್ರವೇಶವನ್ನು ಪಡೆಯುತ್ತಿದ್ದು ಅಲ್ಲಿಯ ವ್ಯವಹಾರ ನೀತಿಗಳ ಅನುಭವ ಹೊಂದುತ್ತಿದ್ದನೆಂದೂ ಹೇಳಬಹುದು.

---

[೧] ಸಟೀಕ ರಾಜಶೇಖರ ವಿಳಾಸ ಎರಡನೆಯ ಆಶ್ವಾಸ–ಸೂಚನೆ ಪುಟ—೧.

[೨] ಶ್ರೀ ಪಾರ್ವತೀದೇವಿಯವರ ಬಳಿಯಲ್ಲಿದ್ದ ಟಿಪ್ಪಣಿಯಲ್ಲಿ ಮೊದಲು ೧೮೧೦ ಎಂದು ಇದ್ದು ಅದನ್ನು ೧೮೭೦ ಎಂದು ತಿದ್ದಲಾಗಿದೆ.

ಈ ಪಾಠಶಾಲೆಯಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿದ ಬಳಿಕ ಹೆಚ್ಚಿನ ಅಭ್ಯಾಸಕ್ಕೆಂದು ಹಾನಗಲ್ಲ, ಬೆಳ್ಳಿಕಟ್ಟಿ,(?) ಮೈಸೂರುಗಳಿಗೆ ಈತನು ಹೋಗಿದ್ದನೆಂದು ಗೊತ್ತಾಗುತ್ತದೆ. ಮೈಸೂರಲ್ಲಿ ಇದ್ದಿರಬೇಕಾದ ಅವಧಿಯಲ್ಲಿ ಈತನಿಗೆ ಅನೇಕ ಪಂಡಿತರ ಪರಿಚಯವುಂಟಾಗಿ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಬಹು ನೈಪುಣ್ಯ ಸಂಪಾದಿಸಲು ಅವಕಾಶವುಂಟಾದುದನ್ನು ನೆನೆಸಬೇಕು.

ಶಾಂತವೀರಯ್ಯನವರು ಕ್ರಿ. ಶ. ೧೮೮೫ರಲ್ಲಿ ನಿವೃತ್ತರಾದರೆಂದು ಬರೆದಿಟ್ಟಿರುವ ಟಿಪ್ಪಣಿಗಳಿಂದ ತಿಳಿಯುತ್ತದೆ. ೧೮೨೦ರಲ್ಲಿ ಅವರು ಜನಿಸಿದರೆಂದು ತಿಳಿಯುವುದಾದರೆ ಅವರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದುದು ೧೮೭೫ ಎಂದು ತಿಳಿಯಬಹುದು. ಒಂದುವೇಳೆ ೧೮೧೦ರಲ್ಲಿ ಅವರು ಜನಿಸಿದರು; ಶಿವಲಿಂಗರುದ್ರಸರ್ಜ ಮತ್ತು ಗರಗದ ಶ್ರೀ ಮಡಿವಾಳ ಸ್ವಾಮಿಗಳ ಬಾಲ್ಯದ ಜೊತೆಗಾರರಾಗಿದ್ದರು; ಅರಮನೆಯಲ್ಲಿ ಅವರಿಗೆ ಮುಕ್ತ ದ್ವಾರವಿತ್ತು. ಮಲ್ಲಸರ್ಜ ದೊರೆಯ ಕೊನೆಯ ದಿನಗಳಲ್ಲಿ ಅವರು ಎಲ್ಲರಿಗೆ ಅಚ್ಚುಮೆಚ್ಚಿನವರಾಗಿ ಬೆಳೆಯುತ್ತಿದ್ದರು ಎಂಬುದನ್ನು ನಂಬುವದಾದರೆ ಅವರು ಅಧ್ಯಾಪಕ ವೃತ್ತಿಯಿಂದ ನಿವೃತ್ತಿಯನ್ನು ಹೊಂದಿದ ಕಾಲ ೧೮೬೫ರ ಸುಮಾರಿಗೆ ಬರುತ್ತದೆ. ೧೮೭೨ರಲ್ಲಿ ಬರೆದು ಅಚ್ಚುಗೊಳಿಸಿದ ಅವರ ಸಟೀಕ ರಾಜಶೇಖರ ವಿಳಾಸದ ಎರಡನೆಯ ಆಶ್ವಾಸದಿಂದ ಅವರು ಆಗ ಇನ್ನೂ ಬೆಳಗಾವಿಯ ಟ್ರೇನಿಂಗ ಕಾಲೇಜಿನಲ್ಲಿಯೇ ಶಿಕ್ಷಕರಾಗಿದ್ದರೆಂದು ತಿಳಿಯುತ್ತದೆ.[೩] ಇದರಿಂದ ಅವರು ೧೮೭೫ರ ಸುಮಾರಿಗೆ ನಿವೃತ್ತರಾಗಿರಬೇಕು. ೧೮೨೦ರಲ್ಲಿ ಜನಿಸಿರಬೇಕು. ೧೮೮೫ರಲ್ಲಿ ಗತಿಸಿರಬೇಕು. ಈ ಸಂಗತಿಯನ್ನು ಒಪ್ಪಿಕೊಳ್ಳುವುದಾದರೆ ಅವರು ಜನಿಸಿದಾಗ ಮಲ್ಲಸರ್ಜ ದೊರೆಯು ಕಾಲವಾಗಿದ್ದನೆಂದೂ ಶಿವಲಿಂಗರುದ್ರಸರ್ಜನು ಪಟ್ಟವೇರಿ ರಾಜ್ಯಭಾರ ಮಾಡುತ್ತಿದ್ದನೆಂದೂ ಗರಗದ ಶ್ರೀ ಮಡಿವಾಳ ಸ್ವಾಮಿಗಳ ಕ್ಷೋಭೆ ಈ ಪೂರ್ವದಲ್ಲಿಯೇ ಉಂಟಾಗಿ ದೇಸಗತಿಯು ಕೊನೆಯ ದಿನಗಳನ್ನು ಕಾಣುವದರಲ್ಲಿತ್ತೆಂದೂ ಅದು ಕೊನೆಗಂಡಾಗ ಅವರು ಅತಿ ಚಿಕ್ಕ ಬಾಲಕರಾಗಿಯೇ ಇರಬೇಕೆಂದೂ ತಿಳಿಯಬೇಕಾಗುವದು. ಬಹುತರವಾಗಿ ಈ ಊಹೆಯೇ ಸರಿಯಾದುದೆಂದು ನಾವು ನಿರ್ಧರಿಸಬಹುದು. ಒಂದು ವೇಳೆ ೧೮೮೫ರಲ್ಲಿಯೇ ನಿವೃತ್ತರಾದರೆಂದರೆ ಅವರು ಜನಿಸಿದ ವರ್ಷ ೧೮೩೦ ಎಂದೂ ಅವರ ಬಾಲ್ಯ ಜೀವನಕ್ಕೆ ಸಂಬಂಧಪಟ್ಟ ಸಂಗತಿಗಳ ಬಗೆಗೆ ಇನ್ನೂ ಹೆಚ್ಚಿನ ಸತ್ಯತೆಯನ್ನು ಸಂಗ್ರಹಿಸಬೇಕಾಗುವದೆಂದೂ ತಿಳಿಯಬೇಕು.

ಜೀವನೋಪಾಯ ಸ್ವೀಕಾರ

ಈ ಅವಧಿಯಲ್ಲಿ ಕಿತ್ತೂರ ಸಂಸ್ಥಾನಕ್ಕೆ ಒದಗಿದ ವಿಪ್ಲವದಿಂದ ಮುಂದೆ ಯಾವ ಕಾರ್ಯ ಕೈಕೊಳ್ಳಬೇಕೆಂಬ ಸಮಸ್ಯೆ ಶಾಂತವೀರ ಅವರಿಗೆ ಉಂಟಾಗಿರಬೇಕು. ಆದರೆ ಅವರು ಗಳಿಸಿದ ಪಾಂಡಿತ್ಯವು ಅವರನ್ನು ಕರೆತಂದು ಆಂಗ್ಲರ ಆಳಿಕೆಯಲ್ಲಿ ವಿದ್ಯಾಸಂಸ್ಥೆಯಲ್ಲಿ ಊಳಿಗವೊಂದನ್ನು ಕೊಡಿಸಿದಂತಿದೆ. ಬೆಳಗಾವಿಯಲ್ಲಿ ಸರದಾರ್ಸ ಹಾಯಸ್ಕೂಲ ೧೮೫೦ನೆಯ ಇಸವಿಯಲ್ಲಿ ಸ್ಥಾಪಿತವಾಗಿತ್ತು. ಈ ಹಾಯಸ್ಕೂಲಿನಲ್ಲಿ ೧೮೬೧ರಲ್ಲಿ ಇವರನ್ನು ಕನ್ನಡ ಶಿಕ್ಷಕರೆಂದು ನೇಮಿಸಿಕೊಳ್ಳಲಾಯಿತು. ಇದಕ್ಕೆಲ್ಲ ಹೊಸಗನ್ನಡ "ಆದಿಪುರುಷ" ಡೆಪ್ಯೂಟಿ ಚೆನ್ನಬಸಪ್ಪನವರ ಪ್ರೋತ್ಸಾಹವೇ ಕಾರಣವು. ಮುಂದೆ ಬೆಳಗಾವಿಯಲ್ಲಿಯೇ ಪ್ರಾಥಮಿಕ ಶಿಕ್ಷಕರ ತರಬೇತಿಗಾಗಿ ನಾರ್ಮಲ್ ಸ್ಕೂಲ ಪ್ರಾರಂಭವಾದಾಗ ೧–೭–೧೮೬೭ರಂದು ಅಲ್ಲಿಗೆ ಇವರು ವರ್ಗಾಯಿಸಲ್ಪಟ್ಟರು.[೪] ಆ ಕಾಲಕ್ಕೆ ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್ಸಪೆಕ್ಟರರಾಗಿದ್ದ ರಸೆಲ್ ಸಾಹೇಬರು ೧೮೭೦ನೆಯ ಇಸವಿಯಲ್ಲಿ ಬೆಳಗಾವಿಯ ನಾರ್ಮಲ್ ಸ್ಕೂಲನ್ನು ಕಾಲೇಜಿನ ದರ್ಜೆಗೆ ಏರಿಸಿ ಅದನ್ನು ಧಾರವಾಡಕ್ಕೆ ಸ್ಥಳಾಂತರಿಸಿದರಂತೆ. ಆಗ ವೆಂಕಟ ರಂಗೋ ಕಟ್ಟಿ, ಹುಯಿಲಗೋಳ ಭುಜಂಗರಾಯ ಇವರೊಡನೆ ಶಾಂತವೀರಯ್ಯನವರನ್ನೂ ಧಾರವಾಡಕ್ಕೆ ವರ್ಗ ಮಾಡಿದರು. ಇವರು ಹಳಗನ್ನಡದಲ್ಲಿಯೂ ಬಹು ಸಮರ್ಥರಾಗಿದ್ದರು.[೫] ಕಾಲೇಜದಲ್ಲಿ "ಕಿತ್ತೂರ ಶಾಂತವೀರಯ್ಯನವರು ಭಾಷಾವಿಷಯವನ್ನು ಕಲಿಸುತ್ತಿದ್ದರು. (ಆಗ) ಇವರಿಗೆ ೩೫ ರೂಪಾಯಿ ಸಂಬಳ" ವಿದ್ದಿತೆಂದು ಶ್ರೀಮಾನ್ ಎಚ್. ಜಿ. ದೇಶಪಾಂಡೆ, ಎಂ.ಎ. ಅವರು ತಿಳಿಸಿದ್ದಾರೆ.[೬] ಧಾರವಾಡದಲ್ಲಿ ಶಾಂತವೀರಯ್ಯನವರು

---

[೩] ಸಟೀಕ ರಾಜಶೇಖರ ವಿಳಾಸ ಎರಡನೆಯ ಆಶ್ವಾಸ ಮುಖಪುಟ —೧.

[೪] ಫ. ಗು. ಹಳಕಟ್ಟಿ—ಡೆಪ್ಯೂಟಿ ಚೆನ್ನಬಸವಪ್ಪನವರ ಚರಿತ್ರೆ ಪುಟ—೩೪-೩೫.

[೫] ಫ. ಗು. ಹಳಕಟ್ಟಿ—ಡೆಪ್ಯೂಟಿ ಚೆನ್ನಬಸವಪ್ಪನವರ ಚರಿತ್ರೆ ಪುಟ—೩೭.

[೬] ದೊಡ್ಡ ಶ್ರೀನಿವಾಸರಾಯರ ಚರಿತ್ರೆ ಪುಟ—೩೩.

ನಂದೀಕೋಲ ಬಸವಣ್ಣದೇವರ ಗುಡಿ ಓಣಿಯಲ್ಲಿಯ ಕೊಂಗಿಯವರ ಮನೆಯಲ್ಲಿರುತ್ತಿದ್ದರಂತೆ. ಡೆಪ್ಯೂಟಿ ಚೆನ್ನಬಸಪ್ಪನವರ ಮನೆಯೂ ನೆರೆಯಲ್ಲಿಯೇ ಇರುತ್ತಿದ್ದುದರಿಂದ ಸಾಹಿತ್ಯಿಕ ಶೈಕ್ಷಣಿಕ ಸಾಮಾಜಿಕ ಕಾರ್ಯಗಳಲ್ಲೆಲ್ಲ ಪರಸ್ಪರ ವಿಚಾರವಿನಿಮಯದೊಡನೆ ಮುಂದುವರಿಯುತ್ತಿದ್ದರಂತೆ. ೧೮೭೧ನೆಯ ಇಸವಿಯಲ್ಲಿ ಕನ್ನಡ ಟ್ರಾನ್ಸಲೇಶನ ಎಗ್ಝಾಮಿನರೆಂದು ಕೆಲಸ ಮಾಡುತ್ತಿದ್ದ[೭] ಗಂಗಾಧರ ಮಡಿವಾಳೇಶ್ವರ ತೂರಮರಿ ಅವರು ಕನ್ನಡ ಟ್ರೇನಿಂಗ ಕಾಲೇಜಿನ ಆ್ಯಕ್ಟಿಂಗ ವ್ಹಾಯಿಸ್ ಪ್ರಿನ್ಸಿಪಾಲರೂ ಆಗಿದ್ದರು.[೮] ಆಗ ಇವರ ಜೊತೆಗೂ ಶಾಂತವೀರ ಅವರು ಸಾಹಿತ್ಯ ಸೇವೆಯ ಚಟುವಟಿಕೆಗಳಲ್ಲಿ ಪಾಲುಗಾರರಾಗಿದ್ದರು. ಇವರೆಲ್ಲರ ಈ ಸಾಹಿತ್ಯ ಸೇವೆಯಲ್ಲಿ ಅನ್ನದಾನೀಶ್ವರ ಬಸಲಿಂಗಾರ್ಯ ಮುಂಗಳೂರ ಅರಳೆಲೆಮಠ ಕಟ್ಟಿಮನಿ ಮುಂಡರಗಿ ಇವರೂ ತಮ್ಮ ಕಾಲವನ್ನು ವ್ಯಯ ಮಾಡುತ್ತಿದ್ದರೆಂಬದನ್ನು ಈ ಅನ್ನದಾನೀಂದ್ರರಿಂದ ರಚಿತವಾದ ಪದ್ಯಗಳಿಂದ ಅರಿಯಬಹುದು.[೯] ಅನ್ನದಾನೀಶ್ವರ ಅರಳೆಲೆಮಠ, ಶಾಂತವೀರ ಕಿತ್ತೂರ ಮತ್ತು ಗಂಗಾಧರ ಮಡಿವಾಳೇಶ್ವರ ತೂರಮರಿ ಈ ಮೂವರ ಭಾಷಾಸೇವೆಯ ಬಗೆಗೆ, ಒಬ್ಬರು ನೆಲಗಟ್ಟು ಮಾಡಿದರು, ಇನ್ನೊಬ್ಬರು ಗುಡಿ ಕಟ್ಟಿದರು, ಮತ್ತೊಬ್ಬರು ಕಳಸವಿಟ್ಟರು—ಎಂಬ ಜನಜನಿತವಾಗಿರುವ ಒಂದು ಮಾತನ್ನು ಇಲ್ಲಿ ಜ್ಞಾಪಿಸಿಕೊಳ್ಳಬೇಕು. ಇದರಿಂದ ಅಮೋಘವಾದ ಇವರ ಸಾಹಿತ್ಯ ಸೇವೆಯ ತಿಳಿವಳಿಕೆಯುಂಟಾಗುವದು.

ಕುಟುಂಬ ಜೀವನ

ಶಾಂತವೀರ ಅವರ ಕುಟುಂಬ ಜೀವನವು ಸಿದ್ಧಮ್ಮ ಎಂಬ ಸಾಧ್ವಿಯೊಡನೆ ಮದುವೆಯಾದಬಳಿಕ ಪ್ರಾರಂಭವಾಯಿತು. ಒಳ್ಳೆ ರಸಿಕರಾಗಿದ್ದ ಇವರು ತಮ್ಮ ಮಡದಿಯ ಮೇಲೆ ಬಹು ಮಮತೆಯುಳ್ಳವರಾಗಿದ್ದರೆಂದು ಹೇಳುತ್ತಾರೆ. ಇವರಿಗೆ ರಾಚೋಟಯ್ಯ[೧೦] ಅಡವಯ್ಯ ಎಂಬ ಇಬ್ಬರು ಗಂಡು ಮಕ್ಕಳೂ ಮತ್ತು ಗಂಗಮ್ಮ, ನಾಗಮ್ಮ, ಅಪ್ಪ ಚೆನ್ನಮ್ಮ ಮತ್ತು ಶಿವಲಿಂಗಮ್ಮ ಎಂಬ ನಾಲ್ವರು ಹೆಣ್ಣು ಮಕ್ಕಳೂ ಇದ್ದರೆಂದು ತಿಳಿಯುತ್ತದೆ. ಇವರ ಶಿವಲಿಂಗಮ್ಮ ಎಂಬ ಮಗಳು ಈಗ ಎರಡು ತಿಂಗಳ ಹಿಂದೆ ಧಾರವಾಡದಲ್ಲಿಯೇ ಕಾಲವಾದರಂತೆ. ಅವರು ಜೀವಂತವಾಗಿದ್ದರೆ ಅವರ ಮುಖದಿಂದ ಶಾಂತವೀರ ಅವರ ಬಗೆಗೆ ಹೆಚ್ಚಿನ ಸಂಗತಿಗಳನ್ನು ತಿಳಿಕೊಳ್ಳಬಹುದಾಗಿತ್ತು. ಅಧ್ಯಾಪಕ ವೃತ್ತಿಯಿಂದ ಅವರಿಗೆ ಪತ್ನಿವಿಯೋಗವಾಯಿತಂತೆ, ಅವರು ನಿವೃತ್ತಿಯನ್ನು ಪಡೆದ ಬಳಿಕ ಕಿತ್ತೂರಿನಲ್ಲಿಯೇ ಉಳಿದು ಕೆರೆ ಬಾವಿಗಳನ್ನು ಕಟ್ಟಿಸುವುದರಲ್ಲಿಯೂ ತೀರ್ಥಯಾತ್ರೆಗಳನ್ನು ಕೈಕೊಳ್ಳುವುದರಲ್ಲಿಯೂ ಸ್ಥಳ ಪರಸ್ಥಳಗಳಲ್ಲಿ ಪುರಾಣ ಪ್ರವಚನಗಳನ್ನು ಹೇಳುವುದರಲ್ಲಿಯೂ, ತಮ್ಮ ಶೇಷಾಯುಷ್ಯವನ್ನು ಕಳೆದರೆಂದು ಬರೆದಿಟ್ಟ ಟಿಪ್ಪಣಿಗಳಿಂದ ಗೊತ್ತಾಗುತ್ತದೆ. ಪುರಾಣಗಳನ್ನು ಹೇಳುವುದರಲ್ಲಿ ಇವರು ಒಳ್ಳೇ ಪ್ರವೀಣರಾಗಿದ್ದರಂತೆ. ಪರಸ್ಥಳದವರು ಇವರನ್ನು ಬಹಳ ಆದರದಿಂದ ತಮ್ಮಲ್ಲಿಗೆ ಬರಮಾಡಿಕೊಂಡು ಇವರಿಂದ ಪುರಾಣಗಳನ್ನು ಹೇಳಿಸುತ್ತಿದ್ದರಂತೆ. ಇದರಿಂದ ಬರುವ ಪ್ರಾಪ್ತಿಯ ಬಹುಭಾಗವನ್ನು ಪುಣ್ಯಕಾರ್ಯಗಳಿಗಾಗಿ ವೆಚ್ಚ ಮಾಡುತ್ತಿದ್ದರಂತೆ.

ಕೃತಿಗಳು

ಬರೆದಿಟ್ಟ ಟಿಪ್ಪಣಿಗಳಿಂದ ಶಾಂತವೀರ ರಾಚದೇವ ಕಿತ್ತೂರ ಅವರು:

೧. ಶಾಂತವೀರ ಛಂದಸ್ಸು
೨. ಶಾಂತವೀರ ನಿಘಂಟು.
೩. ಷಡಕ್ಷರಿ ಕವಿಯ ರಾಜಶೇಖರ ವಿಳಾಸದ ಎರಡನೆಯ ಆಶ್ವಾಸಕ್ಕೆ ಟೀಕೆ.

ಇವನ್ನು ಬರೆದರೆಂದು ಗೊತ್ತಾಗುತ್ತದೆ.

೪. ಡಾಕ್ಟರ ಫ್ಲೀಟ ದೊರೆಗಳ ಬಗೆಗೆ "ನವರತ್ನಹಾರ" ಎಂಬ ಕೆಲವು ಕವಿತೆಗಳನ್ನು ರಚಿಸಿದ್ದಾರೆ ಎಂದೂ ತಿಳಿಯುತ್ತದೆ.[೧೧]

೫. "ಡೆಪ್ಯೂಟಿ ಚೆನ್ನಬಸಪ್ಪನವರ ನೆರವಿಗೆ ನಿಂತ ಗಂಗಾಧರ ಮಡಿವಾಳೇಶ್ವರ ತೂರಮರಿ, ವೀರಭದ್ರ ಮಡಿವಾಳೇಶ್ವರ ಪಂಡಿತ, ವೆಂಕಟ ರಂಗೋ ಕಟ್ಟಿ ಅವರೊಡನೆ

---

[೭] ಸಟೀಕ ರಾಜಶೇಖರ ವಿಳಾಸ ಮುಖಪತ್ರ—೧.

[೮] ಸಟೀಕ ರಾಜಶೇಖರ ವಿಳಾಸ ನಾಲ್ಕನೆಯ ಆಶ್ವಾಸ ಮುಖಪತ್ರ—೧.

[೯] ಸಟೀಕ ರಾಜಶೇಖರ ವಿಳಾಸ ತೃತೀಯ ಆಶ್ವಾಸ ಪೀಠಿಕಾ ಪದ್ಯ ೬ ಪುಟ—೧೧.

[೧೦] ಕಟ್ಟಿಮಠದವರ ವಂಶದಲ್ಲಿ ರಾಚಯ್ಯ ರಾಚೋಟಯ್ಯ ಇಲ್ಲವೆ ರಾಚದೇವ ಮತ್ತು ಶಾಂತವೀರ ಈ ಹೆಸರುಗಳ ಪರಂಪರೆ ಬೆಳೆದು ಬಂದಂತೆ ಕಾಣುತ್ತದೆ.

[೧೧] ಶಾಂತಕವಿ ಸಂಚಿಕೆ—ವಾಗ್ಭೂಷಣ ವರ್ಷ ೨೫ ಸಂ. ೧-೨ ಪುಟ—೧೪; ಶ್ರೀ ಆಲೂರ ವೆಂಕಟರಾಯರ ಶಾಂತಕವಿಗಳ ಜೀವನಸಾರ ಎಂಬ ಲೇಖ ಪುಟ—೧೪.

ಶಾಲೆಗಳಿಗೆ ಬೇಕಾಗುವ ಕ್ರಮಿಕ ಪಠ್ಯಪುಸ್ತಕಗಳನ್ನೂ, ಇತಿಹಾಸ, ಭೂಗೋಲ, ವ್ಯಾಕರಣ, ಗಣಿತ ಮೊದಲಾದ ಶಾಸ್ತ್ರೀಯ ವಿಷಯಗಳ ಅಭ್ಯಾಸಕ್ಕೆ ಬೇಕಾಗುವ ಎಲ್ಲ ಬಗೆಯ 'ಶಾಲೋಪಯೋಗಿ' ಪುಸ್ತಕಗಳನ್ನೂ ಬರೆದಿದ್ದಾರೆ."[೧೨]

೬. ಕಿತ್ತೂರ ಚೆನ್ನಮ್ಮ ರಾಣಿ ಇತಿಹಾಸ ಮಂಡಲ ಬೈಲಹೊಂಗಲ ಅವರು ಪ್ರಕಟಿಸಿದ 'ದೊರೆಮಲ್ಲಸರ್ಜ ಕಾವ್ಯ' ಎಂಬ ದುಂದುಮೆ ದಾಟಿಯ ಗ್ರಂಥದ ಮುನ್ನುಡಿಯನ್ನು ಬರೆಯುತ್ತ 'ಗುರುಶಾಂತ ವೀರನು(ನಿಗೆ) ಹೇಳಿದನೀಗ' ಎಂಬ ಮಾತುಗಳಿಂದ ಕವಿ ಶಾಂತವೀರನು ಈ ಕಾವ್ಯವನ್ನು ಬರೆದಿರಬೇಕೆಂದು ಊಹೆಯನ್ನು ಎತ್ತಿದ್ದಾರೆ. ಶೀಗೆಹಳ್ಳಿಯ ರುದ್ರಗೌಡ ಎಂಬವರು ರಚಿಸಿರಬಹುದೆಂಬ ಸಂದೇಹವನ್ನು ವ್ಯಕ್ತಗೊಳಿಸಿದ್ದಾರೆ.[೧೩] ಈ ಕಾವ್ಯವನ್ನು ಈತನೇ ಬರದನೇನೋ ಇನ್ನೂ ನಿಷ್ಕರ್ಷೆಯಾಗಬೇಕಾಗಿದೆ.

'ಶಾಲೋಪಯೋಗಿ' ಪಠ್ಯಪುಸ್ತಕಗಳಲ್ಲಿ ಯಾವವುಗಳನ್ನು ಈತನು ಬರೆದಿದ್ದಾನೆಂಬುದು ತಿಳಿದುಬಂದಿಲ್ಲ.

ರಾಜಶೇಖರ ವಿಳಾಸದ ಎರಡನೆಯ ಆಶ್ವಾಸದ ಕನ್ನಡ ಟೀಕೆಯ ಸೂಚನೆಯಲ್ಲಿ ಶಾಂತವೀರ ಛಂದಸ್ಸಿನ ನಿರ್ದೇಶವಿದೆ.[೧೪] ಇದನ್ನು ಬರೆದಾದ ಮೇಲೆ ಟೀಕೆಯನ್ನು ಬರೆದಿದ್ದಾನೆಂಬುದು ಸ್ಪಷ್ಟವಿದೆ. ಆದರೆ ಈ ಗ್ರಂಥವು ಉಪಲಬ್ಧವಿಲ್ಲ.

ಎರಡನೆಯ ಆಶ್ವಾಸದ ಟೀಕೆಯ ಕೊನೆಗೆ ಶಬ್ದಕೋಶವನ್ನು ಕೊಟ್ಟು ಅದಕ್ಕೆ ಶಾಂತವೀರ ಕೋಶ ಎಂದು ಕರೆಯಲಾಗಿದೆ. ಈ ಕೋಶದಲ್ಲಿ ಎರಡನೆಯ ಆಶ್ವಾಸದಲ್ಲಿ ಬರುವ ಕ್ಲಿಷ್ಟವಾದ ಸಂಸ್ಕೃತ ಕನ್ನಡ ಪದಗಳಿಗೆ ಅರ್ಥವನ್ನು ಕೊಡುವುದಲ್ಲದೆ ಅವುಗಳ ವ್ಯುತ್ಪತ್ತಿಯನ್ನೂ ವಿವರಿಸಲಾಗಿದೆ. ಸಂಸ್ಕೃತ ಕನ್ನಡ ಶಬ್ದಗಳ ಕೋಶವನ್ನು ಬೇರೆ ಬೇರೆಯಾಗಿ ಕೊಟ್ಟು ಕನ್ನಡ ಶಬ್ದಗಳ ಕೋಶಕ್ಕೆ ಮಾತ್ರ ಶಾಂತವೀರ ಕೋಶ ಎಂದು ಹೆಸರಿಸಲಾಗಿದೆ. ಬಹುಶಃ ಇದುವೆ ಶಾಂತವೀರ ನಿಘಂಟು ಆಗಿರಬಹುದೇನೋ.

ಈ ಟೀಕಾ ಗ್ರಂಥಗಳಲ್ಲಿ ಒಂದೊಂದರಲ್ಲಿ ಒಂದೊಂದು ಗುಣವಿದೆ. ಒಂದೊಂದು ನಾವೀನ್ಯತೆಯಿಂದ ಅವು ತುಂಬಿಕೊಂಡಿವೆ. "ರಾಜಶೇಖರ ವಿಳಾಸವು ನವರಸ, ಅಲಂಕಾರ, ಧ್ವನಿ, ಶ್ಲೇಷಾರ್ಥ, ಮಾಧುರ್ಯಶಬ್ದ, ಅಂತರ್ಲಾಪಿ, ಬಹಿರ್ಲಾಪಿ, ಸಮಸ್ಯೆ, ಕಂದ, ವೃತ್ತ, ಗದ್ಯ ಮೊದಲಾದವುಗಳಿಂದ ಸಂಯುಕ್ತವಾಗಿ ಸಂಪೂರ್ಣ"ವಾದ ಸಂಗತಿಯು ಮನವನ್ನು ಸೆರೆಹಿಡಿಯಿತು.[೧೫] ಅದಕ್ಕಾಗಿ "ಶಾಂತವೀರನು ಗುರುಕಾರುಣ್ಯನು ಸಾರವಾದ ಯಥಾಮತಿಯಿಂದ" ಈ ಎರಡನೆಯ ಸಂಧಿಯನ್ನು ವಿವರಿಸ ಬಯಸಿದ್ದಾನೆ. ಈ ಆಶ್ವಾಸದ ಟೀಕೆಯಲ್ಲಿ ಪದ್ಯ ವಚನಗಳ ನಿರ್ದೇಶ ಮಾಡಿ ಅನ್ವಯಾರ್ಥ, ಶಾಸ್ತ್ರ ವಿಷಯ, ಭಾವಾರ್ಥ ಈ ಪರಿಕ್ರಮದಿಂದ ಅರ್ಥವಿವರಣೆಯನ್ನು ಮಾಡಿದ್ದಾನೆ. "ಇಲ್ಲಿ ಬರುವ ಶ್ಲೋಕದಲ್ಲಿ ಚರಣ ಪ್ರಾಸ ವೃತ್ತ ನಾಮಂಗಳಿಂದಲೂ, ಅನ್ವಯದಲ್ಲಿ ಶ್ಲೇಷಾರ್ಥ ತದ್ಭವ ಶಬ್ದಾರ್ಥ ಸಮಾಸಗಳಿಂದಲೂ ಶಾಸ್ತ್ರ ವಿಷಯದಲ್ಲಿ ಕೌಮುದಿ, ಸಾರಸ್ವತ, ಶಬ್ದಮಣಿದರ್ಪಣ ಮೊದಲಾದ ಸಂಸ್ಕೃತ ಕರ್ಣಾಟ ವ್ಯಾಕರಣ ಸೂತ್ರಾರ್ಥಗಳಿಂದಲೂ, ಶಾಂತವೀರ ಛಂದಸ್ಸು, ನಾಗವರ್ಮ ಛಂದಸ್ಸುಗಳ ನೇಮಗಳಿಂದಲೂ, ಕುವಲಯಾನಂದ ಚಂದ್ರಿಕಾ ಮೊದಲಾದ ಅಲಂಕಾರಗಳ ವ್ಯಾಖ್ಯಾನಗಳಿಂದಲೂ, ನವರಸಗಳಿಂದಲೂ, ಧ್ವನಿಗಳಿಂದಲೂ, 'ನೋಟ'ದಲ್ಲಿ ಪುರಾಣಾಂತರ ಕಥೆಗಳಿಂದಲೂ, ಕೋಶದಲ್ಲಿ ಸಂಸ್ಕೃತ ಕರ್ಣಾಟ ಶಬ್ದಗಳ ಉತ್ಪತ್ಯಗಳಿಂದಲೂ ಸಂಯುಕ್ತಮಾಗಿ ಸುಲಭ ಭಾಷೆಯೊಳಗೆ" ಟೀಕೆ ಬರೆದಿದ್ದೇನೆ ಎಂಬ ಮಾತುಗಳನ್ನು ತಿಳಿಸುತ್ತಾನೆ.[೧೬] ಈ ಮಾತುಗಳಿಂದ ಶಾಂತವೀರ ಅವರ ಆಳವಾದ ಅಭ್ಯಾಸ ಪಾಂಡಿತ್ಯ ಸಾಹಿತ್ಯಾಭಿರುಚಿ ಈ ಮುಂತಾದವು ಸ್ಪಷ್ಟವಾಗುತ್ತಿವೆ.

ಶಾಂತವೀರಯ್ಯನವರ ಶಿಷ್ಯರ ಬಳಗವೂ ದೊಡ್ಡದು, ಸ್ನೇಹಿತರ ಬಳಗವೂ ದೊಡ್ಡದು. ಅವರೆಲ್ಲರಿಂದ ದೊರೆಯುತ್ತಿದ್ದ ಮನ್ನಣೆಯೂ ದೊಡ್ಡದು. ಬೆಳಗಾವಿ

---

[೧೨] ಸಂಭಾವನೆಯಲ್ಲಿ ಕನ್ನಡವನ್ನುದ್ಧರಿಸಿದ ಪುಣ್ಯ ಪುರುಷರು (ಮುದವೀಡು ಕೃಷ್ಣರಾಯರು ಬರೆದ ಲೇಖ ಪುಟ—೧೪)

[೧೩] ದೊರೆಮಲ್ಲಸರ್ಜ ಕಾವ್ಯ ಮುನ್ನುಡಿ ಭಾಗ ೨ ಪುಟ—೪.

[೧೪] ಸಟೀಕ ರಾ. ಶೇ. ವಿಳಾಸ ಎರಡನೆಯ ಆಶ್ವಾಸ ಸೂಚನೆ ಪುಟ—೧.

[೧೫] ಸ. ರಾ. ಶೇ. ವಿಲಾಸ ಎರಡನೆಯ ಆಶ್ವಾಸ ಸೂಚನೆ ಪುಟ-೧.

[೧೬] ಸಟೀಕ ರಾ. ಶೇ. ವಿಲಾಸ ಎರಡನೆಯ ಆಶ್ವಾಸ ಸೂಚನೆ ಪುಟ ೧-೨.

ಸರದಾರ್ಸ್ ಹಾಯಸ್ಕೂಲಿನಲ್ಲಿ ಅವರು ಕನ್ನಡ ಶಿಕ್ಷಕರಾಗಿದ್ದಾಗ ಕೀರ್ತಿಶೇಷ ಅರಟಾಳ ರುದ್ರಗೌಡರು ಅವರ ವಿದ್ಯಾರ್ಥಿಗಳಾಗಿದ್ದರು. ಬೆಳಗಾವಿಯ ಟ್ರೇನಿಂಗ ಕಾಲೇಜದಲ್ಲಿ ಅವರು ಕನ್ನಡ ಪಂಡಿತರಾಗಿದ್ದಾಗ ೧೮೬೯ರಲ್ಲಿ ಕೀರ್ತಿಕಾಯರಾದ ದೊಡ್ಡ ಶ್ರೀನಿವಾಸರಾಯರು ಅಲ್ಲಿ ಓದುತ್ತಿದ್ದರು. ಅವರು ಆಗ ಪ್ರೀತಿಯ ಶಿಷ್ಯರಾಗಿದ್ದರು; ಮಾತ್ರವಲ್ಲ ಗುರುವಿನ ಬಗೆಗಿನ ಆ ನಿರತಿಶಯವಾದ ಗೌರವವನ್ನು ತಮ್ಮ ಜೀವಾವಧಿಯಲ್ಲಿ ಕಾಯ್ದುಕೊಂಡು ಬಂದಿದ್ದರು. ಒಂದು ಸಲ ಅವರು ಶಾಂತವೀರಯ್ಯನವರ ಮಗಳ ಮಗಳು ಶ್ರೀ ಪಾರ್ವತೀದೇವಿ ಕಟ್ಟಿಮಠ ಅವರನ್ನು ಬರಮಾಡಿಕೊಂಡು ಶಾಂತವೀರಯ್ಯನವರು ನಿನಗೆ ಅಪ್ಪನ ಅಪ್ಪ ಆದರೆ ನನಗೆ ಸ್ವತಃ ಅಪ್ಪ' ಎಂದು ಅಕ್ಕರೆಯಿಂದ ಹೇಳಿದ್ದರಂತೆ. ಗುರುವಿನ ಬಗೆಗೆ ಇದಕ್ಕಿಂತ ಹೆಚ್ಚಿನ ಗೌರವ ಭಕ್ತಿಗಳು ಇನ್ನಾವವು? ಕಾಲೇಜಿನಲ್ಲಿದ್ದಾಗ ಶಾಂತವೀರಯ್ಯನವರ ಪ್ರತಿಭೆ ವಿದ್ಯಾರ್ಥಿಗಳ ಮೇಲಿನ ಪ್ರೇಮವನ್ನು ಕುರಿತು ಕಥೆಯೊಂದನ್ನು ಹೇಳಿನರಂತೆ. 'ಬಡಕ' ಶಬ್ದವನ್ನು ಹಚ್ಚಿ ಹತ್ತು ಶಬ್ದಗಳನ್ನು ಬರೆಯಿರೆಂದು ವಿದ್ಯಾಧಿಕಾರಿಗಳು ಒಮ್ಮೆ ಹೇಳಿದಾಗ ದಿಙ್ಮೂಢರಾಗಿ ಕುಳಿತಿದ್ದ ವಿದ್ಯಾರ್ಥಿಗಳಿಗೆ ಹೀಗೇಕೆ ದೆವ್ವಬಡಕರಾಗಿ ಕೂಳಬಡಕರಾಗಿ ಕುಳಿತಿದ್ದೀರಿ. ವಿಚಾರ ಮಾಡಿ ಹೇಳಿರಿ ಎಂದು ತಿಳಿಸಿದ್ದರಂತೆ. ಅರ್ಥಪೂರ್ಣವಾದ ಸ್ವಾರಸ್ಯದ ಮಾತುಗಳನ್ನು ವಿದ್ಯಾರ್ಥಿಗಳಿಗೆ ಅವರು ಹೇಳುತ್ತಿದ್ದ ರೀತಿಯಿದು.

ಕನ್ನಡ ಭಾಷೆಯ ಉನ್ನತಿಗಾಗಿ ಹೋರಾಡುತ್ತಲಿದ್ದ ವ್ಯಕ್ತಿಗಳ ಹೃದಯಗಳು ನಾಡಿನ ಈ ಭಾಗದಲ್ಲಿ ಅಂದು ಪರಸ್ಪರ ಆಕರ್ಷಣೆಗೆ ಒಳಗಾಗಿದ್ದವು. ಅವರು ದೇಶೀಯರೇ ಇರಲಿ ವಿದೇಶೀಯರೇ ಇರಲಿ ಕನ್ನಡದ ಮೇಲಿನ ಪ್ರೇಮದಿಂದ ಒಂದಾಗಿ ದುಡಿಯುತ್ತಿದ್ದರು. ವಿದೇಶಿಯ ಮಿಶನರಿಗಳು ಶಾಂತವೀರಯ್ಯನವರಲ್ಲಿದ್ದ ಅಪಾರ ವಿದ್ವತ್ತೆಯನ್ನು ಮೆಚ್ಚಿ ಅವರನ್ನು ತುಂಬು ಗೌರವ ಬುದ್ಧಿಯಿಂದ ಕಾಣುತ್ತಿದ್ದರು. ಅನೇಕ ಪಾದ್ರಿಗಳು ಇವರಲ್ಲಿ ಕನ್ನಡ ಅಭ್ಯಾಸವನ್ನು ಮಾಡಿದರೆಂದೂ ಹೇಳುತ್ತಾರೆ. ೧೮೩೨ರಲ್ಲಿ ರೀವ ದೊರೆಗಳು ಪ್ರಕಟಿಸಿದ ಮೊದಲನೆಯ ಮುದ್ರಣದ ಕನ್ನಡ—ಇಂಗ್ಲಿಷ ಕೋಶವನ್ನು (   ) ಒಬ್ಬ ಮಿಶನರಿಯು ದಿನಾಂಕ ೧೬—೮—೧೮೬೧ರಂದು **Shantiwirappa Shastri Kittur** ಎಂದು ಬರೆದು ಇವರಿಗೆ ಕಾಣಿಕೆಯಾಗಿ ಕೊಟ್ಟಿದ್ದಾರೆ.[೧೭] ಇದಲ್ಲವೆ ಫ್ಲೀಟ ದೊರೆಗಳು, ಕಿಟೆಲ್ ದೊರೆಗಳು ಪ್ರಕಟಿಸಿದ ನಾಗವರ್ಮ ಛಂದಸ್ಸಿನ ಒಂದು ಪ್ರತಿಯನ್ನು ೫ ಜುಲೈ ೧೮೭೫ರಂದು **given to Shantavirayya Rachayya Kittur** ಎಂದು ತಮ್ಮ ಹಸ್ತಾಕ್ಷರಗಳಿಂದ ಬರೆದು ಇವರಿಗೆ ಕೊಟ್ಟಿದ್ದುಂಟು.[೧೭] ಬಹುಶಃ "ನವರತ್ನಹಾರ" ಎಂಬ ಹೆಸರಿನಿಂದ ಫ್ಲೀಟ ದೊರೆಗಳಿಗೆ ಸ್ತುತಿಪದ್ಯಗಳನ್ನು ಅರ್ಪಿಸಿದ ದಿನವು ಇದೇ ಆಗಿರಬಹುದು.

ಶಾಂತವೀರ ರಾಚಿದೇವ ಕಿತ್ತೂರ ಅವರು ಬಹಳ ಗ್ರಂಥಗಳನ್ನು ಬರೆಯದಿದ್ದರೂ ಗ್ರಂಥಗಳ ವಿಪುಲವಾದ ವ್ಯಾಸಂಗವು ಅವರಿಗಿತ್ತು. ತಮ್ಮ ಪರಿಚಯದಲ್ಲಿ ಬಂದವರಿಗೆಲ್ಲ ತಮ್ಮ ವಿದ್ಯೆಯ ಲಾಭವನ್ನು ಅವರು ಮಾಡಿಕೊಟ್ಟರು. ಅವರು ಮೂಲತಃ ಹೆಸರುಗಳಿಸಿದ ಶ್ರೇಷ್ಠ ತರಗತಿಯ ಶಿಕ್ಷಕರು. ಶಿಕ್ಷಕನಲ್ಲಿರಬೇಕಾದ ಒಳ್ಳೇ ಗುಣಗಳು ಅವರಲ್ಲಿ ಮನೆ ಮಾಡಿಕೊಂಡಿದ್ದುದರಿಂದ ಹಿರಿಯರಿರಲಿ ಕಿರಿಯರಿರಲಿ ಎಲ್ಲ ಸಂಗಡದವರಿಗೂ ಅವರು ಅಚ್ಚುಮೆಚ್ಚಿನವರಾಗಿದ್ದರು. ಗುಣಕ್ಕೆ ವಿದ್ಯೆಗೆ ಪಾಂಡಿತ್ಯಕ್ಕೆ ಅನುಭವಕ್ಕೆ ಮಾತ್ಸರ್ಯವಿಲ್ಲ. ಅದಕ್ಕಾಗಿ ದಿವಂಗತ ದೊಡ್ಡ ಶ್ರೀನಿವಾಸರಾಯರು, ಸಕ್ಕರಿ ಬಾಳಾಚಾರ್ಯರು ಎಚ್. ಜಿ. ದೇಶಪಾಂಡೆಯವರು, ಮುದವೀಡು ಕೃಷ್ಣರಾಯರು, ಆಲೂರ ವೆಂಕಟರಾಯರು, ಅವರ ಸಹೋದ್ಯೋಗಿಗಳು ಹೃದಯ ತುಂಬಿ ಅವರನ್ನು ಹೊಗಳಿದ್ದಾರೆ, ತಮ್ಮ ಸಹೋದ್ಯೋಗಿಗಳೊಡನೆ ನವಕರ್ಣಾಟಕ ನಿರ್ಮಾಣದ ಘನವಾದ ಸಾಹಸಕ್ಕೆ ತೊಡಗಿ ಅದರ ಭದ್ರವಾದ ಅಸ್ತಿವಾರವನ್ನು ಹಾಕುವುದರಲ್ಲಿ ಅವರು ತುಂಬಾ ಶ್ರಮವನ್ನು ವಹಿಸಿದರು. ಮರಾಠಿಗರ ಕಪಿಮುಷ್ಟಿಯಿಂದ ಕನ್ನಡಮ್ಮನನ್ನು ಬಿಡಿಸಿ ಕನ್ನಡದ ಜಯಭೇರಿಯನ್ನು ಮೊಳಗಿಸಿದ ಮಹಿಮಾಪುರುಷರ ಮಾಲಿಕೆಯಲ್ಲಿ ತೇಜಃಪುಂಜವಾದ ರತ್ನವಾಗಿ ಅವರು ಬೆಳಗಿದರು; ನಾಡಿನ ಘನತೆಯನ್ನು ಹೆಚ್ಚಿಸಿದರು. ಇದಕ್ಕಾಗಿ ಕನ್ನಡಿಗರಿಗೆಲ್ಲ ಅವರು ವಂದ್ಯರು.

---

[೧೭] ಈ ಕಾಣಿಕೆಯಾಗಿ ಕೊಟ್ಟ ಗ್ರಂಥಗಳನ್ನು ಶ್ರೀಮತಿ ಪಾರ್ವತೀದೇವಿ ಕಟ್ಟಿಮಠ ಅವರು ಕಾಯ್ದಿರಿಸಿದ್ದಾರೆ.

ಹಿಂದಿನ ಪ್ರಿನ್ಸಿಪಾಲರು

ಶ್ರೀ ಮ. ಗು. ಹಂದ್ರಾಳ

ಶ್ರೀ ಸು. ಪ. ಜಾಲಿ

ಈಗಿನ ಪ್ರಿನ್ಸಿಪಾಲರು

ಶ್ರೀ ಸಂ. ಪ. ಪಾಟೀಲ

೧ನೆಯ ವರ್ಷದ ಅ ವರ್ಗ



೧ನೆಯ ವರ್ಷದ ಬ ವರ್ಗ



ಟ್ರೇನಿಂಗ ಕಾಲೇಜದ ನೆನಹು

ಬರೆದವರು : **ಶ್ರೀ ಸಿ. ನಾ. ಮಹಾಂತಣ್ಣವರ,** ನಿವೃತ್ತ ಅ. ಡೆ. ಎ. ಇ. ವಿಜಾಪೂರ.

ಶತಾಬ್ದಿಯ ಉತ್ತರಾರ್ಧದ ಆರಂಭದ ಕಾಲ. ೧೯೦೩ ರಿಂದ ೧೯೦೫ರ ವರೆಗೆ ಗತಿಸಿದ ೩ ವರ್ಷಗಳ ನೆನಹು. ೧೯೦೩ನೇ ಇಸವಿಯ ಆರಂಭ. ಟ್ರೇನಿಂಗ ಕಾಲೇಜದ ಪ್ರವೇಶ, ಗುರುವರ್ಯ ಪ್ರಿನ್ಸಿಪಾಲರಾದ ದೊಡ್ಡರಾಯರ ಸರ್ವಾಧಿಕಾರ, ಡ್ರಾಯಿಂಗ ಹಾಲದ ಹೊಸ ಕಟ್ಟಡದ ಪೂರ್ಣತೆ, ಕಾಲೇಜದ ಮೂರು ವರ್ಷದ ಶಿಕ್ಷಣ ಪಡೆಯುವ ವ ನಾಲ್ಕು ಭಾಗಗಳುಳ್ಳ ಉತ್ತರೋನ್ಮುಖದ ಇಮಾರತು. ಅದರ ಎದುರು ಹೊಸ ಕಟ್ಟಡ, ಆ ಕಟ್ಟಡದ ಹಿಂಬದಿಯಲ್ಲಿ ಹೂದೋಟ ಪೂರ್ವ ಪಶ್ಚಿಮ ಭಾಗಗಳಲ್ಲಿ ಮೇಲಂತಸ್ತಿನ ವಿದ್ಯಾರ್ಥಿಗಳ ಕೋಣೆಗಳು. ಆ ಸಾಯಡುಗಳ ಹೊಂದೆಯೇ ಪ್ರಿನ್ಸಿಪಾಲರ ಹಾಗು ವ್ಹಾಯಿಸ ಪ್ರಿನ್ಸಿಪಾಲರ ವಸತಿಗೃಹಗಳು. ವಿದ್ಯಾರ್ಥಿಗಳ ಸಾಯಿಡುಗಳ ಉತ್ತರಕ್ಕೆ ತೀರ ಸಮೀಪದಲ್ಲಿ ಒಂದು ಬಾಜುವಿಗೆ ಪ್ರ್ಯಾಕ್ಟಿಸಿಂಗ ಸ್ಕೂಲೂ ಮತ್ತೊಂದು ಬಾಜುವಿಗೆ ಕೋಟಿಖಾನೆ ಹಾಗು ,ಕಾರ್ಪೆಂಟರಿ ಕ್ಲಾಸಿನ ಇಮಾರತು, ಇವುಗಳ ಮಧ್ಯದಲ್ಲಿಯೇ ಡ್ರಾಯಿಂಗ ಹಾಗು ಇನ್ನೊಂದು ಸಣ್ಣ ಇಮಾರತು. ಡ್ರಾಯಿಂಗ ಹಾಲಿನ ಹಿಂಭಾಗದಲ್ಲಿ ವ್ಯಾಯಾಮ ಶಾಲೆ ಮತ್ತು ಬ್ರಾಹ್ಮಣ, ಲಿಂಗಾಯತ, ಮುಸಲ್ಮಾನ ವಿದ್ಯಾರ್ಥಿಗಳ ಮೂರು ಭೋಜನಾಲಯಗಳು ಈ ಆಲಯಗಳ ಹಿಂಬದಿಯಲ್ಲಿ ಸ್ನಾನದ ಮೂರು ಮನೆಗಳು. ಅವುಗಳ ಹಿಂಬದಿಯಲ್ಲಿ ಹೊಂಡ ಹಾಗು ಭಾವಿ ಮುಂತಾದವುಗಳು.

ಮುಂಜಾನೆ ೬ ರಿಂದ ೭ರ ವರೆಗೆ ವ್ಯಾಯಾಮ ಶಾಲೆಗೆ ಹೋಗಿ, ಅಲ್ಲಿ ತಾಲೀಮು ಮಾಸ್ತರರ ವೇಳಾ ಪತ್ರಿಕೆಯಂತೆ ಸಾಮು, ಉಟಾಬೈಸ, ಪ್ಯಾರಲಲ್‌ಬಾರ, ಮಲಖಂಬ, ಹಾರಿಝಂಟಲ್ ಬಾರ, ಲೋಡ, ಡಂಬೆಲ್ಸಗಳ ಸಾಧನ, ಡ್ರಿಲ್. ಈ ಎಲ್ಲ ಪ್ರಕಾರಗಳು ಜರಗಿ ಸಂಜೆಯ ೫-೬ ಗಂಟೆಗಳಲ್ಲಿ ಪೂರ್ಣಗೊಳ್ಳುತ್ತಿದ್ದವು. ಊಟದ ಗಂಟೆಗಳು ಮುಂಜಾನೆ ೧೦ ಗಂಟೆಗೂ ಸಂಜೆಗೆ ೬ ಗಂಟೆಗೂ ಆಗಿ, ಒಂದು ತಾಸಿನೊಳಗಾಗಿ, ತಮ್ಮ ತಮ್ಮ ಕೋಣೆಗಳನ್ನು ಎಲ್ಲರೂ ಸೇರುತ್ತಿದ್ದರು. ಮುಂಜಾನೆ ೧೧ ಗಂಟೆಯಿಂದ ಮಧ್ಯಾಹ್ನದ ೨ ಗಂಟೆಯ ವರೆಗೆ ಕ್ಲಾಸುಗಳು ನಡೆದು ಅರ್ಧತಾಸು ಸೂಟಿಯಾಗಿ ೨|| ಗಂಟೆಯಿಂದ ಸುಮಾರು ೫ ಗಂಟೆಯ ವರೆಗೂ ಸಾಗಿ ಬಿಡುವಿನ ಗಂಟೆ ಆಗುತ್ತಿತ್ತು. ಭೋಜನಾಲಯಗಳಲ್ಲಿ ೩ನೇ ವರ್ಷದ ವಿದ್ಯಾರ್ಥಿಯು ಪ್ರೆಸಿಡೆಂಟನು. ಆತನ ಹೇಳಿಕೆಯಂತೆ ಅಡಿಗೆನೀರಾಳುಗಳು ವರ್ತಿಸತಕ್ಕದ್ದು. ಮುಂಜಾನೆ ೭-೮ ಗಂಟೆಗಳ ನಡುವೆ ಸ್ನಾನದ ಗಂಟೆಯಾಗಿ ಎಲ್ಲರ ಸ್ನಾನವಾಗಿ ದೇವಾರ್ಚನೆಯಾಗತಕ್ಕದ್ದು ೧೦ ಗಂಟೆಗೆ ಊಟದ ಗಂಟೆಯಾಗಿ ಭೋಜನಾರಂಭವಾಗತಕ್ಕದ್ದು, ಅನ್ನ, ರೊಟ್ಟಿ, ಪಲ್ಲೆ, ಕಾರಬೇಳೆ, ನಿಯಮಿತ ಹಾಲು ಮಜ್ಜಿಗೆ ಮೊಸರು, ತುಪ್ಪ. ಖಾಸಗಿ ಬೇಕಾದವರು ತಮ್ಮ ಕೋಣೆಗಳಲ್ಲಿ ಹಾಲು ಕುಡಿಯಬಹುದು. ಇದರಂತೆ ಸಂಜೆಯ ಊಟದ ವ್ಯವಸ್ಥೆಯು. ಊಟದ ಪ್ರೆಸಿಡೆಂಟನು ಎರಡೂ ವೇಳೆ ಎಲ್ಲರ ಹಾಜರಿ ತೆಗೆದುಕೊಳ್ಳುತ್ತಿದ್ದನು, ಊಟಕ್ಕೆ ಕೂತಾಗ ಯಾರೂ ಹರಟೆಕೊಚ್ಚಲಾಗದು. ಉಣಬಡಿಸುವ ಪಾಳಿಯ ವಿದ್ಯಾರ್ಥಿಗಳೂ ಇರುತ್ತಿದ್ದರು. ಅವರು ಎಲ್ಲ ಪದಾರ್ಥಗಳನ್ನು ನೀಡಲು ಫೇರಿ ಹಾಕುತ್ತಿದ್ದರು. ವಾರದ ಸಾಮಾನು, ದಿನದ ಕಾಯಿಪಲ್ಲೆ ತರಲು ಇಬ್ಬರು ವಿದ್ಯಾರ್ಥಿಗಳು ನಿಯಮಿಸಲ್ಪಡುತ್ತಿದ್ದರು. ಇವರಲ್ಲಿ ಮುಖ್ಯಸ್ಥನು ಎಲ್ಲ ಸಾಮಾನುಗಳನ್ನು ಪೂರೈಸುವ ಹೊಣೆಗಾರನಿದ್ದನು. ಹಾಗು ಎಲ್ಲ ಬೋರ್ಡಿಂಗುಗಳ ಒಟ್ಟು ಲೆಕ್ಕವನ್ನು ಬರೆಯಲು ೪ನೇ ವರ್ಷದ ಟ್ರೇಂಡನೆಂದು ಹೆಸರಿಟ್ಟು ಆತನಿಂದ ಜಮಾಖರ್ಚು ಬರೆಯಿಸುತ್ತಿದ್ದರು. ತಿಂಗಳಿಗೊಮ್ಮೆಯಾದರೂ ಹಬ್ಬದ ಊಟಗಳು ಜರುಗುತ್ತಿದ್ದವು. ಆಗ ಊಟ ನಡೆದಾಗ ಪದಪದ್ಯಗಳೂ ಶ್ಲೋಕಗಳೂ ಸಾಗುತ್ತಿದ್ದವು.

ಆ ಕಾಲಕ್ಕೆ ೧ನೇ ವರ್ಷದವರಿಗೆ ೭ರೂ. ೨ನೇ-೩ನೇ ವರ್ಷದವರಿಗೆ ೮ರೂ. ಸ್ಕಾಲರ ಸಿಗುತ್ತಿತ್ತು. ಇಷ್ಟರಲ್ಲಿಯೇ ಊಟದ ಖರ್ಚು ಹೋಗಿ ಒಂದು ರೂಪಾಯಿ ಅಥವಾ ಚಿಲ್ಲರ ಉಳಿತಾಯ.

ವೇಳಾ ಪತ್ರಿಕೆಯಂತೆ ಎಲ್ಲ ವಿಷಯಗಳು ಕ್ರಮವಾಗಿ ಸಾಗುತ್ತಿದ್ದವು ಮತ್ತು ಹೆಚ್ಚಿನ ವಿಷಯಗಳಾದ ಕಾರ್ಪೆಂಟರಿ, ಡ್ರಾಯಿಂಗ, ಮಾದರಿಪಾಠ, ಟೀಕಾ ಪಾಠಗಳೂ ಪ್ರ್ಯಾಕ್ಟಿಸಿಂಗ ಸ್ಕೂಲಿನ ಕಲಿಸುವ ಸರತಿಗಳು

ನಿಯಮಿತವಾಗಿ ಸಾಗುತ್ತಿದ್ದವು. ಇದಲ್ಲದೆ ವರ್ಷದಲ್ಲಿ ಪ್ರವಾಸವೂ ಇರುತ್ತಿತ್ತು. ಆ ಕಾಲದಲ್ಲಿ ಸಿನೇಮಾ ಇದ್ದಿಲ್ಲ. ಮ್ಯಾಜಿಕ್ಲ್ಯಾಂಟರ್ನದ ಸಹಾಯದಿಂದ ಐತಿಹಾಸಿಕ, ಭೌಗೋಲಿಕ ವಿಶೇಷ ಮಾಹಿತಿಯು ಕೊಡಲ್ಪಡುತ್ತಿತ್ತು.

ಕನ್ನಡ ಭಾಷೆಯನ್ನು ಕಲಿಸಲು ೧ನೇ ವರ್ಷಾರಂಭದಲ್ಲಿ ಮೈಸೂರ ಪಂಡಿತರೊಬ್ಬರಿದ್ದರು. ಅವರು ತೀವ್ರವೇ ಮೈಸೂರಿಗೆ ಹೋದದ್ದರಿಂದ ಅವರ ಸ್ಥಳಕ್ಕೆ ಕಟ್ಟಿ ಎಂಬ ಪಂಡಿತರು ಆಗಮಿಸಿದರು. ಅವರು ಜೈಮಿನಿ ಭಾರತದ ಕನ್ನಡ ಷಟ್ಪದಿಗಳನ್ನು ಒಳ್ಳೇ ಸುಗಮವಾಗಿ ಸರಾಗವಾಗಿ ಅನ್ನುತ್ತ ಕವಿಯ ಊಹಾಪ್ರೋಹಗಳನ್ನು ವಿಮರ್ಶಿಸಿ ವ್ಯಾಕರಣ, ಛಂದಸ್ಸು, ರಸ, ಅಲಂಕಾರಾದಿಗಳನ್ನು ಮನೋಹರವಾಗಿ ಸಾಗಿಸುತ್ತಿದ್ದರು. ಕನ್ನಡದಲ್ಲಿ ಜೈಮಿನಿ, ರಾಜಶೇಖರ ವಿಳಾಸ, ಬಾಣಕಾದಂಬರಿ ವಿಷಯಗಳೂ ಶಬ್ದಮಣಿದರ್ಪಣವೆಂಬ ಹಳೆಗನ್ನಡ ವ್ಯಾಕರಣವೂ ಇಡಲ್ಪಟ್ಟಿದ್ದವು.

ಸಂಸ್ಕೃತ ಪಂಡಿತರು ತಮ್ಮ ವೇಳಾ ಪತ್ರಿಕೆಯ ಪ್ರಕಾರ, ಆಯಾ ವರ್ಷದ ವಿದ್ಯಾರ್ಥಿಗಳಿಗೆ ಭಾಂಡಾರಕರ ಸಂಸ್ಕೃತ ೧ನೇ, ೨ನೇ ಭಾಗಗಳನ್ನು ಸಾಗಿಸುತ್ತ ನಾಮ, ಲಿಂಗ, ವಿಭಕ್ತಿಗಳ, ಧಾತು, ಗಣ, ಕ್ರಿಯಾಪದಗಳ ಜ್ಞಾನ ಮಾಡಿಕೊಡುತ್ತ ಸಂಸ್ಕೃತ ಶ್ಲೋಕಗಳ ಅರ್ಥಾನುವಾದವನ್ನು ವಿವರಿಸುತ್ತ ನಡುವೆ ಉಪಕಥೆಗಳನ್ನು ಹೇಳಿ ನಗಿಸುತ್ತ ಬಾಲರಾಮಾಯಣ, ರಘುವಂಶ, ಭರ್ತೃಹರಿಯ ಶತಶ್ಲೋಕಾದಿಗಳ ಕೆಲ ಅಂಶಗಳನ್ನು ತಿಳಿಸಿ ಆನಂದಗೊಳಿಸುತ್ತಿದ್ದರು.

ಗಣಿತ ವಿಷಯಗಳನ್ನು ಎಲ್. ಸಿ. ರಾಮರಾಯರು ವಿವರಿಸುತ್ತಿದ್ದರು. ತಾವು ಸ್ವತಃ ಪ್ರಿಂಟು ಮಾಡಿಸಿದ ಗಣಿತೋತ್ಪತ್ತಿಯನ್ನು ಮೊದಲು ಮುಗಿಸಿ ಅಂಕಗಣಿತ, ಬೀಜಗಣಿತ, ರೇಖಾಗಣಿತ, ಕ್ಷೇತ್ರಫಲ, ಘನಫಲ, ಭೂಮಿತಿ ಮೊದಲಾದವುಗಳನ್ನು ಸೋಪಪತ್ತಿಕವಾಗಿ ವಿದ್ಯಾರ್ಥಿಗಳ ಮುಂದಿಡುತ್ತಿದ್ದರು. ಹಾಗು ಎಲ್ಲ ವಿದ್ಯಾರ್ಥಿಗಳು ತಮ್ಮ ಕೋಣೆಗಳಲ್ಲಿ ಉಜಳಣಿ ಮಾಡುವಾಗ ಬಿಗಿಯಾದ ಉದಾಹರಣೆಗಳನ್ನು ಕ್ಲಾಸಿನಲ್ಲಿ ಬಿಡಿಸಿ ತೋರಿಸುತ್ತಿದ್ದರು.

ಇತಿಹಾಸ-ಭೂಗೋಲಗಳನ್ನು ಹೇಳುವ ವ್ಹಾಯಿಸ ಪ್ರಿನ್ಸಿಪಾಲರಾದ ಜಂಡಿಗೇರಿರಾಯರು ಫಳದ ಮೇಲೆ ನಕಾಶ ತೆಗೆದು ಭೂಗೋಲ ಜ್ಞಾನವನ್ನು ಮಾಡಿಕೊಡುತ್ತಿದ್ದರು. ಹಾಗು ಕನ್ನಡ ಅಟ್ಲಾಸಗಳನ್ನು ತರಿಸಿಕೊಟ್ಟು ಪ್ರತಿಯೊಂದು ಗೋಲಾರ್ಧದಲ್ಲಿರುವ ನೀರು ನೆಲಗಳನ್ನೂ ಖಂಡಗಳನ್ನೂ, ದೇಶಗಳನ್ನೂ, ಅಕ್ಷಾಂಶ-ರೇಖಾಂಶಗಳನ್ನೂ, ಕಟಿಬಂಧಗಳನ್ನೂ ವಿವರಿಸುತ್ತ ಆಯಾ ದೇಶದ ಪ್ರಾಕೃತಿಕ ಸ್ವರೂಪವನ್ನೂ ಹಾಗು ಹವೆ-ಮಳೆ-ಚಳಿಗಳನ್ನೂ, ರಾಜಕೀಯ ವಿಭಾಗಗಳನ್ನೂ ಸಾಮಾನ್ಯವಾಗಿ ಮಾಡಿಕೊಟ್ಟು ಹಿಂದುಸ್ಥಾನ, ಇಂಗ್ಲಂಡ ದೇಶಗಳ ವಿಶೇಷ ಪರಿಚಯ ಮಾಡಿಕೊಡುತ್ತಿದ್ದರು.

ಇದರಂತೆ ಹಿಂದುಸ್ಥಾನ ಇಂಗ್ಲಂಡ ದೇಶಗಳ ಪೂರ್ವ ಕಾಲದಿಂದ ನಡೆಯುವ ಕಾಲದ ವರೆಗೆ ಐತಿಹ್ಯ ಜ್ಞಾನವನ್ನು ಮಾಡಿಕೊಡುತ್ತ ಮಹಾತ್ಮರ ಚರಿತ್ರೆಗಳನ್ನು ಬೋಧಪರವಾಗಿ ನಡೆಯಿಸುತ್ತಿದ್ದರು.

ಜಮಖಂಡಿ ಮಾಸ್ತರರು ಪದಾರ್ಥ ವಿಜ್ಞಾನ ಶಾಸ್ತ್ರ, ಪ್ರಾಣಿಶಾಸ್ತ್ರ, ರಸಾಯನಶಾಸ್ತ್ರ, ಯಂತ್ರ ಶಾಸ್ತ್ರ, ಜ್ಯೋತಿಷ್ಯಶಾಸ್ತ್ರ, ಶರೀರ ಶಾಸ್ತ್ರಗಳನ್ನು ಉಪಕರಣಗಳಿಂದಲೂ ಪ್ರಯೋಗಗಳಿಂದಲೂ ಜ್ಞಾನ ಮಾಡಿಕೊಡುತ್ತಿದ್ದರು.

ಪ್ರಿನ್ಸಿಪಾಲರಾದ ರೊದ್ದರಾಯರು ಮೊದಲನೇ ವರ್ಗದ ವಿದ್ಯಾರ್ಥಿಗಳಿಗೆ ಛಾಪಿಸಿದ ಪುಸ್ತಕದ ಶಿಕ್ಷಣ ಪದ್ಧತಿಯನ್ನು ಪೂರ್ಣ ಹೇಳಿ, ೨ನೇ, ೩ನೇ ವರ್ಷದ ವಿದ್ಯಾರ್ಥಿಗಳಿಗೆ ಪಾಶ್ಚಿಮಾತ್ಯ ದೇಶದ ಪ್ರಸಿದ್ಧ ಶಿಕ್ಷಣ ಶಾಸ್ತ್ರಬಲ್ಲ ಪಂಡಿತರ ಶಿಕ್ಷಣ ಗ್ರಂಥಗಳನ್ನು ಓದಿ, ತಮ್ಮ ಜ್ಞಾನವನ್ನು ಸಂಕ್ಷೇಪವಾಗಿ ಬರೆಯಿಸಿ ಬಾಲಕರ ಮಾನಸಿಕ ನೈತಿಕ ಶಾರೀರಿಕ ಶಕ್ತಿಗಳು ಬೆಳೆಯುವಂತೆ ಶಿಕ್ಷಕರಿಗೆ ಜ್ಞಾನ ಮಾರ್ಗದ ಸಂಗತಿಗಳನ್ನು ವಿವರಿಸುತ್ತಿದ್ದರು. ಹಾಗು ಟೀಕಾಪಾಠ, ಮಾದರಿ ಪಾಠಗಳು ನಡೆದಾಗ ಪ್ರತಿಯೊಂದು ವಿಷಯವನ್ನು ಕಲಿಸುವ ಪದ್ಧತಿಯನ್ನು ಅನುಭವಗೊಳಿಸುತ್ತಿದ್ದರು.

ಡ್ರಾಯಿಂಗ ಮಾಸ್ತರರಾದ ನೇರಲೇಕರ ಎಂಬುವರು ಡ್ರಾಯಿಂಗ ಹಾಲಿನಲ್ಲಿ ಆ ವಿಷಯದ ವೇಳೆಯಲ್ಲಿ ಚಿತ್ರಕಲಾಜ್ಞಾನಕ್ಕೆ ಅವಶ್ಯವಾದ ನೇತ್ರೇಂದ್ರಿಯ ಹಾಗು ಹಸ್ತಕೌಶಲ್ಯಗಳನ್ನು ಕ್ರಮವಾಗಿ ಬೆಳೆಯಿಸುವದಕ್ಕಾಗಿ, ಸುಲಭದಿಂದ ಕಠಿಣಕ್ಕೆ ಸಾಗುವ ಮಾರ್ಗವನ್ನು ಮುಂದರಿಸುತ್ತ, ತಮ್ಮ ವಿಷಯ ಸಾಗಿಸುತ್ತಿದ್ದರು. ಎಷ್ಟೋ ವಿದ್ಯಾರ್ಥಿಗಳು ೧ನೇ, ೨ನೇ ಗ್ರೇಡಿನ ಡ್ರಾಯಿಂಗ ಸರ್ಟಿಫಿಕೇಟ ಪಡೆದಿದ್ದರಲ್ಲದೆ ಒಬ್ಬೊಬ್ಬರು ೩ನೇ ಗ್ರೇಡ ಸರ್ಟಿಫಿಕೇಟ ಪಡೆದರು.

ಕಾಲೇಜದ ಎರಡೂ ಭಾಗದ ಮೇಲು ಕೆಳಗಿರುವ ಎಲ್ಲ ಪ್ರತಿಯೊಂದು ಕೋಣೆಯಲ್ಲಿ ನಾಲ್ನಾಲ್ಕು ವಿದ್ಯಾರ್ಥಿಗಳು ಇರುತ್ತಿದ್ದೆವು. ಆಗ ಲಾಯಿಟ್ ಇದ್ದಿಲ್ಲ. ಕಂದೀಲುಗಳನ್ನಾಗಲಿ ಗ್ಲಾಸುಗಳನ್ನಾಗಲಿ ಉಪಯೋಗಿಸುತ್ತಿದ್ದೆವು. ಮೇಲೆ ವಿವರಿಸಿದ ಎಲ್ಲ ವಿಷಯಗಳನ್ನು ಮನಮುಟ್ಟಿ ಕೇಳಿ ಮುಖ್ಯಾಂಶಗಳನ್ನು ಟಿಪ್ಪಣಿ ಮಾಡಿಕೊಂಡು, ರಾತ್ರಿ ೭ರಿಂದ ೧೦ ಗಂಟೆಯ ವರೆಗೆ ಪ್ರತಿಯೊಂದು ಕೋಣೆಯ ವಿದ್ಯಾರ್ಥಿಗಳು ಆಯಾದಿನದ ವಿಷಯಗಳಲ್ಲಿ ಸಂಸ್ಕೃತ ಕನ್ನಡ ಬಿಟ್ಟು ಉಳಿದ ವಿಷಯಗಳ ಪುಸ್ತಕಗಳನ್ನೂ ಟಿಪ್ಪಣಿಗಳನ್ನೂ ಸರಿಯಾಗಿ ಓದಿ ಆಯಾ ವಿಷಯಗಳನ್ನು ಒಬ್ಬರಿಗೊಬ್ಬರು ಕೇಳಾಡಿ ದೃಢಗೊಳಿಸುತ್ತಿದ್ದೆವು. ಹಾಗು ಮುಂಜಾನೆ ೪||ಯಿಂದ ೬ರ ವರೆಗೆ ಕನ್ನಡ ಸಂಸ್ಕೃತ ವಿಷಯಗಳನ್ನು ಪಾಠ ಮಾಡಿ ಒಬ್ಬರನ್ನೊಬ್ಬರು ಕೇಳಾಡುತ್ತಿದ್ದೆವು. ನಂತರ ತಾಲೀಮು ಸ್ನಾನಗಳಾದ ಮೇಲೆ ಗಣಿತ ವಿಷಯಗಳನ್ನು ಬಿಡಿಸುವ, ಪಕ್ಕಾ ಟಿಪ್ಪಣಿ ಬರೆಯುವದರಲ್ಲಿ ವೇಳೆಗಳೆಯುತ್ತಿದ್ದೆವು.

ಸೊಗವಾಗೆ ಗುರುಗಳ್ಗೆ, ಅಂದೆ ಭಾರತದೇಳ್ಗೆ!

(ಸುನೀತ ಗೀತ)

ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯ ನಾಮ
ಮೆರೆಯುತಿವೆ; ಶಾರದೆಯ ಚಿರವಾಸದೀ ಧಾಮ
ಸ್ಪರ್ಶಮಣಿಗಳ ಕಣಿಯೊ, ಅಮರ ದೀಪಾವಳಿಯೊ ?
ಸ್ಪರ್ಶಮಣಿ ಕಬ್ಬಿಣವ ಚಿನ್ನವಾಗಿಸುದೆಂತೆ !
ಆ ಚಿನ್ನದಿಂ ಪೆರತು ಕಬ್ಬಿಣಂ ಹೊನ್ನಾಯ್ತೆ ?
ಶಿಕ್ಷಣಾಲಯಮಮರ ದೀಪಂಗಳಾವಳಿಯೆ !
ದೀಪದಿಂ ದೀಪಗಳ ಬಳಗವೇ ಬೆಳೆವಂತೆ
ಗುರುವಿನಾ ಜ್ಞಾನದೀಪಿಕೆಯಿಂದೆ ಶಿಷ್ಯನುಂ
ಜ್ಯೋತಿಯಿಂ ನೆರೆಯುವಂ; ಮತ್ತೊರ್ವನವನಿಂದೆ
ದೀಪ್ತಿಯಂ ದೊರಕಿಪಂ; ಇಂತೆನಿತೊ ತಿಳಿವಿನಾ
ಸೊಡರುಗಳ ಸೃಷ್ಟಿಸುವ ‘ಟ್ರೇನಿಂಗ ಕಾಲೇಜು
ಶತವಾರ್ಷಿಕೋತ್ಸವಕೆ ಗೆಲುವಕ್ಕೆ ಶುಭಮಕ್ಕೆ ||
ಭಾವಿ ಸತ್ಪ್ರಜೆಗಳಂ ನಿರ್ಮಿಪ ವಿಧಾತರಿಗೆ
ಸೊಗವಾಗೆ ಗುರುಗಳ್ಗೆ ಅಂದೆ ಭಾರತದೇಳ್ಗೆ ||

—**ಪಂಡಿತ ಕೆವಲಿ**

ನಾನು ಕಂಡ ಧಾರವಾಡ ಕನ್ನಡ ಟ್ರೇನಿಂಗ ಕಾಲೇಜು

By : Dr. B. S. Gaddagimath, M. A , Ph D.

ಅಭಿನಂದನೆಗಳು

ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಮಾನೋತ್ಸವವೆಂದರೆ ಉತ್ತರ ಕರ್ನಾಟಕದ ಪ್ರಪ್ರಥಮ ಶಿಕ್ಷಣ ಸಂಸ್ಥೆಯ ಶತಮಾನೋತ್ಸವವೆಂದೇ ಹೇಳಬಹುದು. ಈ ಶಿಕ್ಷಣ ಸಂಸ್ಥೆಯ ಶತಮಾನೋತ್ಸವವು ಯಾವ ಕನ್ನಡಿಗನಿಗೆ ಹೆಮ್ಮೆಯ ಮಾತಲ್ಲ! ಇದು ಇತ್ತೀಚಿನ ಉತ್ತರ ಕನ್ನಡಿಗರ ಜನಜೀವನ ಶತೋತ್ಸವವೆಂದು ಬರೆದರೆ ತಪ್ಪಾಗಲಿಕ್ಕಿಲ್ಲ. ಕ್ರಿ. ಶ. ೧೮೫೭ರಲ್ಲಿ 'ನಾರ್ಮಲ್‌ಕ್ಲಾಸು' ಎಂದು ಧಾರವಾಡದಲ್ಲಿ ಪ್ರಾರಂಭವಾದ ಈ ಸಂಸ್ಥೆಯು, ಈಗ ಇಡೀ ಕರ್ನಾಟಕದಲ್ಲಿ 'ಜೀವನ ಶಿಕ್ಷಣ' ಮಹಾಕೇಂದ್ರವೆಂದು ಎಲ್ಲ ಕನ್ನಡಿಗರ ಅಭಿಮಾನದ ಕನ್ನಡ ಶಿಕ್ಷಕರ ಶಿಕ್ಷಣ ತರಬೇತಿ ಕೇಂದ್ರವಾಗಿದೆ. ಅದು ಇಂದಿನ ವರೆಗೆ ಜನತೆಗೆ ನೀಡಿದ ಸೇವೆ ಅಪಾರವಾದುದು; ಅಸಾಮಾನ್ಯವಾದುದು. ಅದು, ಇಂದು ನಾಡಿಗೆ ಸಲ್ಲಿಸುವ ಸೇವೆ ಆದರ್ಶವಾದುದು. ಆ ಸಂಸ್ಥೆಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿಗಾಗಿ ತಮ್ಮ ಜೀವನವನ್ನೇ ಮೀಸಲಿರಿಸಿದ ಶಿಕ್ಷಕವೃಂದವು ಧನ್ಯವಾದುದು; ನಿಜವಾಗಿಯೂ ಪಾವನವಾದುದು. ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ಅಭಿನಂದನೆಗಳು.

ಉತ್ಸಕ್ಯಾಭಿವೃದ್ಧಿ

ಕ್ರಿ. ಶ. ೧೯೩೩ರಲ್ಲಿ ನಾನು ಪ್ರಾಥಮಿಕ ಶಿಕ್ಷಣ ದೆಶೆಯಲ್ಲಿದ್ದಾಗ, ಈ ಸಂಸ್ಥೆಯ ಸಂಬಂಧ ಅನೇಕ ಪ್ರಶಂಸನೀಯವಾದ ಮಾತುಕತೆಗಳನ್ನು ಅಲ್ಲಿ ಶಿಕ್ಷಣ ಹೊಂದಿ ನಮಗೆ ಶಿಕ್ಷಣವನ್ನೀಯುವ ಪ್ರಾಥಮಿಕ ಶಿಕ್ಷಕರ ಬಾಯಿಂದ ಕೇಳುತ್ತಲಿದ್ದೆ. ಈ ಸಂಸ್ಥೆಯಲ್ಲಿ ನಾನು ಕಲಿಯದಿದ್ದರೂ ಅದನ್ನು ನನ್ನ ಜೀವನದಲ್ಲಿ ಒಮ್ಮೆಯಾದರೂ ಕಾಣಬೇಕೆಂಬ ಕುತೂಹಲವು ಚಿಕ್ಕಂದಿನಿಂದಲೂ ನನ್ನಲ್ಲಿ ಹಿರಿದಾಗಹತ್ತಿತ್ತು. ಅದು ನನಗೆ ಪೂರ್ತಿಯಾದದ್ದು ೧೯೫೪ರಲ್ಲಿ, ಶ್ರೀ ಎಸ್. ಪಿ. ಪಾಟೀಲ ಅವರು ಪ್ರಿನ್ಸಿಪಾಲರಾಗಿ ಅದೇ ತಮ್ಮ ಆಡಳಿತೆಯನ್ನು ಪ್ರಾರಂಭ ಮಾಡಿದ ಕೆಲವೇ ತಿಂಗಳಲ್ಲಿ. ದೂರದಲ್ಲಿಯೇ ಇದ್ದು ಕಲ್ಪನಾತರಂಗಗಳಲ್ಲಿ ಮುಳುಗಿದ ನನಗೆ ಅದೊಂದು ಪ್ರಾಚೀನ ಕಾಲದ ಋಷಿಗಳ ಆಶ್ರಮವಿರಬಹುದೇ? ತಕ್ಷಶಿಲಾ ಮೊದಲಾದ ವಿಶ್ವವಿದ್ಯಾಲಯಗಳಂತಿರಬಹುದೇ? ಎಂಬ ಕಲ್ಪನೆಗಳು ಅದನ್ನು ಪ್ರತ್ಯಕ್ಷ ಸಂದರ್ಶಿಸಿದಾಗ ಕರಗಿ ಅದರ ನೈಜ ಚಿತ್ರವು ಕಣ್ಣೆದುರು ನಿಂತಿತು. ಇದು, ಲೌಕಿಕಕ್ಕೆ ಅಂಜಿ ಪಾರಮಾರ್ಥವನ್ನು ಗಳಿಸಲು ಅರಣ್ಯ ಸೇರಿದ ಮುನಿಗಳ ಆಶ್ರಮವೂ ಅಲ್ಲ; 'ಕೇವಲ ಜ್ಞಾನ' ಸಂಪಾದಿಸಲು ಕಟ್ಟಿಸಿದ ಬೌದ್ಧರ ವಿಹಾರವೂ ಅಲ್ಲ; ಲೌಕಿಕದಲ್ಲಿದ್ದು ಪಾರಮಾರ್ಥವನ್ನು ಸಾಧಿಸಲು, 'ಕಾಯಕ ಶಿಕ್ಷಣ'ವನ್ನು ಜನತೆಗೆ ನೀಡುತ್ತ ಬಂದ ಕ್ರಿ.ಶ. ೧೮ನೆಯ ಶತಮಾನದ ಮಠದಯ್ಯಗಳ ಮಾರ್ಪಾಟಾದ ಮಾದರಿಯ ಮಠವೆಂಬುದು ಪ್ರತಿಯೊಬ್ಬ ಸಂಶೋಧಕನಿಗೆ ಹೊಳೆಯದಿರದು. ಈ ಸಂಸ್ಥೆಯಿಂದ ಮೊದಮೊದಲು ಹೊರಡುತ್ತಿದ್ದ 'ಮಠಪತ್ರಿಕೆ'ಯೇ ಇದಕ್ಕೆ ಸಾಕ್ಷಿ.

ಈ ಸಂಸ್ಥೆಯು ರೂಪರೇಷೆ ತಾಳಲು ಕಾಯಕ-ಶಿಕ್ಷಣ–ಸಂಸ್ಕೃತಿಯಲ್ಲಿ ಹುಟ್ಟಿ ಬೆಳೆದು ಬಂದ, ಧಾರವಾಡದ ಡೆಪ್ಯೂಟಿ ಚೆನ್ನಬಸಪ್ಪನವರೇ ಮೂಲಕಾರಣರಾದರು· ಸುಸಂಸ್ಕೃತರೂ ಕನ್ನಡಾಭಿಮಾನಿಗಳೂ ಆದ ಅವರು ಕನ್ನಡ ಕಾರಣ ಪುರುಷರು. ಇವರೇ ಈ ಸಂಸ್ಥೆಯ ಪ್ರಪ್ರಥಮ ಯೋಜಕರಾಗಿ ಆಡಳಿತೆಯನ್ನು ಹಾಕಿಕೊಟ್ಟರು. ಆ ಪರಂಪರೆಯೇ ಇಂದಿನ ವರೆಗೆ ಬಂದಿದೆ, ಇಲ್ಲಿಯ ವರೆಗೆ ಅನೇಕ ಮಹನೀಯರು ಅದರ ಅಭ್ಯುದಯಕ್ಕೆ ಕಾರಣರಾಗಿದ್ದಾರೆ. ಅವರೆಲ್ಲರ ಸೇವೆಯನ್ನು ಯಾವ ಕನ್ನಡಿಗನೂ ಮರೆಯಲಾರನು. ಇಂದಿನ ಪ್ರಿನ್ಸಿಪಾಲರಾದ, ಶ್ರೀ ಎಸ್. ಪಿ. ಪಾಟೀಲ ಅವರು ತೇಜುಂಡ ಅಚ್ಚುಕಟ್ಟಿನ ಜೀವಿಗಳು. ಕಾಯಕ ಶಿಕ್ಷಣಾನುಭಾವಿಗಳೂ ಪಾಶ್ಚಾತ್ಯ ಶಿಕ್ಷಣ ತಜ್ಞರೂ ಆದ ಅವರು ಕನ್ನಡಿಗರಿಗೆ ಆದರ್ಶ ಶಿಕ್ಷಕರೂ ಅಹುದು; ಶಿಕ್ಷಣ ತಜ್ಞರೂ ಅಹುದು. ಈ ಮಾತನ್ನು ಅವರ ನಿಕಟ ಸಂಪರ್ಕದಲ್ಲಿದ್ದ ಪ್ರತಿಯೊಬ್ಬನೂ ಕಣ್ಣಾರೆ ಕಂಡು ಮನಗಂಡಿದ್ದಾನೆ. ಇವರ ಶಿಸ್ತಿನ ಆಡಳಿತೆಯಲ್ಲಿ ಈ ಸಂಸ್ಥೆಯ ರೂಪರೇಷೆ ಹಾಗೂ ಗೊತ್ತುಗುರಿಗಳು ಬದಲಾಗದಿದ್ದರೂ ಅವು ಇಂದಿನ ಶಿಕ್ಷಣ ವಾತಾವರಣಕ್ಕೆ ಮಾರ್ಪಾಟಾಗಿ ಶಿಕ್ಷಣಾಚ್ಛಾದನವೇ ಬೇರೆಯಾಗಿದೆ. ಪ್ರಾಥಮಿಕ ಶಿಕ್ಷಣವು ಮೂಲಶಿಕ್ಷಣವಾಗಿ ಕೆಲವೇ ವರ್ಷಗಳಲ್ಲಿ ಜೀವನ ಶಿಕ್ಷ

ಣದ ಕಾರ್ಯರಂಗಕ್ಕಿಳಿದಿದೆ. 'ಮತಪತ್ರಿಕೆ'ಯು 'ಶಾಲಾ ಪತ್ರಿಕೆ'ಯಾಗಿ 'ಪ್ರಾಥಮಿಕ ಶಿಕ್ಷಣ'ಕ್ಕಿಳಿದು ಇಲ್ಲಿಯವರೆಗೆ ನಡೆಯುತ್ತ ಬಂದು ಇಂದು 'ಜೀವನ ಶಿಕ್ಷಣ'ವೆಂದು ರೂಪತಾಳಿ ಕಾರ್ಯಗತವಾಗಿದೆ. ಒಕ್ಕಲುತನ, ನೇಗಿ ಮೊದಲಾದ ಕುಲಮೆ (Workshops)ಗಳು ಹೊಸದಾಗಿ ಭರದಿಂದ ಪ್ರಾರಂಭವಾಗಿ ಸುಗತಿಯಲ್ಲಿ ಸಾಗಿವೆ.

ಕಾಯಕ–ಶಿಕ್ಷಣ ಜೀವನ–ಶಿಕ್ಷಣ

ಕಾಯಕ ಶಿಕ್ಷಣದಲ್ಲಿ 'ಅನುಭಾವ ಪದ್ಧತಿ'ಯೇ ಶಿಕ್ಷಣದ ಮೂಲಸೂತ್ರ. ಜೀವನ ಪಾಠದಲ್ಲಿ ಕಾಯಕ ದಾಸೋಹ–ಅನುಭಾವ–ಅರ್ಪಣೆಯ ನಾಲ್ಕು ಹಂತಗಳ ಮುಖಾಂತರ ಜೀವನವು ಸುಖವಾಗಿ ಒಲ್ಲೆಂದರೂ ಪಾವನವಾಗುವುದು. ಇದರಲ್ಲಿ ಪರಿಪೂರ್ಣತೆಯ ಪರಿಪಕ್ವತೆಯಿದೆ. ಇದನ್ನು ನಾವು ಜೀವನ ಶಿಕ್ಷಣದಲ್ಲಿ ಕಾಣಲಾರೆವು. ಜೀವನ–ಶಿಕ್ಷಣದಲ್ಲಿ 'ಸಮವಾಯ ಪದ್ಧತಿ'ಯೇ ಶಿಕ್ಷಣದ ಸೂತ್ರ. ಮಗುವು ಕಲಿತದ್ದನ್ನು ಜೀವನ ಸನ್ನಿವೇಶಗಳಿಗೆ ಹೋಲಿಸಿ ಬೇಕೆನಿಸಿದಾಗ ಬಳಸಿಕೊಳ್ಳುವುದು. ಅದರಿಂದ ಲೌಕಿಕವು ಪುಷ್ಟಿಯಾಗಿ ಜೀವನವು ಸುಖಮಯವಾಗುವುದು; ಮಾತ್ರ ಪಾವನವಾಗಲಾರದು. ಇಷ್ಟೇ ಅಲ್ಲ–ಕಾಲಾಂತರದಲ್ಲಿ **ಭಾಂಡವಲಶಾಹಿ** ಹಾಗೂ **ಸಾಮ್ರಾಜ್ಯ ಶಾಹಿಗಳ** ಕಂಟಕದಲ್ಲಿ ಸಿಲುಕುವ ಭಯವೂ ಇದೆ. ಯಾಕಂದರೆ **ಗುಡಿತದಲ್ಲಿ ಹೊಟ್ಟೆ ತುಂಬಿ ಹೆಚ್ಚಾದದ್ದು, ತನ್ನದಲ್ಲವೆಂದು ಸಮವಾಯ ಪದ್ಧತಿಯು ಮಗುವಿಗೆ ಕಲಿಸದು.** ಇದು, ಎಲ್ಲರೂ ವಿಚಾರ ಮಾಡತಕ್ಕ ಸಮಸ್ಯೆ. ಆದುದರಿಂದ ಸಮವಾಯ ಪದ್ಧತಿಯು ಜೀವನ ಶಿಕ್ಷಣದಲ್ಲಿ ಬರುಬರುತ್ತಾ ಮಾರ್ಪಾಟಾಗಿ ಅನುಭಾವ ಪದ್ಧತಿಗಿಳಿದರೆ ಭರತ ಖಂಡವು ತನ್ನ ಶಿಕ್ಷಣದ ಅಂತಿಮ ಗುರಿಯನ್ನು ಮುಟ್ಟಿದಂತಾಗಬಹುದು.

ನಿತ್ಯಕಾರ್ಯಕಲಾಪಗಳು

ಇಂದು, ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜು, ಅತಿ ರಮ್ಯವಾದ ಜೀವನ ಶಿಕ್ಷಣೋದ್ಯಾನ. ಅದರಲ್ಲಿ ಬನಸಿರಿಯ ಸೊಬಗಿನೊಡನೆ ಜೀವನ–ಸಿರಿಯ ಮಾರ್ಗವಿದೆ. ಅಲ್ಲಿ ಬೆಳಗಿನ ಜಾವದ ೫ ಘಂಟೆಯಿಂದ ಸಂಜೆಯ ೧೦ ಘಂಟೆಯ ವರೆಗೆ ಜೀವನ ವ್ಯವಹಾರದ ಕಾರ್ಯಕಲಾಪಗಳು ಜೀವನ ಶಿಕ್ಷಣಕ್ಕಾಗಿ ಕಲ್ಯಾಣ ಅನುಭಾವ ಮಂಟಪದಂತೆ ಘಂಟಾ ಘೋಷವಾಗಿ ನಿತ್ಯವೂ ಅವ್ಯಾಹತವಾಗಿ ಸಾಗುತಿವೆ. ಈ ಸಂಸ್ಥೆಯ ಪ್ರಾರ್ಥನಾ ಮಂದಿರದಲ್ಲಿ ಬೆಳಗಿನ ೫ ಘಂಟೆಗೆ ಸಾಮೂಹಿಕ ಪ್ರಾರ್ಥನೆಯಿಂದ ಪ್ರಾರಂಭವಾದ ಈ ಕಾರ್ಯ–ಕಲಾಪಗಳು ಬೆಳಗಾದಂತೆ ಜೀವನ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ತಮ್ಮಷ್ಟಕ್ಕೆ ತಾವೇ ಇಳಿಯುವುವು. ಒಂದೆಡೆ ಹೂದೋಟಕ್ಕೆ ನೀರೆರೆಯುವುದು. ಮತ್ತೊಂದೆಡೆ ಸಂಸ್ಥಾ ಕ್ಷೇತ್ರದ ಆರೋಗ್ಯ ಸ್ವಚ್ಛತೆಯನ್ನು ಸಾಮೂಹಿಕವಾಗಿ ನೋಡಿಕೊಳ್ಳುವುದು. **ಕೃಷಿ ಕರ್ಮ ಪ್ರಯೋಗ ಶಾಲೆ, ನೇಗಿಯ ಶಾಲೆ, ಬಣ್ಣದ ಶಾಲೆ ಬಡಿಗ ಶಾಲೆ** ಮೊದಲಾದುವುಗಳು ತಮ್ಮ ವ್ಯವಹಾರವನ್ನು ಪ್ರಾರಂಭಿಸಲು, ಶಿಕ್ಷಕ ವಿದ್ಯಾರ್ಥಿಗಳು ಸರತಿಯಂತೆ ಆಯಾ ಕ್ಷೇತ್ರಗಳಲ್ಲಿ ಕಾರ್ಯದೊಡನೆ ಜ್ಞಾನಾರ್ಜನೆಗೆ ನಿಲ್ಲುವರು. ವಿವಿಧ ಕ್ಷೇತ್ರಗಳಲ್ಲಿಯ ತಜ್ಞರಿಂದ ಅನುಭವ ದೊರಕಿಸಿದ ವಿದ್ಯಾರ್ಥಿಗಳು ಕಾರ್ಯರಂಗಕ್ಕೂ ಇಳಿಯುವರು. **ಕ್ರಿಯೆಯು ಜ್ಞಾನವುಂಡ ಕೂಸೆಂಬುದನ್ನು ಯಾವ ಮಾನವನೂ ಮರೆಯಕೂಡದು.** ಇದನ್ನು ಮಧ್ಯಾಹ್ನದ ನಂತರ ಶಿಕ್ಷಕ ವಿದ್ಯಾರ್ಥಿಗಳು ಶಿಕ್ಷಣ ಮಂದಿರದಲ್ಲಿ ಪಠ್ಯ–ಪುಸ್ತಕಗಳ ಮುಖಾಂತರ ಶಿಕ್ಷಣ ತಜ್ಞರಿಂದ ಮನವರಿಕೆಮಾಡಿಕೊಂಡು ತಾವು ಚಿಕ್ಕ ಮಕ್ಕಳಿಗೆ ಕೊಡುವ ಪಾಠಕ್ರಮಗಳಲ್ಲಿ ಬೇಕಾದಾಗ ಅಳವಡಿಸಿಕೊಳ್ಳುವರು. ಸಾಯಂಕಾಲದ ವಿಶ್ರಾಂತಿಯೊಡನೆ ಮನರಂಜನೆ (Recreation)ಯ ಪಾಠಗಳೂ ಸಾಮೂಹಿಕ ಚಟುವಟಿಕೆಗಳೂ ಮೇಲಿಂದ ಮೇಲೆ ನಡೆಯುವುವು. ಆಗ ಅನುಭವಕ್ಕೆ ಹೊರಗಿನ ಸಂಪರ್ಕಬೇಕೆಂದು ಅತಿಥಿಗಳನ್ನು ಬರಮಾಡಿಕೊಳ್ಳುತ್ತಾರೆ. ಇತ್ತೀಚೆ, ಇಂತಹ ಅನೇಕ ಸಂದರ್ಭಗಳಲ್ಲಿ ನಾನು ಅತಿಥಿಯಾಗಿ ಹೋಗಿ ಇಲ್ಲಿಯ ನಿತ್ಯಕಾರ್ಯಕಲಾಪಗಳನ್ನು ಕಣ್ಣಾರೆ ಕಂಡು ಮನಸೋತು ಮೆಚ್ಚಿದ್ದೇನೆ. ಆ ನನ್ನ ಅನುಭವವೇ ಇದೆಲ್ಲವನ್ನು ಬರೆಯಲು ಪ್ರಚೋದಿಸಿತು. ಈಶ ಸಂಕಲ್ಪದೊಡನೆ ಎಲ್ಲವೂ ಸುಮಂಗಲವಾಗಲಿ. ದಿನದಿನಕೆ ಸಂಸ್ಥೆಯು ಅಭಿವೃದ್ಧಿಯಾಗಿ ಕನ್ನಡಿಗರಿಗೆ ತನ್ನ ಸೇವೆಸಲ್ಲಿಸಲಿ. ಜನತಾ ಸರಕಾರವು ಅದರ ಅಭಿವೃದ್ಧಿಗೆ ಟೊಂಕಕಟ್ಟಲಿ. ಜೈ ಕನ್ನಡ ತಾಯಿ ನಿನಗೆ ಶುಭ ಮಂಗಲಂ.

* * *

ನಮ್ಮ ಪ್ರಾಥಮಿಕ ಅಧ್ಯಾಪನ ಮಹಾವಿದ್ಯಾಲಯದ ದೀರ್ಘಸೇವೆ

ಲೇಖಕರು: **ಶ್ರೀ ವೀ. ಬ. ಭದ್ರಣ್ಣವರ** (ಹಳೆಯ ವಿದ್ಯಾರ್ಥಿ)
ಮುಖ್ಯ ಗುರುಗಳು ಜೀವನ ಶಿಕ್ಷಣ ವಿದ್ಯಾಮಂದಿರ ನಾಗನೂರು. ತಾ. ಬಯಲುಹೊಂಗಲ, ಜಿ. ಬೆಳಗಾವಿ.

ನಮ್ಮೀ ಪ್ರಾಥಮಿಕ ಅಧ್ಯಾಪನ ಮಹಾವಿದ್ಯಾಲಯವು ಇಂದಿಗೆ ಸರಿಯಾಗಿ ನೂರು ವರುಷಗಳ ಹಿಂದೆ, ಅಂದರೆ ೧೮೫೭ನೆಯ ಇಸ್ವಿಯಲ್ಲಿ ಜನ್ಮ ತಾಳಿತು. ಮುಂದೆ ಈ ಸಂಸ್ಥೆಯು ಕೆಲವು ಅನಿವಾರ್ಯ ಕಾರಣಗಳ ಮೂಲಕ ಏಳನೆಯ ಜನೆವರಿ ೧೮೬೧ರಲ್ಲಿ ಬೆಳಗಾವಿಗೆ ಸ್ಥಳಾಂತರ ಹೊಂದಿತು. ಅಂದಿನಿಂದ ಇಂದಿನ ವರೆಗೆ ಅದು ತನ್ನ ಗುರಿಗೊಪ್ಪುವ ಅನೇಕ ಕಾರ್ಯಕಲಾಪಗಳಿಗೆ ಎಡೆಗೊಟ್ಟಿದೆ. ಅದು ಮಾಡಿದ ಮಹಾಸೇವೆಯನ್ನು ಮನದಂದು ನಾವಿಂದು ಅದರ ಜನ್ಮ ಶತಾಬ್ದಿ ಮಹೋತ್ಸವವನ್ನು ಆಚರಿಸಲಣಿಯಾಗಿದ್ದೇವೆ. ಈ ಶುಭ ಪ್ರಸಂಗದಲ್ಲಿ ನಾನು ಶಿಕ್ಷಾದೀಕ್ಷೆಯನ್ನು ಪಡೆದ ಈ ವಿದ್ಯಾನಿಲಯದ ದೀರ್ಘಸೇವೆಯ ಬಗೆಗೆ ಒಂದೆರಡು ಮಾತುಗಳನ್ನು ಬರೆಯುತ್ತಿದ್ದೇನೆ.

ಸರಕಾರದಿಂದ ವೇತನ ಪಡೆದ ಹನ್ನೆರಡು ಜನ ವಿದ್ಯಾರ್ಥಿಗಳು ಮಾತ್ರ ಈ ನಿಲಯದಲ್ಲಿ ಶಿಕ್ಷಣ ಪಡೆಯಲು ಮೊದಲು ಮಾಡಿದರು. ಮುಂದೆ ನಾಲ್ಕು ವರುಷಗಳಾದ ಮೇಲೆ ಇಲ್ಲಿ ಮೂರು ವರುಷಗಳ ವರೆಗೆ ಶಿಕ್ಷಣ ಕೊಡುವ ಏರ್ಪಾಡಾಯಿತು. ಕನ್ನಡ ಭಾಷಾಭೂಷಣರೂ ಶಿಕ್ಷಣಾಭಿಮಾನಿಗಳೂ ಆದ ದಿವಂಗತ ಚನ್ನಬಸವಪ್ಪ ಬಸವಲಿಂಗಪ್ಪ ಧಾರವಾಡ ಅವರು ಈ ಸಂಸ್ಥೆಯ ಮೊದಲನೆಯ ಪ್ರಿನ್ಸಿಪಾಲರಾದರು. ಒಂದು ಶತಮಾನದ ವರೆಗೆ ಕರ್ನಾಟಕಕ್ಕೆ ಆದರಣೀಯ ಸೇವೆಸಲ್ಲಿಸಿದ ಈ ಮಹಾಸಂಸ್ಥೆಗೆ ಇಷ್ಟು ಉಜ್ವಲವಾದ ದೀರ್ಘಾಯುಷ್ಯ ಬಂದುದು ಕೈ. ವಾ. ಚೆನ್ನಬಸವಪ್ಪನವರು ಪಟ್ಟ ಪರಿಶ್ರಮವೇ ಕಾರಣ. ಕಾರ್ಯದ ಬಿಗುವಿಲ್ಲದೆ, ನಗೆಯಾಡುತ್ತ, ಕೆಲೆದಾಡುತ್ತ ಮಮತೆಯ ಹುರಿಮಾತಿನಿಂದಲೇ ಗಡುಚಾದುದನ್ನೂ ಕೂಡ ಸುಲಭವಾಗಿ ಸಾಧಿಸುವದು ಅವರ ಕೈವಾಡ! ಈ ಕೈವಾಡ ನಮ್ಮೀ ವಿದ್ಯಾಮಂದಿರಕ್ಕೆ ಹೊಸ ಕಳೆಯನ್ನಿತ್ತಿತು. ಬಿನ್ನಾಣದ ಭಾರ ಹೊರುವಂತಾಯಿತು. ಅವರ ಕಾಲದಲ್ಲಿ ಕಲಿಯುವವರ ಸಂಖ್ಯೆ ೫೦ಕ್ಕೆ ಮುಟ್ಟಿತು. ಮುಂದೆ ೧೮೬೫ರಲ್ಲಿ ಈ ಸಂಖ್ಯೆಯಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ನೂರಾಹತ್ತಕ್ಕೇರಿತು.

ಬೆಳಗಾವಿಗಿಂತ ಧಾರವಾಡವು ಮಧ್ಯವರ್ತಿ ಸ್ಥಳವಾಗುವುದೆಂಬ ಉದ್ದೇಶದಿಂದ ೧೮೬೭ರಲ್ಲಿ ಈ ಸಂಸ್ಥೆಯನ್ನು ಧಾರವಾಡಕ್ಕೆ ತರಲಾಯಿತು. ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿ ಸರಕಾರದವರು ಈ ಸಂಸ್ಥೆಗೆ ಒಪ್ಪುವ ಭವ್ಯವಾದ ಕಟ್ಟಡಗಳನ್ನು ಕಟ್ಟಿಸಿದರು. ೧೯೦೮ರಷ್ಟೊತ್ತಿಗೆ ಇಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇನ್ನೂರರ ಗೆರೆಯನ್ನು ದಾಟಿತು.

ಕರ್ನಾಟಕದ ಪಿತಾಮಹರೆನ್ನಿಸಿಕೊಂಡ ದಿವಾನ ಬಹಾದ್ದೂರ ದೊಡ್ಡರಾಯರ ನೇತೃತ್ವದಲ್ಲಿ ಈ ಸಂಸ್ಥೆಯು ಬಹಳ ಅಭಿವೃದ್ಧಿ ಹೊಂದಿತು. ರಾಯರು ನಮ್ಮ ನಾಡಿನ ವಿದ್ಯಾಭಿವೃದ್ಧಿಗಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದರೆಂಬುದನ್ನು ಅರಿಯದ ಕನ್ನಡಿಗನಿರಲಾರನು.

೧೯೧೮ರ ಸುಮಾರಿಗೆ ತರಬೇತಿ ಪಡೆದ ಶಿಕ್ಷಕರ ಬೇಡಿಕೆ ಹೆಚ್ಚಾದ ಮೂಲಕ ಸರಕಾರದವರು ತರಬೇತಿ ಪಡೆಯಲು ಹೆಚ್ಚುಹೆಚ್ಚಾಗಿ ವಿದ್ಯಾರ್ಥಿಗಳನ್ನು ಆರಿಸಹತ್ತಿದರು. ಆ ಸಮಯಕ್ಕೆ ಇಲ್ಲಿ ಮುನ್ನೂರು ವಿದ್ಯಾರ್ಥಿಗಳು ಶಿಕ್ಷಣ ಪಡೆಯಲಾರಂಭಿಸಿದರು. ೧೯೧೮ರಲ್ಲಿ ಸರಕಾರದವರು ಪ್ರಾಥಮಿಕ ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸಿದ ಕಾರಣ ಈ ಸಂಸ್ಥೆ ಮತ್ತಿಷ್ಟು ಅಭಿವೃದ್ಧಿಗೊಂಡಿತು. ೧೯೩೦ರಲ್ಲಿ ಮಾನ್ಯ ಮಹಿಷಿಯವರು ಪ್ರಿನ್ಸಿಪಾಲರಾಗಿದ್ದಾಗ ವಿದ್ಯಾರ್ಥಿಗಳ ಸಂಖ್ಯೆ ಏಳನೂರಕ್ಕೇರಿತ್ತೆಂಬುದು ಹೆಮ್ಮೆಯ ವಿಷಯವಾಗಿದೆ.

ಶಿಕ್ಷಕಿಯರನ್ನು ತರಬೇತಿಗೊಳಿಸಲು ಧಾರವಾಡದಲ್ಲಿ ೧೮೭೫ರಲ್ಲಿ ಹೆಣ್ಣುಮಕ್ಕಳಿಗಾಗಿ ಒಂದು ನಾರ್ಮಲ್ ಕ್ಲಾಸ ಈ ಮಹಾವಿದ್ಯಾಲಯದ ನೇತೃತ್ವದಲ್ಲಿಯೇ ಪ್ರಾರಂಭವಾಯಿತು. ಅದನ್ನು ಸ್ಥಾಪಿಸಿದ ಶ್ರೇಯಸ್ಸು ಆಗಿನ ಧಾರವಾಡ ಜಿಲ್ಲೆಯ ಕಲೆಕ್ಟರರಾದ ಮಿ| ಮ್ಯೂರ ಸಾಹೇಬರಿಗೆ ಸಲ್ಲುತ್ತದೆ. ೧೯೦೭ರ ವರೆಗೆ ಅಲ್ಲಿ ಪ್ರತಿ

ವರುಷ ಹತ್ತು ಜನ ಹೆಣ್ಣುಮಕ್ಕಳು ಮಾತ್ರ ಶಿಕ್ಷಣ ಪಡೆಯುತ್ತಿದ್ದರೆಂಬುದು ತಿಳಿಯುತ್ತದೆ: ಮರು ವರುಷ ಅಂದರೆ ೧೯೦೮ರಲ್ಲಿ ಅಲ್ಲಿಯೂ ಸಹ ಎರಡು ವರುಷಗಳ ವರೆಗೆ ಶಿಕ್ಷಣಕೊಡುವ ಏರ್ಪಾಡಾಯಿತು. ಆಗ ಅದೂ ಒಂದು ಸ್ವತಂತ್ರ ಸಂಸ್ಥೆಯಾಗಿ ಈಗಿದ್ದ ಕಟ್ಟಡದಲ್ಲಿ ನೆಲೆಸಿತು.

೧೯೨೩ರ ವರೆಗೆ ಈ ವಿದ್ಯಾಲಯವು ಅತ್ಯಂತ ಜನಾದರಣೀಯವಾಗಿ ತನ್ನ ಸೇವೆಯನ್ನು ಸಲ್ಲಿಸುತ್ತ ಬಂದಿತು. ದೇಶಭಾಷೆಯ ಉಚ್ಚ ವಿದ್ಯಾನಿಲಯವೆಂದು ಈ ಸಂಸ್ಥೆಯನ್ನು ಜನರು ಅಭಿಮಾನದಿಂದ ಕಾಣಹತ್ತಿದರು.

ಈ ರೀತಿ ಮೇಲ್ಮೆಯನ್ನು ಪಡೆದು ಮೆರೆಯುತ್ತಿದ್ದ ಸಮಯದಲ್ಲಿ [೧೯೨೪] ಇದು ಒಮ್ಮಿಂದೊಮ್ಮೆಲೇ ದೊಡ್ಡ ಗಂಡಾಂತರಕ್ಕೆ ಸಿಲುಕಿತು. ಮಹಾಯುದ್ಧದ ಪರಿಣಾಮವಾಗಿ ಸರಕಾರವು ಆರ್ಥಿಕ ಮುಗ್ಗಟ್ಟಿನಿಂದ ಬಳಲುತ್ತಿತ್ತು. ಸರಕಾರದ ಆರ್ಥಿಕ ಸ್ಥಿತಿಯನ್ನು ಅನುಲಕ್ಷಿಸಿ ತರಬೇತಿ ಪಡೆಯುವವರ ಸಂಖ್ಯೆಯನ್ನು ಸಂಕ್ಷೇಪಿಸ್ಬೇಕಾಯಿತಂತೆ. ಆಗ ಸರಕಾರದವರು ಈ ಸಂಸ್ಥೆಯನ್ನು ಮೂರು ವರುಷ ಶಿಕ್ಷಣ ಕೊಡುವ ಕಾಲೇಜದ ಬದಲಾಗಿ ಒಂದೇ ವರುಷದ ಮೂವತ್ತು ವಿದ್ಯಾರ್ಥಿಗಳ ಟ್ರೇನಿಂಗ ಸ್ಕೂಲನ್ನಾಗಿ ಮಾಡಿದುದು ದುರ್ದೈವದ ಸಂಗತಿ: ಇಷ್ಟೇ ಅಲ್ಲ, ಈ ಕಾಲೇಜನ್ನು ಕೆಲವುದಿನಗಳ ವರೆಗೆ ನಿಲ್ಲಿಸಿ ಬಿಡಬೇಕೆಂದೂ ಯೋಚಿಸಿದ್ದರಂತೆ! ಇಂತಹ ವಿಪತ್ತನ್ನು ಎದುರಿಸಿ ಒಂದು ಪಟ್ಟ ಕಳೆದು [೧೨ ವರುಷಗಳ ನಂತರ] ಮತ್ತೆ ಅದು ಶೀಘ್ರದಲ್ಲಿಯೇ ಸುಸ್ಥಿತಿಗೆ ಬಂದಿತು. ಪುನಃ ೯೫ ಜನ ಶಿಕ್ಷಕ ವಿದ್ಯಾರ್ಥಿಗಳ ಎರಡನೆಯ ಮೂರನೆಯ ವರುಷಗಳ ವರ್ಗಗಳನ್ನು ತೆರೆಯಲಾಯಿತು. ಆ ವರ್ಗಗಳ ಉದ್ಘಾಟನೆಯು ದಿ. ೨೪-೬-೧೯೩೬ ರಂದು ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಗಳಾಗಿದ್ದ ಶ್ರೀ ಕಂಬಳಿ ಅವರಿಂದ ನಡೆಯಿತು. ಅವರು ಮಂತ್ರಿ ಪದದಲ್ಲಿರುವಾಗ ಕನ್ನಡಿಗರ ಈ ಸಂಸ್ಥೆಗೆ ಉಂಟಾಗಿದ್ದ ವಿಪತ್ತು ದೂರಾಯಿತೆಂದ ಮೇಲೆ ಅದರ ಪುನರುದ್ಧಾರದ ಕಾರ್ಯದಲ್ಲಿ ಕಂಬಳಿಯವರು ವಿಶೇಷಶ್ರಮ ವಹಿಸಿರಬೇಕೆಂಬುದು ಸ್ಪಷ್ಟವಿದೆ: ಅದೇ ಕಾಲಕ್ಕೆ ಇನಸ್ಪೆಕ್ಟರರಾಗಿದ್ದ ಶ್ರೀ ಸಯ್ಯದ ನೂರುಲ್ಲಾ ಅವರೂ ಪುನರುದ್ಧಾರದ ಈ ಪವಿತ್ರ ಕಾರ್ಯದಲ್ಲಿ ಬಹುವಿಧದಿಂದ ನೆರವನ್ನಿತ್ತರೆಂಬುದನ್ನೂ ನಾವು ಮರೆಯುವಂತಿಲ್ಲ. ಶ್ರೀ ಮುಗದಾಳರು ಆಗ ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಅವರೂ ಸಂಸ್ಥೆಯ ಏಳ್ಗೆಗಾಗಿ ಬಹಳಷ್ಟು ಶ್ರಮಿಸಿದರು.

ಕನ್ನಡ ನಾಡಿನ ಶಿಕ್ಷಣ, ಸಾಹಿತ್ಯ ಮತ್ತು ಸಾಂಸ್ಕೃತಿಕ ಬೆಳವಣಿಗೆಯ ನೂರಾರು ವರುಷಗಳ ಇತಿಹಾಸವನ್ನು ನಾವು ನೋಡಿದಾಗ ಈ ಸಂಸ್ಥೆಯಿಂದ ಸಲ್ಲಿಸಲ್ಪಟ್ಟ ಅಮೋಘವಾದ ಸೇವೆಯು ಎಲ್ಲರ ನಿದರ್ಶನಕ್ಕೆ ಬಾರದೆ ಇರದು. ಕಳೆದ ಶತಮಾನದ ಪೂರ್ವಾರ್ಧದಲ್ಲಿ ಕನ್ನಡದಲ್ಲಿ ಶಿಕ್ಷಣ ನಡೆಯುವ ಶಾಲೆಗಳೇ ಈ ಭಾಗದಲ್ಲಿ ಇಲ್ಲದಾಗ ಈ ಸಂಸ್ಥೆಯು ಜನ್ಮ ತಾಳಿತು. ಈ ಸುದೀರ್ಘ ಕಾಲಾವಧಿಯಲ್ಲಿ ಇದು ಅನೇಕ ಎಡರುತೊಡರುಗಳನ್ನು ದಾಟಿದೆ. ಹಿಗ್ಗು ಕುಗ್ಗುಗಳನ್ನು ಅನುಭವಿಸಿದೆ. ನಾಡಿನ ಪ್ರಾಥಮಿಕ ಶಿಕ್ಷಣದ ಅನೇಕ ಸ್ಥಿತ್ಯಂತರಗಳನ್ನೂ ಕಂಡಿದೆ. ಆದರೆ ಇದು ಎಂತಹ ಸಂಕಟಸಮಯಕ್ಕೂ ಹೆದರದೆ ತನ್ನ ಸೇವೆಯನ್ನು ಸಲ್ಲಿಸಿದೆ. ಇದರ ಈ ಸೇವೆಯೇ ಇದರ ಬಾಳ್ಕೆಗೆ ಸಂಜೀವಿನಿ.

ಈ ಸಂಸ್ಥೆಯನ್ನು ಸ್ಥಾಪಿಸಿ, ಬೆಳೆಸಿದ ಮಹಾನುಭಾವರಲ್ಲಿ ಡೆ. ಚೆನ್ನಬಸವಪ್ಪನವರು ಶ್ರೀ ವೆಂಕಟರಂಗೋ ಕಟ್ಟಿಯವರು ಭುಜಂಗರಾವ ಹುಯಿಲಗೋಳರವರು, ಶ್ರೀ ರಾವಜಿ ಕರಂದೀಕರ ಹಾಗೂ ದಿವಾನ ಬಹಾದ್ದೂರ ದೊಡ್ಡ ಶ್ರೀನಿವಾಸರಾಯರು ಇವರೇ ಅಗ್ರಗಣ್ಯರು. ಇನ್ನುಳಿದ ಮಹನೀಯರೂ ತಮ್ಮ ಸೇವಾವಧಿಯಲ್ಲಿ ಈ ಸಂಸ್ಥೆಯ ಏಳಿಗೆಗೆ ಹೆಣಗಾಡಿದ್ದಾರೆ. ಇದು ಇನ್ನೂ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇನೆ.

ಈ ಸಂಸ್ಥೆಯಲ್ಲಿ ತರಬೇತಿ ಪಡೆದು ಮರಳಿಹೋಗುವ ಗುರುಗಳು ಕಾಲೇಜದ ಕುಲಪತಿಗಳ ಸಹಾಧ್ಯಾಪಕರ ಜ್ಞಾನಜ್ಯೋತಿಗಳಿಂದ ತಮ್ಮ ಜ್ಞಾನ ದೀಪಗಳನ್ನು ಹೊತ್ತಿಸಿಕೊಂಡು ಹೋಗಿ ಹಳ್ಳಿಗಳಲ್ಲಿ ಬೆಳಗಿದ್ದಾರೆ, ಬೆಳಗುತ್ತಿದ್ದಾರೆ. ಆ ರೀತಿ ಬೆಳಗಿದವರ ಸಂಖ್ಯೆ ಬಹಳ ದೊಡ್ಡದು: ಇವರೆಲ್ಲರಿಗೆ ಆಶ್ರಯವನ್ನಿತ್ತ ಮಾತೃಸಂಸ್ಥೆಯೇ ನಿನಗೆ ಶರಣು ಶರಣು.

ನಮ್ಮ ವಿದ್ಯಾಮಂದಿರ !

೧

ನಾಡನಡುಮನೆಯಲ್ಲಿ ನಿಂತಿದೆ
ನಮ್ಮ ವಿದ್ಯಾಮಂದಿರ !
ನಮ್ಮ ಕನ್ನಡ ಗುರುಕುಲಾಂಬರ-
ಕಿಮುವೆ ಪೂರ್ಣ ಚಂದಿರ !

೨

ಶಾರದಾಂಬೆಯ ಗರ್ಭಗುಡಿಯಲಿ
ಮೆರೆವ ದೀಪಸ್ತಂಭವು
ಭಾರತಾಂಬೆಯ ಭವ್ಯ ಜೀವನ-
ಕಿಡುವೆ ಚೇತನ ಬಿಂಬವು !

೩

ನೂರು ವರುಷದ ಸೇವೆಯಲಿ ತಾ
ದೇಹ ಸವೆಸುತ ಬಂದಿದೆ !
ಗುರುಕುಲಕೆ ಅರಿವನ್ನೆ ಬೀರುತ
ಅಮರ ಜ್ಯೋತಿಯ ತಂದಿದೆ !

೪

ನಿತ್ಯ ಅರಳುವ ಪುಷ್ಪಕೋಟಿಗೆ
ಬಣ್ಣವೇರಿಸಿ ಬರುತಿಹೆ
ಸತ್ಯಸೌಂದರ್ಯಗಳ ಸೌರಭ-
ವನ್ನೆ ಬಾಳಿಗೆ ತರುತಿಹೆ !

೫

ನಿನ್ನೆದೆಯ ರವಿಕಿರಣ ಮಾಲೆಯು
ನಾಡನುಡಿಗಳ ಬೆಳಗಿತು !
ಕನ್ನಡಾಂಬೆಯ ಬಯಕೆ ಹಣ್ಣಿಸಿ
ವಿಜಯ ಭೇರಿಯ ಮೊಳಗಿತು !

೬

ನಮ್ಮ ಸಂಸ್ಕೃತಿ ಅರಳಿ ಕಣಕಣ-
ದಲ್ಲಿ ಚೇತನ ತುಂಬಿತು !
ನಮ್ಮ ಜೀವನದಲ್ಲಿ ನೂತನ
ನಯವೆ ತಾ ಹೊಗರೇರಿತು !

೭

ನಾಡದೇವಿಯ ಮುಡಿಯ ನೇರಿದ
ಪುಣ್ಯನಿನಗದು ಲಭಿಸಿತು !
ಲೋಕ ಸೇವಾ ನಿರತೆ ನಿನ್ನಡಿ-
ಗೆನ್ನ ಶಿರ ತಾ ಬಾಗಿತು !

— **ಎಸ್. ಡಿ. ಇಂಚಲ**
ಬೆಳಗಾಂವಿ

೨ನೆಯ ವರ್ಷದ ಅ ವರ್ಗ



೨ನೆಯ ವರ್ಷದ ಬ ವರ್ಗ

೨ನೆಯ ವರ್ಷದ ಕ ವರ್ಗ

ಕಾಲೇಜದ ಗುರುವರ್ಗ



ಮರೆಯಲಾಗದ ಮಹಾದಿನ

ಲೇಖಕರು : **ಶ್ರೀ ಬಾ. ನೀ. ಭಾಂವಿಹಾಳ** (ಹಳೆಯ ವಿದ್ಯಾರ್ಥಿ)
ಜೀವನ ಶಿಕ್ಷಣ ವಿದ್ಯಾಮಂದಿರ, ಬಯಲುವಾಡ.

ದಿನಾಂಕ ೨೪–೬–೧೯೫೫ನೆಯ ದಿನ ಧಾರವಾಡ ನಗರದಲ್ಲಿ ಎಂದಿಲ್ಲದ ಸಂಭ್ರಮ. ಕಳೆದ ೧೨ ವರ್ಷಗಳಿಂದ ಕನ್ನಡ ಶಿಕ್ಷಕರ ಶಿಕ್ಷಣಾಲಯರವಿಗೆ ಹಿಡಿದ ಗ್ರಹಣವು ತೊಲಗಿ ಆತನು ಪ್ರಕಾಶಮಾನನಾಗಿ ಬೆಳಗುವ ಪುಣ್ಯ ದಿನ. ಕನ್ನಡ ಶಿಕ್ಷಕರ ಭಾಗ್ಯೋದಯದ ಶುಭ ದಿನ. ಅಂದು ಶಿಕ್ಷಕರ ಶಿಕ್ಷಣಾಲಯದಲ್ಲಿ ಧಾರವಾಡ, ವಿಜಾಪುರ, ಬೆಳಗಾವಿ, ಕಾರವಾರ ಈ ನಾಲ್ಕೂ ಜಿಲ್ಲೆಗಳಿಂದ ಕಲೆತ, ೯೫ ಜನ ಶಿಕ್ಷಕ ವಿದ್ಯಾರ್ಥಿಗಳಿಗೆ ತಮ್ಮ ಭಾಗ್ಯಕ್ಕೆ ಕಾರಣ ಪುರುಷರಾದ ವಿದ್ಯಾಮಂತ್ರಿ ದಿವಾಣ ಬಹಾದ್ದೂರ ಸರ್ ಕಂಬಳಿ ಸಿದ್ಧಪ್ಪನವರನ್ನು ಬರಮಾಡಿಕೊಳ್ಳಲು ಎಂದಿಲ್ಲದ ಅಮಿತ ಉತ್ಸಾಹ, ಆನಂದ. ವಯೋವೃದ್ಧ ಮುಖ್ಯ ಗುರುವರ್ಯ ಮುಗದಲ ವೆಂಕಟರಾಯರಿಗಂತೂ ತಮ್ಮ ಆಳಿಕೆಯಲ್ಲಿ ಇಂತಹ ಸಂದರ್ಭ ಒದಗಿ ಬಂದುದಕ್ಕಾಗಿ, ಉತ್ಸಾಹಿ ತರುಣರಂತೆ ಎಲ್ಲ ಕಾರ್ಯವನ್ನು ದಕ್ಷತೆಯಿಂದ ನೋಡಿಕೊಳ್ಳುತ್ತಿದ್ದರು. ಶಿಕ್ಷಕ ವಿದ್ಯಾರ್ಥಿಗಳು ತಮ್ಮ ಗುರುಗಳು ನಿಯಮಿಸಿ ಕೊಟ್ಟ ಕಾರ್ಯವನ್ನು ದಕ್ಷತೆಯಿಂದಲೂ, ಅಚ್ಚುಕಟ್ಟುತನದಿಂದಲೂ ನೋಡಿಕೊಳ್ಳುತ್ತಿದ್ದರು. ಮಳೆಗಾಲವಿದ್ದರೂ ಮೇಘರಾಜನು ಈ ಶುಭಕಾರ್ಯಕ್ಕೆ ಅಡ್ಡಿಯನ್ನುಂಟುಮಾಡದೆ ತನ್ನ ಸಹಾನುಭೂತಿಯನ್ನು ತೋರಿಸಿದನು.

ಅಂದು ಧಾರವಾಡ ನಗರದ ಜನಸ್ತೋಮವು ತಮ್ಮ ನಗರವನ್ನು ತಳಿರು–ತೋರಣ–ಮಂಟಪಗಳಿಂದ ಅಲಂಕರಿಸಿ ಆನಂದೋತ್ಸಾಹಗಳಲ್ಲಿ ನಲಿಯುತ್ತಿತ್ತು. ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯವು ತನ್ನ ಉದ್ಧಾರದ ಕಾರಣಿಕ ಪುರುಷನ ಬರವಿಗಾಗಿ ಎಂದಿಲ್ಲದ ಸೌಂದರ್ಯವನ್ನು ತಂದುಕೊಂಡಿತ್ತು. ಸಭಾಗೃಹದ ಸೌಂದರ್ಯವಂತೂ ಪ್ರೇಕ್ಷಣೀಯವಾಗಿತ್ತು. ಮಾನ್ಯ ಮಂತ್ರಿವರ್ಯರು ಅಂದು ಸಾಯಂಕಾಲ ೫–೩೦ ಗಂಟೆಗೆ ಆಗಮಿಸುವ ಸಮಯ ಗೊತ್ತಾಗಿತ್ತು. ಆಮಂತ್ರಿತರೆಲ್ಲರೂ ಮಹಾವಿದ್ಯಾಲಯದ ಅಂದಿನ ನಯನಮನೋಹರ ಪ್ರೇಕ್ಷಣೀಯ ನೋಟವನ್ನು ಕಣ್ದಣಿಯುವಂತೆ ಈಕ್ಷಿಸುತ್ತ ಸ್ಮಿತವದನರಾಗಿ ಮುಖ್ಯಗುರುಗಳ ಸ್ವಾಗತವನ್ನು ಸ್ವೀಕರಿಸುತ್ತ ವೈಶಿಷ್ಟ್ಯ ಪೂರ್ಣವಾಗಿ ವಿದ್ಯುದ್ದೀಪಗಳಿಂದ ಅಲಂಕೃತವಾಗಿ ಬೆಳಗುವ ಸಭಾಗೃಹವನ್ನು ಪ್ರವೇಶಿಸಿ ಆಸನಗಳಲ್ಲಿ ಮಂಡಿಸುತ್ತಿದ್ದರು. ಅಲ್ಪ ಸಮಯದಲ್ಲಿ ಹಿರಿಯ ಅಧಿಕಾರಿಗಳಿಂದಲೂ, ಸಭ್ಯಗೃಹಸ್ಥರಿಂದಲೂ, ಮಹಿಳೆಯರಿಂದಲೂ ಸಭಾ ಮಂದಿರವು ತುಂಬಿ ಹೋಯಿತು.

ಮಾನ್ಯ ಮಂತ್ರಿಗಳ ಮೋಟಾರಗಾಡಿಯು ಸರಿಯಾಗಿ ಸಾಯಂಕಾಲ ೫–೩೦ ಗಂಟೆಗೆ ಮಹಾವಿದ್ಯಾಲಯದ ಮಹಾದ್ವಾರಕ್ಕೆ ಬಂದಿತು. ಮಂತ್ರಿಗಳ ಬರವನ್ನೇ ನಿರೀಕ್ಷಿಸುತ್ತ ನಿಂತ ಮುಖ್ಯಗುರುಗಳಾದ ಶ್ರೀ ಮುಗದಲ ವೆಂಕಟರಾಯರೂ ದಕ್ಷಿಣ ಭಾಗದ ಅಚ್ಚ ಕನ್ನಡ ವಿದ್ಯಾಧಿಕಾರಿಗಳಾದ ಸಯ್ಯದ ನೂರುಲ್ಲಾ ಸಾಹೇಬರವರೂ ಎದುರುಗೊಂಡು ಕನ್ನಡವೇ ಮೈವೆತ್ತ ಕನ್ನಡಿಗರ ಕುರುಹು ಆದ ಅಚ್ಚ ಬಿಳಿಯ ಜರಿಯ ರುಮಾಲದ ಶಿರೋಭೂಷಣದಿಂದೊಪ್ಪುವ ಮಂತ್ರಿವರ್ಯರ ಸ್ವಾಗತ ಬಯಸಿದರು. ಮಂತ್ರಿವರ್ಯರು ಮಹಾದ್ವಾರ ಪ್ರವೇಶಿಸುತ್ತಲೇ ತಮಗೆ ಸಲ್ಲತಕ್ಕ ಪೋಲೀಸ ಪಡೆಯ ಗೌರವ ರಕ್ಷೆಯನ್ನು ಸ್ವೀಕರಿಸಿ ಮುಂದೆ ಸಾಗಲು ಇಬ್ಬದಿಯಲ್ಲಿ ಸಾಲುಗೊಂಡು ನಿಂತಿದ್ದ ಪ್ರಾಯೋಗಿಕ ಪ್ರಾಥಮಿಕ ಶಾಲೆಯ ಮಕ್ಕಳ ‘ಸ್ಕೌಟ’ ವಂದನೆಯನ್ನು ಸ್ವೀಕರಿಸಿ ಸಭಾಗೃಹವನ್ನು ಪ್ರವೇಶಿಸಿದರು. ನೆರೆದ ಸಭಿಕರೆಲ್ಲ ಎದ್ದು ನಿಂತು ಸನ್ಮಾನಿಸಿದರು. ಪ್ರಾಯೋಗಿಕ ಪ್ರಾಥಮಿಕ ಶಾಲಾ ಮಕ್ಕಳು ಈಶಸ್ತವನ ಮತ್ತು ಸ್ವಾಗತ ಗೀತೆಯನ್ನು ಇಂಪಾದ ಸ್ವರದಲ್ಲಿ ಹಾಡಿ ಸಭಿಕರನ್ನೆಲ್ಲ ಪ್ರಸನ್ನಚಿತ್ತರನ್ನಾಗಿ ಮಾಡಿದರು. ಬಳಿಕ ಮುಖ್ಯ ಗುರುಗಳು ಈ ಶುಭ ಸಮಾರಂಭಕ್ಕೆ ಬಂದ ಶುಭಾಶಯಗಳನ್ನು ಓದಿ ಕನ್ನಡಿಗರುದ್ಧಾರಕ್ಕೆ ಕಾರಣವಾದ ಈ ಶಿಕ್ಷಣ ಮಹಾವಿದ್ಯಾಲಯದ ಪೂರ್ವದ ಕೆಲವು ನೆನಹುಗಳನ್ನು ಸ್ಮರಿಸುತ್ತ ಇಂದಿನ ಶುಭ ಪ್ರಸಂಗಕ್ಕೂ ಕನ್ನಡ ಶಿಕ್ಷಕರ ಶಿಕ್ಷಣದ ಏಳ್ಗೆಗೂ ಕಾರಣಪುರುಷರಾದ ಮಾನ್ಯ ಮಂತ್ರಿ ಶ್ರೀ ಕಂಬಳಿಯವರನ್ನು ಕೊಂಡಾಡುತ್ತ ತಮ್ಮ ಸ್ವಾಗತ ಭಾಷಣವನ್ನು ಓದಿ ಮಾನ್ಯ ಮಂತ್ರಿಗಳಿಗೆ ಶಿಕ್ಷಣ ಮಹಾವಿದ್ಯಾಲಯದ ಉದ್ಘಾಟನೆ ಮಾಡಲು ವಿನಂತಿ ಮಾಡಿಕೊಂಡರು.

ಮಾನ್ಯ ಮಂತ್ರಿಗಳು ಕನ್ನಡಿಗರ ಧೀರೋದಾತ್ತ ಗಂಭೀರವಾಣಿಯಿಂದ ಕನ್ನಡ ಶಿಕ್ಷಣ ಪ್ರಪಂಚಕ್ಕೆ ಕಳೆದ ಹನ್ನೆರಡು ವರುಷಗಳಿಂದ ಹಿಡಿದ ಗ್ರಹಣವು ಇಂದು ದೂರಾದುದರ ಕಾರಣವನ್ನು ವಿಶದೀಕರಿಸಿ ತಮ್ಮ ಮಂತ್ರಿ ಕಾಲದ ಅವಧಿಯಲ್ಲಿ ಶಿಕ್ಷಣದಲ್ಲಿ ಹಿಂದುಳಿದ ಕರ್ನಾಟಕದ ಈ ಪ್ರದೇಶಕ್ಕೆ ಬೆಳಗಾವಿಯ ಲಿಂಗರಾಜ ಕಾಲೇಜ, ಕರ್ನಾಟಕ ಕಾಲೇಜದಲ್ಲಿ ಬಿ. ಎಸ್‌ಸಿ. ವರ್ಗ ತೆರೆಯಲ್ಪಟ್ಟ ಅಲ್ಪ ಸೇವೆಯನ್ನು ಉಸುರಿ ಕನ್ನಡ ಕುಲವನ್ನೆಲ್ಲ ಆನಂದೋತ್ಸಾಹಗಳಲ್ಲಿ ಮುಳುಗಿಸಿದರು. ಈ ಸಮಾರಂಭಕ್ಕೆ ತಮ್ಮನ್ನು ಆಮಂತ್ರಿಸಿದ್ದಕ್ಕಾಗಿ ನಾನು ನಿಮ್ಮೆಲ್ಲರಿಗೆ ಉಪಕೃತನಾಗಿರುವೆನು. ನನ್ನ ಮಂತ್ರಿ ಪದದ ಅವಧಿಯಲ್ಲಿ ಈ ಕನ್ನಡ ನಾಡಿನ ಏಳ್ಗೆಗಾಗಿ ನನ್ನ ಶಕ್ತಿಮೀರಿ ಪ್ರಯತ್ನಿಸುವೆನು ಎಂದು ತಮ್ಮ ಸೌಜನ್ಯಶೀಲವಾಣಿಯಿಂದ ಭಾಷಣ ಮುಗಿಸಿ ಆಸನಾರೂಢರಾದರು.

ಅನಂತರ ಮಾನ್ಯ ಮಂತ್ರಿಗಳ, ಆಗಮಿಸಿದ ಅಧಿಕಾರಿಗಳ, ಅತಿಥಿಗಳ ಆಭಾರಮನ್ನಣೆಯಾಯಿತು. ಇಂಥ ಶುಭ ಪ್ರಸಂಗವನ್ನು ಒದಗಿಸಿಕೊಟ್ಟ ದಕ್ಷಿಣ ಭಾಗದ ವಿದ್ಯಾಧಿಕಾರಿಗಳಾದ ಸಯ್ಯದ ನೂರುಲ್ಲಾ ಸಾಹೇಬರನ್ನೂ ಮುಖ್ಯಗುರುಗಳಾದ ಮುಗದಳ ವೆಂಕಟರಾಯರನ್ನೂ ಅಭಿನಂದಿಸುತ್ತಾ ಸಭಿಕರೆಲ್ಲರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಅಂದಿನ ಕನ್ನಡ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯದ ಪುನರುತ್ಥಾನದ ಶುಭಪ್ರಸಂಗವನ್ನು ಕಣ್ಣಾಣೆ ನೋಡಿ ಧನ್ಯನಾದ ನಾನು ಮರೆಯಲಾಗದ ಮಹಾದಿನವಲ್ಲದೆ ಮತ್ತೇನು ?

ನನ್ನ ಟ್ರೇನಿಂಗ ಕಾಲೇಜಿನ ಅನುಭವಗಳು

ಲೇಖಕರು : **ಶ್ರೀ ಮಿರ್ಜಿ ಅಣ್ಣಾರಾಯರು,** ಪ್ರಾಥಮಿಕ ಶಿಕ್ಷಕರು, ಸೇಡಬಾಳ.

ಸಾಹಿತ್ಯದಲ್ಲಿ ಒಲವಿದ್ದ ನನಗೆ ಧಾರವಾಡವು ಬಹು ಅಚ್ಚುಮೆಚ್ಚಿನದಾಗಿತ್ತು. ಮೊದಲಿನಿಂದಲೂ ಅಲ್ಲಿ ಹಲವು ದಿನಗಳನ್ನು ಕಳೆಯಬೇಕೆಂಬ ಹಂಬಲ, ಜಯಕರ್ನಾಟಕ, ಜಯಂತಿ, ಪ್ರಾಥಮಿಕ ಶಿಕ್ಷಣ ಮಾಸಪತ್ರಿಕೆಗಳು; ಸಾಧನಕೇರಿ, ಉಳವೀ ಬಸವೇಶ್ವರಗುಡ್ಡ, ಸೋಮೇಶ್ವರಗಳು; ವಿದ್ಯಾವರ್ಧಕ ಸಂಘ, ಕರ್ನಾಟಕ ಕಾಲೇಜು, ಟ್ರೇನಿಂಗ ಕಾಲೇಜು; ಆಲೂರ ವೆಂಕಟರಾಯರು, ಬಸವನಾಳರು, ಬೆಟಗೇರಿ ಕೃಷ್ಣಶರ್ಮರು— ಹೀಗೆ ಹಲವು ಶಕ್ತಿಗಳು ವ್ಯಕ್ತಿಗಳು ನನ್ನ ಮನಸ್ಸನ್ನು ಧಾರವಾಡದತ್ತ ಸೆಳೆಯಲಿಕ್ಕೆ ಕಾರಣವಾಗಿದ್ದುವು. ಸಾಹಿತ್ಯ ಸಮ್ಮೇಲನಕ್ಕೆಂದೂ ಇತರ ಸಾಹಿತ್ಯೋತ್ಸವಕ್ಕೆಂದೂ ಆಗಾಗ ಧಾರವಾಡಕ್ಕೆ ಹೋದಾಗ ಸರಕಾರೀ ಟ್ರೇನಿಂಗ ಕಾಲೇಜಿನ ಮುಂದೆ ಹಾಯ್ದಾಡಿಯೂ ಬಂದಿದ್ದೆ. ಜೊತೆಗೆ ಬಂದ ಗೆಳೆಯರಿಗೆ—ಶಿಕ್ಷಕ ವೃತ್ತಿಯಲ್ಲಿ ಇಲ್ಲದವರಿಗೆ— ಹೆಮ್ಮೆಯಿಂದ ಹೇಳಿದ್ದೆ :

“ಇದೇ ನಮ್ಮ ಟ್ರೇನಿಂಗ ಕಾಲೇಜು; ಇಲ್ಲಿಯೇ ನಾವು ಎರಡು ವರ್ಷ ಕಲಿಯಲಿಕ್ಕೆ ಬರಬೇಕು ”

“ಹೀಗೊ ? ಮಾಸ್ತರರಾದವರಿಗೆ ಯಾರಿಗೂ ಈ ಕಾಲೇಜಿನ ಎರಡು ವರ್ಷದ ಹುಳಿ, ಅನ್ನ, ತಪ್ಪುವದಿಲ್ಲವೆನ್ನು ” ಎಂದು ಅವರು ಪ್ರತಿಯಾಗಿ ನಗೆಯಾಡಿದ್ದರು.

ಧಾರವಾಡ ಟ್ರೇನಿಂಗ ಕಾಲೇಜಿನ ಅನ್ನ, ಹುಳಿ, ಸಾರುಗಳೆಲ್ಲ ಕರ್ನಾಟಕದ ಮನೆ ಮಾತುಗಳಾಗಿದ್ದವು.

ಅವರ ನಗೆ ಮಾತುಗಳೇ ನನಗೊಂದು ಹೆಮ್ಮೆ ಎನಿಸಿದ್ದುವು. ಆ ಎತ್ತರವಾದ ಹೆಬ್ಬಾಗಿಲಿನ ಕಟ್ಟಡ, ಸಾಲು ಸಾಲಾಗಿದ್ದ ವಿದ್ಯಾರ್ಥಿಗಳ ವಸತಿ ಗೃಹಗಳು, ಕಾಲೇಜಿನ ಹಿಂದಿರುವ ಪ್ರದರ್ಶನಾಲಯ, ಸಾಯನ್ಸ ಹಾಲು, ಜನರಲ್ ಹಾಲು, ಪ್ರ್ಯಾಕ್ಟೀಸಿಂಗ ಸ್ಕೂಲುಗಳೆಲ್ಲ ನನ್ನ ಹೃದಯ ಪಟದಲ್ಲಿ ಅಚ್ಚೊತ್ತಿ ನಿಂತಿದ್ದುವು. ಅಲ್ಲಿಲ್ಲಿ ಬಂದು ನಾನು ಯಾವಾಗ ವಾಸಿಸೇನು, ಪಾಠಗಳನ್ನು ಕಲಿತೇನು, ಪಾಠಗಳನ್ನು ಕೊಟ್ಟೇನು- ಎಂಬ ಆತುರವೇ ಆತುರ ನನ್ನಲ್ಲಿ. ಮೂರು ನಾಲ್ಕು ವರ್ಷಗಳಿಂದ ಸತತ ದಾರೀ ಕಾಯುತ್ತಿದ್ದೆ. ಜೂನ ಜುಲೈ ತಿಂಗಳುಗಳೆಂದರೆ ನನಗೆ ಎಂದಿಲ್ಲದ ಹರುಷ. ಚಾತಕ ಪಕ್ಷಿಯಂತೆ ಕಾಲೇಜಿಗೆ ಹೋಗುವ ಆರ್ಡರಿನ ದಾರಿಯನ್ನೇ ಕಾಯುವುದರಲ್ಲಿ ಕಳೆಯುತ್ತಿದ್ದೆ.

ಬಂತು ! ಅದೊಂದು ವರ್ಷ ಕಾಲೇಜಿಗೆ ಹಾಜರಾಗಲಿಕ್ಕೆ ಆರ್ಡರು ಬಂತು ! ೧೯೪೬ನೆಯ ಜೂನದು. ಆದರೆ ನನ್ನನ್ನು ಬೆಳಗಾಂವಿಯ ಕಾಲೇಜಿಗೆ ಆರಿಸಿದ್ದರು.

ಉಬ್ಬಿನಿಂದ ಓದಿದ ಆರ್ಡರದ ಒಕ್ಕಣಿಕೆಯು ಮುಗಿಯುವಷ್ಟರಲ್ಲಿ ಕಾಲೇಜಿನ ಉತ್ಸಾಹವೆಲ್ಲ ಇಳಿದು ಹೋಯಿತು.

ಕಾಲೇಜು ಆರಂಭವಾಗಲಿಕ್ಕೆ ಇನ್ನೆರಡೇ ದಿನ. ಹೊರಡುವ ಸಿದ್ಧತೆಯನ್ನು ಮಾಡಬೇಕು. ಮಾಡತೊಡಗಿದೆ. ಆದರೆ ಧಾರವಾಡ ಟ್ರೇನಿಂಗ ಕಾಲೇಜಿಗೇ ಹೋಗುವ ಹಂಬಲ ಮನದಲ್ಲಿ. ಶಾಲೆಯಿಂದ ಬಿಡುಗಡೆ ಹೊಂದಿದೆ. ಹಾಸಿಗೆ ಪುಸ್ತಕಗಳನ್ನು ಕಟ್ಟಿದೆ. ರೈಲು ನಿಲ್ದಾಣಕ್ಕೆ ಬಂದೆ. ಜೇಬಿನಲ್ಲಿ ಬೆಳಗಾಂವಿಯ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಿಗೆ ನನ್ನನ್ನು ಹಾಜರು ಮಾಡಿಕೊಳ್ಳಲಿಕ್ಕೆ ಹುಕುಂ. ನಾನು ಧಾರವಾಡದ ರೇಲ್ವೆ ಟಿಕೀಟನ್ನು ಕೊಂಡೆ. ಗಾಡಿ ಬಂತು ಕುಳಿತೂ ಹೊರಟೆ, ಎಲ್ಲಿಗೆ ಹತ್ತುವುದೋ ಹತ್ತುತ್ತದೆಂದು.

ಘೋಟಾ ಮಹಾಬಳೇಶ್ವರದ ಕಡೆಯಿಂದ ತಂಪು ಗಾಳಿ ಸುಳಿಯಿತು; ಮುಗದ ಹಿಂದೆ ಸರಿಯಿತು; ಕರ್ನಾಟಕ ಕಾಲೇಜಿನ ಕೆಂಪು ದೀಪ ಕಂಡಿತು. ಧಾರವಾಡ ಬಂದಿತೆಂದು ಎಚ್ಚರಗೊಂಡೆ. ತೂಕಡಿಸುತ್ತಲೇ ಬೆಳಗಿನಲ್ಲಿ ಧಾರವಾಡ ನಿಲ್ದಾಣದಲ್ಲಿಳಿದೆ. ಮಲ್ಲಾಡ ದಾಟಿ ಬಯಲಿಗೆ ಬಂದಂತಾಗಿತ್ತು. ಮನವೂ ಮುದಗೊಂಡಿತ್ತು.

ನನ್ನಂತೆ ಹಲವು ಜನ ವಿದ್ಯಾರ್ಥಿಗಳು—ಬೆಳಗಾಂವಿಯ ಕಡೆಯಿಂದ ಬಂದವರು— ಅಂದೇ ಟ್ರೇನಿಂಗ ಕಾಲೇಜಿಗೆ ಹಾಜರ ಆಗತಕ್ಕವರು ಅದೇ ಗಾಡಿಯಿಂದ ಇಳಿದರು. ಎಲ್ಲರೂ ಕೂಡಿದೆವು. ಪರಸ್ಪರ ಊರು, ಕೆಲಸ ಮಾಡುವ ಶಾಲೆ, ಅನುವು-ತನುವುಗಳನ್ನೆಲ್ಲ ಮಾತಾಡ ತೊಡಗಿದೆವು. ಅವರಲ್ಲಿ ಒಂದಿಬ್ಬರಿಗೆ ತಮ್ಮನ್ನು ಬೆಳಗಾಂವಿಯ ಕಾಲೇಜಿಗೇ ಆರಿಸಿದ್ದರೆ ಚೆನ್ನಾಗಿತ್ತೆಂದು ಯೋಚನೆಯೂ ಇತ್ತು. ಅಂಥವರಲ್ಲಿ ಒಬ್ಬರನ್ನು ಹಿಡಿದು, ಚಹ-ಫಲಹಾರಗಳನ್ನು ಕೊಟ್ಟು, ಅಲ್ಲಿಂದ ತಿರುಗಿ, ಹೊರಡುವ ಮೊದಲ ಗಾಡಿಯಿಂದಲೇ ಬೆಳಗಾಂವಿಗೆ ಮರಳಿದೆ. ನೇರವಾಗಿ ಸ್ಕೂಲಬೋರ್ಡ ಆಫೀಸಿಗೆ ಹೋಗಿ ನಮ್ಮ ಅಧಿಕಾರಿಗಳಿಗೆ ಭೆಟ್ಟಿಯಾಗಿ, ನಾನೂ ನನ್ನ ಸಂಗಡಿಗನೂ ನಮ್ಮ ನಮ್ಮ ಅಪೇಕ್ಷೆಯನ್ನು ಅರಿಕೆ ಮಾಡಿಕೊಂಡೆವು. ಅಧಿಕಾರಿಗಳು ಕೂಡಲೇ ಆರ್ಡರುಗಳನ್ನು ಬದಲಿಸಿ, ನಮಗೆ ಅನುಕೂಲ ಮಾಡಿಕೊಟ್ಟರು. ಅಂದೇ ಮಧ್ಯಾಹ್ನದ ನಾಲ್ಕು ಗಂಟೆಯ ಗಾಡಿಯಿಂದ ಮತ್ತೆ ಧಾರವಾಡಕ್ಕೆ ಪ್ರಯಾಣ ಬೆಳಸಿದೆ. ಧಾರವಾಡ ಟ್ರೇನಿಂಗ ಕಾಲೇಜಕ್ಕೆ ಬಂದು ಹಾಜರ ಆದೆ.

ಒಂದೊಂದಾಗಿ ಕಾಲೇಜಿನ ಚಟುವಟಿಕೆಗಳು ಆರಂಭವಾದುವು. ಪ್ರಾರ್ಥನೆ, ಪಾಠಗಳು; ಪಾಳೀಪಾಠ, ಟೀಕಾ ಪಾಠಗಳು; ಕಾಲೇಜಿನ ಜನರಲ್ ಸೆಕ್ರೆಟರಿಯನ್ನು ಆರಿಸುವ ಆ ಹೋರಾಟ; ಬೆಳಗಾಂವ, ಕಾರವಾರ, ವಿಜಾಪೂರ, ಧಾರವಾಡ ಜಿಲ್ಹೆಗಳಲ್ಲಿ ಸ್ಪರ್ಧೆಗಳು—ಎಲ್ಲವೂ ನಮಗೆ ಒಂದು ಹೊಸ ಜೀವನವನ್ನು ಕಲ್ಪಿಸಿಕೊಟ್ಟವು. ನವೀನ ಚೇತನೆಯನ್ನುಂಟು ಮಾಡಿದವು. ತಿರುಗಿ ವಿದ್ಯಾರ್ಥಿ ಜೀವನದ ಆ ಬಾಲ್ಯ ಕಾಲದ ಸವಿನೆನಪನ್ನು ಧಾರವಾಡ ಟ್ರೇನಿಂಗ ಕಾಲೇಜು ನಮಗೆ ತಂದೊದಗಿಸಿತು. ಎಷ್ಟು ಬೆಳೆದಿದ್ದರೂ ನೀವಿನ್ನೂ ಸಣ್ಣವರೆಂಬ ಪಾಠವನ್ನು ಕಲಿಸಿತು.

ನಾನು ಟ್ರೇನಿಂಗ ಕಾಲೇಜಿನಲ್ಲಿ ಕಲಿಯುತ್ತಿದ್ದಾಗಲೇ ಭಾರತಕ್ಕೆ ಸ್ವಾತಂತ್ರ್ಯ ಬಂತು. ೧೯೪೭ರ ಅಗಸ್ಟ ೧೫. ನಮ್ಮ ಕಾಲೇಜನ್ನೆಲ್ಲ ತಳಿರು ತೋರಣಗಳಿಂದ ಸಿಂಗರಿಸಿದೆವು. ಅಂದು ಎಲ್ಲ ಕಾಲೇಜುಗಳಿಗಿಂತಲೂ ನಮ್ಮ ಕಾಲೇಜಿನ ದೀಪೋತ್ಸವವೇ ಮಿಗಿಲು. ಧಾರವಾಡದ ಎಲ್ಲ ಕಾಲೇಜುಗಳಿಗೂ ನಮ್ಮ ಕಾಲೇಜು ಹಿರಿಯದು. ಅದರ ವೈಭವವನ್ನು ಅಂದು ಹೇಳತೀರದು.

ಧಾರವಾಡ ಟ್ರೇನಿಂಗ ಕಾಲೇಜು ಉತ್ತರ ಕರ್ನಾಟಕದ ಸಂಸ್ಕೃತಿಯ ಕೇಂದ್ರ. ಶಾಲಾಪತ್ರಕ, ಪ್ರಾಥಮಿಕ ಶಿಕ್ಷಣಗಳಿಂದ ನಾಡಿನ ಮೂಲೆ ಮೂಲೆಗಳಲ್ಲಿಯೂ ಜಾಗೃತಿಯನ್ನುಂಟು ಮಾಡಿದ ಸಂಸ್ಥೆ. ಕನ್ನಡದ ಪ್ರಸಿದ್ಧ ಕಾದಂಬರಿಕಾರರಾದ ಗಳಗನಾಥರು ಈ ಕಾಲೇಜಿನಲ್ಲಿದ್ದುಕೊಂಡೇ ಹೊರೆ ಹೊರೆಯಾಗಿ ಕಾದಂಬರಿಗಳನ್ನು ಬರೆದು ಕನ್ನಡಿಗರ ಕಣ್ಣುಗಳನ್ನು ಕುಕ್ಕಿಸಿದ್ದರು. ಪಂಡಿತ ಪೂಜಾರರು ಇಲ್ಲಿಯೇ ಕನ್ನಡವನ್ನು ಬೋಧಿಸಿ 'ನುಡಿಗನ್ನಡಿ'ಯನ್ನು ನಾಡಿನ ಮಕ್ಕಳಿಗೆ ನೀಡಿದರು. ಒಬ್ಬರೋ ಇಬ್ಬರೋ ನಮ್ಮ ಕಾಲೇಜಕ್ಕೊಂದು ಉಜ್ವಲ ಪರಂಪರೆಯಿದೆ, ಇತಿಹಾಸವಿದೆ. ಧಾರವಾಡ ಟ್ರೇನಿಂಗ ಕಾಲೇಜಿನ ಇತಿಹಾಸದ ಬೆಳಕಿನಲ್ಲಿಯೇ ನಾವು ಎರಡು ವರ್ಷಗಳನ್ನು ಕಳೆದೆವು. ಆ ಬೆಳಕು ನಮ್ಮ ಹೃದಯವನ್ನು ಬೆಳಗಿತು.

ಧಾರವಾಡ ಟ್ರೇನಿಂಗ ಕಾಲೇಜಿನ ಕಥೆಯೆಂದರೆ ಉತ್ತರ ಕರ್ನಾಟಕದ ಸಾಂಸ್ಕೃತಿಕ ಚರಿತ್ರೆ. ಅಲ್ಲಿಯೇ ಕರ್ನಾಟಕ ಕಾಲೇಜ ಆರಂಭವಾಯಿತು. ಕರ್ನಾಟಕ ವಿಶ್ವವಿದ್ಯಾಲಯದ ಜೋಗುಳ ಹಾಡಿದ್ದು ಈ ಕರ್ನಾಟಕ ಟ್ರೇನಿಂಗ ಕಾಲೇಜಿನಲ್ಲಿಯೇ. ಇಂದು ಜಿಲ್ಹೆಗೊಂದು

ಶಿಕ್ಷಕರ ಟ್ರೇನಿಂಗ ಕಾಲೇಜುಗಳಾಗಿರಬಹುದು. ಅಂದು ಕರ್ನಾಟಕಕ್ಕೆಲ್ಲ ಇದೊಂದೇ ಕಾಲೇಜು. ಸಂಸ್ಕೃತಿಯ ಸಂಗಮ ಸ್ಥಾನ. ಇನ್ನೂ ಈ ಕಾಲೇಜಿನ ಮೊದಲಿನ ವಿದ್ಯಾರ್ಥಿ ವಸತಿಗೃಹಗಳೇ ಕರ್ನಾಟಕ ಕಾಲೇಜು, ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿವೃಂದಕ್ಕೆ ಆಶ್ರಯ ಸ್ಥಾನ. ಅದರಿಂದ ಧಾರವಾಡದ ಶೈಕ್ಷಣಿಕ ಸಂಸ್ಥೆಗಳಿಗೆ ಇದೊಂದು ಮಾತೃಸ್ಥಾನದಲ್ಲಿ ನಿಲ್ಲುವ ತಾಯಿ ಸಂಸ್ಥೆಯಾಗಿದೆ.

ನಮ್ಮ ಕಾಲೇಜಕ್ಕೆ ಆ ಎರಡು ವರ್ಷಗಳಲ್ಲಿ ಅನೇಕ ಜನ ಮಹನೀಯರು ದರ್ಶನವಿತ್ತರು. ನವಕಲ್ಯಾಣಮಠದ ಶ್ರೀ ಕುಮಾರ ಸ್ವಾಮಿಗಳ ಅಮೃತವಾಣಿಯನ್ನು ಕೇಳಿದೆವು. ಶ್ರೀ ಬಿ. ಎಮ್. ಶ್ರೀಯವರು ಬಂದುಹೋದರು. ಶ್ರೀ ಡಿ. ವಿ. ಗುಂಡಪ್ಪನವರು ಆಗಮಿಸಿದರು. ಡಾಯರೆಕ್ಟರರಾದ ಪಾವಟೆಯವರೂ ಸಂದರ್ಶನವಿತ್ತರು. ಶ್ರೀ ರಸಿಕರಂಗರು ತಮ್ಮ ಸವಿಗೊರಲಿನಿಂದ ಕವನಗಳನ್ನು ಹಾಡಿ ಹುರಿದುಂಬಿಸಿದರು. ವಾರ ವಾರಕ್ಕೂ ನಮ್ಮ ಕಾಲೇಜು ಹೊಸತನವನ್ನು ಕಂಡಿತು. ಅದು ಶಿಕ್ಷಣದಲ್ಲಿ ಸಂಕ್ರಾಂತಿ ಕಾಲ. ಎಲ್ಲೆಡೆಗೂ ಮಹಾತ್ಮರು ಸಾರಿದ ಮೂಲಶಿಕ್ಷಣ ಆರಂಭಿಸಬೇಕೆನ್ನುವ ಪ್ರಗತಿಯ ಕೂಗದು. ಬೇಸಿಕ್ ಕಾಲೇಜು ಸಾದಾ ಕಾಲೇಜಿನಲ್ಲಿ ಸೇರಿಹೋದುದೂ ಇದೇ ಅವಧಿಯಲ್ಲಿ. ಕಾಲೇಜಿನ ಪಾಠಗಳು ಎರಡೂ ಹೊತ್ತು ಸಾಗಿದುವು. ಜೀವನ ಶಿಕ್ಷಣದ ಮುನ್ಸೂಚನೆಗಳು ಕಂಡುಬರಹತ್ತಿದುವು. ಅದಕ್ಕಾಗಿ ಅತಿಥಿ ಅಭ್ಯಾಗತರಿಂದಲೂ ಶಿಕ್ಷಣ ತಜ್ಞರಿಂದಲೂ ಮಾರ್ಗದರ್ಶನಗಳು ಹೆಚ್ಚಾಗಿ ಒದಗಹತ್ತಿದುವು. ಕನ್ನಡ ಪಠ್ಯಪುಸ್ತಕ ಸಮಿತಿಯೂ ಬಂದು, ಈ ಟ್ರೇನಿಂಗ ಕಾಲೇಜಿನಲ್ಲಿಯೇ ತನ್ನ ಚಟುವಟಿಕೆಯನ್ನು ಆಗಲೇ ಆರಂಭಿಸಿತು. ಶಿಕ್ಷಣಕ್ಕೆ ಒಂದು ಹೊಸ ನೋಟವನ್ನು ನೀಡಿತು. ನನ್ನಿಂದ 'ತಕಲಿಯ ತಿರುವೋಣ ಬನ್ನಿ' ಎಂಬ ಹಾಡನ್ನು ಹೊರಡಿಸಿದುದು ಈ ಟ್ರೇನಿಂಗ ಕಾಲೇಜವೇ ಆಗಿದೆ.

ಆ ಒಂದು ದಿನವನ್ನು ನಾನೆಂದೂ ಮರೆಯಲಾರೆ. ಅಂದು ನನ್ನ 'ನಿಸರ್ಗ' ಕಾದಂಬರಿಗೆ ಮೈಸೂರಿನ ದೇವರಾಜ ಪ್ರಥಮ ಪಾರಿತೋಷಕ ದೊರೆತಿತ್ತು. ಅಂದು ಕಾಲೇಜಿನ ಅಧ್ಯಾಪಕರೂ, ಶಿಕ್ಷಕ ವಿದ್ಯಾರ್ಥಿಗಳೂ ಸೇರಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. 'ಚೆನ್ನಬಸವ ಪುರಾಣ'ವನ್ನು ಕಾಲೇಜಿನಿಂದ ಮೆಚ್ಚಿಂದು ಸಲ್ಲಿಸಿದರು. ಅನೇಕ ಜನ ಗುರುಗಳು ಕಾದಂಬರಿಯನ್ನೂ ಅದರ ಲೇಖಕರನ್ನೂ ಕುರಿತು ಮಾತನಾಡಿದರು. ತನ್ನ ವಿದ್ಯಾರ್ಥಿಗಳನ್ನು—ವಿದ್ಯಾರ್ಥಿ ದೆಸೆಯಲ್ಲಿರುವಾಗಲೇ ಅವರು—ಸತ್ಕರಿಸುವ ಹಿರಿಯ ಹಾದಿಯೊಂದನ್ನು ಹಾಕಿದ ಶೈಕ್ಷಣಿಕ ಸಂಸ್ಥೆಯೆಂದರೆ ಇದೇ ಮೊದಲಿನದಾಗಿರಬೇಕೆಂದು ನಾನು ತಿಳಿದಿದ್ದೇನೆ. ಆ ತಿಳುವಳಿಕೆಯಿಂದ ಕಾಲೇಜಿನ ವಿಷಯಕ್ಕಿರುವ ನನ್ನ ಪ್ರೇಮ, ಅಭಿಮಾನಗಳು ದಿನದಿನಕ್ಕೂ ಹೆಚ್ಚಿವೆ, ಹೆಚ್ಚುತ್ತಲಿವೆ.

ಕ್ರಿ. ಶ. ೧೯೪೮ರ ಎಪ್ರೇಲ ೩೦ ನಾವು ಟ್ರೇನಿಂಗ ಕಾಲೇಜಿನಿಂದ ನಮ್ಮ ಊರುಗಳಿಗೆ ತಿರುಗುವ ದಿನ. ಅನೇಕರಿಗೆ ಅನುಕೂಲ ಊರುಗಳು ದೊರೆತಿವೆ. ಹಲವರಿಗೆ ಅನಾನುಕೂಲ ಸ್ಥಳಗಳು. ಏನಿದ್ದರೂ ಹೊರಡಲೇಬೇಕಲ್ಲ. ಎಲ್ಲಿಗೆ ಹೋಗುವದೆಂಬುದು ಮುಖ್ಯವಲ್ಲ. ಹೋಗುವದೆಂಬುದೇ ಮುಖ್ಯ. ಈ ಅಗಲಿಕೆಯು ನಮ್ಮೆಲ್ಲರ ಹೃದಯವನ್ನು ಕೊರೆಯಹತ್ತಿತು.

ಇಷ್ಟು ಬೇಗ ಎರಡು ವರ್ಷಗಳು ಹೇಗೆ ಉರುಳಿದುವು?

ನಮ್ಮ ಜೀವನದಲ್ಲಿ ಇವು ಅಮೃತ ಘಳಿಗೆಗಳು. ಎಂದು ಹೊರ ಹೊರಳಿ ನೋಡುತ್ತ ಕಾಲೇಜಿನ ಆವಾರದ ಮೆಟ್ಟಲುಗಳನ್ನು ಹತ್ತಿ, ರಾಜಮಾರ್ಗಕ್ಕೆ ಬಂದೆ. ಕಾಲೇಜಿನಲ್ಲಿ ಶಿಕ್ಷಣವನ್ನು ಹೊಂದಿ ಹೊರಗೆ ಹೋಗುವವರು ಮೇಲೆ ಮೇಲೆ ಏರಿಯೇ ಹೋಗಬೇಕು; ತಮ್ಮ ವ್ಯಕ್ತಿತ್ವದಲ್ಲಿ ಉನ್ನತಿಯನ್ನು ಪಡೆದಿರಬೇಕು—ಎನ್ನುವ ಮಾತನ್ನು ತನ್ನ ಪ್ರಾಕೃತಿಕ ಸ್ವರೂಪದಿಂದಲೇ ನಮ್ಮ ಟ್ರೇನಿಂಗ ಕಾಲೇಜು ನನಗಾಗ ಅರಿವನ್ನುಂಟು ಮಾಡಿಕೊಟ್ಟಿತು. ಆ ಕಾಲೇಜಿನ ಅಂಗಳದಿಂದ ಒಂದೊಂದು ಮೆಟ್ಟಲನ್ನೇರಿ, ರಾಜಮಾರ್ಗಕ್ಕೆ ಹತ್ತುವಷ್ಟರಲ್ಲಿ ಈ ವಿಚಾರಗಳು ನನ್ನ ಮನಸ್ಸಿನಲ್ಲಿ ಸುಳಿದು ಹೋದವು.

ಮುಂದಿನ ಮಾರ್ಗಕ್ಕೆ ಹತ್ತಿ, ಇನ್ನೊಮ್ಮೆ ನಮ್ಮ ಟ್ರೇನಿಂಗ ಕಾಲೇಜಿನತ್ತ ಹೊರಳಿ ನೋಡಿದೆ. ಪ್ರಿನ್ಸಿಪಾಲರು ಹಣಿಗಣ್ಣಾಗಿ ನಿಂತು ನಮ್ಮನ್ನೇ ನೋಡುತ್ತಿದ್ದರು. ನಮ್ಮ ಕಣ್ಣು ಕುಣಿಕೆಗಳೂ ಮತ್ತೊಮ್ಮೆ ಹಸಿಯಾದುವು. ಯಾರೂ ಏನೂ ಮಾತನಾಡದೆ ಮುಂದೆ ಸಾಗಿದೆವು.

ಇಂದಿಗೆ ಒಂಭತ್ತು ವರ್ಷಗಳು ಸಂದುವು, ಟ್ರೇನಿಂಗ ಕಾಲೇಜನ್ನು ಬಿಟ್ಟು! ಆ ಮೇಲೆ ನೂರಾರು ಸಲ ಧಾರವಾಡಕ್ಕೆ ಹೋಗಿರುವೆ. ಪ್ರತಿಸಲವೂ ಕಾಲೇಜಿನ ಆವರಣ

ನಲ್ಲಿ ಹೋಗಿ—ಗುರುತಿನವರು ಇರಲಿ ಇಲ್ಲದಿರಲಿ—ಸುಮ್ಮನೆ ಅಡ್ಡಾಡಿ, ಸುತ್ತಾಡಿ ಬರುವುದು ನನ್ನ ಸ್ವಭಾವವಾಗಿಬಿಟ್ಟಿದೆ. ಅಲ್ಲಿ ಹೋದಾಗ ಏನೋ ಒಂದು ಆನಂದ ಆ ಸುಖದ ದಿನಗಳ ನೆನಪು. ಯಾರಿಲ್ಲದಿದ್ದರೂ ಆ ಕಾಲೇಜಿನ ಸಿಪಾಯಿಯ ಕೈಯಲ್ಲಿ ಚಹಕ್ಕೆ ಒಂದಾಣೆಯನ್ನಿತ್ತರೆ ಅದೇ ನನಗೊಂದು ಪರಮ ಸಂತೋಷ. ಅದರಿಂದ ನನ್ನ ವಿದ್ಯಾರ್ಥಿ ದೆಸೆಯು ಮರಳಿ ಲಭಿಸಿದಂತಾಗುವದು.

ಹೀಗೆ ಧಾರವಾಡ ಟ್ರೆನಿಂಗ ಕಾಲೇಜವು ನನ್ನ ಮನದಲ್ಲಿ ಎಂದೂ ಅಳಿಯದ ಒಂದು ಭಾವಸಂಪತ್ತಿಯನ್ನು ಸೃಷ್ಟಿಸಿದೆ. ಅದಕ್ಕೆಂದೂ ನಾನು ಋಣಿ. ಜನ್ಮ ಜನ್ಮಗಳಲ್ಲಿಯೂ ಚಿರಋಣಿ.

ಟ್ರೇನಿಂಗ ಕಾಲೇಜದ ಸವಿನೆನಹುಗಳು

ಲೇಖಕರು : **ಶ್ರೀ ಎನ್. ವ್ಹಿ. ಕುರಡಿ**

ನನಗೂ ಟ್ರೇನಿಂಗ ಕಾಲೇಜಕ್ಕೂ ಇರುವ ಸಂಬಂಧವು ೩೫ ವರ್ಷಗಳ ದೀರ್ಘಾವಧಿಯದು. (೧೯೦೭-೪೨) ಒಂಬತ್ತು ಹತ್ತು ಜನ ಪ್ರಿನ್ಸಿಪಾಲರ ಆಳಿಕೆಗೆ ಸಂಬಂಧಿಸಿದ್ದು. ಆದರೆ ಅಷ್ಟಕ್ಕೆಲ್ಲ ಇಲ್ಲಿ ಅವಕಾಶವಿಲ್ಲ. ನಾನು ವಿದ್ಯಾರ್ಥಿಯಾಗಿರುವಾಗಿನ ಮೂರು ವರ್ಷಗಳ ಅಲ್ಪಾವಧಿಯ ಕೆಲವು ನೆನಪುಗಳನ್ನು ಇಲ್ಲಿ ಬರೆಯಲು ಹವಣಿಸುವೆನು.

ನಾನು ಕಾಲೇಜಕ್ಕೆ ಸೇರಿದ್ದು ೧೯೦೭ನೆಯ ಇಸ್ವಿ ಅಕ್ಟೋಬರ ತಿಂಗಳಲ್ಲಿ. ದಿ. ಬ. ರೊದ್ದರಾಯರು ಆಗ ಕಾಲೇಜದ ಪ್ರಿನ್ಸಿಪಾಲರು. ಆಗ ಮುಲ್ಕಿ ಪರೀಕ್ಷೆಯು ಸಪ್ಟಂಬರ ತಿಂಗಳಲ್ಲಿ ನಡೆದು ಅಕ್ಟೋಬರ ಸುಮಾರಕ್ಕೆ ಕಾಲೇಜದ ಪ್ರವೇಶ ಪರೀಕ್ಷೆಯಾಗುತ್ತಿತ್ತು. ದೀವಳಿಗೆಯ ಸೂಟಿಯ ನಂತರ ಕಾಲೇಜದ ಹೊಸ ವರ್ಗಗಳು ಪ್ರಾರಂಭವಾಗುತ್ತಿದ್ದವು. ಆಗ ದೀವಳಿಗೆಯ ಸೂಟಿ ಆರುವಾರ (೧|| ತಿಂಗಳು) ಕ್ರಿಸ್‌ಮಸ್ ರಜೆ ೧೦ ದಿನ, ಬೇಸಿಗೆಯ ಸೂಟಿ ಒಂದೂವರೆ ತಿಂಗಳ ಹೀಗೆ ಕಾಲೇಜಕ್ಕೆ ರಜೆ ಇರುತ್ತಿತ್ತು.

ಆ ಕಾಲದಲ್ಲಿ ಪ್ರಾಥಮಿಕ ಶಿಕ್ಷಕರ ಆರಂಭದ ವೇತನವು ತಿಂಗಳಿಗೆ ಏಳು ರೂಪಾಯಿ ಆಗಿದ್ದರಿಂದ ಕಾಲೇಜದ ವಿದ್ಯಾರ್ಥಿಗಳಿಗೆ ಮೊದಲನೆಯ ವರ್ಷ ೭ ರೂ. ಎರಡನೆಯ ವರ್ಷ ೮ ರೂ. ಮೂರನೆಯ ವರ್ಷ ೯ ರೂ. ಈ ರೀತಿ ವಿದ್ಯಾರ್ಥಿ ವೇತನವು ದೊರೆಯುತ್ತಿತ್ತು.

ಈ ನಿಯಮದಂತೆ ನನಗೆ ಮೊದಲನೆಯ ವರ್ಷದಲ್ಲಿ ಏಳು ರೂಪಾಯಿ ಪ್ರತಿತಿಂಗಳು ಸಿಗುತ್ತಿತ್ತು. ಈ ಏಳು ರೂಪಾಯಿಗಳಿಂದ ನನ್ನ ಕಾಲೇಜದ ಜೀವನವು ತುಂಬ ಸುಖಕರವಾಗಿತ್ತು ಎಂದರೆ ನಿಮಗೆ ಆಶ್ಚರ್ಯವಾದೀತು. ಪ್ರತಿತಿಂಗಳಿಗೆ ಊಟ, ಸ್ನಾನ, ಕ್ಷೌರ ಈ ಎಲ್ಲ ವೆಚ್ಚ ಸೇರಿ ೫-೬ ರೂಪಾಯಿ ಬರುತ್ತಿತ್ತು. ದೀಪದ ವೆಚ್ಚ, ಹೆಚ್ಚಿನ ಅಗಸನ ಸಂಬಳ ಇದಕ್ಕೆಲ್ಲ ಒಂದು ರೂ. ಸಾಕಾಗುತ್ತಿತ್ತು. ಸೂಟಿಯ ಸಂಬಳವೂ ಪುಸ್ತಕ ಮೊದಲಾದ ಇತರ ಉಪಕರಣಗಳೂ ಕಾರವಾರದಂಥ ದೂರದ ಊರಿಗೆ ಸೂಟಿಗಳಲ್ಲಿ ಹೋಗಿಬರುವ ವೆಚ್ಚಕ್ಕೆ ಸಾಲುತ್ತಿತ್ತು!

ವಸತಿಗೃಹದ ವ್ಯವಸ್ಥೆ:— ಪ್ರಾತಃಕಾಲ ಐದು ಗಂಟೆಗೆ ಸ್ನಾನದ ಗಂಟೆಯಾಗುತ್ತಿತ್ತು. ಅಷ್ಟರಲ್ಲಿ ಸ್ನಾನದ ಸೆಕ್ರೆಟರಿಯು ಬಚ್ಚಲು ಮನೆಯ ಆಳಿನ ಸಹಾಯದಿಂದ ನೀರಿನ ಒಲೆಗೆ ಉರಿ ಹಚ್ಚಿ ನೀರು ಕಾಯಿಸಿ ಸಿದ್ಧಮಾಡಿಡುತ್ತಿದ್ದನು. ಸ್ನಾನಕ್ಕೆ ಬಂದ ಕೂಡಲೇ ಒಂದೊಂದು ಬಕೆಟು ಬಿಸಿನೀರು ಕೊಡುತ್ತಿದ್ದನು. ಬೇಕಾದರೆ ತುಸು ತಣ್ಣೀರು ಸೇರಿಸಿ ಸ್ನಾನಮಾಡಿ ಒದ್ದೆ ಬಟ್ಟೆಯನ್ನು ಒಯ್ದು ಒಂದು ಕಡೆಗೆ ಎಲ್ಲ ವಿದ್ಯಾರ್ಥಿಗಳು ಚೆಲ್ಲುತ್ತಿದ್ದರು. ಆ ಬಟ್ಟೆಯನ್ನು ಅಗಸನು ಒಯ್ದು ಒಗೆದು ಒಣಗಿಸಿ ಸಾಯಂಕಾಲಕ್ಕೆ ಅವರವರ ಕೋಣೆಗೆ ಮುಟ್ಟಿಸುತ್ತಿದ್ದನು. ಸ್ನಾನದ ಮನೆಯಲ್ಲಿ ಯಾರೂ ಬಟ್ಟೆ ಒಗೆಯುವಂತಿಲ್ಲ. ಸ್ನಾನದ ಮನೆಯಲ್ಲಾಗಲಿ, ಬೋರ್ಡಿಂಗಿನಲ್ಲಾಗಲಿ ಈಗಿನಂತೆ ನಳ ಇದ್ದಿಲ್ಲ. ಗಾಡಿ ಎತ್ತುಗಳ ಸಹಾಯದಿಂದ ನೀರಿನವರು ಊರೊಳಗಿನ ಕೆರೆಯ ನೀರು ತುಂಬಿಕೊಂಡು ಸ್ನಾನಕ್ಕೆ ಪೂರೈಸುತ್ತಿದ್ದರು. ಕುಡಿಯುವದಕ್ಕೂ ಅಡಿಗೆಗೂ ಕಾಲೇಜಿನ ಬಾವಿಯಿಂದ ಸೇದಿ ನೀರು ಒದಗಿಸಲಾಗುತ್ತಿತ್ತು.

ಎಲ್ಲ ವಿದ್ಯಾರ್ಥಿಗಳು ಸ್ನಾನ ಮುಗಿಸಿಕೊಂಡು ೬ ಗಂಟೆಗೆ ತಾಲೀಮಿನ ಗಂಟೆಯಾದ ಕೂಡಲೆ ತಾಲೀಮು

ಖಾನೆಯಲ್ಲಿ ಹಾಜರ ಇರಬೇಕಾಗುತ್ತಿತ್ತು. ಸಾಮು (ನಮಸ್ಕಾರ) ಉಠಾಬೈಸು (ಕೂತು ಏಳುವದು) ಲೋಡು ತಿರುಗಿಸುವದು, ಮಲಖಂಬ, ಡಬಲ್‌ಬಾರ, ಸಿಂಗಲ್‌ಬಾರ, ಕುಸ್ತಿ ಇವು ತಾಲೀಮಿನ ವಿಷಯಗಳು. ಸಾಮೂಹಿಕ ಕವಾಯಿತು, ಡ್ರಿಲ್ ಈ ವಿಷಯ ಬೇರೆಯೇ. ಒಂದು ತಾಸಿನ ವರೆಗೆ ತಾಲೀಮು ಖಾನೆಯಲ್ಲಿ ವ್ಯಾಯಾಮ ಮಾಡಿದ ತರುವಾಯ ಸಂಗೀತದ ಕ್ಲಾಸಿಗೆ ಹೋಗಬೇಕಾಗುವದು. ೧೦ ಗಂಟೆಗೆ ಊಟದ ಗಂಟೆಯಾಗುವದು. ಅದಕ್ಕೂ ಮೊದಲೇ ತಾಟಿನ ಗಂಟೆಯಾಗುವದು. ಆಗ ವಿದ್ಯಾರ್ಥಿಗಳು ತಮ್ಮ ತಮ್ಮ ತಾಟುಗಳನ್ನು ಗೊತ್ತಾದ ಸ್ಥಳದಲ್ಲಿ ಹಾಕಿ ಬರಬೇಕು. ಊಟದ ಗಂಟೆಯಾದ ಕೂಡಲೆ ಎಲ್ಲ ವಿದ್ಯಾರ್ಥಿಗಳು ತಮ್ಮ ತಮ್ಮ ಮಣೆಯ ಮೇಲೆ ಹೋಗಿ ಕೂತಕೂಡಲೆ ತಾಟಿನಲ್ಲಿ ಬಡಿಸುವದಕ್ಕೆ ಪ್ರಾರಂಭವಾಗುವದು. ಬೋರ್ಡಿಂಗ ಸೆಕ್ರೆಟರಿಯು 'ಲಕ್ಷ್ಮೀರಮಣ ಗೋವಿಂದ' ಅಥವಾ 'ಹರಹರ ಮಹಾದೇವ' ಎಂದು ಕೂಗಿ ಅಪ್ಪಣೆಕೊಟ್ಟ ಬಳಿಕ ಊಟ ಪ್ರಾರಂಭಿಸಬೇಕು. ಇಷ್ಟೆಲ್ಲ (೨೦೦-೩೦೦) ವಿದ್ಯಾರ್ಥಿಗಳಿಗೆ ಬಡಿಸುವದು ಅಡಿಗೆಯವರಿಗೆ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ಬಡ ವಿದ್ಯಾರ್ಥಿಗಳು ಬಡಿಸಿ ಪುಕ್ಕಟೆ ಊಟಮಾಡಿ ಸಾಲೆಗೆ ಹೋಗುತ್ತಿದ್ದರು. ಬ್ರಾಹ್ಮಣ ಬೋರ್ಡಿಂಗ್ ಬೇರೆ ಲಿಂಗಾಯತರ ಬೋರ್ಡಿಂಗ್ ಬೇರೆ ಮುಸಲ್ಮಾನರ ಬೋರ್ಡಿಂಗ್ ಬೇರೆ. ಈ ಮೂರು ಬೋರ್ಡಿಂಗುಗಳಲ್ಲಿ ಊಟ ಮಾಡಲು ಬೇರೆ ಜಾತಿಯ ವಿದ್ಯಾರ್ಥಿಗಳು ತಮ್ಮ ಇಚ್ಛೆಯ ಮೇರೆಗೆ ಈ ಮೂರರಲ್ಲಿ ಯಾವದಾದರೊಂದಕ್ಕೆ ಸೇರಿಕೊಳ್ಳುತ್ತಿದ್ದರು. ಪ್ರತಿ ವಿದ್ಯಾರ್ಥಿಯೂ ತಾನು ಆರಿಸಿಕೊಂಡ ಅಥವಾ ತನಗಾಗಿ ಗೊತ್ತಾದ ಸ್ಥಳದಲ್ಲಿಯೇ ತನ್ನ ತಾಟನ್ನು ಹಾಕಬೇಕು. ಒಬ್ಬರ ತಾಟಿನಲ್ಲಿ ಒಬ್ಬರು ಕೂಡ್ರುವಂತಿಲ್ಲ. ಎಲ್ಲರ ಊಟವಾದ ಕೂಡಲೆ ಬೋರ್ಡಿಂಗ್ ಸೆಕ್ರೆಟರಿಯು ಸೂಚನೆ ಮಾಡಿದ ತರುವಾಯವೇ ಎಲ್ಲರೂ ಎದ್ದು ಸಾಲಾಗಿ ತಮ್ಮ ತಮ್ಮ ತಾಟು ತಂಬಿಗೆಗಳನ್ನು ಹಿಡಿದುಕೊಂಡು ಹೊರಗೆ ಬಂದು ತಾಟು ಕೈಗಳನ್ನು ತೊಳೆದುಕೊಂಡು ಕೋಣೆಗಳಿಗೆ ಹೋಗಬೇಕು.

ಅನ್ನ ಸಾರು ಅಥವಾ ಹುಳಿ ಚಟ್ನಿ ಬಕ್ಕರಿ ಒಂದು ಪಲ್ಲೆ ಇವಷ್ಟು ದಿನದ ಅಡುಗೆಗಳು. ಪ್ರತಿ ವಿದ್ಯಾರ್ಥಿಗೆ ಮಧ್ಯಾಹ್ನ ೧ ತೊಲಿ ರಾತ್ರಿ ೨ ತೊಲಿ ತುಪ್ಪ ಬಡಿಸಲಾಗುವದು. ಮಧ್ಯಾಹ್ನ ಹಾಲು ಮೊಸರು ಸಾಯಂಕಾಲ ಮಜ್ಜಿಗೆ ಇವನ್ನೂ ಬಡಿಸುತ್ತಿದ್ದರು. ಹಬ್ಬ-ಹುಣ್ಣಿವೆಗಳಿಗೆ ಬಗೆ ಬಗೆಯ ಪಕ್ವಾನ್ನ ಮಾಡಿಸುತ್ತಿದ್ದರು. ರವೆ ಉಂಡೆ, ಬುಂದೆ ಉಂಡೆ ಇವು ಸಾಮಾನ್ಯ ಪಕ್ವಾನ್ನಗಳು. ಹೋಳಿಗೆ ಕಡಬುಗಳನ್ನು ಮಾಡಿ ಪೂರೈಸುವದಾಗುತ್ತಿರಲಿಲ್ಲ. ದಿನದ ಊಟದಲ್ಲಿ ಹಾಲು ಮೊಸರು ತುಪ್ಪ ಇವಕ್ಕಷ್ಟೇ ನಿಯಮಿತ ಪ್ರಮಾಣವಿತ್ತಲ್ಲದೆ ಮಿಕ್ಕ ಯಾವದಕ್ಕೂ ಇಷ್ಟೇ ಉಣ್ಣಬೇಕು ಎಂಬ ನಿರ್ಬಂಧವಿರಲಿಲ್ಲ. ಇಷ್ಟಾಗಿ ತಿಂಗಳಿಗೆ ೫-೬ ರೂ. ಗೆ ಮಿಕ್ಕದಷ್ಟು ವೆಚ್ಚ, ಇದೇನು ಮಾಟವೋ ಎನ್ನಬೇಡಿ. ರೂಪಾಯಿಗೆ ೬ ಸೇರು ಉತ್ತಮ ಕುಟ್ಟಿದ ಅಕ್ಕಿ, ೧೬ ಸೇರು (೪ ಚಿಟ್ಟೆ) ಜೋಳ ೮ ಸೇರು ಗೋದಿ ಇದರಂತೆ ಇತರ ಸಾಮಗ್ರಿಗಳ ಬೆಲೆ ರೂಪಾಯಿಗೆ ೮ ಸೇರು ಉತ್ತಮ ಹಾಲು, ೮ ಸೇರು ಶುದ್ಧ ಬೆಣ್ಣೆ ! ಆಗ ಡಾಲ್ಡಾದ ಹೆಸರೇ ಇರಲಿಲ್ಲ.

ಬೋರ್ಡಿಂಗಿನಲ್ಲಿ ಎಲ್ಲ ವಿದ್ಯಾರ್ಥಿಗಳು ತಮ್ಮ ತಮ್ಮ ಜಾತಿ ಧರ್ಮದಂತೆ ನಡೆದುಕೊಳ್ಳಲೇಬೇಕು. ಶಿವಪೂಜೆ ಮಾಡುವವರು ಮಾಡಲೇಬೇಕು. ಶಿವಪೂಜೆ ಮಾಡಿ ಹಣೆಗೆ ವಿಭೂತಿ ಹಚ್ಚದೆ ಬರುವ ಲಿಂಗಾಯತ ವಿದ್ಯಾರ್ಥಿಗೆ ಅಥವಾ ಮಡಿ ಉಟ್ಟುಕೊಳ್ಳದೆ ಬರುವ ಬ್ರಾಹ್ಮಣ ವಿದ್ಯಾರ್ಥಿಗೆ ಬೋರ್ಡಿಂಗಿನಲ್ಲಿ ಮರ್ಯಾದೆ ಕಡಿಮೆ. ಅವಸರದಲ್ಲಿ ಹಾಗೆಯೇ ಬಂದವರನ್ನು ನೋಡಿ ಮಿಕ್ಕವರು ಹಚಾ ಹುಚಾ ಮಾಡುವರು. ಅಧಿಕಾರಿಗಳು ಸಿಟ್ಟು ಮಾಡುವರು. ಇದೆಂಥ ಕಾಲವೋ ಎಂದು ನೀವು ಬೆರಗಾಗಬಹುದು. ಆದರೆ ಇದು ನಿಜವಾದ ಸ್ಥಿತಿ. ಶ್ರೀ ವಿನಾಯಕರಾವ ಜೋಶಿಯವರು ಪ್ರಿನ್ಸಿಪಾಲರಾಗಿದ್ದಾಗ ಈ ಮಾತನ್ನು ತಾವೇ ಗಮನಿಸಿ ವಿದ್ಯಾರ್ಥಿಗಳನ್ನು ದಾರಿಗೆ ತರುತ್ತಿದ್ದರು.

ಹಬ್ಬ-ಹುಣ್ಣಿವೆಗಳಿಗೆ ವಿಶೇಷವಾಗಿ ಮಕರ ಸಂಕ್ರಮಣದ ದಿನ ಕಾಲೇಜಿನ ಎಲ್ಲ ಶಿಕ್ಷಕರನ್ನು ಬೋರ್ಡಿಂಗಿಗೆ ಊಟಕ್ಕೆ ಆಮಂತ್ರಿಸುತ್ತಿದ್ದರು. ಆಯಾಯ ಬೋರ್ಡಿಂಗಿಗೆ ಹೋಗ ಬಯಸುವ ಶಿಕ್ಷಕರು ಆಯಾ ಬೋರ್ಡಿಂಗಿಗೆ ಹೋಗುತ್ತಿದ್ದರು. ಹಬ್ಬ ಹುಣ್ಣಿವೆಗಳ ದಿನದ ಊಟದ ಸಂಭ್ರಮವನ್ನು ಬಣ್ಣಿಸಿ ಮುಗಿಸುವಂತಿಲ್ಲ. ಬೆಳದಿಂಗಳ ಊಟದ ದಿನವಂತೂ ವಿದ್ಯಾರ್ಥಿಗಳಿಗೆ ಇನ್ನಿಲ್ಲದಷ್ಟು ಉತ್ಸಾಹ! ಇಷ್ಟಾಗಿ ಪ್ರತಿ ತಿಂಗಳದ ವೆಚ್ಚ ೫-೬ ರೂ. ಮಾತ್ರ ! ವಿದ್ಯಾರ್ಥಿಗಳ ಆರೋಗ್ಯದ ಮೇಲ್ವಿಚಾರಣೆಗೆ ಡಾಕ್ಟರರಿದ್ದರು. ರಜೆಗೆ ಊರಿಗೆ ಹೋಗುವಾಗ ಒಮ್ಮೆ ರಜೆಯಿಂದ ಬಂದ ಕೂಡಲೆ ಒಮ್ಮೆ ವಿದ್ಯಾರ್ಥಿಗಳ ಶರೀ

ರದ ತೂಕ ಅಳತೆ ತೆಗೆದುಕೊಳ್ಳಲಾಗುತ್ತಿತ್ತು ಕಾಲೇಜದಲ್ಲಿರುವಾಗ ಪ್ರತಿ ವಿದ್ಯಾರ್ಥಿಗಳಲ್ಲಿಯ ತೂಕವು ೩-೪ ಪೌಂಡು ಹೆಚ್ಚುತ್ತಿತ್ತು.

ಕಾಲೇಜದ ವಿದ್ಯಾರ್ಥಿಗಳೆಲ್ಲರೂ ವಸತಿ ಗೃಹದಲ್ಲಿದ್ದು ಬೋರ್ಡಿಂಗಿನಲ್ಲಿಯೇ ಊಟ ಮಾಡಬೇಕು. ಇದೇ ಊರಿನ ವಿದ್ಯಾರ್ಥಿಯಿದ್ದರೂ ಸಹ ಮನೆಯಲ್ಲಿ ಉಂಡು ಕಾಲೇಜಕ್ಕೆ ಬರುವಂತಿಲ್ಲ. ಮಲಗಲು ಮನೆಗೆ ಹೋಗುವಂತಿಲ್ಲ. ಹಬ್ಬ-ಹುಣ್ಣಿವೆಗೆ ಮನೆಗೆ ಹೋಗಬೇಕಾದರೆ ಪ್ರಿನ್ಸಿಪಾಲರ ಅಪ್ಪಣೆಬೇಕು.

ವಸತಿಗೃಹದ ವಿದ್ಯಾರ್ಥಿಗಳು ಊರೊಳಗೆ ಹೋಗಬೇಕಾದರೆ ಸಿನೇಮಾ ಗೃಹದಿಂದ ಹೊರಗೆ ಹೋಗುವಾಗ ಪಡೆಯುವಂತೆ ಪಾಸು ಪಡೆದೇ ಹೋಗಬೇಕು. ಊರೊಳಗೆ ಯಾರೂ ಕಾಲೇಜದ ಶಿಕ್ಷಕರು ಭೆಟ್ಟಿಯಾದರೆ ಪಾಸು ತೋರಿಸಬೇಕು. ಎಲ್ಲರೂ ೧೮ ರಿಂದ ೨೨ ವರ್ಷದ ಒಳಗಿನ ವಯಸ್ಸಿನ ತರುಣರು. ಅವರಿಗೆ ಮಿಕ್ಕ ಯಾವ ತಾಪ ವ್ಯಾಪಗಳೂ ಇರುತ್ತಿರಲಿಲ್ಲ.

ರಾತ್ರಿ ಒಂಬತ್ತು ಗಂಟೆಗೆ ಗಂಟೆಯಾದ ಕೂಡಲೆ ಸೆಕ್ರೆಟರಿಯು ಪ್ರತಿ ಕೋಣೆಗೆ ಹೋಗಿ ಆ ಕೋಣೆಯಲ್ಲಿರಬೇಕಾದ ವಿದ್ಯಾರ್ಥಿಯ ಹೆಸರು ಕರೆದು ಹಾಜರಿ ತೆಗೆದುಕೊಳ್ಳುವನು. ಆಗ ಕೋಣೆಯಲ್ಲಿಲ್ಲದ ವಿದ್ಯಾರ್ಥಿಯು ಶಿಕ್ಷೆಗೆ ಗುರಿಯಾಗುವನು. ಒಂಬತ್ತೂವರೆ ಗಂಟೆಗೆ ಸೆಕ್ರೆಟರಿಯು ಪ್ರಿನ್ಸಿಪಾಲರಿಗೆ ಭೆಟ್ಟಿಯಾಗಿ ಹಾಜರಿ ತೋರಿಸಿ ಅದರ ಮೇಲೆ ಪ್ರಿನ್ಸಿಪಾಲರ ಸಹಿ ಮಾಡಿಸಿಕೊಂಡು ಬರಬೇಕು. ೧೦ ಗಂಟೆಗೆ ಗಂಟೆಯಾದ ಕೂಡಲೆ ಎಲ್ಲರೂ ದೀಪ ಆರಿಸಿ ಮಲಗಬೇಕು. ಆ ಮೇಲೆ ಯಾವ ಕೋಣೆಯಲ್ಲಿಯೂ ದೀಪವಿರುವ ಹಾಗಿಲ್ಲ. ಮುಂಜಾನೆ ನಾಲ್ಕು ಗಂಟೆಗೆ ಗಂಟೆಯಾದ ಕೂಡಲೆ ಎಲ್ಲರೂ ಎದ್ದು ಓದಲಿಕ್ಕೆ ಕೂಡ್ರಬೇಕು.

ಇವು ವಸತಿಗೃಹದ ನಿಯಮಗಳು. ದಯಾಳು ದೊಡ್ಡರಾಯರ ಕಾಲದಲ್ಲಿ ಇವನ್ನು ಅಷ್ಟೊಂದು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿರಲಿಲ್ಲ. ಆದರೆ ನಿಯಮ–ನಿಷ್ಠುರ ವಿನಾಯಕ ರಾಯರ ಕಾಲದಲ್ಲಿ ಯಾರೂ ಇವನ್ನು ಅಲಕ್ಷಿಸುವಂತಿರಲಿಲ್ಲ. ತಪ್ಪಿದವನಿಗೆ ಶಿಕ್ಷೆ ಖಂಡಿತ.

ವಸತಿಗೃಹದ ಎಲ್ಲ ಕಾರ್ಯಕಲಾಪಗಳನ್ನು ವಿದ್ಯಾರ್ಥಿಗಳೇ ನೋಡಿಕೊಳ್ಳುವರು. ಅಕ್ಕಿ, ಬೇಳೆ, ಕಾಯಿಪಲ್ಲೆ ಹಾಲು, ಬೆಣ್ಣೆ, ಕಟ್ಟಿಗೆ ಮುಂತಾದ ಯಾವತ್ತೂ ಸಾಮಗ್ರಿಗಳನ್ನು ಕೊಂಡುತರುವವರು ವಿದ್ಯಾರ್ಥಿಗಳೇ. ಕುಟ್ಟುವದು, ಬೀಸುವದು, ಅಡುಗೆಯ ವ್ಯವಸ್ಥೆ ಇವನ್ನೆಲ್ಲ ನೋಡಿಕೊಳ್ಳುವವರೂ ವಿದ್ಯಾರ್ಥಿಗಳೇ, ಕಾರ್ಕೂನರಿಂದ ಹಣಪಡೆದು ಅದರ ಲೆಕ್ಕವನ್ನಿಟ್ಟು ಕಾರ್ಕೂನರಿಗೆ ಒಪ್ಪಿಸುವವರೂ ಕೂಡ ವಿದ್ಯಾರ್ಥಿಗಳೇ. ತಿಂಗಳಿಗೊಮ್ಮೆ ಎಲ್ಲ ವಿದ್ಯಾರ್ಥಿಗಳು ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಬೇರೆಬೇರೆ ಕೆಲಸಗಳಿಗೆ ಅಧಿಕಾರಿಗಳನ್ನು ಆರಿಸುವರು. ಹಿಂದಿನ ತಿಂಗಳಿನ ಅಧಿಕಾರಿಗಳ ಕೆಲಸದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವರು. ಮುಂದಿನ ಅಧಿಕಾರಿಗಳಿಗೆ ಸೂಚನೆ ಕೊಡುವರು. ಹಣದ ಅಪವ್ಯಯದ ಪ್ರಶ್ನೆಯೇ ಉದ್ಭವಿಸುತ್ತಿರಲಿಲ್ಲ. ಹಾಗೇನಾದರೂ ಕಂಡುಬಂದಲ್ಲಿ ಕೂಡಲೇ ಚವಕಸಿ ನಡೆದು ಅಪರಾಧಿಯ ದಂಡನೆಯಾಗುವದು. ಅಂಥ ವಿದ್ಯಾರ್ಥಿಯ ಬಗೆಗೆ ಕಾಲೇಜದ ರಿಕಾರ್ಡಿನಲ್ಲಿ ಕೆಟ್ಟ ಶರಾ ಬರೆದಿಡುವ ಭಯವಿತ್ತು. ಆದ್ದರಿಂದ ಯಾರೂ ಅಂಥ ಹವ್ಯಾಸಕ್ಕೆ ಬೀಳುತ್ತಿರಲಿಲ್ಲ.

ಕಾಲೇಜದಲ್ಲಿ ವಿದ್ಯಾರ್ಥಿ ವಾಚನಾಲಯ ಬೇರೆ. ಶಿಕ್ಷಕರ ಗ್ರಂಥ ಸಂಗ್ರಹಾಲಯ ಬೇರೆಯಿದ್ದು ಅದರ ವ್ಯವಸ್ಥೆಯನ್ನು ಬೇರೆಬೇರೆಯಾಗಿ ಮಾಡಲಾಗುತ್ತಿತ್ತು. ವಿದ್ಯಾರ್ಥಿಗಳಿಗೆ ವಾರದಲ್ಲಿ ಎರಡುಸಲ ಪುಸ್ತಕಗಳನ್ನು ಕೊಡುವದು ತಿರುಗಿ ತಕ್ಕೊಳ್ಳುವದು ನಡೆಯುತ್ತಿತ್ತು. ಅದಕ್ಕಾಗಿ ಒಬ್ಬ ವಾಚನಾಲಯದ ಸೆಕ್ರೆಟರಿ ಇರುತ್ತಿದ್ದನು. ಅವನ ಕಾರ್ಯದ ಕಾಲಾವಧಿ ಆರುತಿಂಗಳ. ನಾನು ಮೂರನೆಯ ವರುಷದಲ್ಲಿದ್ದಾಗ ಎರಡನೆಯ ಟರ್ಮಿನಲ್ಲಿ ವಾಚನಾಲಯದ ಸೆಕ್ರೆಟರಿಯಾಗಿದ್ದೆ. ಆಗ ನಾನು ವಾಚನಾಲಯದಲ್ಲಿದ್ದ ಎಲ್ಲ ಮಹತ್ವದ ಗ್ರಂಥಗಳನ್ನೆಲ್ಲ ಓದಿ ಮುಗಿಸಿದೆ. ಆಗ ನಾನು ಓದಿದ ಬಿ. ವೆಂಕಟಾಚಾರ್ಯರು ಕನ್ನಡಿಸಿದ ಬಂಕಿಮಚಂದ್ರ ಚಟರ್ಜಿಯವರ ಕಾದಂಬರಿಗಳ ನೆನಪು ನನಗೆ ಈಗಲೂ ಬರುತ್ತಿದೆ. ಆಗ ನಾನು ಓದಿದ ಗ್ರಂಥಗಳ ಶೈಲಿಯೇ ನನ್ನ ಬರಹದಲ್ಲಿ ಕೂತು ಹೋಗಿದೆ. ಬಂಕಿಮಚಂದ್ರರ “ದೇವೀ ಚೌಧುರಾಣಿ” “ಸೀತಾರಾಮ ಕೃಷ್ಣಕಾಂತನ ಉಯಿಲು’’ “ವಿಷವೃಕ್ಷ” ಮೊದಲಾದ ಕಾದಂಬರಿಗಳ ವಾಚನವು ನನ್ನನ್ನು ಬಂಗಾಲಿ ಭಾಷೆಯ ಅಭ್ಯಾಸಕ್ಕೆ ಪ್ರೇರಿಸಿತು. ಹೀಗೆ ಕಾಲೇಜದ ವಿದ್ಯಾರ್ಥಿ ವಾಚನಾಲಯವು ವಿದ್ಯಾರ್ಥಿಗಳಿಗೆ ನಾನಾ ರೀತಿಯಾಗಿ ಉಪಯೋಗವಾಗುತ್ತಿತ್ತು.

ವಸತಿಗೃಹದಲ್ಲಿದ್ದಾಗ ಮೈಯುಂಡ ಅಚ್ಚುಕಟ್ಟುತನ, ನಿಯಮಿತತನ, ಸಮಯನಿಷ್ಠೆ ಇವು ಮುಂದಿನ

ಜೀವನದಲ್ಲಿ ತುಂಬ ಪ್ರಯೋಜನಕರವಾಗುತ್ತಿದ್ದವು.

ಕಾಲೇಜಿನ ವರ್ಗಗಳು :– ಹೊತ್ತಿಗೆ ಸರಿಯಾಗಿ ಪ್ರಾರಂಭವಾಗಲೇಬೇಕು. ಪ್ರತಿ ತಾಸಿಗೊಮ್ಮೆ ಹಾಜರಿ ತೆಗೆದುಕೊಂಡು ಆಯಾ ವರ್ಗದ ಶಿಕ್ಷಕರು ಅದಕ್ಕೆ ಸಹಿ ಮಾಡುವರು. ಒಂದು ವರ್ಗದಲ್ಲಿ ೩೦ ವಿದ್ಯಾರ್ಥಿಗಳು. ಎಲ್ಲ ವಿಷಯಗಳ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ನಿಕಟ ಸಂಬಂಧವಿರುತ್ತಿತ್ತು. ಪ್ರವೀಣ ಹಾಗು ವ್ಯವಸ್ಥಿತ ವಿದ್ಯಾರ್ಥಿಯ ಬಗೆಗೆ ಶಿಕ್ಷಕರು ವಿಶೇಷ ಆದರ ಅಭಿಮಾನಗಳನ್ನು ತೋರಿಸುವರು. ಎಲ್ಲ ವಿದ್ಯಾರ್ಥಿಗಳ ಕಲ್ಯಾಣ ಬಯಸುವದು ಶಿಕ್ಷಕರ ಸಾಮಾನ್ಯ ಧರ್ಮವಾಗಿತ್ತು.

ಆಗ ಪದವೀಧರ ಶಿಕ್ಷಕರ ಆರಂಭದ ವೇತನವು ೩೦ ರೂ. ಮಾತ್ರ. ಹೆಚ್ಚು ವಯಸ್ಸಾದ ಅನುಭವಿಕರನ್ನೇ ಕಾಲೇಜಕ್ಕೆ ನಿಯಮಿಸಲಾಗುತ್ತಿತ್ತು. ಅಂಥ ಶಿಕ್ಷಕರು ಸಾಮಾನ್ಯವಾಗಿ ಸಿಕ್ಕುತ್ತಿರಲಿಲ್ಲ. ಕಾಲೇಜದ ವರ್ಗಗಳನ್ನು ನಡೆಯಿಸುವದು ಹೊಸ ಪದವೀಧರ ಶಿಕ್ಷಕರಿಗೆ ಬಿಗಿಯೆನಿಸುತ್ತಿತ್ತು. ಕನ್ನಡ ಗದ್ಯ–ಪದ್ಯ ವ್ಯಾಕರಣಗಳ ಪಾಠಕ್ಕಾಗಿ ಮೈಸೂರಿನಿಂದ ಪಂಡಿತರನ್ನು ಆರಿಸಿ ತರುವ ಪರಿಪಾಠವಿತ್ತು. ಸಂಸ್ಕೃತಕ್ಕಾಗಿ ಹೆಸರಾದ ಶಾಸ್ತ್ರಿಗಳು ತಮ್ಮ ಪದ್ಧತಿಯಂತೆ ಪಾಠ ಹೇಳುತ್ತಿದ್ದರು. ನನ್ನ ಕಾಲದಲ್ಲಿ ಕನ್ನಡ ಪಂಡಿತ ಕಟ್ಟಿ ಶ್ರೀನಿವಾಸಮೂರ್ತಿಯವರು ಅದ್ವಿತೀಯರೆನಿಸಿದ್ದರು. ಅವರು ಹಳೆಗನ್ನಡ ಕವಿತೆಗಳನ್ನು ಓದಿದಾಕ್ಷಣ ವಿದ್ಯಾರ್ಥಿಗಳು ಅರ್ಥ ಗ್ರಹಣ ಮಾಡಿ ಮಾಡಿ ನಲಿಯುತ್ತಿದ್ದರು. ಶ್ರೀ ಗೋಡಖಿಂಡಿ ಶಾಸ್ತ್ರಿಗಳು ಶಾಕುಂತಲ ನಾಟಕ ರಘುವಂಶ ಕಾವ್ಯಗಳ ಪಾಠ ಹೇಳಹತ್ತಿದರೆ ವಿದ್ಯಾರ್ಥಿಗಳಿಗೆ ತಾಸು ಮುಗಿದ ಗಂಟೆಯ ಅರಿವೇ ಇರುತ್ತಿರಲಿಲ್ಲ. ಪ್ರಿನ್ಸಿಪಾಲರು ಮಾನಸ ಶಾಸ್ತ್ರದ ಪಾಠ ಹೇಳುವರು. ಪ್ರಿನ್ಸಿಪಾಲರು ವರ್ಗಕ್ಕೆ ಬಂದವರೇ ವಿದ್ಯಾರ್ಥಿಗಳ ಉಡುಗೆ ತೊಡುಗೆ ಸ್ವಚ್ಛತೆ ಇವನ್ನೆಲ್ಲ ನಿರೀಕ್ಷಿಸುವರು. ತಲೆಯ ಮೇಲೆ ಟೊಪ್ಪಿಗೆ ಅಥವಾ ರುಮಾಲ ಇಲ್ಲದೆ ಕೋಟು ಹಾಕಿಕೊಳ್ಳದೆ ಬರುವ ವಿದ್ಯಾರ್ಥಿಗೆ ವರ್ಗದಲ್ಲಿ ಪ್ರವೇಶವಿರುತ್ತಿರಲಿಲ್ಲ. ವರ್ಗದ ಒಂದು ಕೋಣೆಯಿಂದ ಇನ್ನೊಂದು ಕೋಣೆಗೆ ಹೋಗುವಾಗ ಎಲ್ಲ ವಿದ್ಯಾರ್ಥಿಗಳು ಸಾಲಾಗಿ ಹೋಗಬೇಕು. ವರ್ಗದಲ್ಲಿ ಯಾರೂ ತಮ್ಮ ತಮ್ಮೊಳಗೆ ಮಾತಾಡುವಹಾಗಿಲ್ಲ. ನಾನು ಮೂರನೆಯ ವರ್ಷದಲ್ಲಿದ್ದಾಗ ಒಂದು ಚಮತ್ಕಾರ ನಡೆಯಿತು. ಇತಿಹಾಸ ಶಿಕ್ಷಕರು ಆ ವರ್ಷ ಹಾಯಸ್ಕೂಲಿನಲ್ಲಿ ಮೆಟ್ರಿಕ್ ಪರೀಕ್ಷೆಗೆ ಗೊತ್ತಾದ ಇತಿಹಾಸದ ಪಾಠಪುಸ್ತಕವನ್ನು ಮೇಜಿನ ಮೇಲಿಟ್ಟುಕೊಂಡು ವಾಕ್ಯ ವಾಕ್ಯಗಳನ್ನು ಕನ್ನಡಕ್ಕೆ ಭಾಷಾಂತರಿಸಿ ಟಿಪ್ಪಣಿ ಬರೆದುಕೊಳ್ಳಲಿಕ್ಕೆ ಹೇಳುತ್ತಿದ್ದರು. ಅವರ ಪಾಠ ಕ್ರಮದಲ್ಲಿ ಮಿಕ್ಕ ಯಾವ ವಿವರಣೆಯೂ ಇರುತ್ತಿದ್ದಿಲ್ಲ. ನಮ್ಮೊಳಗಿನ ಒಬ್ಬ ವಿದ್ಯಾರ್ಥಿಯು ಇದನ್ನು ಕಂಡು ಬೇಸತ್ತು ಅವರು ಒಮ್ಮೆ ಮೇಜಿನ ಮೇಲೆ ಇಟ್ಟು ಹೊರಗೆ ಹೋದಾಗ ಆ ಪುಸ್ತಕವನ್ನು ನೋಡಿ 'ಚಾಂದಭಾಯಿ ಹಿಸ್ಟರಿ' ಎಂದು ಕೂಗಿದ. ಕೂಡಲೆ ವರ್ಗದ ಕೋಣೆಯ ಬಾಗಿಲಬಳಿಯಲ್ಲಿದ್ದ ಶಿಕ್ಷಕರು ಗಾಬರಿಯಾಗಿ ಒಳಗೆ ಬಂದು "ಯಾರು, ಯಾರು" ಎಂದು ಗದ್ದರಿಸಿದರು. ಯಾರೂ ಮಾತಾಡಲಿಲ್ಲ. ಮರುದಿವಸದಿಂದ ಆ ಪುಸ್ತಕ ತರದೆ ಭಾಷಾಂತರದ ಟಿಪ್ಪಣಿ ಬರೆದುಕೊಂಡು ಬಂದು ಓದಹತ್ತಿದರು. ನಾವು ಬರೆದುಕೊಳ್ಳಹತ್ತಿದೆವು. ತಿಳಿಯದಿದ್ದಾಗ ಮೂಲ ಪುಸ್ತಕವನ್ನು ನೋಡಿ ಸರಿಪಡಿಸಿಕೊಳ್ಳುತ್ತಿದ್ದೆವು.

ಆ ಕಾಲದ ಪರೀಕ್ಷೆ ತುಂಬ ಗಡುಸಾಗಿರುತ್ತಿತ್ತು. ಕೆಲವರನ್ನು ಮೊದಲನೆಯ ವರ್ಷದ ಕೊನೆಗೆ ಪಾಸಾದರೂ ಕೂಡ ಸರ್ಟಿಫಿಕೇಟು ಕೊಟ್ಟು ಹೊರಗೆ ಹಾಕುತ್ತಿದ್ದರು. ಮೂರನೆಯ ವರ್ಷಕ್ಕೆ ಆರಿಸಲ್ಪಡುವದಂತೂ ತೀರ ಕಠಿಣವಾಗುತ್ತಿತ್ತು. ಮೊದಲನೆಯ ವರ್ಷದ ವರ್ಗಕ್ಕೆ ಸೇರಿದ ೧೦೦ ವಿದ್ಯಾರ್ಥಿಗಳಲ್ಲಿ ೩೦ಕ್ಕಿಂತ ಹೆಚ್ಚು ಜನರು ಮೂರನೆಯ ವರ್ಷದ ವರ್ಗಕ್ಕೆ ಆರಿಸಲ್ಪಡುತ್ತಿದ್ದಿಲ್ಲ. ಮೂರನೆಯ ವರ್ಷದ ಕೊನೆಯ ಪರೀಕ್ಷೆಯಲ್ಲಿ ಪ್ರತ್ಯಕ್ಷ ಪಾಠಕಲಿಸಿ ತೋರಿಸುವದು ತುಂಬ ಕಠಿಣವಾಗುತ್ತಿತ್ತು. ಮೊದಲೇ ಗೊತ್ತುಪಡಿಸಿಕೊಂಡು ಟಿಪ್ಪಣಿ ಮೊದಲಾದ ಸಿದ್ಧತೆ ಮಾಡಿಕೊಂಡ ವಿಷಯವನ್ನು ಕಲಿಸುವದಾದ ಬಳಿಕ ಪರೀಕ್ಷಕರು ಹೇಳಿದ ಬೇರೊಂದು ವಿಷಯವನ್ನು ಯಾವ ಪೂರ್ವ ಸಿದ್ಧತೆಯೂ ಇಲ್ಲದೆ ಕಲಿಸಿತೋರಿಸಬೇಕಾಗುತ್ತಿತ್ತು. ಎಜ್ಯುಕೇಶನ್ ಇನ್‌ಸ್ಪೆಕ್ಟರರು ಪ್ರಿನ್ಸಿಪಾಲರು ಹೀಗೆ ಇಬ್ಬರೇ ಪರೀಕ್ಷಕರು. ನಾನು ಪರೀಕ್ಷೆಗೆ ಕೂತಾಗ ಶ್ರೀ ಕರಂದೀಕರರು ಇನ್‌ಸ್ಪೆಕ್ಟರರು ಶ್ರೀ ವಿನಾಯಕರಾವ ಜೋಶಿಯವರು ಪ್ರಿನ್ಸಿಪಾಲರು ಇಬ್ಬರೂ ಅಷ್ಟೇ ನಿಷ್ಠುರ! ಅಷ್ಟೇ ಸ್ವಾಭಿಮಾನಿಗಳು. ಒಬ್ಬರು ಕೊಟ್ಟ ಗುಣ ಇನ್ನೊಬ್ಬರಿಗೆ ಗೊತ್ತಾಗದು. ಒಬ್ಬರು ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸಿದರೆ ಇನ್ನೊಬ್ಬರು ಕಾಡಿ ಕಾಡಿ ಪ್ರಶ್ನೆ ಮಾಡುವರು. ಹೀಗಾಗಿ ವಿದ್ಯಾರ್ಥಿಗಳು ಪ್ರತ್ಯಕ್ಷ ಪಾಠ ಕಲಿಸಿತೋರಿಸುವಾಗ ಕೈಕಾಲು ಕಳೆದುಕೊಳ್ಳುತ್ತಿದ್ದರು.

ಕಾಲೇಜದ ಶಿಕ್ಷಕ ವರ್ಗದ ಉಡುಗೆ ತೊಡುಗೆ ನಡೆವಳಿಕೆಗಳು ತೀರ ಸಾದಾ. ಪದವೀಧರ ಶಿಕ್ಷಕರೂ ಪ್ರಿನ್ಸಿಪಾಲರೂ ಧೋತರ ಉಟ್ಟು ಕೋಟು ಜಾಕೀಟು ತೊಟ್ಟು ಹೆಗಲ ಮೇಲೆ ಶಲ್ಲೆ ಹೊರುತ್ತಿದ್ದರು. ತಲೆಗೆ ರುಮಾಲ ಸುತ್ತುತ್ತಿದ್ದರು. ಕನ್ನಡ ಪಂಡಿತರೂ ಸಂಸ್ಕೃತ ಶಾಸ್ತ್ರಿಗಳೂ ಕಸೆಯ ಅಂಗಿ ತೊಡುತ್ತಿದ್ದರು. ಯುರೋಪಿಯನ್ ಡಾಯರೆಕ್ಟರರು ಯಾವಾಗಲಾದರೊಮ್ಮೆ ಕಾಲೇಜಕ್ಕೆ ಬರುತ್ತಾರೆಂದರೆ ಎಲ್ಲಿಯೋ ಪೆಟ್ಟಿಗೆಯಲ್ಲಿಟ್ಟ ಕೋಟು ಬೂಟು ಪ್ಯಾಂಟು ಇವನ್ನು ಪದವೀಧರ ಶಿಕ್ಷಕರು ಹೊರಗೆ ತೆಗೆಯುತ್ತಿದ್ದರು. ಕ್ರಾಪಿನ ಪ್ರಚಾರ ಕಡಿಮೆಯಾದ್ದರಿಂದ ಹೇಟಿನ ಪ್ರಶ್ನೆ ತುಂಬ ಬಿಗಿಯಾಗುತ್ತಿತ್ತು. ಟಾಯ್ ಕಟ್ಟಿಕೊಡಲು ಬೇರೊಬ್ಬರು ಬೇಕಾದ ಸಂದರ್ಭವೂ ಇರುತ್ತಿತ್ತು! ಆಗ ಎಲ್ಲರೂ ನಗುತ್ತಿದ್ದರು.

ಒಟ್ಟಿಗೆ ಆಗಿನ ಕಾಲದ ಕಾಲೇಜದ ಜೀವನವು ಸುಖಕರವಾಗಿತ್ತು, ಸುವ್ಯವಸ್ಥಿತವಾಗಿತ್ತು. ವಿದ್ಯಾರ್ಥಿಗಳಿಗೆ ಅಭ್ಯಾಸ ಶಾರೀರಿಕ ವ್ಯಾಯಾಮ ಊಟ ಉಣಿಸು ಇವುಗಳ ಹೊರತಾದ ಯಾವ ವಿಲಾಸ ವಿಚಾರಗಳೂ ಇರುತ್ತಿರಲಿಲ್ಲ. ಸಿನೇಮಾ ಯುಗವು ತೀರ ಇತ್ತೀಚೆಗೆ ಪ್ರಾರಂಭವಾಗಿದೆ. ನಾಟಕಗಳೆಂದರೆ ಮರಾಠಿ ನಾಟಕಗಳು. ನಾಟಕ ಕಂಪನಿಯವರು ಪ್ರಿನ್ಸಿಪಾಲರಿಗೆ ದುಂಬಾಲಬಿದ್ದು ಕಾಲೇಜದ ವಿದ್ಯಾರ್ಥಿಗಳಿಗೆ ಅರ್ಧ ಚಾರ್ಜು ಇಟ್ಟು ಕೇಳಿಕೊಂಡ ವಿಶೇಷ ಸಂದರ್ಭಗಳಲ್ಲಿ ಮಾತ್ರ ಎಲ್ಲ ವಿದ್ಯಾರ್ಥಿಗಳು ವ್ಯವಸ್ಥಿತವಾಗಿ ಹೋಗಿ ತಮಗಾಗಿ ಗೊತ್ತಾದ ಸ್ಥಳದಲ್ಲಿ ಕುಳಿತು ನಾಟಕ ನೋಡಿ ಬರುತ್ತಿದ್ದರು. ಕಾಲೇಜದ ಕಂಪೌಂಡಿನಲ್ಲಿ ಯಾರೂ ಬೀಡಿ--ಚುಟ್ಟಾ ಸೇದುವಂತಿಲ್ಲ. ಸಿಗರೇಟಿನ ಪ್ರಚಾರವೂ ಆಗ ಇರಲಿಲ್ಲ. ಚಹಾದ ಅಂಗಡಿಗಳ ದರ್ಶನವಂತೂ ಕಾಲೇಜದ ವಿದ್ಯಾರ್ಥಿಗಳಿಗೆ ದುರ್ಲಭವಾಗಿತ್ತು. ಪದವೀಧರ ಶಿಕ್ಷಕರಂಥವರಂತೂ ಚಹಾದ ಅಂಗಡಿಗೆ ಹೋಗುವದು ತೀರ ಗೌಣವೆನ್ನಿಸುತ್ತಿತ್ತು.

ನಾನು ಕಾಲೇಜದ ಅಭ್ಯಾಸವನ್ನು ಮುಗಿಸಿ ನೌಕರಿಗೆ (೧೯೧೦ ಡಿಸೆಂಬರ) ಸೇರಿದ ಸಮಯವು ಕೂಡ ಪ್ರಾಥಮಿಕ ಶಿಕ್ಷಕರಿಗೆ ಪರ್ವಕಾಲವಾಗಿತ್ತು. ಯಾಕೆಂದರೆ ಅದೇ ವರ್ಷ ಪ್ರಾ. ಶಿಕ್ಷಕರಿಗೆ ಸರ್ಟಿಫಿಕೇಟಿನಷ್ಟು ಆರಂಭದ ವೇತನ ಕೊಡಬೇಕೆಂದು ಸರಕಾರದ ಅಪ್ಪಣೆ ಹೊರಟಿತ್ತು. 'ಸರ್ಟಿಫಿಕೇಟಿನಷ್ಟು ಸಂಬಳ' ಈ ಮಾತಿಗೆ ಈಗಿನವರು ಅರ್ಥಹೇಳಲಾರರು. ಅಲ್ಲಿಯವರೆಗೆ ಪ್ರಾಥಮಿಕ ಶಿಕ್ಷಕರ ಆರಂಭದ ವೇತನವು ಅಂಟ್ರೇಂಡ್ ೭ ರೂಪಾಯಿ, ೧ನೆಯ ವರ್ಷದ ಟ್ರೇಂಡ್ ೧೦ ರೂ. ೨ನೆಯ ವರ್ಷದ ಟ್ರೇಂಡ್ ೧೨ರೂ. ೩ನೆಯ ವರ್ಷದ ಟ್ರೇಂಡ್ ೧೫ ರೂ. ಇತ್ತು. ಮತ್ತು ಮೊದಲನೆಯ ವರ್ಷದ ಟ್ರೇನಿಂಗ ಸರ್ಟಿಫಿಕೇಟ ಪಡೆದರೆ ೧೦ ರೂ. ಆರಂಭದ ವೇತನ ಪಡೆಯಲು ಅರ್ಹನೆಂದೂ ತಿಳಿಯಲಾಗುತ್ತಿತ್ತು. ಮತ್ತು ಎರಡನೆಯ ವರ್ಷದ ಪರೀಕ್ಷೆಯಲ್ಲಿ ಪಾಸಾಗಿ ೧೦೦ಕ್ಕೆ ೬೦ರಷ್ಟು ಅಥವಾ ಹೆಚ್ಚು ಗುಣಗಳನ್ನು ಪಡೆದವರಿಗೆ ೧೫ ರೂ. ೬೦ಕ್ಕಿಂತ ಕಡಿಮೆ ಗುಣ ಪಡೆದವರಿಗೆ ೧೨ ರೂ. ಸರ್ಟಿಫಿಕೇಟ ಕೊಡಲಾಗುತ್ತಿತ್ತು. ಅದೇ ಮೇರೆಗೆ ಮೂರನೆಯ ವರ್ಷದ ಪರೀಕ್ಷೆಯಲ್ಲಿ ೧೦೦ಕ್ಕೆ ೬೦ಕ್ಕಿಂತ ಕಡಿಮೆ ಗುಣ ಪಡೆದವರಿಗೆ ೨೦ ರೂ. ೬೦ರಷ್ಟು ಅಥವಾ ಹೆಚ್ಚು ಗುಣ ಪಡೆದವರಿಗೆ ೨೫ ರೂ. ಪ್ರಾರಂಭ ವೇತನ ಪಡೆಯಲು ಅರ್ಹತೆಯ ಸರ್ಟಿಫಿಕೇಟು ದೊರೆಯುತ್ತಿತ್ತು. ಮೂರನೆಯ ವರ್ಷದ ಪರೀಕ್ಷೆಯಲ್ಲಿ ನಾಪಾಸಾದವರಿಗೆ ಎರಡನೆಯ ವರ್ಷದ ಮತ್ತು ಎರಡನೆಯ ವರ್ಷದ ಪರೀಕ್ಷೆಯಲ್ಲಿ ನಾಪಾಸಾದರೆ ೧ನೆಯ ವರ್ಷದ ಸರ್ಟಿಫಿಕೇಟು ಕೊಡಲಾಗುತ್ತಿತ್ತು. ಆಗ ಪ್ರಾ. ಶಿಕ್ಷಕರಿಗೆ ಟೈಮ ಸ್ಕೇಲಿನಂತೆ ಪಗಾರ ದೊರೆಯುವದರ ಕಲ್ಪನೆಯೇ ಇರಲಿಲ್ಲ. ೧೦–೧೨ ಅಥವಾ ೧೫ ರೂಪಾಯಿಯ ಪಗಾರಿನ ಮೇಲೆ ನೌಕರಿ ಪ್ರಾರಂಭಿಸಿದರೆ ಮುಂದಿನ ಗ್ರೇಡು ಯಾವಾಗ ಸಿಕ್ಕೀತೆಂಬದರ ಕಲ್ಪನೆಯೇ ಇರುತ್ತಿದ್ದಿಲ್ಲ.

ನಾನು ಮೂರನೆಯ ವರ್ಷದ ಪರೀಕ್ಷೆಯಲ್ಲಿ ನೂರಕ್ಕೆ ೬೦ಕ್ಕಿಂತ ಹೆಚ್ಚು ಗುಣಪಡೆದು ಪಾಸಾಗಿದ್ದೆ. ಆ ಮೇರೆಗೆ ನನಗೆ ೨೫ ರೂ. ಆರಂಭದ ವೇತನ ಸಿಗಬೇಕಾಗಿತ್ತು. ಅದೇ ಸಮಯಕ್ಕೆ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ್ ಸ್ಕೂಲಿನಲ್ಲಿ ೨೦ ರೂ. ವೇತನದ ಒಂದು ಸ್ಥಳವಿತ್ತು. ನಾನು ಆ ೨೦ ರೂ. ವೇತನದ ಕಟ್ಟಕಡೆಯ ಶಿಕ್ಷಕನ ಸ್ಥಳವನ್ನೇ ಒಪ್ಪಿಕೊಂಡು ನೌಕರಿಪ್ರಾರಂಭಿಸಿದೆ.

ಆ ಕಾಲದಲ್ಲಿ ೨೦ ರೂ. ಸಂಬಳವೆಂದರೆ ಕಡಿಮೆಯೆನಿಸುತ್ತಿರಲಿಲ್ಲ. ಯಾಕಂದರೆ ಆಗಿನ ಆಹಾರ ಸಾಮಗ್ರಿಗಳ ಬೆಲೆಯನ್ನು ಹಿಂದೆ ಹೇಳಿದ್ದೇನೆ. ಬಟ್ಟೆ ಬರೆಗಳ ಬೆಲೆಯೂ ಅತಿಶಯ ಸುಲಭವಾಗಿತ್ತು. ೩–೩ತ್ರಿ ರೂ. ಕೊಟ್ಟರೆ ಉತ್ತಮ ಮ್ಯಾಂಚೆಸ್ಟರ ಜಾನಪೀಲ (೯ ವಾರು × ೫೨ ಇಂಚು) ಧೋತರ ಜೋಡಿ, ೩ ಆಣೆಗೆ ವಾರು ಷರ್ಟಿನ ಅರಿವೆ, ೮–೧೦ ಆಣೆಗಳಿಗೆ ಕೋಟಿನ ಅರಿವೆ, ೩ ಆಣೆಗೆ ಷರ್ಟಿನ ಹೊಲಿಗೆ, ೮-೧೦ ಆಣೆ ಕೋಟಿನ ಹೊಲಿಗೆ,

೮–೧೦ ರೂಪಾಯಿಗೆ ಉತ್ತಮ ಜರದ ರುಮಾಲ, ಹೀಗೆ ಅನ್ನ ವಸ್ತ್ರಗಳ ಸಮೃದ್ಧಿಯ ಕಾಲವದು. ೩–೪ ಕೋಣೆಗಳಿರುವ ಚಿಕ್ಕ ಮನೆಗೆ ತಿಂಗಳಿಗೆ ೩ ರೂ. ಬಾಡಿಗೆ. ಎಂದ ಬಳಿಕ ೨೦ ರೂ. ಸಂಬಳವು ಕಡಿಮೆ ಎನ್ನಿಸುವ ಕಾರಣವೆಲ್ಲಿದೆ? ಆಗಿನ ೨೦ ರೂ. ಗಳ ಬೆಲೆ ಈಗಿನ ೨೦೦ ರೂ. ಗಳ ಬೆಲೆಗೆ ಸರಿಯೆನ್ನಬೇಕಾಗಿದೆ. ಈಗ ನಾವು ಈ ಮಾತುಗಳು ಕೇವಲ ಕನಸಿನ ಕಲ್ಪನೆಯೆಂದು ಭಾವಿಸಬೇಕಾಗಿದೆ. ಅರ್ಧ ಶತಮಾನದ ಹಿಂದಿನ ಸ್ವಾನುಭವದ ಮಾತುಗಳಿವು. ಇವುಗಳಲ್ಲಿ ಯಾರಿಗೆ ಯಾವದು ಹೌದೆನ್ನಿಸುವದೋ ಯಾರಿಗೆ ಹುಚ್ಚಾಟದ ಮಾತೆನ್ನಿಸುವದೋ ಗೊತ್ತಿಲ್ಲ. ಈ ಅರ್ಧ ಶತಮಾನದ ಅವಧಿಯಲ್ಲಿ ನಮ್ಮ ಆರ್ಥಿಕ ಸ್ಥಿತಿಯಲ್ಲಿ ಇಷ್ಟು ಬದಲಾವಣೆಯಾಗಿದೆ. ಇನ್ನು ಮುಂದೆ ಇನ್ನೆಷ್ಟು ಬದಲಾವಣೆಯಾಗುವದೋ ಯಾರು ಕಂಡಿದ್ದಾರೆ. ಕಾಲದ ಗರ್ಭದಲ್ಲಿ ಏನಿರುವದೋ ಅದು ಆ ಕಾಲ ಪುರುಷನಿಗೇ ಗೊತ್ತು ! "ಕಾಲಾಯ ತಸ್ಮೈ ನಮಃ" ಎಂದು ಈಲೇಖನ ಮುಗಿಸುವೆನು.

ಧಾರವಾಡ ಗಂ. ಮು. ಸರಕಾರಿ ಟ್ರೇನಿಂಗ ಕಾಲೇಜದ ಬಗೆಗೆ

ಗಣ್ಯತರ ಸಾಮ್ರಾಜ್ಯ ವಿಜಯನಗರದ ರಾಜ್ಯ
ಕಣ್ಮುಚ್ಚಿದಂದಿನಿಂ ಕನ್ನಡದ ಸೌಭಾಗ್ಯ
ರತ್ನಾಕರಂ ಬತ್ತಿ ನಾಡೊಡೆದು ನಡೆಗುಂದಿ ಬಾಳುತಿರೆ ಕನ್ನಡಿಗರು ||
ಕಣ್ದೆರೆದು ನುಡಿಯ ಮುನ್ನಡೆಗೆ ಸರಕಾರದಲಿ
ಬಿನ್ನವಿಸಲದು ಯೋಗ್ಯವೆನಿಸಿ ಧಾರ್ವಾಡದಲಿ
ಕನ್ನಡ ಪ್ರಾಥಮಿಕ ಶಿಕ್ಷಕರ ಶಿಕ್ಷಣಾಲಯವ ಸಂಸ್ಥಾಪಿಸಿದರು ||೧||

ಶಿಕ್ಷಣಾಲಯವಿದುವೆ ತಾಯ್ನಾಡ ನುಡಿಯಲ್ಲಿ
ತಕ್ಕ ಶಿಕ್ಷಣದಿಂದ ತಿದ್ದಿ ಶಿಕ್ಷಣದಲ್ಲಿ
ದಕ್ಷರಾಗಿಹ ಪ್ರಾಥಮಿಕ ಶಿಕ್ಷಕರ ನೀಡುತಿರಲು ವರುವರುಷಕವರು ||
ಮಕ್ಕಳಿಗೆ ಒಳ್ನಡೆಯ ನಲ್ನುಡಿಯ ಸತ್ಕಲೆಯ
ಶಿಕ್ಷಣವನೀಯುತ್ತಲರುಹಿ ನಾಗರಿಕತೆಯ
ಶಿಕ್ಷಿತರ ಸಂಖ್ಯೆಯಂ ಪೆರ್ಚಿಸುತ ನಾಡಿನೇಳಿಗೆಗಾಗಿ ಯತ್ನಿಸಿದರು ||೨||

ಕನ್ನಡದ ಮನ್ನಣೆಯ ಓ, ಶಿಕ್ಷಣಾಲಯವೆ !
ನಿನ್ನ ಕೃಪೆಯಿಂದೆಮ್ಮ ಜನತೆಯಲಿ ಸತತ ಸಂ–
ಪನ್ನತರ ಶಿಕ್ಷಣದ ಸಾಹಿತ್ಯ–ಸಂಸ್ಕೃತಿಯ ಬೆಳೆವಣಿಗೆಯಾಗುತಿರಲು ||
ಭಿನ್ನವಾಗಿರ್ದ ಕನ್ನಡದ ಭಾಗಗಳೆಲ್ಲ
ಭಿನ್ನಭಾವವ ತೊರೆದು ಕೂಡುತೊಂದಾಗಿಂದು
ಕನ್ನಡದ ರಾಜ್ಯ ಮೆರೆಯುತಿದೆ ಕನ್ನಡಿಗರಲಿ ತನ್ನತನದರಿವಾಗಲು ||೩||

ಕನ್ನಡದ ಶಿಕ್ಷಕ ಸಮೂಹಕ್ಕೆ ತಾಯ್ ನೀನು
ಕನ್ನಡದ ಜನಕೆ ನೀನಾರಾಧ್ಯ ದೇವತೆಯು
ಕನ್ನಡದ ಬಾವುಟವು ಭಾರತಾಕಾಶದಲಿ ನಲಿವ ಕೀರುತಿಯು ನಿನಗೆ ||
ನಿನ್ನ ಮಕ್ಕಳು ಭಕ್ತಿಭಾವದಲಿ ಜರುಗಿಸುವ
ನಿನ್ನಯ ಶತಾಬ್ದಿಯುತ್ಸವವೆಂಬ ಕಾಣಿಕೆಯ
ಸನ್ನಿಯಿಂ ಸ್ವೀಕರಿಸು ದೀರ್ಘಾಯುರಾರೋಗ್ಯಮಂ ದೇವ ನಿನಗೀಯಲಿ ||೪||

— **ವಿ. ವೆ. ತೊರ್ಕೆ,** ಹಳೆಯ ವಿದ್ಯಾರ್ಥಿ, ಕುಮಟಾ.

ನೂರು ವರುಷದ ತರುಣ ಸಂಸ್ಥೆ

ಲೇಖಕರು : **ಶ್ರೀ ಶಿಂಪಿ ಲಿಂಗಣ್ಣ,** ಚಡಚಣ.

"ಮುನ್ನ, ಮುನ್ನ, ಮುನ್ನ–
ಅಂದಿಂಗೆಳೆಯ ನೀನು, ಹಳೆಯ ನಾನು"

ಎಂದು ಶ್ರೀ ಬಸವಣ್ಣನವರು ಮಹಾದಾನಿ ಕೂಡಲ ಸಂಗಮದೇವನನ್ನು ಕುರಿತು ಆಡಿದ ಮಾತನ್ನು ನಾವು, ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜನ್ನು ಕುರಿತು ಆಡಬಹುದಾಗಿದೆ. ಅದು ನೂರು ವರುಷಗಳನ್ನು ದಾಟಿದ ವಯೋವೃದ್ಧ ಸಂಸ್ಥೆಯಾಗಿದ್ದರೂ ಇನ್ನೂ ಎಳೆಯ ತರುಣವಾಗಿಯೇ ಇದೆ. ಆದರೆ ಅದು ತನ್ನ ಗತಾಯುಷ್ಯದಲ್ಲಿ ಅಖಂಡವಾಗಿ ಜ್ಞಾನದಾನ ಮಾಡುತ್ತ ಬಂದಿದ್ದರೂ ಅದರ ಜ್ಞಾನನಿಧಿಯು ಕುಂಠಿತವಾಗಿಲ್ಲ. ಅದೊಂದು ವಿಶಾಲವಾದ ಆಲದ ಮರವಿದ್ದ ಹಾಗೆ. ಧಾರವಾಡದಲ್ಲಿ ಬೀಜ ಮೊಳೆತು, ಬೆಳಗಾವಿಯಲ್ಲಿ ಅಗಿಯಾಗಿ ಪುನಃ ಧಾರವಾಡದಲ್ಲಿ ಗಿಡವಾಗಿ ಬೆಳೆದು, ಇಂದು ಮರವಾಗಿ–ಹೆಮ್ಮರವಾಗಿ ಇಡಿಯ ಉತ್ತರ ಕರ್ನಾಟಕವನ್ನೆಲ್ಲ ಹರಹಿನಿಂತಿದೆ. ಕಾರವಾರ, ಬೆಳಗಾವಿ, ವಿಜಾಪುರ, ಜಮಖಂಡಿ, ಲಚ್ಯಾಣ, ನವಿಲುಗುಂದ ಮೊದಲಾದ ಹಳ್ಳಿಪಟ್ಟಣಗಳಲ್ಲಿ ಅದು ತನ್ನ ಪಾರಂಬಿಗಳನ್ನು ಬಿಟ್ಟಿದೆ. ಅದರ ನೆರಳಲ್ಲಿ ಅಸಂಖ್ಯ ಪ್ರಾಥಮಿಕ ಶಾಲೆಗಳು ಲೆಕ್ಕವಿಲ್ಲದಷ್ಟು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡುತ್ತ ಬಂದಿವೆ. ಉತ್ತರ ಕರ್ನಾಟಕದ ಅಕ್ಷರ ಬಲ್ಲವರೆಲ್ಲ ಅದರ ಪ್ರಸಾದವನ್ನುಂಡವರೇ ಆಗಿದ್ದಾರೆಂದು ಹೇಳಲು ಅಡ್ಡಿಯಿಲ್ಲ.

ಈ ಟ್ರೇನಿಂಗ್ ಕಾಲೇಜಿಗೆ ಮಾನಸಪುತ್ರನಂತೊಪ್ಪುವ ಮಾಸಪತ್ರಿಕೆಯು, ಮೊಟ್ಟಮೊದಲು ಮಠಪತ್ರಿಕೆಯಾಗಿದ್ದುದು, ಶಾಲಾಪತ್ರಕ–ಪ್ರಾಥಮಿಕ ಶಿಕ್ಷಣ ಎಂಬ ಹೆಸರುಗಳನ್ನು ಕಾಲಕಾಲಕ್ಕೆ ಬದಲಿಸಿ, ಸ್ವತಂತ್ರ ಭಾರತದಲ್ಲಿ "ಜೀವನ ಶಿಕ್ಷಣ"ವಾಗಿ ಮಾರ್ಪಟ್ಟು ನಿಂತಿದೆ. ಕಾಲೇಜು-ಸಂಸ್ಥೆಯೊಂದು ವ್ಯಕ್ತಿಯಂತಿದ್ದರೆ ಈ ಪತ್ರಿಕೆಯು ಅದಕ್ಕೆ ಉಸಿರಾಗಿದೆ. ವ್ಯಕ್ತಿಗೆ ಉಸಿರು ಸಜೀವತೆಯ ಲಕ್ಷಣವಾಗಿದ್ದಂತೆ, ಉಸಿರಿಗೆ ವ್ಯಕ್ತಿಯು ಸಬಲತೆಯ ಆಧಾರವಾಗಿದೆ.

ಕನ್ನಡತನದ ಅರಿವಾದ ಹೊಸದರಲ್ಲಿ ಕನ್ನಡಿಗರು ಕಟ್ಟಿಕೊಂಡ ಅಚ್ಚಗನ್ನಡ ವಿದ್ಯಾಸಂಸ್ಥೆಯೆಂದರೆ ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ್ ಕಾಲೇಜವೇ ಸರಿ. ಕಾಲೇಜಿಗಿರುವ ಆ ವಿಶಾಲವಾದ ಆವಾರ, ಮಲೆನಾಡಿನ ಸೆರಗು–ಬಯಲುನಾಡಿನ ಜೆರಗು ಸಂಗಳಿಸುವಲ್ಲಿ ಅದಕ್ಕಿರುವ ಆ ಆವರಣ, ಎರಡು ಅಂತಸ್ತಿನಲ್ಲಿ ಮೆರೆಯುವ ಆ ವಿದ್ಯಾರ್ಥಿನಿಲಯಗಳು, ಊಟದ ಮನೆ, ಜಳಕದ ಮನೆ, ನೀರಿನ ಸೌಕರ್ಯ, ಭಾಂಡೆ-ಪಾತ್ರೆಗಳ ಅಳವಡಿಕೆ, ಗಾಡಿ-ಕೋಣ-ಆಳುಗಳ ಹೊಂದಾವಣೆ ಇವೆಲ್ಲ ಒಂದು ಅನುಕೂಲತೆಯನ್ನು ಒದಗಿಸಿದರೆ, ವರ್ಗಗಳನ್ನು ನಡೆಯಿಸುವ ಕೋಣೆಗಳು, ಅಧ್ಯಾಪಕರ ನಿಲಯ, ಪ್ರಯೋಗ ಶಾಲೆ, ಉಪಕುಲಪತಿಗಳ ಆಲಯ, ಮುಗಿಲೆತ್ತರವಾಗಿ ನಿಂತು ಸಾವಿರ ಮೈಲು ದೃಷ್ಟಿಸುವ ಅನಿಮಿಷನೇತ್ರವುಳ್ಳ ಎರಡು ಗೋಪುರಗಳು, ಜನರಲ್ ಹಾಲ್, ಪ್ರ್ಯಾಕ್ಟಿಸಿಂಗ ಸ್ಕೂಲು, ಉಪವನ, ರಾಯರ ಮನೆ ಇವೆಲ್ಲ ಇನ್ನೊಂದು ಶೋಭೆಯನ್ನು ಹೊತ್ತು ನಿಂತಿವೆ.

ಡೆಪ್ಯುಟಿ ಚೆನ್ನಬಸಪ್ಪನವರು, ರೊದ್ದರಾಯರು, ಮಹಿಷಿಯವರೇ ಮೊದಲಾದವರ ಪರಂಪರೆಯಲ್ಲಿ ಕಾಲೇಜಿನ ಪ್ರಿನ್ಸಿಪಾಲರಿಗೆ, ವಿಜಯ ನಗರದ ರಾಜರಿಗೊಪ್ಪುವ 'ರಾಯರು' ಎಂಬ ಹೆಸರು ತಳಕುಹಾಕಿದ್ದು ಇಂದಿಗೂ ಸಾಗಿಬಂದಿದೆ. ಕಾಲೇಜಿಗೆ ತುಂಬಿಬಂದ ಮಹಾಪೂರದ ಕಾಲವೊಂದಿತ್ತು. ಆ ಬಳಿಕ ಅದರ ಆಯುಷ್ಯವೂ ತುಂಬಿಬಂದಿತೇನೋ ಎನ್ನುವಂತೆ ಕಾಲೇಜಿನ ಭವ್ಯತೆಯಡಗಿ ಕಾಲೇಜು ಟ್ರೇನಿಂಗ್ ಸ್ಕೂಲಾಗಿ ಜೀವಹಿಡಿದು ಬಿದ್ದುಕೊಂಡಿರುವ ಪತನಕಾಲವೂ ಆವರಿಸದಿರಲಿಲ್ಲ. ಅಂಥ ಗಂಡಾಂತರ ಕಾಲದಲ್ಲಿ ದಿ. ಬ. ಕಂಬಳಿಯವರು ಮಂತ್ರಿಯಾಗಿ ಕಾವು ಕೊಟ್ಟಿದ್ದರಿಂದಲೇ ಕಾಲೇಜು ಚೇತರಿಸಿಕೊಂಡು ಪೂರ್ವಶಕ್ತಿಯನ್ನೂ, ಅಪೂರ್ವ ಶಕ್ತಿಯನ್ನೂ ಪಡೆಯಿತೆನ್ನಬಹುದು. ಒಂದು ಕೃಷಿಯಲ್ಲಿ ಕಾಲೇಜಿನ ಬೆಳೆಯು ಸಿಕ್ಕಾಪಟ್ಟೆಯಾಗಿ ಬೆಳೆದುಬಂದಿತೆಂದೂ, ಹುಲುಸು ಕಡಿಮೆಯಾದರೂ ಕಾಳು ವಿಪುಲವಾಗಿ ರಾಶಿಗೊಂಡಿತೆಂದೂ ಹೇಳುತ್ತಾರೆ. ಕರುಣಾಹೃದಯರು ಮೆಟ್ಟುನಾಲಗೆ ಹಚ್ಚಿ ತೂರಿದ ಸರ್ಟಿಫಿಕೇಟುಗಳು ಕಾಲೇಜಿನಲ್ಲಿ ಕಲಿತ ವಿದ್ಯಾರ್ಥಿಗಳಿಗೆ ದೊರಕೊಂಡಂತೆ, ಹೊರಗಿನವರಿಗೂ ಕೈವಶವಾಗುವಷ್ಟು ವಿಪುಲವಾಗಿ ವಿತರಣ

ಗೊಂಡವೆಂದು ಹೇಳುವುದರಲ್ಲಿ ಅತಿಶಯೋಕ್ತಿಯಿರಲಿಕ್ಕೆ ಬೇಕು. ಆದರೆ ಭೂತದಯೆಕ್ಕೀಡಾಗಿ ಅನ್ನವನ್ನು ಕಳಕೊಂಡಿದ್ದರಿಂದ ಕಾಲೇಜು ಉಪವಾಸ ಬಿದ್ದೋ ಅರೆಹೊಟ್ಟೆಯುಂಡೋ ಜೀವಹಿಡಿಯುವ ಪ್ರಸಂಗಬಂದಿತೆನ್ನುವುದು ಸುಳ್ಳಲ್ಲ. ಕಾಲೇಜಿನ ವಾತಾವರಣದಲ್ಲೆಲ್ಲ ಸಾರಸ್ವತ ಸತ್ವವೇ ಪ್ರವಹಿಸುತ್ತಿದ್ದ ಕಾಲವೆಂದರೂ ಅದೇ. ಕಾಲೇಜು ಕಂಡ ಮಾತ್ರಕ್ಕೆ ಟ್ರೇಂಡರಾಗಿ ಮಾರ್ಪಡುವ ಯೋಗ್ಯತೆ ಬರುತ್ತಿತ್ತೆಂದು ಅನುಭವಿಕರು ಹೇಳುತ್ತಾರೆ. ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಸಾಲದೆ, ರಾಯರ ಮನೆಯ ಮುಂದಿನ ತುಳಸಿಕಟ್ಟೆಯನ್ನಾಶ್ರಯಿಸಿ ಸರ್ಟಿಫಿಕೇಟು ಪಡೆದ ಚತುರ ಶಿಕ್ಷಕರನ್ನು ಆ ಕಾಲಕ್ಕೆ ಕಂಡವರಿದ್ದಾರೆ. ಹಾಗೆ ತುಂಬಿಬಂದ ಮಹಾಪೂರದ ಅಬ್ಬರವಡಗುವ ಕಾಲವೂ ತುಂಬಿ ಬಾರದಿರಲಿಲ್ಲ.

ಧಾರವಾಡದ ಟ್ರೇನಿಂಗ್ ಕಾಲೇಜಿನ ಉತ್ತುಂಗ ಶಿಖರದ ಪ್ರಭಾವದಲ್ಲಿ ಪ್ಲಾವಿತಗೊಂಡು ಸುತ್ತಲೂ ಪ್ರವಹಿಸಿದ ಜೀವನದಿಗಳಿಗೆ ಲೆಕ್ಕವಿಲ್ಲ. ಹಿಮನದಿಯಾಗಿ, ಬೆಟ್ಟದ ಹೊಳೆಯಾಗಿ ಉಗಮಿಸಿ ಕಾವೇರಿಯಾಗಿ, ಭೀಮೆಯಾಗಿ, ಮಲಾಪಹಾರಿಯಾಗಿ, ತುಂಗಭದ್ರೆಯಾಗಿ, ಶರಾವತಿಯಾಗಿ–ಮಹಾನದಿ–ಮಹಿನದಿಯೆನಿಸಿ, ಪರಮವಾರಿಧಿಯಲ್ಲಿ ವಿಲೀನಗೊಂಡ ಅನೆಷ್ಟೋ ಸಜೀವ ಶಾಲ್ಮಲಿಗಳಿಗೆ ಧಾರವಾಡದ ಕಾಲೇಜವೇ ತವರಾಗಿದೆ. ಪಂಡಿತ ಪೂಜಾರ ಅವರ ಪಾಂಡಿತ್ಯದ ಮಕರಂದವನ್ನು ನಾಡ ತುಂಬಿಗಳು ಕೊಂಡೊಯ್ದು ನಾಡಿನ ನಾಡಿನಾಡಿಗೂ ಬಿತ್ತರಿಸಿದವು. ಕಾಲೇಜಿನ ಮಾದಕವನ್ನುಂಡೇ ಗಳಗನಾಥರು ಪ್ರಖ್ಯಾತ ಕಾದಂಬರಿಕಾರರಾದರು. ಅದರ ಮೋದಕವನ್ನಿಂಟಿಯೇ ಬಾಳಾಚಾರ್ಯ ಸಕ್ಕರಿಯವರು ಶಾಂತಕವಿಗಳಾದರು; ಕೀರ್ತನಕಾರರಾದರು; ಹೊಸಗನ್ನಡ ನಾಟಕದ ಪ್ರವರ್ತಕರಾದರು. ಕಾಲೇಜಿನ ಬಂಡುಣಿಯಾದ ದಿ. ವ್ಹಿ. ಎಚ್. ನಾಯಿಕ ಅವರು, ಎಂ.ಎ. ವರೆಗೆ ಓದಿ, ಇಂಗ್ಲಂಡ ಕಂಡು, ಬ್ಯಾರಿಸ್ಟರರಾಗಿ ಬಂದು ಕನ್ನಡ ಕಲೆಕ್ಟರರಾಗಲಿಲ್ಲವೇ? ಅಂಥದೇ ಇನ್ನೊಂದು ಶಕ್ತಿಯು ಟ್ರೇಂಡರಾದ ಶ್ರೀ ಸ. ಪ. ಗಾವಕರರನ್ನು ಪದವೀಧರರನ್ನಾಗಿಸಿ, ಶಿಕ್ಷಣಾಧಿಕಾರದ ಸ್ಥಾನಕ್ಕೆ ಏರಿಸಿತು, ಕವಿಯಾಗಿ ಹಾಡಿಸಿತು; ವಿಧಾನ ಸಭೆಯನ್ನು ಅಲಂಕರಿಸಿತು; ಮಂತ್ರಿಪದಕ್ಕೊಪ್ಪುವಂತೆ ಅಳವಡಿಸಿತು. ವೀರಕರ್ಮವನ್ನೂ ವಿಚಾರ ಸಾಹಿತ್ಯವನ್ನೂ ಸಂಗಳಿಸುವದಕ್ಕೆ ಕಟಿಬದ್ಧರಾಗಿ ನಿಂತ ಶ್ರೀ ಬುರ್ಲಿ ಬಿಂದು ಮಾಧವರಂಥ ಪರಶುರಾಮರಿಗೆ ಈ ಕಾಲೇಜವೇ ರೇಣುಕೆಯಂತೆ ಮೊಲೆ ಕುಡಿಸಿದೆ. ಸಂಶೋಧಕ-ಲೇಖಕರೆಂದು ಖ್ಯಾತಿವೆತ್ತು, ಕನ್ನಡನುಡಿಯ ಹುಟ್ಟು ಕಂಡುಹಿಡಿದ ಶ್ರೀ ಶಂ. ಬಾ. ಜೋಶಿಯವರು ಈ ಕಾಲೇಜಿನ ಟ್ರೇಂಡರೆಂದು ಹೇಳಿದರೆ ಆಶ್ಚರ್ಯವಾದೀತು. ಪಂಡಿತ ಕೇಶವಶರ್ಮರೂ, ಪಂಡಿತ ಕವಲಿಯವರೂ, ಪಂಡಿತ ಕುರುಡಿಯವರೂ ಇದೇ ಮರದ ಹಣ್ಣುಗಳು. ಸ್ವಯಂ ಪದವೀಧರರೆನಿಸುವ ಶ್ರೀ ಮಿರ್ಜಿ ಅಣ್ಣಾರಾಯರಂಥ ಅನೇಕ ನುಡಿವಕ್ಕಿಗಳಿಗೂ ಈ ಕಾಲೇಜು ಗುಟುಕು ನೀಡದೆ ಬಿಟ್ಟಿಲ್ಲ.

ಕಾಲೇಜಿನಿಂದ ಪ್ಲಾವಿತರಾಗಿ, ಪುನೀತರಾಗಿ ಕೀರ್ತಿಕಾಯರಾದ ಆದರ್ಶ ಶಿಕ್ಷಕರಿದ್ದಂತೆ, ಇಂದಿನ ತಲೆಮಾರಿನ ಅದೆಷ್ಟೋ ಪ್ರಾಧ್ಯಾಪಕರೂ, ಪದವೀಧರರೂ ಅಂಥ ಶಿಕ್ಷಕರ ಮಕ್ಕಳೇ ಆಗಿದ್ದಾರೆಂಬ ಮಾತನ್ನು ಬೀಳುಗಳೆವಂತಿಲ್ಲ. ನಮ್ಮ ಶಿಕ್ಷಣದ ಎತ್ತರ-ಬಿತ್ತರಗಳಿಗೆ ಪ್ರಾಥಮಿಕ ಶಾಲೆಯ ಶಿಕ್ಷಕರು ಮೂಲಾಧಾರವಾಗಿರುವಂತೆ, ಅಂಥ ಶಾಲೆಯ, ಶಿಕ್ಷಕರ ಐವೆಶಿಯೆಲ್ಲ ಧಾರವಾಡ ಟ್ರೇನಿಂಗ್ ಕಾಲೇಜದಲ್ಲಿಯೇ ಆಗಿದೆಯೆಂಬುದನ್ನು ಮರೆಯತಕ್ಕದ್ದಲ್ಲ. ಉತ್ತರ ಕರ್ನಾಟಕದ ವಿದ್ಯಾತೀರ್ಥಗಳಿಗೂ, ಅಲ್ಲಿಯ ತೀರ್ಥಂಕರರಿಗೂ ಧಾರವಾಡದ ಟ್ರೇನಿಂಗ್ ಕಾಲೇಜವೇ ಪಾದತೀರ್ಥವೆಂದು ನಾವೆಲ್ಲರೂ ಪ್ರಾಂಜಲತೆಯಿಂದ ಒಪ್ಪಿಕೊಳ್ಳದೆ ಗತ್ಯಂತರವೇ ಇಲ್ಲವೆಂದು ಹೇಳಬಹುದು.

ದೊಡ್ಡವರು ಮಾಡಿದ ಕೆಲಸ ದೊಡ್ಡದು. ಅದಕ್ಕೆ ಬರುವ ಕೀರ್ತಿಯೂ ದೊಡ್ಡದು. ಅವರ ಆಯುಷ್ಯವೂ ದೊಡ್ಡದು. ಉತ್ತರ ಕರ್ನಾಟಕದ ಸಾವಿರಗಟ್ಟಳೆ ಶಿಕ್ಷಕರಿಗೆ ನೂರು ವರುಷಗಳಿಂದ ಕಾಲೇಜಿನಲ್ಲಿ ಅನ್ನ-ಹುಳಿಗಳನ್ನು ನೀಡಿ ಪೋಷಿಸುತ್ತ ಬಂದ ಈ ಸಂಸ್ಥೆಯು ಹುಣಿಸೆಯ ಮರದಂತೆ ಹಳೆಯದಾದರೂ ಅದರ ಹುಳಿ ಕಡಿಮೆಯಾಗುವಂತಿಲ್ಲ. ಅಷ್ಟೊಂದು ಸತ್ವಯುತವಾಗಿದ್ದುದರಿಂದಲೇ ಆ ಸಂಸ್ಥೆಯು ಸಿಪಾಯರ ಬಂಡಾಯವನ್ನು ಕಂಡಿದೆ. ಈ ಸಂಸ್ಥೆಯ ಮುಂದೆಯೇ ಅಖಿಲ ಭಾರತ ರಾಷ್ಟ್ರ ಸಭೆಯು ಹುಟ್ಟಿ ಕಣ್ಣು ತೆರೆಯಿತು. ವಂಗಭಂಗದ ಬಿರುಗಾಳಿಯೂ, ತಿಲಕ-ಗೋಖಲೆಯವರ ರಣಗಾಳಿಯೂ ಕಾಲೇಜಿಗೆ ಗೊತ್ತಿದೆ. ರಾಷ್ಟ್ರಪಿತ ಗಾಂಧಿಯವರ ಸತ್ಯಾಗ್ರಹದಂಥ ಚಳುವಳಿಗಳನ್ನೆಲ್ಲ ಅದು ಬಲ್ಲದು. ಭಾರತದ ಬಿಡುಗಡೆ, ಕರ್ನಾಟಕದ ಅಖಂಡತೆಗಳನ್ನು ಕಾಣುವ ಸುಯೋಗವೂ ಅದಕ್ಕಿತ್ತು.

"ಬಡನೂರು ವರುಷವನ ಹರುಷವದಿ
ಕಳೆಯೋಣ"

ಎನ್ನುವ ಉದಾತ್ತ ಮಾನವತೆಯ ಗುರಿಯನ್ನು ಈ ಸಂಸ್ಥೆ ಈಗಾಗಲೇ ಸಾಧಿಸಿಬಿಟ್ಟಿದೆ. ಆದರೆ ಅದರ ಉತ್ಸಾಹ ಇಂಗಿಲ್ಲ; ಆವೇಶ ಆರಿಲ್ಲ; ಬೆನ್ನು ಬಾಗಿಲ್ಲ; ಕೈನಡುಗುತ್ತಿಲ್ಲ. ಮುಪ್ಪಿನ ಕಳೆಯು ಹತ್ತಿರ ಹಾಯ್ದಿಲ್ಲ.

"ಪೆಸರಿಲ್ಲದ ಮಾನಿಸರಿಲ್ಲದೆಲ್ಲಿಯುಂ" ಎನ್ನುವ ಕನ್ನಾಡಿನ ಪೂರ್ವಪರಂಪರೆಯನ್ನೂ, "ಸದಮಲ ಪ್ರತಿಭಾಂಚಿತರ್ ನಮ್ಮ ನಾಡವರ್" ಎನ್ನುವ ಸಹಜಸ್ಫೂರ್ತಿಯನ್ನೂ, "ಕುರಿತೋದದೆಯುಂ ಕಾವ್ಯಶಾಸ್ತ್ರ ಪರಿಣತಮತಿಗಳ್" ಎನ್ನುವ ರಕ್ತಗುಣವನ್ನೂ ಕನ್ನಡಿಗರು ಅಳವಡಿಸಿಕೊಂಡು, ನೃಪತುಂಗ ಕವಿಯು ಹಾಡಿದಂತೆ—

ಸುಭಟರ್ಕಳ್, ಕವಿಗಳ್, ಸು-
ಪ್ರಭುಗಳ್, ಚೆಲ್ವರ್ಕಳಭಿಜನರ್ಕಳ್, ಗುಣಿಗಳ್, ||
ಅಭಿಮಾನಿಗಳತ್ಯುಗ್ರರ್, |
ಗಭೀರಚಿತ್ತರ್, ವಿವೇಕಿಗಳ್, ನಾಡವರ್ಗಳ್ ||

ಆಗುವ ವರೆಗೆ, ಎಂದೆಂದಿಗೂ ಎಳೆಯ ಸಂಸ್ಥೆಯಾದ ಧಾರವಾಡದ ಟ್ರೇನಿಂಗ್ ಕಾಲೇಜಿಗೆ ವಿಶ್ರಾಂತಿಯೆಲ್ಲಿ? ಇಂಥ ಶತಮಾನೋತ್ಸವಗಳನ್ನು ಹಲವು ಸಾರೆ ಮಾಡಿಸಿಕೊಳ್ಳುವ ನಿತ್ಯತಾರುಣ್ಯವು ಅದಕ್ಕುಂಟಾಗಲಿ.

ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಕೆಲವು ಸವಿನೆನಪುಗಳು

ಲೇಖಕರು : **ಶ್ರೀ ಆರ್. ಕೆ. ನಾಯಕ,** ರಿ. ಎ. ಓ. ಅಂಕೋಲೆ.

ಮಹಾಸಂಸ್ಥೆ

ಸುಮಾರು ನಾಲ್ವತ್ತು ವರ್ಷಗಳ ಹಿಂದಿನ ಮಾತು. ಆಗಿನ ಗಂಡು ಮಕ್ಕಳ ಟ್ರೇನಿಂಗ ಕಾಲೇಜು ಒಂದು ಮಹಾಸಂಸ್ಥೆಯಾಗಿತ್ತು. ಮುನ್ನೂರಕ್ಕಿಂತ ಹೆಚ್ಚು ವಿದ್ಯಾರ್ಥಿಗಳ ಊಟ, ವಸತಿ, ಶಿಕ್ಷಣ ಇವೆಲ್ಲವೂ ಅಲ್ಲಿಯೇ ನಡೆಯಬೇಕು. ಗಣಿತ, ಭಾಷೆ, ಬರೆಹ ಇವೇ ಮೊದಲಾದ ಸಾಮಾನ್ಯ ವಿಷಯಗಳಲ್ಲದೆ ನೇಚರ್‌ಸ್ಟಡಿ, ಡ್ರಾಯಿಂಗ, ಗಾಯನ, ಸ್ಲಾಯ್ಡ, ತಾಲೀಮು ಮುಂತಾದ ಹಲವು ಶಾಖೆಗಳಿದ್ದುವು. ಸುಮಾರು ಹತ್ತು ಎಕರೆಗಿಂತ ಹೆಚ್ಚು ಸ್ಥಳವನ್ನು ವ್ಯಾಪಿಸಿರುವ ಈ ಸಂಸ್ಥೆಗೆ ಅನೇಕ ಉತ್ತಮವಾದ ಇಮಾರತಿಗಳ ಸೌಕರ್ಯವಿತ್ತು. ತಾಲೀಮಖಾನೆ, ಮ್ಯೂಝಿಯಮ್, ಕಾಲೇಜ ಕಟ್ಟಡ, ಜನರಲ್ ಹಾಲ್, ವ್ಹಾಯ್ಸ್ ಪ್ರಿನ್ಸಿಪಾಲರ ಮನೆ, ಪ್ರಿನ್ಸಿಪಾಲರ ಮನೆ, ಪ್ರ್ಯಾಕ್ಟಿಸಿಂಗ್ ಸ್ಕೂಲ್, ಡ್ರಾಯಿಂಗ ಹಾಲ್, ಸ್ಲಾಯ್ಡ ಹಾಲ್, ಬ್ರಾಹ್ಮಣರ ಊಟದ ಮನೆ, ಲಿಂಗಾಯತರ ಊಟದ ಮನೆ, ಮುಸಲ್ಮಾನರ ಊಟದ ಮನೆ, ಎರಡೆರಡು ಅಂತಸ್ತಿನ ಮೂರು ವಿದ್ಯಾರ್ಥಿಗಳ ಸಾಲುಗಳು, ಕಾಮಾಟಿ ಜನರ ಗುಡಿಸಲುಗಳು, ಸ್ನಾನದ ಮನೆಗಳು, ಮುಂತಾದ ಅನೇಕ ಇಮಾರತಿಗಳಿಂದ ಕಾಲೇಜಿಗೆ ಭವ್ಯವಾದ ಕಳೆಯಿತ್ತು. ಕಾಲೇಜ ಕಟ್ಟಡವಂತೂ ಶಿಕ್ಷಣ ತತ್ವಗಳ ಪ್ರತಿಬಿಂಬದಂತಿದೆ. (೧) ಬೆಳಕು ಸಾಕಷ್ಟು ಬರಬೇಕು. ಹಾಗು ಅದು ವಿದ್ಯಾರ್ಥಿಯ ಎಡಬದಿಯಿಂದ ಬರಬೇಕು. (೨) ಹವೆಯು ಸಾಕಷ್ಟು ಇರಬೇಕು. (೩) ಮಾತಾಡಿದ್ದು ಪ್ರತಿಧ್ವನಿಯಿಂದ ಅಸ್ಪಷ್ಟವಾಗಕೂಡದು ಇವೇ ಮೊದಲಾದ ತತ್ವಗಳಿಗೆ ಅನುಸಾರವಾಗಿ ಕಟ್ಟಿದ್ದಿರುವದರಿಂದ ಅನೇಕ ಶಿಕ್ಷಣ ತಜ್ಞರು ಅದನ್ನು ನೋಡಿ ಸಮಾಧಾನ ಪಟ್ಟಿರುವರು. ಈ ಇಮಾರತಿಯನ್ನು ಈ ರೀತಿ ಕಟ್ಟಿಸಿದ ಶ್ರೇಯಸ್ಸು ಆಗಿನ ಪ್ರಿನ್ಸಿಪಾಲರಾಗಿದ್ದ ದಿ. ಜೋಶಿಯವರಿಗೆ ಸಲ್ಲುವದು.

ಆಗಿನ ಕಾಲದಲ್ಲಿ ಮುಂಬಯಿ ಕರ್ನಾಟಕದ ನಾಲ್ಕು ಜಿಲ್ಲೆಗಳಿಗೆ ಕೂಡಿ ಒಂದೇ ಒಂದು ಟ್ರೇನಿಂಗ ಕಾಲೇಜು ಇದ್ದದರಿಂದ ಅದಕ್ಕೆ ಬಹಳ ಮಹತ್ವವಿತ್ತು. ಯಾವ ಶಿಕ್ಷಕರನ್ನು ಕೇಳಿಕೊಂಡರೂ ಡಿಪಾರ್ಟಮೆಂಟು ಅಲ್ಲಗಳೆಯುತ್ತಿರಲಿಲ್ಲ. ದುಡ್ಡಿನ ವಿಷಯವೂ ಹಾಗೆಯೇ. ಇದಕ್ಕೆ ಬಹುಶಃ ಪ್ರಿನ್ಸಿಪಾಲರ ವರ್ಚಸ್ಸೂ ಕಾರಣವಿರಬಹುದು. ಮುಂದೆ ಈ ವಿಶಿಷ್ಟ ಗೌರವವು ಕಡಿಮೆಯಾಗುತ್ತ ಬಂದು ಸಾಮಾನ್ಯ ದರ್ಜೆಗೆ ಇಳಿಯಿತೆನ್ನಬಹುದು.

ನಾನೆಂದೂ ಮರೆಯದ ನನ್ನ ಮೊದಲಿನ ಪಾಠ

ನಾನು ಈ ಕಾಲೇಜನ್ನು ಹೊಸದಾಗಿ ಸೇರಿದ್ದು ೧೯೧೫ನೆಯ ಜನವರಿ ತಿಂಗಳಲ್ಲಿ. ಮೊದಲನೆಯ ಮಹಾ

ಯುದ್ಧವು ಆರಂಭವಾಗಿ ಆರು ತಿಂಗಳು ಉರುಳಿದ್ದವು. ಯುದ್ಧದ ಸುದ್ದಿಯೇ ಆಗಿನ ಮಹತ್ವದ ಸುದ್ದಿ. ಟಾರ್ಪೆಡೋ, ಸಬಮರೀನ ಹಡಗಗಳು, ಅಜೇಯವಾದ ಆಂಟ್‌ವರ್ಪ್ ಕೋಟೆಯನ್ನು ವಶಪಡಿಸಿಕೊಂಡ ಜರ್ಮನ್ ಹೊವಿಟ್ಝರ್‌ಗಳು, ವಿಮಾನಗಳು, ಇವೇ ಮೊದಲಾದ ಯುದ್ಧೋಪಕರಣಗಳ ಸುದ್ದಿಗಳಿಂದ ವರ್ತಮಾನ ಪತ್ರಗಳು ತುಂಬಿರುತ್ತಿದ್ದವು. ಟ್ರೇನಿಂಗ ಕಾಲೇಜಿನಲ್ಲಿ ಆಗ ಒಂದು ವಿಶಿಷ್ಟ ಯೋಜನೆಯಿತ್ತು. ವಿದ್ಯಾರ್ಥಿಗಳ ಜ್ಞಾನ ವಿಕಾಸಕ್ಕಾಗಿ **ಕಲ್ಚರ್ ಲೆಸನ್** ನಡೆಯುತ್ತಿತ್ತು. ತಿಂಗಳಿಗೊಮ್ಮೆ ಈ ಭಾಷಣಗಳು ಅವರವರೇ ಆರಿಸಿಕೊಂಡ ವಿಷಯಗಳ ಮೇಲೆ ಪಾಳಿ ಪ್ರಕಾರ ನಡೆಯುತ್ತಿದ್ದವು. ಅಲ್ಲಿಯ ನುರಿತ ಹಳೆಯ ಶಿಕ್ಷಕರಿಗೆ ಈ ವಿಷಯವನ್ನು ಸಾಗಿಸುವದು ಕಠಿಣ ಮಾತಾಗಿರಲಿಲ್ಲ. ನನ್ನಂಥ ಹೊಸಬರಿಗೆ ೩೦೦ಕ್ಕಿಂತ ಹೆಚ್ಚು ವಿದ್ಯಾರ್ಥಿ ಶಿಕ್ಷಕರ ಮುಂದೆ ೨೫-೩೦ ಕಾಲೇಜದ ಹಾಗು ಪ್ರ್ಯಾಕ್ಟಿಸಿಂಗ ಸ್ಕೂಲಿನ ಶಿಕ್ಷಕರ ಮುಂದೆ ವ್ಯಾಖ್ಯಾನ ಮಾಡುವ ವಿಚಾರವು ಅಧೈರ್ಯವನ್ನುಂಟು ಮಾಡುವದು ಸಹಜವು. ಉಪಾಯವಿಲ್ಲದ ಮಾತು. ಎಲ್ಲರಿಗೂ ಹೊಸದಾಗಿದ್ದ ಹಾಗೂ ಎಲ್ಲರಿಗೂ ತಿಳಿದುಕೊಳ್ಳಬೇಕೆಂಬ ಲವಲವಿಕೆಯಿರುವ **ಆಕಾಶಯಾನ** ಎಂಬ ವಿಷಯವನ್ನು ಆರಿಸಿಕೊಂಡೆನು. ಅದರ ಸಲುವಾಗಿ ಆಗ ಉಪಲಬ್ಧವಿರುವ ಹಲವು ಪುಸ್ತಕಗಳನ್ನು ತರಿಸಿ ಆ ವಿಷಯವನ್ನು ಹಸ್ತಗತ ಮಾಡಿಕೊಂಡೆನು. ವಿಷಯವು ಹೆಚ್ಚು ಹೆಚ್ಚು ತಿಳಿದಂತೆ ಅಧೈರ್ಯವು ಕಡಿಮೆಯಾಯಿತು. ವಿಮಾನದ ಮಾಡೆಲ್ (ಮಾದರಿ) ಒಂದನ್ನು ತಯಾರಿಸಿ ಬಿದಿರು ಕಡ್ಡಿಗಳಿಂದಲೂ, ಕಾಗದದಿಂದಲೂ ವಿಮಾನದ ಶರೀರ ಭಾಗವನ್ನು ತಯಾರಿಸಿಕೊಂಡು ಎಂಜಿನದ ಸಲುವಾಗಿ ಹಳೆಯ ಗಡಿಯಾರವನ್ನು ಕೂಡ್ರಿಸಿ ಆಧಾರಕ್ಕೆ ಮೂರು ಗಾಲಿಗಳನ್ನು ಹಚ್ಚಿ ಗಡಿಯಾರದ ನಡುವಿನ ಮೊಳೆಗೆ ಪ್ರೊಪೆಲರ್ (ಪಂಖಾ) ಜೋಡಿಸಿದೆನು. ಮಾಡೆಲ್ ತಯಾರಾದ ಬಳಿಕ ಹೆಚ್ಚಿನ ಮಾತಿನ ಅವಶ್ಯಕತೆಯಿಲ್ಲ. ಮಾಡೆಲ್‌ನ್ನು ನುಣುಪಾದ ಹಲಿಗೆಯ ಮೇಲಿಟ್ಟು ಕೀಲಿಕೊಟ್ಟ ಕೂಡಲೇ ವಿಮಾನವು ಸರಿಯಹತ್ತಿತು; ಗೆದ್ದಂತಾಯಿತು. ಹೆಚ್ಚು ಹೆಚ್ಚು ವೇಗದಿಂದ ನೆಲದ ಮೇಲೆ ಚಲಿಸಿದ ಬಳಿಕ ಅಂತರಿಕ್ಷದಲ್ಲಿ ಹಾರುವದೆಂಬ ಕಲ್ಪನೆ ಮಾಡಬಹುದೆಂದು ಹೇಳಿದೆನು. ಒಂದು ವಿಷಯದ ಬಗ್ಗೆ ನಾನು ಆಗ ಹೇಳಿದ ಮಾತು ನನಗೆ ಇನ್ನೂ ನೆನಪಿನಲ್ಲಿದೆ. ಅದೆಂದರೆ ವಿಮಾನದ ವೇಗಕ್ಕೆ ಸಂಬಂಧಿಸಿದ್ದು. ವಿಮಾನಗಳು ಸಾಮಾನ್ಯವಾಗಿ ತಾಸಿಗೆ ೧೦೦ ರಿಂದ ೧೫೦ ಮೈಲುಗಳವರೆಗೆ ಚಲಿಸಬಹುದೆಂದೂ ಪರಮಾವಧಿ ವೇಗವು ೨೦೦ಕ್ಕೆ ಮಿಕ್ಕಲಾರದೆಂದು ಗಣಿತಜ್ಞರೂ ವಿಮಾನ ಸಂಶೋಧಕರೂ ಲೆಕ್ಕ ಹಾಕಿರುವರೆಂದೂ ಹೇಳಿದ್ದು ನನಗೆ ಚೆನ್ನಾಗಿ ನೆನಪಿನಲ್ಲಿದೆ. ಪುಸ್ತಕಗಳ ಆಧಾರದಿಂದ ನಾನು ಹೇಳಿದ್ದರಿಂದ ನಾನು ತಪ್ಪುಗಾರನಲ್ಲವೆಂದು ಹೇಳಬಹುದು. ಈಗ ಅಂದರೆ ೪೦ ವರ್ಷಗಳ ಸಂಶೋಧನೆಯಿಂದ ಧ್ವನಿಯ ವೇಗಕ್ಕಿಂತ ಅಂದರೆ ತಾಸಿಗೆ ೭೫೦ ಮೈಲಿಗಿಂತ ಹೆಚ್ಚು ವೇಗದಿಂದ ನಡೆಯುವ (ಸುಪರ್ ಸಾನಿಕ್) ವಿಮಾನುಗಳು ಅಪರೂಪವಾಗಿಲ್ಲ. ಅಷ್ಟೇ ಅಲ್ಲ, ತಾಸಿಗೆ ೧೯೦೦ ಮೈಲಿನ ವೇಗದಿಂದ ಮನುಷ್ಯನು ನಡೆಸಿದ ವಿಮಾನಗಳ ಸುದ್ದಿ ಬಂದಿದೆ. ಇದೇ ತಿಂಗಳ ಅಂದರೆ ೧೯೫೭ ಅಕ್ಟೋಬರ ೫ನೇ ತಾರೀಕಿನ ದಿನ ರಶಿಯನ್ನರು ಹಾರಿಸಿದ ಕೃತ್ರಿಮ ಚಂದ್ರನ ವೇಗವು ತಾಸಿಗೆ ೧೮೦೦೦ ಮೈಲು ಅಥವಾ ಸೇಕಂದಿಗೆ ೫ ಮೈಲು ಇರುವದಂತೆ!

ಇದೇ ವಿಷಯವನ್ನು ಶ್ರೀಮಾನ್ ಆರ್. ಎಮ್. ಮಹಿಷಿಯವರು ಊರ ಪ್ರಮುಖ ವಿದ್ವಾಂಸರ ಸಲುವಾಗಿ ಏರ್ಪಡಿಸಿದ್ದ ಒಂದು ಸಭೆಯಲ್ಲಿ ಹೇಳಿದರು. ಆ ಕಾಲಕ್ಕೆ ಹೆಚ್ಚು ಸೂಕ್ಷ್ಮವೂ ಚೆಂದವೂ ಆದ ಮಾಡೆಲನ್ನು ನಾನೇ ತಯಾರಿಸಿ ಕೊಟ್ಟಿದ್ದೆನು. ಅವರು ತಮ್ಮ ಭಾಷಣವನ್ನು ಇಂಗ್ಲಿಷಿನಲ್ಲಿ ನಡೆಸಿದ್ದರು.

* * *

ನಾಡ ನಂದಾದೀಪ ಬೆಳಗುತಿದೆ

— ೧ —

ಇದೊ ನೋಡು ಇಲ್ಲಿ ನಲ್ಗನ್ನಡದ ಚತುರ್ದ್ದಳ.
ಧಾರವಾಡ, ಕಾರವಾರ, ಬೆಳಗಾವಿ, ವಿಜಾಪುರ.
ಕನ್ನಡಾಂಬೆಯ ಮುಡಿಯು ಮೊಗ್ಗು ಅರಳಿರುವಲರ-
ತುಂಬ ಸೌಗಂಧವನು ಹೊತ್ತು ಬೀರಿಹ ಕಂಪು;
ಚೆಲುವಾಗಿ, ಗೆಲುವಾಗಿ ಮೇಣ್ ಪ್ರಫುಲ್ಲಿತವಾಗಿ,'
ಸೂರ್ಯಕಾಂತಿಯವೋಲ್ ತನ್ನ ಕಾಂತಿಯ ಬೆಳಗಿ-
ಹೊರನಾಡಲುಳಿದರೂ ತನ್ನತನದಿಂ ತೊಳಗಿ-
ತನ್ನಬ್ಬೆ ಮುಕುಟದೊಳು ಅಂದು ಶೋಭಿಸಿತಿಂತು.
ಧಾರವಾಡವು ನಮ್ಮ ಸಂಸ್ಕೃತಿಯ ಮಾಜನನಿ
ಈ ಚತುರ್ದ್ದಳ ಪುಷ್ಪದೊಳು ತಾನೊಂದು ದಳವಾಗಿ-
ಮೇಣ್ ತಾನೆಯೇ ಅದರ ಸರ್ವಸ್ವವೂ ಆಗಿ
ಪೋಷಿಸಿದಳಮ್ಮ ಹಲವು ವಿಧದಿ ಜೀವ ತೆಯ್ದು.
ಕನ್ನಡದ ನಾಡ-ನುಡಿ ಹೊಗರೇರಿ ಬೆಳಗಲಿಕೆ
ಬಹುಕಾಲದಿಂದವಳು ತಪಿಸಿದಳು ಒಕ್ಕೈಲಕೆ!

— ೨ —

ನೂರು ವರುಷದ ಹಿಂದೆ ಧಾರವಾಡದ ತಾಯಿ,
ಕನ್ನಡದ ಉದ್ಧಾರಕಾಗಿ ತೊಟ್ಟಳು ದೀಕ್ಷೆ.
ಅವಳ ಕಣ್ಣೆದುರಿನಲಿ ಕಂಡಿತಂದೆಯೆ ಹೊಸನಕ್ಷೆ!
ಇಲ್ಲೆಲ್ಲ ನಮ್ಮ ಜನ, ಕನ್ನಡದ ಮಕ್ಕಳಿಗೆ
ತಾಯ್ನುಡಿಯ ಇನಿವಾತ ಕಲಿಸುವಲಿ ಚ್ಯುತರಾಗಿ-
ಬಾಳುತಿರುವದು ಕಂಡು ಮಮ್ಮಲನೆ ಮರುಮರುಗಿ
ತನ್ನ ವರಪುತ್ರರಲಿ ಹೊಸಚೈತನ್ಯವನೆ ತುಂಬಿ
ಮೊದಲಲ್ಲಿ ನಡೆಸಿದಳು ಗುರುಕುಲದ ತರಬೇತಿ.
ನಾಡ ನಾಲ್ದೆಸೆಯಿಂದ ಬಂದ ಗುರುವರ್ಗವದು.
ನಾಡ-ನುಡಿ ಸೇವೆಯಲಿ ಹೊಸದೀಕ್ಷೆ ಪಡೆದು;
ಹಚ್ಚಿದರು ಕನ್ನಡಿಗರೆದೆಯಲ್ಲಿ ಹೊಂದೀಪ!
‘ಅಖಂಡ ಕರ್ನಾಟಕ’ದ ಬಹುದಿನದ ಸಂಕಲ್ಪ.
ಹೃದಯಂತರಾಳದಲಿ ಅವಿತಂಥ ಸವಿಕಲ್ಪ,
ಕಿರಿಯರಲಿ, ಹಿರಿಯರಲಿ, ಆಯ್ತುದವು ಜಾಗ್ರತ!!

— ೩ —

ಹಳ್ಳಿ-ಹಳ್ಳಿಗೂ ಅಲ್ಲಿ ಪ್ರತಿಯೊಂದು ಮನೆಗೂ
ಇಂದು ತಲುಪುತ್ತಲಿದೆ ಜೀವನದ ಶಿಕ್ಷಣವು
ಒಂದೊಂದೆ ಮಜಲುಮಜಲಾಗಿ ಸಾಗಿಹುದು ಗತಿಯು.
ಬಾಳುವೆಗೆ ಬಂದಿಹುದು ನವಚೈತ್ಯ ಧೃತಿಯು,
ಎಲ್ಲೆಡೆಗು ಇಹರು ತರಬೇತಿಯನು ಹೊಂದಿರುವ
ನವಸಮಾಜನ ರಸಚಿಬಲ್ಲಂಥ ಶಿಕ್ಷಕರು-
ಅವರ ತರಬೇತಿಗಾಗಿ ಇಹ ಹಲ ಕೇಂದ್ರಗಳು
(ಧಾರವಾಡ ಸ್ಥಳಪ್ರತಿಯ ಉಪಪ್ರತಿಗಳು)
ಸಿಂಪಿ ಲಿಂಗಣ್ಣವರು, ಮಿರ್ಜಿ ಅಣ್ಣಾರಾಯ
ತಂತುಪುರದೀ ಗುಡಿಗೆ ಹೊಂಗಳಸವಿಟ್ಟಿಹರು.
ಅವರ ಆದರ್ಶದಲಿ ಸಂಸ್ಕೃತಿಯ ಸುಜ್ಯೋತಿ
ನಾಡ ತುಂಬೆಲ್ಲೆಡೆಗೆ ಹೊಸಕಾಂತಿ ಬೀರಿಹುದು.
ತೆರೆಮರೆಯಲಿನ್ನು ಇಹರೆಷ್ಟೋ ಪ್ರಭೆಯಾಂತು.
ನಾಡ-ನಂದಾದೀಪ ಬೆಳಗುತಿದೆ ಅಂತಿಂತು.

—**ಗುರುಲಿಂಗ ಕಾಪಸೆ**, ಜಮಖಂಡಿ

ಸ್ಮೃತಿ ಸುಮನೋಂಜಲಿ

ಲೇಖಕರು : **ಶ್ರೀ ಜಿ. ಕೆ. ಕೊಪ್ಪೀಕರ,** ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್.ಈಡಿ.
ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ಧಾರವಾಡ.

೧೯೩೫ನೆಯ ಜೂನ ತಿಂಗಳ ಮೊದಲನೆಯ ವಾರ. ಮುಂಬಾಪುರಿಯಲ್ಲಿ ನಾನು ನನ್ನ ಸ್ನಾತಕೋತ್ತರ ತರಬೇತಿ ಸಂಸ್ಥೆಯಲ್ಲಿ ನನ್ನ ಶಿಕ್ಷಾವಿಧಿಯನ್ನು ಮುಗಿಸಿಕೊಂಡು ಅದೇ ತಾನೆ ಹೊರಬಿದ್ದು ಬಂದಿದ್ದೆನು. ಆ ಸಮಯದಲ್ಲಿ ಸರಕಾರಿ ಕನ್ನಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜಿಗೆ ಉಪ-ಶಿಕ್ಷಕನೆಂದು ನನ್ನನ್ನು ವರ್ಗಾಯಿಸಿದ ಸುದ್ದಿ ಬಂದಿತು. ಅಂದಿನಿಂದಲೇ ಈ ಬೃಹತ್ ಸಂಸ್ಥೆಯ ಕೂಡ ನನ್ನ ಸಂಬಂಧವು ಪ್ರಾರಂಭವಾದುದು. ತರಬೇತಿ ಸಂಸ್ಥೆಯಿಂದ ಅದೇ ತಾನೆ ಹೊರಬಿದ್ದು ಬಂದುದರಿಂದ ನನ್ನ ಉತ್ಸಾಹವು ಅಮಿತವಾಗಿದ್ದಿತು. ಸಂಸ್ಥೆಯಲ್ಲಿ ಅಧ್ಯಯನ ಮಾಡಿದ ತತ್ವಗಳನ್ನು, ತಿಳಿದುಕೊಂಡ ಪದ್ಧತಿಗಳನ್ನು, ಪಡೆದುಕೊಂಡ ಅನುಭವಗಳನ್ನು, ಮೈಗೂಡಿಸಿಕೊಂಡ ವಿಚಾರಗಳನ್ನು ಕೃತಿಯಲ್ಲಿಳಿಸಲು ಅತ್ಯಂತ ಕುತೂಹಲಿಯಾಗಿದ್ದೆನು. ಆ ಕಾಲದಲ್ಲಿ ಮುಖ್ಯಾಧ್ಯಾಪಕರಾದ ಶ್ರೀಯುತ ಮುಗಡಾಳರು ನನ್ನ ವಿಚಾರಧಾರೆಗಳನ್ನು ಕೃತಿಗಿಳಿಸಲು ಸಾಕಷ್ಟು ಅನುವು ಮಾಡಿಕೊಟ್ಟರು. ವಿಜ್ಞಾನ ವಿಷಯದ ಶಿಕ್ಷಕನು ನಾನಾದುದರಿಂದ ಕಾಯಕಕ್ಕೆ ಸಾಕಷ್ಟು ಅನುವೂ ಇದ್ದಿತು. ಹೊಸ ಅಭ್ಯಾಸ ಪತ್ರಿಕೆಯು ಅದೀಗ ಬಳಿಕೆಯಲ್ಲಿ ಬಂದಿದ್ದಿತು; ೩ನೆಯ ವರುಷದ ವರ್ಗವೊಂದು ಪುನಃ ಆಗ ತಾನೇ ಪ್ರಾರಂಭವಾಗಿದ್ದಿತು. ೩ನೆಯ ವರುಷಕ್ಕಾಗಿ ನಿಯಮಿತವಾದ ವಿಜ್ಞಾನ ವಿಷಯದ ಅಭ್ಯಾಸವು ಆಗಿನ ಮ್ಯಾಟ್ರಿಕ್ ವರ್ಗದ ವಿದ್ಯಾರ್ಥಿಗಳ ಭೌತ-ಶಾಸ್ತ್ರ ರಸಾಯನ ಶಾಸ್ತ್ರಗಳ ಅಭ್ಯಾಸ ಕ್ರಮದಷ್ಟೇ ಇದ್ದಿತು. ನಿತ್ಯ ನೈಮಿತ್ತಿಕವಾಗಿ ಸಾಮಾನ್ಯಜ್ಞಾನವು ಒಂದು ಹಾಗು ಎರಡನೆಯ ವರುಷಗಳಿಗಾಗಿ ಇದ್ದಿತು. ಆ ಸಮಯದಲ್ಲಿ ಈ ಸಂಸ್ಥೆಗೊಂದು ಪ್ರತ್ಯೇಕವಾದ ಪ್ರಯೋಗಾಲಯವಿದ್ದಿರಲಿಲ್ಲ. ಶಿಕ್ಷಕ ವಿದ್ಯಾರ್ಥಿಗಳು ತಮ್ಮ ಪ್ರಯೋಗಕ್ಕಾಗಿ ನೆರೆಯಲ್ಲಿರುವ ಧಾರವಾಡ ಹೈಸ್ಕೂಲಿನ (ಈಗಿನ ಎ. ಕೆ. ಗರ್ಲ್ಸ ಹೈಸ್ಕೂಲ) ಪ್ರಯೋಗಾಲಯಕ್ಕೆ ತೆರಳಬೇಕಾಗುತ್ತಿದ್ದಿತು. ವಿಷಯವನ್ನು ಕನ್ನಡದಲ್ಲಿ ಕಲಿಸಬೇಕಾಗುತ್ತಿದ್ದಿತು. ಆ ಸಮಯದಲ್ಲಿ ಕನ್ನಡದಲ್ಲಿ ಶಾಸ್ತ್ರೀಯ ವಿಷಯವನ್ನು ಕುರಿತು ಬರೆದ ಪುಸ್ತಕಗಳ ಅಭಾವವಿದ್ದಿತು. ಹಾಗು ಮಾಧ್ಯಮಿಕ ಶಾಲೆಗಳಲ್ಲಿ ಬೋಧನ ಭಾಷೆಯು ಇಂಗ್ಲೀಷ ಭಾಷೆಯಾಗಿದ್ದಿತು. ಹೀಗಾಗಿ ಪ್ರಾಥಮಿಕ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ವಿಜ್ಞಾನ ಮೊದಲಾದ ಶಾಸ್ತ್ರೀಯ ವಿಷಯಗಳನ್ನು ಕನ್ನಡದಲ್ಲಿ ಕಲಿಸುವುದು, ಪಾರಿಭಾಷಿಕ ಶಬ್ದಗಳನ್ನು ಉಚಿತ ಕನ್ನಡ ಪದಗಳಲ್ಲಿ ತಿಳಿಸುವುದು ಆ ಕಾಲದ ಶಿಕ್ಷಕರಿಗೆ ಒಂದು ಸಮಸ್ಯೆಯೇ ಆಗಿದ್ದಿತು. ಅಲ್ಲದೆ ಮ್ಯಾಟ್ರಿಕ್ ವರ್ಗದ ವಿದ್ಯಾರ್ಥಿಗಳು ಭೌತಶಾಸ್ತ್ರ ಹಾಗು ರಸಾಯನ ಶಾಸ್ತ್ರಗಳಲ್ಲಿ ನೆರವೇರಿಸಬೇಕಾದ ಎಲ್ಲ ಪ್ರಯೋಗಗಳನ್ನೂ ಶಿಕ್ಷಕ ವಿದ್ಯಾರ್ಥಿಗಳು ಮಾಡಬೇಕಾಗುತ್ತಿದ್ದಿತು.

೧ನೆಯ ಹಾಗು ೨ನೆಯ ವರುಷಗಳ ಪಠ್ಯ ವಿಭಾಗದಲ್ಲಿ ಸಸ್ಯಶಾಸ್ತ್ರ, ಪ್ರಾಣಿಶಾಸ್ತ್ರ, ಹಾಗು ಸಾಕಷ್ಟು ಭೌತಶಾಸ್ತ್ರಗಳ ಸಮಾವೇಶವಿದ್ದಿತು. ಅದೇ ವರುಷ, ಪ್ರಧಾನಾಧ್ಯಾಪಕರಾದ ಶ್ರೀಯುತ ಮುಗಡಾಳರ ಉತ್ತೇಜನದಿಂದ ಒಂದು ನವೀನ ವಿಜ್ಞಾನ ವಿಭಾಗದ, ವಸ್ತು ಸಂಗ್ರಹಾಲಯದ ಉಗಮವಾಯಿತು. ಒಂದು ಚಿಕ್ಕ ಪ್ರದರ್ಶನಾಲಯವು ಹಾಗು ವಾಚನಾಲಯವು ಸಿದ್ಧವಾದವು. ಈ ಶಿಶುಪ್ರಯೋಗಾಲಯದ ಪುರೋಭಿವೃದ್ಧಿಗಾಗಿ ಶ್ರೀಯುತ ಮುಗಡಾಳರು ವೈಯಕ್ತಿಕ ಅಭಿರುಚಿಯನ್ನು ತಳೆದಿದ್ದರು. ಹಳೆಯದಾದ ಆ ಸಂಸ್ಥೆಯಲ್ಲಿ, ವಾಯು ಭಾರಮಾಪಕ ಯಂತ್ರ, ವೃಷ್ಟಿಮಾಪನ ಯಂತ್ರ, ದೂರದರ್ಶಕ ಯಂತ್ರ, ಆರ್ದ್ರತಾಮಾಪಕ ಯಂತ್ರ, ವಾಯುವೇಗ ಮಾಪಕಯಂತ್ರ ಮುಂತಾದ ಕೆಲ ಒಳ್ಳೇ ವಿಜ್ಞಾನ ಸಾಧನಗಳಿದ್ದವು. ಅವೆಲ್ಲವುಗಳೂ ಅತ್ಯಂತ ಸುಂದರವಾದ ಈ ಸಂಸ್ಥೆಯ ಕಟ್ಟಡದ ಮೇಲ್ಛಾವಣಿಯ ಕೋಣೆಯಲ್ಲಿ ಇಡಲ್ಪಟ್ಟವು. ಶಿಕ್ಷಕ ವಿದ್ಯಾರ್ಥಿಗಳು ಬೇರೆ ಬೇರೆ ವಿಜ್ಞಾನ ಸಾಧನಗಳ ಗುರುತುಗಳನ್ನು ಓದಿ ಟಿಪ್ಪಣಿಗಳನ್ನು ನಮೂದಿಸಿಡಬೇಕಾಗುತ್ತಿತ್ತಲ್ಲದೆ, ಹವಾಮಾನದ ರೇಖಾ ಚಿತ್ರಗಳನ್ನು ತೆಗೆದಿಡಬೇಕಾಗುತ್ತಿದ್ದಿತು.

ಆ ಕಾಲದಲ್ಲಿ ನವರಾತ್ರಿಯ ಸಮಯಕ್ಕೆ ಹಳೆಯ ಮೈಸೂರ ರಾಜ್ಯದ ಪ್ರವಾಸವನ್ನು ಶಿಕ್ಷಕ ವಿದ್ಯಾರ್ಥಿಗಳ ಜೊತೆಗೆ ಕೈಕೊಳ್ಳುವ ಸುಸಂಧಿಯೊಂದು ನನಗೆ ದೊರಕಿದ್ದಿತು. ಕೈಲಾಸವಾಸಿ ಶ್ರೀ ಕಾಳೆ ಶ್ರೀ ಪುರೋಹಿತ, ಹಾಗು

ಪ್ರ್ಯಾಕ್ಟಿಸಿಂಗ ಸ್ಕೂಲಿನ ಗುರುವರ್ಗ



ಶತಾಬ್ದಿ ಸಮಾರಂಭದ ಕಾರ್ಯಕಾರಿ ಮಂಡಲ



“ ಜೀವನ ಶಿಕ್ಷಣ ”ದ ಸಂಪಾದಕ ಮಂಡಲ

ಎಡದಿಂದ ಬಲಕ್ಕೆ— ೧. ಶ್ರೀ ಎಸ್. ಆರ್. ತಟ್ಟಿ, ೨. ಶ್ರೀ ಎಸ್. ಪಿ. ಪಾಟೀಲ, ಪ್ರಿನ್ಸಿಪಾಲ ಹಾಗೂ
ಪ್ರಧಾನ ಸಂಪಾದಕರು, ೩. ಶ್ರೀ ಜಿ. ಕೆ. ಕೊಪ್ಪಿಕರ, ಸಂಚಾಲಕರು, ಹಾಗೂ ಎಜ್ಯುಕೇಶನಲ್
ಇನಸ್ಪೆಕ್ಟರ, ೪. ಶ್ರೀ ಬಿ. ಎಂ. ಶಿಂತ್ರಿ, ೫. ಶ್ರೀಮತಿ ಪಿ. ಎ. ಭಾಸ್ಕರ.

ನಾನು ಹೀಗೆ ಮೂವರು ಶಿಕ್ಷಕ ವಿದ್ಯಾರ್ಥಿಗಳ ಮಾರ್ಗದರ್ಶನಕ್ಕಾಗಿ ಅವರನ್ನು ಬೆಂಬತ್ತಿದೆವು. ನಿತ್ಯದಲ್ಲಿಯೂ ನಮ್ಮ ಪ್ರವಾಸದ ಅನುಭವಗಳನ್ನು ಕುರಿತು ಒಂದು ಕಾಗದವನ್ನು ನಮ್ಮ ಮುಖ್ಯಾಧ್ಯಾಪಕರಿಗೆ ಬರೆಯುವ ಕಾರ್ಯವು ನನ್ನ ಪಾಲಿಗಿದ್ದಿತು. ನಮ್ಮ ಪ್ರವಾಸಕ್ಕಾಗಿ ನಾವೊಂದು ಪ್ರತ್ಯೇಕ ಬಸ್ಸನ್ನೇ ತೆಗೆದುಕೊಂಡಿದ್ದೆವು. ನಾವು ನೋಡುವ ನೋಟಗಳನ್ನು, ನಾವಿರುವ ತಾಣವನ್ನು, ಪಡೆಯುವ ಅನುಭವಗಳನ್ನು ಕಾಗದದಲ್ಲಿ ವರ್ಣಿಸುತ್ತಿದ್ದೆವು. ಆ ಪ್ರವಾಸದಲ್ಲಿಯ ಸೃಷ್ಟಿಸೌಂದರ್ಯದ, ದೃಶ್ಯಗಳ ಸ್ಮೃತಿ ಸುಮನಗಳನ್ನು ನಾನು ಧರಿಸಿಕೊಂಡು ಬಂದೆನಲ್ಲದೆ, ಅಪರೂಪವಾದ ಖನಿಜ ದ್ರವ್ಯಗಳ ಕೆಲ ಮಾದರಿಗಳನ್ನೂ ಜೊತೆಗೆ ಹೊತ್ತುಕೊಂಡು ಬಂದೆನು. ಈ ಖನಿಜ ದ್ರವ್ಯಗಳನ್ನು ಭದ್ರಾವತಿಯಲ್ಲಿಯೂ ಕೋಲಾರ ಚಿನ್ನದ ಗಣಿ ಪ್ರದೇಶದಲ್ಲಿಯೂ ಸಂಗ್ರಹಿಸಲಾಗಿದ್ದಿತು. ಧಾರವಾಡಕ್ಕೆ ಮರಳಿದ ನಂತರ ಶಿಕ್ಷಕ ವಿದ್ಯಾರ್ಥಿಗಳು ತಮ್ಮ ಆ ವಸ್ತು ಸಂಗ್ರಹಾಲಯವನ್ನು ಸುಸಜ್ಜಿತಗೊಳಿಸಲು (ತಂದ ಪದಾರ್ಥಗಳಿಂದ) ತೊಡಗಿದರು. ಇಂದಿನ ನೆಯ್ಗೆಯ ಕೋಣೆಯು ಅಂದು ವಸ್ತು ಸಂಗ್ರಹಾಲಯದ ಕೋಣೆಯಾಗಿದ್ದಿತು. ೩ನೆಯ ವರುಷದ ಶಿಕ್ಷಕ ವಿದ್ಯಾರ್ಥಿಗಳಲ್ಲಿ ಕೆಲವರು ಉಪಕರಣಗಳನ್ನು, ನಕ್ಷೆ ಹಾಗು ಚಿತ್ರಪಟಗಳನ್ನು ಸಿದ್ಧಗೊಳಿಸಿದರು. ಖನಿಜದಿಂದ ಕಬ್ಬಿಣ, ಬಂಗಾರಗಳನ್ನು ಬೇರ್ಪಡಿಸುವ ರಾಸಾಯನಿಕ ಕ್ರಿಯೆಯನ್ನು ದಿಗ್ದರ್ಶಿಸುವದನ್ನು ಕೆಲವರು ತೋರಿಸಿದರು. ಕೆಲವರು ಕನ್ನಂಬಾಡಿ ಶಿವಸಮುದ್ರಗಳಲ್ಲಿ ಕಂಡ ಜಲವಿದ್ಯುದುತ್ಪಾದಕ ಯಂತ್ರಗಳ ಮಾದರಿಗಳನ್ನು ಮಾಡುವದರಲ್ಲಿ ಮಗ್ನರಾದರು.

ಪ್ರಯೋಗ ಶಾಲೆಯ ಒಂದು ವರ್ಗಕ್ಕೆ ನಾನು ಕೊಟ್ಟ ವಾಯುಭಾರಮಾಪಕ ಯಂತ್ರದ ಮಾದರಿಯ ಪಾಠವು ಇನ್ನೂ ನನ್ನ ಸ್ಮೃತಿಪಟಲದಲ್ಲಿ ಅಚ್ಚೊತ್ತಿದಂತೆ ಮೂಡಿದೆ. ಪಾಠಗಳು ಆ ಶಾಲೆಯ ಸಭಾಗೃಹದಲ್ಲಿ ನಡೆಯುತ್ತಿದ್ದವು. ಅಂಥದೇ ಒಂದು ಮಾದರಿಯ ಪಾಠವನ್ನು ನಾನು ಬಾಗಿಲುಕೋಟೆಯಲ್ಲಿ ನೆರವೇರಿದ ಕರ್ನಾಟಕ ಶಿಕ್ಷಣ ಸಪ್ತಾಹದಲ್ಲಿ ಕೊಟ್ಟದ್ದುಂಟು. ಅಂದಿನ ಶಿಕ್ಷಣ ಸಮ್ಮೇಲನವು ಮುಂದಿನವುಗಳಿಗೆ ನಾಂದಿಯಾಯ್ತೆಂದು ಹೇಳಬಹುದು. ೧೯೩೫ನೆಯ ವರುಷದ ಜುಲೈ ಹಾಗು ಡಿಸೆಂಬರ ತಿಂಗಳುಗಳ ಮಧ್ಯದ ಕಾಲಾವಧಿಯಲ್ಲಿ ಪ್ರಕಟಿತವಾದ ಪ್ರಾಥಮಿಕ ಶಿಕ್ಷಣಾಂಕಗಳಲ್ಲಿ ವಾಯುಭಾರಮಾಪಕ ಯಂತ್ರವನ್ನು ಕುರಿತಾದ ಪಾಠದ ಟಿಪ್ಪಣೆಗಳು ಹಾಗು ಡಾಲ್ಟನ್ ಯೋಜನೆಯ ಸ್ವಾಧ್ಯಾಯ ಪದ್ಧತಿಯನ್ನು ಕುರಿತಾದ ನನ್ನ ಲೇಖನಗಳು ಬಂದಿವೆ ಎಂಬ ಅಂಶವನ್ನು ನಾನಿಲ್ಲಿ ಎತ್ತಿ ಹೇಳಬಯಸುತ್ತೇನೆ.

೧ನೆಯ ವರುಷದ ವರ್ಗಗಳಲ್ಲಿ ಬೀಜಗಣಿತವನ್ನು ಕಲಿಸುವದಲ್ಲದೆ ವ್ಯಾವಹಾರಿಕ ಭೂಮಿತಿಯನ್ನು ಪ್ರಯೋಗಾತ್ಮಕವಾಗಿ ಕಲಿಸುವ ಹೊಸ ವಿಚಾರ ಧಾರೆಯು ಆಗಲೇ ಪ್ರಾರಂಭವಾಗಿದ್ದಿತು. ನಕ್ಷೆಯನ್ನು ತೆಗೆದು ಮೋಜಣಿ ಪದ್ಧತಿಯಿಂದ ಕ್ಷೇತ್ರವನ್ನಳೆಯುವ ವಿಧಾನವನ್ನು ಶಿಕ್ಷಕ ವಿದ್ಯಾರ್ಥಿಗಳು ಒಳ್ಳೇ ಕುತೂಹಲಿಗಳಾಗಿ ಆನಂದದಿಂದ ತಿಳಿದುಕೊಳ್ಳಲು ತವಕಿಗಳಾದರು. ಮಧ್ಯಂತರ ದೀರ್ಘರೇಷೆಗೆ ಲಂಬಾಂತರಗಳನ್ನು ಪ್ರತ್ಯಕ್ಷ ಎಳೆದು ಅವುಗಳ ನೆರವಿನಿಂದ ಆಕೃತಿಗಳನ್ನು ಮಾಡಿಸಿದ್ದು ಅವರ ಮನಸ್ಸಿಗೆ ಹಿಡಿಯಿತು. ಮೇರೆಗಳಿಗೆ ಅಲ್ಲಲ್ಲಿ ನಿಶಾನೆಗಳನ್ನು ನಿಲ್ಲಿಸಿ ಉಪಕರಣಗಳಿಂದ ಕೋನಗಳನ್ನು ಅಳೆದು ಹೊಲಗಳ ಅಳತೆ ಮಾಡುವ ಮೋಜಣಿ ಪದ್ಧತಿಯೂ ಕೂಡ ವಿದಿತವಾಯಿತು.

ಪ್ರತ್ಯಕ್ಷ ಪ್ರಯೋಗವು ದೃಢೀಕರಣಕ್ಕೆ ಒಳ್ಳೇ ಸಹಾಯಕವೆಂಬುದು ಆ ಸಂದರ್ಭದಲ್ಲಿ ಮೊದಲ ಬಾರಿಗೆ ಅವರಿಗೆ (ಶಿಕ್ಷಕ ವಿದ್ಯಾರ್ಥಿಗಳಿಗೆ) ಮನದಟ್ಟಾಯಿತು. ಸ್ಕೇಲುಗಳಿಗೆ ಅನುಸರಿಸಿ ಕೋನಗಳನ್ನು ಸಲಕರಣೆಗಳಿಂದ ಅಳೆಯುವ ಪ್ರಯೋಗವೂ ಅವರಿಗೆ ಗೊತ್ತಾಯಿತು. ಉಳಿದ ವಿಷಯಗಳಲ್ಲಿಯಂತೆ, ಗಣಿತ ಹಾಗು ಶಾಸ್ತ್ರೀಯ ವಿಷಯಗಳನ್ನು ಕಲಿಸುವಲ್ಲಿ ಶಿಕ್ಷಕ ವಿದ್ಯಾರ್ಥಿಗಳೇ ಆ ಕಾಲದಲ್ಲಿ ಸಹಾಯಕ ಉಪಕರಣಗಳನ್ನು ತಾವೇ ಸಿದ್ಧಗೊಳಿಸಿಕೊಳ್ಳುತ್ತಿದ್ದರು. ಆ ಕಾಲದಲ್ಲಿ ಯಾವುದೇ ಮೂಲೋದ್ಯೋಗವು ಬಳಕೆಯಲ್ಲಿ ಬಂದಿರದಿದ್ದರೂ ಪ್ರಯೋಗ ಶಾಲೆಯ ಕೆಳಗಿನ ವರ್ಗದ ಮಕ್ಕಳು ಕೈತೋಟಗಾರಿಕೆಯ ಪ್ರತ್ಯಕ್ಷ ಕೆಲಸದಲ್ಲಿ ತೊಡಗಿರುತ್ತಿದ್ದರು. ಅವರ ಅಲ್ಲಿಯ ಆ ದುಡಿಮೆಯ ಅನುಭವವನ್ನು ಕಲಿಸುವ ವಿಧಾನದಲ್ಲಿ ಬಳಸಿಕೊಳ್ಳಲಾಗುತ್ತಿದ್ದಿತು. ಹಾಗು ಸಾಮಾನ್ಯ ಪದ್ಧತಿಯಲ್ಲಿ ನಡೆಯುವ ಒಂದು ಶಾಸ್ತ್ರೀಯ ವಿಷಯದ ಪಾಠವು ಆ ಕಾರ್ಯಕ್ಕೆ ಸಂಬಂಧಿಸಿರುತ್ತಿದ್ದಿತು. ಸಾಕಷ್ಟು ಮಾರ್ಗದರ್ಶನವು ಅವರ ಪಾಠಕ್ರಮದಲ್ಲಿ ಅವರಿಗೆ ಗುರುವರ್ಗದವರಿಂದ ಲಭ್ಯವಾಗುತ್ತಿತ್ತಲ್ಲದೆ, ಅವರಾದರೂ ತಮ್ಮ ಪಾಠಗಳ ಪೂರ್ವಸಿದ್ಧತೆಗಾಗಿ ಸಮಯವನ್ನು ತೆಗೆದುಕೊಂಡು ಶ್ರಮವಹಿಸುತ್ತಿದ್ದರು.

ಅದೇ ವರುಷದಕೊನೆಗೆ ಆಕಸ್ಮಿಕವಾಗಿ ಮುಂಬೈಯಲ್ಲಿರುವ ನೌಕಾದಳದ ತರಬೇತಿ ಶಾಖೆಯಲ್ಲಿ ಕೆಲಸಮಾಡುವ ಪ್ರಸಂಗವೊಂದು ನನಗೆ ಒದಗಿ ಬಂದಿತು. ಆದುದರಿಂದ ಒಮ್ಮೆಲೇ ಈ ಸಂಸ್ಥೆಯ ಜೊತೆಗಿರುವ ನನ್ನ ಸಂಬಂಧವು ಸ್ಥಗಿತವಾಯಿತು. ಆ ಸಪ್ತಮಾಸಗಳ ಅಲ್ಪ ಕಾಲಾವಧಿಯಲ್ಲಿಯೇ ನನಗೆ ಅನೇಕಜನ ಪ್ರಾಥಮಿಕ ಶಿಕ್ಷಕರ ಮಧುರ ಸಂಬಂಧವು ಬಂದಿತು. ಅಂಥವರಲ್ಲಿ ಅನೇಕರು ಇಂದಿಗೂ ಮುಖ್ಯಾಧ್ಯಾಪಕರೆಂದು, ಮೇಲ್ವಿಚಾರಕರೆಂದು, ಉಪಶಿಕ್ಷಣಾಧಿಕಾರಿಗಳೆಂದು ತಮ್ಮ ಸೇವೆ ಸಲ್ಲಿಸುತ್ತಲಿದ್ದಾರೆ; ಹಾಗು ಕೆಲವರು ಸೇವಾ ನಿವೃತ್ತರಾಗಿದ್ದಾರೆ. ನಾನು ಈ ಖಾತೆಯಲ್ಲಿ ಅವಿರತವಾದ ೨೬ ವರುಷಗಳ ಸೇವೆಸಲ್ಲಿಸಿದ್ದರೂ, ಈ ಸಪ್ತಮಾಸಗಳ ಕಾಲಾವಧಿಯನ್ನು ನನ್ನ ಜೀವಮಾನದಲ್ಲಿಯ ಒಂದು ಮರೆಯಲಾಗದ ಅವಧಿಯೆಂದು ಬಗೆದಿದ್ದೇನೆ. ಈ ಪ್ರಬುದ್ಧ ಸಂಸ್ಥೆಯ ಜೊತೆಗಿದ್ದ ನನ್ನ ಸಂಬಂಧವನ್ನು ನಾನು ಯಾವಾಗಲೂ ನನ್ನ ಸುದೈವವೆಂದೇ ಭಾವಿಸುತ್ತ ಬಂದಿದ್ದೇನೆ. ಅಲ್ಲಿ ಸೇವೆ ಸಲ್ಲಿಸುವ, ಆ ಸಂಸ್ಥೆಯು ನಿರ್ಮಿಸಿದ ಒಳ್ಳೇ ಪೂರ್ವಪರಂಪರೆಗಳನ್ನು ಅನುಭವಿಸುವ ಪುಣ್ಯವು ಕೆಲವರಿಗೇ ದೊರೆಯುವದೆಂದು ತಿಳಿದಿದ್ದೇನೆ. ಅವ್ಯಾಹತವಾಗಿ ನಡೆದು ಬಂದಿರುವ ಶಿಕ್ಷಕ ಬಂಧುವರ್ಗಕ್ಕೆ, ಕುಲಪತಿಗಳಿಗೆ ನನ್ನ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಅರ್ಪಿಸ ಬಯಸುತ್ತೇನೆ. ಸಂಸ್ಥೆಯು ಚಿರಂಜೀವಿಯಾಗಲಿ !

* * *

‘ ವಿದ್ಯಾಜನನಿ ’

ಕೈಮುಗಿವೆ ಕೈಮುಗಿವೆ ನಮ್ಮ ವಿದ್ಯಾಜನನಿ
ಜೀವನವ ಪಾವನವ ಗೈದಿರುವ ಜನನಿ
ಪ್ರಾಥಮಿಕ ಶಿಕ್ಷಕರ ಪೂರ್ವಪೀಠಿಕೆಯಾಗಿ
ಶತಮಾನ ಕೃಷಿಗೈದೆ ಕನ್ನಾಡತನಕೆ ||೧||

ನಾಕಂಡ ನಾನುಂಡ ನಡೆಗೊಂಡ ದಿನವೆಲ್ಲ
ಸ್ವಪ್ನಸೃಷ್ಟಿಯ ಸೌಖ್ಯ ಸೌಭಾಗ್ಯ ತಾಯೆ
ಹಿಂದಿನಾ ದಿನ ನೆನೆಯೆ ಹನಿಗಣ್ಣು ಹೊನಲಾಗಿ
ಆಹಹ ಸಂದಿಹವೆಂಬೆ ದಿನಗಳವು ತಾಯೆ ||೨||

ಧಾರವಾಡದಿ ನೆಲಿಸಿ ಕನ್ನಡದ ಸಂಸ್ಕೃತಿಯ
ಧಾರೆಯನು ನೀನೆರೆದೆ ಸಹಸ್ರ ಮುಖವಾಗಿ
ನಿನ್ನಿಂದ ಹೊರಹೊರಟ ಸಹಸ್ರಾರು ಶಿಕ್ಷಕರು
ನಿನ್ನಮಂಗಳ ಪಾಠ ಹಾಡಿ ನುಡಿಸಿದರು ||೩||

ಧಾರವಾಡದ ವಾಯು ಮಾನದಲಿ ಮೊದಲಿಂಗೆ
ನಮ್ಮ ಗತವೈಭವದ ಸ್ಮೃತಿಯ ನೀನಿತ್ತೆ
ಇಂದು ಕನ್ನಡನಾಡು ಒಂದು ಗೂಡಿಹುದೆಂಬೆ
ಹಿಂದಿನಾ ವೈಭವವು ಒಡಮೂಡಲೆಂಬೆ ||೪||

ಇಂದು ಜೀವನ ವಿದ್ಯೆ ಪೀಠ ನೀನಾಗಿರುವೆ
ಜೀವಂತ ಸತ್ವವನು ಕೊಡು ನಾಡ ಜನಕೆ
ಕೈಮುಗಿವೆ ಕೈಮುಗಿವೆ ಪೂಜ್ಯ ವಿದ್ಯಾಜನನಿ
ಜೀವನವ ಸಾರ್ಥಕವ ಗೈಸೆಮಗೆ ಜನನಿ ||೫||

—ಸ. ಶ. ಗಾಂವಕಾರ

ಧಾರವಾಡದ ಸವಿನೆನಪುಗಳು

ಲೇಖಕರು : ನಿವೃತ್ತ ಇನ್ಸಪೆಕ್ಟರ್ **ಶ್ರೀ ಮ. ರಾಮಬ್ರಹ್ಮ**, ಬಿ.ಎ., ಎಲ್.ಟಿ.

ನಾನು ಮುಂಬಯಿ ಪ್ರಾಂತದ ಶಿಕ್ಷಣ ಖಾತೆಯಲ್ಲಿ ಉದ್ಯೋಗ ಮಾಡಿದ ಇಪ್ಪತ್ನಾಲ್ಕುವರೆ ವರ್ಷಗಳ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಧಾರವಾಡದಲ್ಲಿ ಕಳೆದಿದ್ದರಿಂದ, ಆ ಊರಿನ ವಿಷಯದಲ್ಲಿ ಹೆಚ್ಚಿನ ಮಮತೆ ನನಗಿರುವುದು ಸಹಜ.

೧೯೧೫ನೆಯ ಇಸವಿಯ ಸೆಪ್ಟಂಬರ್ ೧ನೆಯ ದಿನಾಂಕ, ನಾನು ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಅಧ್ಯಾಪಕನಾಗಿ ನೇಮಿಸಲ್ಪಟ್ಟೆನು. ಸ್ಕೌಟ್ ಸಂಸ್ಥೆಯ ಪರವಾಗಿ ಕೆಲಸ ಮಾಡಿದ ೨ ವರ್ಷಗಳ (೧೯೨೧—೨೩ರ) ಅವಧಿಯನ್ನು ಬಿಟ್ಟು ೧೯೨೯ರ ಆರಂಭದ ವರೆಗೂ ಧಾರವಾಡದ ಟ್ರೇನಿಂಗ್ ಕಾಲೇಜಿನ ಪ್ರಕೃತಿ ವಿಮರ್ಶೆ ಇಲ್ಲವೆ ಸೃಷ್ಟಿ ನಿರೀಕ್ಷಣ (Nature Study) ಅಧ್ಯಾಪಕನಾಗಿ, ಆ ಕಾಲೇಜಿನೊಂದಿಗೆ ನಿಕಟ ಸಂಬಂಧ ಹೊಂದಿದ್ದೆನು.

ನಾನು ಧಾರವಾಡಕ್ಕೆ ಬಂದಾಗ ಶ್ರೀ ವಿ. ಬಿ. ಜೋಶಿಯವರು ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಟ್ರೇನಿಂಗ್ ಕಾಲೇಜಿನ ಮೂರು ವರ್ಷಗಳ ವಿದ್ಯಾರ್ಥಿಗಳು ಕಲಿಯುತ್ತಿದ್ದ ವಿಷಯಗಳಲ್ಲಿ ಪ್ರಕೃತಿ ವಿಮರ್ಶೆ, ಡ್ರಾಯಿಂಗ್, ಸ್ಲಾಯಿಡ್ (ಮರಗೆಲಸ) ಸೇರಿದ್ದುವು. ಮೊದಲೇ ಹೇಳಿದ ಅಂದರೆ ಡ್ರಾಯಿಂಗ್ ಮತ್ತು ಸ್ಲಾಯಿಡ್ ವಿಷಯಗಳನ್ನು ಕಲಿಸುವ ವ್ಯವಸ್ಥೆ ಮೊದಲಿನಿಂದಲೂ ಇತ್ತು. ಅವುಗಳ ಅಧ್ಯಾಪಕರಾದ, ನನ್ನ ಮಿತ್ರರು ಶ್ರೀ ನೇರ್ಲಿಕರ ಮಾಸ್ತರ ಮತ್ತು ಶ್ರೀ ಪಾಂಡೆ ಮಾಸ್ತರ, ಈಗಲೂ ಧಾರವಾಡದಲ್ಲಿಯೇ ನೆಲಸಿರುತ್ತಾರೆ.

ಆಗ ಕರ್ನಾಟಕ ಕಾಲೇಜು ಇನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ನಮ್ಮ ಟ್ರೇನಿಂಗ ಕಾಲೇಜಿನ ಕಟ್ಟಡಗಳಲ್ಲಿ ಹೊಸದಾಗಿ ನಿರ್ಮಿಸಿದ ಕಟ್ಟಡವು ಬಹಳ ಅಂದವಾಗಿದ್ದು ಅದರ ಮುಂದಿನ ರಸ್ತೆಯಲ್ಲಿ ತಿರುಗಾಡುವವರಿಗೆ ಬಹಳ ಎದ್ದು ಕಾಣುತ್ತಿತ್ತು. ಹೊಸದಾಗಿ ಸೇರಿಸಲ್ಪಟ್ಟ ಪ್ರಕೃತಿ ವಿಮರ್ಶೆಯ ಶಿಕ್ಷಣಕ್ಕೆ ಬೇಕಾದ ತೋಟ, ಸಂಗ್ರಹ ಶಾಲೆ (Museum), ಪಕ್ಷಿಗೃಹ, ಮ್ಯೂಸಿಯಮ್ಮಿನ ಹಿಂಭಾಗದಲ್ಲಿ ಮೊಲ, ಬಿಳಿ ಇಲಿ ಮುಂತಾದ ಪ್ರಾಣಿಗಳು ಇರಲು ಬೇಕಾದ ಜೋಪಡಿಗಳು ಇವೇ ಮೊದಲಾದ ವಸತಿಗಳನ್ನು ಪ್ರಿನ್ಸಿಪಾಲರು ಕೂಡಲೇ ಕಲ್ಪಿಸಿಕೊಟ್ಟರು.

ಇವುಗಳನ್ನು ಸುವ್ಯವಸ್ಥೆಗೆ ತಂದು ಅಭಿವೃದ್ಧಿಗೊಳಿಸುವ ಕೆಲಸ ನನ್ನದಾಗಿದ್ದಿತು. ಶ್ರೀ ಜೋಶಿಯವರು ಪ್ರಿನ್ಸಿಪಾಲರಾಗಿದ್ದ ಕಾಲದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೨೫೦ರಷ್ಟಿದ್ದು, ಕಾಲೇಜಿನ ಶಿಕ್ಷಣವು ಎಲ್ಲರೀತಿಯಿಂದಲೂ ಪ್ರಗತಿಪರವಾಗಿದ್ದಿತು. ಶ್ರೀ ಜೋಶಿಯವರ ನಂತರ ಪ್ರಿನ್ಸಿಪಾಲರಾದ ಶ್ರೀ ಆರ್. ಎಸ್. ಕುಲಕರ್ಣಿಯವರ ಕಾಲದಲ್ಲಿ ಕಾಲೇಜಿನ ಕೀರ್ತಿ ಎಲ್ಲೆಡೆಯೂ ಹಬ್ಬಿತ್ತು.

ಧಾರವಾಡದಲ್ಲಿ ಕರ್ನಾಟಕ ಕಾಲೇಜು ಸ್ಥಾಪಿತವಾಗಿ, ಅದರ ಉಪಯೋಗಕ್ಕಾಗಿ, ಟ್ರೇನಿಂಗ್ ಕಾಲೇಜಿನ ಹೊಸ ಕಟ್ಟಡದ ಹೆಚ್ಚಿನ ಭಾಗವನ್ನು ಬಿಟ್ಟುಕೊಡಬೇಕಾಯಿತು. ಇದರಿಂದ ನಮಗೆ ಸ್ಥಳದ ಸಂಕೋಚ ಕಂಡುಬರುತ್ತಿತ್ತು. ಕರ್ನಾಟಕ ಕಾಲೇಜಿನ ಮೊದಲನೇ ಪ್ರಿನ್ಸಿಪಾಲರಾದ ಪ್ರೊಫೆಸರ್ ಹೆಚ್. ಜಿ. ರಾಲಿನ್‌ಸನ್‌ರವರು, ನಮ್ಮ ವಿದ್ಯಾರ್ಥಿಗಳ ತೋಟದ ಕೆಲಸ, ಮ್ಯೂಸಿಯಂ, ಪ್ರಾಣಿಸಂಗ್ರಹ ಇವುಗಳೇ ಮೊದಲಾದ ವಿಷಯಗಳಲ್ಲಿ ಬಹಳ ಆಸಕ್ತಿ ತೋರಿಸುತ್ತಿದ್ದರು.

ಮುಂಬಯಿ ಪ್ರಾಂತದ ಎಲ್ಲ ಟ್ರೇನಿಂಗ್ ಕಾಲೇಜುಗಳಿಗಿಂತಲೂ, ಈ ಕಾಲೇಜಿನಲ್ಲಿ ಪ್ರಕೃತಿ ವಿಮರ್ಶೆಯ ಶಿಕ್ಷಣ, ಹೆಚ್ಚು ಸಮರ್ಪಕವಾದ ರೀತಿಯಲ್ಲಿ ಮುಂದುವರೆಯುತ್ತಿತ್ತೆಂದು, ಆಗಿನ ಶಿಕ್ಷಣ ಖಾತೆಯ ಡೈರೆಕ್ಟರುಗಳ ಅಭಿಪ್ರಾಯವಾಗಿತ್ತು.

ಮುಂಬಯಿ ಇಲಾಖೆಯ ದಕ್ಷಿಣ ಭಾಗದ—ಅಂದರೆ ದಕ್ಷಿಣದ ನಾಲ್ಕು ಜಿಲ್ಲೆಗಳಿಂದ ಡೆಪ್ಯುಟಿ ಇನ್‌ಸ್ಪೆಕ್ಟರ್ ಮತ್ತು ಅಸಿಸ್ಟೆಂಟ್ ಡೆಪ್ಯುಟಿ ಇನ್‌ಸ್ಪೆಕ್ಟರುಗಳು, ಈ ಕಾಲೇಜಿನ ಪ್ರಕೃತಿ ವಿಮರ್ಶೆಯ ಶಿಕ್ಷಣದ ಕ್ರಮವನ್ನು ಪರಿಶೀಲಿಸಲು ಕಳುಹಿಸಲ್ಪಡುತ್ತಿದ್ದರು.

ಕರ್ನಾಟಕ ಕಾಲೇಜು, ರೈಲ್ವೆ ಆಫೀಸಿನ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಾಗ ನಮಗಿದ್ದ ಸ್ಥಳದ ಸಂಕೋಚವು ತಪ್ಪಿತು. ಶ್ರೀ ಆರ್. ಎಸ್. ಕುಲಕರ್ಣಿಯವರ ನಂತರ, ಶ್ರೀ ಆರ್. ಎಂ. ಮಹಿಷಿಯವರು ಪ್ರಿನ್ಸಿಪಾಲರಾಗಿ,

ಅದೇ ವರುಷದಕೊನೆಗೆ ಆಕಸ್ಮಿಕವಾಗಿ ಮುಂಬೈಯಲ್ಲಿರುವ ನೌಕಾದಳದ ತರಬೇತಿ ಶಾಖೆಯಲ್ಲಿ ಕೆಲಸಮಾಡುವ ಪ್ರಸಂಗವೊಂದು ನನಗೆ ಒದಗಿ ಬಂದಿತು. ಆದುದರಿಂದ ಒಮ್ಮೆಲೇ ಈ ಸಂಸ್ಥೆಯ ಜೊತೆಗಿರುವ ನನ್ನ ಸಂಬಂಧವು ಸ್ಥಗಿತವಾಯಿತು. ಆ ಸಪ್ತಮಾಸಗಳ ಅಲ್ಪ ಕಾಲಾವಧಿಯಲ್ಲಿಯೇ ನನಗೆ ಅನೇಕಜನ ಪ್ರಾಥಮಿಕ ಶಿಕ್ಷಕರ ಮಧುರ ಸಂಬಂಧವು ಬಂದಿತು. ಅಂಥವರಲ್ಲಿ ಅನೇಕರು ಇಂದಿಗೂ ಮುಖ್ಯಾಧ್ಯಾಪಕರೆಂದು, ಮೇಲ್ವಿಚಾರಕರೆಂದು, ಉಪಶಿಕ್ಷಣಾಧಿಕಾರಿಗಳೆಂದು ತಮ್ಮ ಸೇವೆ ಸಲ್ಲಿಸುತ್ತಲಿದ್ದಾರೆ; ಹಾಗು ಕೆಲವರು ಸೇವಾ ನಿವೃತ್ತರಾಗಿದ್ದಾರೆ. ನಾನು ಈ ಖಾತೆಯಲ್ಲಿ ಅವಿರತವಾದ ೨೬ ವರುಷಗಳ ಸೇವೆಸಲ್ಲಿಸಿದ್ದರೂ, ಈ ಸಪ್ತಮಾಸಗಳ ಕಾಲಾವಧಿಯನ್ನು ನನ್ನ ಜೀವಮಾನದಲ್ಲಿಯ ಒಂದು ಮರೆಯಲಾಗದ ಅವಧಿಯೆಂದು ಬಗೆದಿದ್ದೇನೆ. ಈ ಪ್ರಬುದ್ಧ ಸಂಸ್ಥೆಯ ಜೊತೆಗಿದ್ದ ನನ್ನ ಸಂಬಂಧವನ್ನು ನಾನು ಯಾವಾಗಲೂ ನನ್ನ ಸುದೈವವೆಂದೇ ಭಾವಿಸುತ್ತ ಬಂದಿದ್ದೇನೆ. ಅಲ್ಲಿ ಸೇವೆ ಸಲ್ಲಿಸುವ, ಆ ಸಂಸ್ಥೆಯು ನಿರ್ಮಿಸಿದ ಒಳ್ಳೇ ಪೂರ್ವ ಪರಂಪರೆಗಳನ್ನು ಅನುಭವಿಸುವ ಪುಣ್ಯವು ಕೆಲವರಿಗೇ ದೊರೆಯುವದೆಂದು ತಿಳಿದಿದ್ದೇನೆ. ಅವ್ಯಾಹತವಾಗಿ ನಡೆದು ಬಂದಿರುವ ಶಿಕ್ಷಕ ಬಂಧುವರ್ಗಕ್ಕೆ, ಕುಲಪತಿಗಳಿಗೆ ನನ್ನ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಅರ್ಪಿಸ ಬಯಸುತ್ತೇನೆ. ಸಂಸ್ಥೆಯು ಚಿರಂಜೀವಿಯಾಗಲಿ !

‘ವಿದ್ಯಾಜನನಿ’

ಕೈಮುಗಿವೆ ಕೈಮುಗಿವೆ ನಮ್ಮ ವಿದ್ಯಾಜನನಿ
ಜೀವನವ ಪಾವನವ ಗೈದಿರುವ ಜನನಿ
ಪ್ರಾಥಮಿಕ ಶಿಕ್ಷಕರ ಪೂರ್ವಪೀಠಿಕೆಯಾಗಿ
ಶತಮಾನ ಕೃಷಿಗೈದೆ ಕನ್ನಾಡತನಕೆ ||೧||

ನಾಕಂಡ ನಾನುಂಡ ನಡೆಗೊಂಡ ದಿನವೆಲ್ಲ
ಸ್ವಪ್ನಸೃಷ್ಟಿಯ ಸೌಖ್ಯ ಸೌಭಾಗ್ಯ ತಾಯೆ
ಹಿಂದಿನಾ ದಿನ ನೆನೆಯೆ ಹನಿಗಣ್ಣು ಹೊನಲಾಗಿ
ಅಹಹ ಸಂದಿಹವೆಂಬೆ ದಿನಗಳವು ತಾಯೆ ||೨||

ಧಾರವಾಡದಿ ನೆಲಿಸಿ ಕನ್ನಡದ ಸಂಸ್ಕೃತಿಯ
ಧಾರೆಯನು ನೀನೆರೆದೆ ಸಹಸ್ರ ಮುಖವಾಗಿ
ನಿನ್ನಿಂದ ಹೊರಹೊರಟ ಸಹಸ್ರಾರು ಶಿಕ್ಷಕರು
ನಿನ್ನಮಂಗಳ ಪಾಠ ಹಾಡಿ ನುಡಿಸಿದರು ||೩||

ಧಾರವಾಡದ ವಾಯು ಮಾನದಲಿ ಮೊದಲಿಂಗೆ
ನಮ್ಮ ಗತವೈಭವದ ಸ್ಮೃತಿಯ ನೀನಿತ್ತೆ
ಇಂದು ಕನ್ನಡನಾಡು ಒಂದು ಗೂಡಿಹುದೆಂಬೆ
ಹಿಂದಿನಾ ವೈಭವವು ಒಡಮೂಡಲೆಂಬೆ ||೪||

ಇಂದು ಜೀವನ ವಿದ್ಯೆ ಪೀಠ ನೀನಾಗಿರುವೆ
ಜೀವಂತ ಸತ್ವವನು ಕೊಡು ನಾಡ ಜನಕೆ
ಕೈಮುಗಿವೆ ಕೈಮುಗಿವೆ ಪೂಜ್ಯ ವಿದ್ಯಾಜನನಿ
ಜೀವನವ ಸಾರ್ಥಕವ ಗೈಸೆಮಗೆ ಜನನಿ ||೫||

—ಸ. ಪ. ಗಾಂವಕಾರ

ಧಾರವಾಡದ ಸವಿನೆನಪುಗಳು

ಲೇಖಕರು : ನಿವೃತ್ತ ಇನ್ಸಪೆಕ್ಟರ್ **ಶ್ರೀ ಮ. ರಾಮಬ್ರಹ್ಮ**, ಬಿ.ಎ., ಎಲ್.ಟಿ.

ನಾನು ಮುಂಬಯಿ ಪ್ರಾಂತದ ಶಿಕ್ಷಣ ಖಾತೆಯಲ್ಲಿ ಉದ್ಯೋಗ ಮಾಡಿದ ಇಪ್ಪತ್ನಾಲ್ಕುವರೆ ವರ್ಷಗಳ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ಧಾರವಾಡದಲ್ಲಿ ಕಳೆದಿದ್ದರಿಂದ, ಆ ಊರಿನ ವಿಷಯದಲ್ಲಿ ಹೆಚ್ಚಿನ ಮಮತೆ ನನಗಿರುವುದು ಸಹಜ.

೧೯೧೫ನೆಯ ಇಸವಿಯ ಸೆಪ್ಟೆಂಬರ್ ೧ನೆಯ ದಿನಾಂಕ, ನಾನು ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಅಧ್ಯಾಪಕನಾಗಿ ನೇಮಿಸಲ್ಪಟ್ಟೆನು. ಸ್ಕೌಟ್ ಸಂಸ್ಥೆಯ ಪರವಾಗಿ ಕೆಲಸ ಮಾಡಿದ ೨ ವರ್ಷಗಳ (೧೯೨೧–೨೩ರ) ಅವಧಿಯನ್ನು ಬಿಟ್ಟು ೧೯೩೯ರ ಆರಂಭದ ವರೆಗೂ ಧಾರವಾಡದ ಟ್ರೇನಿಂಗ್ ಕಾಲೇಜಿನ ಪ್ರಕೃತಿ ವಿಮರ್ಶೆ ಇಲ್ಲವೆ ಸೃಷ್ಟಿ ನಿರೀಕ್ಷಣ (Nature Study) ಅಧ್ಯಾಪಕನಾಗಿ, ಆ ಕಾಲೇಜಿನೊಂದಿಗೆ ನಿಕಟ ಸಂಬಂಧ ಹೊಂದಿದ್ದೆನು.

ನಾನು ಧಾರವಾಡಕ್ಕೆ ಬಂದಾಗ ಶ್ರೀ ವಿ. ಬಿ. ಜೋಶಿಯವರು ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ಟ್ರೇನಿಂಗ್ ಕಾಲೇಜಿನ ಮೂರು ವರ್ಷಗಳ ವಿದ್ಯಾರ್ಥಿಗಳು ಕಲಿಯುತ್ತಿದ್ದ ವಿಷಯಗಳಲ್ಲಿ ಪ್ರಕೃತಿ ವಿಮರ್ಶೆ, ಡ್ರಾಯಿಂಗ್, ಸ್ಲಾಯಿಡ್ (ಮರಗೆಲಸ) ಸೇರಿದ್ದುವು. ಮೊದಲೇ ಹೇಳಿದ ಅಂದರೆ ಡ್ರಾಯಿಂಗ್ ಮತ್ತು ಸ್ಲಾಯಿಡ್ ವಿಷಯಗಳನ್ನು ಕಲಿಸುವ ವ್ಯವಸ್ಥೆ ಮೊದಲಿನಿಂದಲೂ ಇತ್ತು. ಅವುಗಳ ಅಧ್ಯಾಪಕರಾದ, ನನ್ನ ಮಿತ್ರರು ಶ್ರೀ ನೇರ್ಲೇಕರ ಮಾಸ್ತರ ಮತ್ತು ಶ್ರೀ ಪಾಂಡೆ ಮಾಸ್ತರ, ಈಗಲೂ ಧಾರವಾಡದಲ್ಲಿಯೇ ನೆಲಸಿರುತ್ತಾರೆ.

ಆಗ ಕರ್ನಾಟಕ ಕಾಲೇಜು ಇನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ. ನಮ್ಮ ಟ್ರೇನಿಂಗ ಕಾಲೇಜಿನ ಕಟ್ಟಡಗಳಲ್ಲಿ ಹೊಸದಾಗಿ ನಿರ್ಮಿಸಿದ ಕಟ್ಟಡವು ಬಹಳ ಅಂದವಾಗಿದ್ದು ಅದರ ಮುಂದಿನ ರಸ್ತೆಯಲ್ಲಿ ತಿರುಗಾಡುವವರಿಗೆ ಬಹಳ ಎದ್ದು ಕಾಣುತ್ತಿತ್ತು. ಹೊಸದಾಗಿ ಸೇರಿಸಲ್ಪಟ್ಟ ಪ್ರಕೃತಿ ವಿಮರ್ಶೆಯ ಶಿಕ್ಷಣಕ್ಕೆ ಬೇಕಾದ ತೋಟ, ಸಂಗ್ರಹ ಶಾಲೆ (Museum), ಪಕ್ಷಿಗೃಹ, ಮ್ಯೂಸಿಯಮ್ಮಿನ ಹಿಂಭಾಗದಲ್ಲಿ ಮೊಲ, ಬಿಳಿ ಇಲಿ ಮುಂತಾದ ಪ್ರಾಣಿಗಳು ಇರಲು ಬೇಕಾದ ಜೋಪಡಿಗಳು ಇವೇ ಮೊದಲಾದ ವಸತಿಗಳನ್ನು ಪ್ರಿನ್ಸಿಪಾಲರು ಕೂಡಲೇ ಕಲ್ಪಿಸಿಕೊಟ್ಟರು.

ಇವುಗಳನ್ನು ಸುವ್ಯವಸ್ಥೆಗೆ ತಂದು ಅಭಿವೃದ್ಧಿಗೊಳಿಸುವ ಕೆಲಸ ನನ್ನದಾಗಿದ್ದಿತು. ಶ್ರೀ ಜೋಶಿಯವರು ಪ್ರಿನ್ಸಿಪಾಲರಾಗಿದ್ದ ಕಾಲದಲ್ಲಿ ವಿದ್ಯಾರ್ಥಿಗಳ ಸಂಖ್ಯೆ ೨೫೦ರಷ್ಟಿದ್ದು, ಕಾಲೇಜಿನ ಶಿಕ್ಷಣವು ಎಲ್ಲರೀತಿಯಿಂದಲೂ ಪ್ರಗತಿಪರವಾಗಿದ್ದಿತು. ಶ್ರೀ ಜೋಶಿಯವರ ನಂತರ ಪ್ರಿನ್ಸಿಪಾಲರಾದ ಶ್ರೀ ಆರ್. ಎಸ್. ಕುಲಕರ್ಣಿಯವರ ಕಾಲದಲ್ಲಿ ಕಾಲೇಜಿನ ಕೀರ್ತಿ ಎಲ್ಲೆಡೆಯೂ ಹಬ್ಬಿತ್ತು.

ಧಾರವಾಡದಲ್ಲಿ ಕರ್ನಾಟಕ ಕಾಲೇಜು ಸ್ಥಾಪಿತವಾಗಿ, ಅದರ ಉಪಯೋಗಕ್ಕಾಗಿ, ಟ್ರೇನಿಂಗ್ ಕಾಲೇಜಿನ ಹೊಸ ಕಟ್ಟಡದ ಹೆಚ್ಚಿನ ಭಾಗವನ್ನು ಬಿಟ್ಟುಕೊಡಬೇಕಾಯಿತು. ಇದರಿಂದ ನಮಗೆ ಸ್ಥಳದ ಸಂಕೋಚ ಕಂಡುಬರುತ್ತಿತ್ತು. ಕರ್ನಾಟಕ ಕಾಲೇಜಿನ ಮೊದಲನೇ ಪ್ರಿನ್ಸಿಪಾಲರಾದ ಪ್ರೊಫೆಸರ್ ಹೆಚ್. ಜಿ. ರಾಲಿನ್ಸನ್‌ರವರು, ನಮ್ಮ ವಿದ್ಯಾರ್ಥಿಗಳ ತೋಟದ ಕೆಲಸ, ಮ್ಯೂಸಿಯಂ, ಪ್ರಾಣಿಸಂಗ್ರಹ ಇವುಗಳೇ ಮೊದಲಾದ ವಿಷಯಗಳಲ್ಲಿ ಬಹಳ ಆಸಕ್ತಿ ತೋರಿಸುತ್ತಿದ್ದರು.

ಮುಂಬಯಿ ಪ್ರಾಂತದ ಎಲ್ಲ ಟ್ರೇನಿಂಗ್ ಕಾಲೇಜುಗಳಿಗಿಂತಲೂ, ಈ ಕಾಲೇಜಿನಲ್ಲಿ ಪ್ರಕೃತಿ ವಿಮರ್ಶೆಯ ಶಿಕ್ಷಣ, ಹೆಚ್ಚು ಸಮರ್ಪಕವಾದ ರೀತಿಯಲ್ಲಿ ಮುಂದುವರೆಯುತ್ತಿತ್ತೆಂದು, ಆಗಿನ ಶಿಕ್ಷಣ ಖಾತೆಯ ಡೈರೆಕ್ಟರುಗಳ ಅಭಿಪ್ರಾಯವಾಗಿತ್ತು.

ಮುಂಬಯಿ ಇಲಾಖೆಯ ದಕ್ಷಿಣ ಭಾಗದ–ಅಂದರೆ ದಕ್ಷಿಣದ ನಾಲ್ಕು ಜಿಲ್ಲೆಗಳಿಂದ ಡೆಪ್ಯುಟಿ ಇನ್‌ಸ್ಪೆಕ್ಟರ್ ಮತ್ತು ಅಸಿಸ್ಟೆಂಟ್ ಡೆಪ್ಯುಟಿ ಇನ್‌ಸ್ಪೆಕ್ಟರುಗಳು, ಈ ಕಾಲೇಜಿನ ಪ್ರಕೃತಿ ವಿಮರ್ಶೆಯ ಶಿಕ್ಷಣದ ಕ್ರಮವನ್ನು ಪರಿಶೀಲಿಸಲು ಕಳುಹಿಸಲ್ಪಡುತ್ತಿದ್ದರು.

ಕರ್ನಾಟಕ ಕಾಲೇಜು, ರೈಲ್ವೆ ಆಫೀಸಿನ ಕಟ್ಟಡಕ್ಕೆ ವರ್ಗಾಯಿಸಲ್ಪಟ್ಟಾಗ ನಮಗಿದ್ದ ಸ್ಥಳದ ಸಂಕೋಚವು ತಪ್ಪಿತು. ಶ್ರೀ ಆರ್. ಎಸ್. ಕುಲಕರ್ಣಿಯವರ ನಂತರ, ಶ್ರೀ ಆರ್. ಎಂ. ಮಹಿಷಿಯವರು ಪ್ರಿನ್ಸಿಪಾಲರಾಗಿ,

೧೯೧೮ರ ಅಂತ್ಯದಲ್ಲಿ ಬಂದು ಸೇರಿದರು. ಅವರ ಕಾಲದಲ್ಲಿ ಕಾಲೇಜು ಬಹಳ ಮೇಲ್ಮಟ್ಟದ ಪ್ರಗತಿ ಹೊಂದಿದಲ್ಲದೆ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಿತು. ಮೂರನೇ ವರ್ಷದ ವಿದ್ಯಾರ್ಥಿಗಳ ಸಂಖ್ಯೆ ೧೯೨೧ರಲ್ಲಿ ೧೦೦ಕ್ಕೂ ಹೆಚ್ಚಾಗಿತ್ತು.

ಈ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗಿದ್ದ ಅನುಕೂಲಗಳಲ್ಲಿ ಕಾಲೇಜಿಗೆ ಸೇರಿದಂತಿದ್ದ ಚಿಕ್ಕ ಆಸ್ಪತ್ರೆ ಮತ್ತು ಅದರ ವೈದ್ಯರ ನೆನಪು ನನಗೆ ಈಗ ಬರುತ್ತದೆ. ಆಗ ಕಾಲೇಜಿನ ವಿದ್ಯಾರ್ಥಿಗಳು ಸಮವಸ್ತ್ರವನ್ನು ಧರಿಸಿ ಡ್ರಿಲ್ ಮಾಡುತ್ತಿದ್ದುದು ಒಂದು ಸುಂದರ ದೃಶ್ಯವಾಗಿತ್ತು. ೧೯೨೧ರ ಜುಲೈ ತಿಂಗಳಲ್ಲಿ ನಾನು ಸ್ಕೌಟ್ ಶಿಕ್ಷಣ ಪಡೆಯಲು ಇಂಗ್ಲೆಂಡಿಗೆ ತೆರಳುವ ಪ್ರಸಂಗ ಒದಗಿದ್ದರಿಂದ, ಕಾಲೇಜಿನ ಸಂಬಂಧವು ಕೆಲವು ವರ್ಷಗಳು ತಪ್ಪಿತು. ನಾನು ಇಂಗ್ಲೆಂಡಿಗೆ ಹೊರಟ ಕೆಲವು ದಿನಗಳಲ್ಲಿ, ಕೆಲವು ಘಟನೆಗಳು ಸಂಭವಿಸಿದ ಕಾರಣ ಕಾಲೇಜಿನ ಪರಿಸ್ಥಿತಿಯಲ್ಲಿ ಅಲ್ಲೋಲ ಕಲ್ಲೋಲವಾಯಿತು. ಆಗಿನ ಪ್ರಿನ್ಸಿಪಾಲರಾಗಿದ್ದ ಶ್ರೀ ಆರ್. ಎಂ. ಮಹಿಷಿಯವರಿಗೆ ಕಾರವಾರಕ್ಕೆ ವರ್ಗವಾಗಿ, ಮೂರನೆಯ ವರ್ಷದಿಂದ ಕಾಲೇಜಿನ ಮೂರನೇ ವರ್ಷ ತರಗತಿ ನಿಲ್ಲಿಸಲ್ಪಟ್ಟಿತು. ೧೯೨೪ರಲ್ಲಿ ನಾನು ಮರಳಿ ಕಾಲೇಜಿಗೆ ಬಂದಾಗ ಮೊದಲೆರಡು ವರ್ಷಗಳ ತರಗತಿಗಳು ಮಾತ್ರವಿದ್ದು, ಮುಂದೆ ಎರಡನೇ ವರ್ಷದ ತರಗತಿಯು ಮುಚ್ಚಲ್ಪಟ್ಟಿತು. ಕಾಲೇಜಿನ ಮಟ್ಟ ಸ್ಕೂಲಿನ ಮಟ್ಟಕ್ಕಿಳಿಯಿತು; ಆಗ ನನಗೆ ಸಾಕಷ್ಟು ಕೆಲಸವಿಲ್ಲದ್ದರಿಂದ, ಹೈಸ್ಕೂಲಿನಲ್ಲಿಯೂ ನಾನು ಕೆಲ ಮಾಡಬೇಕಾಯಿತು. ಶ್ರೀ ಮಹಿಷಿಯವರಾದ ಮೇ ಶ್ರೀ ಆರ್. ಎಂ. ಪೆರೂರರು ಪ್ರಿನ್ಸಿಪಾಲರಾಗಿದ್ದರು ಅವರ ನಂತರ ಶ್ರೀ ಹೆಚ್. ಜಿ. ದೇಶಪಾಂಡೆ, ಟ್ರೇನಿಂಗ ಸ್ಕೂಲಿನ ಹೆಡ್ ಮಾಸ್ತರರಾದರು. ೧೯೩೪ರ ವರೆ ಸ್ಕೂಲು ಈರೀತಿ ಮುಂದುವರೆಯಿತು. ೧೯೩೪ರ ಫೆಬ್ರುವರಿಯಲ್ಲಿ ಬೆಳಗಾವಿಯ ಸರ್ದಾರ್ ಹೈಸ್ಕೂಲಿನ ಹೆಡ್ ಮಾಸ್ತರನಾಗಿ ನೇಮಿಸಲ್ಪಟ್ಟದ್ದರಿಂದ ಧಾರವಾಡವನ್ನು ಬಿಡಬೇಕಾಯಿತು. ಅಲ್ಲಿಗೆ ನನ್ನ–ಟ್ರೇನಿಂಗ್ ಕಾಲೇಜಿನ ಸಂಬಂಧವು ಕಡಿಯಿತು. ನಾನು ಬೇರೆ ಕಡೆ ಕೆಲಸಮಾಡುತ್ತಿದ್ದಾಗಲೂ, ಮುಂಬಯಿ ಸರ್ಕಾರದ ಉದ್ಯೋಗದಿಂ ನಿವೃತ್ತನಾದ ಮೇಲೂ, ಧಾರವಾಡಕ್ಕೆ ಆಗಾಗ್ಗೆ ಬರುತ್ತಿದ್ದು, ಟ್ರೇನಿಂಗ್ ಸ್ಕೂಲಿನ ಮಟ್ಟಕ್ಕಿಳಿದಿದ್ದ ಟ್ರೇನಿಂಗ್ ಕಾಲೇಜು, ಮತ್ತೆ ಕಾಲೇಜಿನ ಮಟ್ಟಕ್ಕೇರಿದುದನ್ನು ನೋಡಿ ನನಗೆ ಬಹಳ ಆನಂದವಾಯಿತು. ಶತಮಾನೋತ್ಸವದ ಸಂದರ್ಭದಲ್ಲಿ ಟ್ರೇನಿಂಗ್ ಕಾಲೇಜು ಮತ್ತಷ್ಟು ಹೆಚ್ಚಿನ ಪ್ರಗತಿ ಹೊಂದಲೆಂದು ಮನಃಪೂರ್ವಕವಾ ನಾನು ಹಾರೈಸುತ್ತೇನೆ.

ಕಾಲೇಜದ ನನ್ನ ದಿನಚರಿ

ಬರೆದವರು : **ಶ್ರೀ ಪಿ. ಬಿ. ಹಿರೇಕೆಂಚನಗೌಡರ,** ೨ನೆಯ ವರ್ಷದ ಶಿಕ್ಷಕ ವಿದ್ಯಾರ್ಥಿ.

ಅಂದು ಬಲಿ ಪ್ರತಿಪದೆಯ ಮರುದಿನವಿರಬಹುದು. ಹತ್ತಿಯ ಬೆಳೆಯಲ್ಲಿ ಕಳೆ ಬೆಳೆದು ನಿಂತಿದೆ. ಎಡೆ ಹೊಡೆಯಲು ಆಳಿನ ಕೊರತೆ ಬಿದ್ದಿದೆ. ಚಳಿಗಾಲದ ಬಿಡುವೂ ಇತ್ತು ಕಾರಣ ಎಡೆಹೊಡೆಯಲು ಹೊಲಕ್ಕೆ ಹೋಗುವ ಸರತಿಯು ನನ್ನ ಪಾಲಿಗೆ ಬಿದ್ದಿತು. ದಿನವಿಡಿ ಹೊಲದಲ್ಲಿ ದುಡಿದು ಮುಚ್ಚಂಜೆಯ ಸಮಯಕ್ಕೆ ಮನೆಗೆ ಬಂದಾಗ ನನ್ನ ತಾಯಿಗೆ ಅಚ್ಚರಿಯಾಗಿ– "ಎಂದೂ ಒಕ್ಕಲತನ ಮಾಡದವನು ಹೊಲದಲ್ಲಿ ಹಗಲೆಲ್ಲ ಹೇಗೆ ದುಡಿದಿ?" ಎಂದು ಕೇಳಿಬಿಟ್ಟಳು. ಆಕೆಯ ಮಾತಿನಲ್ಲಿ ಸತ್ಯತೆಯೂ ಇತ್ತು. ಏಕೆಂದರೆ ನಾನು ಒಕ್ಕಲಿಗರ ಮನೆಯಲ್ಲಿ ಹುಟ್ಟಿದವನಾದರೂ ಎಂದೂ ಒಕ್ಕಲುತನದಲ್ಲಿ ದುಡಿದಿದ್ದೇ ಇಲ್ಲ. ಕಾಲೇಜದ ದಿನಚರಿಯಲ್ಲಿ ಒಕ್ಕಲುತನದ ಕೆಲಸದ ಪ ಣಾಮ ನನ್ನ ಮೇಲಾದುದನ್ನು ಅವಳಿಗೆ ವಿವರಿಸುತ್ತಾ ಒಳಗೆ ನಡೆದೆನು.

ನಾನು ಕಾಲೇಜು ಸೇರುವದಕ್ಕಿಂತ ಪೂರ್ವದಲ್ಲಿಯ ಜೀವನ ಕ್ರಮಕ್ಕೂ ಹಾಗು ಇಂದು ನಾನಿಲ್ಲಿ ಸಾಗಿಸುತ್ತಿರುವ ಜೀವನಕ್ರಮಕ್ಕೂ ಅದೆಷ್ಟು ಅಂತರವಾಗಿದೆ ಎನ್ನುತ್ತೀರಿ ! ಜೇನ್ನೊಣಕ್ಕೊ, ಇರುವೆಗೊ ನನ್ನನ್ನು ನಾನ ಹೋಲಿಸಿಕೊಳ್ಳುತ್ತಿದ್ದೇನೆ. ಏಕೆಂದರೆ ತನ್ನ ಗುರಿಸಾಧನೆ ಜೇನ್ನೊಣವು ಹೇಗೆ ಕಾರ್ಯತತ್ಪರವಾಗಿರುವದೋ ಹಾ ಸತತೋದ್ಯೋಗಿಯಾಗಿರುವದೇ ನನ್ನ ದಿನಚರಿಯ ಮುಖ್ಯಧ್ಯೇಯ. " ಕಾಯಕವೇ ಕೈಲಾಸ " ಎಂ

ಎಂಬ ಅನುಭಾವಿಗಳ ಅಮೃತದಂಥ ಮಾತಿನಲ್ಲಿಯ ಸತ್ಯತೆಯನ್ನು ನಾನು ಕಂಡು ಕೊಂಡಿದ್ದೇನೆ. ಬೆಳಗಿನ ಬ್ರಾಹ್ಮಿ ಮುಹೂರ್ತಬಲ್ಲಿ ಎದ್ದು ದೇವ ನಾಮಸ್ಮರಣೆ ಮಾಡಿ ಕಾರ್ಯ ಕೈಕೊಳ್ಳುವ ಭಾಗ್ಯ ಬಹಳ ಜನರಿಗಿರಲಿಕ್ಕಿಲ್ಲ. ಅಂಥ ಭಾಗ್ಯ ಅನುಭವಿಸುತ್ತಿರುವವರಲ್ಲಿ ನಾನೊಬ್ಬ. ಕೋಳಿಕೂಗುವ ಸಮಯದಲ್ಲಿ ಎದ್ದು ಪ್ರಾತರ್ವಿಧಿ ತೀರಿಸಿಕೊಂಡು ಪ್ರಾರ್ಥನೆಗಾಗಿ ಪ್ರಾರ್ಥನಾ ಮಂದಿರಕ್ಕೆ ಹೋಗುವಾಗ ನಿಶ್ಶಬ್ದ ವಾತಾವರಣ! ತಣ್ಣಗೆ ತೀಡುವ ಮಂದ ಮಾರುತನ ಉಯ್ಯಾಲೆ !! ಸೂರ್ಯನ ಬರವನ್ನು ನಿರೀಕ್ಷಿಸುತ್ತಿರುವ ಹಕ್ಕಿಪಕ್ಕಿಗಳ ಕಿಲಿ ಕಿಲಿ ನಿನಾದ !!! ಎಲ್ಲರೂ ಒಂದೆಡೆ ಸೇರಿ ದೇವನಾಮ ಸ್ಮರಿಸಲು ಹೊರಟಿರುವ ವಿದ್ಯಾರ್ಥಿಗಳ ನೋಟ !!! ಎಂಥವನಿಗೆ ಆನಂದವಾಗಲಿಕ್ಕಿಲ್ಲ. ಪರಿಪ್ಲುತವಾದ ಮನಸ್ಸಿನಿಂದ ದೇವರನ್ನು ಭಜಿಸುವದರಿಂದಾಗುವ ಆನಂದವನ್ನು ಎಷ್ಟು ಭಜಿಸಿದರೂ ಕಡಿಮೆಯೇ ಸರಿ.

‘‘ಉದ್ಯೋಗವೇ ಪುರುಷ ಲಕ್ಷಣ’’ ಎಂಬ ಮಾತು ಮೊದಲು ಕೇಳಿದ್ದೆ. ಆದರೆ ಅದರಲ್ಲಿ ಅಡಕವಾಗಿರುವ ಸತ್ಯತೆಯನ್ನು ನಾನೀಗ ಅನುಭವಿಸುತ್ತೇನೆ. ಹೂವಿನಿಂದ ಹೂವಿಗೆ ಮರಿದುಂಬಿಯಂತೆ ಕಾಲೇಜದ ದಿನಚರಿಯಲ್ಲಿ ನಾನು ಒಂದು ಕೆಲಸವನ್ನು ಮುಗಿಯಿಸಿ ಮತ್ತೊಂದಕ್ಕೆ ಸಾಗುತ್ತಿದ್ದೇನೆ. ನಾನಿಲ್ಲಿ ಪ್ರಾರ್ಥನೋತ್ತರ ಕೈಕೊಳ್ಳುವ ಪ್ರತಿ ಕೆಲಸವೂ ಔಚಿತ್ಯ ಪೂರ್ಣವಾಗಿದೆ. ಏಕಂದರೆ ಮನಸ್ಸು ದೇಹಗಳೆರಡಕ್ಕೂ ಸರಿಯಾದ ಕಾರ್ಯವನ್ನು ಕಲ್ಪಿಸಿ ಒಂದೇ ವೇಳೆಗೆ ಎರಡನ್ನೂ ಬೆಳೆಯಿಸುವ ಗುಟ್ಟನ್ನು ತಿಳಿಸಿ ಕೊಡುತ್ತಿದೆ ನನ್ನ ದಿನಚರಿಯು.

ಎರಡು ನೂರು ಜನ ಶಿಕ್ಷಕ ವಿದ್ಯಾರ್ಥಿಗಳ ಮಧ್ಯದಲ್ಲಿ ಬಾಳುವ ನನ್ನ ಜೀವನವು ಸಂಘಮಯವಾಗಿ ಬೆರೆತು ಬಿಟ್ಟಿದೆ. ಸೂಟಿಗಾಗಲಿ ರಜೆಯ ಮೇಲಾಗಲಿ ಊರಿಗೆ ಹೋಗಿ ಒಬ್ಬಂಟಿಗನಾಗಿ ಇರಬೇಕಾದ ಪ್ರಸಂಗದಲ್ಲಿ ಹುಚ್ಚೇ ಹಿಡಿದಂತಾಗುವದು.

ಮಹಾತ್ಮರ ದೈನಿಕ ದಿನಚರಿಯನ್ನು ಕೇಳಿ ಓದಿ ತಿಳಿದು ಕೊಂಡಿದ್ದೆನು. ಅವರ ಪವಿತ್ರಮಯವಾದ ಜೀವನದ ದಿನಚರಿಯ ಬಗೆಗೆ ಅಭಿಮಾನ ಪಡುತ್ತಿದ್ದೆ. ಈಗ ಅವರ ಪ್ರೀತಿಯ ಕಾರ್ಯಗಳಾದ ಪ್ರಾರ್ಥನೆ, ಸಫಾಯಿ, ಸೂತ್ರಯಜ್ಞ ಮುಂತಾದವುಗಳನ್ನು ನಾನು ಮಾಡುತ್ತಿರುವದರಿಂದ ಮಹಾತ್ಮರು ಹಾಕಿಕೊಟ್ಟ ದಿವ್ಯ ದಾರಿಯಲ್ಲಿ ತಿಲಾಂಶವಾದರೂ ನಾನೂ ನಡೆಯುತ್ತಿದ್ದೇನಲ್ಲ ಎಂದು ಆನಂದಾಭಿಮಾನಗಳು ಉಂಟಾಗುತ್ತವೆ.

ನಿತ್ಯ ಒಂದರ್ಧ ತಾಸಾದರೂ ಮೌನದಿಂದ ಸೂತ್ರಯಜ್ಞ ಜರುಗಿಸುವಾಗ “ಮೌನವು ಪಂಡಿತರ ಲಕ್ಷಣ” ಎಂಬ ಮಾತಿನ ಅಪಾರ ಅರ್ಥವು ನನಗೆ ಹೊಳೆಯುತ್ತಿದೆ. ಮೌನವಾಗಿ ಮನಸನ್ನು ಕೇಂದ್ರೀಕರಿಸಿ ಆತ್ಮ ಸಂಯಮನ ಮಾಡಿದರೆ ‘‘ಆತ್ಮಸಂಯಮನವೇ ಸಕಲ ಸದ್ಗುಣಗಳ ತಾಯಿ” ಎಂಬ ಮಾತನ್ನು ನಾನೂ ಸಾಧಿಸಬಹುದಲ್ಲಾ ಎಂದು ನನಗನಿಸುತ್ತಿದೆ. ನನ್ನ ದಿನಚರಿಯಲ್ಲಿ ಮಿತಿಗೆ ಮಹತ್ವದ ಸ್ಥಾನವಿದೆ. ನಾನು ಯಾವದೇ ಕಾರ್ಯ ಮಾಡಲಿ ಅದು ಇಷ್ಟೇ ವೇಳೆಯಲ್ಲಿ ಮುಗಿಯಬೇಕೆಂದು ನಿಬಂಧನೆ ಇರುತ್ತದೆ. ಆದುದರಿಂದ ಎಲ್ಲ ಕೆಲಸಗಳು ಸುಸೂತ್ರವಾಗಿ ಸಾಗುತ್ತಿವೆ. ಕಾರಣ ಮಿತಿಯಿಂದ ಏನನ್ನಾದರೂ ಸಾಧಿಸಬಹುದೆಂದು ನಾನು ಧಾರಾಳವಾಗಿ ಹೇಳಬಯಸುತ್ತೇನೆ. ಅಲ್ಲದೆ ಮುಂಜಾವಿನಿಂದ ಸಂಜೆಯವರೆಗೆ ಕೆಲಸದಲ್ಲಿ ನಾನು ತೊಡಗಿದರೂ ಯಾವ ಕೆಲಸವೂ ಅತಿ ಎನಿಸಿದಂತಾಗಿ ಬೇಸರಿಕೆ ಎನಿಸುವದಿಲ್ಲ. ಇದರಿಂದ ಕಾರ್ಯವನ್ನು ಬದಲಿಸಿ ಬೇರೆ ಕೆಲಸ ಕೈಕೊಳ್ಳುವದೇ ವಿಶ್ರಾಂತಿ ಎಂದು ತಿಳಿದುಕೊಳ್ಳಬಹುದಾಗಿದೆ.

ಸಚ್ಚಾರಿತ್ರ್ಯವುಳ್ಳ ಗುರುಗಳ ಮಾರ್ಗದರ್ಶನದಲ್ಲಿ ಗುರುಕುಲ ಮಹಿಮೆ ತಿಳಿದುಕೊಂಡಿದ್ದೇನೆ. ಕುಲಪತಿಗಳ ಕುಟೀರವಂತೂ ನಮ್ಮ ಗುರುಕುಲದಲ್ಲಿ ಇರುವದರಿಂದ ಕ್ಷಣಕ್ಷಣಕ್ಕೂ ಅವರ ಆಶೀರ್ವಾದ, ಮಾರ್ಗದರ್ಶನದಿಂದ ನನ್ನ ಕಾರ್ಯಗಳು ನೀರಲ್ಲಿ ಕಲ್ಲನ್ನಿತ್ತಿದರೆ ಹೇಗೆ ಹಗುರಾಗುವದೊ ಹಾಗೆ ಹಗುರಾಗಿ ಯಾವ ಆತಂಕಗಳಿಲ್ಲದೆ ಸಾಗುತ್ತಿವೆ. ಇದರಿಂದ ‘‘ಹಿರಿಯರಿಲ್ಲದ ಮನೆಯಲ್ಲ ಗುರುವಿಲ್ಲದ ಮಠವಲ್ಲ” ಎಂಬ ಹಿರಿಯರ ಹಿರಿಮಾತು ಎಷ್ಟು ಯಥಾ ಯೋಗ್ಯವಾಗಿದೆಯಲ್ಲಾ ಎಂದು ಅನಿಸುತ್ತಿದೆ. ಹಿಂದಕ್ಕೆ ಪ್ರತಿಯೊಬ್ಬನು ೨೫ ವರ್ಷದವನಾಗುವ ವರೆಗೂ ಗುರುಕುಲದಲ್ಲಿಯೇ ಇದ್ದು ಬ್ರಹ್ಮಚರ್ಯವ್ರತವನ್ನು ಪಾಲಿಸಿ ದೃಢಕಾಯನಾಗಿ ಬಾಳುತ್ತಿದ್ದನು. ಆದರೆ ನನಗೆ ಇಲ್ಲಿಯ ದಿನಚರಿಯಿಂದ ಎರಡು ವರ್ಷಗಳ ವರೆಗಾದರೂ ಆ ಆರ್ಯಾವರ್ತದ ವಿದ್ಯಾರ್ಥಿಗಳ ಜೀವನದಂತೆ ಜೀವನ ಸಾಗಿಸಲು ಸಾಧ್ಯವಿದೆಯಲ್ಲ ಎಂದು ಸಂತೋಷಿಸುತ್ತೇನೆ. ಆಲಸಿಗಳಿಗೆ ಇಲ್ಲಿ ಸ್ಥಾನವಿಲ್ಲ. ಕರ್ತವ್ಯದ ಅರಿವಿದ್ದವನೇ ಇಲ್ಲಿ ಬಾಳಲರ್ಹನು. “ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯ” ಎಂಬ ಅಣ್ಣ ಬಸವಣ್ಣನವರ ಮಾತಿನಂತೆ ಇಲ್ಲಿ ಯಾವನು ತನ್ನ ಕರ್ತವ್ಯದಲ್ಲಿ

ನಿರತನಾಗಿ ಈ ದಿನಚರಿಗೆ ಸಲ್ಲುವನೊ ಅವನು ಮಾತ್ರ ಇಲ್ಲಿಂದ ಹೊರಬಿದ್ದ ಕೂಡಲೆ ತನ್ನ ವೃತ್ತಿಯಲ್ಲಿಯೂ ಎಂದು ಹೇಳಲು ನನ್ನ ದಿನಚರಿಯು ಸಾಕಷ್ಟು ಸಹಾಯಕಾರಿಯಾಗಿದೆ. ಯಾಕೆಂದರೆ ಭಾವಿ ರಾಷ್ಟ್ರದ ನಿರ್ಮಾಣದ ಹೊರೆ ಹೊರುವ ಶಿಕ್ಷಕರನ್ನು ತಯಾರಿಸುತ್ತಿರುವ ಈ ಪವಿತ್ರ ಸಂಸ್ಥೆಯಲ್ಲಿ ಪ್ರತಿಕಾರ್ಯವೊಳಗೆ ಮನಃಪೂರ್ವಕವಾಗಿ ದುಡಿದಲ್ಲಿ ಪವಿತ್ರ ಕಾರ್ಯವಾದ ತನ್ನ ಕಾಯಕವನ್ನು ಸುವ್ಯವಸ್ಥೆಯಿಂದ ಸಾಗಿಸಿಕೊಂಡು ಹೋಗಬಲ್ಲನೆಂಬುದನ್ನು ಇಲ್ಲಿ ಬಾಳುವ ನಾನು ಮನಗಾಣಲು ಕೈಗನ್ನಡಿಯಂತೆ ಇದೆ ನನ್ನ ದಿನಚರಿ.

ಇಲ್ಲಿ ಸಾದಾ ತರಗತಿಯ ಊಟ. ಇದ್ದುದರಲ್ಲಿಯೇ ತೃಪ್ತಿಯಾಗಬೇಕು ಎಂಬುದನ್ನು ತಿಳಿಯಲು ಅನುಕೂಲವಾಗಿದೆ. ಭೋಜನದ ಮುನ್ನ ಪ್ರಾರ್ಥನೆ ಮಾಡಿ ನಂತರ ಪ್ರಸಾದ ಸ್ವೀಕರಿಸಿದರೆ ಎಂಥ ಊಟವೇ ಇರಲಿ ಅವನಿಗೆ ಅದು ರುಚಿ ಹತ್ತದಿರದು. ಬಡತನದ ಭೂತ ಹಿಡಿದು ದಾರಿದ್ರ್ಯದಿಂದ ಬಾಳುವ ಭಾರತೀಯರಾದ ನಮಗೆ ಇಲ್ಲಿಯ ಊಟವು ಸಾಧುವೆನಿಸುತ್ತಿದೆ ಎಂದು ನನಗೆ ಮನವರಿಕೆಯಾಗಿದೆ. “ವೈಮೇಲಿ ಮಾಂಜರಪಾಟು ಮನೆಯಲ್ಲಿ ಪಡಿಪಾಟು” ಎಂಬ ಡಾಂಭಿಕತನದ ವೃತ್ತಿಯನ್ನು ತ್ಯಜಿಸಿ ಒಳಗೂ ಹೊರಗೂ ಒಂದೇ ತೆರನಾಗಿರಲು ಇಲ್ಲಿಯ ಊಟ ಇರುವಿಕೆಗಳು ಧಾರಾಳವಾಗಿ ಹೇಳಿಕೊಡುತ್ತಿವೆ.

ಸಮಾಜದ ಜೀವಾಳಾದ ಜೀವನ ಶಿಕ್ಷಣವನ್ನು ಸರಕಾರವು ಬಳಿಕೆಯಲ್ಲಿ ತಂದಿದೆ. ಸರಕಾರದ ಈ ಧೋರಣೆಯನ್ನು ಕಾರ್ಯಗತ ಮಾಡುವದು ಆ ಕಾರ್ಯದ ಹೊಣೆಹೊತ್ತ ಶಿಕ್ಷಕರ ಹೊಣೆಗಾರಿಕೆ. ಇಂತಹ ಹೊಣೆಗಾರಿಕೆ ಹೊರುವ ಪ್ರತಿಯೊಬ್ಬ ಶಿಕ್ಷಕನೂ ಇಲ್ಲಿ ತನ್ನ ದಿನಚರಿಯನ್ನು ಸಾಗಿಸಿದರೇನೆ ತನ್ನ ಕಾರ್ಯವನ್ನು ಸುಲಭವಾಗಿ ನೆರವೇರಿಸಬಲ್ಲನು; ಎಂದು ನನ್ನ ದಿನಚರಿಯ ಒಳದನಿಯು ಘಂಟಾಘೋಷವಾಗಿ ಸಾರುತ್ತದೆ; ಕಲಿಸುವ ಕಲೆಯನ್ನು ಕಲಿಸುತ್ತದೆ; ಇರುವಿಕೆಯ ಗುಟ್ಟನ್ನು ಹೇಳುತ್ತಿದೆ; ಸಮಾಜದ ರೀತಿ ನೀತಿಗಳನ್ನು ದಯಪಾಲಿಸುತ್ತವೆ; ಗುರುಕುಲ ಮಹಿಮೆಯನ್ನು ತೋರುತ್ತದೆ; ಪ್ರಾರ್ಥನೆಯ ಮಹತ್ವವನ್ನು ಮನಗಾಣಿಸಿ ಕೊಡುತ್ತದೆ; ನನ್ನ ಪರಿಪೂರ್ಣ ವ್ಯಕ್ತಿವಿಕಾಸವನ್ನು ಸಾಧಿಸುತ್ತಿದೆ. ಇಂತಿದೆ ನನ್ನ ದಿನಚರಿಯ ಒಳಗುಟ್ಟು.

ಟ್ರೇನಿಂಗ ಕಾಲೇಜದ ಬಗ್ಗೆ ಮಾತೃಭಾವನೆ

ಲೇಖಕರು : **ಪಂಡಿತ ಕೇಶವ ಶರ್ಮಾ ಗಲಗಲಿ.**

ನಾನು ೪೬, ೪೭ ವರುಷಗಳ ಹಿಂದೆ ಟ್ರೇನಿಂಗ ಕಾಲೇಜದಲ್ಲಿ ವಿದ್ಯಾರ್ಥಿಯಾಗಿದ್ದೆನು. ಈ ಸಂಸ್ಥೆಯ ಬಗ್ಗೆ ನಮ್ಮಂಥವರಲ್ಲಿ ಮಾತೃ ಭಾವನೆ ಇರುವದು ಸಹಜ. ಯಾಕೆಂದರೆ ನಮ್ಮಲ್ಲಿರುವ ಜ್ಞಾನಾಂಕುರವನ್ನು ಬೆಳಿಸಿ ಪೋಷಿಸಿದವಳು, ಈ ಮಹಾ ಜನನಿ. ಜನ್ಮಭೂಮಿಯಂತೆ ನಮಗಿದು ಪುಣ್ಯ ಭೂಮಿಯಾಗಿರುವದು. ಈ ತಾಯಿಯ ಶತವಾರ್ಷಿಕ ವರ್ಧಂತಿಯನ್ನು ನೋಡುವದು ನಮಗೆ ಆನಂದವನ್ನುಂಟುಮಾಡುವದು. ನೂರು ವರ್ಷ ಬಾಳಿದ ತಾಯಿಯನ್ನು ಮಕ್ಕಳು ನೋಡಿದಂತೆ ಸಂಸ್ಥೆಗಳ ಆಯುಸ್ಸು ಮಾನವನಿಗಿಂತ ದೊಡ್ಡದಾಗಿರುವದು ನಿಜ. ಆದರೆ ಕೆಲವುಸಾರೆ ಚಿಕ್ಕದೂ ಆಗಿರುವದು. ನೂರುವರ್ಷ ಬಾಳಿದ ಸಂಸ್ಥೆಯ ಬಗ್ಗೆ ಹೆಮ್ಮೆ ತಾಳುವದು ಸಹಜ. ಈ ಮಹಾತಾಯಿ ದೀರ್ಘಾಯು ಆಗಲಿ; ಇಷ್ಟೇ ಏಕೆ ಅಮಿತಾಯು ಆಗಲಿ ಎಂದು ನಾವೆಲ್ಲರೂ ಈ ಪ್ರಸಂಗದಲ್ಲಿ ಪರಮೇಶ್ವರನನ್ನು ಪ್ರಾರ್ಥಿಸುವಾ.

ಹಳ್ಳಿಯಲ್ಲಿ ಹುಟ್ಟಿ ಹಳ್ಳಿಯಲ್ಲಿ ಬೆಳೆದು ಬಂದ ನಮಗೆ ಈ ವಿದ್ಯಾಸಂಸ್ಥೆ ಜ್ಞಾನದಾನಮಾಡಿತು. ಆಗ ಬಡವರ ಮಕ್ಕಳಿಗೆ ಪ್ರಾಯಶಃ ಇಂಗ್ರೇಜಿ ವಿದ್ಯೆ ಕೈಗೆ ನಿಲುಕುತ್ತಿರಲಿಲ್ಲ. ಅದು “ಪಾಂಶುಲಭ್ಯೇ ಫಲೇಲೋಭಾದುದ್ಬಾಹುರಿವ ವಾಮನಃ” ಎತ್ತರದ ಗಿಡಕ್ಕೆ ಗಿಡ್ಡರು ಕೈಚಾಚಿದಂತಾಗುತ್ತಿತ್ತು. ಅಂದ ಬಳಿಕ ಬಡವರ ಮಕ್ಕಳ ಜ್ಞಾನ ತೃಷೆಯನ್ನು ತಣಿಸುವ ಸಂಸ್ಥೆಯೆಂದರೆ ನಮ್ಮ ಉತ್ತರ ಕರ್ನಾಟಕದಲ್ಲಿ ಇದೊಂದೇ ಆಗಿತ್ತು.

ಸ್ಥಿತಿವಂತರ ಮಕ್ಕಳು ಪುಣೆಯ ಡೆಕ್ಕನ ಕಾಲೇಜಕ್ಕಾಗಲಿ ಮುಂಬೈಗಾಗಲಿ ತೆರಳುತ್ತಿದ್ದರು. ಯಾಕಂದರೆ ಇಂಗ್ರೇಜಿ ಬಣ್ಣದ ವಿದ್ಯೆಗೆ ಮಾರ್ಕಟ್ಟೆಯಲ್ಲಿ ಹೆಚ್ಚು ಬೆಲೆ ಇತ್ತು. ಇಂದಿಗೂ ಅದಕ್ಕೆ ಹೆಚ್ಚು ಬೆಲೆ ಇದೆ. ಇಂದು ಅದು

ಜಾಗತಿಕ ಭಾಷೆ. ಆದರೆ ಬಡವರ ಭಾಷೆ ಕನ್ನಡ. ಕನ್ನಡದಲ್ಲಿ ವಿದ್ಯಾನ್ನವನ್ನು ಉಣ್ಣಿಸುವ ಸಂಸ್ಥೆ ಟ್ರೇನಿಂಗ ಕಾಲೇಜ.

ನಮ್ಮ ಗಲಗಲಿ ಶಾಲೆಯ ಹೆಡ್‌ಮಾಸ್ತರರು ಕರುಣಾಳು ಕಡಿವಾಲ ಮಾಸ್ತರರು. ಅವರು ಮೇಲಿಂದ ಮೇಲೆ ನುಡಿಯುವ ಮಾತು ಇದು. ಧಾರವಾಡ ಟ್ರೇನಿಂಗ ಕಾಲೇಜವೆಂದರೆ ಬಡವರಿಗೆ ಅನ್ನದಾನಮಾಡುವ ಸಂಸ್ಥೆಯೆಂದು. ಯಾಕಂದರೆ ಇಂಗ್ರೇಜಿ ಕಲಿಯಲು ಶಕ್ತಿಯಿಲ್ಲದ ಮಕ್ಕಳು ಆಗ ಟ್ರೇನಿಂಗ ಕಾಲೇಜಕ್ಕೆ ಕಳಿಸಲ್ಪಡುತ್ತಿದ್ದರು. ಮತ್ತು ಅನ್ನಗಳಿಸುವ ಮಾರ್ಗವನ್ನು ಕಾಣುತ್ತಿದ್ದರು. ಇದು ಕೇವಲ ಜಠರ ರಕ್ಷಣೆಯ ದಾರಿಯನ್ನು ತೋರಿಸುತ್ತಿಷ್ಟೇ ಇಲ್ಲ ಅನೇಕ ಜ್ಞಾನ ಪಿಪಾಸುಗಳನ್ನು ಹುಟ್ಟಿಸಿ ಶಾಶ್ವತ ಕೀರ್ತಿಯನ್ನು ಗಳಿಸಿಕೊಂಡಿದೆ.

ಶ್ರೀ ಶಾಂತಕವಿ, ಗಳಗನಾಥ, ಪೂಜಾರ, ಹುಲಿಕವಿ, ಶಂ. ಬಾ. ಜೋಶಿ, ಉಪೇಂದ್ರ ಶರ್ಮಾ ತೋಳಮಟ್ಟಿ ಮೊದಲಾದ ವಿದ್ವಾಂಸರನ್ನು, ಕವಿಗಳನ್ನು, ಗ್ರಂಥಕಾರರನ್ನು ಹುಟ್ಟಿಸಿದೆ. ಪದವೀಧರರಿಗಿಂತ ಹೆಚ್ಚಿನ ಕೀರ್ತಿಯನ್ನೂ ಇಲ್ಲಿ ಟ್ರೇಂಡರಾದವರು ಕನ್ನಡ ಭಾಷೆಗೆ ತಂದುಕೊಟ್ಟಿರುವರು. ಆಗಂತೂ ಟ್ರೇಂಡರೇ ಕನ್ನಡ ಭಕ್ತರು. ಪದವೀಧರರಿಗೆ ಕನ್ನಡ ಬಗ್ಗೆ ಆದರವಿರಲಿಲ್ಲ.

ನಾನು ವಿದ್ಯಾರ್ಥಿಗಳಿದ್ದಾಗ ಶ್ರೀ ವಿನಾಯಕರಾವ ಜೋಶಿಯವರು ಪ್ರಿನ್ಸಿಪಾಲರಾಗಿದ್ದರು. ನೋಡಲಿಕ್ಕೆ ನಮಗೆ ಸ್ವಲ್ಪ ಭಯ ಬರುತ್ತಿದ್ದರೂ ಅವರ ಹೃದಯ ಸ್ವಭಾವಗಳು ಕೋಮಲವಾಗಿದ್ದುದು ನಮಗೆ ಹಿಂದಿನಿಂದ ತಿಳಿದು ಬಂತು. ವಿದ್ಯಾರ್ಥಿಗಳಿಗೆ ಕಷ್ಟ ಕಾರ್ಪಣ್ಯಗಳುಂಟಾದರೆ ಕೂಡಲೇ ಅವರು ಓಡಿಬರುತ್ತಿದ್ದರು. ಅದರಿಂದ ಅವರಲ್ಲಿ ನಮ್ಮ ಆದರದ ಬುದ್ಧಿ ಬಳೆಯುತ್ತಹೋಯಿತು. ನಮ್ಮ ಸುಖದುಃಖಗಳ ದಾದು ವಿನಾಯಕರಾಯರ ಬಳಿಗೆ ಮುಟ್ಟುತ್ತಿತ್ತು. ರಾಯರ ಸ್ವಭಾವ ಕರುಣಾಳು, ಆದರೂ ಶಿಸ್ತುಪ್ರಿಯರು. ಹುಬ್ಬಳ್ಳಿಯಲ್ಲಿ ಬಂದಿರುವ ಬಾಲಗಂಧರ್ವನ ನಾಟಕ ನೋಡಲಿಕ್ಕೆ ರಾಯರೂ ನಾವೂ ಬಂದಿದ್ದೆವು. ಆಗ ನಮಗಾದ ಆನಂದ; ಅ ಬಾಲಗಂಧರ್ವರ ದರ್ಶನ, ಅವರ ಕಿನ್ನರಕಂಠ ಇದೆಲ್ಲದರ ಸ್ಮರಣ ನನ್ನ ಚಿತ್ತ ಫಲಕದಲ್ಲಿ ಇನ್ನೂ ಮೂಡಿರುವದು.

"ರಮ್ಯಾಣಿ ವೀಕ್ಷ್ಯ ಮಧುರಾಂಶ್ಚ ನಿಶಮ್ಯ ಶಬ್ದಾನ್
ಪರ್ಯುತ್ಸುಕೀ ಭವತಿ ಯತ್ ಸುಖಿ ತೋಪಿ ಜಂತುಃ |"

ಕಾಲಿದಾಸನ ನುಡಿ. ತರುಣವಯಸ್ಸಿನಲ್ಲಿ ರಮ್ಯತೆ ಮೋಹಕತೆ ಹೆಚ್ಚಾಗಿ ತೋರುವದು. ಇಂದು ಆ ರಾಯರು ಇಲ್ಲ, ಆ ಗೆಳೆಯರೂ ಇಲ್ಲ. ಈ ಟ್ರೇನಿಂಗ ಸಂಸ್ಥೆಯ ದರ್ಶನದಲ್ಲಿ ಅವರ ನೆನಪು ಮಾತ್ರ ಆಗುವದು.

ಶ್ರೀ ವಿನಾಯಕ ರಾಯರು ನಮಗೆ ಶಿಕ್ಷಣ ಶಾಸ್ತ್ರವನ್ನು ಮಾತ್ರ ಕಲಿಸುತ್ತಿದ್ದರು. ಟ್ರೇನಿಂಗ ಕಾಲೇಜದಲ್ಲಿ ವಿದ್ಯಾರ್ಥಿಯಾಗಿದ್ದರೂ ೧-೧॥ ವರುಷ ನನಗೆ ಅವರ ಪ್ರತ್ಯಕ್ಷ ಪರಿಚಯವಿರಲಿಲ್ಲ. ೨ನೇ ವರ್ಷ ಷಾಣ್ಮಾಸಿಕ ಪರೀಕ್ಷೆಯಲ್ಲಿ ನನ್ನ ಶಿಕ್ಷಣ ಪೇಪರಿಗೆ ನೂರಕ್ಕೆ ೭೫ ಗುಣಗಳನ್ನು ಹಾಕಿದ್ದರು. ಹಾಗಾದರೆ ಇವನಾರು ಎಂದು ನನ್ನನ್ನು ಕರೆಯಿಸಿಕೊಂಡರು. ಇವನು ಜಾಣ ವಿದ್ಯಾರ್ಥಿಯೆಂದು ನನ್ನನ್ನು ಅಂದಿನಿಂದ ಪ್ರೇಮಾರ್ದ್ರದೃಷ್ಟಿಯಿಂದ ನೋಡಹತ್ತಿದರು. ನನಗೂ ಪ್ರೋತ್ಸಾಹ ಸಿಕ್ಕಂತಾಯಿತು. ಹಿಂದಿನಿಂದ ನಾನು ಅವರು ಇನ್ನೂ ಜೀವಂತರಿರುವಾಗ ೧೯೪೦ನೇ ಇಸವಿಯಲ್ಲಿ ಧಾರವಾಡಕ್ಕೆ ಬಂದಾಗ ನನ್ನ ಶಿಷ್ಯ ಕರ್ಜಗಿಯೊಡನೆ ಬೆಳಗಾಂವಿ ರಸ್ತೆಯಲ್ಲಿರುವ ಅವರ ಉಪವನದ ಮನೆಯಲ್ಲಿ ಭೆಟ್ಟಿಗೆ ಹೋದಾಗ ಅವರ ದೃಷ್ಟಿ ಆಗ ಮಂದವಾಗಿತ್ತು. ನಾನು ಹೇಳಿದೆ 'ನಿಮ್ಮ ಶಿಷ್ಯ ಗಲಗಲಿ ಬಂದಿದ್ದಾನೆ ನಿಮ್ಮ ದರ್ಶನಕ್ಕಾಗಿ.' ಅವರ ಸಂತೋಷಕ್ಕೆ ಪಾರಾವಾರವಿಲ್ಲ. ಆ ಶಿಷ್ಯವಾತ್ಸಲ್ಯ ನಿಜವಾಗಿ ದುರ್ಮಿಳವಾದುದು.

ನಾನು ಶಿಕ್ಷಕನಾದ ಬಳಿಕ ಶ್ರೀ ಕರಂದಿಕರ ಸಾಹೇಬರು ತೀರಿಕೊಂಡಾಗ ನಾನು ರಚಿಸಿದ ಸಂಸ್ಕೃತ ಪದ್ಯಗಳು ಆಗಿನ ಶಾಲಾ ಪತ್ರದಲ್ಲಿ ಮುದ್ರಿತವಾಗಿವೆ. ಅವನ್ನು ನೋಡಿ ಅವರು ಆಗ ನನಗೆ ಶುಭಾಶೀರ್ವಾದ ಮಾಡಿದ್ದರು. ಅಂತಹರ ಅಂತಃಕರಣವೇ ನನಗೆ ಪಾಂಡಿತ್ಯವನ್ನು ತಂದು ಕೊಟ್ಟಿತು.

ನಾನು ವಿದ್ಯಾರ್ಥಿಯಾಗಿದ್ದಾಗ ಕಲಿಸಿದ ಶಿಕ್ಷಕರಲ್ಲಿ ಶ್ರೀ ಮಹಿಷಿ, ಶ್ರೀ ಮೂರ್ತ್ಯಾಚಾರ್ಯ ಕಟ್ಟಿ ಇವರನ್ನು ಎಂದಿಗೂ ಮರೆಯಲಾರೆನು. ಶ್ರೀ ಮಹಿಷಿಯವರು ಕಲಿಸುವದು ಶಾಸ್ತ್ರೀಯ ವಿಷಯವಾದರೂ ವಿನೋದವನ್ನು ಬೆರಿಸಿ ಹೇಳುವವರು. ಕನ್ನಡ ಪಂಡಿತರಾದ ಕಟ್ಟಿಯವರು ಕಲಿಸುವ ಶೈಲಿ ಕನ್ನಡ ಭಾಷೆಯಲ್ಲಿ ನಿಜವಾದ ಪ್ರೇಮವನ್ನು ಹುಟ್ಟಿಸುತ್ತಿತ್ತು. ಅವರ ಪ್ರಖರ ಪಾಂಡಿತ್ಯ ಎದುರಾಳಿಗಳನ್ನು ನಿಸ್ತೇಜವಾಗಿ ಮಾಡಿದ್ದನ್ನು ನಾವು ಎಷ್ಟೋ ಸಾರೆ ನೋಡಿದೆವು. ವಿದ್ಯಾರ್ಥಿಗಳಿಗೂ ಒಮ್ಮೊಮ್ಮೆ ಅವರ ಮೂರ್ಖತನವನ್ನು ಕಟು ಶಬ್ದಗಳಿಂದ ಜರೆದರೂ ಅವರ ರಸಭರಿತ ವಿವರಣ ಶೈಲಿ, ರನ್ನ ಪಂಪ

ರನ್ನೇ ಭೂಮಿಗಿಳಿಸಿ ಪಾಠ ಹೇಳುವಂತೆ ನಮಗೆ ತೋರುತ್ತಿತ್ತು. ಇಂದು ಕನ್ನಡ ಕ್ಷೇತ್ರ ವಿಶಾಲವಾಗಿದೆ. ಅನೇಕ ರಸಿಕ ಪದವೀಧರರು ಕನ್ನಡದಲ್ಲಿ ಸರಸವಾಗಿ ವಿಮರ್ಶಕತೆಯಿಂದ ಬರೆಯುತ್ತಿದ್ದಾರೆ. ಆದರೂ ಮೂರ್ತ್ಯಾಚಾರ್ಯರ ಪ್ರಖರ ಪಾಂಡಿತ್ಯ ಇಂದು ದುರ್ಮಿಳವಾಗಿರುವದು. ಅವರು ಗ್ರಂಥ ಲೇಖನಕ್ಕೆ ವಿಶೇಷವಾಗಿ ಕೈ ಹಾಕಲಿಲ್ಲ. (ಕುಂಡಲಿಗಿರ್ಯಾಚಾರ್ಯರ ಶಬ್ದಾನುಶಾಸನದ ಪೂರ್ತಿಗೆ ಏನೋ ಸಹಾಯ ಮಾಡಿದಂತಿವೆ) ಇಂದಿನವರಂತೆ ಲೇಖನದ ಹುಚ್ಚು ಅವರಿಗಿದ್ದರೆ ಇಂದು ಅವರ ಗ್ರಂಥಗಳು ಅನೇಕರಿಗೆ ಹುಚ್ಚು ಹಿಡಿಸಬಹುದಾಗಿತ್ತು.

ಕಟ್ಟಿ ಆಚಾರ್ಯರು ಸಾದಾ ವೃತ್ತಿಯವರು. ಕೃಷ್ಣಕಾಯರು. ವಾಮನಮೂರ್ತಿಗಳು. ನಾವು ಕಾಲೇಜಕ್ಕೆ ಬಂದ ಒಂದೆರಡು ದಿನಗಳ ವರೆಗೆ ಅವರು ಅಡಿಗೆಯವರು ಇರಬೇಕೆಂದು ಭಾವಿಸಿದ್ದೆವು. ಮುಂದೆ ಪಾಠ ಹೇಳಲಿಕ್ಕೆ ಬಂದಾಗ ಅವರ ವಾಕ್ ಶೈಲಿಯನ್ನು ನೋಡಿ "ವಾಗೀಶ್ವರಂ ಪಿತರಮೇವ ತವಾನತೋಸ್ಮಿ" ಎಂಬ ಭಾವನೆಗಳು ಉದಿತವಾದವು.

ಆಗ ಶಂಕರ ಶಾಸ್ತ್ರಿಗಳು ಸಂಸ್ಕೃತ ಶಿಕ್ಷಕರಾಗಿದ್ದರು. ಅವರು ನಮಗೆ ೧ ನೇ ವರುಷಕ್ಕೆ ಕಲಿಸಲು ಬರುತ್ತಿರಲಿಲ್ಲ. ನಮಗೆ ೧ನೇ ವರುಷಕ್ಕೆ ಸಂಸ್ಕೃತವನ್ನು ಗಳಗನಾಥ ಮಾಸ್ತರರೇ ಕಲಿಸುತ್ತಿದ್ದರು. ಆದರೆ ೧, ೨ ಸಾರೆ ಶಂಕರ ಶಾಸ್ತ್ರಿಗಳು ಬಂದಿದ್ದರು. ಅವರು ಹರಟಿ ಹೊಡೆಯುತ್ತ ವಿನೋದದಿಂದ ಕಲಿಸುವರು. ಕರ್ಮಣಿ ಪ್ರಯೋಗವನ್ನು ಅವರು ಆಡುನುಡಿಯಲ್ಲಿಯೇ ಕಲಿಸಿದರು. ಅವರು ಕಲಿಸಿದ್ದು ಸಂಸ್ಕೃತವು ಕಠಿನ ಭಾಷೆಯೆನಿಸಿದರೂ ಮರೆಯುತ್ತಿರಲಿಲ್ಲ.

೨ನೇ ಸಾರೆ ನಾನು ಕಾಲೇಜಕ್ಕೆ ಬಂದಾಗ ಎಲ್. ಸಿ. ರಾಮರಾಯರು ಪ್ರಿನ್ಸಿಪಾಲರು. ಕ್ಷೇತ್ರ ಸಂಕುಚಿತವಾದರೂ ಅವರ ಸಾದಾ ವರ್ತನೆ ಅನುಕರಣೀಯ. ನಾನು ಬಡವರ ಮಕ್ಕಳಿಗೆ ಮೊದಲು ಬಾಳುವೆ ಮಾಡುವ ಶಿಕ್ಷಣವನ್ನು ಕೊಡುವೆನೆಂದು ನುಡಿಯುವರು. ಅದರಂತೆ ಅವರು ನಡೆದು ತೋರಿಸಿದರು. ಡಾಯರೆಕ್ಟರ ಸಾಹೇಬರು ಬಂದಾಗ ನಿರ್ವಾಹವಿಲ್ಲದೆ ಚಣ್ಣವನ್ನು ತೊಡುತ್ತಿದ್ದರು. ವಿದ್ಯಾರ್ಥಿಗಳು ಶೀಲವಂತರಾಗಬೇಕೆಂಬುದೇ ಅವರ ಗುರಿ. ಅವರು ವಿದ್ಯಾರ್ಥಿಗಳಿಗೆ ಶಿಕ್ಷೆಯನ್ನು ಮಾಡುತ್ತಿರಲಿಲ್ಲ. ಆದರೆ ಅವರ ಪರಿಶೋಧಕ ದೃಷ್ಟಿ ಸೂಕ್ಷ್ಮ ದೃಷ್ಟಿ. ವಿದ್ಯಾರ್ಥಿಗಳು ತಪ್ಪು ಮಾಡದಂತೆ ಅವರನ್ನು ರಕ್ಷಣೆ ಮಾಡುತ್ತಿತ್ತು. ರವಿವಾರ ಅವರ ಕಣ್ಣು ತಪ್ಪಿಸಿ ಚಹಾದ ಅಂಗಡಿಗೆ ಹೋದಾಗ ಯಾವ ದಾರಿಯಿಂದಲೋ ಬಂದು ಟೇಬಲ್ಲಿನ ಮುಂದೆಯೇ ಬಂದು ನಿಂತು ಬಿಡುತ್ತಿದ್ದರು. "ಇಂದು ಏಕಾದಶಿ ಭಜಿ ಭಕ್ಷಿಸಿದಿ" ಎಂದು ಹೋಗಿ ಬಿಟ್ಟರು. ಇದಕ್ಕೂ ಹೆಚ್ಚಿನ ಶಿಕ್ಷೆಯನ್ನು ಅವರು ಎಂದೂ ಮಾಡಲಿಲ್ಲ. ಆದರೆ ವಿದ್ಯಾರ್ಥಿಗಳು ತಪ್ಪು ಮಾಡಿದರೆ ರಾಯರು ನೋಡುವರೆಂಬ ಭಯದಿಂದ ಯಾರೂ ಸಹಸಾ ತಪ್ಪುಗಳ ದಾರಿಯನ್ನು ಹಿಡಿಯುತ್ತಿರಲಿಲ್ಲ. ಅವರು ನಮಗೆ ಕಲಿಸಿದ್ದು "Character is Destiny" ಶೀಲವು ದೈವವನ್ನು ನಿರ್ಮಿಸುವದು. ನಾವು ಸುಶೀಲರಾದರೆ ಭಾಗ್ಯವಂತರಾಗುವೆವು. ಇಲ್ಲವಾದರೆ ಇಲ್ಲ. ‘‘आचारः परमो धर्मः| ” ಇದು ಅವರ ಅನುಕರಣೀಯ ಗುಣ, ನಡೆದು ತೋರಿಸಿದರು.

‘ಆಚಾರಃ ಪರಮೋ ಧರ್ಮಃ’ ಇಂದಿನ ವಿದ್ಯಾರ್ಥಿಗಳು ವಿಲಾಸಪ್ರಿಯರಾಗದೆ ಆಚಾರ ಧರ್ಮವನ್ನು ಪಾಲಿಸಬೇಕು. ಶಿಕ್ಷಕರಿಗೆ ಇದೇ ಅಲಂಕಾರ. ದಿ. ಕುಲಕರ್ಣಿಯವರು ಪ್ರಿನ್ಸಿಪಾಲರಿದ್ದಾಗ ಕೊಲ್ಹಟಕರರು ಸಾಯನ್ಸ ಶಿಕ್ಷಕರು. ಅವರು ನಮಗೆ ದುರ್ಬಿನಿನಿಂದ ಎಲ್ಲ ಗ್ರಹಗಳ ದರ್ಶನ ಮಾಡಿಸಿದರು. ಹರ್ಶಲ ನೆಪಚ್ಯೂನರನ್ನು ಮಾತ್ರ ನೋಡಲಿಲ್ಲ. ಅಷ್ಟು ದೊಡ್ಡ ದುರ್ಬಿನ ಇರಲಿಲ್ಲವೆನ್ನಿರಿ. ಶ್ರೀ ಕೊಲ್ಹಟಕರರು ಜೋತಿಃಶಾಸ್ತ್ರ ಬಲ್ಲವರು. ಅವರು ದಿವಂಗತ ಕೇತಕರರ ಶಿಷ್ಯರು. ಒಮ್ಮೆ ನನ್ನ ಸಂಸ್ಕೃತ ವ್ಯಾಖ್ಯಾನವನ್ನು ಏರ್ಪಡಿಸಿದ್ದರು. ಕೇಳಿ ಬಹಳೇ ಸಂತಸಬಟ್ಟರು. ‘ಶಿಷ್ಯಾದಿಚ್ಛೇತ್ ಪರಾಜಯಂ’ ಶಿಷ್ಯನ ಜಾಣತನವನ್ನು ಕಂಡು ಹಿರಿ–ಹಿರಿ ಹಿಗ್ಗುವದು. ಇದು ಸದ್ಗುರುವಿನ ಲಕ್ಷಣ. ನಾನು ಹಿಂದಿನಿಂದ ಮೈಸೂರಿಗೆ ಹೋಗಿ ಪಂಡಿತ ಪರೀಕ್ಷೆ ಪಾಸಾದ ಬಳಿಕ ದಿ. ಕಟ್ಟಿ ಮೂರ್ತ್ಯಾಚಾರ್ಯರಿಗೆ ಭೆಟ್ಟಿಯಾದಾಗ ನೀವು ನಾಲ್ವರು ನನ್ನ ಕೀರ್ತಿಯನ್ನು ಉಳಿಸಿದಿರಿ. ಪೂಜಾರ, ಹುಲಿಕವಿ, ಗಲಗಲಿ ಕವಲಿ ಇವರೆಲ್ಲರೂ ಹಿಂದು ಮುಂದಿನ ಅವರ ಶಿಷ್ಯರೇ– ಆಗ ಪಂಡಿತ ಪರೀಕ್ಷೆ ಪಾಸಾದವರಿಗೆ ಸಾಕಷ್ಟು ಪ್ರತಿಫಲವಿರಲಿಲ್ಲ. ಪೂಜಾರ ಹುಲಿಕವಿಯವರಿಗೆ ಏನೋ ಸಾಧಾರಣ ಸ್ಥಳವು ಸಿಕ್ಕರೂ ನಾವು ಇಬ್ಬರು ಮೂವರು ಪ್ರಾಥಮಿಕ ಶಾಲೆಯಲ್ಲಿ ಕಾಲ ಕಳೆಯಬೇಕಾಯಿತು. ಶ್ರೀ ಪೂಜಾರರು ನಿವೃತ್ತರಾದಾಗ ನನಗಾಗಿ ಅನೇಕ ಮಹಾನುಭಾವರು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಮುಂದೆ ನಾನು ನಿವೃತ್ತನಾಗುವ ಸಮಯದಲ್ಲಿ ನನ್ನ ಮಗನಿಗೆ

ಟ್ರೇನಿಂಗ ಕಾಲೇಜಿನಲ್ಲಿ ಅಧ್ಯಾಪಕನಾಗುವ ಯೋಗ ಬಂದಿತು. (ಅವನು ಪದವೀಧರನೇ ಇರುವನು.) ಆಗ ಪ್ರಿನ್ಸಿಪಾಲರಾಗಿದ್ದ ಶ್ರೀ ಆರ್. ವ್ಹಿ. ದೇಸಾಯರಿಗೆ ಪತ್ರ ಬರೆದೆನು. "ಪುತ್ರಾದಿಚ್ಛೇತ್ ಪರಾಜಯಂ" "A time will come of itself" ಇದು ಟಾಗೋರರ ಮಾತು. ದಿವಂಗತ ಗೋಖಲೆಯವರು ಒಮ್ಮೆ ತಮ್ಮ ಭಾಷಣದಲ್ಲಿ ಹೇಳಿದ್ದರು. ಇಂದಿನ ದೇಶ ಸೇವಕರು ತಮಗೆ ಸಿಗುವ ಅಪಜಯಗಳಿಂದಲೇ ತೃಪ್ತರಾಗಬೇಕು. ಮುಂದಿನ ದೇಶ ಭಕ್ತರಿಗೆ ಮಹತ್ತರ ವಿಜಯವು ದೊರಕತಕ್ಕದ್ದಿರುವದು. ಅವರ ನುಡಿ ಸತ್ಯವಾಯಿತು. ಗೋಖಲೆಯವರ ಶಿಷ್ಯರೆಂದು ಹೇಳಿಕೊಳ್ಳುವ ಮಹಾತ್ಮಾ ಗಾಂಧಿಯವರಿಗೆ ಮಹತ್ತರ ವಿಜಯವು ದೊರಕಿತು.

ನಾವು ಸಣ್ಣವರು. ಸಣ್ಣ ಕ್ಷೇತ್ರದಲ್ಲಿ ಹೋರಾಡತಕ್ಕವರು. ನಾವು ಕನ್ನಡ ಪಂಡಿತರು ಅಂದು ಅಪಜಯವನ್ನು ಹೊಂದಿದರೂ ಇಂದು ಮೈಸೂರ ಸರಕಾರವು ಪಂಡಿತರನ್ನು ಪದವೀಧರರ ಶ್ರೇಣಿಯಲ್ಲಿ ಎಣಿಸಿದೆ. ನಮಗೆ ಅದರ ಪ್ರತ್ಯಕ್ಷ ಫಲವಿಲ್ಲದಿದ್ದರೂ ನೋಡುವ ಭಾಗ್ಯ ದೊರಕಿದ್ದು ಸಂತೋಷ. ಇರಲಿ ಸಾಕು. ನನ್ನ ಸ್ಮೃತಿ ಫಲಕದಲ್ಲಿ ಮೂಡಿದ ಎಷ್ಟೋ ಸುಂದರ ಚಿತ್ರಗಳನ್ನು ತೋರಿಸಬಹುದು. ಆದರೆ ಹಳೆಯ ಪ್ರಾಯಮರಿ ಟೀಚರ ಹಳೆಯ ಪುರಾಣ ಬಿಚ್ಚುವನೆಂದು ವಾಚಕರು ಬೇಸರಿಯಬಹುದು.

ಬರೆಹಗಾರಿಕೆಯ ಬೀಜಾರೋಪಣ

ಲೇಖಕರು : **ಪಂಡಿತ ಚಿ. ಎ. ಕವಲಿ,** ಧಾರವಾಡ.

"Is he the very boy who stands first? "

"Yes: for all the four districts"

"Oh! the chap seems to be very smart"

೧೯೧೭ನೆಯ ವರ್ಷ. ಪ್ರವೇಶ ಪರೀಕ್ಷೆಯ ಕೊನೆಯ ದಿನ ತೋಂಡೀ ಪರೀಕ್ಷೆಗೆ ನಿಂತಿದ್ದೆ. ಪ್ರಿನ್ಸಿಪಲ್ ಕುಲಕರಣಿ ಅವರೂ ಶ್ರೀ ಕೊಲ್ಲಟಕರ ಗುರುಗಳೂ ಪರೀಕ್ಷಕರಾಗಿ ಬಂದರು. ನನ್ನ ಸರದಿ ಬಂದಾಗ ಹೆಸರು ನಂಬರುಗಳನ್ನು ಕೇಳಿದರು. ಆಗ ಅವರಿಬ್ಬರೂ ತಮ್ಮ ತಮ್ಮೊಳಗೆ ಇಂಗ್ರೇಜಿಯಲ್ಲಿ ನನ್ನ ಬಗೆಗೆ ಮಾತನಾಡಿದುದನ್ನು ಆರಂಭದಲ್ಲಿ ಕೊಟ್ಟಿರುವೆ.

ಇವನೊಬ್ಬ ಕನ್ನಡ ವಿದ್ಯಾರ್ಥಿ; ಇಂಗ್ರೇಜಿಯನ್ನು ಅರಿಯ–ಎಂದು ಅವರ ಕಲ್ಪನೆ. ತತ್ಪೂರ್ವದಲ್ಲಿಯೇ ನಾನು ಇಂಗ್ರೇಜಿ ಮೂರನೆಯ ಇಯತ್ತೆಯಲ್ಲಿ ಉತ್ತೀರ್ಣನಾಗಿದ್ದೆ ಎಂದು ಅವರಿಗೆ ತಿಳಿಯದು. ಸರಿ. ಅವರ ಮಾತು ಕತೆಗಳು ನನಗೆ ಕಾಣದ ಲೋಕದಿಂದ ಕೇಳಿಬರುವ 'ಆಕಾಶವಾಣಿಯೋ ಎನಿಸಿತು ! ಈ ಸವಿನೆನಹುಗಳನ್ನು ಎದೆಯಲ್ಲಿರಿಸಿಕೊಂಡೆ ನಾನು ೧೯೧೮ರಲ್ಲಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ' ಸಂಸ್ಥೆಯನ್ನು ಸೇರಿದೆ.

ಆ ಕಾಲದ ವರೆಗೆ ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳ ಸಲುವಾಗಿ ಇದ್ದುದು ಅದೊಂದೇ ಟ್ರೇನಿಂಗ ಕಾಲೇಜು–ಶಿಕ್ಷಣ ಸಂಸ್ಥೆ. ನಾನು ಆಗಮಿಸಲಿರುವ ಸರ್ವ ವಿದ್ಯಾರ್ಥಿಗಳಲ್ಲಿಯೂ ಪ್ರಪ್ರಥಮನಾಗಿದ್ದೆ. ಆ ಸಮಯಕ್ಕೆ ಕಾಲೇಜಿನಲ್ಲಿದ್ದವರು ಸುಮಾರು ಮುನ್ನೂರು ಜನ ವಿದ್ಯಾರ್ಥಿಗಳು. ಎತ್ತನೋಡಿದತ್ತ ತಾರುಣ್ಯದ ತೇಜಸ್ಸು, ವಿದ್ಯೆಯ ಓಜಸ್ಸುಗಳಿಂದ ಮೆರೆವ ಮೋರೆಗಳು. 'ಅಧೃಷ್ಯಶ್ಚಾಭಿ ಗಮ್ಯಶ್ಚ....' ಎನ್ನುವ ಕವಿಕುಲಗುರುವಿನ ಸತ್ಯವಚನಕ್ಕೆ ಸಾಕ್ಷ್ಯದಂತಿದ್ದ ಗುರುವರ್ಗ; ಕನ್ನಡಿಯ ಕಿಟಕಿ ಕಪಾಟುಗಳಿಂದೊಪ್ಪುವ ಕೋಣೆಗಳನ್ನುಳ್ಳ ಎರಡಂತಸ್ತಿನ ಸಾಲು ಸಾಲುಗಳು; ಮಧ್ಯದಲ್ಲಿ ಭವ್ಯ ಸಭಾಭವನ; ಸುತ್ತಲೂ ಸುಂದರವಾದ ತರುಲತೆಗಳು; ಹಸಿದ ಹೊಟ್ಟೆಯನ್ನು ಉಣಿಸಿ ತಣಿಸುವ ಅನ್ನಪೂರ್ಣೆಯ ಆಗಾರಗಳು; ವಿದ್ಯಾದಾನಕ್ಕೆ ಸಿದ್ಧವಾಗಿ ಮುಗಿಲೆತ್ತರದ ಗೋಪುರವನ್ನುಳ್ಳ ವರ್ಗ ಮಂದಿರಗಳ ಪಂಕ್ತಿ....! ಒಂದೇ, ಎರಡೇ–? ಶಾರದಾ ದೇವಿಯ ಸುರಮ್ಯ ಸಾಮ್ರಾಜ್ಯದಲ್ಲಿ ಸುಳಿದಾಡುವ ಭಾಗ್ಯ ನನ್ನದಾಯಿತಲ್ಲ' ಎಂಬ ಹಿಗ್ಗು ಹೊನಲಾಗಿ ಹರಿಯಿತು ಮೊತ್ತ ಮೊದಲನೆಯ ದಿನವೇ! ಆ ಸವಿನೆನಹು ಇಂದಿಗೂ ನನ್ನ ಚಿತ್ತ ಭಿತ್ತಿಯಲ್ಲಿ ಅಚ್ಚೊತ್ತಿ ನಿಂತಿದೆ.

ವರ್ಗದಲ್ಲಿ ಕಾಲಿಟ್ಟ ಪ್ರಥಮ ದಿನವೂ ನನ್ನ

ರನ್ನೇ ಭೂಮಿಗಿಳಿಸಿ ಪಾಠ ಹೇಳುವಂತೆ ನಮಗೆ ತೋರುತ್ತಿತ್ತು. ಇಂದು ಕನ್ನಡ ಕ್ಷೇತ್ರ ವಿಶಾಲವಾಗಿದೆ. ಅನೇಕ ರಸಿಕ ಪದವೀಧರರು ಕನ್ನಡದಲ್ಲಿ ಸರಸವಾಗಿ ವಿಮರ್ಶಕತೆಯಿಂದ ಬರೆಯಹತ್ತಿದ್ದಾರೆ. ಆದರೂ ಮೂರ್ತ್ಯಾಚಾರ್ಯರ ಪ್ರಖರ ಪಾಂಡಿತ್ಯ ಇಂದು ದುರ್ಮಿಳವಾಗಿರುವದು. ಅವರು ಗ್ರಂಥ ಲೇಖನಕ್ಕೆ ವಿಶೇಷವಾಗಿ ಕೈ ಹಾಕಲಿಲ್ಲ. (ಕುಂಡಲಿಗಿರ್ಯಾಚಾರ್ಯರ ಶಬ್ದಾನುಶಾಸನದ ಪೂರ್ತಿಗೆ ಏನೋ ಸಹಾಯ ಮಾಡಿದಂತಿದೆ) ಇಂದಿನವರಂತೆ ಲೇಖನದ ಹುಚ್ಚು ಅವರಿಗಿದ್ದರೆ ಇಂದು ಅವರ ಗ್ರಂಥಗಳು ಅನೇಕರಿಗೆ ಹುಚ್ಚು ಹಿಡಿಸಬಹುದಾಗಿತ್ತು.

ಕಟ್ಟಿ ಆಚಾರ್ಯರು ಸಾದಾ ವೃತ್ತಿಯವರು. ಕೃಷ್ಣರಾಯರು. ವಾಮನಮೂರ್ತಿಗಳು. ನಾವು ಕಾಲೇಜಕ್ಕೆ ಬಂದ ಒಂದೆರಡು ದಿನಗಳ ವರೆಗೆ ಅವರು ಅಡಿಗೆಯವರು ಇರಬೇಕೆಂದು ಭಾವಿಸಿದ್ದೆವು. ಮುಂದೆ ಪಾಠ ಹೇಳಲಿಕ್ಕೆ ಬಂದಾಗ ಅವರ ವಾಕ್ ಶೈಲಿಯನ್ನು ನೋಡಿ "ವಾಗೀಶ್ವರಂ ಪಿತರಮೇವ ತವಾನತೋಸ್ಮಿ" ಎಂಬ ಭಾವನೆಗಳು ಉದಿತವಾದವು.

ಆಗ ಶಂಕರ ಶಾಸ್ತ್ರಿಗಳು ಸಂಸ್ಕೃತ ಶಿಕ್ಷಕರಾಗಿದ್ದರು. ಅವರು ನಮಗೆ ೧ ನೇ ವರುಷಕ್ಕೆ ಕಲಿಸಲು ಬರುತ್ತಿರಲಿಲ್ಲ. ನಮಗೆ ೧ನೇ ವರುಷಕ್ಕೆ ಸಂಸ್ಕೃತವನ್ನು ಗಳಗನಾಥ ಮಾಸ್ತರರೇ ಕಲಿಸುತ್ತಿದ್ದರು. ಆದರೆ ೧, ೨ ಸಾರೆ ಶಂಕರ ಶಾಸ್ತ್ರಿಗಳು ಬಂದಿದ್ದರು. ಅವರು ಹರಟಿ ಹೊಡೆಯುತ್ತ ವಿನೋದದಿಂದ ಕಲಿಸುವರು. ಕರ್ಮಣಿ ಪ್ರಯೋಗವನ್ನು ಅವರು ಆಡುನುಡಿಯಲ್ಲಿಯೇ ಕಲಿಸಿದರು. ಅವರು ಕಲಿಸಿದ್ದು ಸಂಸ್ಕೃತವು ಕಠಿಣ ಭಾಷೆಯೆನಿಸಿದರೂ ಮರೆಯುತ್ತಿರಲಿಲ್ಲ.

೨ನೇ ಸಾರೆ ನಾನು ಕಾಲೇಜಕ್ಕೆ ಬಂದಾಗ ಎಲ್. ಸಿ. ರಾಮರಾಯರು ಪ್ರಿನ್ಸಿಪಾಲರು. ಕ್ಷೇತ್ರ ಸಂಕುಚಿತವಾದರೂ ಅವರ ಸಾದಾ ವರ್ತನೆ ಅನುಕರಣೀಯ. ನಾನು ಬಡವರ ಮಕ್ಕಳಿಗೆ ಮೊದಲು ಬಾಳುವೆ ಮಾಡುವ ಶಿಕ್ಷಣವನ್ನು ಕೊಡುವೆನೆಂದು ನುಡಿಯುವರು. ಅದರಂತೆ ಅವರು ನಡೆದು ತೋರಿಸಿದರು. ಡಾಯರೆಕ್ಟರ ಸಾಹೇಬರು ಬಂದಾಗ ನಿರ್ವಾಹವಿಲ್ಲದೆ ಚಣ್ಣವನ್ನು ತೊಡುತ್ತಿದ್ದರು. ವಿದ್ಯಾರ್ಥಿಗಳು ಶೀಲವಂತರಾಗಬೇಕೆಂಬುದೇ ಅವರ ಗುರಿ. ಅವರು ವಿದ್ಯಾರ್ಥಿಗಳಿಗೆ ಶಿಕ್ಷೆಯನ್ನು ಮಾಡುತ್ತಿರಲಿಲ್ಲ. ಆದರೆ ಅವರ ಪರಿಶೋಧಕ ದೃಷ್ಟಿ. ಸೂಕ್ಷ್ಮ ದೃಷ್ಟಿ. ವಿದ್ಯಾರ್ಥಿಗಳು ತಪ್ಪು ಮಾಡದಂತೆ ಅವರನ್ನು ರಕ್ಷಣೆ ಮಾಡುತ್ತಿತ್ತು. ರವಿವಾರ ಅವರ ಕಣ್ಣು ತಪ್ಪಿಸಿ ಚಹಾದ ಅಂಗಡಿಗೆ ಹೋದಾಗ ಯಾವ ದಾರಿಯಿಂದಲೋ ಬಂದು ಟೇಬಲ್ಲಿನ ಮುಂದೆಯೇ ಬಂದು ನಿಂತು ಬಿಡುತ್ತಿದ್ದರು. "ಇಂದು ಏಕಾದಶಿ ಭಜಿ ಭಕ್ಷಿಸಿದಿ" ಎಂದು ಹೋಗಿ ಬಿಟ್ಟರು. ಇದಕ್ಕೂ ಹೆಚ್ಚಿನ ಶಿಕ್ಷೆಯನ್ನು ಅವರು ಎಂದೂ ಮಾಡಲಿಲ್ಲ. ಆದರೆ ವಿದ್ಯಾರ್ಥಿಗಳು ತಪ್ಪು ಮಾಡಿದರೆ ರಾಯರು ನೋಡುವರೆಂಬ ಭಯದಿಂದ ಯಾರೂ ಸಹಸಾ ತಪ್ಪುಗಳ ದಾರಿಯನ್ನು ಹಿಡಿಯುತ್ತಿರಲಿಲ್ಲ. ಅವರು ನಮಗೆ ಕಲಿಸಿದ್ದು "Character is Destiny" ಶೀಲವು ದೈವವನ್ನು ನಿರ್ಮಿಸುವದು. ನಾವು ಸುಶೀಲರಾದರೆ ಭಾಗ್ಯವಂತರಾಗುವೆವು. ಇಲ್ಲವಾದರೆ ಇಲ್ಲ. "आचारः परमो धर्मः| " ಇದು ಅವರ ಅನುಕರಣೀಯ ಗುಣ, ನಡೆದು ತೋರಿಸಿದರು.

'ಆಚಾರಃ ಪರಮೋ ಧರ್ಮಃ' ಇಂದಿನ ವಿದ್ಯಾರ್ಥಿಗಳು ವಿಲಾಸಪ್ರಿಯರಾಗದೆ ಆಚಾರ ಧರ್ಮವನ್ನು ಪಾಲಿಸಬೇಕು. ಶಿಕ್ಷಕರಿಗೆ ಇದೇ ಅಲಂಕಾರ. ದಿ. ಕುಲಕರ್ಣಿಯವರು ಪ್ರಿನ್ಸಿಪಾಲರಿದ್ದಾಗ ಕೊಲ್ಹಟಕರರು ಸಾಯನ್ಸ ಶಿಕ್ಷಕರು. ಅವರು ನಮಗೆ ದುರ್ಬಿನಿನಿಂದ ಎಲ್ಲ ಗ್ರಹಗಳ ದರ್ಶನ ಮಾಡಿಸಿದರು. ಹರ್ಶಲ ನೆಪಚ್ಯೂನರನ್ನು ಮಾತ್ರ ನೋಡಲಿಲ್ಲ. ಅಷ್ಟು ದೊಡ್ಡ ದುರ್ಬಿನ ಇರಲಿಲ್ಲವೆನ್ನಿರಿ. ಶ್ರೀ ಕೊಲ್ಹಟಕರರು ಜೋತಿಃಶಾಸ್ತ್ರ ಬಲ್ಲವರು. ಅವರು ದಿವಂಗತ ಕೇತಕರರ ಶಿಷ್ಯರು. ಒಮ್ಮೆ ನನ್ನ ಸಂಸ್ಕೃತ ವ್ಯಾಖ್ಯಾನವನ್ನು ಏರ್ಪಡಿಸಿದ್ದರು. ಕೇಳಿ ಬಹಳೇ ಸಂತಸಬಟ್ಟರು. 'ಶಿಷ್ಯಾದಿಚ್ಛೇತ್ ಪರಾಜಯಂ' ಶಿಷ್ಯನ ಜಾಣತನವನ್ನು ಕಂಡು ಹಿರಿ–ಹಿರಿ ಹಿಗ್ಗುವದು. ಇದು ಸದ್ಗುರುವಿನ ಲಕ್ಷಣ. ನಾನು ಹಿಂದಿನಿಂದ ಮೈಸೂರಿಗೆ ಹೋಗಿ ಪಂಡಿತ ಪರೀಕ್ಷೆ ಪಾಸಾದ ಬಳಿಕ ದಿ. ಕಟ್ಟಿ ಮೂರ್ತ್ಯಾಚಾರ್ಯರಿಗೆ ಭೆಟ್ಟಿಯಾದಾಗ ನೀವು ನಾಲ್ವರು ನನ್ನ ಕೀರ್ತಿಯನ್ನು ಉಳಿಸಿದಿರಿ. ಪೂಜಾರ, ಹುಲಿಕವಿ, ಗಲಗಲಿ ಕವಲಿ ಇವರೆಲ್ಲರೂ ಹಿಂದು ಮುಂದಿನ ಅವರ ಶಿಷ್ಯರೇ– ಆಗ ಪಂಡಿತ ಪರೀಕ್ಷೆ ಪಾಸಾದವರಿಗೆ ಸಾಕಷ್ಟು ಪ್ರತಿಫಲವಿರಲಿಲ್ಲ. ಪೂಜಾರ ಹುಲಿಕವಿಯವರಿಗೆ ಏನೋ ಸಾಧಾರಣ ಸ್ಥಳವು ಸಿಕ್ಕರೂ ನಾವು ಇಬ್ಬರು ಮೂವರು ಪ್ರಾಥಮಿಕ ಶಾಲೆಯಲ್ಲಿ ಕಾಲ ಕಳೆಯಬೇಕಾಯಿತು. ಶ್ರೀ ಪೂಜಾರರು ನಿವೃತ್ತರಾದಾಗ ನನಗಾಗಿ ಅನೇಕ ಮಹಾನುಭಾವರು ಪ್ರಯತ್ನಿಸಿದರೂ ಸಫಲವಾಗಲಿಲ್ಲ. ಮುಂದೆ ನಾನು ನಿವೃತ್ತನಾಗುವ ಸಮಯದಲ್ಲಿ ನನ್ನ ಮಗನಿಗೆ

ಟ್ರೇನಿಂಗ ಕಾಲೇಜಿನಲ್ಲಿ ಅಧ್ಯಾಪಕನಾಗುವ ಯೋಗ ಬಂದಿತು. (ಅವನು ಪದವೀಧರನೇ ಇರುವನು.) ಆಗ ಪ್ರಿನ್ಸಿಪಾಲರಾಗಿದ್ದ ಶ್ರೀ ಆರ್. ವ್ಹಿ. ದೇಸಾಯರಿಗೆ ಪತ್ರ ಬರೆದೆನು. "ಪುತ್ರಾದಿಚ್ಛೇತ್ ಪರಾಜಯಂ" "A time will come of itself" ಇದು ಟಾಗೋರರ ಮಾತು. ದಿವಂಗತ ಗೋಖಲೆಯವರು ಒಮ್ಮೆ ತಮ್ಮ ಭಾಷಣದಲ್ಲಿ ಹೇಳಿದ್ದರು. ಇಂದಿನ ದೇಶ ಸೇವಕರು ತಮಗೆ ಸಿಗುವ ಅಪಜಯಗಳಿಂದಲೇ ತೃಪ್ತರಾಗಬೇಕು. ಮುಂದಿನ ದೇಶ ಭಕ್ತರಿಗೆ ಮಹತ್ತರ ವಿಜಯವು ದೊರಕತಕ್ಕದ್ದಿರುವದು. ಅವರ ನುಡಿ ಸತ್ಯವಾಯಿತು. ಗೋಖಲೆಯವರ ಶಿಷ್ಯರೆಂದು ಹೇಳಿಕೊಳ್ಳುವ ಮಹಾತ್ಮಾ ಗಾಂಧಿಯವರಿಗೆ ಮಹತ್ತರ ವಿಜಯವು ದೊರಕಿತು.

ನಾವು ಸಣ್ಣವರು. ಸಣ್ಣ ಕ್ಷೇತ್ರದಲ್ಲಿ ಹೋರಾಡತಕ್ಕವರು. ನಾವು ಕನ್ನಡ ಪಂಡಿತರು ಅಂದು ಅಪಜಯವನ್ನು ಹೊಂದಿದರೂ ಇಂದು ಮೈಸೂರ ಸರಕಾರವು ಪಂಡಿತರನ್ನು ಪದವೀಧರರ ಶ್ರೇಣಿಯಲ್ಲಿ ಎಣಿಸಿದೆ. ನಮಗೆ ಅದರ ಪ್ರತ್ಯಕ್ಷ ಫಲವಿಲ್ಲದಿದ್ದರೂ ನೋಡುವ ಭಾಗ್ಯ ದೊರಕಿದ್ದು ಸಂತೋಷ. ಇರಲಿ ಸಾಕು. ನನ್ನ ಸ್ಮೃತಿ ಫಲಕದಲ್ಲಿ ಮೂಡಿದ ಎಷ್ಟೋ ಸುಂದರ ಚಿತ್ರಗಳನ್ನು ತೋರಿಸಬಹುದು. ಆದರೆ ಹಳೆಯ ಪ್ರಾಯಮರಿ ಟೀಚರ ಹಳೆಯ ಪುರಾಣ ಬಿಚ್ಚುವನೆಂದು ವಾಚಕರು ಬೇಸರಿಯಬಹುದು.

ಬರೆಹಗಾರಿಕೆಯ ಬೀಜಾರೋಪಣ

ಲೇಖಕರು : **ಪಂಡಿತ ಜಿ. ಎ. ಕವಲಿ,** ಧಾರವಾಡ.

"Is he the very boy who stands first?"

"Yes: for all the four districts"

"Oh! the chap seems to be very smart"

೧೯೧೭ನೆಯ ವರ್ಷ. ಪ್ರವೇಶ ಪರೀಕ್ಷೆಯ ಕೊನೆಯ ದಿನ ತೋಂಡೀ ಪರೀಕ್ಷೆಗೆ ನಿಂತಿದ್ದೆ. ಪ್ರಿನ್ಸಿಪಲ್ ಕುಲಕರಣಿ ಅವರೂ ಶ್ರೀ ಕೊಲ್ಹಟಕರ ಗುರುಗಳೂ ಪರೀಕ್ಷಕರಾಗಿ ಬಂದರು. ನನ್ನ ಸರದಿ ಬಂದಾಗ ಹೆಸರು ನಂಬರುಗಳನ್ನು ಕೇಳಿದರು. ಆಗ ಅವರಿಬ್ಬರೂ ತಮ್ಮ ತಮ್ಮೊಳಗೆ ಇಂಗ್ರೇಜಿಯಲ್ಲಿ ನನ್ನ ಬಗೆಗೆ ಮಾತನಾಡಿದುದನ್ನು ಆರಂಭದಲ್ಲಿ ಕೊಟ್ಟಿರುವೆ.

ಇವನೊಬ್ಬ ಕನ್ನಡ ವಿದ್ಯಾರ್ಥಿ; ಇಂಗ್ರೇಜಿಯನ್ನು ಅರಿಯ—ಎಂದು ಅವರ ಕಲ್ಪನೆ. ತತ್ಪೂರ್ವದಲ್ಲಿಯೇ ನಾನು ಇಂಗ್ರೇಜಿ ಮೂರನೆಯ ಇಯತ್ತೆಯಲ್ಲಿ ಉತ್ತೀರ್ಣನಾಗಿದ್ದೆ ಎಂದು ಅವರಿಗೆ ತಿಳಿಯದು. ಸರಿ. ಅವರ ಮಾತು ಕತೆಗಳು ನನಗೆ ಕಾಣದ ಲೋಕದಿಂದ ಕೇಳಿ ಬರುವ 'ಆಕಾಶವಾಣಿಯೋ ಎನಿಸಿತು ! ಈ ಸವಿನೆನಹುಗಳನ್ನು ಎದೆಯಲ್ಲಿರಿಸಿಕೊಂಡೆ ನಾನು ೧೯೧೮ರಲ್ಲಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ' ಸಂಸ್ಥೆಯನ್ನು ಸೇರಿದೆ.

ಆ ಕಾಲದ ವರೆಗೆ ಉತ್ತರ ಕರ್ನಾಟಕದ ನಾಲ್ಕು ಜಿಲ್ಲೆಗಳ ಸಲುವಾಗಿ ಇದ್ದುದು ಅದೊಂದೇ ಟ್ರೇನಿಂಗ ಕಾಲೇಜು—ಶಿಕ್ಷಣ ಸಂಸ್ಥೆ. ನಾನು ಆಗಮಿಸಲಿರುವ ಸರ್ವ ವಿದ್ಯಾರ್ಥಿಗಳಲ್ಲಿಯೂ ಪ್ರಪ್ರಥಮನಾಗಿದ್ದೆ. ಆ ಸಮಯಕ್ಕೆ ಕಾಲೇಜಿನಲ್ಲಿದ್ದವರು ಸುಮಾರು ಮುನ್ನೂರು ಜನ ವಿದ್ಯಾರ್ಥಿಗಳು. ಎತ್ತನೋಡಿದತ್ತ ತಾರುಣ್ಯದ ತೇಜಸ್ಸು, ವಿದ್ಯೆಯ ಓಜಸ್ಸುಗಳಿಂದ ಮೆರೆವ ಮೋರೆಗಳು. 'ಅಧೃಷ್ಯಶ್ಚಾಭಿ ಗಮ್ಯಶ್ಚ....' ಎನ್ನುವ ಕವಿಕುಲಗುರುವಿನ ಸತ್ಯ ವಚನಕ್ಕೆ ಸಾಕ್ಷ್ಯದಂತಿದ್ದ ಗುರುವರ್ಗ; ಕನ್ನಡಿಯ ಕಿಟಕಿ ಕಪಾಟುಗಳಿಂದೊಪ್ಪುವ ಕೋಣೆಗಳನ್ನುಳ್ಳ ಎರಡಂತಸ್ತಿನ ಸಾಲು ಸಾಲುಗಳು; ಮಧ್ಯದಲ್ಲಿ ಭವ್ಯ ಸಭಾಭವನ; ಸುತ್ತಲೂ ಸುಂದರವಾದ ತರುಲತೆಗಳು; ಹಸಿದ ಹೊಟ್ಟೆಯನ್ನು ಉಣಿಸಿ ತಣಿಸುವ ಅನ್ನಪೂರ್ಣೆಯ ಆಗಾರಗಳು; ವಿದ್ಯಾದಾನಕ್ಕೆ ಸಿದ್ಧವಾಗಿ ಮುಗಿಲೆತ್ತರದ ಗೋಪುರವನ್ನುಳ್ಳ ವರ್ಗ ಮಂದಿರಗಳ ಪಂಕ್ತಿ....! ಒಂದೇ, ಎರಡೇ—? ಶಾರದಾ ದೇವಿಯ ಸುರಮ್ಯ ಸಾಮ್ರಾಜ್ಯದಲ್ಲಿ ಸುಳಿದಾಡುವ ಭಾಗ್ಯ ನನ್ನದಾಯಿತಲ್ಲ' ಎಂಬ ಹಿಗ್ಗು ಹೊನಲಾಗ ಹರಿಯಿತು ಮೊತ್ತ ಮೊದಲನೆಯ ದಿನವೇ! ಆ ಸವಿನೆನಹು ಇಂದಿಗೂ ನನ್ನ ಚಿತ್ತ ಭಿತ್ತಿಯಲ್ಲಿ ಅಚ್ಚೊತ್ತಿ ನಿಂತಿದೆ.

ವರ್ಗದಲ್ಲಿ ಕಾಲಿಟ್ಟ ಪ್ರಥಮ ದಿನವೂ ನನ್ನ

ಸವಿನೆನಹುಗಳಲ್ಲೊಂದಾಗಿದೆ. ಹಳ್ಳಿಯ ಹನುಮಂತ ದೇವರಗುಡಿಯ ಸಾಲೆಯಲ್ಲಿ ಹರಕು ತಟ್ಟಿನ ಮೇಲೆಯೋ ಗರಸು ನೆಲದ ಮೇಲೆಯೋ ಕುಳಿತು ಕಲಿಯುತ್ತಿದ್ದೆ. ಈಗ ಅಂದವಾದ ಅಚ್ಚುಕಟ್ಟಾದ ಕಟ್ಟಿಗೆಯ ಆಸನ, ಇದಿರಿಗೆ ಬರೆಯುವ ಸಾಧನ! ಖುರ್ಚಿ, ಡೆಸ್ಕು! ಗುರುಗಳು ಬರುವ ವರೆಗೆ ಡೆಸ್ಕುಗಳನ್ನು ಹಿಂದೆ ಮುಂದೆ ಸರಿಸಿದ್ದು ಸರಿಸಿದ್ದೇ–ಬಾಲಿಶ ಬುದ್ಧಿಯಿಂದ.

ಗುರುಗಳು ಬಂದರು. ಎದ್ದು ನಿಂತು ವಂದನೆಯನ್ನು ಸಲ್ಲಿಸಿದೆ. ಆ ಗಂಭೀರಾಕೃತಿಯ ಕವಚದ ಅಂತರಂಗದೊಳಗೆ ಮಾತೃಪ್ರೇಮದ ಮಮತೆಯನ್ನು ಕಂಡುಕೊಂಡೆ ಅವರ ಮಾತುಗಳಲ್ಲಿ. ತಮ್ಮ ಪವಿತ್ರ ಜ್ಞಾನದ ಅರ್ಕ ನಮ್ಮೆಲ್ಲರ ಮತಿ ಮನಗಳಿಗೆ ಮುಟ್ಟುವಂತೆ ಸವಿಮಾತುಗಳಿಂದ ಸೂಜಿಮದ್ದನ್ನು ಕೊಡುತ್ತಿದ್ದರು. ಇವರಲ್ಲವೇ ಆದರ್ಶ ಶಿಕ್ಷಕರು!

ಮುಂದೊಮ್ಮೆ ಕನ್ನಡ ಭಾಷಾ ವಿಷಯದ ತಾಸು ಆರಂಭವಾಯಿತು. ಪಂಡಿತ ಪೂಜಾರ ಗುರುಗಳು–ವಿಶ್ವಾಮಿತ್ರ ಬ್ರಹ್ಮರ್ಷಿಯಾದದ್ದು–ಎಂಬ ಹಳೆಯ ಕತೆಯನ್ನು ತಕ್ಕ ತಲೆ ಬರೆಹದೊಂದಿಗೆ ಸ್ವಂತದ ಶೈಲಿಯಲ್ಲಿ ಬರೆಯಲು ಅಪ್ಪಣೆಕೊಟ್ಟರು. ‘ಗುಣವನ್ನು ಗೌರವಿಸು’ ಎಂದು ಆ ಕತೆಯನ್ನು ಬರೆದುಕೊಟ್ಟೆ.

ಗುರುಗಳು ಓದಿದರು; ಮತ್ತೆಯೂ ಓದಿದರು! ಹಾಗೆಯೇ ನನ್ನ ಕಡೆಗೊಮ್ಮೆ ಸ್ನಿಗ್ಧ ದೃಷ್ಟಿಯಿಂದ ನೋಡಿದರು!— “ನೀನು ಒಳ್ಳೆಯ ಬರೆಹಗಾರನಾಗಬಲ್ಲೆ, ಬರೆಯುವ ರೂಢಿಯನ್ನಿಡು....” ಎಂದು ಎದೆದುಂಬಿ ಹರಸಿದರು. ಪೂಜ್ಯರ ಶುಭಾಶೀರ್ವಾದದಿಂದ ಅಂದೇ ನನ್ನಲ್ಲಿ “**ಬರೆಹಗಾರಿಕೆಯ ಬೀಜಾರೋಪಣ**”ವಾಯಿತು.

ಗುರುಗಳ ಸಲ್ಪರಕೆಯಿಂದ ಉತ್ತೇಜಿತನಾಗಿ ಮೊತ್ತಮೊದಲಿಗೆ “**ಅಮೇರಿಕೆಯಲ್ಲಿಯ ಬಡವಿದ್ಯಾರ್ಥಿಗಳು**” ಎಂಬ (ಭಾಷಾಂತರಿತ) ಲೇಖವನ್ನು ಬರೆದೆ. ಅದು ‘**ಶಾಲಾಪತ್ರಕ**’ದಲ್ಲಿ ಬೆಳಕನ್ನು ಕಂಡಿತು. ಪರಿಣಾಮವಾಗಿ, ವಿದ್ಯಾರ್ಥಿಗಳೂ ಗುರುಗಳೂ ನನ್ನನ್ನು ಕುತೂಹಲದಿಂದ ನೋಡತೊಡಗಿದರು.

ಗುರುವರ್ಗದಲ್ಲಿ ಪಂಡಿತ ಕಟ್ಟಿ ಮೂರ್ತ್ಯಾಚಾರ್ಯರು ನನ್ನನ್ನು ಅತ್ಯಂತ ಆತ್ಮೀಯತೆಯಿಂದ ಕಾಣುತ್ತಿದ್ದರು. ಲೇಖನ ಕ್ಷೇತ್ರದಲ್ಲಿ ಅವರು ನನಗೊಂದು ಹೊಸ ಬೆಳಕನ್ನೇ ತೋರಿಸಿದರು! “ನಿನ್ನ ಲೇಖನಶೈಲಿ ಚೆನ್ನಾಗಿದೆ, ಆದರೆ ಒಳಗಿನ ವಿಷಯ ನಿನ್ನದಲ್ಲ. ಇಂತಹ ಪರೋಪಜೀವಿಕೆಯಿಂದ ಸ್ವಂತದ ವ್ಯಕ್ತಿತ್ವ ರೂಪುಗೊಳ್ಳುವುದಿಲ್ಲ. ಈಗಲೇ ಬರೆಯುವುದಕ್ಕೆ ಗಡಿಬಿಡಿ ಮಾಡಬೇಡ. ಓದುಗಾರಿಕೆಯನ್ನು ಹೆಚ್ಚಿಸು, ಬುದ್ಧಿಯ ಬಂಡವಲವನ್ನು ಬೆಳೆಸಿಕೊಳ್ಳು. ಅದಕ್ಕೆ ವಿಚಾರ ಅನುಭವಗಳ ಜೊತೆಯಾಗಲಿ. ಆಗ ಬೇಡ ಬೇಡವೆಂದರೂ ಒಳ್ಳೊಳ್ಳೆಯ ಲೇಖನಗಳು– ಸಣ್ಣ ದೊಡ್ಡ ಹೊತ್ತಿಗೆಗಳು ಕೂಡ– ನಿನ್ನಿಂದ ಹುಟ್ಟುತ್ತವೆ. ಉಂಡ ಅನ್ನ ಅರಗಿ ರಕ್ತಗತವಾದ ಮೇಲೆ ಆ ಶಕ್ತಿಯ ಬಲದಿಂದ ಯಾವ ಸಾಹಸ ಕಾರ್ಯವನ್ನೂ ಕೈಗೂಡಿಸಿಕೊಳ್ಳಬಹುದಲ್ಲವೇ? ಈ ಮಾತನ್ನು ಮನವರಿಕೆ ಮಾಡಿಕೊಂಡೆಯಾದರೆ ಮುಂದೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಿನ್ನದೇ ಆದ ಒಂದು ಸ್ಥಾನ ಸಿದ್ಧವಾಗುವುದು, ಸಿದ್ಧವಾಗಲಿ!” ಎಂದು ಪ್ರಾಮಾಣಿಕ ಹೃದಯದಿಂದ ವರದಾನ ಮಾಡಿದರು.

ಇಬ್ಬರೂ ಗುರುಗಳ ಶುಭಾಶೀರ್ವಾದಗಳ ಸವಿನೆನಹು ಅಂದಿಗೂ ಇಂದಿಗೂ ಎಂದೆಂದಿಗೂ ನನ್ನ ಬಾಳಬಟ್ಟೆಯ ಬೆಳಕಾಗಿದೆ.

ಇದಾದ ಸ್ವಲ್ಪ ದಿವಸಗಳಲ್ಲಿಯೇ ಪಂಡಿತ ಪೂಜಾರ ಗುರುಗಳು— ವಿಚಾರ ಮಾಡದೆ ನಿಬಂಧವನ್ನು ಬರೆಯಬಾರದು— ಎಂಬ, ನಿಬಂಧ ವಿಷಯವನ್ನು ಕೊಟ್ಟರು. ಹಿರಿಯ ಗುರುಗಳ ಉಪದೇಶದಂತೆ, ನನ್ನವೇ ಆದ ವಿಚಾರ–ಅನುಭವಗಳನ್ನು ಆ ಬರೆಹದಲ್ಲಿ ಹೆಣೆದೆ; ಅದು ಗುರುಗಳ ಮೆಚ್ಚಿಕೆಯನ್ನು ಪಡೆಯಿತು, ಇಷ್ಟೇ ಅಲ್ಲ, ಶಾಲಾಪತ್ರಕದಲ್ಲಿ ಪ್ರಕಟವಾಯಿತು. ಅದನ್ನೋದಿದ ನನ್ನ ಗೆಳೆಯರೂ ಗುರುಗಳೂ ನನ್ನನ್ನು ಅಭಿನಂದಿಸಿದ ಸವಿನೆನಹಿನ ಚಿತ್ರ ಈಗಲೂ ನನ್ನ ಕಣ್ಣಮುಂದಿದೆ.

ಇಲ್ಲಿಗೆ ಮೊದಲನೆಯ ವರುಷ ಮುಗಿಯಿತು. ದ್ವಿತೀಯ ವರ್ಷದ ಪೂರ್ವಾರ್ಧದಲ್ಲಿ ನನ್ನ ಬರೆಹಗಾರಿಕೆಯ ಬಳ್ಳಿ ಒಳಗೊಳಗೇ ಕುಡಿ ಚಾಚುತ್ತಿತ್ತು. ಅದಕ್ಕೆ ನೀರು ಗೊಬ್ಬರಗಳನ್ನು ಪೂರಯಿಸುವಂತೆ ಬೇರೆ ಬೇರೆ ವಿಷಯಗಳ ಹೊತ್ತಗೆಗಳನ್ನು ಓದುತ್ತ ಕಾಲ ಕಳೆದೆ.

ಉತ್ತರಾರ್ಧ ಆರಂಭವಾಯಿತು. ಅದೊಂದು ದಿವಸ.... !

ಇತಿಹಾಸದ ಗುರುಗಳಾದ ವ್ಹಾಯಿಸ್ ಪ್ರಿನ್ಸಿಪಲ್ ದಿವೇಕರರು ನಮ್ಮ ವರ್ಗಕ್ಕೆ ಬಂದರು. ಅವರ ಹಿಂದೆಯೇ, ನಮ್ಮ ಆರು ತಿಂಗಳ ಪರೀಕ್ಷೆಯ ಉತ್ತರ ಕಾಗದಗಳ ಎರಡು ಗಂಟುಗಳನ್ನು ಮೇಜಿನ ಮೇಲೆ ತಂದಿಟ್ಟ ಸಿಪಾಯಿ. ‘‘ಇದು ಪಾಸು, ಅದು ನಾಪಾಸು” ಎಂದು

ಗಂಭೀರವಾಗಿ ಗುರುಗಳೇ ಹೇಳಿದರು. ತಮ್ಮ ತಮ್ಮ ಹಣೆಬರಹವನ್ನು ಕೇಳಲು ಎಲ್ಲರೂ ಮೈಯೆಲ್ಲ ಕಣ್ಣಾಗಿ ಅತ್ತ ನೋಡತೊಡಗಿದೆವು.

'ಪಾಸ್' ಗಂಟಿನಲ್ಲಿ 'ಕವಲಿ'ಯ ಪೇಪರೇ ಇಲ್ಲ! ನಾನು ಕ್ಲಾಸ್ ಸೆಕ್ರೆಟರಿ; ನಾಲ್ಕು ಜಿಲ್ಲೆಗಳಿಗೆ ನಿಶಾನೆ ಹಿಡಿದವ! ಆದರೆ....? ಸರಿ. ವಿದ್ಯಾರ್ಥಿಗಳಲ್ಲಿ ಗುಜುಗುಜು ಆರಂಭವಾಯಿತು.

'ನಾಪಾಸ್' ಗಂಟನ್ನು ಕೈಗೆತ್ತಿಕೊಂಡರು. ಮೊತ್ತ ಮೊದಲನೆಯ ಹೆಸರೇ— ಜೆ. ಎ. ಕವಲಿ! ನಡುಗುವ ಕಾಲುಗಳಿಂದ ಭಾರವಾದ ಹೆಜ್ಜೆಗಳನ್ನಿಡುತ್ತ ಗುರುಗಳ ಸಮೀಪಕ್ಕೆ ಹೋದೆ. **೫೦ ರಲ್ಲಿ ೩೮** ಗುಣಗಳು ಎಂದು ಮುಗುಳು ನಗುತ್ತ ಗುರುಗಳು ನನ್ನ ಪೇಪರನ್ನು ಕೊಟ್ಟರು ! ಹಾಗೆಯೇ....

You would be a stylish writer in the future; but try to collect the matters as well.

ಎಂದು ಎದೆದುಂಬಿ ಹರಸಿದರು. ಹರುಷ ಹೆಚ್ಚಿದಾಗ ಇಂಗ್ರೇಜಿಯಲ್ಲಿ ಮಾತನಾಡುತ್ತಿದ್ದುದು ಅವರದೊಂದು ವೈಶಿಷ್ಟ್ಯ.

ಈ ಪ್ರಸಂಗದಿಂದ, ನನ್ನ ಹಂಬಲದ ಬಳ್ಳಿ ಮತ್ತೊಂದು ಮೊಳ ಮುಂದೆ ಚಾಚಿತು!

ಮರುದಿನವೇ ರಸಾಯನ ಶಾಸ್ತ್ರದ ಉತ್ತರ ಪತ್ರಿಕೆಗಳು ಬಂದುವು. ಶ್ರೀ ಆರ್. ಕೇ. ನಾಯಿಕ ಗುರುಗಳು ಸ್ನೇಹ ಪೂರ್ಣ ದೃಷ್ಟಿಯಿಂದ ನನ್ನನ್ನು ನೋಡುತ್ತ ಪೇಪರನ್ನು ಕೊಟ್ಟರು. ೧೦೦ರಲ್ಲಿ ೮೭ ಗುಣಗಳು! ಆದರೆ ಮುಖಪತ್ರದ ಮೇಲೆ ಕೆಂಪಕ್ಷರಗಳ Danger Signal!

"ನಿನ್ನ ಬರೆಹದಲ್ಲಿ ಬೆಡಗಿದೆ; ಬಂಡವಳ ಕಡಿಮೆ. ರಸಾಯನ ಶಾಸ್ತ್ರ ಕಲ್ಪನಾ ಸಾಮ್ರಾಜ್ಯದ ಸಾಹಿತ್ಯವಲ್ಲ; ಸತ್ಯ ಸೃಷ್ಟಿಯ ವಿಜ್ಞಾನ ! ಬರೆಹದಲ್ಲಿ ಸೌಂದರ್ಯದೊಡನೆ ಸತ್ತ್ವವೂ ಇರಬೇಕು. ಇವೆರಡರ ಜೊತೆಯಾದಾಗಲೇ ನೀನು ಭವಿಷ್ಯತ್ತಿನಲ್ಲಿ ಬಲ್ಲಿದ ಬರೆಹಗಾರನೆನಿಸುವೆ....!"

ಅಣಕದಲ್ಲಿಯೂ ಆಶೀರ್ವಾದ ! ಈ ಇಬ್ಬರು ಗುರುಗಳ ಚಾಟಿಯ ಏಟಿನಿಂದ, ನನ್ನ ಮಂದ ಬುದ್ಧಿಯ ಕುದುರೆ ಚುರುಕಾಗಿ ಓಡತೊಡಗಿತು. ಕೆಲವು ದಿವಸಗಳಲ್ಲಿಯೇ 'ಹೆಲಿಗೋಲಾಂಡ' ಎಂಬ ಚಾರಿತ್ರಿಕ ಲೇಖನವನ್ನು ಶಾಲಾ ಪತ್ರಕಕ್ಕೆ ಬರೆದುಕೊಟ್ಟೆ. ಅದು ಅಚ್ಚಾಯಿತೆಂದು ಬೇರೆ ಹೇಳಬೇಕಾಗಿಲ್ಲ.

ಸನ್ನಿವೇಶಗಳೆಲ್ಲವೂ ಸವಿನೆನಹುಗಳೇ ಅಲ್ಲವೇ ! ದ್ವಿತೀಯ ವರ್ಷದ ದ್ವಿತೀಯಾರ್ಧದಲ್ಲಿ ಲೇಖನದ ಹವ್ಯಾಸಕ್ಕೆ ಹೊದಿಕೆಯನ್ನು ಹಾಕಲೇ ಬೇಕಾಗಿತ್ತು. ಆ ವರ್ಷದ ಪರೀಕ್ಷೆಯೆಂದರೆ ಅಗ್ನಿ ಪರೀಕ್ಷೆ ! ಪಾಸಾದರೂ ಮೂರನೆಯ ವರ್ಷಕ್ಕೆ ಉಳಿಯಬೇಕಾದರೆ ಮೇಲಿನ ಆರೆಂಟು ನಂಬರಗಳಲ್ಲಿ ಬರಬೇಕು.

ಆಯ್ಕೆಯ ವಿಷಯದಲ್ಲಿ ನನಗೇನೂ ಭಯವಿರಲಿಲ್ಲ. ಆದರೂ—

'ಆಪರಿತೋಷಾದ್ವಿದುಷಾಂ ನ ಸಾಧು ಮನ್ಯೇ ಪ್ರಯೋಗವಿಜ್ಞಾನಮ್' ಎಂದು ವಿಶ್ವಕವಿ ಕಾಳಿದಾಸ ಹೇಳಿಕೊಂಡಿಲ್ಲವೇ ? ಎಂದ ಮೇಲೆ ನನ್ನಂತಹ ಗಾಳಿಯಲ್ಲಿಯ ಗುಂಗಾಡು 'ಪರಿಣಾಮ ಪತ್ರಿಕೆಯ ಭಯವಿಲ್ಲ'ವೆನ್ನುವದು ಹೇಗೆ ?

ತಿಂಗಳೊಪ್ಪತ್ತಿನಲ್ಲಿ ವರ್ಥ ಪ್ರಾಯಿಝ್ (Worth Prize) ಪರೀಕ್ಷೆಯ ಅಭ್ಯರ್ಥಿಯಾದೆ. ನಾಲ್ಕಾರು ಜನ ಮೇಲಾಟಗಾರರಲ್ಲಿ ನಾನೇ ಮೊದಲಿಗನಾಗಿ ೪೦ ರೂಪಾಯಿಗಳ ಮೆಚ್ಚುಗೆಯನ್ನು ಪಡೆದೆ. ಇದೊಂದು ಸಕ್ರಿಯ ಅಥವಾ ಸಕ್ಕರೆಯ ಸವಿನೆನಹು.

ನಮ್ಮ ಕಾಲಿಕ್ಕೆ ೧೯೨೦ ರಲ್ಲಿ ಮೂರನೆಯ ವರ್ಷದ ಅಭ್ಯಾಸ ಪತ್ರಕದಲ್ಲಿ ಭಯಂಕರ (?) ಬದಲಾವಣೆಯಾಗಿತ್ತು. ಹಳೆಯ ಅಭ್ಯಾಸ ಪತ್ರಿಕೆ ಹೋಗಿತ್ತು, ಹೊಸತು ಬಂದಿರಲಿಲ್ಲ. ಅನ್ನಬ್ರಹ್ಮನ ಆರಾಧನೆಯ ಹೊರತು ಬೇರೆ ವಿಷಯವೇ ಇರಲಿಲ್ಲ ನಮಗೆ. ಬೊಜ್ಜು ಬೆಳೆಸುವ ಸ್ಪರ್ಧೆಯಲ್ಲಿ ಗಣಪತಿಗೆ ಇದಿರಾಳಾಗಿ ಸೆಣಸಾಡುವಂತಿತ್ತು ನಮ್ಮ ಭೋಜನ ಪ್ರಮಾಣ ! ನನ್ನ ಕಾಲೇಜಿನ ಸವಿನೆನಹಿಗೆ ನನೆಕೊನೆಯೇರಿದ ಉದಾಹರಣವಿದು !

ವಿದ್ಯಾರ್ಥಿಗಳನ್ನು ಹೊಟ್ಟೆಯ ಮಕ್ಕಳಂತೆ ನೋಡಿಕೊಳ್ಳುತ್ತಿದ್ದ ಸ್ನೇಹಮಯ ಜೀವನವದು ! ಪ್ರಿನ್ಸಿಪಾಲ ಮಹಿಷಿ ರಾಮರಾಯರದು. ನನ್ನ ವಿಷಣ್ಣವದನವನ್ನು ಕಂಡಕೂಡಲೆ—

'ಯಾಕೋ ಕವಲೀ, ಮುಖ ಸಪ್ಪಗೆ ಮಾಡಿದ್ದೀಯಲ್ಲ ! — ಎಂದು ತಾಯ್ಗರುಳಿನಿಂದ ಕೇಳಿದರು.

"ನನಗೆ ದುಡ್ಡು ಬೇಕಾಗಿತ್ತು" ಮುದುಡಿದ ಮೋರೆಯಿಂದಲೇ ಕೇಳಿದೆ.

"ದುಡ್ಡು ಬೇಕಾದರೆ ದುಡಿಯಬೇಕು." ನಗುತ್ತ ಹೇಳಿದರವರು. ತಿಂದು ತಿರುಗುವ ಹೊರತು ದುಡಿತ

ವೆಂದರೇನೋ ನನಗೆ ಗೊತ್ತೇ ಇರಲಿಲ್ಲ. ಆದರೂ ಹಠದಿಂದ ಕೇಳಿದೆ.

“ನಾವು ಕಾಲೇಜ ಆವರಣವನ್ನು ಬಿಟ್ಟು ಹೊರಗೆ ಹೋಗುವಂತೆಯೇ ಇಲ್ಲ ....!”

“ಸರಿ. ಕಾಲೇಜ ಕಂಪೌಂಡಿನೊಳಗಿದ್ದುಕೊಂಡೇ ದುಡಿಯಬೇಕು. ಮುಂದಿನ ಮಾತಿನ ಅಗುಳಿನಿಂದ ಅವರ ಅಭಿಪ್ರಾಯದ ಅನ್ನದ ಪರೀಕ್ಷೆ ಮಾಡಬಿದ್ದರೆ ನೀನೆಂಥ....” ನಗೆಯಲ್ಲಿಯೇ ಮಾತನ್ನು ಮುಗಿಸಿದರು.

ನನ್ನಬುದ್ಧಿಗೆ ಆಹ್ವಾನಕೊಟ್ಟಂತಿತ್ತು ಆ ಮಾತು. ಮರಳಬೇಕೆನ್ನುವಷ್ಟರಲ್ಲಿಯೇ ಒಳಗಿನಿಂದ ಚಹಾ ಬಂದಿತು.

‘ಗೋವಿಂದ ಕಾಕಾನ ಚಹ ನಮ್ಮಲ್ಲಿಯೇ ಆಗಲಿ’ ಎನ್ನುತ್ತ ನನಗೂ ಒಂದು ಕಪ್ ಕೊಟ್ಟರು.

ಮಂಕು ಹಿಡಿದ ಮತಿಯನ್ನು ಬಡಿದೆಬ್ಬಿಸಿದಂತಾಯಿತು ಚಹಾ ಪಾನದಿಂದ. ಹಾಗೆಯೇ ಆ ಆಹ್ವಾನವನ್ನು ಮೆಲುಕುಹಾಕುತ್ತ ಕೋಣೆಗೆ ಮರಳಿದೆ. ಪ್ರಿನ್ಸಿಪಾಲರ ಅಂತರಂಗ ಮಿಂಚಿನಂತೆ ಹೊಳೆದಹಾಗಾಯಿತು. ಎರಡೇ ಎರಡು ತಾಸು ಕುಳಿತು “ಮನಸ್ಸು ಮತ್ತು ಶರೀರ” ಎಂದು ತಾತ್ವಿಕವಾದ ಆದರೆ ನನ್ನ ಸದ್ಯ ಸ್ಥಿತಿಯನ್ನೇ ಕುರಿತು ಒಂದು ಲೇಖನವನ್ನು ಏಳು ಪುಟಗಳಲ್ಲಿ ಬರೆದೆ. ನನ್ನಗೆಳೆಯರು ಅದನ್ನ ಓದಿ ಮೆಚ್ಚಿದರು.

ಸಂಜೆಯ ಚಹಾದ ಹೊತ್ತಿಗೆ ಮತ್ತೆ ಪ್ರಿನ್ಸಿಪಾಲರನ್ನು ಕಂಡೆ. ಲೇಖನವನ್ನು ಅವರಿಗೆ ಒಪ್ಪಿಸಿದೆ. ಕೆಲ ಹೊತ್ತು ಮೌನವಾಗಿ ಅದಕ್ಕೆ ಹಾರುನೋಟ(Glance) ವನ್ನು ಹಾಯಿಸಿದರು....

“ನೋಡ್ತನೆ. ಮುಂದೆ ದೊಡ್ಡ ಬರಹಗಾರನಾಗುವಿ. ಎಂಬುದರ ಪೂರ್ವ ಸೂಚನೆಯಿದೆ ಈ ಲೇಖನದಲ್ಲಿ. ನನ್ನ ಮಾತಿನ ಅರ್ಥ ನಿನಗೆ ತಿಳಿಯಿತೋ ಇಲ್ಲವೋ ಎಂದು ಕೊಂಡಿದ್ದೆ. ಹೊರಗಿನ ತೊಡಕೇ ಬೇರೆ ಇದೆ. ಅದರ ಒಳಹೊಕ್ಕು ಅರ್ಥವನ್ನು ಅರಿತುಕೊಳ್ಳಬೇಕು. ಅದನ್ನೇ ವಿಚಾರ ಅನುಭವಗಳಿಂದ ಒಂದು ರೂಪದ ಸಾಹಿತ್ಯದಲ್ಲಿ ತರಬೇಕು. ಅಂಥ ಸಾಹಿತ್ಯದಲ್ಲಿ ಸತ್ವ-ಸತ್ಯಗಳು ಇದ್ದೇ ಇರುತ್ತವೆ....”! ಆ ಗಂಭೀರ ನಗೆ ನಗುತ್ತ ಮಂದಸ್ಮಿತರಾಗಿಯೇ ಹೇಳಿದರು- “ನಿನಗಿದೋ ಅಯ್ದು ರೂಪಾಯಿ ತೆಗೆದುಕೋ ಬಾ!”

ನನ್ನ ಹೃದಯ ಅದಾವುದೋ ಅವ್ಯಕ್ತ ಆನಂದದಿಂದ ಕರಗಿ ನೀರಾಗಿ ಕಣ್ಣುಗಳಲ್ಲಿ ಹೊರಚಿಮ್ಮಿತು!

“ತಗೋ: ಈ ರೂಪಾಯಿ ಸಾಲವಲ್ಲ ಸಂಭಾವನೆ. ಶಾಲಾಪತ್ರಿಕದಲ್ಲಿ ಇದು ಅಚ್ಚಾದ ಮೇಲೆ ಕಮಿಟಿಯ ನಿರ್ಣಯಕ್ಕೆ ತಕ್ಕ ಪುರಸ್ಕಾರ ದೊರೆಯುವುದು!’’

ಆ ಸಂದರ್ಭದಲ್ಲಿ ನನ್ನ ಬಾಯಿಂದ ಮಾತುಗಳೇ ಹೊರಡಲಿಲ್ಲ. ರೂಪಾಯಿಗಳನ್ನು ತಕ್ಕೊಂಡೆ; ಅವರಿಗೆ ನೆಲಮುಟ್ಟಿ ನಮಸ್ಕಾರ ಮಾಡಿ ಆವೇಶಗೊಂಡವನಂತೆ ಅಲ್ಲಿಂದ ಹೊರಬಿದ್ದೆ. ಅವರು ಕೊಟ್ಟದು ಅಯ್ದೇ ಅಯ್ದು ರೂಪಾಯಿ; ಆದರೆ ಆ ಶುಭಾಶೀರ್ವಾದದ ಹಿಂದಿದ್ದ ಹೃದಯದ ಹಿರಿಮೆ ಭೂಮಿಯ ತೂಕವನ್ನುಳ್ಳದು! ಅವರ ಅಮೃತವಾಣಿ ಕಳೆದ ವರ್ಷ (೧೯೫೬ರಲ್ಲಿ) ಸತ್ಯ ಸೃಷ್ಟಿಯಲ್ಲಿ ಬಂದಿತು. ದಿಲ್ಲಿ ಮುಂಬೈ ಸರಕಾರಗಳಿಂದ ನನ್ನ ಪುಸ್ತಕಗಳಿಗೆ ೨೧೦೦|. ರೂಪಾಯಿಗಳ ಸಂಭಾವನೆ ಸಿಕ್ಕಿತು!

ಮೂರನೆಯ ವರ್ಷದ ಪೂರ್ವಾರ್ಧವೇ ಇವೆಲ್ಲ ಸವಿ ನೆನಪಿನ ಸಮಯ. ಉತ್ತರಾರ್ಧದಲ್ಲಿ ಓದಿನ ದಿಕ್ಕು ಬದಲಾಯಿತು. ಮೈಸೂರು ಪಂಡಿತ ಪರೀಕ್ಷೆಯ ಅಭ್ಯಾಸದ ಸಲುವಾಗಿ ದಿನ ರಾತ್ರಿಗಳು ಉರುಳತೊಡಗಿದವು.

೧೯೩೪ರಲ್ಲಿ ಪಂಡಿತ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಬಂದೆ. ಬುದ್ಧಿಯ ಬಂಡವಲು ಬೆಳೆದಿದ್ದರೂ ಲೇಖನ ಕಾರ್ಯ ಮುಂದುವರಿಯಲಿಲ್ಲ. ಕಾಲದ ಕುಟಿಲ ಗತಿಯೋ ನಿಂತ ನೆಲದ ದೋಷವೋ ಏನೆಂದೂ ಅರಿಯೆ.

೧೯೪೦ರಿಂದ ಪುನಃ ಲೇಖನ ಕೆಲಸವನ್ನು ಆರಂಭಿಸಿದೆ. ಸಣ್ಣ ದೊಡ್ಡ ಹೊತ್ತಿಗೆಗಳನ್ನು ಬರೆಯತೊಡಗಿದೆ. ೧೯೫೦ ರಿಂದೀಚೆಗೆ ಸುಮಾರಾಗಿ ನೂರು ಪುಸ್ತಕಗಳು ನನ್ನಿಂದ ಬೆಳಕಿಗೆ ಬಂದಿವೆ. ಅವುಗಳಲ್ಲಿ **ವ್ಯಾಕರಣ** ಪುಸ್ತಕಗಳೂ, **ಕಸ್ತೂರೀಕೋಶ** ಬೃಹದ್ಗ್ರಂಥವೂ ಭಾರತೀಯರ ಹಬ್ಬಗಳು ಎಂಬ ವಿವೇಚನಾತ್ಮಕ ಗ್ರಂಥವೂ ಕೆಲವು ನಾಟಕಗಳೂ ಟ್ರೇನಿಂಗ ಕಾಲೇಜದ ಪ್ರಿಯ ನನ್ನ ಪೂಜ್ಯ ಗುರುಗಳ ಶುಭಾಶೀರ್ವಾದಗಳ ಸವಿನೆನಪನ್ನು ಅನುಲಕ್ಷಿಸಿವೆ: ಕನ್ನಡ ನಾಡಿನ ಹಿರಿಯ ಸಾಹಿತ್ಯ ಕ್ಷೇತ್ರದಲ್ಲಿಯೇ ನನಗೊಂದು ಸ್ವತಂತ್ರ ಸ್ಥಾನವನ್ನು ಕಲ್ಪಿಸಿವೆ. ಈ ಕಾರಣದಿಂದಲೇ ನನ್ನ (ವಿದ್ಯಾಭ್ಯಾಸದ) ತವರುಮನೆಯಾದ ‘ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ’ ಭವ್ಯ ಭವನವನ್ನು ಕಂಡಾಗೆಲ್ಲ-ಬಂದಾಗ ತಲೆ ಬಾಗಿ ನಮಿಸುತ್ತೇನೆ, ಕೃತಜ್ಞತೆಯಿಂದ.

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಕವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧	ನನ್ನನಲ್ಲ (ಅಂತರ್ಮುಖಿಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ	....	೧-೧೨-೦
೨.	ಆತ್ಮಸಂಶೋಧನ (ದಿ. ಮ ಧ ರಚೆನ್ನರ ಜೀವನದ ಕಲಶಪ್ರಾಯವ ಪ್ರಾಂಜಲ ಸಾಹಿತ್ಯ)	....	೧-೮-೦
೩	ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ)	....	೧-೨-೦
೪.	ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು)	....	೧-೪-೦
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧-೮-೦
೬.	ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿಮೊಳಕೆ)		೦-೮-೦
೭.	ಸ್ವರ್ಗಮೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ)	....	೧-೮-೦
೮.	ಮುಗಿಲ ಜೇನು (ಮಿಂಚಿನ ಶಲಾಕೆಯಂಥ ಕವನ ಸಂಕಲನ)	....	೧-೮-೦
೯.	ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು)	....	೧-೪-೦
೧೦.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧-೦-೦
೧೧.	ಬೆಟ್ಟದ ಹೊಳೆ (ಜೀವನ ಪ್ರಬೋಧಕವಾದ ಕಾದಂಬರಿ)	....	೧-೪-೦
೧೨.	ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧ ಮಲ್ಲಿಕಾರ್ಜುನ)	....	೧-೪-೦
೧೩.	ಬಾಳಬಟ್ಟೆ (ಆಧುನಿಕ ಬಾಳಿನ ಬಂಡಾಟಕ್ಕೆ ಚಿಕಿತ್ಸೆ)	....	೧-೮-೦
೧೪.	ಪೂಜಾ (ಅತೀಂದ್ರಿಯ ಜಾಗ್ರತಿಯ ಮಿಸುಕು)	....	೦-೧೨-೦
೧೫.	ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ)	....	೧-೨-೦
೧೬.	**ಕನ್ನಡ** ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ)	....	೧-೦-೦

ನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆವೆಚ್ಚ ನಾವೇ ವಹಿಸುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:--- ಚಡಚಣ ಜಿ. ವಿಜಾಪುರ

ಶ್ರೀ ಜಿ. ಎ. ಬಸವರಾಜ ಅವರ

ಬಯಲಿಸುದಿಯಲ್ಲಿ

ಬೆಲೆ : ೬೦ ನಯೆ ಪೈಸೆ

[ಕಥಾ ಸಂಕಲನ]

ಕೇವಲ ೬-೮-೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ೫ನೆಯ ಕುಸುಮವನ್ನಾಗಿ ಪಡೆಯಿರಿ.
ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ನಾಲ್ಕೈದು ಕೃತಿಗಳು ೮೦೦ ಪುಟಗಳಲ್ಲಿ.
ಏಪ್ರಿಲದಿಂದ ಏಪ್ರಿಲಕ್ಕೆ ಒಂದು ವರುಷ.
ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ½ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಬೇರೆ)
ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. ಕೂಡಲೇ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಯಾಗಿ ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.
ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೨೦೦ ಜನ ಶ್ರೇಷ್ಠ ಸಾಹಿತಿಗಳ ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ 'ಅಗೆಕಲ್ಲು' 'ಪುಟಚೆಂಡು' ಕಥೆ, ಕವನಗಳ ಪುಸ್ತಕಗಳು ಸಿದ್ಧವಿದ್ದು ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ. ಚಂದಾದಾರರಿಗೆ ಮಾತ್ರ ½ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣೆಯಂತೆ.

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

Printed by Shri S. F. Kattimani, at Manohar Power Printing Press, Hubli. Edited and
blished by Sjts. S. P. Patil, B. M. Shintri, S. R. Tatti & Smti. P. A. Bhaskar, at the Kannada
van Shikshan Office, Govt. Training College for Men, Dharwar.

Regd. No. B.

ವಿಶಿಷ್ಟ ಅಲ್ಪಾವಧಿಯ ಠೇವುಗಳ ಮೇಲ ಆಕರ್ಷಕ ಬಡ್ಡಿ ಕೊಡಲಾಗುವದು. ಠೇವುಗಳು ಸ್ವೀಕರಿಸಲ್ಪಡುವವು.

ಫೋನ ನಂಬರ : ೪೮.

ತಾರಿನ ವಿಳಾಸ : **" ಕ್ಲಾಕಬ್ಯಾಂಕ "** ಧಾರವಾಡ

ದಿವಂಗತ ದಿವಾಣಬಹಾದ್ದೂರ ಎಸ್. ವ್ಹಿ. ಮೆಣಸಿನಕಾಯಿ ಇವರಿಂದ
೧೯೧೬ನೆಯ ಇಸ್ವಿಯಲ್ಲಿ ಸ್ಥಾಪಿಸಲ್ಪಟ್ಟ

ಬ್ಯಾಂಕ ಲಿ.

ಶಾಖೆಗಳು :

೧. **ಗದಗ**
೨. **ನವಲಗುಂದ**
೩. **ರಾಣೆಬೆನ್ನೂರ**
೪. **ರೋಣ**
೫. **ಶಿಗ್ಗಾಂವಿ**
೬. **ಹಾವೇರಿ**
೭. **ಹಿರೇಕೆರೂರ**
೮. **ಹುಬ್ಬಳ್ಳಿ**
೯. **ಮುಂಡರಗಿ**
೧೦. **ಅಕ್ಕಿಆಲೂರ**

ಪೇ ಆಫೀಸುಗಳು :

೧. ಅಣ್ಣೀಗೇರಿ ೨. ಅಳಣಾವರ ೩. **ಕರ್ಜಗಿ** ೪. **ಕಲಘಟಗಿ**
೫. **ಕುಂದಗೋಳ** ೬. ಗಜೇಂದ್ರಗಡ ೭. **ಗುಡಗೇರಿ** ೮. **ನರಗುಂದ**
೯. **ನರೇಗಲ್ಲ** ೧೦. ಬ್ಯಾಡಗಿ ೧೧. **ಮಾಳಮಡ್ಡಿ, ಧಾರವಾಡ** ೧೨. **ಮುಳಗುಂದ**
೧೩. ಲಕ್ಷ್ಮೇಶ್ವರ ೧೪. ಶಿರಹಟ್ಟಿ ೧೫. **ಸವಣೂರ** ೧೬. **ಸೂಡಿ**
೧೭. ಹುಬ್ಬಳ್ಳಿ ಸಿಟಿ ೧೮. ಹೊಳೆಆಲೂರ ೧೯. ರಟ್ಟೀಹಳ್ಳಿ ೨೦. **ಬೆಳ್ಳಟ್ಟಿ**

ಅಧಿಕೃತ ಭಾಂಡವಲು........ರೂ.	೩೦,೦೦,೦೦೦	ಇನ್ನಿತರ ನಿಧಿಗಳು........ರೂ.	೫,೯೪,೦೦೦
ಪೇಡಅಪ್ ಶೇರಭಾಂಡವಲು..ರೂ.	೨೫,೫೯,೫೦೦	ಠೇವುಗಳು ....ರೂ.	೨,೨೮,೦೦,೦೦೦
ಸ್ಟ್ಯಾಚ್ಯುಟರಿ ರಿಝರ್ವ ....ರೂ.	೭,೪೨,೧೦೧	ದುಡಿಯುವ ಭಾಂಡವಲು.ರೂ.	೩,೪೫,೦೦,೦೦೦

ಈ ಬ್ಯಾಂಕಿನ ಯಾವತ್ತೂ ಆಫೀಸುಗಳಲ್ಲಿ **ಚಾಲತಿ, ಸೇವ್ಹಿಂಗ್ಸಬ್ಯಾಂಕ, ಥ್ರಿಫ್ಟ್, ಕ್ಯುಮಿಲೇಟಿವ್ಹ, ಕಂಟಿನ್ಯೂಯಿಟಿ ಠೇವುಗಳು** ಮತ್ತು **೧ ತಿಂಗಳಿಂದ ೧೦ ವರ್ಷಗಳ ಮುದ್ದತಿ ಠೇವುಗಳು** ಸ್ವೀಕರಿಸಲ್ಪಡುವವು. ಧಾರವಾಡ ಹೆಡ್ ಆಫೀಸಿನಲ್ಲಿ, ಮಾಳಮಡ್ಡಿ ಪೇ ಆಫೀಸಿನಲ್ಲಿ ಮತ್ತು ಹುಬ್ಬಳ್ಳಿ ಬ್ರ್ಯಾಂಚ ಆಫೀಸಿನಲ್ಲಿ ಭದ್ರತೆಯಿಂದ ಕಾಯುವದಕ್ಕೆ ಲಾಕರಗಳು ಸಿಗುವವು. ಹೆಚ್ಚಿನ ಮಾಹಿತಿಗಾಗಿ ಆಫೀಸಿನಲ್ಲಿ ವಿಚಾರಿಸಿರಿ.

ವ್ಹಿ. ಎಸ್. ಬಸವನಾಳ, B.A., LL.B.
ಚೇರಮನ್

ಎಮ್. ಬಿ. ಇನಾಮತಿ, B.A., LL.B., M.L.A.
ಮ್ಯಾನೇಜಿಂಗ ಡಾಯರೆಕ್ಟರ

ಭದ್ರತೆಯಿಂದ ಕಾಯುವದು.

ಸೋವಿ ಬಡ್ಡಿ [illegible]

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ

ಧಾರವಾಡ ಜಿಲ್ಲೆಗೆ ಆಗಮಿಸಿದ ಪೂಜ್ಯ ವಿನೋಬಾ ಭಾವೆ ಅವರು.

[illegible]

Regd. No. B.

ವಿಶಿಷ್ಟ ಅಲ್ಪಾವಧಿಯ ಠೇವುಗಳ ಮೇಲೆ ಆಕರ್ಷಕ ಬಡ್ಡಿ ಕೊಡಲಾಗುವದು. ಠೇವುಗಳು ಸ್ವೀಕರಿಸಲ್ಪಡುವವು.

ತಾರಿನ ವಿಳಾಸ: “ಕ್ಲಾಕಬ್ಯಾಂಕ” ಧಾರವಾಡ

ಫೋನ ನಂಬರ: ೪೮.

ದಿವಂಗತ ದಿವಾಣಬಹಾದ್ದೂರ ಎಸ್. ವ್ಹಿ. ಮೆಣಸಿನಕಾಯಿ ಇವರಿಂದ
೧೯೧೬ನೆಯ ಇಸ್ವಿಯಲ್ಲಿ ಸ್ಥಾಪಿಸಲ್ಪಟ್ಟ

[illegible] ಬ್ಯಾಂಕ ಲಿ.

ಶಾಖೆಗಳು:

೧. ಗದಗ
೨. ನವಲಗುಂದ
೩. ರಾಣೆಬೆನ್ನೂರ
೪. ರೋಣ
೫. ಶಿಗ್ಗಾಂವಿ
೬. ಹಾವೇರಿ
೭. ಹಿರೇಕೆರೂರ
೮. ಹುಬ್ಬಳ್ಳಿ
೯. ಮುಂಡರಗಿ
೧೦. ಅಕ್ಕಿಆಲೂರ

ಪೇ ಆಫೀಸುಗಳು:

೧. ಅಣ್ಣೀಗೇರಿ
೨. ಅಳಣಾವರ
೩. ಕರ್ಜಗಿ
೪. ಕಲಘಟಗಿ
೫. ಕುಂದಗೋಳ
೬. ಗಜೇಂದ್ರಗಡ
೭. ಗುಡಗೇರಿ
೮. ನರಗುಂದ
೯. ನರೇಗಲ್ಲ
೧೦. ಬ್ಯಾಡಗಿ
೧೧. ಮಾಳಮಡ್ಡಿ, ಧಾರವಾಡ
೧೨. ಮುಳಗುಂದ
೧೩. ಲಕ್ಷ್ಮೇಶ್ವರ
೧೪. ಶಿರಹಟ್ಟಿ
೧೫. ಸವಣೂರ
೧೬. ಸೂಡಿ
೧೭. ಹುಬ್ಬಳ್ಳಿ ಸಿಟಿ
೧೮. ಹೊಳೆಆಲೂರ
೧೯. ರಟ್ಟೀಹಳ್ಳಿ
೨೦. ಬೆಳ್ಳಟ್ಟಿ

ಅಧಿಕೃತ ಭಾಂಡವಲು………	ರೂ. ೫೦,೦೦,೦೦೦	ಇನ್ನಿತರ ನಿಧಿಗಳು………	ರೂ. ೫೯,೯೪,೦೦೦
ಪೇಡಅಪ್ ಶೇರಭಾಂಡವಲು..	ರೂ ೨೫,೫೯,೫೦೦	ಠೇವುಗಳು ……… ………	ರೂ. ೨,೨೮,೦೦,೦೦೦
ಸ್ಟ್ಯಾಚ್ಯುಟರಿ ರಿಝರ್ವ ….	ರೂ. ೭,೪೧,೧೦೧	ದುಡಿಯುವ ಭಾಂಡವಲು.	ರೂ. ೩,೪೫,೦೦,೦೦೦

ಈ ಬ್ಯಾಂಕಿನ ಯಾವತ್ತೂ ಆಫೀಸುಗಳಲ್ಲಿ **ಚಾಲತಿ, ಸೇವ್ಹಿಂಗ್ಸಬ್ಯಾಂಕ, ಥ್ರಿಫ್ಟ್, ಕ್ಯುಮಿಲೇಟಿವ್ಹ, ಕಂಟಿನ್ಯೂಯಿಟಿ** ಠೇವುಗಳು ಮತ್ತು ೧ ತಿಂಗಳಿಂದ ೧೦ **ವರ್ಷಗಳ ಮುದ್ದತಿ ಠೇವುಗಳು** ಸ್ವೀಕರಿಸಲ್ಪಡುವವು. ಧಾರವಾಡ ಹೆಡ್ ಆಫೀಸಿನಲ್ಲಿ, ಮಾಳಮಡ್ಡಿ ಪೇ ಆಫೀಸಿನಲ್ಲಿ ಮತ್ತು ಹುಬ್ಬಳ್ಳಿ ಬ್ರ್ಯಾಂಚ ಆಫೀಸಿನಲ್ಲಿ ಭದ್ರತೆಯಿಂದ ಕಾಯುವದಕ್ಕೆ ಲಾಕರಗಳು ಸಿಗುವವು. ಹೆಚ್ಚಿನ ಮಾಹಿತಿಗಾಗಿ ಆಫೀಸಿನಲ್ಲಿ ವಿಚಾರಿಸಿರಿ.

ವ್ಹಿ. ಎಸ್. ಬಸವನಾಳ, B.A., LL.B.
ಚೇರಮನ್

ಎಮ್. ಬಿ. ಇನಾಮತಿ, B.A., LL.B., M.L.A.
ಮ್ಯಾನೇಜಿಂಗ ಡಾಯರೆಕ್ಟರ

ಭದ್ರತೆಯಿಂದ ಕಾಯುವದು.

ಸೋವಿ ಬಡ್ಡಿ ದರದಿಂದ ಸಾಲಗಳು ಸಿಗುವವು.

[illegible]

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ

ಧಾರವಾಡ ಜಿಲ್ಲೆಗೆ ಆಗಮಿಸಿದ ಪೂಜ್ಯ ವಿನೋಬಾ ಭಾವೆ ಅವರು.

(೧) ಶತಾಬ್ದಿ ಸಮಾರಂಭದ ಮುಖ್ಯ ಅತಿಥಿಗಳನ್ನು ಸ್ವಾಗತಿಸುತ್ತಿರುವುದು.

(೨) ಪೂಜ್ಯ ಬಂಥನಾಳ ಶಿವಯೋಗಿಗಳು ಉದ್ಘಾಟಿಸಿ, ಭಾಷಣ ಮಾಡುತ್ತಿರುವರು.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : **ಶ್ರೀ ಜಿ. ಕೆ. ಕೊಪ್ಪಿಕರ,** ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್. ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.
ಪ್ರಧಾನ ಸಂಪಾದಕರು : **ಶ್ರೀ ಎಸ್. ಪಿ. ಪಾಟೀಲ,** ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.
ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ, ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ
(ಮುಂಬಯಿ. ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್,
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.
ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೩ ಫೆಬ್ರುವರಿ ೧೯೫೮ **ಸಂಚಿಕೆ ೯**

— ಪರಿವಿಡಿ —

೧) ಸಂಪಾದಕೀಯ ೨
೨) ಕಾರ್ಯಕಾರೀ ಸಮಿತಿಯ ವರದಿ .... ಶ್ರೀ ಶಿಂತ್ರಿ ಬಸಪ್ಪನವರು ೫
೩) ಶತಾಬ್ದಿ ಸಮಾರಂಭದ ಆಮಂತ್ರಣ ಪತ್ರಿಕೆ ೧೧
೪) ೧೯೫೮ ಎಪ್ರಿಲ್ ತಿಂಗಳಲ್ಲಿ ಜರಗುವ ಪ್ರಾ. ಶಾ. ಪ್ರ. ಪ. ಪರೀಕ್ಷೆ ೧೧
೫) ಶತಮಾನೋತ್ಸವದ ಸ್ವಾಗತಾಧ್ಯಕ್ಷರ ಸ್ವಾಗತ ಭಾಷಣ .... ಶ್ರೀ ಸ. ಪ. ಗಾಂವಕಾರ ೧೩
೬) ,, ಉದ್ಘಾಟನೆಯ ಭಾಷಣ .... ಪೂಜ್ಯ ಬಂಥನಾಳ ಶಿವಯೋಗಿಗಳು ಅಪ್ಪಣೆ ಕೊಡಿಸಿದ್ದು ೧೭
೭) ,, ಅಧ್ಯಕ್ಷರ ಭಾಷಣ .... ಅಧ್ಯಕ್ಷರು ರ್‍ಯಾಂಗ್ಲರ ಡಿ. ಸಿ. ಪಾವಟೆ ೨೨
೮) ಜೀವನ ಶಿಕ್ಷಣ ಸಮ್ಮೇಲನದ ಸ್ವಾಗತ ಭಾಷಣ .... ಶ್ರೀ ಎಸ್. ಸಿ. ಪಾಟೀಲ, ಪ್ರಿನ್ಸಿಪಾಲ್ ಟ್ರೇನಿಂಗ ಕಾಲೇಜ ಧಾರವಾಡ ೨೭

ಸಂಪಾದಕೀಯ

ಹಾರ್ದಿಕ ವಂದನೆಗಳು

ನಮ್ಮ ಕಾಲೇಜಿನ ಇತಿಹಾಸದಲ್ಲಿಯೇ ಚಿರಸ್ಮರಣೀಯವಾದ ಶತಾಬ್ದಿ ಸಮಾರಂಭವು ಮುಗಿದು ಒಂದು ತಿಂಗಳಾಯಿತು. ಸಮಾರಂಭದಲ್ಲಿ ಉಪಸ್ಥಿತರಿದ್ದ ಶಿಕ್ಷಕರೂ ಮಿತ್ರರೂ ಪತ್ರಗಳನ್ನು ಬರೆದು ಸಮಾರಂಭದ ಯಶಸ್ಸಿನ ಬಗೆಗೆ ಬಾಯ್ತುಂಬ ಹೊಗಳಿದ್ದಾರೆ. ಕೆಲವರು ಸಮಾರಂಭದ ಯೋಜನೆಯನ್ನು ಪ್ರಶಂಸಿಸಿದ್ದರೆ, ಇನ್ನುಳಿದವರು ಅಚ್ಚುಕಟ್ಟುತನದಿಂದ ಶೃಂಗರಿಸಲ್ಪಟ್ಟ ಭವ್ಯವಾದ ಮಂಟಪವನ್ನು ಬಣ್ಣಿಸಿದ್ದಾರೆ. ಇನ್ನು ಕೆಲವರು ಎರಡೂ ದಿನಗಳ ಕಾರ್ಯಕ್ರಮದ ಹೊಂದಿಕೆಯನ್ನು ಬಹಳವಾಗಿ ಹೊಗಳಿದ್ದಾರೆ. ಅದನ್ನೇ ನಮ್ಮ ಕೆಲವರು ದೀರ್ಘಪೂರ್ವಾಲೋಚನೆ ಹಾಗು ಪ್ರಯತ್ನಗಳ ಸಂಗಮವಾಗಿ ಸಂಘಟಿಸಲ್ಪಟ್ಟ ಜಾಣ್ಮೆಯ ಆರೋಹದ ಶಿಖರವೆಂದು ಕರೆದಿದ್ದಾರೆ. ಒಟ್ಟಿನಲ್ಲಿ ಅತಿಥಿಗಳೆಲ್ಲರೂ ಸಮಾರಂಭದ ಬಗೆಗೆ ತಮಗಾದ ಸಮಾಧಾನವನ್ನು ವ್ಯಕ್ತಮಾಡಿ ಕಾರ್ಯಕಾರಿ ಸಮಿತಿಯನ್ನೂ [illegible] ಶಿಕ್ಷಕವಿದ್ಯಾರ್ಥಿಗಳನ್ನೂ ಮನಸಾರೆ ಅಭಿನಂದಿಸಿದ್ದಾರೆ. ಇಂಥ ಹಾರ್ದಿಕ ಅಭಿನಂದನೆಗಳನ್ನು ಅಭಿಮಾನಪೂರ್ವಕವಾಗಿ ಸ್ವೀಕರಿಸಿ ಸಂತೋಷಗೊಳ್ಳುವ ಭಾಗ್ಯ ನಮ್ಮದಾದರೂ, ಇವೆಲ್ಲದರ ಹಿನ್ನೆಲೆಯಾಗಿದ್ದ ನೂರಾರು ಶಿಕ್ಷಕರ, ಶಿಕ್ಷಣ ತಜ್ಞರ, ಶಿಕ್ಷಣಾಭಿಮಾನಿಗಳ ಹಾಗು ಮಿತ್ರರ ಸಹಾಯ ಸಹಕಾರ, ಹಾಗು ಸಹಾನುಭೂತಿಗಳ ಅರಿವು ನಮಗೆ ಸಾಕಷ್ಟುಂಟು. ಪರಮಪೂಜ್ಯ ಶ್ರೀ. ಮ. ನಿ. ಪ್ರ. ಸ್ವ. ಬಂಥನಾಳ ಮಹಾಶಿವಯೋಗಿಗಳು ತಮ್ಮ ಮಂಗಲಾಶೀರ್ವಾದದೊಡನೆ ಸಮಾರಂಭವನ್ನು ಪ್ರಾರಂಭಿಸಿದರು. ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀಮಾನ್ ಪಾವಟೆಯವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಎರಡೂ ದಿನಗಳ ಕಾರ್ಯಕ್ರಮಗಳನ್ನು ಒಳ್ಳೇ ಸುಗಮವಾಗಿ ನಡೆಸಲು ತಮ್ಮ ಅಮೌಲ್ಯವಾದ ನೆರವನ್ನು ನೀಡಿದರು. ಶ್ರೀ ಹುಕ್ಕೇರಿಕರ ರಾಮರಾಯರು ಜನತಾ ಶಿಕ್ಷಣ ಸಮ್ಮೇಲನದ ಉದ್ಘಾಟನವನ್ನು ಮಾಡಿ [illegible] ಅನೇಕ ಸಾಹಿತಿ ಅಧಿಕಾರಿಗಳು ಆ ವಿಷಯದ ಬಗೆಗೆ ಪ್ರಬಂಧಗಳನ್ನು ಓದಿಯೂ ಆ ಕ್ಷೇತ್ರದಲ್ಲಿ ದುಡಿಯುವವರಿಗೆ ಹೊಸಬೆಳಕನ್ನು ಕಾಣಿಸಿದರು. ಶ್ರೀ ಆಲೂರ ವೆಂಕಟರಾಯರು ಕನ್ನಡ ನಾಡಿನ ನಾಲ್ವರು ಹಿರಿಯರ ತೈಲಚಿತ್ರಗಳ ಅನಾವರಣಮಾಡಿ ಅವರಿಂದಾದ ನಾಡ ನುಡಿಗಳ ಸೇವೆಯನ್ನೂ ಸಮಾರಂಭದ ಔಚಿತ್ಯವನ್ನೂ ಬಗೆಬಗೆಯಾಗಿ ವಿವರಿಸಿದರು. ಧಾರವಾಡ ಜಿಲ್ಲಾ ಸ್ಕೂಲಬೋರ್ಡಿನ ಚೇರ್ಮನ್ನರಾದ ಶ್ರೀ ಸಿ. ಕೆ. ಕುಲಕರ್ಣಿಯವರು ಹಳೆ ವಿದ್ಯಾರ್ಥಿಗಳ ಸಮ್ಮೇಲನದಲ್ಲಿ ಭಾಷಣಮಾಡಿ ಸಮಾರಂಭಕ್ಕೆ ಶೋಭೆಯನ್ನು ತಂದರು. ಸ್ಮಾರಕ ಸಂಪುಟವನ್ನು ಪ್ರಕಟಿಸುತ್ತ ಕನ್ನಡ ಸಾಹಿತ್ಯಪರಿಷತ್ತಿನ ಅಧ್ಯಕ್ಷರಾದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಪ್ರಾಥಮಿಕ ಶಿಕ್ಷಕರ ಸ್ಥಾನ ಮಾನ ಹಾಗು ಹಿರಿಮೆಗಳ ಬಗೆಗೆ ಅಮೋಘವಾದ ಭಾಷಣಮಾಡಿ ಶಿಕ್ಷಕರಲ್ಲಿ ನವಚೈತನ್ಯವನ್ನು ತಂದುಕೊಟ್ಟರು. ಒಳ್ಳೇ ಭಾರವಾದ ಈ ಕಾರ್ಯವು ಸುಗಮವಾಗಿ ಸಾಗಲು ಅನೇಕ ವ್ಯಕ್ತಿಗಳ ಹಾಗು ಸಂಸ್ಥೆಗಳ ನೆರವು ಅತ್ಯವಶ್ಯವಾಗಿತ್ತು. ಅವೆಲ್ಲವೂ ನಮ್ಮ ನಿರೀಕ್ಷಣೆಗಿಂತಲೂ ಹೆಚ್ಚಾಗಿ ಲಭಿಸಿತು. ವಾಹನ, ವಸತಿ, ಆಸನ, ಬೆಳಕು, ಮನರಂಜನ, ಶೃಂಗಾರ, ಸ್ವಯಂಸೇವೆ, ತೈಲ ಹಾಗು ಭಾವ ಚಿತ್ರಗಳ ಪೂರೈಕೆ, ಉಪಹಾರ, ಪ್ರದರ್ಶನದ ಸಂಘಟನೆ, ಪ್ರಚಾರ, ಸ್ಮಾರಕ ಸಂಪುಟದ ಸಿದ್ಧತೆ, ಇವೆಲ್ಲವುಗಳ ಬಗೆಗೆ ಧಾರವಾಡ ನಾಗರಿಕರಿಂದಲೂ, ಸಂಸ್ಥೆಗಳಿಂದಲೂ ನಮಗೆ ಎಲ್ಲ ತರದ ಸಹಾಯ ಸಹಕಾರಗಳು ದೊರೆತವು. ಮೊದಲಿನಿಂದ ಕೊನೆಯ ವರೆಗೂ ನಮ್ಮ ಮೇಲಧಿಕಾರಿಗಳ ಮಾರ್ಗದರ್ಶನವು ನಮಗೆ ಒದಗಿತ್ತು. ನಿಧಿ ಸಂಗ್ರಹದ ಕಾರ್ಯದಲ್ಲಿ ಶಿಕ್ಷಕರೂ, ಮಿತ್ರರೂ, ತೋರಿಸಿದ ಉತ್ಸಾಹವನ್ನು ವರ್ಣಿಸಲು ಶಬ್ದಗಳು ಸಾಲವು. ಸಾಮಾನ್ಯವಾಗಿ ಡಿಸೆಂಬರ ತಿಂಗಳಲ್ಲಿ ಸಾರ್ವಜನಿಕರಿಂದ ಧನಸಹಾಯವನ್ನು ಅಪೇಕ್ಷಿಸುವ ಕಾರ್ಯಕ್ರಮಗಳು ಅನೇಕವಿದ್ದರೂ, ನಮ್ಮ ಸಮಾರಂಭಕ್ಕಾಗಿ ನಿಧಿ ಸಂಗ್ರಹ ಮಾಡಲು ಯಾವ ಅಡೆತಡೆಗಳೂ ಬರಲಿಲ್ಲವಷ್ಟೇ ಅಲ್ಲದೆ, ಒಂದು ರೂಪಾಯಿಯನ್ನು ಕೇಳಿದಾಗ, ಎರಡು ರೂಪಾಯಿಗಳನ್ನೂ, ಮೂರು ರೂಪಾಯಿಗಳನ್ನು ಕೇಳಿದಾಗ ನಾಲ್ಕು ರೂಪಾಯಿಗಳನ್ನೂ, ಐದು ರೂಪಾಯಿಗಳನ್ನು ಅಪೇಕ್ಷಿಸಿದಾಗ ೧೦, ೧೫, ೨೦, ೨೫, ರೂಪಾಯಿಗಳನ್ನು ಕೊಟ್ಟ ಮಹನೀಯರೂ ಉಂಟು. ಇನ್ನೂ ಕೆಲವರು ಈ ಕಾರ್ಯಕ್ಕಾಗಿ ನಾವು ಕೇಳಿದಷ್ಟನ್ನು ಕೊಡಲು ಸಿದ್ಧರಿರುವೆವೆಂದು ಹೇಳಿ ನಮಗೆ ಹೆಚ್ಚಿನ ಉತ್ತೇಜನವಿತ್ತರು. ನಮ್ಮ ಸಂಸ್ಥೆಯ ಬಗೆಗೆ ಶಿಕ್ಷಕರಲ್ಲಿಯೂ, ಸಾರ್ವಜನಿಕರಲ್ಲಿಯೂ ಆಳವಾಗಿದ್ದ ಅಭಿಮಾನಗಳ ನಿಜವಾದ

ನೆ ನಮಗೆ ಈ ಮೊದಲು ಇಷ್ಟೊಂದಿರಲಿಲ್ಲ. ವಾಡ ಜಿಲ್ಲೆಯ ಶಿಕ್ಷಕ-ಶಿಕ್ಷಕಿಯರ ಸಂಘದವರು ಬ್ದಿ ಸಮಾರಂಭದ ಸವಿನೆನಪಿಗಾಗಿ ರ್‍ಯಾಂಗ್ಲರ ಪಾವ ವರ ತೈಲಚಿತ್ರವನ್ನು ಕಾಲೇಜಕ್ಕೆ ಕಾಣಿಕೆಯಾಗಿ ಟ್ಟಿದ್ದರಿಂದ ಈ ಸಂಸ್ಥೆಯು ಹಾಗು ಶಿಕ್ಷಣ ಖಾತೆಯು ಖಾಂತರ ನಾಡುನುಡಿಗಳ ಸೇವೆಯನ್ನು ಮಾಡಿ ಲ್ಲರ ಉಪಕಾರ ಸ್ಮರಣೆಗೆ ಪಾತ್ರರಾದ ಹಿರಿಯರ ಲಚಿತ್ರಗಳ ಅನಾವರಣ ಮಾಡಲು ನಮಗೆ ಅನುಕೂಲ ಡಿ ಕೊಟ್ಟರು. ಈ ಸಂಸ್ಥೆಯ ಹಿಂದಿನ ವಿದ್ಯಾರ್ಥಿ ಶಿಕ್ಷಕರೂ ಆದ ಸರ್ವಶ್ರೀ ಸಂಶಿ, ಕುರಡಿ ಹಾಗು ಟೂರ ಇವರೆಲ್ಲರು ಈ ಕಾಲೇಜದ ಪರೀಕ್ಷೆಗಳಲ್ಲಿ ಸ್ಥಾನ ಪಡೆದವರಿಗೆ ವಾರ್ಷಿಕ ಪಾರಿತೋಷಿಕಗಳನ್ನು ಡಮಾಡಿದ ತಮ್ಮ ನಿರ್ಣಯಗಳನ್ನು ಪ್ರಕಟಿಸಿದರು. ಲ್ಲಿಯ ಒಕ್ಕಲುತನ ಕಾಲೇಜದ ಪ್ರಾಧ್ಯಾಪಕರಾದ ಆರ್. ಎಫ್. ಪಾಟೀಲರು ಈ ಕಾಲೇಜದಲ್ಲಿ ದ್ಯಾರ್ಥಿಯಾಗಿಯೂ ಮುಂದೆ ಶಿಕ್ಷಕರಾಗಿಯೂ ಹಿರಿಯ ಸರನ್ನು ಗಳಿಸಿ ವಯೋವೃದ್ಧರಾದ ತಮ್ಮ ತಂದೆಯ ವರ ಹೆಸರಿನಿಂದ ಬೆಲೆಯುಳ್ಳ ಕಪ್ಪನ್ನು ಕಾಣಿಕೆ ಗಿ ಕೊಟ್ಟರು. ಈ ಸಂಸ್ಥೆಯ ಶತಾಬ್ದಿ ಸಮಾರಂ ವು ಉತ್ತರ ಕರ್ನಾಟಕದವರೆಲ್ಲರಿಗೂ ಒಳ್ಳೇ ಹೆಮ್ಮೆಯ ಷಯವಾಗಿದ್ದರಿಂದ ಜನಬಲವೂ ಧನಬಲವೂ ತಾವಾ ಯೇ ದೊರೆತವು. ಹೀಗಿರುವಾಗ ೨೦೦ ವಿದ್ಯಾರ್ಥಿ ಗೂ ೩೦ ಶಿಕ್ಷಕರಿಗೂ ಕಾರ್ಯಕಾರಿ ಸಮಿತಿಯ ಸದಸ್ಯರಿಗೂ ಈ ಸಮಾರಂಭವನ್ನು ನೆರವೇರಿಸುವ ರವು ಭಾರವಾಗಿರಲಿಲ್ಲ. ಕನ್ನಡ ಭಾಷೆ ಹಾಗು ಸಾಹಿ ಗಳ ಉಜ್ವಲವಾದ ಬೆಳವಣಿಗೆಗೆ ಮಾತೃಸ್ವರೂಪವಾದ ಸಂಸ್ಥೆಯ ಶತಾಬ್ದಿ ಸಮಾರಂಭದ ಪವಿತ್ರ ಕಾರ್ಯ ಭಾಗಿಗಳಾಗುವ ಸುಪ್ರಸಂಗ ಬಂದೊದಗಿರುವದು ಜೀವಮಾನದಲ್ಲಿಯೇ ಅಪೂರ್ವ ಭಾಗ್ಯವೆಂದು ವಿಸಿದ ಹಿಂದಿನ ಹಾಗು ಇಂದಿನ ಗುರು-ಶಿಷ್ಯ ವರ್ಗದ ಮಾತೃ ಋಣವನ್ನು ಸ್ವಲ್ಪ ಮಟ್ಟಿಗಾದರೂ ಮುಟ್ಟಿ ಅನುಕೂಲವಾಗಿ ಬಂದ ಸುದೈವವನ್ನು ಹೃತ್ಪೂರ್ವ ವಾಗಿ ಸ್ವಾಗತಿಸಿ ತನು-ಮನ-ಧನಗಳಿಂದ ಸಹಾಯ ಡಿ ಸಮಾರಂಭದ ಯಶಸ್ಸಿಗೆ ಕಾರಣರಾದವರೆಲ್ಲರಿಗೂ ಅನಂತಾನಂತ ಕೃತಜ್ಞತೆಗಳು.

ಸಮಾರಂಭದಲ್ಲಿ ಉಪಸ್ಥಿತರಾಗದ ಸಾವಿರಾರು -ಶಿಕ್ಷಕಿಯರ ಸಲುವಾಗಿ ಎಲ್ಲ ಅಧಿವೇಶನಗಳ ಕಾರ್ಯಕಲಾಪಗಳನ್ನು ಈ ಎರಡು (೯–೧೦) ಸಂಚಿಕೆಗಳಲ್ಲಿ ಪ್ರಸಿದ್ಧಿಸುವೆವು.

* * *

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂಗ ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇಡ ಮುಂ. ಡ್ರಾಯಿಂಗ ಪರೀಕ್ಷೆಗಳಿಗೆ—
ಜನಪ್ರಿಯವಾದ ಮತ್ತು ಸರಕಾರದಿಂದ
ಮಂಜೂರಾದ ಒಂದೇ ಒಂದು ಪುಸ್ತಕ
ಆದರ್ಶ ಚಿತ್ರಕಲಾ
(Ideal Drawing)
ಶ್ರೀ ಎಸ್. ಕೆ. ಜೋಶಿ, ಮತ್ತು
ಶ್ರೀ ಜಿ. ಡಿ. ಪಾಲಿ.
ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ
ದೊರೆಯುವದು. **ಬೆಲೆ ೧—೧೨—೦** ಅಂಚೆವೆಚ್ಚ
ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರತಿ
ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,
ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ
ಶೇಲಾರ ಕೃತ
ಪ್ರಾಥಮಿಕ ಭೂಮಿತಿ
[ಕ್ಷೇತ್ರಫಲ ಘನಫಲ ಸಹಿ]
೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.
ಬೆಲೆ: ೧ರೂ. ೮ಆಣೆ ಮಾತ್ರ
ದೊರೆಯುವ ಸ್ಥಳ:—
ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

* * *

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧.	ನನ್ನನಲ್ಲ (ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ	....	೧-೧೨
೨.	ಆತ್ಮಸಂಶೋಧನ (ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ)	....	೧- ೮
೩.	ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ)	....	೧- ೨
೪.	ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು)	....	೧- ೪
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	....	೧- ೮
೬.	ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿಮೊಳಿಕೆ)		೦- ೮
೭.	ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ)	....	೧- ೭
೮.	ಮುಗಿಲ ಜೇನು (ಮಿಂಚಿನ ಶಲಾಖೆಯಂಥ ಕವನ ಸಂಕಲನ)	....	೧- ೮
೯.	ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು)	....	೧- ೪
೧೦.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	....	೧- ೦
೧೧.	ಬೆಟ್ಟದ ಹೊಳೆ (ಜೀವನ ಪ್ರಚೋದಕವಾದ ಕಾದಂಬರಿ)	....	೧- ೪
೧೨.	ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ)	....	೧- ೪
೧೩.	ಬಾಳಬಟ್ಟೆ (ಆಧುನಿಕ ಬಾಳಿನ ಬಂಡಾಟಕ್ಕೆ ಚಿಕಿತ್ಸೆ)	....	೧- ೮
೧೪.	ಪೂಜಾ (ಅತೀಂದ್ರಿಯ ಜಾಗ್ರತಿಯ ಮಿಸುಕು)	....	೦-೧೨
೧೫.	ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ)	....	೧- ೨
೧೬.	ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ)	....	೧- ೦

ಕನ್ನಡದಲ್ಲಿ ಶ್ರೀ ಅರವಿಂದರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆ ನಾವೇ ವಹಿಸುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿಜಾ

ಶ್ರೀ ಶಂಗು ಬಿರಾದಾರರ | **ಮಾಲೆಯ** | **ಶ್ರೀ ಪಿ. ಎಸ್. ಗಣಪಯ್ಯನವ**

ನೌಕರಿಯ ಹುಚ್ಚು | **೨ನೇ, ೩ನೇ ಕುಸುಮಗಳು** | **ಚೌತಿ ಗಣಪ**

ಬಹುಮಾನಿತ ಏಕಾಂಕ ನಾಟಕ ಬೆಲೆ: ೨೫ ನ. ಪೈ. | ಮಕ್ಕಳ ಸಚಿತ್ರ ಕವಿತೆಗಳು, ಬೆಲೆ: ೨೫ ನ.

- ● ಕೇವಲ ೨-೮-೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ೫ನೆಯ ಕುಸುಮವನ್ನಾಗಿ ಪಡೆಯಿರಿ.
- ● ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ನಾಲ್ಕೈದು ಕೃತಿಗಳು ೪೦೦ ಪುಟಗಳಲ್ಲಿ.
- ● ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
- ● ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ● ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ಕ್ಷಿ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಬೇರೆ)
- ● ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. ಕೂಡಲೇ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಂ ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.
- ★ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೩೦೦ ಜನ ಶ್ರೇಷ್ಠ ಸಾಹಿ ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ ‘ ಆನೆಕಲ್ಲು ’ ‘ ಪುಟಚೆಂಡು ’ ಕಥೆ, ಕವನಗಳ ಪುಸ್ತಕಗಳು ನಿಮ್ಮಲ್ಲಿವೆ ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ. ಚಂದಾದಾರರಿಗೆ ಮಾತ್ರ ಕ್ಷಿ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣೆಯ

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ : **ಬಿಜಾಪುರ**

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಸಾಂವತ್ಸರಿಕೋತ್ಸವ

ಕಾರ್ಯಕಾರಿ ಸಮಿತಿಯ ವರದಿ

ಲೇಖಕರು : ಶ್ರೀ ಶಿಂತ್ರಿ ಬಸಪ್ಪನವರು. ಉಪಕಾರ್ಯಾಧ್ಯಕ್ಷರು ಹಾಗೂ ಕೋಶಾಧ್ಯಕ್ಷರು

ಕರ್ನಾಟಕದಲ್ಲಿ ಎಲ್ಲಕ್ಕೂ ಹಿರಿಯ ಸಂಸ್ಥೆಯೆಂದು ಹೆಸರುವಾಸಿಯಾದ ಈ ಕಾಲೇಜಕ್ಕೆ ೧೯೫೭ನೆಯ ಇಸವಿಗೆ ನೂರು ವರುಷಗಳು ತುಂಬಿದವಾದ್ದರಿಂದ ಅದರ ಶತಮಾನೋತ್ಸವವನ್ನು ಆಚರಿಸುವದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ಭಾವಿಸಿ ಪ್ರಿನ್ಸಿಪಾಲರು ಮುಂಚಿತವಾಗಿಯೇ ಅಂದರೆ ೧೯೫೫ನೆಯ ಇಸವಿಯಲ್ಲಿಯೇ ಮುಂಬಯಿ ರಾಜ್ಯದ ಶಿಕ್ಷಣ ಖಾತೆಯ ಡಾಯರೆಕ್ಟರರಿಗೆ ಸುದೀರ್ಘವಾದೊಂದು ಪತ್ರವನ್ನು ಬರೆದು ಅದಕ್ಕೋಸ್ಕರ ಪರವಾನಿಗೆಯನ್ನು ದಯಪಾಲಿಸಬೇಕೆಂದು ಕೇಳಿಕೊಂಡಿದ್ದರು. ಅದರ ಬಗೆಗೆ ಪತ್ರವ್ಯವಹಾರವೂ ಎಡೆಬಿಡದೆ ಕೆಲವು ತಿಂಗಳುಗಳವರೆಗೆ ಸಾಗಿತು. ಅಷ್ಟರೊಳಗೆ ಕರ್ಮಧರ್ಮಸಂಯೋಗದಿಂದ ರಾಜ್ಯಗಳ ಪುನರ್ರಚನೆಯು ಸಂಭವಿಸಿತಾದುದರಿಂದ ಈ ಪ್ರಶ್ನವು ನೆನೆಗುದಿಗೆ ಬಿದ್ದಿತು. ಈಗಿನ ನಮ್ಮ ನೂತನ ರಾಜ್ಯವು ನಿರ್ಮಾಣವಾದಕೂಡಲೆ ಪ್ರಿನ್ಸಿಪಾಲರು ಆ ನೆನೆಗುದಿಗೆ ಬಿದ್ದಿದ್ದ ಪ್ರಶ್ನದಲ್ಲಿ ಪುನಃ ಜೀವಕಳೆ ತುಂಬಿ ನಮ್ಮ ಹೊಸ ರಾಜ್ಯದ ಶಿಕ್ಷಣ ಖಾತೆಯ ಡಾಯರೆಕ್ಟರರಿಗೆ ಬೇಗನೆ ಪರವಾನಿಗೆಯನ್ನೀಯಬೇಕೆಂದು ವಿನಂತಿಸಿಕೊಂಡರು. ಅದರ ಬಗೆಗೆ ಪುನಃ ಸುದೀರ್ಘವಾದ ಪತ್ರವ್ಯವಹಾರವು ಅನಿವಾರ್ಯವಾಗಿ ನಡೆಯುವ ಪ್ರಸಂಗವು ಬಂದೊದಗಿತು. ೧೯೫೭ನೆಯ ಇಸವಿ ಜುಲೈ ತಿಂಗಳ ಸುಮಾರಿಗೆ ಪ್ರಾರಂಭಿಕ ಕಾರ್ಯಗಳನ್ನು ಕೈಕೊಳ್ಳಲು ಅನುಮತಿ ಸಿಕ್ಕಿತು; ಮತ್ತು ಮುಂದೆ ಒಂದೆರಡು ತಿಂಗಳುಗಳ ನಂತರ ಲೇಖೀ ಪರವಾನಿಗೆಯೂ ತಲುಪಿತು. ಪೂರ್ವ ತಯಾರಿಯ ಕಾರ್ಯಗಳನ್ನು ಕೈಕೊಳ್ಳಲು ಸಮ್ಮತಿಯು ತಲುಪಿದಕೂಡಲೆ ಪ್ರಿನ್ಸಿಪಾಲರು ಸಂಯುಕ್ತ ಕರ್ನಾಟಕ ಮತ್ತು ನವಯುಗ ದಿನಪತ್ರಿಕೆಗಳಲ್ಲಿಯೂ ಜೀವನ ಶಿಕ್ಷಣ ಮಾಸಿಕದಲ್ಲಿಯೂ ಪ್ರಕಟನೆಯೊಂದನ್ನು ಕೊಟ್ಟು ಈ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳ, ಪ್ರಾಧ್ಯಾಪಕರ ಹಾಗೂ ಹಿತೈಷಿಗಳ ಸಭೆಯೊಂದನ್ನು ಸಮಾರಂಭದ ಬಗೆಗೆ ಮುಂದಿನ ವ್ಯವಸ್ಥೆಯನ್ನು ಗೊತ್ತು ಪಡಿಸಲು ಕಾಲೇಜದ ಪ್ರಾರ್ಥನಾ ಮಂದಿರದಲ್ಲಿ ದಿನಾಂಕ ೧೭—೮—೧೯೫೭ರಂದು ಕರೆಯಲಾಗಿದೆಯೆಂದು ಜಾಹೀರ ಪಡಿಸಿದರು. ಆ ಪ್ರಕಟನೆಯು ಈ ಮಾಸಿಕದ ೧೯೫೭ನೆಯ ಇಸವಿ ಅಗಸ್ಟ ತಿಂಗಳದ ಸಂಚಿಕೆಯಲ್ಲಿ ೪ ಮತ್ತು ೨೨ನೆಯ ಪುಟಗಳಲ್ಲಿ ಮುದ್ರಿಸಲ್ಪಟ್ಟಿದೆ. ತತ್ಪರಿಣಾಮವಾಗಿ, ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಲೆಗಳಿಂದ ಆ ದಿನ ಸಮಾರು ನೂರು ಜನರು ಹಾಜರಿದ್ದರಲ್ಲದೆ ವಿದ್ಯಾ ಇಲಾಖೆಯ ಸ್ಥಾನಿಕ ವರಿಷ್ಠ ಅಧಿಕಾರಿಗಳೂ ಸಭೆಗೆ ಆಗಮಿಸಿದ್ದರು. ಆ ಸಭೆಯಲ್ಲಿಯೇ ನಮ್ಮ ಕಾರ್ಯಕಾರಿ ಸಮಿತಿಯು ರಚಿಸಲ್ಪಟ್ಟಿತು. ಪ್ರಿನ್ಸಿಪಾಲರಿಂದ ಸಿದ್ಧವಾದ ಯೋಜನೆಯನ್ನೇ ತಳಹದಿಯನ್ನಾಗಿಟ್ಟುಕೊಂಡು ಸಮಾರಂಭದ ವಿವರವಾದ ರೂಪ ರೇಷೆಗಳನ್ನು ಗೊತ್ತುಪಡಿಸುವ ಹೊಣೆಯನ್ನು ಕಾರ್ಯಕಾರಿ ಸಮಿತಿಗೆ ಒಪ್ಪಿಸಲಾಯಿತು. ಈ ಸಮಿತಿಯು ಸದಸ್ಯರ ಹೆಸರುಗಳು ಕೆಳಗಿನಂತಿವೆ.

ಶ್ರೀ ಎಸ್. ಪಿ. ಗಾಂವಕಾರ	ಕಾರ್ಯಾಧ್ಯಕ್ಷರು
,, ಬಿ. ಎಮ್. ಶಿಂತ್ರಿ,	ಉಪಕಾರ್ಯಾಧ್ಯಕ್ಷರು ಹಾಗೂ ಕೋಶಾಧ್ಯಕ್ಷರು
,, ಎಸ್. ಪಿ. ಪಾಟೀಲ	ಕಾರ್ಯದರ್ಶಿಗಳು (ಪ್ರಿನ್ಸಿಪಾಲರು)
,, ಟಿ. ಎಫ್. ದೇಸಾಯಿ	ಸಹಕಾರ್ಯದರ್ಶಿಗಳು
,, ಡಿ. ಎನ್. ಠಾಕೂರ	ಲೆಕ್ಕತಪಾಸಿಗರು
,, ಬಿ. ವ್ಹಿ. ಬುರ್ಲಿ	ಸದಸ್ಯರು
,, ಆರ್. ಎನ್. ಜಾತಿಗೇರ	,,
,, ಎಸ್. ಎಫ್. ಕಟ್ಟೀಮನೆ	,,
,, ಆರ್. ಎಸ್. ಕುಂಬಾರ ಕಟ್ಟೀಮನೆ ಗೌಡರ	,,
,, ಬಿ. ಎಫ್. ಭೋಸಲೆ	,,
,, ಎಮ್. ಎಫ್. ಬಂಗಾರಿ	,,

ಸಮಿತಿಯು ಹುಟ್ಟಿದಾಗಿನಿಂದ ಇಲ್ಲಿಯ ವರೆಗೆ ಅಂದರೆ ೧೯೫೮ನೆಯ ಇಸವಿ ಜನೆವರಿ ತಿಂಗಳ ಕೊನೆಯವರೆಗೆ ೧೩ ಸಭೆಗಳು ಜರುಗಿದವು: ಅವುಗಳ ಕಾರ್ಯಕಲಾಪಗಳೂ ನಿರ್ಣಯಗಳೂ ಮಿನಿಟ್ ಬುಕ್ಕಿನಲ್ಲಿ ನಮೂದಿ

ಸಲ್ಪಟ್ಟವೆ. ಸಮಾರಂಭದ ದಿನಗಳು ಸಮೀಪಿಸಿದಂತೆ ಅನುಕೂಲವಿದ್ದ ಸದಸ್ಯರೆಲ್ಲ ಕಾರ್ಯಾಲಯದಲ್ಲಿ ದಿನಾಲು ಸಂಜೆಯ ೫ ಗಂಟೆಗೆ ಸೇರತಕ್ಕದ್ದೆಂದು ನಮ್ಮನಮ್ಮೊಳಗೆ ಸಂಕೇತವೊಂದನ್ನು ಮಾಡಿಟ್ಟುಕೊಂಡಿದ್ದೆವು. ಅಂತಹ ಅನಧಿಕೃತ ಸಭೆಗಳಿಗಂತೂ ಲೆಕ್ಕವೇ ಇಲ್ಲ. ನಮ್ಮ ಸಮಿತಿಯು ಮೊಟ್ಟ ಮೊದಲನೆಯ ಸಭೆಯಲ್ಲಿ ಸಮಾರಂಭದ ವಿವರವಾದ ರೂಪರೇಷೆಗಳನ್ನು ನಿರ್ಧರಿಸಿ, ಒಟ್ಟು ಖರ್ಚಿನ ಅಂದಾಜನ್ನು ಗೊತ್ತುಪಡಿಸಿ, ಡಾಯರೆಕ್ಟರರ ಕಡೆಯಿಂದ ಲೇಖೀ ಪರವಾನಿಗೆಯು ದೊರೆತ ಕೂಡಲೆ ಆ ವಿವರಗಳನ್ನೆಲ್ಲ ದೈನಿಕ ವರ್ತಮಾನ ಪತ್ರಗಳಿಗೂ ಜೀವನ ಶಿಕ್ಷಣ ಮಾಸಿಕಕ್ಕೂ ಪ್ರಕಟನೆಗೋಸ್ಕರ ಕಳಿಸಿಕೊಡಲಾಯಿತು. ಜೀವನ ಶಿಕ್ಷಣ ಪತ್ರಿಕೆಯ ೧೯೫೭ ನೆಯ ಇಸವಿ ಅಕ್ಟೋಬರ ಸಂಚಿಕೆಯಲ್ಲಿ ೩ ನೆಯ ಪುಟದ ಮೇಲೆ ಆ ಯೋಜನೆಯು ಸವಿಸ್ತರವಾಗಿ ಮುದ್ರಿತವಾಗಿದೆ. ಯೋಜನೆಗೆ ಹತ್ತಬಹುದಾದ ಅಂದಾಜಿನ ಒಟ್ಟು ಖರ್ಚು ಎಂಟು ಸಾವಿರವನ್ನು ಮಿಕ್ಕಿತು.

ಇಷ್ಟೊಂದು ಖರ್ಚಿನ ಭಾರವನ್ನು ಹೊರಲು ನಿಧಿ ಸಂಗ್ರಹದ ವ್ಯವಸ್ಥೆಯನ್ನು ಹುರುಪು-ಹುಮ್ಮಸಗಳಿಂದ ಮಾಡಬೇಕಾಯಿತು. ಮುಂಬಯಿ ಕರ್ನಾಟಕದ ನಾಲ್ಕೂ ಜಿಲ್ಹೆಗಳಲ್ಲಿಯ ಸ್ಕೂಲಬೋರ್ಡುಗಳ ಚೇರಮನ್ನರಿಗೆ ಈ ನಮ್ಮ ಪವಿತ್ರ ಕಾರ್ಯದಲ್ಲಿ ಸಹಾನುಭೂತಿ-ಸಹಕಾರಗಳನ್ನೀಯಲು ಮತ್ತು ಸಾರ್ವಜನಿಕರನ್ನುದ್ದೇಶಿಸಿ ಸಂಯುಕ್ತ ಪ್ರಕಟನೆಯೊಂದನ್ನು ಹೊರಡಿಸಲು ವಿನಂತಿಸಿಕೊಂಡೆವು. ನಮ್ಮ ವಿನಂತಿಗೆ ಮನ್ನಣೆ ಕೊಟ್ಟು ಅವರೆಲ್ಲರು ಒಂದು ಸಂಯುಕ್ತ ಪ್ರಕಟನೆಯನ್ನು ಹೊರಡಿಸಿ ತಮ್ಮ ತಮ್ಮ ಕ್ಷೇತ್ರಗಳಲ್ಲಿಯ ಶಿಕ್ಷಕ ಶಿಕ್ಷಿಕೆಯರಿಗೂ ಶಿಕ್ಷಣಾಭಿಮಾನಿಗಳಿಗೂ ಹಿತೈಷಿಗಳಿಗೂ ಸಾರ್ವಜನಿಕರಿಗೂ ಮುಕ್ತ ಹಸ್ತದಿಂದ ಧನಸಹಾಯವನ್ನರ್ಪಿಸಲು ಅತ್ಯಂತ ಕಳಕಳಿಯಿಂದ ಕರೆಕೊಟ್ಟರು. ಅದಕ್ಕೋಸ್ಕರ ನಾವು ಅವರೆಲ್ಲರಿಗೆ ಉಪಕೃತರು. ಆ ಸಂಯುಕ್ತ ಪ್ರಕಟನೆಯನ್ನು ದೈನಿಕಗಳಿಗೂ ಜೀವನ ಶಿಕ್ಷಣ ಮಾಸಿಕಕ್ಕೂ ಕಳಿಸಲಾಯಿತು. ಈ ಮಾಸಿಕದ ೧೯೫೭ ನೆಯ ಇಸವಿ ಅಕ್ಟೋಬರ ತಿಂಗಳದ ಸಂಚಿಕೆಯಲ್ಲಿ ೪ ಮತ್ತು ೫ ನೆಯ ಪುಟಗಳಲ್ಲಿ ಅದರ ಪೂರ್ತಿ ಪಾಠವನ್ನು ಕಂಡುಕೊಳ್ಳಬಹದು. ನಮ್ಮ ರಾಜ್ಯಸರಕಾರಕ್ಕೆ ಸಹಾಯಧನದ ಕೊಡುಗೆಯನ್ನು ದಯಪಾಲಿಸಲು ಕೇಳಿಕೊಂಡಿದ್ದೇವೆ. ಅದರಿಂದ ತಕ್ಕ ಕೊಡುಗೆಯು ಈ ಪವಿತ್ರ ಕಾರ್ಯಕ್ಕೋಸ್ಕರ ಸಿಗುವದೆಂಬ ಬಲವಾದ ಆಶೆಯನ್ನು ತಳೆದಿದ್ದೇವೆ. ಅದರಂತೆ ಧಾರವಾಡ ಶಹರದ ಮುನಸಿಪಾಲಿಟಿಯವರಿಗೂ ಕೊಡುಗೆಯ ಬೇಡಿಕೆಯನ್ನು ಮಾಡಿಕೊಂಡಿದ್ದೇವೆ. ಸರಕಾರದ ಮಂಜೂರಿಯು ದೊರೆತೊಡನೆ ಕೊಡುವೆವೆಂಬ ಆಶ್ವಾಸನವು ಅವರಿಂದ ದೊರೆತಿದೆ. ತಾಲೂಕ ಶಾಲಾ ಮಾಸ್ತರರ ಮುಖಾಂತರ ನಿಧಿ ಸಂಗ್ರಹದ ಕಾರ್ಯವು ಸುಗಮವಾಗುವದೆಂದು ಸಮಿತಿಯ ಸದಸ್ಯರ ಒಮ್ಮತದ ಅಭಿಪ್ರಾಯವಾದುದರಿಂದ ಕೂಡಲೆ ಈ ನಾಲ್ಕು ಜಿಲ್ಹೆಗಳಲ್ಲಿಯ ಎಲ್ಲ ತಾಲೂಕ ಶಾಲಾ ಮಾಸ್ತರರಿಗೆ ಪಾವತಿ ಪುಸ್ತಕಗಳನ್ನು ಕಳುಹಿಸಿ ಶಿಕ್ಷಕರಿಂದ ಬಂದ ಹಣವನ್ನೂ ಹಣ ಸಂದಾಯ ಮಾಡಿದವರ ಯಾದಿಯನ್ನೂ ನಮ್ಮ ಕಾರ್ಯಾಲಯಕ್ಕೆ ವೇಳೆ ವೇಳೆಗೆ ರವಾನಿಸಿ ಹೃತ್ಪೂರ್ವಕವಾಗಿ ಸಹಕರಿಸಬೇಕೆಂದು ವಿನಂತಿಸಿಕೊಂಡೆವು. ಈ ನಮ್ಮ ನಮ್ರ ವಿನಂತಿಯನ್ನು ಮಾನ್ಯ ಮಾಡಿ ಅಭಿಮಾನೋತ್ಸಾಹಗಳಿಂದ ಸಹಕರಿಸಿದವರೆಲ್ಲರ ಉಪಕಾರವನ್ನು ನಾವು ಸ್ಮರಿಸದೇ ಇರಲಾರೆವು. ಈ ನಮ್ಮ ವಿನಂತಿ ಪತ್ರವು ಜೀವನ ಶಿಕ್ಷಣ ಮಾಸಿಕದ ೧೯೫೭ ನೆಯ ಇಸವಿ ಸಪ್ಟಂಬರ ತಿಂಗಳದ ಸಂಚಿಕೆಯಲ್ಲಿ ೫ ನೆಯ ಪುಟದ ಮೇಲೆ ಸಂಪೂರ್ಣವಾಗಿ ಕೊಡಲ್ಪಟ್ಟಿದೆ. ಹಲವು ಸದಸ್ಯರು ಧಾರವಾಡ ಮುನಸಿಪಾಲಿಟಿಯ ಶಿಕ್ಷಕ-ಶಿಕ್ಷಕಿಯರಿಂದ ಹಣವನ್ನು ಕೂಡಿಸಿದರು; ಹಲವರು ಹುಬ್ಬಳ್ಳಿಗೆ ಹೋಗಿ ಅಲ್ಲಿಯ ಮುನಸಿಪಲ್ ಶಿಕ್ಷಕ-ಶಿಕ್ಷಕಿಯರಿಂದ ಹಣವನ್ನು ಶೇಖರಿಸಿದರು; ಓರ್ವ ಸದಸ್ಯರು ಗದಗಿಗೆ ಹೋಗಿ ಅಲ್ಲಿಯ ಶಿಕ್ಷಕ-ಶಿಕ್ಷಕಿಯರಿಂದ ವಂತಿಗೆಯನ್ನು ಸಂಗ್ರಹಿಸಿದರು; ಮತ್ತೋರ್ವರು ಬಾಗಿಲುಕೋಟೆ-ಹುನಗುಂದ ತಾಲೂಕುಗಳಲ್ಲಿ ಪ್ರವಾಸವನ್ನು ಕೈಕೊಂಡು ನಿಧಿಸಂಗ್ರಹವನ್ನು ಮಾಡಿದರು; ಹಲವರು ಧಾರವಾಡದಲ್ಲಿಯ ಅಧಿಕಾರಿಗಳಿಂದ ಹಾಗೂ ಪ್ರತಿಷ್ಠಿತ ನಾಗರಿಕರಿಂದ ಧನಸಹಾಯವನ್ನು ಸಂಪಾದಿಸಿದರು; ಪ್ರಿನ್ಸಿಪಾಲರವರ ಹಲವು ನಚ್ಚಿನ ಶಿಕ್ಷಕರು ವೈಯಕ್ತಿಕವಾಗಿ ಸಾರ್ವಜನಿಕರಿಂದ ಹಣವನ್ನು ಕೂಡಿಸಿ ಕಳಿಸಿದ್ದಾರೆ. ಈ ಪ್ರಕಾರ ಈ ಸಂಸ್ಥೆಯ ಬಗೆಗೆ ಅಭಿಮಾನ ಭಕ್ತಿ-ನಿಷ್ಠೆಗಳುಳ್ಳ ಎಲ್ಲ ಜನರ ಪರಿಶ್ರಮದ ಫಲವಾಗಿ ನವಂಬರ ತಿಂಗಳದ ಕೊನೆಗೆ ಮೂರು ಸಾವಿರವನ್ನು ಮಿಕ್ಕಿದ ನಿಧಿ ಸಂಗ್ರಹದ ಮೊತ್ತವು ಡಿಶಂಬರ ತಿಂಗಳದ ಮಧ್ಯದ ಸುಮಾರಕ್ಕೆ ನಾಲ್ಕು ಸಾವಿರವನ್ನು ಮಿಕ್ಕಿತು. ಆಗ ಸಮಿತಿಯವರ ಉತ್ಸಾಹವು ದ್ವಿಗುಣಿತವಾಯಿತೆಂದು

ಹೇಳುವದನವಶ್ಯಕ. ಸಮಾರಂಭವು ಜರುಗಿದ ದಿನಗಳಲ್ಲಿಯೂ (೧೯೫೭ ನೆಯ ಇಸವಿ ಡಿಶಂಬರ ದಿನಾಂಕ ೨೭ ಮತ್ತು ೨೮) ಅದು ಮುಗಿದ ನಂತರವೂ ನಿಧಿಗೆ ಸಹಾಯ ಧನವನ್ನು ಸಮರ್ಪಿಸುವದು ಅಬಾಧಿತವಾಗಿ ಸಾಗಿತ್ತು. ಈಗಲೂ ಸಾಗಿದೆ. "ಹನಿಗೆ ಹನಿ ಕೂಡಿ ಹಳ್ಳವಾಗುತ್ತಿದೆ, ತೆನೆಗೆ ತೆನೆ ಕೂಡಿ ರಾಶಿಯಾಗುತ್ತಿದೆ" ಯೆಂಬ ನಾಣ್ಣುಡಿಯು ಎಂದಾದರೂ ಸುಳ್ಳಾದೀತೇ? ಶ್ರೀ ಮನ್ನಿರಂಜನ ಪ್ರಣವಸ್ವರೂಪಿಗಳಾದ ಬಂಥನಾಳ ಮಹಾ ಶಿವಯೋಗಿಗಳವರ ತುಂಬಿದ ಹೃದಯದಿಂದ ಕೃಪಾಶೀರ್ವಾದಗಳನ್ನು ಪಡೆದಿದ್ದ ಈ ಸಮಾರಂಭಕ್ಕೆ ದುಡ್ಡಿನ ಕೊರತೆಯು ಎಂದಾದರೂ ಸೋಂಕಬಲ್ಲದೇ?

ನಮ್ಮ ಸಮಿತಿಯ ಅಧಿಕೃತ ಸಭೆಗಳು ಒಟ್ಟು ೧೩ ಆಗಿವೆಯೆಂದು ಮೇಲೆ ಹೇಳಿದೆಯಷ್ಟೇ. ನಮ್ಮ ಸಮಿತಿಯ ಸದಸ್ಯರೆಲ್ಲ ಬಹುತರವಾಗಿ ನಿವೃತ್ತಿ ಹೊಂದಿದವರಿದ್ದುದರಿಂದ ಅನುಭವಶಾಲಿಗಳಾಗಿದ್ದಾರೆ. ಪ್ರತಿಯೊಬ್ಬರು ತಮ್ಮ ತಮ್ಮ ಮತವನ್ನೂ ಅನುಭವವನ್ನೂ ಮರೆಮಾಜದೆ ಪ್ರಾಂಜಲ ಮನಸಿನಿಂದ ಸಭೆಯ ಮುಂದೆ ಮಂಡಿಸುತ್ತಿದ್ದರು. ಚರ್ಚಿಸತಕ್ಕ ವಿಷಯಗಳೆಲ್ಲ ಕೂಲಂಕಷವಾಗಿ ನಿರ್ಭಿಡೆಯಿಂದ ಚರ್ಚಿಸಲ್ಪಡುತ್ತಿದ್ದವು. ನಿರ್ಣಯಗಳನ್ನು ಕೈಕೊಳ್ಳುವಾಗ ಮಾತ್ರ ಎಲ್ಲರೂ ಒಮ್ಮೊಗಗದಿಂದ ಅನುಮತಿಯನ್ನೀಯುತ್ತಿದ್ದರು. ಮತಭೇದವಾಗಿ ಮತಕ್ಕೆ ಹಾಕುವ ಪ್ರಸಂಗನೇ ಈ ಸಮಿತಿಗೆ ಉದ್ಭವಿಸಲಿಲ್ಲ. ಸಾರಾಂಶವೆಂದರೆ, ಎಲ್ಲರೂ ಒಂದೇ ಕುಟುಂಬದ ಸದಸ್ಯರಂತೆ ಕೆಲಸ ಮಾಡಿದರು. ಖರ್ಚಿನ ವಿಷಯಗಳಲ್ಲಿ ಎಲ್ಲರೂ ತುಂಬಾ ಎಚ್ಚರಿಕೆಯನ್ನು ವಹಿಸುತ್ತಿದ್ದರು. ಒಂದು ಪೈಸಹ ಅಪವ್ಯಯವಾಗದಂತೆ ಕೈ ಬಿಗಿ ಹಿಡಿದು ಖರ್ಚು ಮಾಡುವವರಲ್ಲಿ ನಮ್ಮ ಕಾರ್ಯದರ್ಶಿಗಳವರದು ಎತ್ತಿದ ಕೈ.

ಕಾರ್ಯಕಾರಿ ಸಮಿತಿಯ ಹೊರತಾಗಿ ಸ್ಮಾರಕ ಸಂಪುಟ, ಮಂಟಪದ ರಚನೆ, ಪ್ರದರ್ಶನ, ಜೀವನ ಶಿಕ್ಷಣ ಸಮ್ಮೇಲನ, ಇತ್ಯಾದಿಗಳ ಬಗೆಗೆ ಹಲವು ಉಪಸಮಿತಿಗಳು ರಚಿಸಲ್ಪಟ್ಟಿದ್ದವು. ಆ ಉಪಸಮಿತಿಗಳೆಲ್ಲ ತಮ್ಮ ತಮ್ಮ ಪಾಲಿನ ಕೆಲಸಗಳನ್ನು ಯಶಸ್ವಿಯಾಗಿ ಕೊನೆಗಾಣಿಸಿದವು. ಭವ್ಯ ಮಂಟಪದ ಅಚ್ಚುಕಟ್ಟುತನದ ರಚನೆಯು ಅಗ್ಗದರದಲ್ಲಿ ಮಾಡಲ್ಪಟ್ಟಿತು. ಅದಕ್ಕೋಸ್ಕರ ನಾವು ಸ್ಥಳಿಕ ಮೇದಾರ ಸಹಕಾರಿ ಸಂಘಕ್ಕೆ ಆಭಾರಿಯಾಗಿರುವೆವು. ನಮ್ಮ ಸಮಿತಿಯ ಸದಸ್ಯರಲ್ಲೊಬ್ಬರಾದ ಶ್ರೀ ಠಾಕೂರರು ಆ ಸಂಘದ ಅಧಿಕಾರಿಗಳಲ್ಲೊಬ್ಬರಾದ್ದರಿಂದ ಮಂಟಪದ ಕೆಲಸವು ಹೆಚ್ಚು ಹಗುರಾಯಿತು. ಪ್ರದರ್ಶನವನ್ನು ಓರಣದಿಂದ ಸಜ್ಜುಗೊಳಿಸುವಲ್ಲಿ ಕ್ರಾಫ್ಟ ಆರ್ಗನಾಯಿಜರರಾದ ಶ್ರೀ ಉಣಕಲ್ಲ ಬೇರೆ ಬೇರೆ ಜಿಲ್ಲೆಗಳ ಕ್ರಾಫ್ಟ್ ಅ. ಡೆ. ಇ. ಹಾಗೂ ಧಾರವಾಡ ಮುನಿಸಿಪಲ್ ಶಿಕ್ಷಕರ ಸಹಾಯವೂ ನಮಗೆ ಲಭಿಸಿತು. ಶಿಕ್ಷಣ ಶಾಖೆಯ ಸ್ಥಾನಿಕ ವರಿಷ್ಠಾಧಿಕಾರಿಗಳ ಸಲಹೆ ಸೂಚನೆಗಳು ನಮಗೆ ಕಾಲಕಾಲಕ್ಕೆ ಕೊಡಲ್ಪಡುತ್ತಿದ್ದವು. ಸ್ಮಾರಕ ಸಂಪುಟ ಹಾಗೂ ಮಂಟಪದ ರಚನೆ ಇವುಗಳನ್ನು ಬಿಟ್ಟು ಉಳಿದೆಲ್ಲ ಕೆಲಸಗಳನ್ನು ಕಾಲೇಜದ ಶಿಕ್ಷಕ-ವಿದ್ಯಾರ್ಥಿಗಳು ತಮ್ಮ ಗುರುಗಳ ನೇತೃತ್ವದಲ್ಲಿ ಒಳ್ಳೇ ಹುರುಪಿನಿಂದಲೂ ನಿಸ್ವಾರ್ಥತೆಯಿಂದಲೂ ಮಾಡಿದರು. ಕಾಲೇಜದ ಶಿಕ್ಷಕ-ವಿದ್ಯಾರ್ಥಿಗಳ ಸ್ವಯಂಸೇವಕದಲವು ಸಭಾಮಂದಿರದ ಒಳಗೂ ಹೊರಗೂ ಶಿಸ್ತು-ಸುವ್ಯವಸ್ಥೆಗಳನ್ನು ದಕ್ಷತೆಯಿಂದ ಕಾಯ್ದುಕೊಳ್ಳುವದರಲ್ಲಿ ಸದಾ ಸಿದ್ಧವಿರುತ್ತಿತ್ತು. ಅವರಿಂದ ರಚಿಸಲ್ಪಟ್ಟಿದ್ದ ಆಸನಗಳ ವ್ಯವಸ್ಥೆಯಂತೂ ಅತ್ಯಂತ ಚೊಕ್ಕಟವಾಗಿತ್ತು. ಸಮಾರಂಭದ ಮುನ್ನ ಒಂದು ವಾರದಿಂದ ಪ್ರಿನ್ಸಿಪಾಲರವರು ಇಲ್ಲದ ಸ್ಥಳವು ಆ ಆವಾರದಲ್ಲಿ ಒಂದೂ ಇರಲಿಲ್ಲ. ಅವರು ಮೇಲ್ವಿಚಾರಣೆ ಮಾಡುತ್ತ ಎಲ್ಲ ಕಡೆಗೂ ಸುಳಿದಾಡುತ್ತಿದ್ದರು. ಕೇಳಿದ ಪ್ರಶ್ನೆಗೆ ಉತ್ತರವು ಅವರ ನಾಲಿಗೆಯ ಮೇಲೆ ಕುಣಿಯುತ್ತಿತ್ತು. ಎಲ್ಲಿ ಏನು ನಡೆದಿದೆಯೆಂಬುದೆಲ್ಲವೂ ಅವರಿಗೆ ಗೊತ್ತಿರುತ್ತಿತ್ತು. ಚಿಕ್ಕ ಪುಟ್ಟ ಸಂಗತಿಗಳ ಮೇಲೂ ಅವರ ಕಣ್ಣಿರುತ್ತಿತ್ತು. ಎಲ್ಲರೂ ಬಂದು ಅವರನ್ನೇ ಕೇಳುತ್ತಿದ್ದರು. ಅನೇಕ ಸಂಗತಿಗಳಬಗೆಗೆ ಲಕ್ಷ್ಯ ಪೂರೈಸಬೇಕಾದ್ದರಿಂದ ಅವರಿಗೆ ವಿಶ್ರಾಂತಿಯಿಲ್ಲದಿರುವದು ಸಹಜವಾಗಿತ್ತು. ಪ್ರಿನ್ಸಿಪಾಲರಿಗೂ, ಕಾಲೇಜದ ಗುರುವರ್ಗದವರಿಗೂ, ಶಿಕ್ಷಕ-ವಿದ್ಯಾರ್ಥಿಗಳಿಗೂ, ಪ್ರಾಯೋಗಿಕ ಶಾಲೆಯ ಗುರುಗಳಿಗೂ, ನಾವು ನಮ್ಮ ಹೃತ್ಪೂರ್ವಕವಾದ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇವೆ.

ಸಮಾರಂಭದ ಎರಡು ದಿನಗಳ ಕಾರ್ಯಕ್ರಮಗಳು ಅತ್ಯಂತ ಯಶಸ್ವೀಯಾಗಿ ಜರುಗಿದವು. ಮೊದಲನೆಯ ದಿನ, ಮುಂಜಾನೆ ೮ ಗಂಟೆಗೆ ಉದ್ಘಾಟಕರಾದ ಶ್ರೀಮನ್ನಿರಂಜನ ಪ್ರಣವಸ್ವರೂಪಿಗಳಾದ ಬಂಥನಾಳ ಮಹಾ ಶಿವಯೋಗಿಗಳವರನ್ನೂ ಸಮಾರಂಭದ ಅಧ್ಯಕ್ಷರಾದ ಹಾಗೂ ಕರ್ನಾಟಕ ವಿಶ್ವವಿದ್ಯಾಲಯದ ಉಪ

ಕುಲಪತಿಗಳಾದ ರ್‍ಯಾಂಗಲರ ಡಿ.ಸಿ. ಪಾವಟೆಯವರನ್ನೂ ಕಾಲೇಜದ ಮಹಾ ದ್ವಾರದಲ್ಲಿ ಪ್ರೇಮಾಂತಃಕರಣಗಳಿಂದ ಬರಮಾಡಿಕೊಂಡು ಅವರನ್ನು ಸಭಾ ಮಂಟಪದಲ್ಲಿ ಶೃಂಗರಿಸಲ್ಪಟ್ಟಿದ್ದ ವೇದಿಕೆಗೆ ಕರೆತರಲಾಯಿತು. ವೇದಿಕೆಯ ಮೇಲೆ ಅವರಿಗೋಸ್ಕರ ಇಡಲಾಗಿದ್ದ ದಿವ್ಯಾಸನಗಳಲ್ಲಿ ಅವರು ಆಸೀನರಾದ ಮೇಲೆ ಕಾಲೇಜದ ಶಿಕ್ಷಕ-ವಿದ್ಯಾರ್ಥಿಗಳು ನಿತ್ಯದ ರೂಢಿಯಂತೆ ತಮ್ಮ ಮುಂಜಾನೆಯ ಸಾಮೂಹಿಕ ಪ್ರಾರ್ಥನೆಯನ್ನು ಶಾಂತ ವಾತಾವರಣದಲ್ಲಿ ಪೂರೈಸಿದರು. ಕಾರ್ಯಕಾರಿ ಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀ ಸ. ಪ. ಗಾಂವಕಾರವರು ತಮ್ಮ ಸ್ವಾಗತ ಹಾಗೂ ಪರಿಚಯಾತ್ಮಕ ಭಾಷಣವನ್ನು ಓದಿ ಅತಿಥಿದ್ವಯರಿಗೆ ಮಾಲಾರ್ಪಣವನ್ನು ಪ್ರಚಂಡ ಕರತಾಡನಗಳ ಮಧ್ಯದಲ್ಲಿ ಸಲ್ಲಿಸಿದರು. ಸಮಾರಂಭಕ್ಕೆ ಯಶವನ್ನು ಕೋರಿ ಮುಖಂಡರಿಂದ ಬಂದ ಸಂದೇಶಗಳನ್ನು ಶ್ರೀ ಟಿ. ಎಫ್. ದೇಸಾಯಿಯವರು ಓದಿದರು. ಉದ್ಘಾಟಕರು ತಮ್ಮದೇ ಆದ ಶೈಲಿಯಲ್ಲಿ ಕಾಲೇಜದ ಹುಟ್ಟಿನ ಹಿನ್ನೆಲೆಯನ್ನೂ ಕನ್ನಡಕ್ಕೆ ಆಗ ಒದಗಿದ್ದ ದುಃಸ್ಥಿತಿಯನ್ನೂ ಬಣ್ಣಿಸಿ, ಲಿಂಗೈಕ್ಯ ಡೆಪ್ಯೂಟಿ ಚನ್ನಬಸಪ್ಪನವರೇ ಮೊದಲಾದ ಪ್ರಿನ್ಸಿಪಾಲರೂ ಕರ್ಮಯೋಗಿಗಳೂ, ಸಂಸ್ಥೆಯನ್ನೂ, ಕನ್ನಡ ಸಾಹಿತ್ಯವನ್ನೂ, ಹೇಗೆ ಉಳಿಸಿಕೊಂಡು ಬಂದರೆಂಬುದನ್ನು ವಿವರಿಸಿ, ಸಾಕ್ಷರತೆಯು ನಿಜವಾದ ಸಂಸ್ಕೃತಿಯಾಗಲಾರದೆಂದು ಮಾರ್ಮಿಕವಾದ ದೃಷ್ಟಾಂತಗಳನ್ನು ಕೊಟ್ಟು, ಭದ್ರವಾದ ನೈತಿಕ ತಳಹದಿಯಿಲ್ಲದೆ ಆವ ಶಿಕ್ಷಣವೂ ಪೂರ್ಣತೆಯನ್ನು ಹೊಂದಲಾರದೆಂದು ಅಪ್ಪಣೆ ಕೊಡಿಸಿ, ಶ್ರೋತೃವೃಂದವನ್ನೆಲ್ಲ ಆಧ್ಯಾತ್ಮಿಕ ವಿಚಾರ ಸಾಗರದಲ್ಲಿ ತೇಲಾಡಿಸಿ, ಸಮಾಜದಲ್ಲಿ ನೆಲೆಗೊಂಡಿರುವ ಕುಂದುಕೊರತೆಗಳನ್ನು ನಿರ್ದಾಕ್ಷಿಣ್ಯವಾಗಿ ಬೈಲಿಗೆಳೆದು ಕೈಯೆತ್ತಿ ತೋರಿಸಿ, ಎಂದಿನಿಂದಲೋ ನಮ್ಮ ನಾಡಿನಲ್ಲಿ ಬೆಳೆದು ಬಂದಿದ್ದ ಶಿವಯೋಗಿಗಳವರ ಉಜ್ವಲ ಪರಂಪರೆಯನ್ನು ಸಮರ್ಥ ರೀತಿಯಿಂದ ಮನಗಾಣಿಸಿಕೊಟ್ಟು, ಸಮಾರಂಭಕ್ಕೆ ಯಶವನ್ನೂ, ಮಂಗಲವನ್ನೂ ಆಶೀರ್ವದಿಸಿ ತಮ್ಮ ಭಾಷಣವನ್ನು ಮುಗಿಸಿದರು. ಆ ಮೇಲೆ ಅಧ್ಯಕ್ಷರಾದ ರ್‍ಯಾಂಗ್ಲರ ಪಾವಟೆಯವರು ಶಿವಯೋಗೀಶ್ವರರ ವಿಚಾರ ಪ್ರಣಾಲಿಯನ್ನು ಎತ್ತಿಹಿಡಿದು, ಲಿಂಗೈಕ್ಯ ಡೆಪ್ಯೂಟಿ ಚನ್ನಬಸಪ್ಪನವರೇ ಮೊದಲಾದ ಪ್ರಭೃತಿಗಳು ಈ ಸಂಸ್ಥೆಗೂ ಕನ್ನಡ ನಾಡುನುಡಿಗಳಿಗೂ ಸಮರ್ಪಿಸಿದ ಸೇವೆಯನ್ನು ಹೊಗಳಿ, ತಾವು ಕರ್ನಾಟಕ ಕಾಲೇಜದಲ್ಲಿ ಅಭ್ಯಾಸ ಮಾಡುತ್ತಿದ್ದಾಗ ತಮ್ಮೊಡನೆ ಸಂಪರ್ಕವನ್ನಿಟ್ಟುಗೊಂಡಿದ್ದ ಈ ಟ್ರೇನಿಂಗ ಕಾಲೇಜದ ಹಲವು ಶಿಕ್ಷಕ ವಿದ್ಯಾರ್ಥಿಗಳ ಮೇಧಾ ಶಕ್ತಿಯನ್ನು ಕೊಂಡಾಡಿ, ತಾವು ಡಾಯರೆಕ್ಟರರಾಗಿದ್ದಾಗ ಈ ಸಂಸ್ಥೆಯನ್ನು ಜೀವನ ಶಿಕ್ಷಣದ ತರಬೇತಿಯ ಕೇಂದ್ರವನ್ನಾಗಿ ಪರಿವರ್ತಿಸಿದುದರ ವಿವರಗಳನ್ನು ಹೇಳಿ, ಈ ಸಂಸ್ಥೆಗೆ ಉಜ್ವಲ ಭವಿಷ್ಯತ್ತು ಕಾಯ್ದಿದೆಯೆಂದು ಘೋಷಿಸಿ ತಮ್ಮ ಭಾಷಣವನ್ನು ಮುಗಿಸಿದರು. ಅಲ್ಲಿಗೆ ಮುಂಜಾನೆಯ ಕಾರ್ಯಕ್ರಮವು ಮುಗಿಯಿತು.

ಅಪರಾಹ್ನ ಮೂರು ಗಂಟೆಗೆ ನಿಯೋಜಿತ ಅಧ್ಯಕ್ಷರಾದ ಶ್ರೀ ಹುಕ್ಕೇರಿಕರ ರಾಮರಾಯರು ಆಗಮಿಸಿದ ಕೂಡಲೆ ಕಾರ್ಯಕಾರಿ ಸಮಿತಿಯವರು ಅವರನ್ನು ಪ್ರೇಮದಿಂದ ಎದುರ್ಗೊಂಡು ಅಧ್ಯಕ್ಷ ಪೀಠದತ್ತ ಕರೆತಂದರು. ಸ್ಥಾನಾಪನ್ನರಾದ ಮೇಲೆ ಪ್ರಿನ್ಸಿಪಾಲರಾದ ಶ್ರೀ ಎಸ್. ಪಿ. ಪಾಟೀಲರವರು ಸ್ವಾಗತ ಹಾಗೂ ಪರಿಚಯಾತ್ಮಕ ಭಾಷಣವನ್ನು ಓದಿ ಮಾಲಾರ್ಪಣ ಮಾಡಿ ಅಧ್ಯಕ್ಷರಿಗೆ ಪ್ರದರ್ಶನವನ್ನು ಉದ್ಘಾಟಿಸಲಿಕ್ಕೂ ಜೀವನ-ಶಿಕ್ಷಣದ ವಿಚಾರ ಸಂಕೀರ್ಣವನ್ನು ಸಾಗಿಸಲಿಕ್ಕೂ ವಿನಂತಿಸಿಕೊಂಡರು. ಪದವೀಧರರ ಜೀವನ ಶಿಕ್ಷಣ ತರಬೇತಿಯ ಕೇಂದ್ರದ ಪ್ರಿನ್ಸಿಪಾಲರಾದ ಶ್ರೀ ತೇರಗಾಂವಕರವರು, ಅದೇ ಸಂಸ್ಥೆಯ ವ್ಹಾಯಿಸ್ ಪ್ರಿನ್ಸಿಪಾಲರಾಗಿದ್ದ ಶ್ರೀ ಹಂದ್ರಾಳರವರು, ಎಜ್ಯುಕೇಶನಲ್ ಇನ್‌ಸ್ಪೆಕ್ಟರರಾದ ಶ್ರೀ ಕೊಪ್ಪೀಕರವರು, ಬೆಳಗಾವಿಯ ಸೆಕಂಡರಿ ಟ್ರೇನಿಂಗ ಕಾಲೇಜದ ವ್ಹಾಯಿಸ್ ಪ್ರಿನ್ಸಿಪಾಲರಾದ ಶ್ರೀ ದೋಹಿಡೆಕರವರು, ಅದೇ ಸಂಸ್ಥೆಯ ಪ್ರಾಧ್ಯಾಪಕರಾದ ಶ್ರೀ ನಾಯಕರವರು, ಕ್ರಾಫ್ಟ ಆರ್ಗನಾಯಿಜರರಾದ ಶ್ರೀ ಉಣಕಲ್ಲರವರು ಮತ್ತು ನಿವೃತ್ತ ಶಿಕ್ಷಣಾಧಿಕಾರಿಗಳಾದ ಶ್ರೀ ತಟ್ಟೆಯವರು ಜೀವನ ಶಿಕ್ಷಣದ ಬಗೆಗೆ ಒಂದೊಂದು ಸಮಸ್ಯೆಯನ್ನು ಎತ್ತಿಕೊಂಡು ತಾವು ಬರೆದುಕೊಂಡು ತಂದಿದ್ದ ಪ್ರಬಂಧಗಳನ್ನು ಓದಿದರು. ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ಎಲ್ಲರು ತಮ್ಮ ತಮ್ಮ ಸಮಸ್ಯೆಯನ್ನು ನಿಚ್ಚಳವಾಗಿ ಸಮರ್ಥಿಸಿದ್ದನ್ನು ಶ್ಲಾಘಿಸಿ, ತಮ್ಮ ಸ್ವಂತದ ಹಲವು ಅನುಭವಗಳನ್ನು ವಿವರಿಸಿ, ಜನತೆಯಲ್ಲಿ ಜೀವನ ಶಿಕ್ಷಣದ ಬಗೆಗೆ ಕಂಡು ಬರುವ ಅನಾಸ್ಥೆಯನ್ನು ಹೊಡೆದೋಡಿಸಲು ಆ ಕ್ಷೇತ್ರದಲ್ಲಿ ಕೆಲಸ ಮಾಡುವ ಶಿಕ್ಷಕ-ಶಿಕ್ಷಿಕೆಯರಿಗೂ ಅಧಿಕಾರಿಗಳಿಗೂ ಹೆಚ್ಚಾಗಿ ಶ್ರಮಿಸಬೇಕೆಂದು ಕೇಳಿಕೊಂಡು, ಪ್ರದರ್ಶನ

ದಲ್ಲಿ ಮಕ್ಕಳಿಂದ ತಯಾರಾದ ನೂಲು, ವಸ್ತ್ರ, ರಟ್ಟಿನ ಹಾಗೂ ಕಟ್ಟಿಗೆಯ ಕೆಲಸ, ಒಕ್ಕಲತನದ ಸಾಮಾನು, ಬೆಳೆ, ಮುಂತಾದವುಗಳನ್ನು ನೋಡಿ ತಮಗಾದ ಆನಂದವನ್ನು ವ್ಯಕ್ತಪಡಿಸಿ, ತಮ್ಮ ಭಾಷಣವನ್ನು ಮುಗಿಸಿದರು. ಕಾಲೇಜದ ಸಾಮೂಹಿಕ ಸಾಯಂಪ್ರಾರ್ಥನೆಯೊಂದಿಗೆ ಅಂದಿನ ಕಾರ್ಯಕ್ರಮವು ಮುಗಿಯಿತು. ರಾತ್ರಿ ೯ ಗಂಟೆಗೆ ಕಾಲೇಜದ ಶಿಕ್ಷಕ-ವಿದ್ಯಾರ್ಥಿಗಳು ಕ್ಷಾತ್ರ ತೇಜದಿಂದ ತುಂಬಿ ತುಳುಕುತ್ತಿದ್ದ ಕಿತ್ತೂರ ಕೇಸರಿಣಿ ವೀರ ಚನ್ನಮ್ಮ ರಾಣಿಯ ನಾಟಕವನ್ನು ಅತ್ಯಂತ ಹೃದಯಂಗಮವಾಗಿ ಅಭಿನಯಿಸಿದರು. ಶ್ರೋತ್ರವೃಂದವು ಕಾಲಿಡಲು ಸ್ಥಳವಿಲ್ಲದಷ್ಟು ಕಿಕ್ಕಿರಿದು ನೆರೆದಿತ್ತು. ನಾಟಕದ ಕೊನೆಗೆ ಇನಾಮುಗಳ ಸುರಿಮಳೆಯಾಗಿದ್ದನ್ನು ಗಣನೆಗೆ ತಂದು ಕೊಂಡರೆ, ಅದು ನೆರೆದ ಜನರ ಮೆಚ್ಚುಗೆಯನ್ನು ಎಷ್ಟು ಹುಲುಸಾಗಿ ಪಡೆಯಿತೆಂಬುದು ಎಲ್ಲರ ನಿದರ್ಶನಕ್ಕೆ ಬಂದಿರಲು ಸಾಕು. ನಾಲ್ಕಾರು ಸಾವಿರ ಜನರಿಂದ ಕೂಡಿದ ಪ್ರೇಕ್ಷಕ ವೃಂದವು ಅತ್ಯಂತ ಶಾಂತರೀತಿಯಿಂದ ನೋಡಿ ನಲಿದುದೇ ನಮ್ಮೆಲ್ಲರ ಸಂತೋಷ.

ಎರಡನೆಯ ದಿನ ಮುಂಜಾನೆ ೮ ಗಂಟೆಗೆ ಮುಖ್ಯ ಅತಿಥಿಗಳಾದ ಶ್ರೀ ಆಲೂರ ವೆಂಕಟರಾಯರು ಆಗಮಿಸಿದ **ಕೂಡಲೆ ಅವರನ್ನು** ಕಾರ್ಯಕಾರಿ ಸಮಿತಿಯವರು ಪ್ರೇಮಾದರಗಳಿಂದ ಬರಮಾಡಿಕೊಂಡು ವೇದಿಕೆಯತ್ತ ಕರೆತಂದರು. ತಮ್ಮ ತಮ್ಮ ಆಸನಗಳಲ್ಲಿ ಕುಳಿತ ಮೇಲೆ ಮುಂಜಾನೆಯ ಸಾಮೂಹಿಕ ಪ್ರಾರ್ಥನೆಯು ಶಿಕ್ಷಕ-ವಿದ್ಯಾರ್ಥಿಗಳಿಂದ ಜರುಗಿತು. ಆಮೇಲೆ ಶ್ರೀ ಗಾಂವಕಾರವರು ಸ್ವಾಗತ ಹಾಗೂ ಪರಿಚಯಾತ್ಮಕ ಭಾಷಣವನ್ನು ಮಾಡಿ ಮಾಲಾರ್ಪಣವನ್ನು ಮಾಡಿದರು. ಶ್ರೀ ವೆಂಕಟರಾಯರು ಎಲ್ಲ ತೈಲ ಚಿತ್ರಗಳ ಅನಾವರಣವನ್ನು ಮಾಡಿ ಇಷ್ಟು ಜನ ಸಮುದಾಯವುಳ್ಳ ಸಮಾರಂಭವನ್ನು ತಾವು ಧಾರವಾಡದಲ್ಲಿ ನೋಡಲಿಲ್ಲವೆಂದು ಹೇಳಿ, ಗಣ್ಯ ಪ್ರಿನ್ಸಿಪಾಲದ್ವಯರ ಬಗೆಗೆ ತಮ್ಮಲ್ಲಿದ್ದ ಗೌರವಾದರಗಳನ್ನು ವ್ಯಕ್ತಪಡಿಸಿ, ಅವರೀರ್ವರು ಕನ್ನಡ ನಾಡು-ನುಡಿಗಳಿಗೆ ಸಲ್ಲಿಸಿದ ಸೇವೆಯು ಅಪಾರವಾದುದೆಂದು ಸಾರಿ, ಈ ಕಾಲೇಜದ ಗಣ್ಯ ವಿದ್ಯಾರ್ಥಿಯಾಗಿ ಮುಂದೆ ವಿಜಾಪುರ ಜಿಲ್ಹೆಯ ಕಲೆಕ್ಟರರಾಗಿದ್ದ ಶ್ರೀ ವ್ಹಿ. ಎಚ್. ನಾಯಕರವರಿಗೂ ತಮಗೂ ಇದ್ದ ಸಂಪರ್ಕವನ್ನು ವಿವರಿಸಿ, ಅವರು ಕರ್ನಾಟಕ-ಏಕೀಕರಣಕ್ಕೋಸ್ಕರ ಅತ್ಯಂತ ಕಳಕಳಿಯಿಂದ ಹೆಣಗಾಡಿದ್ದನ್ನು ನಿವೇದಿಸಿ, ಈ ಮೂವರೂ ಮಹನೀಯರಿಗೆ ಕಳಸಪ್ರಾಯರಾದವರು ಶ್ರೀ ಪಾವಟೆಯವರೆಂದು ಹೇಳಿ, ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕರ್ಪಿಸುತ್ತಿರುವ ಸೇವೆಯನ್ನು ಕೊಂಡಾಡಿ, ಅವರ ತೈಲ ಚಿತ್ರವನ್ನು ಧಾರವಾಡ ಜಿಲ್ಹಾ ಶಿಕ್ಷಕ-ಸಂಘದವರು ಪ್ರೇಮದಿಂದ ಅರ್ಪಿಸಿದ್ದನ್ನು ತಿಳಿಯಪಡಿಸಿ, ತಮ್ಮ ಭಾಷಣವನ್ನು ಮುಗಿಸಿದರು. ಅರ್ಧ ತಾಸಿನ ನಂತರ ಕಾಲೇಜದ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನವು ಧಾರವಾಡ ಜಿಲ್ಹಾ ಸ್ಕೂಲಬೋರ್ಡ ಚೇರ್‌ಮನ್ನರಾದ ಶ್ರೀ ಸಿ. ಕೆ. ಕುಲಕರ್ಣಿಯವರ ನೇತೃತ್ವದಲ್ಲಿ ಜರುಗಿತು. ಶ್ರೀ ಬಿ. ವ್ಹಿ. ಬುರ್ಲಿಯವರು ಪ್ರಾಸ್ತಾವಿಕ ಭಾಷಣವನ್ನು ಮಾಡಿ ಮಾಲಾರ್ಪಣವನ್ನು ಮಾಡಿದರು. ಹಿಂದಿನ ವಿದ್ಯಾರ್ಥಿಗಳಾದ ಹಲವು ಶಿಕ್ಷಕರು ಮಾತಾಡಿದ ನಂತರ ನೂತನ ಕನ್ನಡ ರಾಜ್ಯದ ಶಿಕ್ಷಕರ ಸಂಘವೊಂದನ್ನು ರಚಿಸಬೇಕೆಂಬ ಉದ್ದೇಶದಿಂದ ಶ್ರೀ ಗಾಂವಕಾರವರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕಾರಿ ಸಮಿತಿಯು ರಚಿಸಲ್ಪಟ್ಟಿತು.

ಅಪರಾಹ್ನ ೪ ಗಂಟೆಗೆ ಅಧ್ಯಕ್ಷರೂ ಮುಖ್ಯ ಅತಿಥಿಗಳಾದ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳೂ ಆಗಮಿಸಿದ **ಕೂಡಲೆ ಅವರನ್ನು** ಪ್ರೇಮದಿಂದ ಬರಮಾಡಿಕೊಂಡು ವೇದಿಕೆಗೆ ಕರೆತರಲಾಯಿತು. ಎಲ್ಲರು ಸ್ಥಾನಾಪನ್ನರಾದ ಮೇಲೆ ಶ್ರೀ ಶಿಂತ್ರಿಯವರು ಸ್ವಾಗತ ಭಾಷಣ ಮಾಡಿ ಶಾಸ್ತ್ರಿಗಳವರ ಅಲ್ಪ ಪರಿಚಯವನ್ನು ಮಾಡಿಕೊಟ್ಟು ಮಾಲಾರ್ಪಣ ಮಾಡಿದರು. ಶಾಸ್ತ್ರಿಗಳವರು ತಮ್ಮ ಅಸ್ಖಲಿತ ವಾಣಿಯಿಂದ ಮಾನವನನ್ನು ಬಿಟ್ಟು ಉಳಿದೆಲ್ಲ ಪ್ರಾಣಿಗಳ ಹಾಗೂ ವನಸ್ಪತಿಗಳ ಅವಯವಗಳು ಹೇಗೆ ಉಪಯುಕ್ತ–ವಿರುವವೆಂಬುದನ್ನೂ ಮಾನವನ ಆವ ಅವಯವವೂ ಆವ ಉಪಯೋಗಕ್ಕೂ ಬರುವದಿಲ್ಲೆಂಬುದನ್ನೂ ತಕ್ಕ ದೃಷ್ಟಾಂತಗಳಿಂದ ತಲೆದೂಗುವಂತೆ ಸ್ಪಷ್ಟೀಕರಿಸಿ, ಉಳಿದ ಪ್ರಾಣಿಗಳಿಗಿಲ್ಲದ ಮತ್ತು ಮಾನವನಿಗೆ ಮಾತ್ರ ಮೀಸಲಾಗಿರುವ ವಿಚಾರ ಶಕ್ತಿಯ ಬಲದಿಂದ ಆತನು ತನ್ನ ಶ್ರೇಷ್ಠತೆಯನ್ನು ಹೇಗೆ ಪಡೆದಿಹನೆಂಬುದನ್ನು ಸೋದಾಹರಣೆಗಳಿಂದ ವಿವರಿಸಿ, ಲಿಂಗೈಕ್ಯ ಡೆಪ್ಯೂಟಿ ಚನ್ನಬಸಪ್ಪನವರಂತಹ ಹಾಗೂ ದಿವಂಗತ ದೊಡ್ಡರಾಯರಂತಹ ವಿದ್ವನ್ಮಣಿಗಳು ಈ ಸಂಸ್ಥೆಯನ್ನೂ ಕನ್ನಡ ನುಡಿಯನ್ನೂ ಹೇಗೆ ಉಳಿಸಿ ಬೆಳೆಯಿಸಿಕೊಂಡು ಬಂದರೆಂಬುದನ್ನೂ ಹೊಗಳಿ, ಈ ಸಂಸ್ಥೆಯು

ಕಳೆದ ನೂರು ವರುಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕೊಂಡಾಡಿ, ಸ್ಮಾರಕ ಸಂಪುಟದ ಪ್ರಕಟನೆಯು ಆಯಿತೆಂದು ಸಾರಿ, ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು. ಶ್ರೀ ಡಿ. ಎನ್. ರಾಕೂರರವರು ಅಲ್ಲಿಯವರೆಗಾಗಿದ್ದ ಆಯವ್ಯಯದ ವರದಿಯನ್ನು ಓದಿದರು. ಅಧ್ಯಕ್ಷರ ಅಮೃತ ಹಸ್ತದಿಂದ ಪಾರಿತೋಷಿಕ ವಿತರಣವಾದ ನಂತರ ಅಧ್ಯಕ್ಷರ ಸಮಾರೋಪ ಭಾಷಣವಾಯಿತು. ಕೊನೆಗೆ ಪ್ರಿನ್ಸಿಪಾಲರವರು ಸಮಾರಂಭವನ್ನು ಸಜ್ಜುಗೊಳಿಸುವಲ್ಲಿ ಎಲ್ಲ ತರದ ನೆರವನ್ನೀಡಿದ ಅಧಿಕಾರಿಗಳಿಗೂ, ಸಂಘ–ಸಂಸ್ಥೆಗಳಿಗೂ, ಧಾರವಾಡ ನಾಗರಿಕರಿಗೂ, ಉತ್ತರ ಕರ್ನಾಟಕದ ಶಿಕ್ಷಕರೆಲ್ಲರಿಗೂ ಸವಿನಮ್ರವಾದ ವಂದನಾರ್ಪಣವನ್ನು ಸಲ್ಲಿಸಿದರು. ಶಿಕ್ಷಕ-ವಿದ್ಯಾರ್ಥಿಗಳ ಸಾಮೂಹಿಕ ಸಾಯಂಪ್ರಾರ್ಥನೆಯೊಂದಿಗೆ ಅಂದಿನ ಕಾರ್ಯಕ್ರಮವು ಕೊನೆಗೊಂಡಿತು.

ರಾತ್ರಿ ೮ ಗಂಟೆಗೆ ವಿವಿಧ ವಿನೋದಾವಳಿಗಳು ಜರುಗಿದವು. ಅವು ಸಹ ಅತ್ಯಂತ ಪ್ರೇಕ್ಷಣೀಯವಾಗಿದ್ದವು. ನೆರೆದ ಜನರು ಹರ್ಷಭರಿತರಾಗಿ ಮೇಲಿಂದ ಮೇಲೆ ಚಪ್ಪಾಳೆಗಳನ್ನು ಹಾಕುತ್ತಿದ್ದರು. ಈ ರೀತಿಯಾಗಿ ಎರಡೂ ದಿನಗಳ ಕಾರ್ಯಕ್ರಮಗಳು ಅತ್ಯಂತ ಯಶಸ್ವಿಯಾಗಿ ಜರುಗಿದವು.

ಸ್ಮಾರಕ ಸಂಪುಟದ ಬಗೆಗೆ ಇಲ್ಲಿ ಒಂದೆರಡು ಮಾತುಗಳನ್ನು ಹೇಳುವದು ಅವಶ್ಯವೆಂದು ತೋರುತ್ತಿದೆ. ಜೀವನ ಶಿಕ್ಷಣ ಪತ್ರಿಕೆಯು ಈ ಸಂಸ್ಥೆಯ ಮುಖಪತ್ರವೆಂಬುದು ಸರ್ವಶ್ರುತವಿದೆಯಷ್ಟೇ. ನವಂಬರ, ಡಿಸೆಂಬರ, ಜನೆವರಿ, ಈ ಮೂರೂ ತಿಂಗಳುಗಳ ಸಂಚಿಕೆಗಳನ್ನು ಬಿಡಿಬಿಡಿಯಾಗಿ ಹೊರಡಿಸದೆ, ಇಡಿಯಾಗಿ ಒಂದು ವಿಶೇಷ ಸಂಚಿಕೆಯನ್ನು ಹೊರಡಿಸಿ ಅದಕ್ಕೆ ಶತಾಬ್ದಿ ಸಮಾರಂಭದ ಸ್ಮಾರಕ ಸಂಪುಟವೆಂದು ಹೆಸರಿಸಬೇಕೆಂದು ನಮ್ಮ ಸಮಿತಿಯವರು ಜೀವನ ಶಿಕ್ಷಣ ಪತ್ರಿಕೆಯ ಸಂಪಾದಕ ಮಂಡಲಕ್ಕೆ ವಿನಂತಿಯೊಂದನ್ನು ಮಾಡಿಕೊಂಡರು. ಈ ವಿನಂತಿಗೆ ಮನ್ನಣೆಕೊಟ್ಟು ಆ ಮೂರೂ ತಿಂಗಳುಗಳ ಸಂಚಿಕೆಗಳಿಗೆ ತಗಲುವಷ್ಟು ಹಣವನ್ನು ಸ್ಮಾರಕ ಸಂಪುಟಕ್ಕೋಸ್ಕರ ಮೀಸಲಾಗಿಡಲಾಗುವದೆಂದೂ ಅದನ್ನು ಅಂದಗೊಳಿಸಲು ಒಂದು ವೇಳೆ ಪತ್ತಬಹುದಾದ ಹೆಚ್ಚಿನ ವೆಚ್ಚದ ಭಾರವನ್ನು ಸಮಿತಿಯವರು ವಹಿಸಬೇಕಾಗುವದೆಂದೂ ನಮಗೆ ಸೂಚಿಸಿದರು. ಈ ಸ್ತುತ್ಯವಾದ ಸೂಚನೆಯನ್ನು ನಮ್ಮ ಸಮಿತಿಯು ತತ್‌ಕ್ಷಣವೇ ಒಪ್ಪಿಕೊಂಡಿತಲ್ಲದೆ ಅದರಂತೆ ಕಾರ್ಯಪ್ರವೃತ್ತರಾಗಲು ಸಂಪಾದಕ ಮಂಡಲಕ್ಕೆ ಪುನಃ ವಿನಂತಿಸಿಕೊಂಡಿತು. ಸಂಪುಟವು ಎಲ್ಲ ದೃಷ್ಟಿಗಳಿಂದಲೂ ಮೋಹಕವಾಗಿದ್ದು ಗ್ರಾಹಕರೆಲ್ಲರ ಮೆಚ್ಚುಗೆಯನ್ನು ಬಹಳಷ್ಟು ಪಡೆದಿದೆ. ಅದರಲ್ಲಿ ನಮ್ಮ ನಾಡಿನ ಮುಖಂಡರ ಸಂದೇಶಗಳೂ, ಕಾಲೇಜದ ನೂರುವರ್ಷಗಳ ಇತಿಹಾಸವೂ ಜೀವನ ಶಿಕ್ಷಣ ಮಾಸಿಕದ ೯೩ ವರ್ಷಗಳ ವೃತ್ತಾಂತವೂ, ಹಲವು ಪ್ರಿನ್ಸಿಪಾಲರ ಜೀವನ ಚರಿತ್ರಗಳೂ, ಹಳೆಯ ವಿದ್ಯಾರ್ಥಿಗಳ ಹಾಗೂ ಪ್ರಾಧ್ಯಾಪಕರ ಸವಿ ನೆನಹುಗಳೂ, ಕವನಗಳೂ, ಜೀವನ ಶಿಕ್ಷಣದ ಬಗೆಗೆ ಲೇಖನಗಳೂ ಪ್ರಕಟಗೊಂಡಿವೆ. ಅವುಗಳಲ್ಲಿ ಸಾಕಷ್ಟು ವೈವಿಧ್ಯವಿದೆ. ಉದ್ಘಾಟಕರ, ಅಧ್ಯಕ್ಷರ, ಮುಖ್ಯ ಅತಿಥಿಗಳ, ಗಣ್ಯ ಪ್ರಿನ್ಸಿಪಾಲದ್ವಯರ, ನಾಮಾಂಕಿತ ಹಳೆಯ ವಿದ್ಯಾರ್ಥಿಯೋರ್ವರ, ಹಿಂದಿನ ಹಾಗೂ ಇಂದಿನ ಪ್ರಿನ್ಸಿಪಾಲರ, ಕಾರ್ಯಕಾರಿ ಸಮಿತಿಯ, ಸಂಪಾದಕ ಮಂಡಲದ, ಕಾಲೇಜದ ಬೇರೆ ಬೇರೆ ವರ್ಗಗಳ, ಕಾಲೇಜದ ಗ.ರು–ವರ್ಗದ, ಪ್ರಾಯೋಗಿಕ ಶಾಲೆಯ ಗುರುವರ್ಗದ ಮತ್ತು ಕಾಲೇಜದ ಬೆಳೆಗಳ ಭಾವಚಿತ್ರಗಳು ಅಲ್ಲಲ್ಲಿ ಚಂದ ಕಾಣುವಂತೆ ಚಿತ್ತಾಕರ್ಷಕವಾಗಿ ಜೋಡಿಸಲ್ಪಟ್ಟಿವೆ. ಮುಖ ಪುಟದ ಮೇಲೆ ಕಾಲೇಜದ ನೂತನ ಕಟ್ಟಡದ ಚಿತ್ರವು ಕಂಗೊಳಿಸುತ್ತಿದೆ. ಮುದ್ರಣವಂತೂ ಮುದ್ದು ಬರುವಂತಿದೆ. ಶಕ್ಯವಿದ್ದಷ್ಟು ಕಾಟಕಸರನ್ನು ಮಾಡಿ ಆದಷ್ಟು ಕಡಿಮೆ ಖರ್ಚಿನಲ್ಲಿ ಇಷ್ಟೊಂದು ಅಂದಚಂದವಾದ ಸಂಪುಟವನ್ನು ತಯಾರಿಸಿದ್ದಕ್ಕೋಸ್ಕರ ಸಂಪಾದಕ ಮಂಡಲದವರಿಗೂ ಅವರ ಮುಖಾಂತರ ಹುಬ್ಬಳ್ಳಿಯ ಮನೋಹರ ಮುದ್ರಣಾಲಯದವರಿಗೂ ನಾವು ಋಣಿಯಾಗಿರುವೆವು.

ಕೊನೆಯದಾಗಿ ಎಲ್ಲವೂ ಅಂದ ಚಂದವಾಗಿ ನಡೆದುದಕ್ಕೆ ಈಶ್ವರೀ ಸಂಕೇತವೇ ಹಾಗಿದ್ದಿತೆಂದು ನಮ್ಮೆಲ್ಲರ ಭಾವನೆ. ಆಯ-ವ್ಯಯದ ವರದಿಯು ಇನ್ನೂ ತಯಾರಾಗಿಲ್ಲ. ಕಾರಣವೇನೆಂದರೆ, ನಿಧಿ ಸಂಗ್ರಹದ ಕಾರ್ಯವು ಇನ್ನೂ ಮುಗಿದಿಲ್ಲ. ಅದೆಲ್ಲ ಮುಗಿದ ಮೇಲೆ, ಗಳಿಕೆ-ಬಳಿಕೆಗಳ ಸಂಪೂರ್ಣ ವರದಿಯನ್ನು ಶಿಕ್ಷಕರ ಹಾಗು ಸಾರ್ವಜನಿಕರ ಮಾಹಿತಿಗೋಸುಗ ಪ್ರಕಟಿಸಲು ಈ ಮಾಸಿಕಕ್ಕೂ ದೈನಿಕಗಳಿಗೂ ಕಳಿಸಿ ಕೊಡಲಾಗುವದು.

— ಜಯ ಹಿಂದ —

(ಆಮಂತ್ರಣ ಪತ್ರಿಕೆಯ ನಕಲು)

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಈ ಸಂಸ್ಥೆಯ

ಶತಾಬ್ದಿ ಸಮಾರಂಭವು

೧೯೫೭ನೆಯ ಡಿಸೆಂಬರ ೨೭ ಹಾಗು ೨೮ರಂದು ಜರಗುವದು. ಪೂಜ್ಯ ಶ್ರೀ. ಮ.ನಿ.ಪ್ರ.ಸ್ವ. ಮಹಾಶಿವಯೋಗಿಗಳು ಬಂಥನಾಳ ಅವರು ಸಮಾರಂಭವನ್ನು ಪ್ರಾರಂಭಿಸಲು ಕೃಪೆಮಾಡಿರುವರು. ಹಾಗು ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ರ್‍ಯಾಂಗ್ಲರ ಡಿ. ಸಿ. ಪಾವಟೆ ಎಮ್.ಎ. (ಕೆಂಬ್ರಿಜ) ಅವರು ಸಮಾರಂಭದ ಅಧ್ಯಕ್ಷತೆ ವಹಿಸಲು ದಯವಿಟ್ಟು ಒಪ್ಪಿರುವರು. ತಾವು ಆಗಮಿಸಿ ಈ ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ಪ್ರಾರ್ಥನೆ.

ಸಂ. ಪ. ಪಾಟೀಲ — ಪ್ರಿನ್ಸಿಪಾಲ ಹಾಗು ಕಾರ್ಯದರ್ಶಿ

ಸ. ಪ. ಗಾಂವಕಾರ — ಕಾರ್ಯಾಧ್ಯಕ್ಷ

ಶತಾಬ್ದಿ ಸಮಾರಂಭ ಸಮಿತಿ, ಧಾರವಾಡ ೧೫-೧೨-೫೭

೨೭-೧೨-೧೯೫೭ ಪ್ರಾರಂಭೋತ್ಸವ ಮುಂಜಾನೆ ೮ ಗಂಟೆ: ೧. ಪ್ರಾರ್ಥನೆ ೨. ಸ್ವಾಗತ ಭಾಷಣ ೩. ಸಂದೇಶ ವಾಚನ ೪. ಪ್ರಾರಂಭೋತ್ಸವ ಹಾಗು ಭಾಷಣ ೫. ಅಧ್ಯಕ್ಷರ ಭಾಷಣ.

ಮಧ್ಯಾಹ್ನ ೩ ಗಂಟೆ: ಜೀವನ ಶಿಕ್ಷಣ ಪ್ರದರ್ಶನ ಹಾಗು ಜೀವನ ಶಿಕ್ಷಣ ವಿಚಾರ ಗೋಷ್ಠಿ ಅಧ್ಯಕ್ಷರು: ಶ್ರೀ ಹುಕ್ಕೇರಿಕರ ರಾಮರಾಯರು, ಎಮ್.ಎ. ಚೇರಮನ್, ಜನತಾ ಶಿಕ್ಷಣ ಸಂಸ್ಥೆ, ಧಾರವಾಡ. ೧. ಜೀವನ ಶಿಕ್ಷಣ ಪ್ರದರ್ಶನದ ಉದ್ಘಾಟನೆ ೨. ಪ್ರಾಸ್ತಾವಿಕ ಭಾಷಣ ೩. ಅಧ್ಯಕ್ಷರ ಭಾಷಣ ೪. ತಜ್ಞರ ಭಾಷಣಗಳು ೫. ಸಮಾರೋಪ ೬. ಸಾಯಂಪ್ರಾರ್ಥನೆ.

ರಾತ್ರಿ ೯ ಗಂಟೆ: ಕಿತ್ತೂರ ಚನ್ನಮ್ಮನ ನಾಟಕ ಗ. ಮ. ಸ. ಟ್ರೇ. ಕಾಲೇಜದ ಶಿಕ್ಷಕ-ವಿದ್ಯಾರ್ಥಿಗಳಿಂದ.

೨೮-೧೨-೧೯೫೭ ಶನಿವಾರ ತೈಲ ಚಿತ್ರಗಳ ಅನಾವರಣ. ಮುಂಜಾನೆ ೮ ಗಂಟೆ: ಮುಖ್ಯ ಅತಿಥಿಗಳು ಶ್ರೀ ಆಲೂರ ವೆಂಕಟರಾಯರು. ೧. ಪ್ರಾರ್ಥನೆ ೨. ಪ್ರಾಸ್ತಾವಿಕ ಭಾಷಣ ೩. ತೈಲ ಚಿತ್ರಗಳ ಅನಾವರಣ ೪. ಮುಖ್ಯ ಅತಿಥಿಗಳ ಭಾಷಣ ೫. ಸಮಾರೋಪ.

ಮುಂಜಾನೆ ೯-೪೫ ಗಂಟೆ: ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲನ ೧. ಪ್ರಾಸ್ತಾವಿಕ ಭಾಷಣ ೨. ಶ್ರೀ ಸಿ. ಕೆ. ಕುಲಕರ್ಣಿ, ಚೇರಮನ್ ಡಿ. ಸ್ಕೂ. ಬೋರ್ಡ ಧಾರವಾಡ ಹಾಗು ಶ್ರೀ ಸಿ. ಎಮ್. ನಾಡಗೌಡ, ಚೇರಮನ್ ಡಿ. ಸ್ಕೂ. ಬೋರ್ಡ ವಿಜಾಪೂರ ಇವರ ಭಾಷಣ ೩. ಹಳೆಯ ವಿದ್ಯಾರ್ಥಿಗಳ ಭಾಷಣ ೪. ಸಮಾರೋಪ.

ಮಧ್ಯಾಹ್ನ ೩ ಗಂಟೆ: ಸ್ಮಾರಕ ಸಂಪುಟದ ಪ್ರಕಟನೆ ಹಾಗು ಮುಕ್ತಾಯ. ಮುಖ್ಯ ಅತಿಥಿಗಳು ಆಸ್ಥಾನ ವಿದ್ವಾನ ಪಂಡಿತರತ್ನ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು, ಅಧ್ಯಕ್ಷ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರ. ೧. ಪ್ರಾಸ್ತಾವಿಕ ಭಾಷಣ ೨. ಸಂಪುಟದ ಪ್ರಕಟನೆ ೩. ಮುಖ್ಯ ಅತಿಥಿಗಳ ಭಾಷಣ ೪. ಪಾರಿತೋಷಿಕ ವಿತರಣ ೫. ನಿಧಿ ಸಂಗ್ರಹದ ವರದಿ ೬, ಸಮಾರೋಪ ೭. ವಂದನಾರ್ಪಣೆ ೮. ಸಾಯಂಪ್ರಾರ್ಥನೆ.

ರಾತ್ರಿ ೭ ಗಂಟೆ: ವಿವಿಧ ವಿನೋದಾವಳಿಗಳು ಸ್ಥಾನಿಕ ಶಿಕ್ಷಣ ಸಂಸ್ಥೆಗಳಿಂದ, ರಾಷ್ಟ್ರಗೀತೆ.

೧೯೫೮ನೆಯ ಎಪ್ರೀಲ ತಿಂಗಳಲ್ಲಿ ಜರುಗುವ ಗಂ. ಮಕ್ಕಳ ಹಾಗು ಹೆ. ಮಕ್ಕಳ ಪ್ರಾ. ಶಾ. ಪ್ರ. ಪ. ಪರೀಕ್ಷೆಯ ವೇಳಾಪತ್ರಿಕೆ

ವಾರ ಮತ್ತು ದಿನಾಂಕ	ವೇಳೆ		ವಿಷಯ	ಗುಣಗಳು
	ಇಂದ	ವರೆಗೆ		
ಸೋಮವಾರ	ಮುಂಜಾನೆ			
೧೪-೪-೧೯೫೮	೧೦-೩೦	೧೧-೧೫	ಪರೀಕ್ಷೆಗೆ ಕೂಡ್ರುವ ಉಮೇದವಾರರ ಹಾಜರಿ ತೆಗೆದುಕೊಳ್ಳುವದು.	
	೧೧-೩೦	೨-೦೦	೧ನೆಯ ಸದರು— ಪ್ರಾದೇಶಿಕ ಭಾಷೆ ಮತ್ತು ಸಾಹಿತ್ಯ ೨ನೆಯ ಕಾಗದ— ನಿಬಂಧ ಹಾಗೂ ಬರೆಹ	೧೦೦

ವಾರ ಮತ್ತು ದಿನಾಂಕ	ವೇಳೆ ಇಂದ	ವರೆಗೆ	ವಿಷಯ	ಗುಣಗಳು
	ಮಧ್ಯಾಹ್ನ ೩-೦೦	೬-೦೦	೪ನೆಯ ಸದರು— ಸಾಮಾನ್ಯ ವಿಜ್ಞಾನ ಶಾಸ್ತ್ರ ಅ) ಗಂಡು ಮಕ್ಕಳಿಗೆ- ಸಾಮಾನ್ಯ ವಿಜ್ಞಾನಶಾಸ್ತ್ರ ಬ) ಹೆಣ್ಣು ಮಕ್ಕಳಿಗೆ- ಗೃಹವಿಜ್ಞಾನಶಾಸ್ತ್ರ	೧೦೦
ಮಂಗಳವಾರ ೧೫-೪-೧೯೫೮	ಮುಂಜಾನೆ ೧೧-೦೦	೨-೦೦	೨ನೆಯ ಸದರು— ಗಣಿತ ೧ನೆಯ ಕಾಗದ- ಅಂಕಗಣಿತ	
	ಮಧ್ಯಾಹ್ನ ೩-೦೦	೬-೦೦	೩ನೆಯ ಸದರು— ಇತಿಹಾಸ (ಪೌರನೀತಿ ಸಹಿತ) ಮತ್ತು ಭೂಗೋಲ	೧೦೦
ಬುಧವಾರ ೧೬-೪-೧೯೫೮	ಮುಂಜಾನೆ ೧೧-೦೦	೨-೦೦	೧ನೆಯ ಸದರು— ಪ್ರಾದೇಶಿಕ ಭಾಷೆ ಮತ್ತು ಸಾಹಿತ್ಯ ೧ನೆಯ ಕಾಗದ- (ಗದ್ಯ ಪದ್ಯ ಮತ್ತು ವ್ಯಾಕರಣ)	೧೦೦
	ಮಧ್ಯಾಹ್ನ ೩-೦೦	೬-೦೦	೨ನೆಯ ಸದರು— ಗಣಿತ ೨ನೆಯ ಕಾಗದ- (ಭೂಮಿತಿ ಮತ್ತು ಜಮಾಖರ್ಚು)	೧೦೦
ಗುರುವಾರ ೧೭-೪-೧೯೫೮	ಮುಂಜಾನೆ ೧೧-೦೦	೨-೦೦	೬ನೆಯ ಸದರು— (ಐಚ್ಛಿಕ ವಿಷಯ) ಹಿಂದೀ ಭಾಷೆ	೧೦೦
	ಮಧ್ಯಾಹ್ನ ೩-೦೦	೬-೦೦	೫ನೆಯ ಸದರು— ಅ) ಸೂಜಿಗೆಲಸ (ಹೆಣಿಕೆ) ಬ) ಚಿತ್ರಕಲೆ (ನಕ್ಷೆ ಕೆಲಸ) ಕ) ಪ್ರಾಯೋಗಿಕ-ಒಕ್ಕಲುತನ ಡ) ನೂಲುವದು ಮತ್ತು ನೇಯುವದು ಇ) ಕಟ್ಟಿಗೆಯ ಕೆಲಸ ಫ) ಹೊಲಿಗೆಯ ಕೆಲಸ	೧೦೦
			೭ನೆಯ ಸದರು— (ಕಡ್ಡಾಯದ ಹೆಚ್ಚಿನ ವಿಷಯ) ಆರೋಗ್ಯ ಶಿಕ್ಷಣ ಹಾಗೂ ಸಾಂಘಿಕ ಜೀವನ	೧೦೦
ಶುಕ್ರವಾರ ೧೮-೪-೧೯೫೮	ಮುಂಜಾನೆ ೧೧-೦೦	೨-೦೦	೬ನೆಯ ಸದರು— (ಐಚ್ಛಿಕ ವಿಷಯಗಳು) ಅ) ಸಂಗೀತ ಬ) ಕಾಗದ ಮತ್ತು ರಟ್ಟಿನ ಕೆಲಸ ಕ) ಬೆತ್ತದ ಕೆಲಸ ಡ) ಚರ್ಮದ ಕೆಲಸ	೧೦೦
	ಮಧ್ಯಾಹ್ನ ೩-೦೦	೫-೦೦	೧ನೆಯ ಸದರು— ೩ನೇ ಕಾಗದ- ಪ್ರಾದೇಶಿಕ ಭಾಷೆ ಮತ್ತು ಸಾಹಿತ್ಯ ಸ್ಥಾನಿಕ ದೇಶಭಾಷೆ (ಐಚ್ಛಿಕ)	೫೦

ವಿ. ಸೂಚನೆ:- ಉಮೇದವಾರರು ಮೊದಲನೇ ದಿವಸ ಪರೀಕ್ಷೆ ಪ್ರಾರಂಭವಾಗುವದಕ್ಕಿಂತ ಮೊದಲು ಒಂದು ಘಂಟೆ ಮುಂಚಿತವಾಗಿ ಪರೀಕ್ಷಾ ಭವನದಲ್ಲಿ ಹಾಜರ ಇರತಕ್ಕದ್ದು.

ಜಿ. ಕೆ. ಕೊಪ್ಪಿಕರ
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ ಜಿಲ್ಹೆ.

ಧಾರವಾಡ ಸರಕಾರಿ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಶತ ಸಾಂವತ್ಸರಿಕೋತ್ಸವದ ಕಾಲಕ್ಕೆ ಸ್ವಾಗತಾಧ್ಯಕ್ಷರಾದ ಶ್ರೀಮಾನ್ ಸ. ಪ. ಗಾಂವಕಾರ, ಬಿ.ಎ. ಅವರು ಮಾಡಿದ

ಸ್ವಾಗತ ಭಾಷಣವು

ಅಸತಿನಿಂದ ಸತ್ತಿನೆಡೆಗೆ
ಕತ್ತಲಿಂದ ಜ್ಯೋತಿಯೆಡೆಗೆ
ಮರಣದಿಂದ ಅಮರಬಾಳಿ-
ನೆಡೆಗೆ ನಡೆಯಿಸೈ.

ಬಂಥನಾಳ ಶಿವಯೋಗಿಗಳೆ, ಕರ್ನಾಟಕ ವಿಶ್ವ ವಿದ್ಯಾಲಯದ ಉಪಕುಲಪತಿಗಳೆ, ಪ್ರತಿನಿಧಿಗಳೆ, ಅಕ್ಕ ತಂಗಿಯರೆ ಹಾಗೂ ಅಣ್ಣ ತಮ್ಮಂದಿರೆ,

ಇಂದು ಸರಕಾರಿ ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಶತಾಬ್ದಿ ಸಮಾರಂಭ. ಈ ಸಮಾರಂಭಕ್ಕೆ ನಮ್ಮ ಆಮಂತ್ರಣದ ಮೇರೆಗೆ ತಾವೆಲ್ಲರೂ ಬಂದಿರುವಿರಿ. ಅದಕ್ಕಾಗಿ ತಮ್ಮನ್ನೆಲ್ಲ ನಮ್ಮ ಕಾರ್ಯಕಾರಿಣಿ ಸಮಿತಿಯ ಪರವಾಗಿ ಹೃತ್ಪೂರ್ವಕವಾಗಿ ಸ್ವಾಗತಿಸುವೆನು. ಹಾಗು ಜರುಗಲಿರುವ ಕಾರ್ಯಕಲಾಪಗಳಲ್ಲಿ ತಮ್ಮ ಹಾರ್ದಿಕ್ಯ ಸಹಾನುಭೂತಿಯನ್ನು ಕೋರುವೆನು. ಸಂಸ್ಥೆಯ ಬಗೆಗೆ ಸಂದರ್ಭಕ್ಕೆ ತಕ್ಕ ನಾಲ್ಕು ಮಾತುಗಳನ್ನು ಆಡುವ ಮೊದಲು ಸಂಸ್ಥಾರೂಪ ನಮ್ಮ ವಿದ್ಯಾಜನನಿಗೂ ತಮಗೂ ವಿನಮ್ರನಾಗಿ ನಮಿಸುವೆನು.

ಯಾವುದೊಂದು ಸಂಘ ಸಂಸ್ಥೆಯ ಉತ್ಸವದ ಉದ್ದೇಶವೆಂದರೆ ಕೆಲವೊಂದು ಅವಧಿಯಲ್ಲಿ ಆ ಸಂಸ್ಥೆಯು ಸಾಧಿಸಿದ ಕಾರ್ಯಗಳನ್ನು ಜನತಾ—ಜನಾರ್ದನನ ಮುಂದಿಟ್ಟು ಅವರ ಪ್ರಗತಿಪರ ಆಗು-ಹೋಗುಗಳಿಗೆ ಲೋಕ ಕಲ್ಯಾಣಗಳ ದೃಷ್ಟಿಯಿಂದ ಕೂಲಂಕಷವಾಗಿ ವಿಚಾರಿಸಿ, ಅವಕ್ಕೆ ಬೇಕಾದ ಸಹಾಯ ಸಂಪತ್ತು ಕೋರಿ ಹಾಗು ಅಳವಡಿಸಿಕೊಂಡು ಅದರ ಮುಂದಿನ ಮಾರ್ಗವನ್ನು ಆದಷ್ಟು ಸುಗಮಗೊಳಿಸಿ ಸತತ ಸಾಗುವದು ಇಷ್ಟೇ ಸೈ. ಇವನ್ನೆಲ್ಲ ತಾವೆಲ್ಲ ಬಲ್ಲಿರಿ. ಅಂತೇ ಆ ಆ ಸಂಘ ಸಂಸ್ಥೆಗಳ ಸಂಚಾಲಕರು ಅವುಗಳ ಹಿನ್ನೋಟದ ಕಾಲು ಶತಮಾನದ ರಜತ, ಅರ್ಧ ಶತಮಾನದ ಸುವರ್ಣ, ಮುಕ್ಕಾಲು ಶತಮಾನದ ವಜ್ರ ಹಾಗೂ ಶತಮಾನದ ಶತಮಾನೋತ್ಸವಗಳನ್ನು ಜರುಗಿಸುವದು ಇತ್ತೀಚಿಗೆ ಲೋಕರೂಢಿಯಾಗಿ ಕೂತಿದೆ. ಆದರೆ ನಮ್ಮ ವಿದ್ಯಾ ಮಂದಿರಕ್ಕೆ ಮಾತ್ರ ಅದಾವ ರಜತ, ಸುವರ್ಣ, ವಜ್ರೋತ್ಸವಗಳೂ ಜರುಗಲೇ ಇಲ್ಲ. ಒಮ್ಮೆಗೇ ಶತಮಾನೋತ್ಸವವು ಕಾದು ಬಂದು ಬಿಟ್ಟಿದೆ. ಇದೊಂದು ಔಚಿತ್ಯ ಪೂರ್ಣ ಸಂಗತಿಯಾದರೂ ಅರ್ಥ ಪೂರ್ಣ ಸಂಕೇತವಾಗಿರುತ್ತದೆ. "ಕಾಲೋಽಯಮ್ ನಿರವಧಿಃ'' ಕಾಲಕ್ಕೊಂದು ಎಲ್ಲೆಯಿಲ್ಲ. ಆದರೂ ಎಲ್ಲ ದೇಶಗಳಲ್ಲಿ ಎಲ್ಲ ಕಾಲಗಳಲ್ಲಿಯೂ ಶತಮಾನವು ಕಾಲಮಾಪನವಾಗಿ ಕೂತು ನಾನಾ ಮುಖವಾದ ಇತಿಹಾಸವನ್ನು ಬರೆದಿರುತ್ತವೆ. ಅದೊಂದು ಮಾನವನ ನಾನಾ ಮುಖವಾದ ಪ್ರಗತಿ ಪರಾಗತಿಗಳ ಮಾಪನವಾಗಿದೆ. ನಮ್ಮ ಕರ್ನಾಟಕದ ಇತಿಹಾಸದಲ್ಲಿ ಇಂತಹ ಪ್ರಗತಿ ಪರಾಗತಿಗಳು ಸಾಕಷ್ಟು ಇವೆ.

ನಮ್ಮ ಮಾತೃ ಮಂದಿರವು ೧೮೫೭ರಲ್ಲಿ ಅಸ್ತಿತ್ವದಲ್ಲಿ ಬಂತು. ಅದರ ಹಿನ್ನೆಲೆಯ ಹಿಂದಿನ ಇತಿಹಾಸದ ಪುಟಗಳನ್ನಾಗಲೀ, ಅದು ಮಾರ್ಗಕ್ರಮಣ ಮಾಡುತ್ತಿರುವ ಕೆಲವು ಕಾಲದ ಪುಟಗಳನ್ನಾಗಲೀ, ನಾವು ತೆರೆದು ನೋಡಿದರೆ ಕಾಣುವದೇನು? ಪ್ರಭಾವಶಾಲಿಯಾದ ನೃಪತುಂಗನ, ಪಂಪನ, ಆಂಡಯ್ಯನ ನಾಡನುಡಿ ಬೆಡಗಿನ ಕರ್ನಾಟಕವನ್ನಲ್ಲ; ನಿರ್ವೀರ್ಯ ಮಹಾರಾಷ್ಟ್ರ ಕರ್ನಾಟಕ, ಹೈದ್ರಾಬಾದ ಕರ್ನಾಟಕ, ಆಂಧ್ರ ಕರ್ನಾಟಕ, ತಮಿಳು ಕರ್ನಾಟಕ, ಹತ್ತಾರು ಸಂಸ್ಥಾನಿಕ ಕರ್ನಾಟಕಗಳು. ಅಪವಾದವೆನ್ನಲೆ? ತೇಜೋ ಭಂಗವಾದ ಹರಿದು ಹಂಚಿ ಹೋದ ಅಳಿದುಳಿದ ಮೈಸೂರು, ಹಾಗು ಕರಾವಳಿಯ ಕನ್ನಡ ಜಿಲ್ಹೆ ಇವೆರಡನ್ನು ಬಿಟ್ಟರೆ ಕನ್ನಡ ನಾಡಿನಲ್ಲಿ ಕನ್ನಡ ಶಾಲೆಗಳೇ ಅಪರೂಪವಾಗಿದ್ದವು. ಕನ್ನಡ ನಾಡ ನುಡಿಗೆ ಸಲ್ಲಬೇಕಾದ ಯಾವ ಗೌರವಾದರಗಳೂ ಇರಲಿಲ್ಲ. ಸಭೆ ಸತ್ಕಾರ ಸಮಾರಂಭಗಳಲ್ಲಿ ಕನ್ನಡ ಮಾತನಾಡುವದು ಕೂಡ ಅಗೌರವ, ಅಸಂಸ್ಕೃತಿಕ ಎಂಬಲ್ಲಿಗೂ ಬಂದು ಮುಟ್ಟಿತ್ತು. ಎಷ್ಟೋ ದೊಡ್ಡ ದೊಡ್ಡ ಮನೆತನದವರು ಮಾತೃ ಭಾಷೆಯನ್ನು ತೊರೆದು ಅನ್ಯ ಭಾಷೆಯನ್ನು ಮಾತೃ ಭಾಷೆಯನ್ನಾಗಿ ಮಾಡಿಕೊಂಡ ಉದಾಹರಣೆಗಳು ನಮ್ಮಲ್ಲಿ ತುಂಬಾ ಇವೆ. ಅಷ್ಟು ದೂರ ಏಕೆ? ಕಳೆದ ೨೫—೩೦ ವರ್ಷಗಳ ಹಿಂದಿನ ವರೆಗೂ ಈ ಪ್ರವೃತ್ತಿ ಇದ್ದೇ ಇದ್ದಿತೆಂಬದನ್ನು ನಾನು ಕಣ್ಣಾರೆ ಕಂಡಿದ್ದೇನೆ.

ಕೆಲವು ಪ್ರದೇಶಗಳಲ್ಲಂತೂ ಮೊನ್ನೆ ಮೊನ್ನೆಯ ವರೆಗೂ ಕನ್ನಡ ಸಾಲೆಗಳ ನಾಮ-ನಿರ್ದೇಶವು ಕೂಡ ಇರಲಿಲ್ಲ. ಹೀಗಾಗಿ ಲಕ್ಷಾಂತರ ಜನರು ಕನ್ನಡ ನಾಡಿಗೆ ಎರವಾದರು. ನಾಲ್ಕೂ ನಿಟ್ಟಿನಲ್ಲಿ ಕನ್ನಡ ಭೂ-ಭಾಗವು ಕರಕರಗಿ ದಿನ ದಿನಕ್ಕೂ ಕಾಣದಂತಾದವು.

ಇಂತಹ ಸಂದು ಕಟ್ಟಿನ ಸ್ಥಿತಿಯಲ್ಲಿ ಇರುವಾಗ ನಮ್ಮ ಮಾತೃಮಂದಿರದ ನೆಲಗಟ್ಟನ್ನು ಗಟ್ಟಿಮುಟ್ಟಾಗಿ ಮಾಡಿದ ಶ್ರೇಯಸ್ಸು ಇಬ್ಬರು ಮಹಾವ್ಯಕ್ತಿಗಳಿಗೆ ಸಲ್ಲುವದೆಂದರೆ ಅತ್ಯುಕ್ತಿಯೆನಿಸದು. ಒಬ್ಬರು ಚೆನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರು. ಮತ್ತೊಬ್ಬರು ಅಂದಿನ ಇನಸ್ಪೆಕ್ಟರರಾದ ರೆಸೆಲ್ಲ ಸಾಹೇಬರು. ಶ್ರೀ ಚೆನ್ನಬಸಪ್ಪನವರು ಬೆಳಗಾಂವಿ ನಾರ್ಮಲ್ ಸ್ಕೂಲಿಗೆ ಮುಖ್ಯಾಧ್ಯಾಪಕರಾಗಿ ಬಂದಾಗ ತೆಗೆದ ಉದ್ಗಾರವು ಓದುವ ಹಾಗಿದೆ. ಅದು ಹೀಗಿದೆ:— "ನಾನು ೧೮೬೪ ಜನೆವರಿ ತಿಂಗಳು ೧ರಂದು ಇಲ್ಲಿ ಹಾಜರಾದಾಗ ೧೨ ಹಾಗು ೧೪ ಜನ ವಿದ್ಯಾರ್ಥಿಗಳ ಎರಡು ವರ್ಗಗಳಿದ್ದವು. ಇವರಲ್ಲಿ ಅರ್ಧದಷ್ಟು ವಿದ್ಯಾರ್ಥಿಗಳು ಕೊಂಕಣದವರಾಗಿದ್ದರು. ಅವರೆಲ್ಲ ಒಂದು ವರ್ಷದ ವರೆಗೆ ಸಾಲೆಯಲ್ಲಿದ್ದರೂ ಕೂಡ ಮೊದಲಿನ ಒಂಬತ್ತು ಅಂಕೆಗಳನ್ನು ಎಣಿಸಲು ಸಹ ಬಾರದಿರುವದು ನನಗೆ ಆಶ್ಚರ್ಯವಾಗಿ ತೋರಿತು. ಕನ್ನಡ ಶಿಕ್ಷಕರನ್ನು ತಯಾರಿಸುವ ಈ ಸಂಸ್ಥೆಯಲ್ಲಿ ಇಂಥವರಿಗೆ ಹೇಗೆ ಪ್ರವೇಶ ದೊರೆಯಿತೆಂಬುದು ತಿಳಿಯದಾಯಿತು. ವಿಚಾರಿಸಲಾಗಿ ಕನ್ನಡವು ಮನೆ ಮಾತಾದ ಯೋಗ್ಯ ಉಮೇದವಾರರು ಸಿಗುವದು ಕಠಿಣವಾಗಿತ್ತೆಂದು ಕಾಣಿಸಿತು. ಆದರೆ ನಾನು ಇಲ್ಲಿಗೆ ಬಂದ ನಂತರ ಮನೆಮಾತು ಕನ್ನಡವಾದ ೨೫ ಉಮೇದವಾರರು ದೊರೆತರೆಂದು ಹೇಳಲು ಸಂತೋಷವೆನಿಸುತ್ತಿದೆ." ಒಟ್ಟಾರೆ ೧೮೫೬ ರಿಂದ ೧೮೬೩ರ ವರೆಗಿನ ಏಳು ವರ್ಷಗಳ ಕಾಲದಲ್ಲಿ ನಾರ್ಮಲ್ ಸ್ಕೂಲಿನಲ್ಲಿ ಹೆಚ್ಚಾಗಿ ರತ್ನಾಗಿರಿ ಕಡೆಯ ಕೊಂಕಣದ, ಮರಾಠಿಯ ಉಮೇದವಾರರೇ ಇದ್ದರೆಂದು, ಅವರಿಂದಲೇ ಸಂಸ್ಥೆಗೆ ಜೀವದಾನ ದೊರೆತಿತ್ತೆಂದು ತೋರುತ್ತದೆ. ಕನ್ನಡ ಶಿಕ್ಷಕರ ತರಬೇತಿಗಾಗಿ ತೆರೆದ ಈ ಶಿಕ್ಷಣ ಸಂಸ್ಥೆಗೆ ಸಾಕಷ್ಟು ಕನ್ನಡ ತರುಣರು ಶಿಕ್ಷಕರಾಗಲು ಸಿಕ್ಕದೆ ಇದ್ದುದು ನಿಜಕ್ಕೂ ಲಜ್ಜಾಸ್ಪದ ಹಾಗೂ ದುರ್ದೈವದ ಸಂಗತಿ. ಇಂತಹ ದುರ್ದೈವದ ಸ್ಥಿತಿಯನ್ನು ಹೋಗಲಾಡಿಸುವದಕ್ಕೂ ಶಿಕ್ಷಣ ಸಂಸ್ಥೆಯನ್ನು ಕನ್ನಡಿಗರಿಗಾಗಿ ಉಳಿಸಿ, ಬೆಳಿಸಿ ಬೆಳಗಿ ಹೋಗುವದಕ್ಕೂ ಮಹಾ ಮಾಂತ್ರಿಕನೊಬ್ಬ ಆಗ ಬೇಕಾಗಿದ್ದ. ಆ ಮಹಾ ಮಾಂತ್ರಿಕನ ರೂಪದಲ್ಲಿ ಶ್ರೀ ಚೆನ್ನಬಸಪ್ಪನವರು ನಾರ್ಮಲ್ ಸ್ಕೂಲಿಗೆ ಮುಖ್ಯಾಧ್ಯಾಪಕರಾಗಿ ಬಂದರು. "ಶುಭಾಸ್ತೆ ಪಂಥಾನಃ" "ಮಾರ್ಗ ಸುಗಮವಾಗಲಿ ನಿನಗೆ" ಎಂದು ಮಂಗಳ ನುಡಿದರು. ಹೋದಲ್ಲಿ, ಬಂದಲ್ಲಿ, ಕುಳಿತಲ್ಲಿ, ನಿಂತಲ್ಲಿ ಕನ್ನಡ ತರುಣರನ್ನು ಹುರಿದುಂಬಿಸಿ ನಾರ್ಮಲ್ ಸ್ಕೂಲನ್ನು ಸೇರಲು ಪ್ರೇರೆಪಿಸಿದರು. ಆ ಪ್ರೇರಣೆಯ ಫಲವಾಗಿ ಒಂದೇ ಒಂದು ವರುಷದ ಹೊರ ಒಳಗೆ ಎಲ್ಲ ಕಡೆಯಿಂದ ಇನ್ನೂರು ಜನ ಕನ್ನಡ ತರುಣರು ನಾಮುಂದೆ, ತಾಮುಂದೆ ಎಂದು ಬಂದು ಪ್ರವೇಶ ಪರೀಕ್ಷೆಗೆ ಕೂತರು. ಅವರಲ್ಲಿ ೯೦ ವಿದ್ಯಾರ್ಥಿಗಳನ್ನು ಆರಿಸಿಕೊಂಡರು. ಇದೊಂದು ಶ್ರೀ ಚೆನ್ನಬಸಪ್ಪನವರ ಯಕ್ಷಿಣಿಯ ಜಾದು ಅಲ್ಲದೆ ಮತ್ತೇನು? ಅದೂ ಅಲ್ಲದೆ ಶಿಕ್ಷಕರ ಮಾರ್ಗದರ್ಶನಕ್ಕಾಗಿ "ಮಠಪತ್ರಿಕೆ" ಎಂಬ ಮಾಸ ಪತ್ರಿಕೆಯನ್ನು ಮೊಟ್ಟ ಮೊದಲಿಗೆ ಹೊರಡಿಸಿದರು. ಅದೇ ಸಮಯಕ್ಕೆ ಕನ್ನಡ ಕುಲೋದ್ಧಾರಕ್ಕೆ ಮೈವೆತ್ತಂತೆ ಇದ್ದ ರೆಸೆಲ್ ಸಾಹೇಬರು ಗುಜರಾಥದಿಂದ ವರ್ಗವಾಗಿ, ೧೮೬೯ರಲ್ಲಿ ನಮ್ಮಲ್ಲಿಗೆ ಇನಸ್ಪೆಕ್ಟರರಾಗಿ ಬಂದರು. ಗುಜರಾಥ ಮಹಾರಾಷ್ಟ್ರಗಳಂತೆ ಕನ್ನಡ ವಿಭಾಗವೂ ಕೂಡಾ ಪ್ರತ್ಯೇಕ ಹಾಗೂ ವಿಶಿಷ್ಟ ವಿಭಾಗವೆಂದು ಕಂಡುಕೊಂಡು ಅದರ ಪ್ರಗತಿಗಾಗಿ ದುಡಿಯ ಹತ್ತಿದರು. ಒಂದೇ ವಿಚಾರದ ಸದಭಿಮಾನಿಗಳಾದ ಕಾರ್ಯ ದುರಂಧರರಾದ ಎರಡು ವ್ಯಕ್ತಿಗಳು "ಹಾಲು ಸಕ್ಕರೆ ಕೂಡಿಕೊಂಡು ರುಚಿಕಟ್ಟಾಗುವಂತೆ ಕೂಡಿಕೊಂಡು" ಬಿಟ್ಟರು. ನಾರ್ಮಲ್ ಸ್ಕೂಲು ಕಾಲೇಜಾಗಿ ಮಾರ್ಪಟ್ಟಿತು. ಮತ್ತು ಉತ್ತಮೋತ್ತಮ ಶಿಕ್ಷಕರು ಕಾಲೇಜಕ್ಕೆ ಶಿಕ್ಷಕರಾಗಿ ಹೋಗ ಹತ್ತಿದರು. ರೆಸೆಲ್ ಸಾಹೇಬರ ಅವಿಶ್ರಾಂತದ ೨೦ ವರುಷ ಕನ್ನಡ ಏಳ್ಗೆಗಾಗಿ ಎಸಗಿದ ಹಾಗು ಕನ್ನಡ ನುಡಿಯನ್ನು ಮೇಲಕ್ಕೆ ಎತ್ತಿದ ಕಡು ಕಷ್ಟದ ಕೆಲಸದ ವಿವರಣೆಯನ್ನು ಬಹು ಭಾಷಾ ವಿಶಾರದರೂ ಕನ್ನಡ ನುಡಿಗೆ ಅಂದು ಅಮೋಘ ಸೇವೆಯನ್ನು ಸಲ್ಲಿಸಿದವರೂ ಆದ ನಮ್ಮ ವೆಂಕಟ ರಂಗೋ ಕಟ್ಟಿಯವರು ೩೪ ದೊಡ್ಡ ಪುಟಗಳಲ್ಲಿ ಬರೆದಿಟ್ಟುದದನ್ನು ಓದಿದರೆ ಯಾವನೊಬ್ಬ ಕನ್ನಡಿಗನು ತಲೆಬಾಗದೆ ಇರನು. ಅದು ಇರಲಿ. ಒಟ್ಟಾರೆ ಟ್ರೇನಿಂಗ ಕಾಲೇಜದಲ್ಲಿಯ ಬಿಕ್ಕಟ್ಟಿನ ಪ್ರಸಂಗದಲ್ಲಿ ಅದನ್ನು ಉಳಿಸಿ ಭದ್ರವಾದ ತಳಹದಿಯ ಮೇಲೆ ನಿಲ್ಲಿಸಿ ಮುಂದಾಗುವುದರ ಉಜ್ವಲ ಭವಿಷ್ಯತ್ತಿಗಾಗಿ ಹಾಗು ಇಂದಿನ ಕರ್ನಾಟಕಕ್ಕಾಗಿ ನಾಂದಿಹಾಕಿ

ಕೊಟ್ಟ ಈ ಇಬ್ಬರು ಮಹಾ ವ್ಯಕ್ತಿಗಳ ಧೀರೋದಾತ್ತ ವ್ಯಕ್ತಿತ್ವವನ್ನು ಎಂದಿಗೂ ಮರೆಯದಂತಿದೆ. ನಿರ್ವೀರ್ಯವಾದ ಮಹಾರಾಷ್ಟ್ರ ಕರ್ನಾಟಕವೆಂದೂ ನಾನು ಹಿಂದೆ ಅಂದ ಭಾಗದ ಒಂದು ಚಿಕ್ಕ ಚಿತ್ರವನ್ನು ತೋರಿಸುವ ಮಟ್ಟಿಗೆ ಟ್ರೇನಿಂಗ ಕಾಲೇಜದ ಇತಿಹಾಸ ಮೊಟ್ಟ ಮೊದಲಿನ ಹಂತದ ಸ್ವಲ್ಪ ಭಾಗವನ್ನು ಎತ್ತಿ ಮಾತಾಡಿದೆ, ಅಷ್ಟೆ. ಮುಂದಿನ ಅದರ ಇತಿಹಾಸದ ಬಗೆಗೆ ಮಾತನಾಡುವ ಅವಕಾಶವೂ ಇಲ್ಲ. ಅಗತ್ಯವೂ ಇಲ್ಲ. ಅದೆಲ್ಲ ಜೀವನ ಶಿಕ್ಷಣದ ವಿಶೇಷ ಸಂಚಿಕೆಯ ಸಂಪುಟದಲ್ಲಿ ಸಾದ್ಯಂತವಾಗಿ ಬಂದು ಬಿಟ್ಟಿದೆ. ನನಗೆ ಬೇಕಾದುದು ನಾಡಿನ ಒಂದು ಭಾಗದ ಅಂದಿನ ಪ್ರಾಥಮಿಕ ಶಿಕ್ಷಣದ ಚಿತ್ರ. ಅದಕ್ಕೂ ಹಿಂದೆ ಯಾವ ಸ್ಥಿತಿ ಇದ್ದಿರಬಹುದೆಂಬದನ್ನು ನೀವೇ ಊಹಿಸಿ ತಿಳಿದುಕೊಳ್ಳಿರಿ! ಇಂತಹ ಕಗ್ಗತ್ತಲೆಯ ಕಾರ್ಗಾಲ ಕರ್ನಾಟಕದ ತುಂಬೆಲ್ಲ ಆಗ. ಅಸ್ತು.

ಕಳೆದ ನೂರಾಒಂದು ವರುಷದ ಕಾಲವೆಂದರೆ ಮುಂಬಯಿ ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಪ್ರಸಾರದ ಮಹತ್ವದ ಕಾಲ. ಟ್ರೇನಿಂಗ ಕಾಲೇಜದಿಂದ ಹೊರಟ ಸಹಸ್ರಾರು ಶಿಕ್ಷಕರು "ಭಿನ್ನರುಚಿರ್ಹಿ ಲೋಕಃ" ಎಂಬಂತೆ ನಾನಾವಿಧ ರುಚಿಕಟ್ಟುಳ್ಳವರಾಗಿ ಮುಂಬಯಿ ಕರ್ನಾಟಕದ ಮೂಲೆ ಮೂಲೆಗೂ ಹೋಗಿ ಕವಿಯಾಗಿಯೋ, ಲೇಖಕನಾಗಿಯೋ, ನಾಟಕಕಾರನಾಗಿಯೋ, ಕಲಾಕಾರನಾಗಿಯೋ, ಗಮಕಿಯಾಗಿಯೋ, ಗ್ರಂಥಕಾರನಾಗಿಯೋ, ಗುರುಕುಲೋಪಾದಿಯ ಗುರುವಾಗಿಯೋ ತಾಯನುಡಿಯ ತನಿಹಾಲನ್ನು ಕನ್ನಡ ನಾಡಿನ ಹಸುಗೂಸುಗಳಿಗೆ ಉಣಿಸಿ "ನೀವು ಕುರಿಮರಿಗಳಲ್ಲ; ಸಿಂಹದ ಮರಿಗಳೆಂದು" ಅವರ ಮುಖವನ್ನೇ ಅವರಿಗೆ ಕಾಣಿಸಿ ಮನವರಿಕೆ ಮಾಡಿಕೊಟ್ಟು "ಕನ್ನಡ ತಾಯ್ ಬಾಳ್ಗೆ" "ಸಿರಿಗನ್ನಡಂ ಗೆಲ್ಗೆ" ಎಂಬ ಮಂತ್ರೋಪದೇಶದಿಂದ ಜಯಘೋಷ ಮಾಡಿ ತಾಯ್ನುಡಿಯ ಅಭಿಮಾನ, ಆದರ, ಗೌರವಗಳನ್ನು ಪುನಃ ಪುನಃ ಜೇತರಿಸಿ ಪುನರುಜ್ಜೀವನಗೊಳಿಸಿದರು. ಇಷ್ಟೇ ಅಲ್ಲ ಹೆಚ್ಚಿಸಿದರು. ಅದೂ ಅಲ್ಲದೆ ಕರಕರಗಿ ಹೋಗುತ್ತಿರುವ ತಾಯ್ನಾಡ ಗಡಿಗಳಿಗೆ ಅಲ್ಲಲ್ಲಿ ಕಟ್ಟೆಯನ್ನು ಕಟ್ಟಲು ಆದಷ್ಟು ಯತ್ನಿಸಿದರು. ಇಲ್ಲಿ ಒಂದು ಮಾತನ್ನು ಮರೆತಂತೆ ಇದೆ. ಅದೆಂದರೆ ಧಾರವಾಡದ ಅಂದಿನ ಸ್ಥಳ ಮಹಾತ್ಮೆ. ಕರ್ನಾಟಕವನ್ನು ನಾನಾಮುಖವಾಗಿ ಕಂಡುಕೊಳ್ಳುವ ಹಾಗು ರೂಪಿಸುವ ಆಂದೋಲನಗಳಿಗೆಲ್ಲ ಮೊದಲು ಧಾರವಾಡವೇ ಮೂಲ. ಆ ಆಂದೋಲನದ ಪವಿತ್ರಾಗ್ನಿಗೆ ಪೂರ್ಣಾಹುತಿ ಕೊಟ್ಟು ಇಂದಿನ ಕರ್ನಾಟಕವನ್ನು ಕಂಡುಕೊಂಡ ಪುಣ್ಯ ಪುರುಷರೂ ಕೂಡ ಸಮೀಪದಲ್ಲಿಯೇ ಇದ್ದಾರೆ. ಅವರಿಗೂ ನಮ್ಮ ಕಾಲೇಜದ ಹುಡುಗರಿಗೂ ಹಲವಾರು ಬಗೆಯಿಂದ ಸಂಬಂಧ ಬಂದಿರುವದನ್ನು ನಾನು ಬಲ್ಲೆ. ಹೀಗಾಗಿ ಧಾರವಾಡ ಟ್ರೇನಿಂಗ ಕಾಲೇಜದಿಂದ ಹೊರಬಿದ್ದ ಎಷ್ಟೋ ಹುಡುಗರು ಎಲ್ಲ ಬಗೆಯ ಸಂಸ್ಕಾರಗಳನ್ನು ಹೊಂದಿಯೇ ಹೊರಬಿದ್ದಿದ್ದರು. ಕರ್ನಾಟಕತ್ವವನ್ನು ಸಾರಿದ್ದರು. ಹಾಗೂ ಅಂದು ಇಲ್ಲಿ ಕರ್ನಾಟಕ ಹಾಗು ಜನತಾ ಕಾಲೇಜುಗಳಂತಹ ಉಚ್ಚ ಶಿಕ್ಷಣಾಲಯಗಳು ಇಲ್ಲದಿದ್ದರೂ ಕೂಡ ಅವುಗಳ ಅಭಾವವು ಕಾಣಿಸದಂತೆ ಕೆಲಸ ಮಾಡಿದ್ದರೆಂದು ಧೈರ್ಯವಾಗಿ ಹೇಳಬಲ್ಲೆ. ಮೇಲಾಗಿ ಪರಮಾತ್ಮನ ಅಪಾರ ಕೃಪೆಯಿಂದ ಈ ಟ್ರೇನಿಂಗ ಕಾಲೇಜದ ಆವಾರದಲ್ಲಿಯೇ ಕರ್ನಾಟಕ ಕಾಲೇಜು ಆ ಬಳಿಕ ಕರ್ನಾಟಕ ವಿಶ್ವವಿದ್ಯಾಲಯವು ಉದಯವಾದವು. ಇದೊಂದು ನಮ್ಮ ಮಂದಿರದ ಸ್ಥಳ ಮಹಾತ್ಮೆ. ಈ ಸನ್ನಿವೇಶದಲ್ಲಿ ಪ್ರಾಥಮಿಕ ಶಿಕ್ಷಕರ ಪೂರ್ವ ಪೀಠಿಕೆಯಾಗಿ ಕನ್ನಡ ನುಡಿಗಾಗಿ ಶತಮಾನ ಕೃಷಿಗೆಯ್ದು, ಸಾಕ್ಷಾತ್ಕಾರವಾಗಿ ನಮ್ಮ ಮಂದಿರವು ನಿಂತು ನಮ್ಮ ಋಷಿ ಮುನಿಗಳ "ಜೀವೇಮ ಶರದಃ ಶತಮ್, ಶೃಣುಯಾಮ ಶರದಃ ಶತಮ್, ಪ್ರಬ್ರವಾಮ ಶರದಃ ಶತಮ್, ಅದೀನಾಸ್ಯಾಮ ಶರದಃ ಶತಮ್" ಹಾಗು ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇತ್ಶತಂ ಸಮಾಃ ಎಂಬ ಸಂದೇಶವನ್ನು ಕನ್ನಡ ನಾಡಿಗೆಲ್ಲ ಉದ್ಘೋಷಿಸುತ್ತಿದೆ. ಎಂದರೆ ಒಂದಿಷ್ಟು ಅತ್ಯುಕ್ತಿಯೆನಿಸದೆ ಸಾರ್ಥಕವೆನಿಸುವುದು ಎಂದು ನಾನು ಗಟ್ಟಿ ಮುಟ್ಟಾಗಿ ಹೇಳುವೆನು-ಅಂತೇ ಅಂದುಕೊಂಡೆ ಮೊದಲಿಂಗೆ, ಈ ಶತಮಾನೋತ್ಸವವು ಔಚಿತ್ಯಪೂರ್ಣ ಸಂಗತಿಯಾದರೂ ಅರ್ಥಪೂರ್ಣ ಸಂಕೇತವಾಗಿರುತ್ತದೆಂದು.

ಮೊದಲನೆಯದಾಗಿ ಇಂತಹದೊಂದು ದೊಡ್ಡ ಸಮಾರಂಭವನ್ನು ಪ್ರಾರಂಭಿಸಲು ಯೋಗ್ಯರಾದ ಮಹಾವ್ಯಕ್ತಿಗಳಲ್ಲೊಬ್ಬರು ಬೇಕಷ್ಟೆ? ಅಂತಹವರನ್ನು ಹುಡುಕುತ್ತಿರುವಲ್ಲಿ, ಸ್ವಲ್ಪ ಕಷ್ಟ ಬಂದರೂ ಕೂಡ ನಮಗೆ ಸಿಕ್ಕಿದ್ದು ನಮ್ಮ ಭಾಗ್ಯವೆಂದೇ ತಿಳಿಯುವೆವು. ಅವರು ಮತ್ತಾರಲ್ಲ ಹಿಂದುಳಿದ ವಿಜಾಪುರ ಜಿಲ್ಹೆಯನ್ನು ಪುನರುಜ್ಜೀವನಗೊಳಿಸುವದರಲ್ಲಿ ಎತ್ತಿದ ಕೈಯವರಾದ, ವಿಜಾಪುರ, ಬಾಗಿಲಕೋಟೆ ಕಾಲೇಜುಗಳಿಗೆ ಪಿತೃ ಸ್ವರೂಪಿಯಾದ, ಲಚ್ಯಾಣದಲ್ಲಿ ಗ್ರಾಮೀಣ ಮೂಲೋದ್ಯೋಗ

ಶಿಕ್ಷಣ ವಿದ್ಯಾಲಯವನ್ನು ತೆರೆದ, ಅದೂ ಅಲ್ಲದೆ ಹಲವಾರು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸಂಸ್ಥೆಗಳಿಗೆ ತುಂಬ ನೆರವು ನೀಡಿದ, ಕರ್ನಾಟಕದ ತುಂಬ ಖ್ಯಾತಿ ನಾಮರಾದ ಹಾಗು ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದ, ಬಂಥನಾಳ ಮಹಾ ಶಿವಯೋಗಿಗಳೇ ಅವರು. ಇಲ್ಲಿ ಒಂದು ಮಾತು ನೆನಪಾಗುತ್ತಿದೆ. ಅವೆಂದರೆ ನಮ್ಮ ಪವಿತ್ರ ಪೂರ್ವ ಪರಂಪರೆ, ಆ ಪರಂಪರೆಗೆ ಅನುಸರಿಸಿ ಗುರುಸ್ಥಾನದಲ್ಲಿದ್ದ ಮಹಾ ವ್ಯಕ್ತಿಗಳೊಬ್ಬರನ್ನು ಮುಂದಾಗಿಟ್ಟುಕೊಂಡು ಮಹಾ ಸಮಾರಂಭವನ್ನು ಆಚರಿಸಬೇಕು ಎಂಬ ಮಾತು ಕೂಡ ಸಾಧಿಸಿದಂತೆ ಆಯಿತು. ಅಂಥವರೊಬ್ಬರನ್ನು ಬರಮಾಡಿಕೊಳ್ಳುವ ಸುಯೋಗವು ನಮಗೆಲ್ಲ ಲಭಿಸಿದಕ್ಕಾಗಿ ಪರಮಾತ್ಮನಿಗೆ ಧನ್ಯವಾದಗಳನ್ನು ಸಲ್ಲಿಸುವೆವು.

ಎರಡನೆಯದಾಗಿ ಅಧ್ಯಕ್ಷರಾಗಲು ಯೋಗ್ಯ ವ್ಯಕ್ತಿಗಳನ್ನು ಹುಡುಕುವಲ್ಲಿ "ಬಳಲುತರಸುವ ಬಳ್ಳಿ ಕಾಲ್ತೊಡಕಿದಂತೆ'' ಹಾಗು "ಕಡವರವ ನೆಡವಿದ ಕಡು ಬಡವನಂತೆ'' ನಮ್ಮ ಸಮೀಪದಲ್ಲಿಯೇ ದೇವರ ದಯದಿಂದ ಸಿಕ್ಕು ಬಿಟ್ಟರು. ಅವರಾದರೂ ಮತ್ತಾರಲ್ಲ! ಶಿಕ್ಷಣ ವಿಭಾಗದ ಎಲ್ಲ ರಂಗಗಳಲ್ಲಿಯೂ ಪ್ರವೇಶಿಸಿ, ಅವುಗಳಲ್ಲಿ ಪರಿಣತರಾಗಿ, ಸತತ ಏಳು ವರುಷದ ವರೆಗೆ ಮುಂಬಯಿಯಂತಹ ದೊಡ್ಡ ಪ್ರಾಂತದ ಪ್ರಥಮ ಕನ್ನಡಿಗ ಡಾಯರೆಕ್ಟರರಾದ ಶಿಕ್ಷಣ ವಿಭಾಗದಲ್ಲಿ ಭಾರತದಲ್ಲೆಲ್ಲ ಅದ್ವಿತೀಯ ಸಲಹೆಗಾರರೊಬ್ಬರೆಂದು ಹೆಸರಾಂತು ಕರ್ನಾಟಕಕ್ಕೆ ಕಳೆಯನ್ನು ತಂದ ಈಗ ಕರ್ನಾಟಕ ವಿಶ್ವ ವಿದ್ಯಾಲಯದ ಉಪಕುಲಪತಿಗಳಾಗಿ ಅದನ್ನು ಬಹು ಸುಖವಾಗಿ ದೇವರ ದಯೆಯಿಂದ ರೂಪಿಸುತ್ತಿರುವ ಜಯ ಕರ್ನಾಟಕವಾಗಿ, ಜಯ ಭಾರತವಾಗಿ, ಜಯಜಗತ್ತನ್ನು ಕೂಡ ಶಿಕ್ಷಣ ವಿಭಾಗದಲ್ಲಿ ಕೂಲಂಕಷವಾಗಿ ನೋಡಿ ಬಂದ ರ್ಯಾಂಗ್ಲರ ಪಾವಟೆಯವರೇ ಅವರು. ಬ್ರಹ್ಮ ಕ್ಷಾತ್ರ ಶಕ್ತಿಗಳೆರಡೂ ಜಗಚ್ಚಕ್ರಕ್ಕೆ ಹೇಗೆ ಬೇಕೊ, ಹಾಗೆ ಈ ಇಬ್ಬರು ಮಹಾ ವ್ಯಕ್ತಿಗಳು ಒತ್ತಟ್ಟಿಗೆ ಲಭಿಸುತ್ತಿರುವದು, ಹಾಗೂ ಅಂತಃ ಸೂಕ್ಷ್ಮ ಶಕ್ತಿ, ಬಾಹ್ಯ ಬಹುವಿಧ ಕಾರ್ಯಶಕ್ತಿ ಇಲ್ಲಿ ಜತೆಗೈದಿರುವದು ಕೂಡಾ ಒಂದು ವಿಶೇಷ.

ಮೂರನೆಯದಾಗಿ ಇಂದು ಇಲ್ಲಿ ಪ್ರಿನ್ಸಿಪಾಲರಾಗಿರುವ ಶ್ರೀ ಎಸ್. ಪಿ. ಪಾಟೀಲರು ಅದಮ್ಯ ಉದ್ಯೋಗಶೀಲರಾಗಿ, ಅಖಂಡವಾಗಿ ತಿಂಗಳಾನುತಿಂಗಳು "ಕಾಯೇನ ವಾಚಾ ಮನಸೇಂದ್ರಿಯಾಣಾಮ್" ಎಂದು ಈ ಕೆಲಸಕ್ಕೆ ದುಡಿಯದಿದ್ದರೆ, ಆ ದುಡಿತಕ್ಕೆ ಅವರನ್ನು ಬಳಸಿರುವ ಅಧ್ಯಾಪಕ ವರ್ಗ ಹಾಗೂ ಅವರ ಎರಡು ನೂರು ವಿದ್ಯಾರ್ಥಿಗಳು ಹೃತ್ಪೂರ್ವಕವಾಗಿ ಸಹಾಯ ಸಲ್ಲಿಸಿ ದನಿಗೂಡದಿದ್ದರೆ, ಇಲ್ಲಿ ಪ್ರತಿನಿಧಿಗಳಾಗಿ ಬಂದ ಹಾಗು ಬಾರದೆ ಇದ್ದ ಸಾವಿರಾರು ಶಿಕ್ಷಕರು ಬೇಕಾದ ಧನ ಸಹಾಯ ಹೃತ್ಪೂರ್ವಕವಾಗಿ ಒದಗಿಸದಿದ್ದರೆ, ನಮ್ಮ ಮಾತೃ ಮಂದಿರದ ಶತಮಾನೋತ್ಸವವು ಇಷ್ಟೊಂದು ವಿಸ್ತಾರವಾದ ವಿಜೃಂಭಣೆಯಿಂದ ಜರಗುತ್ತಿರಲಿಲ್ಲ. ಎಂಬ ಮಾತನ್ನು ನಾನು ಹೇಳದಿದ್ದರೆ ಸುತರಾಂ ತಪ್ಪಾಗುವದು. ಹಾಗಿದೆ ಅವರೆಲ್ಲರೂ ಕೂಡಿ ಮಾಡಿದ ಈ ಸುದೀರ್ಘ ಕಾರ್ಯ. ಈ ಕಾರ್ಯವನ್ನು ನೋಡಿದರೆ " Work is love made visible" ಅಂದರೆ ಪ್ರೇಮದ ಸಾಕ್ಷಾತ್ಕಾರವೇ ಕಾರ್ಯ ಎಂಬುದನ್ನು ಕೈಮಾಡಿ ತೋರಿಸುವಂತೆ ಇದೆ.

ಇಂದು ನಮ್ಮ ಕರೆಗೆ ಓಗೊಟ್ಟು ಸಾವಿರಾರು ಶಿಕ್ಷಕ ಪ್ರತಿನಿಧಿಗಳು ಮಾತೃ ಮಂದಿರದ ಮಂಗಳೋತ್ಸವಕ್ಕಾಗಿ ಆಗಮಿಸಿದ್ದಾರೆ. ಎಲ್ಲದಕ್ಕಿಂತಲೂ ಮಾತೃ ಋಣ ಹೆಚ್ಚೆಂಬ ಭಾವನೆಯಿಂದ ಬಂದಿದ್ದಾರೆ. ಅವರಿಗೆಲ್ಲ ತಕ್ಕದಾದ ವ್ಯವಸ್ಥೆಯನ್ನು ಮಾಡಲು ನಾವು ಶಕ್ತಿ ಮೀ ದುಡಿದರೂ ಅದನ್ನು ಸರಾಗವಾಗಿ ಮಾಡಲು ಸಾಧ್ಯವಾ ಲಿಲ್ಲ. ಲೋಪ ದೋಷಗಳು ಇದ್ದೇ ಇವೆ. ಬಡತನವಿದ್ದರು ಕೂಡ ಅವರು ಮನೆಯೇ ಲೇಸೆಂಬ ಭಾವನೆಯಿಂದ ನಮ್ಮ ಲೋಪದೋಷಗಳೆಲ್ಲವನ್ನು ನುಂಗಿಕೊಂಡು ಈ ಸಮಾರಂಭದಲ್ಲಿ ಭಾಗವಹಿಸುವದನ್ನು ಕಂಡು ನಮ ಅತ್ಯಂತ ಆನಂದವೆನಿಸುತ್ತಿದೆ. ಮತ್ತೊಮ್ಮೆ ಬಂ ಮಹಾಜನರಿಗೆಲ್ಲ ಸ್ವಾಗತಿಸಿ, ವಿದ್ಯಾಜನನಿಯ ಮಂಗ ಪದ್ಯದೊಂದಿಗೆ ನನ್ನ ಭಾಷಣವನ್ನು ಮುಗಿಸುವೆನು.

ಜಯ ಕರ್ನಾಟಕ! ಜಯ ಹಿಂದ! ಜಯ್ ಜಗತ್

ಓಂ ಶಾಂತಿಃ ಶಾಂತಿಃ ಶಾಂತಿಃ

ದಿನಾಂಕ ೨೭—೧೨—೧೯೫೭ರಂದು ಜರುಗಿದ

ಧಾರವಾಡ ಸರಕಾರಿ ಟ್ರೇನಿಂಗ ಕಾಲೇಜದ ಶತ ಸಾಂವತ್ಸರಿಕೋತ್ಸವದಲ್ಲಿ ಅಪ್ಪಣೆ ಕೊಡಿಸಿದ

ಉದ್ಘಾಟನೆಯ ಭಾಷಣ

|| ಓಂ ಸಹನಾವವತು ಸಹನೌಭುನಕ್ತು
ಸಹವೀರ್ಯಂ ಕರವಾವಹೈ ತೇಜಸ್ವಿನಾ ವಧೀತಮಸ್ತು
ಮಾ ವಿದ್ವಿಷಾವಹೈ ಓಂ ಶಾಂತಿಃ ಶಾಂತಿಃ ಶಾಂತಿಃ ||

ಮಹನೀಯರೇ, ಮಹಿಳೆಯರೇ, ಶಿಕ್ಷಕರೇ,
ಶಿಕ್ಷಕವಿದ್ಯಾರ್ಥಿಗಳೇ,

ಇಂದಿನ ಶುಭಸಮಯದಲ್ಲಿ ಧಾರವಾಡದ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಮಾನೋತ್ಸವ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸುವ ಸುಯೋಗವನ್ನು ಈ ಸಮಾರಂಭದ ಚಾಲಕರು ನನಗೆ ಒದಗಿಸಿ ಕೊಟ್ಟುದಕ್ಕಾಗಿ ಅವರೆಲ್ಲರಿಗೂ ನನ್ನ ಹೃತ್ಪೂರ್ವಕವಾದ ಧನ್ಯವಾದಗಳನ್ನರ್ಪಿಸಲು ಬಹು ಆನಂದವೆನಿಸುತ್ತದೆ. ಏಕೆಂದರೆ, ಇದೊಂದು ಸಾಧಾರಣವಾದ ಕನ್ನಡಟ್ರೇನಿಂಗ ಕಾಲೇಜದ ಶತಮಾನೋತ್ಸವದ ಉದ್ಘಾಟನೆಯಾಗಿರದೆ ಕರ್ನಾಟಕ ಪ್ರಾಂತದ ಅತ ಏವ ಇಡೀ ಕನ್ನಡಿಗರ ಜ್ಞಾನ ಭಂಡಾರದ ಶತಮಾನೋತ್ಸವದ ಉದ್ಘಾಟನೆಯೆಂದು ನಿಸ್ಸಂದೇಹವಾಗಿ ಹೇಳಬಯಸುತ್ತೇನೆ.

ಕನ್ನಡವು ಇಂದು ಎರಡು ಕೋಟಿ ಜನರ ಜೀವಂತ ಭಾಷೆಯಾಗಿದೆಯಲ್ಲದೆ ಅವರ ದಿನಚರಿಯ ಬದುಕಿನ ಭಾಷೆಯಾಗಿದೆ. ಅವರ ಸುಖ ಸಂಪತ್ಸಾಧನೆಗೂ, ಜ್ಞಾನಾರ್ಜನೆಗೂ, ಶೌರ್ಯ ಸಾಹಸಗಳಿಗೂ ಮತ್ತು ಇಹಪರ ಕಲ್ಯಾಣಕ್ಕೂ ಅದು ಕಾರಣವಾಗಿದೆ. ಅಂತೆಯೇ ಓರ್ವ ಸಾಹಿತಿಗಳು—

ಕನ್ನಡ ನುಡಿಯು ಕನ್ನಡಿಯಂತಿಹುದು
ನೋಡಯ್ಯ |
ಕನ್ನಡಿ ನೋಡಲೊಡನೆ ತನ್ನ ಸ್ವರೂಪವಪ್ಪಂತೆ |
ಕನ್ನಡ ನುಡಿಯಲೊಡನೆ ಜ್ಞಾನವಪ್ಪುದು
ನೋಡಾ |
ಇಂಥ ಬೆಡಗಿನ ನುಡಿಯ ಬಡನುಡಿ ಎಂಬರ ಕಂಡು
ನಗುತಿರ್ಪ ನಮ್ಮ ಕುಮಾರ ಗುರುವರಾ ||

ಎಂದು ನುಡಿದಿರುವದು ಯಥಾರ್ಥವಾಗಿದೆ.

ಕನ್ನಡದ ಉಳಿವು ಬಳವಿಯಲ್ಲಿ ಟ್ರೇನಿಂಗ ಕಾಲೇಜ !

೧೯ನೆಯ ಶತಮಾನದ ಮಧ್ಯದಲ್ಲಿ ರಾಜಕೀಯ ವಿಪ್ಲವಗಳಿಂದ ಕನ್ನಡಕ್ಕೆ ಕಗ್ಗತ್ತಲೆಯ ಕಾಲವೊದಗಿತ್ತು. ಮುಂಬೈಯಾದಿ ಪ್ರಾಂತಗಳಲ್ಲಿ ಸೇರ್ಪಡೆಯಾದ ಕನ್ನಡವು ಅನ್ಯ ಭಾಷೆಗಳ ವರ್ಚಸ್ಸಿನ ಪೆಟ್ಟಿಗೆ ಬಲು ನುಗ್ಗಾಯಿತು. ಆದರೆ ಅದನ್ನರಿತ ಕನ್ನಡ ಮಾತೆಯ ಸುಪುತ್ರರಾದ ದಿ. ವಿರುಪಾಕ್ಷಪ್ಪ ಹೂಲಿ, ಕೈ. ಡೆಪ್ಯೂಟಿ ಚನ್ನಬಸಪ್ಪನವರ ಪ್ರಭಾವದಿಂದ ಕನ್ನಡ ಮಾತೆಯ ಪ್ರಾಣ ಉಳಿಯಿತು. ಅದರ ಪರಿಣಾಮವಾಗಿ ಇಂದಿನ ಟ್ರೇನಿಂಗ ಕಾಲೇಜವು ನಿಂತಿದ್ದು ಕನ್ನಡ ಮಾತೆಯ ಭಾಷಾ ಪ್ರಾಣ ಉಳಿಯಲು ಈ ಟ್ರೇನಿಂಗ ಕಾಲೇಜವು ಸಂಜೀವಿನಿಯೆಂದರೂ ಸರಿಯೆ ! ಏಕೆಂದರೆ ಈ ಟ್ರೇನಿಂಗ ಕಾಲೇಜದ ಶತ ಸಂವತ್ಸರದ ಇತಿಹಾಸವೆಂದರೆ ಪರ್ಯಾಯದಿಂದ ಕನ್ನಡ ಭಾಷಾ ಪ್ರಗತಿಯ ಇತಿಹಾಸವೆಂದು ಹೇಳಲು ಅಡ್ಡಿ ಇಲ್ಲ. ಮುಂಬೈ ಕರ್ನಾಟಕದಲ್ಲಿಯೇ ಹೊಸದಾಗಿ ನಾರ್ಮಲ್ ಕ್ಲಾಸವೆಂಬ ಸಂಸ್ಥೆಯು ೧೮೫೭ರಲ್ಲಿ ಸ್ಥಾಪಿತವಾಯಿತು. ನಾರ್ಮಲ್ ಕ್ಲಾಸವೆಂದರೆ ಶಿಕ್ಷಕರಿಗೆ ಶಿಕ್ಷಣದಲ್ಲಿ ತರಬೇತಿ ಕೊಡುವ ವರ್ಗವು. ಅದುವೇ ಈ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಉಗಮಸ್ಥಾನವು. ನಾರ್ಮಲ್ ಕ್ಲಾಸದಲ್ಲಿ ಮೊದಲನೆಯ ವರ್ಷ ೧೦ ವಿದ್ಯಾರ್ಥಿಗಳಿದ್ದು ಎರಡನೆಯ ವರ್ಷ ಅವರ ಸಂಖ್ಯೆಯು ೨೦ರ ವರೆಗೆ ಬೆಳೆಯಿತು. ಕಾರಣಾಂತರದಿಂದ ನಾರ್ಮಲ್ ಸ್ಕೂಲು ಬೆಳಗಾಂವಿಗೆ ಹೋದ ಮೇಲೆ ಪುನಃ ಅದರ ಸಂಖ್ಯೆಯು ಕಡಿಮೆ ಆಗಿ ೧೨ಕ್ಕೆ ಇಳಿಯಿತು. ಮತ್ತೆ ಹೊಸ ಯೋಜನೆಯ ಪ್ರಕಾರ ವಿದ್ಯಾರ್ಥಿಗಳ ಸಂಖ್ಯೆಯು ಬೇರೆ ಪ್ರಾಂತಗಳ ನಾರ್ಮಲ್ ಸ್ಕೂಲುಗಳಲ್ಲಿ ಹೆಚ್ಚಾದಂತೆ ಕಂಡರೂ ಧಾರವಾಡದಿಂದ ಸ್ಥಳಾಂತರಿಸಿದ ಬೆಳಗಾಂವಿಯ ಸ್ಕೂಲಿನಲ್ಲಿ ಮಾತ್ರ ಹೆಚ್ಚಿನ ಪರಿಣಾಮವೇನೂ ಆಗಲಿಲ್ಲವೆಂದು ಆಗಿನ ವರದಿಗಳಿಂದ ತಿಳಿದುಬರುತ್ತದೆ. ಆಗ ಕನ್ನಡ ಶಿಕ್ಷಣಕ್ಕೆ ಆಕರ್ಷಿಸಲ್ಪಟ್ಟ ತರುಣರು ಸಾಕಷ್ಟಿರಲಿಲ್ಲವೆಂದು ಹೇಳಬಹುದಾಗಿದೆ. ೧೮೫೭ ರಿಂದ ೧೮೬೭ರ

ವರೆಗೆ ಈ ನಾರ್ಮಲ್ ಸ್ಕೂಲಿನಲ್ಲಿ ಹೆಚ್ಚಾಗಿ ಮರಾಠಿ ವಿದ್ಯಾರ್ಥಿಗಳೇ ಇದ್ದರೆಂದು ಅದೇ ವರದಿಗಳಿಂದಲೇ ಗೊತ್ತಾಗುತ್ತದೆ. ಕನ್ನಡ ಶಾಲೆಗಳಿಗೆ ಶಿಕ್ಷಕರನ್ನು ತಯಾರಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ಈ ತರಬೇತಿ ಕೇಂದ್ರದಲ್ಲಿ ಕನ್ನಡ ಉಮೇದವಾರರಿಲ್ಲದೆ ಇದ್ದುದು ವಿಷಾದ ಸಂಗತಿಯೇ ಸರಿ. ಹೀಗಾಗಿ ಕನ್ನಡಿಗರಿಗೆ ಈ ಸ್ಕೂಲು ಇದ್ದೂ ಇಲ್ಲದಂತಾಯಿತು. ಇಂಥ ಜೀವನ್ಮೃತ ಸ್ಥಿತಿಯಲ್ಲಿರುವ ನಾರ್ಮಲ್ ಸ್ಕೂಲಿಗೆ ಉಜ್ವಲ ಕನ್ನಡಾಭಿಮಾನಿಗಳಾದ ಕೈ. ಡೆ. ಚನ್ನಬಸಪ್ಪನವರು ಪ್ರಥಮ ಪ್ರಿನ್ಸಿಪಾಲರಾಗಿ ಬಂದ ಮೇಲೆ ಕನ್ನಡ ಕುಲೋದ್ಧಾರದ ಕಾರ್ಯವು ತೀವ್ರಗತಿಯಿಂದ ಪ್ರಾರಂಭವಾಯಿತು. ಅವರು ನಾರ್ಮಲ್ ಸ್ಕೂಲಿಗೆ ಮುಖ್ಯಾಧ್ಯಾಪಕರಾಗಿ ದೊರೆತುದುದು ಕನ್ನಡದ ಭಾಗ್ಯೋದಯವೆಂದೇ ಹೇಳಬೇಕು. ಈ ಟ್ರೇನಿಂಗ ಕಾಲೇಜಕ್ಕೆ ಒಂದು ಶತಮಾನದ ವರೆಗೆ ಕನ್ನಡಿಗರಿಗೆ ಸೇವೆ ಸಲ್ಲಿಸುವ ಉಜ್ವಲವಾದ ದೀರ್ಘಾಯುಷ್ಯ ಬಂದುದು ಚನ್ನಬಸಪ್ಪನವರ ಅವಿಶ್ರಾಂತ ಶ್ರಮವೇ ಎಂದು ಹೇಳಬಹುದು. ಅವರು ಪ್ರಪ್ರಥಮ ಪ್ರಿನ್ಸಿಪಾಲರಾಗಿ ಬಂದಾಗ್ಗೆ ಸ್ಕೂಲಿನಲ್ಲಿ ೯ ವಿದ್ಯಾರ್ಥಿಗಳೇ ಇದ್ದುದಲ್ಲದೆ ಜಿಲ್ಹೆಯಲ್ಲಿ ಹನ್ನೆರಡೇ ಕನ್ನಡ ಶಾಲೆಗಳಿದ್ದವು. ಇದನ್ನು ಕಂಡು ತಳಮಳವುಳ್ಳವರಾಗಿ ಉಪವಾಸವೇ ಊಟವೆಂದೂ, ಬಿಸಿಲೇ ಬೆಳದಿಂಗಳೆಂದೂ, ಕಾಯಕವೇ ಕೈಲಾಸವೆಂದೂ ತಮ್ಮ ಜೀವನದ ಸೂತ್ರವಾಗಿ ತಿಳಿದುಕೊಂಡು ದುಡಿದರು. ಅವರ ದೀರ್ಘ ಪ್ರಯತ್ನದಿಂದ ನಾರ್ಮಲ್ ಸ್ಕೂಲು ಕಾಲೇಜವಾಗಿ ನೂರಿನ್ನೂರರ ವರೆಗೆ ವಿದ್ಯಾರ್ಥಿಗಳ ಸಂಖ್ಯೆ ಬೆಳೆದು ಜಿಲ್ಹೆಯಲ್ಲಿ ೩೪೧ ಕನ್ನಡ ಶಾಲೆಗಳಾದವೆಂಬುದನ್ನು ತಿಳಿದರೆ ಎಲ್ಲರಿಗೂ ಅವರ ಯೋಗ್ಯತೆಯ ಅರಿವು ಸಹಜವಾಗಿಯೇ ಆಗುವದು. ಮುಂದೆ ಅವರಂತೆಯೆ ವೆಂಕಟರಂಗೋ ಕಟ್ಟಿಯವರು, ಗಂಗಾಧರ ಮಡಿವಾಳೇಶ್ವರರು, ದಿವಾನ್ ಬಹಾದ್ದೂರ ರೊದ್ದ ರಾಯರು, ಮುಂದೆ ಶಿಕ್ಷಣ ಮಂತ್ರಿಗಳಾದ ಸರ್ ಎಸ್. ಟಿ. ಕಂಬಳಿಯವರೇ ಮೊದಲಾದವರು ಕಾಲೋಚಿತವಾಗಿ ಕಾಲೇಜದ ಪ್ರಗತಿಗೆ ಪ್ರಯತ್ನ ಮಾಡುತ್ತ ಬಂದುದರಿಂದಲೇ ಇಂದು ಕರ್ನಾಟಕದಲ್ಲಿಯೇ ಸರ್ವಾಂಗಸುಂದರವಾಗಿ ಬೆಳೆದ ಈ ಟ್ರೇನಿಂಗ ಕಾಲೇಜು ಕನ್ನಡವನ್ನುದ್ಧರಿಸಿದ ಅನೇಕ ಮಹನೀಯರನ್ನು ನಾಡಿಗೆ ನೀಡಿತು. ಇಂತಹ ಈ ಕಾಲೇಜವು ಅವ್ಯಾಹತವಾಗಿ ಸಾಗಿ ಬಂದು ಈಗ ಅದರ ಶತಮಾನೋತ್ಸವವು ಜರುಗುತ್ತಿರುವದನ್ನು ನೋಡಿದರೆ ಯಾವ ಕನ್ನಡಿಗನಿಗೆ ಅಭಿಮಾನವು ಉಕ್ಕಿಬರಲಿಕ್ಕಿಲ್ಲ? ಯಾವನಿಗೆ ಹೆಮ್ಮೆ ಎನಿಸಲಿಕ್ಕಿಲ್ಲ?

ಶಿಕ್ಷಣವೇ ಜೀವನದ ಅಡಿಗಲ್ಲು

ಮಾನವನಿಗೆ ಮನುಷ್ಯತ್ವವು ಪ್ರಾಪ್ತವಾಗಬೇಕಾದರೆ ಶಿಕ್ಷಣವು ಅತ್ಯವಶ್ಯಕವಾಗಿರಬೇಕು. ಶಿಕ್ಷಣವೆಂದರೆ ಮನಸ್ಸು, ಬುದ್ಧಿ, ದೇಹಾದಿಗಳಿಗೆ ದೊರೆಯುವ ಸುಸಂಸ್ಕಾರವು. ಇಂತಹ ಸಂಸ್ಕಾರವು ಮನುಷ್ಯನಿಗೆ ಸಕಾಲದಲ್ಲಿ ದೊರೆಯದಿದ್ದರೆ ಅವನು ಸುಖ ಶಾಂತಿಗಳನ್ನನುಭವಿಸಲು ಸಾಧ್ಯವೇ ಇಲ್ಲ. ವ್ಯಕ್ತಿಯು ದೇಹ, ಬುದ್ಧಿ ಮತ್ತು ಆತ್ಮಗಳ ತ್ರಿಕೂಟವಾಗಿದ್ದಾನೆ. ಈ ತ್ರಿಕೂಟದ ಸಮ ಪ್ರಮಾಣದ ವಿಕಾಸವೇ ಶಿಕ್ಷಣದ ಪರಮ ಧ್ಯೇಯವಾಗಿದೆ. ಇವುಗಳಲ್ಲಿ ಒಂದು ಅಂಗ ಬೆಳೆಯದಿದ್ದರೂ ಶಿಕ್ಷಣವು ಅಪೂರ್ಣವೆನಿಸುತ್ತದೆ.

ಮನುಷ್ಯನು ಪಶುಪಕ್ಷಿಗಳಂತೆ ಕೇವಲ ಜನ್ಮವಿಶಿಷ್ಟವಾದ ಬುದ್ಧಿ ಸ್ವಭಾವಗಳಿಗೆ ಅನುಸರಿಸಿ ನಡೆಯತಕ್ಕವನಲ್ಲ. ಮೀನವು ಗೀಜಗ ಪಕ್ಷಿಯಂತೆ ಗೂಡು ಕಟ್ಟುವದನ್ನು ಕಲಿಯಲಾರದು. ಅದರಂತೆ ಗೀಜಗ ಪಕ್ಷಿಯು ಮೀನಿನಂತೆ ಈಜಲು ಕಲಿಯಲಾರದು. ಆದರೆ ಮನುಷ್ಯನು ಗೀಜಗದಂತೆ ಗೂಡು ಕಟ್ಟಬಲ್ಲ; ಮೀನಿನಂತೆ ಈಜಬಲ್ಲ. ಆಕಳು ಹುಲಿಯಂತೆ ಕ್ರೂರ ಪ್ರಾಣಿಯಾಗದು. ಅದರಂತೆ ಹುಲಿಯೂ ಆಕಳಿನಂತೆ ಸಾಧು ಪ್ರಾಣಿಯಾಗಿರದು. ಆದರೆ ಮನುಷ್ಯನು ಹುಲಿಗಿಂತ ಕ್ರೂರನೂ, ಗೋವಿಗಿಂತ ಸಾಧು ಪ್ರಾಣಿಯೂ ಆಗಿರಲು ಬಲ್ಲನು. ಆದ ಕಾರಣ ಮನುಷ್ಯೇತರ ಪ್ರಾಣಿಗಳಂತೆ ಮಾನವನ ಬುದ್ಧಿ, ಗುಣ, ಸಾಮರ್ಥ್ಯಗಳು ಕೀಳು ಮಟ್ಟದವಲ್ಲ. ಅಂದರೆ ಆತನಲ್ಲಿ ಸಹಜ ಪ್ರವೃತ್ತಿಗಳು ಮೇಲ್ಮೆಗೊಳ್ಳುವ ಪರಿಸ್ಥಿತಿ (Sublimation of instincts) ಇದೆ. ಅಂದರೆ ಮಾನವನ ಸಹಜ ಪ್ರವೃತ್ತಿಗಳು ಉತ್ತಮಗೊಳ್ಳುವವಾಗಿರುತ್ತವೆ. ಇದು ಯೋಗ್ಯ ಶಿಕ್ಷಣದಿಂದಲೇ ಸಾಧ್ಯ. ಇಂತಹ ಶಿಕ್ಷಣದಿಂದ ಅವುಗಳನ್ನು ಬೇಕಾದ ರೀತಿಯಲ್ಲಿ ಬೆಳಸಿಕೊಳ್ಳಲು ಶಕ್ಯವಿದೆ.

ಯಾರು ಸಕಾಲದಲ್ಲಿ ಶಿಕ್ಷಣವನ್ನು ಪಡೆದಿರುವದಿಲ್ಲವೋ ಅಂತಹವರ ಜೀವನವು ವ್ಯರ್ಥವು.

ಶುನಃ ಪುಚ್ಛಮಿವ ವ್ಯರ್ಥಂ ಜೀವಿತಂ ವಿದ್ಯಯಾ ವಿನಾ ।
ನ ಗುಹ್ಯ ಗೋಪನೇ ದಕ್ಷಂ ನಚ ದಂಶ ನಿವಾರಣೇ ।

ಎಂಬ ಶ್ಲೋಕಾರ್ಥವೂ ಕೂಡ ವಿದ್ಯ ಇಲ್ಲದವನು ಶುನಕನ ಬಾಲದಂತೆ ನಿರರ್ಥಕನಾಗುವನು. ಗುಹ್ಯ ಸ್ಥಾನ ಮುಚ್ಚಿಕೊಳ್ಳುವದಕ್ಕಾಗಿ ಮತ್ತು ದಂಶ ನಿವಾರಣೆಗಾಗಿ ಪಶುಗಳಿಗೆ ಬಾಲವಿರುವದು. ಆದರೆ ಇವೆರಡಕ್ಕೂ ನಾಯಿಯ ಬಾಲವು ಉಪಯೋಗ ಬೀಳುವದಿಲ್ಲ. ಆದುದರಿಂದ ಶಿಕ್ಷಣವೇ ಜೀವನದ ಜೀವಾಳವಿರುವದು. ಪ್ರತಿಯೊಂದು ದೇಶದ ಘನತೆ, ಮಹೋನ್ನತಿ ಸಂಸ್ಕೃತಿಗಳ ಆದರ್ಶವು ಆ ದೇಶದ ಜನಾಂಗದ ಶಿಕ್ಷಣದ ತಳಹದಿಯ ಮೇಲೆಯೇ ಅವಲಂಬಿಸಿದೆ ಎಂದು ಬೇರೆ ಹೇಳಬೇಕಾಗಿಲ್ಲ. 'Education is the foundation of life' ಎಂಬ ಆಂಗ್ಲ ಪಂಡಿತನೊಬ್ಬನ ಹೇಳಿಕೆಯು ನಿಜವಾಗಿದೆ.

ಶಿಕ್ಷಣವು ಸಜೀವ ಶಿಕ್ಷಣವಾಗಿರಬೇಕು

ಈಗ ಸ್ವತಂತ್ರ ಭಾರತದಲ್ಲಿ ಶಿಕ್ಷಣ ಕಾರ್ಯವು ಬಹು ಭರದಿಂದ ಸಾಗಿದೆ. ಒತ್ತಾಯದ ಶಿಕ್ಷಣ, ಪ್ರೌಢಶಿಕ್ಷಣ, ಬಾಲ ಶಿಕ್ಷಣ, ಸ್ತ್ರೀ ಶಿಕ್ಷಣ, ಕುರುಡರ-ಮೂಕರ ಶಿಕ್ಷಣಗಳು ನಡೆದಿವೆ. ಆದರೆ ಮನುಷ್ಯನಲ್ಲಿ ನಿಜವಾದ ಮಾನವತೆಯನ್ನು ಎಚ್ಚರಗೊಳಿಸುವ ಶಿಕ್ಷಣವು ನಡೆದಿದೆಯೇ ಎಂದು ಪ್ರಶ್ನಿಸಬಹುದಲ್ಲವೆ ? ನಿಜವಾದ ಮಾನವತೆಯು ಅರಳದ ಹೊರತು ಶಾಶ್ವತವಾದ ಸುಖ ಶಾಂತಿ ಸಮಾಧಾನಗಳು ದೊರೆಯಲು ಸಾಧ್ಯವಿಲ್ಲ.

ಸ್ವಾತಂತ್ರ್ಯ ಸ್ವರಾಜ್ಯಗಳನ್ನು ಎಷ್ಟೋ ವರ್ಷಗಳ ಹಿಂದೆಯೇ ದೊರಕಿಸಿಕೊಂಡ ಪರರಾಷ್ಟ್ರಗಳಲ್ಲಿ ಇಂದು ಸುಖ ಶಾಂತಿಗಳು ನೆಲೆಸಿರುವವೆ ? ಅದರಂತೆ ನೂರಕ್ಕೆ ನೂರು ಜನ ಸಾಕ್ಷರರಾದ ದೇಶಗಳಲ್ಲಿ ಶಾಂತಿಮಯ ಜೀವನವು ಸಾಗಿದೆಯೆ ? ಎಲ್ಲೆಲ್ಲೂ ಕಳವಳ, ಅಸಹನೆ, ಅಶಾಂತತೆಗಳ ಕುತ್ತುಸುರುಗಳೇ ಕಾಣುತ್ತವೆ. ಸಾಕ್ಷರತೆಯಿಂದ ಮಾನವತೆ ಅರಳದಿದ್ದರೆ ಅದು ನಿರಕ್ಷರತೆಗಿಂತಲೂ ಭಯಂಕರವಾದಂತೆಯೇ ಸರಿ.

ಸಾಕ್ಷರಾ ವಿಪರೀತಾಶ್ಚೇತ್ ರಾಕ್ಷಸಾ ಏವ ಕೇವಲಂ |

ಎಂಬ ಶಾಸ್ತ್ರೋಕ್ತಿಯಂತೆ ರಾಕ್ಷಸವೃತ್ತಿಯೇ ಪ್ರಾರಂಭವಾಗಿ ದೇಶವೇ ರಸಾತಳಕ್ಕೆ ಇಳಿಯುವದು. ಆದುದರಿಂದ ವಿದ್ಯೆಯು ಕೂಡ ವಿಚಾರ ಬೆಳೆದುಬರಬೇಕೆಂಬುದನ್ನು ಸುಶಿಕ್ಷಿತರೆಲ್ಲರೂ ನೆನಪಿಟ್ಟುಕೊಂಡಿರಬೇಕು. ವಿದ್ಯೆಯಿಂದ, ಭೌತಿಕ ವಿಜ್ಞಾನದಿಂದ ಚಂದ್ರಾದಿ ಗ್ರಹಗಳವರೆಗೂ ಉಪಗ್ರಹಗಳನ್ನು ಕಳಿಸುವ ಸಾಮರ್ಥ್ಯ ಬಂದುದೂ ವಿಶ್ವವಿದ್ಯಾಲಯಗಳು ಇಮ್ಮಡಿ, ಮುಮ್ಮಡಿ ಪದವೀಧರರನ್ನು ಮಾಡುತ್ತಿರುವದೂ, ಸಾಕ್ಷರತೆಯ ಪರಿಣಾಮವಾದರೂ ನಿಜವಾದ ಮಾನವತೆಯನ್ನು ವಿಕಾಸಗೊಳಿಸಿಲ್ಲ. ಸಹನಾವವತು ಸಹನೌ ಭುನಕ್ತು ಎಂದು ಶ್ರುತಿಯು ಸಾರುತ್ತಿದ್ದರೂ ವಿದ್ಯಾವಂತರು ಹೆಚ್ಚಿದಷ್ಟು ಒಬ್ಬರಿಂದೊಬ್ಬರು ದೂರಾಗುತ್ತಾರೆಯೇ ಹೊರತು ಹತ್ತಿರವಾಗುತ್ತಿರುವದಿಲ್ಲ. ಸ್ವಾರ್ಥ, ಅತ್ಯಾಶೆ, ಅನರ್ಥ ಮೊದಲಾದ ಮಾನವತೆಯ ಅಪೂರ್ಣ ಲಕ್ಷಣಗಳೇ ಎದ್ದು ಕಾಣುತ್ತವೆ. ಮೊದಲು ಬ್ರಿಟಿಶರನ್ನು ಭಾರತದಲ್ಲಿ ಬೇರು ಬಿಡುವಂತೆ ಮಾಡಿದವರು ಸಾಕ್ಷರಿಗಳೋ, ನಿರಕ್ಷರಿಗಳೋ ? ಕೊನೆಯ ವರೆಗೂ ರಾಜನಿಷ್ಠರಾಗಿದ್ದು ಬ್ರಿಟಿಷರು ಯಾವಾಗಲೂ ಇಲ್ಲಿರಬೇಕೆಂದು ಹವಣಿಸಿದವರು ಸಾಕ್ಷರಿಗಳಲ್ಲವೆ ? ಜಾತಿಜಾತಿಗಳಲ್ಲಿ ಜಗಳಗಳನ್ನು ಹುಟ್ಟಿಸಿದವರು ಹುಟ್ಟಿಸುತ್ತಿರುವವರು ಸಾಕ್ಷರಿಗಳಲ್ಲವೇ ? ಮಹಾತ್ಮಾ ಗಾಂಧೀಜಿ ಮೊದಲಾದ ಸತ್ಪುರುಷರನ್ನು ಕೊಲೆ ಮಾಡಿದವರು ಸಾಕ್ಷರಿಗಳಲ್ಲವೇ ? ಸ್ವರಾಜ್ಯ ಸ್ವಪ್ರಾಂತ ದೊರಕಿದ್ದರೂ, ಅದು ಸುರಾಜ್ಯವಾಗುವಂತೆ ಪ್ರಯತ್ನಮಾಡದೆ ಪಕ್ಷಪಂಗಡಗಳನ್ನು ಕಟ್ಟಿಕೊಂಡು ಹೊಡೆದಾಟ ಬಡಿದಾಟಗಳನ್ನು ನಡೆಸಿರುವವರು ಸಾಕ್ಷರಿಗಳಲ್ಲವೇ ? ಶಾಂತಿಯು ಕೇವಲ ಸಾಕ್ಷರತೆಯಿಂದ ಸಿಗದೆ ಶೀಲಯುಕ್ತ ಶಿಕ್ಷಣದಿಂದ, ನಿಜವಾದ ಮಾನವತೆಯಿಂದ ದೊರೆಯುವದು. ಶಿಕ್ಷಣವೆಂದರೆ ಮಾನವನ ವ್ಯಕ್ತಿತ್ವವನ್ನು ರೂಪಿಸಿಕೊಟ್ಟು ಅವನ ಒಳಗಣ್ಣನ್ನು ಅರಳಿಸಿ, ಅವನಲ್ಲಿ ಸಮತೆ, ಸ್ವಾವಲಂಬನಗಳಳವಡುವಂತೆ ಮಾಡುವದಾಗಿರುವದು. ಸಜೀವ ಶಿಕ್ಷಣದಿಂದ ವಿಶಾಲವಾದ ವಿಚಾರಗಳುಳ್ಳ ಯೋಗ್ಯ ಜನಾಂಗವನ್ನು ನಿರ್ಮಾಣ ಮಾಡಲು ಭಾರತಕ್ಕಿದ್ದಷ್ಟು ಸಂಸ್ಕೃತಿಯು ಇನ್ನಾವ ದೇಶಕ್ಕೂ ಇರುವದಿಲ್ಲ. ಆದರೆ ನಾವು ಪಾಶ್ಚಾತ್ಯರ ಅನುಕರಣೆ ಮಾಡಿ, ಬಡವ ಬಲ್ಲಿದರಲ್ಲಿ ಭೇದ ಹುಟ್ಟಿಸಿ ಹಳ್ಳಿಗರನ್ನು ಸುಲಿಯುವದಕ್ಕಾಗಿ ಬ್ರಿಟಿಶರು ರಚಿಸಿರುವ ಫ್ಯಾಕ್ಟರಿಗಳೆಂದು ಗಾಂಧೀಜಿಯವರು ಹೇಳಿದ ಶಿಕ್ಷಣದ ಬೆನ್ನುಹತ್ತಿದ್ದೇವೆ. ಇದು ಬದಲಾಗಬೇಕು.

ವೃತ್ತಿಮಯ ಶಿಕ್ಷಣವು

ಇದಕ್ಕೆಲ್ಲ ಪರಿಹಾರವೆಂದು ನಾವು ಅನುಸರಿಸಬೇಕಾದ ಪ್ರಥಮ ಹೆಜ್ಜೆಯೆಂದರೆ ಸರ್ವೋದಯ ಸಮಾಜ ಕಟ್ಟಲು ಮಹಾತ್ಮಾ ಗಾಂಧೀಜಿಯವರು ಹೇಳಿಹೋದ ವೃತ್ತಿಮೂಲ ಶಿಕ್ಷಣವನ್ನೇ ತಳಹದಿಯಾಗಿಟ್ಟುಕೊಂಡು ಸಾಗಿದರೆ ಮಾತ್ರ ಸಜೀವ ಶಿಕ್ಷಣದ ಧ್ಯೇಯಗಳನ್ನು ಸಾಧಿಸಬಹುದೆಂದು ಹೇಳಬಹುದಾಗಿದೆ. ಇದು

ಮಾನವನ ಮೂಲಭೂತ ಅಗತ್ಯಗಳಾದ ಆಹಾರ, ಆಚ್ಛಾದನ, ಆಶ್ರಯಗಳನ್ನು ಪೂರೈಸುವದಲ್ಲದೆ ಶಿಸ್ತು, ಸಹಜೀವನ, ಸದ್ಭಾವನೆಗಳನ್ನು ರೂಪಿಸಲು ಸಹಾಯಕಾರಿಯಾಗಬಹುದು. ಕೇವಲ ಪುಸ್ತಕೀಯ ವಿದ್ಯೆ, ವಿದ್ಯೆ ಅಲ್ಲ. ಅಧ್ಯಯನದೊಡನೆ ಕಲೆ, ಕೈಗಾರಿಕೆ, ವ್ಯವಸಾಯ, ವೈದ್ಯ, ಶಸ್ತ್ರಾಸ್ತ್ರ, ಜ್ಯೋತಿಷ್ಯ ಮೊದಲಾದ ನಾನಾಮುಖದ ಶಿಕ್ಷಣ ಅವರವರ ವೃತ್ತಿ (ಇಚ್ಛೆ) ಗನುಸಾರವಾಗಿ ಕಲಿಸಿಕೊಡುವ ಏರ್ಪಾಡಾಗಬೇಕು. ಅಂದರೆ ಒಂದು ಪರಿಪೂರ್ಣ ಸಮಾಜ ರಚನೆಯಾಗಿ ಅದರ ಮುನ್ನಡೆ ಸುಗಮವಾಗುವದು. ಈಗ ಮನುಷ್ಯನಲ್ಲಿ ಶಾರೀರಿಕ ವ್ಯಂಗಗಳಿದ್ದರೂ ಅವುಗಳನ್ನು ಸರಿಪಡಿಸುವ ಉಪಾಯಗಳನ್ನು ಕಂಡುಹಿಡಿದಿರುವರೆಂಬ ಸಂಗತಿಯು ಎಲ್ಲರಿಗೂ ಗೊತ್ತಿದ್ದದ್ದೇ ಸರಿ. ಹೀಗಿರುವಾಗ ಮನುಷ್ಯನು ತನ್ನಲ್ಲಿರುವ ದುಷ್ಟ ಪ್ರವೃತ್ತಿಗಳನ್ನು ತೆಗೆದು ಹಾಕಲು ಅಶಕ್ಯವಿದೆಯೇ? ಆಲಸ್ಯ, ಮಾತ್ಸರ್ಯ, ದುರಾಚಾರ, ಅಪ್ರಮಾಣಿಕತೆ, ಸ್ವೇಚ್ಛಾವೃತ್ತಿ ಮೊದಲಾದವುಗಳು ನಾಶವಾಗಿ ಶಿಸ್ತು, ಸದಾಚಾರ, ಸಭ್ಯತೆ, ಸಾಹಸಾದಿ ಸದ್ಗುಣಗಳುಂಟಾಗುವ ಶಿಕ್ಷಣವು ಎಲ್ಲ ವಿದ್ಯಾಲಯಗಳಲ್ಲಿ ಪ್ರಾರಂಭವಾಗಬೇಕು. ಈ ವಿಷಯವಾಗಿ ಮಹಾಭಾರತದ ಶಾಂತಿ ಪರ್ವದ ೧೨೪ನೇ ಅಧ್ಯಾಯದ ಶೀಲಾಖ್ಯಾನದಲ್ಲಿ ಹೇಳಿದ್ದನ್ನು ಎಲ್ಲರೂ ಸ್ಮರಣೆಯಲ್ಲಿಟ್ಟುಕೊಳ್ಳಬಹುದಾಗಿದೆ.

ಶೀಲವಾನ್ ಭವ ಪುತ್ರಕ!

ದುರ್ಯೋಧನನು ಧರ್ಮರಾಜನನ್ನು ಪರಾಜಿತನನ್ನಾಗಿ ಮಾಡಲು ಎಷ್ಟು ಪ್ರಯತ್ನ ಮಾಡಿದರೂ ಕೀರ್ತಿಯು ಧರ್ಮರಾಜನಿಗೆ, ಅಪಕೀರ್ತಿಯು ದುರ್ಯೋಧನನಿಗೆ ಈ ರೀತಿಯಾಗುತ್ತಿರುವದನ್ನು ನೋಡಿ ಚಿಂತಾಕ್ರಾಂತನಾಗಿ ಕುಳಿತಾಗ, ತಂದೆ ಧೃತರಾಷ್ಟ್ರನು ಚಿಂತೆಯ ಕಾರಣವನ್ನು ವಿಚಾರಿಸಿದನು. ದುರ್ಯೋಧನನು– "ಏನು ಮಾಡಿದರೂ ಧರ್ಮನ ಮಹತ್ವವು ಕಡಿಮೆಯಾಗಲೊಲ್ಲದು. ಅದಕ್ಕಾಗಿ ಚಿಂತೆ" ಎಂದನು. ಆಗ ಧೃತರಾಷ್ಟ್ರನು "ಬಾಳಾ ನೀನು ಧರ್ಮನಂತೆ ಕೀರ್ತಿವಂತನಾಗಬೇಕಾದರೆ, ಶೀಲವುಳ್ಳವನಾಗು. ಶೀಲದ ಬಲದಿಂದ ಜಗತ್ತನ್ನೇ ಜಯಿಸಲು ಶಕ್ಯವಿದೆ. ಈ ಶೀಲದ ಮಹಿಮೆಯನ್ನು ಎಷ್ಟು ಹೇಳಿದರೂ ಕಡಿಮೆಯೇ ಇದೆ" ಎಂದನು.

ಒಮ್ಮೆ ಶೀಲಸಂಪನ್ನನಾದ ಪ್ರಹ್ಲಾದನು ಇಂದ್ರನನ್ನು ಪರಾಭವಗೊಳಿಸಿ ಅವನ ರಾಜ್ಯವನ್ನು ತಕ್ಕೊಂಡನು. ರಾಜ್ಯಭ್ರಷ್ಟನಾದ ಇಂದ್ರನು ಕಳೆದ ರಾಜ್ಯವನ್ನು ದೊರಕಿಸಿಕೊಳ್ಳುವದಕ್ಕಾಗಿ ಪ್ರಯತ್ನ ನಡೆಸಿದನು. ಮೊದಲು ದೇವಗುರುವಾದ ಬೃಹಸ್ಪತ್ಯಾಚಾರ್ಯನ ಕಡೆಗೆ ಹೋದನು. ಕಡೆಗೆ ವೇಷಾಂತರ ಮಾಡಿ ತನ್ನ ಶತ್ರುವಾದ ಪ್ರಹ್ಲಾದನ ಕಡೆಗೆ ಹೋಗಿ ೨೪ ವರ್ಷಗಳವರೆಗೂ ಉತ್ಕೃಷ್ಟವಾದ ಸೇವೆಯನ್ನು ಮಾಡಿ ಆತನ ಪ್ರಸನ್ನತೆಯನ್ನು ಸಂಪಾದಿಸಿದನು. ಆ ಕಾಲದ ಪದ್ಧತಿಯಂತೆ ಪ್ರಸನ್ನನಾದ ಪ್ರಹ್ಲಾದನು ಏನು ವರಬೇಕು? ಬೇಡು ಎಂದ ಕೂಡಲೇ ವಟುವೇಷ ಧಾರಿಯಾದ ಇಂದ್ರನು ರಾಜ್ಯ ವೈಭವಾದಿಗಳನ್ನು ಬೇಡದೆ ಯಾ ಯಾವ ಶೀಲದ ಯೋಗದಿಂದ ಪ್ರಹ್ಲಾದನು ತ್ರೈಲೋಕ್ಯಾಧಿಪತ್ಯವನ್ನು ಪಡೆದಿದ್ದನೋ ಆ ಶೀಲವನ್ನೇ ಬೇಡಿದನು. ಪ್ರಹ್ಲಾದನು ಶೀಲವನ್ನು ಕೊಟ್ಟಬಗ್ಗೆ ಅವನ ಕೈಮೇಲೆ ಉದಕವನ್ನು ಬಿಡುತ್ತಿರುವಾಗಲೇ ಅವನ ಶರೀರದಿಂದ ಧರ್ಮ, ಸತ್ಯ, ಸದಾಚಾರ, ಬಲ ಮೊದಲಾದ ಸದ್ಗುಣಗಳು ತೇಜೋರೂಪದಿಂದ ಹೊರಬಿದ್ದು ಇಂದ್ರನ ಶರೀರದಲ್ಲಿ ಪ್ರವಿಷ್ಟವಾದವು. ಕಡೆಗೆ ರಾಜ್ಯಲಕ್ಷ್ಮಿಯು ಕೂಡ ಇಂದ್ರನ ಕಡೆಗೆ ಹೋದಳು. ಪುನ ಇಂದ್ರನು ದೇವಲೋಕದ ಅರಸನಾದನು. ಆದುದರಿಂದ ಯಾರಾದರೂ ಯಾವ ಸಂಪತ್ತನ್ನೂ ಸಾಮರ್ಥ್ಯವನ್ನೂ ಪಡೆಯಬೇಕಾದರೆ ಶೀಲಸಂಪನ್ನರಾಗಬೇಕು.

ಅಧ್ಯಾಪಕರ ಆಯ್ಕೆ

ಸ್ವತಂತ್ರವಾದ ಭಾರತಕ್ಕೆ ಆದರ್ಶ ನಾಗರಿಕರ ಬೇಕಾಗಿದ್ದಾರೆ. ಸೇವೆ ಸಮತಾಭಾವ, ಸ್ವಾವಲಂಬನೆ ಸಾಹಸ, ಸದ್ವಿದ್ಯೆ, ಶಿಸ್ತು, ಮಿತವ್ಯಯ, ಪರಮತ ಸಹಿಷ್ಣುತೆ, ಗುರುಹಿರಿಯರಲ್ಲಿ ಪೂಜ್ಯಭಾವ, ವಿಚಾರಪೂರಿ ವಾದ ರಾಜಕೀಯ ಜಾಣಾಕ್ಷತೆ ಮೊದಲಾದ ಉತ್ಕೃ ಗುಣಗಳುಳ್ಳವರು ಬೇಕಾಗಿದ್ದಾರೆ. ಮಾನವನು ಸಮಾ ಜೀವಿಯು. ಎಲ್ಲರೂ ತನಗಾಗಿ, ತಾನು ಎಲ್ಲರಿಗಾ ಎಂಬ ಸಹಕಾರ ಬೀಜ ಮಂತ್ರವನ್ನು ಮನದಂದು ಸಮಾಜದ ಏಳಿಗೆಗಾಗಿ ಸಹಾಯವಾಗುವ, ತನ್ಮೂಲಕ ವ್ಯಕ್ತಿ ವಿಕಾಸವಾಗುವ ಶಿಕ್ಷಣವನ್ನು ಜೊತೆಯಾಗಿ ಪಡೆ ಕೊಳ್ಳಬೇಕಾಗುತ್ತದೆ. ಇಂತಹ ಜನಾಂಗವನ್ನು ನಿರ್ಮಾಣ ಮಾಡಬೇಕಾದರೆ ಯೋಗ್ಯ ಅಧ್ಯಾಪಕರೆ ಬೇಕು. ವಿದ್ಯಾರ್ಥಿಗಳು ಓದಿ ಕೇಳಿ ಕಲಿಯುವ

ಕ್ಕಿಂತಲೂ, ನೋಡಿಯೇ ಹೆಚ್ಚಾಗಿ ಕಲಿಯುವರು. ದಿನವೂ ನೋಡಿ ಅನುಕರಣ ಮಾಡುತ್ತಿರುವ ವಿದ್ಯಾರ್ಥಿಗಳಂತೂ ತುಂಬಾ ಶಿಕ್ಷಕರನ್ನೇ ಅನುಸರಿಸುತ್ತಿರುವದರಿಂದ, ಗುರುವಿನ ನಡತೆಯೇ ಶಿಷ್ಯನಿಗೆ ಮಾರ್ಗದರ್ಶನ ಮಾಡುತ್ತಿರುವಾಗ, ಆಚಾರ್ಯನಾದವನು ತನ್ನ ವಿಚಾರ, ಉಚ್ಚಾರ, ಆಚಾರ, ಪ್ರಚಾರಗಳ ಬಗೆಗೆ ಬಹು ಎಚ್ಚರಿಕೆಯುಳ್ಳವನಾಗಿರಬೇಕಾದುದು ಅವಶ್ಯವೂ ಅನಿವಾರ್ಯವೂ ಆಗಿರುವದು. ಇಂಥವರೇ ಅಧ್ಯಾಪಕರಾಗಲು ಯೋಗ್ಯರು.

ಗುರುಸ್ಥಾನ ಗೌರವವುಳ್ಳದ್ದು.

ಶಿಕ್ಷಕರು ನಿರ್ಮತ್ಸರಿಗಳು, ವಿಚಾರಶೀಲರು, ವಿಶಾಲಭಾವವುಳ್ಳವರು ಪವಿತ್ರಾತ್ಮರು ಆಗಿರಬೇಕು. ವಿದ್ಯಾರ್ಥಿಗಳನ್ನು ಸಹಕಾರದಿಂದಲೂ ಸಹಜ ಪ್ರೇಮದಿಂದಲೂ ಕಾಣುತ್ತಿರಬೇಕು. ಸಮಾಜದಲ್ಲಿ ಅತ್ಯುಚ್ಚ ಕಾರ್ಯಗಳಿಗೆ ಸ್ಪರ್ಧೆಯ ಪರೀಕ್ಷೆಗಳನ್ನಿಟ್ಟು ಯೋಗ್ಯ ವ್ಯಕ್ತಿಗಳನ್ನು ಆರಿಸುತ್ತಿರುವಂತೆ, ಅಧ್ಯಾಪಕ ವರ್ಗಕ್ಕೂ ಉತ್ತಮ ವರ್ತನೆ, ಚಾಣಾಕ್ಷತೆಯುಳ್ಳವರನ್ನೇ ಆರಿಸುವ ಸಾಂಪ್ರದಾಯವನ್ನಿಟ್ಟರೆ ಮಾತ್ರ ಒಳ್ಳೇದಾಗುವದು. ಅವರ ಸಂಬಳವು ಕೂಡ ಆ ದೃಷ್ಟಿಯಿಂದ ಸ್ವಲ್ಪ ಆಕರ್ಷಣೀಯವಾಗಿರಬೇಕಾದುದು ಅಗತ್ಯವಾಗಿದೆ. ಏಕೆಂದರೆ ಕಾಳಿದಾಸನ ಮಾಲವಿಕಾಗ್ನಿಮಿತ್ರದಲ್ಲಿ—

ಯದಾಸ್ತ್ವಯಾಜ್ಞಾನ ಮಶೇಷ | ಮಾಪ್ತ ಲೋಕೇನ
ಚೈತನ್ಯ ಯಿವೋಷಣ, ರಶ್ಮೈಃ ||

ಎಂಬುದಾಗಿ ಅಧ್ಯಾಪಕರ ಸ್ಥಾನಮಹತ್ವವನ್ನು ಹೊಗಳಿದ್ದಾನೆ. ಅಜ್ಞಾನವನ್ನು ನಾಶಮಾಡಿ ಮನುಷ್ಯನಿಗೆ ಹೊಸ ದೃಷ್ಟಿಯನ್ನು ಒದಗಿಸಿ ಕೊಡುವ ಶಿಕ್ಷಕನನ್ನು ಕತ್ತಲೆಯನ್ನು ನಾಶಮಾಡುವ ವಿಶ್ವಚೈತನ್ಯ ಸ್ವರೂಪನಾದ ಸೂರ್ಯನಾರಾಯಣನಿಗೆ ಹೋಲಿಸಿದ್ದಾನೆ. ಇದು ಸಮಂಜಸವಾದ ಸಂಗತಿಯೇ ಸರಿ.

ಶಿಕ್ಷಕನು ಅರಿವಿನ ಆರಾಧಕನಾಗಿರಬೇಕು

ಶಿಕ್ಷಕನು ವಿದ್ಯಾರ್ಥಿದೆಸೆಯಲ್ಲಿ ಎಲ್ಲವನ್ನು ಅಧ್ಯಯನ ಮಾಡಿರುವೆನೆಂದು ಓದುವ ಅಭ್ಯಾಸವನ್ನು ಬಿಡಬಾರದು. ಅರಿವಿಗಾಗಿ ತನ್ನ ದುಡಿತವನ್ನು ಮೀಸಲಾಗಿಡಬೇಕು. ಪುಸ್ತಕ ಪ್ರಪಂಚವು ವಿಶಾಲವಾದ ಇಂದಿನ ಸನ್ನಿವೇಶದಲ್ಲಿ ತನ್ನ ಜ್ಞಾನ ದೀವಿಗೆಯನ್ನು ಬೆಳಗಿಸಿಕೊಳ್ಳಬೇಕು. ಓದಿನ ದಾಹವನ್ನು ಹೆಚ್ಚಿಸಿಕೊಂಡು ವಿಷಯ ವಿಮರ್ಶಾತ್ಮಕತೆಯನ್ನು ಪ್ರಚೋದಿಸಿಕೊಂಡು ಜನತೆಯಲ್ಲಿ ಈ ವಿಷಯ ಶೀಲತೆಯನ್ನು ತೋರಿಸಿಕೊಳ್ಳಬೇಕು. ನಿತ್ಯವೂ ಯಾವ ವಿಷಯದ ಬಗೆಗಾಗಲಿ ಅಧ್ಯಯನ ನಡೆಸಿದ್ದಾದರೆ ಬುದ್ಧಿಯು ತೇಜಸ್ವಿಯಾಗುವದು. ಬುದ್ಧಿಯು ಕೂಡ, ಕನ್ನಡಿ, ಕಂಚು ಮೊದಲಾದ ಧಾತುಗಳ ಪಾತ್ರೆಗಳಂತಿರುವದು. ನಿತ್ಯ ಕನ್ನಡಿಯ ಮೇಲೆ ಕೈಯಾಡಿಸಿದರೆ, ಪಾತ್ರೆಗಳನ್ನು ಬೆಳಗಿದರೆ, ದೀಪದಕುಡಿ ತೆಗೆದರೆ, ಹಲ್ಲುಗಳನ್ನುಜ್ಜಿದರೆ, ಕಸಗೂಡಿಸಿದರೆ, ಹೇಗೆ ಸ್ವಚ್ಛ ಕಾಣುವವೋ ಹಾಗೆ ನಿರಂತರಾಭ್ಯಾಸದಿಂದ ಬುದ್ಧಿಯು ಸಹ ಜಾಗ್ರತೆಯುಳ್ಳದ್ದಾಗುವದು. ಅದಕ್ಕಾಗಿಯೇ ಶ್ರುತಿಯು ತೇಜಸ್ವಿನಾ ವಧೀತಮಸ್ತು ಎಂದು ಸಾರಿದೆ.

ಆದರ್ಶ ಅಧ್ಯಾಪಕನಾಗಬೇಕು

ಐರೋಪ್ಯ ಪಂಡಿತ ಲಾಸ್ಕಿಯು ಹೇಳಿದಂತೆ ಶಾಲೆಯನ್ನೇ ತನ್ನ ಮನೆಯಾಗಿ ತಿಳಿದು ವಿದ್ಯಾರ್ಥಿಗಳನ್ನೇ ತನ್ನ ಮಕ್ಕಳೆಂದು ಭಾವಿಸುವವನೇ ಆದರ್ಶ ಅಧ್ಯಾಪಕನಾಗಿದ್ದಾನೆ. ಕೇವಲ ಕಾನೂನುಗಳನ್ನು ಮಾಡುವದರಿಂದ ಜನಾಂಗದ ಚಾರಿತ್ರ್ಯಯು ಸುಧಾರಿಸುವದಿಲ್ಲ. ಯೋಗ್ಯರಾದ ಶಿಕ್ಷಕರಿಂದ ದೊರೆಯುವ ಶಿಕ್ಷಣದಿಂದಲೇ ಅದು ಸಾಧ್ಯವು. ಆಚಾರ್ಯ ವಿನೋಬಾಜಿಯವರು ಶಿಕ್ಷಣ ಕೊಡುವ ಶಿಕ್ಷಕನು ಮಗುವಾಗಬೇಕು. ಶಿಕ್ಷಣ ಪಡೆಯುವ ಮಗುವು ದೊಡ್ಡವನಾಗಬೇಕು. ಶಿಕ್ಷಕನು ಮಗುವಾಗದಿದ್ದರೆ ಅವನು ಯೋಗ್ಯ ಶಿಕ್ಷಣ ಕೊಡಲಾರನು. ಮಗುವು ದೊಡ್ಡವನಾಗದಿದ್ದರೆ ಶಿಕ್ಷಣ ಪಡೆಯಲಾರನೆಂದು ಶಿಕ್ಷಣ ಶಾಸ್ತ್ರದ ಸೂತ್ರವನ್ನೇ ಬಹು ಮಾರ್ಮಿಕವಾಗಿ ಪ್ರತಿಪಾದಿಸಿದ್ದಾರೆ.

ಇಂದಿನ ಮುಂದಿನ ಎಲ್ಲ ಶಿಕ್ಷಕ ಮಹಾಶಯರೇ, ಮುಂದೆ ಹೇಳಲಿರುವ ವಿಷಯವನ್ನು ಚನ್ನಾಗಿ ಮನನ ಮಾಡಿಕೊಳ್ಳಿರಿ. ಭಾರತದ ಆದರ್ಶಾಧ್ಯಾಪಕರಾದ ವ್ಯಾಸ ಮಹರ್ಷಿಗಳು ಗುರುಕುಲದಲ್ಲಿ ತಮ್ಮ ಅಧ್ಯಯನವನ್ನೆಲ್ಲ ಪೂರೈಸಿ ಸ್ನಾತಕರಾಗಿ ಗುರುಕುಲದಿಂದ ಹೊರಡುವಾಗ ಗುರುಗಳಿಗೆ ಬ್ರಹ್ಮಸೂತ್ರ ಭಗವದ್ಗೀತೆ ಭಾರತಾದಿ ಉದ್ಗ್ರಂಥಗಳನ್ನು ಬರೆಯಲು ಆಶೀರ್ವದಿಸಬೇಕೆಂದು ಕೇಳಿಕೊಂಡಾಗ್ಗೆ ಅವರು ಶಾಸ್ತ್ರಗಳ ರಹಸ್ಯ, ಧರ್ಮದ ಮರ್ಮವನ್ನು ತಿಳಿದಿದ್ದರೆ ಅವುಗಳ ಸಾರವನ್ನು ಒಂದೇ ವಾಕ್ಯದಲ್ಲಿ ಹೇಳು ಎಂದು ಅಪ್ಪಣೆ ಕೊಟ್ಟರಂತೆ. ಆಗ ವ್ಯಾಸರು "ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್" ಎಂಬುದಾಗಿ ಒಂದೇ ವಾಕ್ಯದಲ್ಲಿ ಸಮರ್ಪಕ ಉತ್ತರ ಕೊಟ್ಟು ಗುರುವಿನ ಅನುಗ್ರಹ ಪಡೆದರು. ಅವರು ಹೇಳಿದ ಉತ್ತರವು ಒಂದೇ ವಾಕ್ಯವಾಗಿದ್ದರೂ ಅದರಲ್ಲಿ

ವಿಶ್ವಧರ್ಮಗಳ ಸಾರ ತುಂಬಿದೆ. ಯಾರಾದರೂ ನಮ್ಮ ಹೆಣ್ಣು ಮಕ್ಕಳ ಕಡೆ ಪಾಪ ದೃಷ್ಟಿಯಿಂದ ನೋಡಿದರೆ ಪಾಪ ಭಾವನೆಯನ್ನು ಪ್ರಕಟ ಮಾಡಿದರೆ, ಮತ್ತು ನಮಗೆ ಅಪಮಾನ ಮಾಡಿದರೆ, ಅಪಶಬ್ದಗಳನ್ನಾಡಿದರೆ, ಅನ್ಯಾಯವಾಗಿ ನಮ್ಮ ಸೊತ್ತನ್ನು ಅಪಹರಿಸಿದರೆ, ಸುಖರೂಪವಾಗಿ ನಡೆದಿರುವ ನಮ್ಮ ಬಾಳಿನಲ್ಲಿ ಅಡ್ಡಿ ಆತಂಕಗಳನ್ನು ತಂದೊಡ್ಡಿದರೆ, ನಮಗೆ ಹೇಗೆ ತಾಪ, ಕೋಪ, ತ್ರಾಸುಗಳಾಗುತ್ತವೆಯೋ ಹಾಗೆಯೇ ನಾವು ಕೂಡ ಇತರರಿಗೆ ಮಾಡಿದರೆ ಅವರಿಗೂ ನಮ್ಮಂತೆ ತ್ರಾಸಾಗುವದು, ದುಃಖವಾಗುವದು ಎಂದು ತಿಳಿದು ಹಾಗೆ ಆಚರಿಸದಿರುವದೇ ಧರ್ಮವೆಂದೂ ಧರ್ಮ ಗ್ರಂಥಗಳ ರಹಸ್ಯವೆಂದೂ ವ್ಯಾಸರ ಉತ್ತರದ ಅಭಿಪ್ರಾಯವಾಗಿದೆ. ಆದುದರಿಂದಲೇ ವ್ಯಾಸರು ಆದರ್ಶ ಗುರುಗಳಾದರು. ಅದರಂತೆ ತಾವುಗಳೆಲ್ಲರೂ ಆದರ್ಶ ಗುರುಗಳಾಗಿ ಈಗ ನಮಗೆ ದೊರೆತಿರುವ ಸ್ವರಾಜ್ಯವು ಸುರಾಜ್ಯವಾಗುವಂತೆ ಭವ್ಯವಾದ ಭಾರತದ ಭವಿತವ್ಯವು ಉಜ್ವಲವಾಗುವಂತೆ ಮಾಡಬೇಕೆಂದು ತಮ್ಮೆಲ್ಲರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ರ್‍ಯಾಂಗ್ಲರ್ ಡಿ. ಸಿ. ಪಾವಟೆಯವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಧಾರವಾಡದ ಸರಕಾರಿ ಟ್ರೇನಿಂಗ್ ಕಾಲೇಜದ ಶತಮಾನೋತ್ಸವವು ಜಯಪ್ರದವಾಗಿ ಜರುಗಲೆಂದು ಕೋರಿ, ಈ ಶತಮಾನೋತ್ಸವವು ಪ್ರಾರಂಭವಾಯಿತೆಂದ. ಪ್ರಸಿದ್ಧಪಡಿಸಿ ನನ್ನ ಭಾಷಣವನ್ನು ಕೊನೆಗೊಳಿಸುತ್ತೇನೆ.

ಸರ್ವೇಪಿ ಸುಖಿನಃ ಸಂತು ಸರ್ವೇಸಂತು ನಿರಾಮಯಾಃ ಸರ್ವೇ
ಭದ್ರಾಣಿ ಪಶ್ಯಂತು ಮಾ ಕಶ್ಚಿದ್ ದುಃಖ ಭಾಗ್ ಭವೇತ್

ಓಂ. ಶಾಂತಿಃ ಶಾಂತಿಃ ಶಾಂತಿಃ.

ಪರಮ ಪೂಜ್ಯ ಶ್ರೀ. ಮ. ನಿ. ಪ್ರ.
ಶ್ರೀ ಬಂಥನಾಳ ಶಿವಯೋಗೀಶ್ವರರು
ಅಪ್ಪಣೆ ಕೊಡಿಸಿದ್ದು.

ಧಾರವಾಡ ಸರಕಾರೀ ಗಂಡು ಮಕ್ಕಳ ಟ್ರೇನಿಂಗ ಕಾಲೇಜದ ಶತ ಸಾಂವತ್ಸರಿಕೋತ್ಸವದ
ಅಧ್ಯಕ್ಷರಾದ ಶ್ರೀ ಡಿ. ಸಿ. ಪಾವಟೆ, ಎಮ್.ಎ. (ಕೇಂಬ್ರಿಜ್) **ಅವರು ಮಾಡಿದ**

ಅಧ್ಯಕ್ಷ ಭಾಷಣ

ಶ್ರೀಯುತ ಗಾಂವಕಾರರವರೇ, ಪ್ರಿನ್ಸಿಪಾಲ ಪಾಟೀಲ
ಹಾಗೂ ಗೆಳೆಯರೇ,

ಈ ಸಮಾರಂಭದಲ್ಲಿ ಭಾಗವಹಿಸಲು ನನಗೆ ಅವಕಾಶವನ್ನು ಒದಗಿಸಿಕೊಟ್ಟಿದ್ದಕ್ಕಾಗಿ ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂದ ಕಾಲೇಜದ ಶತಾಬ್ದಿ ಸಮಾರಂಭದ ಸಂಚಾಲಕರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಸಮಾರಂಭದಲ್ಲಿ ಭಾಗವಹಿಸಲು ಎರಡು ಕಾರಣಗಳ ಮೂಲಕ ನನಗೆ ಒಳ್ಳೆಯ ಸಂತೋಷವೆನಿಸಿದೆ. ಮೊದಲನೆಯದಾಗಿ ನಮ್ಮ ದೇಶದ ಪ್ರಾಥಮಿಕ ಶಿಕ್ಷಣದ ಬೆಳವಣಿಗೆಯ ವಿಷಯದಲ್ಲಿ ನನಗೆ ಇದ್ದ ಆಸ್ಥೆ, ಮುಂಬಯಿ ರಾಜ್ಯದ ಶಿಕ್ಷಣಖಾತೆಯ ಡೈರೆಕ್ಟರರಿದ್ದಾಗ, ನಾನು ಪ್ರಾಥಮಿಕ ಶಿಕ್ಷಣದ ಪ್ರಸಾರಕ್ಕಾಗಿ ವಿಶೇಷವಾಗಿ ಗಮನ ಕೊಟ್ಟಿದ್ದು ಎಲ್ಲರಿಗೂ ವಿದಿತವಾದ ಸಂಗತಿಯಾಗಿದೆ. ಪ್ರಾಥಮಿಕ ಶಿಕ್ಷಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಪ್ರಯತ್ನ ಮಾಡಿದ್ದಲ್ಲದೆ ಸಮಾಜದಲ್ಲಿ ಅವರ ದರ್ಜೆಯೂ ಹೆಚ್ಚುವಂತೆ ನೋಡಿಕೊಳ್ಳುವದು ನನಗೆ ಯಾವಾಗಲೂ ಇಷ್ಟವೆನಿಸುತ್ತದೆ. ಎರಡನೆಯ ಕಾರಣವೆಂದರೆ– ಈ ಟ್ರೇನಿಂಗ ಕಾಲೇಜು ಕನ್ನಡದ ಅಭ್ಯಾಸವನ್ನು ನಿರಂತರವಾಗಿ ಉಳಿಸಿಕೊಂಡು ಬಂದದ್ದು. ನಮ್ಮ ಪದವೀಧರರು ಕನ್ನಡದ ಬಗ್ಗೆ ತಿರಸ್ಕಾರ ಮಾಡುವ ಸಮಯದಲ್ಲಿ ಈ ಸಂಸ್ಥೆಯಿಂದ ಅನೇಕ ಜನ ಪಂಡಿತರು ಹೊರಟು ಕನ್ನಡ ಸಾಹಿತ್ಯಕ್ಕೆ ದೊಡ್ಡ ಸೇವೆ ಸಲ್ಲಿಸಿದ್ದಾರೆ. ಆಗ ವಿಶ್ವವಿದ್ಯಾಲಯಗಳಲ್ಲಿ ಕನ್ನಡಕ್ಕೆ ಮಹತ್ವದ ಸ್ಥಾನವಿರಲಿಲ್ಲ. ಇಂಟರ, ಬಿ.ಎ. ಮೊದಲಾದ ಪರೀಕ್ಷೆಗಳಿಗೆ ಕನ್ನಡವು ಅಭ್ಯಾಸದ ವಿಷಯವೇ ಆಗಿರಲಿಲ್ಲ. ಇಂಥ ಕಾಲದಲ್ಲಿ ಈ ಟ್ರೇನಿಂಗ್ ಕಾಲೇಜ ಒಂದೇ ಒಂದು ಸಂಸ್ಥೆ ಕನ್ನಡ ವಾಙ್ಮಯದ ಪ್ರೌಢ ಅಭ್ಯಾಸಕ್ಕೆ ಮೀಸಲಾದಂತಿತ್ತು. ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಕನ್ನಡ ಸಾಹಿತ್ಯಕ್ಕೆ ಸೇವೆಸಲ್ಲಿಸಿದವರೆಲ್ಲ ಒಂದಿಲ್ಲೊಂದು ದೃಷ್ಟಿಯಿಂದ ಈ ಟ್ರೇನಿಂಗ್ ಕಾಲೇಜಕ್ಕೆ ಸಂಬಂಧಪಟ್ಟವರೇ. ಇಂಥವರಲ್ಲಿ ಗಂಗಾಧರ ಮಡಿವಾಳೇಶ್ವರ ತೂರಮರಿ, ವೆಂಕಟ ರಂಗೋ ಕಟ್ಟಿ ಇವರು

ಮುಖ್ಯರಾದವರು. ಈ ಶತಮಾನದ ಪೂರ್ವಾರ್ಧದಲ್ಲಿ ಉತ್ತಮ ಕಾದಂಬರಿಕಾರರೆಂದು ಹೆಸರಾದ ಗಳಗನಾಥರವರು ಪ್ರಾಥಮಿಕ ಶಾಲೆಯ ಶಿಕ್ಷಕರಾಗಿದ್ದರು. ಇಂಥ ಅನೇಕ ಕಾರಣಗಳ ಮೂಲಕ ಉತ್ತರ ಕರ್ನಾಟಕದ ಜನರಿಗೆ ಈ ಟ್ರೇನಿಂಗ್ ಕಾಲೇಜದ ವಿಷಯವಾಗಿ ವಿಶೇಷವಾದ ಆದರವಿದೆ.

ಈ ಟ್ರೇನಿಂಗ್ ಕಾಲೇಜದ ಮೊದಲನೆಯ ಪ್ರಿನ್ಸಿಪಾಲರಾದ ಕೈ. ವಾ. ಚೆನಬಸಪ್ಪ ಧಾರವಾಡ ಇವರು ಈ ಭಾಗದ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಅವರು ಕನ್ನಡ ಸಾಹಿತ್ಯಕ್ಕೆ ಅತ್ಯಂತ ಪ್ರೋತ್ಸಾಹ ಕೊಟ್ಟರು. ಕನ್ನಡದ ಅಭ್ಯಾಸವು ಜನಪ್ರಿಯವಾಗುವದಕ್ಕಾಗಿ ವಿಶ್ವ ಪ್ರಯತ್ನ ಮಾಡಿದರು. ಅವರನ್ನು ಉತ್ತರ ಕರ್ನಾಟಕದ ಶಿಕ್ಷಣದ ಪಿತಾಮಹರೆಂದು ಕರೆಯಬಹುದು. ಈ ಭಾಗದಲ್ಲಿದ್ದ ಮರಾಠಿಯ ವರ್ಚಸ್ಸನ್ನು ಕಡಿಮೆ ಮಾಡಲು ಹೆಣಗಿದವರಲ್ಲಿ ಇವರೇ ಮೊಟ್ಟಮೊದಲಿಗರು. ಇವರಿಗೆ ಆಗ ಸಂಪೂರ್ಣ ಯಶಸ್ಸು ದೊರೆಯಿತೆಂದೇ ಹೇಳಬೇಕಾಗುತ್ತದೆ. ಚೆನಬಸಪ್ಪನವರಿಗೆ ಆಗಿನ ಸರಕಾರದಲ್ಲಿ ವಿಶೇಷವಾದ ಮನ್ನಣೆಯಿತ್ತು. ಸರಕಾರದಲ್ಲಿದ್ದ ಅವರ ವರ್ಚಸ್ಸೇ ಈ ಟ್ರೇನಿಂಗ್ ಕಾಲೇಜದ ಅಭಿವೃದ್ಧಿಗೆ ಕಾರಣವಾಯಿತು. ಈ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರಲ್ಲಿ ಗಣ್ಯರಾದ ಇನ್ನೊಬ್ಬ ವ್ಯಕ್ತಿಯೆಂದರೆ ವೈ.ವಾ. ದಿವಾನ್ ಬಹಾದ್ದೂರ ರೊದ್ದ ಶ್ರೀನಿವಾಸರಾಯರು. ನಾನು ಇಲ್ಲಿಯ ಕರ್ನಾಟಕ ಕಾಲೇಜಿನಲ್ಲಿ ಓದುತ್ತಿದ್ದಾಗ, ರೊದ್ದ ರಾಯರು ಹಾಸ್ಟೆಲಿನಲ್ಲಿ ಬಂದು ಆಗಾಗ ಹೇಳುತ್ತಿದ್ದ ಮಾತುಗಳು ಇನ್ನೂ ನನಗೆ ನೆನಪಿವೆ. ಮರಾಠಿಯಲ್ಲಿ ಪ್ರಾಥಮಿಕ ಶಿಕ್ಷಕರು ಸಹಿ ಮಾಡುತ್ತಿದ್ದುದನ್ನು ಡೆಪುಟಿ ಚೆನಬಸಪ್ಪನವರೇ ನಿಲ್ಲಿಸಿದರೆಂಬು, ರೊದ್ದ ಅವರು ಎಷ್ಟೋ ಸಾರೆ ಹೇಳುತ್ತಿದ್ದರು. ಆ ಕಾಲದಲ್ಲಿ ಕನ್ನಡದ ಶಿಕ್ಷಕರಿಗೂ ಜನರಿಗೂ ಕನ್ನಡದ ಭಾಷೆ ಕಡಿಮೆ ತರಗತಿಯದು ಎಂಬ ಭಾವನೆ ಇತ್ತು. ಶಿಕ್ಷಕರಲ್ಲಿದ್ದ ಈ ಭಾವನೆಯನ್ನು ಹೊಡೆದೋಡಿಸಲು ಡೆಪುಟಿ ಚೆನಬಸಪ್ಪ ಅವರು ಒಳ್ಳೆಯ ಉಗ್ರವಾದ ಕ್ರಮವನ್ನು ಕೈಕೊಂಡರು. ಆ ಕಾಲದಲ್ಲಿ ಟ್ರೇನಿಂಗ್ ಕಾಲೇಜದ ಪ್ರಿನ್ಸಿಪಾಲರ ಸ್ಥಳಕ್ಕೆ ವಿಶೇಷವಾದ ಗೌರವವಿತ್ತು. ಅದು ಶಿಕ್ಷಣ ಖಾತೆಯಲ್ಲಿ ಕೆಲಸ ಮಾಡತಕ್ಕವರು ಪ್ರಯತ್ನ ಮಾಡಬಹುದಾದ ಕಟ್ಟಕಡೆಯ ಸ್ಥಾನವಾಗಿದ್ದಿತು. ಕನ್ನಡ ಸಾಹಿತ್ಯಕ್ಕೆ ಪ್ರೋತ್ಸಾಹನ ಕೊಡುವದೂ ಶಿಕ್ಷಕರಲ್ಲಿ ಕನ್ನಡದ ಅಭ್ಯಾಸ ಹೆಚ್ಚುವಂತೆ ಮಾಡುವದೂ ಅವರ ಕರ್ತವ್ಯವಾಗಿತ್ತು.

ಪ್ರಾಥಮಿಕ ಶಿಕ್ಷಕರನ್ನು ತರಬೇತಿಗೊಳಿಸುವದು ಮುಂಬಯಿರಾಜ್ಯದ ಮುಖ್ಯವಾದ ಹೊಣೆಗಳಲ್ಲಿ ಒಂದಾಗಿತ್ತು. ಮಿಶನ್ ಸಂಸ್ಥೆಗಳು ನಡೆಸುತ್ತಿದ್ದ ಕೆಲವು ಟ್ರೇನಿಂಗ ಕಾಲೇಜುಗಳನ್ನು ಬಿಟ್ಟರೆ ಉಳಿದ ಎಲ್ಲಾ ಟ್ರೇನಿಂಗ್ ಕಾಲೇಜುಗಳೂ ಸರಕಾರದವೇ ಆಗಿದ್ದವು. ಶಾಲೆಗಳಲ್ಲಿ ದೊರೆಯುತ್ತಿದ್ದ ಶಿಕ್ಷಣದ ಮಟ್ಟವು ಶಿಕ್ಷಕರಿಗೆ ಕಾಲೇಜಿನಲ್ಲಿ ದೊರೆಯುತ್ತಿದ್ದ ತರಬೇತಿಯನ್ನೇ ಅವಲಂಬಿಸಿತ್ತು. ಆದ್ದರಿಂದ ಶಿಕ್ಷಕರನ್ನು ತರಬೇತುಗೊಳಿಸುವದರ ಕಡೆಗೆ ಸರಕಾರದವರು ವಿಶೇಷವಾಗಿ ಲಕ್ಷ್ಯಕೊಟ್ಟರು. ಸುಧಾರಿಸಿದ ಉಳಿದ ದೇಶಗಳಲ್ಲಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರನ್ನು ತರಬೇತುಗೊಳಿಸುವ ಭಾರ ವಿಶ್ವವಿದ್ಯಾಲಯಗಳ ಮೇಲೆ ಇರುತ್ತದೆ. ಆದರೆ ನಮ್ಮ ದೇಶದಲ್ಲಿ ಸರಕಾರದ ಬಗ್ಗೆ ಜನತೆಯಲ್ಲಿ ದೃಢವಿಶ್ವಾಸವನ್ನು ಉಂಟುಮಾಡಲು ಶಿಕ್ಷಕರಿಂದ ಹೆಚ್ಚಿನ ಕಾರ್ಯವಾಗಬಹುದೆಂದು ತಿಳಿದು ಅವರ ತರಬೇತಿಯ ಹೊಣೆಯನ್ನು ಸರಕಾರವು ತನ್ನ ಕಡೆಗೇ ಇಟ್ಟುಕೊಂಡಂತೆ ಕಾಣುತ್ತದೆ. ಮೊನ್ನೆ ಮೊನ್ನೆಯ ವರೆಗೆ ಈ ಟ್ರೇನಿಂಗ್ ಕಾಲೇಜುಗಳಲ್ಲಿ ಶಿಕ್ಷಕರು ದೇಶಭಾಷೆ, ಬೀಜಗಣಿತ, ಭೂಮಿತಿ, ಸಂಸ್ಕೃತ, ಖಗೋಲಶಾಸ್ತ್ರ, ಇತಿಹಾಸ, ಭೂಗೋಲ ಮುಂತಾದ ವಿಷಯಗಳನ್ನು ಕಲಿಯಬೇಕಾಗುತ್ತಿತ್ತು. ಆ ಶಿಕ್ಷಕರಿಗೆ ವಿಷಯದ ಜ್ಞಾನ ಮತ್ತು ಕಲಿಸುವ ಕ್ರಮ ಇವೆರಡೂ ಗೊತ್ತಿರಬೇಕೆಂಬುದೇ ಆಗಿನ ಮುಖ್ಯ ತತ್ವವಾಗಿತ್ತು. ದೇಶಭಾಷೆಗಳ ಮುಖಾಂತರ ಪಾಶ್ಚಾತ್ಯಜ್ಞಾನವನ್ನು ಪ್ರಸಾರ ಮಾಡುವದು ಬ್ರಿಟಿಷ್ ಜನರಿಗೆ ಬೇಕಾಗಿತ್ತು. ಪ್ರಾಥಮಿಕ ಶಿಕ್ಷಕರಿಗೆ ಇಂಥ ಶಿಕ್ಷಣ ದೊರೆತರೆ ಅವರು ಈ ಉದ್ದೇಶವನ್ನು ಸಹಜವಾಗಿ ಈಡೇರಿಸುವರು ಎಂದು ಅವರು ತಿಳಿದಿದ್ದರು. ಈ ಸಾಮಾನ್ಯ ತತ್ವಕ್ಕನುಸರಿಸಿ ಈ ಟ್ರೇನಿಂಗ್ ಕಾಲೇಜದಲ್ಲಿ ಎಷ್ಟೋ ವರ್ಷಗಳ ವರೆಗೆ ಮಾಧ್ಯಮಿಕ ಶಾಲೆಗಳಲ್ಲಿ ಮ್ಯಾಟ್ರಿಕ್‌ಲೇಶನ್ನದ ವರೆಗೆ ಕಲಿಸುತ್ತಿದ್ದ ಎಲ್ಲ ವಿಷಯಗಳನ್ನೂ ಅವುಗಳ ಜೊತೆಗೆ ಶಿಕ್ಷಣದ ಕ್ರಮವನ್ನೂ ಕಲಿಸಲಾಗುತ್ತಿತ್ತು. ಎಂಟು ವರ್ಷಗಳ ಪ್ರಾಥಮಿಕ ಶಿಕ್ಷಣ, ಮೂರು ವರ್ಷಗಳ ಟ್ರೇನಿಂಗ್ ಶಿಕ್ಷಣ ಇವು ದೊರೆತರೆ ಶಿಕ್ಷಕನು ತನ್ನ ಕೆಲಸವನ್ನು ತೃಪ್ತಿಕರವಾಗಿ ನಡೆಸಬಲ್ಲ

ನೆಂದು ತಿಳಿದುಕೊಂಡಿದ್ದರು. ಈ ಕ್ರಮದಲ್ಲಿ ಶಿಕ್ಷಣ ಪಡೆದ ಕೆಲವರು ಹೆಸರಾದ ಶಿಕ್ಷಕರಾಗಿದ್ದರು. ಆಗ ಪ್ರಾಥಮಿಕ ಶಿಕ್ಷಕರ ಸಂಬಳದ ಸ್ಕೇಲು ತೀರ ಕಡಿಮೆಯಿತ್ತು. ಆದರೂ ಅವರು ತಮ್ಮ ಕರ್ತವ್ಯವನ್ನು ಒಳ್ಳೇ ಶ್ರದ್ಧೆಯಿಂದ ನೆರವೇರಿಸುತ್ತಿದ್ದರು, ಉತ್ತಮ ಶಿಕ್ಷಕರಾಗಿಯೂ, ಘನ ವಿದ್ವಾಂಸರಾಗಿಯೂ ಕೀರ್ತಿಯನ್ನು ಪಡೆದರು. ನಾನು ಕರ್ನಾಟಕ ಕಾಲೇಜದಲ್ಲಿ ಬಿ. ಏ. ಓದುತ್ತಿರುವಾಗ ಒಬ್ಬ ಪ್ರಾಥಮಿಕ ಶಿಕ್ಷಕರು ದೀರ್ಘ ವರ್ತುಳದ ಪರೀಘವನ್ನು (circumference of an ellipse) ತೆಗೆಯುವ ಒಂದು ಲೆಕ್ಕವನ್ನು ತೆಗೆದುಕೊಂಡು ನನ್ನ ಕಡೆಗೆ ಬಂದರು. ಆಗಿನ ಕರ್ನಾಟಕ ಕಾಲೇಜಿನ ಗಣಿತ ಪ್ರಾಧ್ಯಾಪಕರಿಗೆ ಕನ್ನಡ ಬಾರದ ಮೂಲಕ ಆ ಶಿಕ್ಷಕರ ಕುತೂಹಲವನ್ನು ತೃಪ್ತಿಪಡಿಸುವದಕ್ಕೋಸ್ಕರ ಅವರು ಆ ಶಿಕ್ಷಕರನ್ನು ನನ್ನ ಕಡೆಗೆ ಕಳಿಸಿದ್ದರು. ಮ್ಯಾಟ್ರಿಕ್ಯುಲೇಶನ್ ಮಟ್ಟದ ವಿಷಯಜ್ಞಾನ ಇರಬೇಕಾಗಿದ್ದ ಒಬ್ಬ ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ದೀರ್ಘವರ್ತುಲದ ಪರೀಘವನ್ನು ತೆಗೆಯಬೇಕೆಂಬ ಕುತೂಹಲ ಉಂಟಾದದ್ದು ಅತಿ ಆಶ್ಚರ್ಯಕರವಲ್ಲವೇ ! ವರ್ತುಳದ ಪರೀಘ ಹಾಗು ಕ್ಷೇತ್ರಗಳನ್ನು ತೆಗೆಯಲು ಉಪಯೋಗಿಸುತ್ತಿದ್ದ ನಿಯಮಗಳನ್ನು (formulae) ದೀರ್ಘ ವರ್ತುಲಕ್ಕೂ ಅನ್ವಯಿಸಬೇಕೆಂದು ಆ ಶಿಕ್ಷಕರ ಅಭಿಪ್ರಾಯವಿತ್ತು. ಒಬ್ಬ ಪ್ರಾಥಮಿಕ ಶಿಕ್ಷಕರು ತಮ್ಮ ದೀರ್ಘ ಪರಿಶ್ರಮ ಮತ್ತು ಆಲೋಚನ ಇವುಗಳ ಮೂಲಕ ಆಧುನಿಕ ಕ್ಯಾಲ್ಕ್ಯುಲಸ್(Calculus)ದ ಸ್ಥೂಲವಾದ ಕಲ್ಪನೆಯನ್ನು ಕಂಡುಹಿಡಿದಿದ್ದರೆಂದು ನನಗೆ ಬಹಳ ಸೋಜಿಗವೆನಿಸಿತು. ಈಗ ಗೊತ್ತಿದ್ದ ಯಾವ ಫಂಕ್ಶನ್ನೂ (function) ದೀರ್ಘ ವರ್ತುಲದ ಪರೀಘವನ್ನು ವಿವರಿಸಲಾರದು. ಅದಕ್ಕಾಗಿಯೇ ಎಲಿಪ್ಟಿಕ್ ಫಂಕ್ಶನ್ಸ (elliptic functions) ಕಂಡುಹಿಡಿಯಬೇಕಾಯಿತು. ಎಂದು ನಾನು ಅವರಿಗೆ ತಿಳಿಸಿದೆನು. ಕಡಿಮೆ ಪಗಾರ, ಅಲ್ಪ ಶಿಕ್ಷಣ ದೊರೆಯುತ್ತಿದ್ದರೂ ಆ ಕಾಲದ ಪ್ರಾಥಮಿಕ ಶಿಕ್ಷಕರ ಜ್ಞಾನದಾಹವು ಹೆಚ್ಚಾಗಿತ್ತೆಂಬದನ್ನು ತೋರಿಸುವದಕ್ಕಾಗಿಯೇ ನಾನು ಈ ಉದಾಹರಣೆಯನ್ನು ಕೊಟ್ಟೆನು. ಇದೇ ರೀತಿಯಾಗಿ ಸಾಹಿತ್ಯದಲ್ಲಿಯೂ ಆ ಕಾಲದ ಪ್ರಾಥಮಿಕ ಶಿಕ್ಷಕರು ತಮ್ಮ ಸತತವಾದ ಅಭ್ಯಾಸ ಹಾಗು ಪಾಂಡಿತ್ಯಗಳ ಮೂಲಕ ಹೆಸರಾಗಿದ್ದರು.

ಈಗ ಪರಿಸ್ಥಿತಿಯು ಬದಲಾಗಿದೆ. ಪ್ರಾಥಮಿಕ ಶಿಕ್ಷಕರಿಗೆ ಸಾಮಾನ್ಯ ವಿಷಯಜ್ಞಾನ ಪ್ರಾಥಮಿಕ ಶಾಲೆಗಳಲ್ಲಿ ದೊರೆಯಬೇಕು, ಟ್ರೇನಿಂಗ್ ಕಾಲೇಜುಗಳಲ್ಲಿ ವಿಶೇಷವಾಗಿ ಕೇವಲ ವೃತ್ತಿಯ ಶಿಕ್ಷಣ ದೊರೆಯಬೇಕು. ಎಂದು ನಮ್ಮ ಕಲ್ಪನೆಯಾಗಿದೆ. ಶಿಕ್ಷಕರಿಗೆ ವಕೀಲ, ಡಾಕ್ಟರ, ಇಲ್ಲವೆ ಇಂಜನಿಯರ ಇವರಿಗೆ ಇರುವಷ್ಟು ಸಾಮಾನ್ಯ ಶಿಕ್ಷಣವು ದೊರೆಯಬೇಕು ಎಂಬುದು ಸರ್ವಸಾಮಾನ್ಯವಾದ ಮಾತು. ಇಂಗ್ಲಂಡ ಅಮೇರಿಕಾದಂತಹ ಮುಂದುವರಿದ ದೇಶಗಳಲ್ಲಿ ವಿಶ್ವವಿದ್ಯಾಲಯದ ಪದವೀಧರರೇ ಪ್ರಾಥಮಿಕ ಶಿಕ್ಷಕರಾಗಿರುತ್ತಾರೆ. ಅವರು ಟ್ರೇನಿಂಗ್ ಶಿಕ್ಷಣವನ್ನೂ ಪಡೆದಿರುತ್ತಾರೆ. ಈ ಟ್ರೇನಿಂಗ್ ಸರ್ಟಿಫಿಕೇಟುಗಳನ್ನು ವಿಶ್ವವಿದ್ಯಾಲಯಗಳೇ ಕೊಡುತ್ತವೆ. ಅವರಿಗೆ ಸರ್ವಸಾಮಾನ್ಯವಾಗಿ ಶಿಕ್ಷಣದ ಮಾನಸಶಾಸ್ತ್ರ, ಶಿಕ್ಷಣದ ತತ್ವಗಳು, ಶಿಕ್ಷಣದ ಇತಿಹಾಸ ಮತ್ತು ಶಿಕ್ಷಣ ಪದ್ಧತಿ, ಈ ವಿಷಯಗಳನ್ನು ಮಾತ್ರ ಕಲಿಸುತ್ತಾರೆ. ನಮ್ಮ ದೇಶದಲ್ಲಿ ಹಳ್ಳಿಯ ಜನರಿಗೆ ಶಿಕ್ಷಣ ಕೊಡುವದು ಒಂದು ದೊಡ್ಡ ಸಮಸ್ಯೆಯಾಗಿದೆ. ಇಲ್ಲಿ ನೂರಕ್ಕೆ ೭೫ ರಷ್ಟು ಜನರು ನಿರಕ್ಷರಿಗಳಾಗಿರುವರು. ಇಂಥ ಜನಸಾಮಾನ್ಯರಿಗೆ ಓದುಬರಹ ಕಲಿಸುವದೂ ಸಾಮಾನ್ಯ ಜ್ಞಾನವನ್ನು ಒದಗಿಸುವದೂ ಸ್ವಾಭಾವಿಕವಾಗಿಯೇ ನಮ್ಮ ದೇಶದಲ್ಲಿ ಮಹತ್ವದ್ದಾಗಿದೆ. ಆ ಮೇಲೆ ವಿದ್ಯಾರ್ಥಿಗಳಿಗೆ ಕೊಡುವ ಶಿಕ್ಷಣದ ಮಟ್ಟದ ವಿಚಾರ ಬರುತ್ತದೆ. ನಮ್ಮ ದೇಶದ ಬೇರೆ ಬೇರೆ ಭಾಗಗಳಲ್ಲಿ ಶಿಕ್ಷಣದ ಅಭಿವೃದ್ಧಿಯ ಮಟ್ಟವು ಬೇರೆ ಬೇರೆ ತೆರನಾಗಿದೆ. ಆದ್ದರಿಂದ ಬೇರೆ ಬೇರೆ ಮಟ್ಟದ ಶಿಕ್ಷಕ ವರ್ಗಗಳಿರುವದೂ ಸ್ವಾಭಾವಿಕವಾಗಿದೆ. ಒಬ್ಬನೇ ಶಿಕ್ಷಕನಿರುವ ಶಾಲೆಯಲ್ಲಿ ಓದು ಬರಹ ಹಾಗು ಗಣಿತ ಇವುಗಳ ತೀರ ಸಾಮಾನ್ಯ ಜ್ಞಾನವನ್ನು ಕೊಡುವದು ಆ ಶಿಕ್ಷಕನ ಮುಖ್ಯ ಕರ್ತವ್ಯವಾಗಿರುತ್ತದೆ. ಆದರೆ, ದೊಡ್ಡ ಶಾಲೆಗಳಲ್ಲಿ ಉತ್ತಮ ತರಗತಿಯ ಶಿಕ್ಷಣವನ್ನು ಕೊಡಲು ಅರ್ಹರಾಗಿರಬೇಕಾಗುತ್ತದೆ. ಸಣ್ಣ ಹಳ್ಳಿಯ ಶಿಕ್ಷಕನಿಗೆ ಮುಲ್ಕೀ ಪರೀಕ್ಷೆಯವರೆಗೆ ಅಭ್ಯಾಸವಾದರೆ ನಡೆಯಬಹುದು. ಆದರೆ, ದೊಡ್ಡ ಶಾಲೆಗಳಲ್ಲಿ ಶಿಕ್ಷಕರು ಕನಿಷ್ಠ ಮ್ಯಾಟ್ರಿಕ್ಯುಲೇಶನದ ಅಭ್ಯಾಸವನ್ನಾದರೂ ಮಾಡಿರಲೇಬೇಕು. ಈ ಎರಡು ತರದ ಶಿಕ್ಷಕರಿಗೆ ಭಿನ್ನ ಭಿನ್ನ ಪ್ರಕಾರದ ಟ್ರೇನಿಂಗಿನ ಅವಶ್ಯಕತೆಯಿದೆ. ಈ ವೃತ್ತಿಯ ಶಿಕ್ಷಣದ ಸ್ವರೂಪವೂ ಈ ಇಬ್ಬರಿಗೂ ಸ್ವಲ್ಪ ಬೇರೆ ಬೇರೆಯಾಗಿಯೇ ಇರಬೇಕಾಗುತ್ತದೆ.

ಕೆಳಗಿನ ವರ್ಗಗಳನ್ನು ಕಲಿಸುವ ಶಿಕ್ಷಕರಿಗೆ ವಿಷಯಗಳಿಗಿಂತ ಶಿಕ್ಷಣ ಪದ್ಧತಿಯ ಜ್ಞಾನವೇ ಹೆಚ್ಚು ಮಹತ್ವವಾದದ್ದು. ಮೇಲಿನ ವರ್ಗಗಳನ್ನು ಕಲಿಸುವವರಿಗೆ ವಿಷಯ ಜ್ಞಾನವೂ ಅಷ್ಟೇ ಮಹತ್ವವಾದದ್ದು. ಕಾಲಾನುಕ್ರಮದಲ್ಲಿ ನಮ್ಮ ಫುಲ್‌ಪ್ರಾಯ್ಮರಿ ಶಾಲೆಗಳಲ್ಲಿ ಪದವೀಧರರೇ ಶಿಕ್ಷಕರಾಗಿರುವದೂ ಸಣ್ಣ ಶಾಲೆಗಳಲ್ಲಿ ಎಸ್.ಎಸ್.ಸಿ. ಪರೀಕ್ಷೆ ಪಾಸಾದವರು ಶಿಕ್ಷಕರಾಗಿರುವದೂ ವಿಹಿತವಾಗಿದೆ·

ಮೂಲ ಶಿಕ್ಷಣದ ವಿಚಾರವೊಂದು ಈಗ ಹೊಸದಾಗಿ ಬಂದಿದೆ. ಸುಶಿಕ್ಷಿತರನ್ನು ಸ್ವಾವಲಂಬಿಗಳನ್ನಾಗಿ ಮಾಡುವದೇ ಮೂಲ ಶಿಕ್ಷಣದ ಗುರಿಯಾಗಿದೆ. ಅವರು ತಮ್ಮ ಜೀವಿತವನ್ನು ಸಾಗಿಸುವದರ ಜೊತೆಗೆ ಸಮಾಜದ ಹಿತವನ್ನೂ ಸಾಧಿಸಲು ಅರ್ಹರಾಗಬೇಕೆಂಬುದು ಮೂಲ ಶಿಕ್ಷಣದ ಉದ್ದೇಶವಾಗಿದೆ. ನಮ್ಮ ಶಾಲೆಗಳಲ್ಲಿ ದೊರೆಯುತ್ತಿದ್ದ ಪುಸ್ತಕಜ್ಞಾನ ತೀರ ಅತೃಪ್ತಿಕರವಾಗಿತ್ತು. ಮೂಲ ಶಿಕ್ಷಣದ ಕಲ್ಪನೆ ಉತ್ಪನ್ನವಾದದ್ದು ಇದರ ಪರಿಣಾಮವಾಗಿಯೇ. ಕಲಿಯುವದರ ಜೊತೆಗೆ ಅನುಭವವೂ ಆಗಬೇಕೆಂಬುದು ಈ ಶಿಕ್ಷಣದ ಗುರಿಯಾಗಿದೆ. ಮೂಲ ಶಿಕ್ಷಣ ಶಾಲೆಗಳಲ್ಲಿ ಪುಸ್ತಕಜ್ಞಾನವೂ ನಡೆಯುತ್ತದೆ. ಜೊತೆಗೆ ವಿದ್ಯಾರ್ಥಿಗಳಿಗೆ ಅನುಭವವನ್ನು ಕೊಡುವ ಇತರ ಚಟುವಟಿಕೆಗಳೂ ನಡೆಯುತ್ತವೆ. ವಿದ್ಯಾರ್ಥಿಗಳು ಯಾವದಾದರೊಂದು ಮೂಲೋದ್ಯೋಗವನ್ನು ಕಲಿಯಬೇಕಾಗುತ್ತದೆ. ಮೂಲೋದ್ಯೋಗದ ಮುಖಾಂತರವಾಗಿಯೇ ಶಕ್ಯವಿದ್ದಷ್ಟು ಉಳಿದ ವಿಷಯಗಳ ಜ್ಞಾನವನ್ನು ಪಡೆಯಬೇಕಾಗುತ್ತದೆ. ಸುತ್ತುಮುತ್ತಲಿನ ಪರಿಸ್ಥಿತಿಗೆ ಮಕ್ಕಳು ಹೊಂದಿಕೊಂಡು ಹೋಗುವಂತೆ ನೋಡಿಕೊಳ್ಳುವದು ಅವರ ಬೆಳೆವಣಿಗೆಯ ವಿಷಯದಲ್ಲಿ ಬಹಳ ಮಹತ್ವವಾದುದು. ಮನೆ, ಶಾಲೆ ಮತ್ತು ಸುತ್ತಲಿನ ಸಮಾಜಗಳಲ್ಲಿ ಉಳಿದವರೊಡನೆ ಹೇಗೆ ಹೊಂದಿಕೊಂಡು ಹೋಗಬೇಕೆಂಬದನ್ನು ಮಕ್ಕಳು ಕಲಿಯಬೇಕು. ಹೀಗೆ ಹೊಂದಿಕೊಂಡು ಹೋಗುವದಲ್ಲದೆ ಸುತ್ತಲಿನ ಪರಿಸ್ಥಿತಿಯನ್ನು ಸುಧಾರಿಸುವ ವಿಷಯವಾಗಿ ಮಕ್ಕಳಿಗೆ ಉತ್ತೇಜನವನ್ನು ಕೊಡಬೇಕಾಗುತ್ತದೆ. ಆದ್ದರಿಂದ ಇಂದಿನ ಶಿಕ್ಷಣ ಕ್ರಮದಲ್ಲಿ ಅನೇಕ ಚಟುವಟಿಕೆಗಳನ್ನು ಸೇರಿಸಲಾಗಿದೆ. ಇವುಗಳ ಮೂಲಕ ವಿದ್ಯಾರ್ಥಿಗಳಿಗೆ ವರ್ಗಗಳ ಹೊರಗಿರುವ ಸಮಾಜದ ಕಲ್ಪನೆಯುಂಟಾಗುತ್ತವೆ. ಆ ಸಮಾಜಕ್ಕೆ ತಾನು ಸೇವೆ ಸಲ್ಲಿಸಬೇಕೆಂಬ ತಿಳಿವಳಿಕೆಯುಂಟಾಗುತ್ತದೆ. ಹೀಗೆ ಒಟ್ಟು ಶಿಕ್ಷಣ ವಿಚಾರವೇ ವಿಕಾಸವಾಗಿದೆ. ಮಕ್ಕಳಲ್ಲಿ ಹುದುಗಿದ್ದ ಉತ್ಪಾದಕ ಶಕ್ತಿಯನ್ನು ಕಂಡುಹಿಡಿದು ಅದಕ್ಕೆ ಉತ್ತೇಜನ ಕೊಡುವದೇ ಇಂದಿನ ಶಿಕ್ಷಕರ ಮುಖ್ಯ ಹೊಣೆಯಾಗಿದೆ. ತಮ್ಮ ಅನೇಕ ಚಟುವಟಿಕೆಗಳ ಮೂಲಕ ಮಕ್ಕಳು ಸ್ವಾರ್ಥಿಗಳಾಗದಂತೆಯೂ ಪರಹಿತದ ಕಡೆಗೆ ಲಕ್ಷ್ಯ ಕೊಡುವಂತೆಯೂ ಶಿಕ್ಷಕರು ನೋಡಿಕೊಳ್ಳಬೇಕು. ಆದ್ದರಿಂದ ಇಂದು ಶಿಕ್ಷಕನ ಹೊಣೆ ದೊಡ್ಡದಾಗಿದೆ; ಕಠಿಣವೂ ಆಗಿದೆ. ಅವರ ಮಾನಸಿಕ ಮತ್ತು ನೈತಿಕ ಮಟ್ಟವು ಬಹಳ ಎತ್ತರದಲ್ಲಿರಬೇಕಾಗುತ್ತದೆ. ಇಂಥ ಶಿಕ್ಷಕರು ಹೆಚ್ಚಾಗಿ ದೊರೆಯುವದು ದುರ್ಲಭವೆಂಬುದು ನಿಜ. ನಮ್ಮ ದೇಶದ ದುರ್ದೈವವೆಂದರೆ, ತಾವು ಯಾವಾಗಲೂ ಸಾಮೂಹಿಕ (mass scale) ದೃಷ್ಟಿಯಲ್ಲಿಯೇ ವಿಚಾರಿಸುತ್ತೇವೆ. ಎಲ್ಲ ಕ್ಷೇತ್ರಗಳಲ್ಲಿ ಮತ್ತು ಎಲ್ಲ ಬಗೆಯ ಕಾಲೇಜುಗಳಲ್ಲಿ ಒಂದೇ ಬಗೆಯ ಶಿಕ್ಷಣ ಪದ್ಧತಿ ಇರಬೇಕೆಂದು ನಾವು ಅಪೇಕ್ಷಿಸುತ್ತೇವೆ. ಎಲ್ಲ ಶಾಲೆಗಳಲ್ಲಿಯೂ ಎಲ್ಲ ವಿದ್ಯಾರ್ಥಿಗಳಿಗೂ ಒಂದೇ ಬಗೆಯ ಶಿಕ್ಷಣಕ್ರಮ ಅನ್ವಯಿಸುವದೆಂದು ನಮ್ಮ ಭಾವನೆ. ಆದ್ದರಿಂದಲೇ ಮೂಲ ಶಿಕ್ಷಣದಲ್ಲಿ ವಿಶೇಷ ಪ್ರಗತಿಯುಂಟಾಗಿಲ್ಲ. ಅದಕ್ಕಾಗಿ ಖರ್ಚು ಮಾಡಿದ ಹಣಕ್ಕೆ ತಕ್ಕ ಪ್ರತಿಫಲವೂ ದೊರೆತಿಲ್ಲ. ಆದರೂ ನಮ್ಮ ಈ ಟ್ರೇನಿಂಗ ಕಾಲೇಜು ಇಡೀ ಮುಂಬಯಿ ರಾಜ್ಯದಲ್ಲಿಯೇ ಮೂಲ ಶಿಕ್ಷಣದಲ್ಲಿ ಅತ್ಯುತ್ತಮವಾದ ಪರಿಣಾಮಗಳನ್ನು ತೋರಿಸಿದೆ. ಈ ಸಂಸ್ಥೆಯಲ್ಲಿ ಶಿಕ್ಷಕರು ಎರಡು ವರ್ಷ ತರಬೇತಿಹೊಂದಿ ದೈಹಿಕ ಪರಿಶ್ರಮ (ಕಾಯಕ)ದ ಮಹತ್ವವನ್ನೂ ಗೌರವವನ್ನೂ ಅರಿತಿದ್ದಾರೆ. ಸಾಮಾಜಿಕ ಗುಣಧರ್ಮಗಳನ್ನು ಸಂಪಾದಿಸಿದ್ದಾರೆ. ನಾನು ಭಾರತದ ಎಲ್ಲ ಭಾಗಗಳನ್ನೂ ಸಂದರ್ಶಿಸಿದ್ದೇನೆ. ಮೂಲ ಶಿಕ್ಷಣದ ಬಗ್ಗೆ ಧಾರವಾಡದಲ್ಲಿರುವಷ್ಟು ಉತ್ಸಾಹ ಮತ್ತು ಇಲ್ಲಿ ಅದಕ್ಕೆ ಸಿಕ್ಕಿರುವಷ್ಟು ಯಶ ಬೇರೆ ಎಲ್ಲಿಯೂ ಕಂಡು ಬಂದಿಲ್ಲವೆಂದು ತಿಳಿಸಲು ನನಗೆ ಅಭಿಮಾನವೆನಿಸುತ್ತದೆ.

ಕೊನೆಯದಾಗಿ ಈ ಸಂಸ್ಥೆಗೆ ಅಪೂರ್ವವಾದ ಅನುಭವವಿದೆ. ಉಜ್ವಲವಾದ ಇತಿಹಾಸವಿದೆ. ಉತ್ತಮವಾದ ಶೈಕ್ಷಣಿಕ ಪರಂಪರೆಗಳು ಈ ಸಂಸ್ಥೆಯಲ್ಲಿ ಬೆಳೆದು ಬಂದಿವೆ. ಶಿಕ್ಷಣದ ಖಾತೆಯೇ ಅಭಿಮಾನಪಡುವಂಥ ಪ್ರಿನ್ಸಿಪಾಲರು ಇಲ್ಲಿ ಆಗಿಹೋಗಿದ್ದಾರೆ. ನಮ್ಮ ಮೈಸೂರು ರಾಜ್ಯದ ಶಿಕ್ಷಣ ಖಾತೆಯವರು ಇದನ್ನು ಒಂದು ಆದರ್ಶ ಸಂಸ್ಥೆಯನ್ನಾಗಿ ಪರಿಗಣಿಸಿ ಯಾವದೇ ಹೊಸ ಶೈಕ್ಷಣಿಕ ಪ್ರಯೋಗಗಳನ್ನು ಈ ಸಂಸ್ಥೆಗೆ ನಿರ್ಭಯವಾಗಿ ಒಪ್ಪಿಸು

ವರೆಂದು ಆಶಿಸುತ್ತೇನೆ. ಇಲ್ಲಿಯ ಪ್ರಿನ್ಸಿಪಾಲರೂ ಶಿಕ್ಷಕರೂ ಶಿಕ್ಷಣದ ತಾತ್ವಿಕ ಹಾಗು ಪ್ರಾಯೋಗಿಕ ಹೊಸ ವಿಚಾರಗಳನ್ನು ಅತ್ಯಂತ ಯಶಸ್ವಿಯಾಗಿ ಮುಂದುವರಿಸುವರೆಂದು ನಂಬಲಿಕ್ಕೆ ಯಾವ ಅಡ್ಡಿಯೂ ಇಲ್ಲ. ಈ ಸಂಸ್ಥೆಗೆ ಉಜ್ವಲವಾದ ಇತಿಹಾಸವಿದ್ದಂತೆ ಅತಿ ಉಜ್ವಲವಾದ ಭವಿಷತ್ತು ಪ್ರಾಪ್ತವಾಗಲೆಂದು ಹಾರೈಸುತ್ತೇನೆ.

ಶ್ರೀ ಎಸ್. ಪಿ. ಪಾಟೀಲ, ಪ್ರಿನ್ಸಿಪಾಲ ಗ. ಮ. ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ ಅವರು

ಜೀವನ ಶಿಕ್ಷಣ ಸಮ್ಮೇಲನದಲ್ಲಿ ಮಾಡಿದ

ಸ್ವಾಗತ ಭಾಷಣ

ಮಾನ್ಯ ಅಧ್ಯಕ್ಷರೆ, ಪ್ರತಿನಿಧಿಗಳೇ, ಮಹನೀಯರೇ
ಹಾಗೂ ಮಹಿಳೆಯರೆ,

ನಮ್ಮ ಸಂಸ್ಥೆಯ ಶತಾಬ್ದಿ ಸಮಾರಂಭದ ಮುಖ್ಯ ಅಂಗವಾಗಿರುವ ಈ ಜೀವನ ಶಿಕ್ಷಣ ಸಮ್ಮೇಲನಕ್ಕೆ ತಮ್ಮೆಲ್ಲರನ್ನು ಸಂಸ್ಥೆಯ ಪರವಾಗಿಯೂ ಸಮಿತಿಯ ಪರವಾಗಿಯೂ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ತಾವೆಲ್ಲರೂ ಇಷ್ಟು ಅಧಿಕ ಸಂಖ್ಯೆಯಲ್ಲಿ ಈ ಶತಾಬ್ದಿ ಸಮಾರಂಭಕ್ಕೆ ಬರಬಹುದೆಂದು ನಿರೀಕ್ಷಿಸಿ ಇದರ ಲಾಭವನ್ನು ಜೀವನ ಶಿಕ್ಷಣದ ಮುನ್ನಡೆಯ ಬಗೆಗೆ ಉಪಯೋಗಿಸಬೇಕೆಂದು ಮಾಡಿದ ನಮ್ಮ ಮೇಲಧಿಕಾರಿಗಳ ಸೂಚನೆಯನ್ನು ನಮ್ಮ ಸಮಿತಿಯವರು ಒಪ್ಪಿ, ಈ ಪ್ರಸಂಗವನ್ನು ಕಲ್ಪಿಸಿಕೊಳ್ಳಬೇಕಾಯಿತು. ಹೀಗೆ ಮಾಡುವದರಿಂದ ಸರಕಾರದವರು ಆಗಾಗ್ಗೆ ಜೀವನ ಶಿಕ್ಷಣ ಸಮ್ಮೇಲನ ಹಾಗೂ ಪ್ರದರ್ಶನಗಳನ್ನು ಏರ್ಪಡಿಸುವ ಉಪಯುಕ್ತವಾದ ಧೋರಣೆಯನ್ನೇ ನಾವೂ ಸಹ ಮುಂದುವರಿಸುವೆವೆಂಬ ಸಮಾಧಾನದಿಂದಲೂ ಸಂತೋಷದಿಂದಲೂ ಈ ಕಾರ್ಯಕ್ರಮವನ್ನು ಉತ್ಸಾಹದಿಂದ ಕೈಕೊಂಡೆವು. ಮೇಲಾಗಿ ಉತ್ತರ ಕರ್ನಾಟಕದಲ್ಲಿ ಧಾರವಾಡ, ಅದರಲ್ಲಿಯೂ ನಮ್ಮ ಟ್ರೇನಿಂಗ ಕಾಲೇಜು ಜೀವನ ಶಿಕ್ಷಣ ಪ್ರಗತಿಗೆ ಮೂಲಾಧಾರವಾಗಿರುವದರಿಂದ ಇಂದಿನ ಸಮ್ಮೇಲನವೂ ಪ್ರದರ್ಶನವೂ ಇಲ್ಲಿಯೇ ಜರುಗುವದರಲ್ಲಿ ತುಂಬಾ ಔಚಿತ್ಯವುಂಟು.

ಶಿಕ್ಷಣವನ್ನು ಪರಿಣಾಮಕರವಾಗಿ ಮಾಡುವ ಸಾಧನಗಳಲ್ಲಿ ಪ್ರದರ್ಶನವು ಒಳ್ಳೇ ಮಹತ್ವದ್ದೆಂದು ತಮ್ಮೆಲ್ಲರಿಗೂ ಗೊತ್ತುಂಟು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವ್ಯಾಪಾರೀ ದೃಷ್ಟಿಯಿಂದಲೂ ಮನರಂಜನೆಯ ದೃಷ್ಟಿಯಿಂದಲೂ ಸಂಘಟಿಸಲ್ಪಟ್ಟ ಪ್ರದರ್ಶನಗಳು ಬೇರೆ. ಮಾನ್ಯ ಅಧ್ಯಕ್ಷರಿಂತ ಈದೀಗ ತೆರೆಯಲ್ಪಟ್ಟ ಜೀವನ ಶಿಕ್ಷಣದ ಪ್ರದರ್ಶನವೂ ಬೇರೆ. ಇಂಥ ಪ್ರದರ್ಶನಗಳನ್ನು ಏರ್ಪಡಿಸುವ ಉದ್ದೇಶಗಳಲ್ಲಿ ಜೀವನ ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಬಗೆಗೆ ಜನ ಸಾಮಾನ್ಯರಿಗೂ ಪರಿಚಯ ಮಾಡಿಕೊಡುವದೂ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಬೇರೆ ಬೇರೆ ಸಂಸ್ಥೆಗಳಲ್ಲಿ ನಡೆಯುತ್ತಿರುವ ಜೀವನ ಶಿಕ್ಷಣ ಪ್ರಯೋಗದ ಬಗೆಗೆ ಹೆಚ್ಚಿನ ಜ್ಞಾನವನ್ನು ಮಾಡಿಕೊಡುವದೂ ಆಗಿವೆ. ಜೀನವ ಶಿಕ್ಷಣ ಸಂಸ್ಥೆಗಳಲ್ಲಿ ಸಿದ್ಧವಾದ ವಸ್ತುಗಳನ್ನು ಇಂಥ ಪ್ರದರ್ಶನಗಳಲ್ಲಿ ನೋಡುವದರಿಂದ ವೈಯಕ್ತಿಕವಾಗಿಯೂ ಸಾಮೂಹಿಕವಾಗಿಯೂ ಅಂಥ ವಸ್ತುಗಳನ್ನು ಹುಟ್ಟಿಸುವ ಕಲೆ, ಶಿಕ್ಷಣ ಪದ್ಧತಿ ಹಾಗೂ ಉತ್ಪಾದಕ ಶಕ್ತಿಗಳ ಬಗೆಗೆ ನಮಗೆ ಸ್ಪಷ್ಟ ತಿಳುವಳಿಕೆಯಾಗುವದು. ಜೀವನ ಶಿಕ್ಷಣ ಪ್ರದರ್ಶನದ ಜೊತೆಗೆ ಅದರ ತಾತ್ವಿಕತೆಯ ಬಗೆಗೂ ವಿಚಾರಗೋಷ್ಠಿಯನ್ನೂ ನಾವು ಏರ್ಪಡಿಸಿದ್ದೇವೆ. ಈ ನಮ್ಮ ಯೋಜನೆಯ ಹಿನ್ನೆಲೆಯಲ್ಲಿ ನಾವು ಒಂದು ಮಹತ್ವವಾದ ಉದ್ದೇಶವನ್ನು ಮುಂದಿಟ್ಟುಕೊಂಡಿದ್ದೇವೆ. ಈ ವಿಚಾರಗೋಷ್ಠಿಯನ್ನು ಏರ್ಪಡಿಸಿರುವದರಿಂದ ಜೀವನ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಹೊಸ ಹುರುಪಿನ ತರುಣರಿಗೂ ಅನುಭವಿಕ ಹಿರಿಯರಿಗೂ ಒಂದೆಡೆಗೆ ಕೂಡಲು ಅನುಕೂಲವಾಗುವದು.

ಒಂದೇ ಕಾಯಕದಲ್ಲಿ ನಿರತರಾದ ವ್ಯಕ್ತಿ ಹಾಗೂ ಸಂಸ್ಥೆಗಳಲ್ಲಿ ನಿಕಟವಾದ ಪರಿಚಯವಾಗುವದರಿಂದ ನಮ್ಮೆಲ್ಲರಿಗೆ ಸಾಮಾನ್ಯವಾದ ಉದ್ದೇಶವು ಸುಲಭವಾಗಿ ಸಾಧಿಸುವದು. ಇಂಥ ವಿಚಾರಗೋಷ್ಠಿಯಲ್ಲಿ ತಜ್ಞರೂ ಅನುಭವಿಕರೂ ತಮ್ಮ ತಮ್ಮ ವಿಚಾರಗಳನ್ನು ಈ ಕ್ಷೇತ್ರದಲ್ಲಿ ದುಡಿಯುವವರ ಮುಂದೆ ಇಡಲು ಅವಕಾಶ ಉಂಟಾಗಿ

ಜೀವನಶಿಕ್ಷಣ ಪ್ರಯೋಗದ ಬಗೆಗೆ ನಮಗೆ ಹೆಚ್ಚು ಬೆಳಕು ಬಿದ್ದು ನಮ್ಮ ದಾರಿಯು ಸುಗಮವಾಗುವದು. ಈ ಪ್ರಕಾರ ಜೀವನ ಶಿಕ್ಷಣ ಪ್ರದರ್ಶನದಿಂದ ಪ್ರತ್ಯಕ್ಷ ಕಾರ್ಯಾನುಭವ ಜೀವನ ಶಿಕ್ಷಣ ವಿಚಾರ ಗೋಷ್ಠಿಯಿಂದ ಅದರ ತಾತ್ವಿಕ ಹಿನ್ನೆಲೆಯ ಬಗೆಗೆ ಜ್ಞಾನ. ಈ ಕ್ರಿಯಾ ಜ್ಞಾನಗಳ ಕೂಟವನ್ನೇರ್ಪಡಿಸುವದು ನಮ್ಮ ಗುರಿಯಾಗಿತ್ತು. ಇದನ್ನು ನಿಮ್ಮೆಲ್ಲರ ಸಹಾಯ ಸಹಕಾರದಿಂದಲೂ ಮೇಲಧಿಕಾರಿಗಳ ಮಾರ್ಗದರ್ಶನದಿಂದಲೂ ನಾವು ಸಾಧಿಸಿದ್ದೇವೆಂದು ಸಂತೋಷದಿಂದಲೂ ವಿನಯಪೂರ್ವಕವಾಗಿಯೂ ತಮಗೆ ತಿಳಿಸಬಯಸುತ್ತೇನೆ. ಸಮಾರಂಭದ ಮುಖ್ಯ ಅಂಗವಾದ ಜೀವನ ಶಿಕ್ಷಣದ ಪ್ರದರ್ಶನವನ್ನು ಉದ್ಘಾಟಿಸಲೂ ಜೀವನ ಶಿಕ್ಷಣದ ವಿಚಾರಗೋಷ್ಠಿಯಲ್ಲಿ ಹಿರಿಯತನವನ್ನು ವಹಿಸಲೂ ಒಪ್ಪಿ ನಮ್ಮ ಸಂಸ್ಥೆಗೆ ಬಂದ ಮಾನ್ಯ ಶ್ರೀ ಹುಕ್ಕೇರಿಕರ ರಾಮರಾಯರನ್ನು ನಮ್ಮ ಸಮಿತಿಯ ಪರವಾಗಿ ಆಗಲೇ ಸ್ವಾಗತಿಸಿದ್ದೇನೆ. ಅವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲೊಪ್ಪಿ ನಮ್ಮ ಕಾರ್ಯಕ್ರಮಗಳಿಗೆ ಹೆಚ್ಚಿನ ಶೋಭೆಯನ್ನು ತಂದಿದ್ದಾರೆ. ಇದೆಲ್ಲಕ್ಕೂ ನಮ್ಮ ಸಮಿತಿಯವರು ಅವರಿಗೆ ತುಂಬಾ ಋಣಿಯಾಗಿದ್ದಾರೆ.

ಶ್ರೀ ಹುಕ್ಕೇರಿಕರರು ಕನ್ನಡಿಗರಿಗೆ ಅಪರಿಚಿತರಲ್ಲ. ಯಾಕೆಂದರೆ ಅವರು ಶಿಕ್ಷಣ ಕ್ಷೇತ್ರದಲ್ಲಿಯೂ ರಾಜಕಾರಣದಲ್ಲಿಯೂ ಈ ವರೆಗೂ ಹಿರಿಯ ಪಾತ್ರವನ್ನು ವಹಿಸುತ್ತಾ ಬಂದಿದ್ದಾರೆ. ವಿಶ್ವವಿದ್ಯಾಲಯದ ಉನ್ನತ ಪರೀಕ್ಷೆಯಲ್ಲಿ ಪಾಸಾಗಿ ಅನೇಕ ವರುಷಗಳ ವರೆಗೆ ಶಿಕ್ಷಕರಾಗಿ ಸೇವೆ ಮಾಡಿದರು. ಶಿಕ್ಷಕರಿದ್ದಾಗ ಶಿಕ್ಷಣ ಹಾಗೂ ಸಾಹಿತ್ಯಗಳ ಪ್ರಸಾರವೇ ಇವರ ಮುಖ್ಯ ಗುರಿಯಾಗಿತ್ತು. ಬರಬರುತ್ತ ಪತ್ರಿಕೋದ್ಯಮದಲ್ಲಿಯೂ ತೊಡಗಿದರು. ಆ ಮೇಲೆ ರಾಷ್ಟ್ರದ ಕರೆ ಬಂದಾಗ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಅದ್ಭುತ ಕಷ್ಟ-ನಷ್ಟಗಳನ್ನು ಸಹಿಸುವ ಸ್ವಾರ್ಥತ್ಯಾಗ ಮಾಡಿದರು. ಸ್ವಾತಂತ್ರ್ಯ ದೊರೆತ ನಂತರ ಹಿರಿಯ ಸ್ಥಾನಗಳು ಇವರನ್ನು ಬೆನ್ನುಹತ್ತಿದವು. ಮುಂಬೈರಾಜ್ಯ ಪರಿಷತ್ತಿನ ಅಧ್ಯಕ್ಷರಾಗಿ ತಮ್ಮ ಅನುಭವ ಸಾಹಿತ್ಯ ಪ್ರೇಮ, ಸಂಘಟನಾ ಶಕ್ತಿ, ಇವೆಲ್ಲವುಗಳ ಲಾಭವನ್ನು ತಮ್ಮೆಲ್ಲರಿಗೆ ನೀಡಿದ್ದಾರೆ. ಅವರಿಂದ ನಡೆದ ಇತ್ತೀಚಿನ ಶೈಕ್ಷಣಿಕ ಚಟುವಟಿಕೆಗಳು ಎಲ್ಲರಿಗೂ ಗೊತ್ತಿದ್ದ ಸಂಗತಿಗಳಾಗಿವೆ. ಧಾರವಾಡದಿಂದ ಹುಬ್ಬಳ್ಳಿಗೆ ಹೋಗುವಾಗ ಮೈಲಾರ ಗುಡ್ಡದ ಸುತ್ತಲೂ ಹಬ್ಬಿರುವ ಶಿಕ್ಷಣ ವಸಾಹತು ಇವರ ಕಾರ್ಯ ಕ್ಷೇತ್ರವಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದ ಕೆಳಗೆ ಅನೇಕ ಉನ್ನತ ಶಿಕ್ಷಣ ಸಂಸ್ಥೆಗಳನ್ನು ಕಟ್ಟುತ್ತಿದ್ದಾರೆ. ಈ ಪ್ರಕಾರ ಕನ್ನಡ ನಾಡ-ನುಡಿಗಳ ಸೇವೆ ಮಾಡುತ್ತಿರುವರಲ್ಲದೆ ರಾಷ್ಟ್ರೀಯ ಚಟುವಟಿಕೆಗಳಾದ ಖಾದಿ ಹಾಗೂ ಗ್ರಾಮೋದ್ಯೋಗಗಳ ಪ್ರಸಾರ ಮತ್ತು ಪ್ರಗತಿಗೆ ಹಗಲಿರುಳೂ ಶ್ರಮಿಸುತ್ತಿದ್ದಾರೆ.

ಶ್ರೀ ಹುಕ್ಕೇರಿಕರರು ಒಬ್ಬ ವ್ಯಕ್ತಿಗಳಾಗಿದ್ದರೂ ಹಿರಿಯ ಸಂಸ್ಥೆಗಳನ್ನು ಸಂಘಟಿಸುವ ಮಹಾ ಶಕ್ತಿಯನ್ನು ಪಡೆದವರಾಗಿದ್ದಾರೆ. ರಾಷ್ಟ್ರದ ಪ್ರಗತಿಗೆ ಹೊರಬರುವ ಹೊಸ ವಿಚಾರಗಳು ಇವರನ್ನು ಅಂಟಿಕೊಳ್ಳದೇ ಬಿಡುವದಿಲ್ಲ. ಜೀವನ ಶಿಕ್ಷಣದಲ್ಲಿ ಇವರು ಒಳ್ಳೇ ಆಸ್ಥೆಯನ್ನು ವಹಿಸಿದ್ದಾರೆ. ಅದರ ಪ್ರಯೋಗದ ಬಗೆಗೆ ಆಸಕ್ತಿಯನ್ನೂ ತೋರಿಸಿದ್ದಾರೆ. ನಾಡಿನ ಹಿರಿಯರು ಜೀವನ ಶಿಕ್ಷಣದ ಬಗೆಗೆ ಈ ಪ್ರಕಾರ ಸಹಾನುಭೂತಿಯನ್ನು ತೋರಿಸಿದ್ದಾರೆ. ಅದರ ಭವಿಷ್ಯತ್ತು ಉಜ್ವಲವಾಗುವದರಲ್ಲಿ ಯಾವ ಸಂಶಯವೂ ಇಲ್ಲ. ವಿಚಾರಗೋಷ್ಠಿಯಲ್ಲಿ ಭಾಗವಹಿಸಿ ನಮಗೆ ಸಹಾಯ ಮಾಡಲು ಆಗಮಿಸಿದ ಶ್ರೀ ತೇರಗಾಂವಕರ, ಶ್ರೀ ತಟ್ಟಿ, ಶ್ರೀ ಕೊಪ್ಪಿಕರ, ಪ್ರೊ. ರೋಹಿಡೇಕರ, ಪ್ರೊ. ನಾಯಿಕ, ಪ್ರೊ. ಹಂದ್ರಾಳ ಹಾಗೂ ಶ್ರೀ ಉಣಕಲ್ಲ ಈ ಮಹನೀಯರೆಲ್ಲರಿಗೂ ನಮ್ಮ ಸಮಿತಿಯ ಪರವಾಗಿ ಹಾರ್ದಿಕ ವಂದನೆಗಳು. ನಮ್ಮ ನಾಡಿನ ಹಿರಿಯರಲ್ಲೊಬ್ಬರೂ, ಅನುಭವಿಕ ಶಿಕ್ಷಕರೂ, ನುರಿತ ರಾಜಕಾರಣಿಗಳೂ ಆದ ಶ್ರೀ ಹುಕ್ಕೇರಿಕರ ರಾಮರಾಯರು ನಮ್ಮ ಕಾಲೇಜದ ಶತಾಬ್ದಿ ಸಮಾರಂಭದ ಮುಖ್ಯಾಂಗವಾದ ಜೀವನ ಶಿಕ್ಷಣದ ಭಾಗಕ್ಕೆ ಹಿರಿಯರಾಗಿಯೂ ಜೀವನ ಶಿಕ್ಷಣದಲ್ಲಿ ನುರಿತ ಮಹನೀಯರೂ ಭಾಷಣಕಾರರಾಗಿಯೂ ದೊರೆತಿದ್ದುದು ನಮ್ಮ ಭಾಗ್ಯವೆಂದು ಹೇಳಿ ಈ ನಾಲ್ಕು ಪ್ರಾಸ್ತಾವಿಕ ಮಾತುಗಳನ್ನು ಮುಗಿಸುತ್ತೇನೆ.

ಜೈ-ಹಿಂದ

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ಸುವರ್ಣ ಸಂಧಿ! **ಸಚಿತ್ರ ಗ್ರಂಥ !!** **ಸುಂದರ ಮುದ್ರಣ !!!**

“ ಶಿಕ್ಷಣ-ಶಿಕ್ಷಕ-ದರ್ಶನ”

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮ ತಣಿಸುವಂಥ, ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ **ಶಿಕ್ಷಣಾಧಿಕಾರಿಗಳಿಂದ**, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ **ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ**, ಕರ್ನಾಟ **ವಿಶ್ವವಿದ್ಯಾಲಯದ** ಉಪ ಕುಲಪತಿಗಳಾದ ರ್‍ಯಾಂಗ್ಲರ್ **ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ** ಬರೆದಂಥ **ಅಮೋಘ** ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯ **ಬಣ್ಣ** ಬಣ್ಣಗಳಲ್ಲಿ ೪೧ ಫೋಟೋ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ **ಪುಟಗಳ ಅಮರ ಸಾಹಿತ್ಯ** ಗ್ರಂಥ **ಕನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.**

ದಿ. ೧೫ ಆಗಸ್ಟ ೫೭ ಸ್ವಾತಂತ್ರ್ಯ ದಿನದಂದು **ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ** ಅಧ್ಯಕ್ಷ **ಯಲ್ಲಿ ಪ್ರೊ.** ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ **ಕೊಡಿರಿ.**

ಸಾದಾ ಪ್ರತಿ ೩ ರೂ.] ವ್ಯಾಪಾರಸ್ಥರಿಗೆ ಧಾರಾಳವಾದ **ಕಮೀಷನ್.** [**ಸುಂದರ ಪ್ರತಿ** ೪ ರೂ.

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಹಾ:— ವಿಜಾಪುರ.

ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರನಾಥ ಜೋಶಿ ಅವರು.** ತಮ್ಮ ಆಳವಾ **ಅನುಭವದಿಂದ** ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ **ಹೋಲಿಸಿ** ಸುಲಭ ಭಾಷೆಯಲ್ಲಿ ಸರ್ವರಿಗೂ **ತಿಳಿಯುವಂತೆ** ಬರೆದಿದ್ದಾ **ಇದರಲ್ಲಿ** ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ **ಕನ್ನಡದಿಂದ** ಹಿಂದಿಗ **ಭಾಷಾಂತರ** ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭವಾ **ಹಿಂದಿಯನ್ನೂ** ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, ಪ್ರಿನ್ಸಿಪಾ **ವ್ಹಿ. ಕೆ. ಗೋಕಾಕ ಅವರು ಸ್ವಾಗತಿಸಿದ್ದಾರೆ.** ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿಯಿ **ಒಂದುನೂರಾ** ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಸನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

PATIL WORKS

(೩) ಪೂಜ್ಯ ಬಂಥನಾಳ ಶಿವಯೋಗಿಗಳು ಭಾಷಣ ಮಾಡುತ್ತಿರುವರು.

(೪) ರ್‍ಯಾಂಗ್ಲರ ಪಾವಟೆಯವರು ಅಧ್ಯಕ್ಷೀಯ ಭಾಷಣ ಮಾಡುತ್ತಿರುವರು.

Regd. No. B. 53

ಗಂ. ಸ. ಟ್ರೇ. ಕಾಲೇಜದ ಶತಾಬ್ದಿ ಸಮಾರಂಭದ ಹಾಗು ಒಕ್ಕಲುತನದ ಚಟುವಟಿಕೆಗಳ ದೃಶ್ಯಗಳು.

Printed by Shri S. F. Kattimani, at Manohar Power Printing Press, Hubli. Edited
ublished by Sits. S. P. Patil [illegible] askar at the Kann

ಜೀವನ ಶಿಕ್ಷಣ

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ



ಪೈಗಂಬರವಾಸಿ ಮೌಲಾನಾ ಅಬುಲ್ ಕಲಮ್ ಆಜಾದ

ಪ್ರತಿ ೬ ಆಣೆ ಮಾರ್ಚ ೧೯೫೮ ವಾ. ಚಂ. ೪ ರೂ.

Regd. No. B. 53

ಗಂ. ಸ. ಪ್ರೇ. ಕಾಲೇಜದ ಶತಾಬ್ದಿ ಸಮಾರಂಭದ ಹಾಗು ಒಕ್ಕಲುತನದ ಚಟುವಟಿಕೆಗಳ ದೃಶ್ಯಗಳು.

Printed by Shri S. F. Kattimani, at Manohar Power Printing Press, Hubli. Edited a
Published by Sits S. P. Patil, B. M. Sa tri, S. R. Tatti & Smti. P. A. Bhaskar, at the F

ಜೀ ಶಿಕ್ಷಣ

ಪ್ರಧಾನ ಸಂಪಾದಕರ : ಶ್ರೀ ಎಸ್. ಪಿ. ಪಾಟೀಲ



ಪೈಗಂಬರವಾಸಿ ಮೌಲಾನಾ ಅಬುಲ್ ಕಲಮ್ ಆಜಾದ

ಪ್ರತಿ ೬ ಆಣೆ ಮಾರ್ಚ ೧೯೫೮ ವಾ. ಚಂ. ೪ ರೂ

ಪ್ರಿನ್ಸಿಪಾಲರೊಡನೆ ಚರ್ಚಿಸುತ್ತಿರುವದು.

ವೇ. ಶಿವಮೂರ್ತಿ ಶಾಸ್ತ್ರಿಗಳು ಟ್ರೇನಿಂಗ ಕಾಲೇಜದ ಸ್ಮಾರಕ ಸಂಪುಟದ ಪ್ರಕಟನೆಯ ಕಾಲಕ್ಕೆ ಭಾಷಣ ಮಾಡುತ್ತಿರುವರು.

ಜೀವನ ಶಿಕ್ಷಣ

— ಸಂಪಾದಕ ಮಂಡಲ —

ಸಂಚಾಲಕರು : ಶ್ರೀ ಜಿ. ಕೆ. ಕೊಪ್ಪಿಕರ, ಬಿ.ಎ.(ಆನರ್ಸ), ಬಿ.ಎಸ್‌ಸಿ., ಎಮ್.ಇಡಿ.
ಎಜ್ಯುಕೇಶನಲ್ ಇನಸ್ಪೆಕ್ಟರ, ಧಾರವಾಡ.

ಪ್ರಧಾನ ಸಂಪಾದಕರು : ಶ್ರೀ ಎಸ್. ಪಿ. ಪಾಟೀಲ, ಬಿ.ಎ., ಬಿ.ಟಿ., ಡಿ.ಪಿ.ಇಡಿ.,
ಪ್ರಿನ್ಸಿಪಾಲ, ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

— ಸದಸ್ಯರು —

ಶ್ರೀಮತಿ ಪಿ. ಎ. ಭಾಸ್ಕರ, ಲೇಡಿ ಸುಪರಿಂಟೆಂಡೆಂಟ, ಹೆಣ್ಣು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ, ಧಾರವಾಡ.

ಶ್ರೀ ಬಿ. ಎಂ. ಶಿಂತ್ರಿ, ಬಿ.ಎ.,ಬಿ.ಟಿ., ನಿವೃತ್ತ ಅಸಿಸ್ಟಂಟ ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣ ಭಾಗದ
(ಮುಂಬಯಿ ಕರ್ನಾಟಕ) ಹಾಗು ಗೌ. ಕಾರ್ಯದರ್ಶಿ ಮತ್ತು ಲಾಯಬ್ರೇರಿಯನ್,
ಸಾಹಿತ್ಯ ಸಮಿತಿ ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ.

ಶ್ರೀ ಎಸ್. ಆರ್. ತಟ್ಟಿ, ರಿಟಾಯರ್ಡ ಪ್ರಿನ್ಸಿಪಾಲ, ಪ್ರಾಥಮಿಕ ಶಿಕ್ಷಕರ ಟ್ರೇನಿಂಗ ಕಾಲೇಜ, ನವಲಗುಂದ.

ಸಂಪುಟ ೯೩ ಮಾರ್ಚ, ೧೯೫೮ ಸಂಚಿಕೆ ೧೦

— ಪರಿವಿಡಿ —

೧ ಸಂಪಾದಕೀಯ ೨
೨ ಜೀವನ ಶಿಕ್ಷಣವು ತಾಂತ್ರಿಕ ಶಿಕ್ಷಣಕ್ಕೆ ಅನುಕೂಲವಾಗಿದೆ ಶ್ರೀ ರೋಹಿಡೆಕರ ಇವರ ಭಾಷಣ ೩
೩ ಮೂಲಶಿಕ್ಷಣ ನೆಲೆಸಲು ಬಂದಿದೆ ಶ್ರೀ ಮ. ಗು. ಹಂದ್ರಾಳ ,, ೫
೪ ದ್ವಿತೀಯ ಪಂಚವಾರ್ಷಿಕ ಯೋಜನೆಯ ಸಾಧನೆಯಲ್ಲಿ ಜೀವನಶಿಕ್ಷಣ ಶಾಲೆಗಳಪಾತ್ರ ಶ್ರೀ ಮಾನೇಶ್ವರ ನಾಯಕ ,, ೯
೫ ಜೀವನಶಿಕ್ಷಣ ಶಾಲೆಗಳ ಶಿಕ್ಷಕರಿಂದ ಅಪೇಕ್ಷಿಸುವುದೇನು? ಶ್ರೀ ಎಫ್. ಸಿ. ಉಣಕಲ್ ,, ೧೪
೬ ಜೀವನ ಶಿಕ್ಷಣದ ಕೆಲ ವಿಷಯಗಳ ವಿಮರ್ಶೆ ಶ್ರೀ ತಟ್ಟಿ ಶಾಮರಾಯರು ,, ೧೭
೭ ಜೀವನ ಶಿಕ್ಷಣದಲ್ಲಿ ಮಾರ್ಪಾಡು ಅಗತ್ಯವೇ? ಪ್ರಿ. ಕೆ. ಬಿ. ತೇರಗಾಂವಕರ ,, ೨೦
೮ ತೈಲ ಚಿತ್ರಗಳ ಅನಾವರಣ ಭಾಷಣ ಶ್ರೀ ಆಲೂರ ವೆಂಕಟರಾಯರು ,, ೨೧
೯ ಟ್ರೇನಿಂಗ ಕಾಲೇಜದ ಸ್ಮಾರಕ ಸಂಪುಟದ ಪ್ರಕಟನಾ ಸಮಾರಂಭದ ಸ್ವಾಗತ ಭಾಷಣ ಶ್ರೀ ಬ. ಮ. ಶಿಂತ್ರಿ ,, ೨೫
೧೦ ಪತ್ರಗಳು ೨೭

ಸಂಪಾದಕೀಯ

ಜ್ಞಾನ ಜ್ಯೋತಿಯು ನಂದಿತು

ಕಳೆದ ತಿಂಗಳ ದಿನಾಂಕ ೨೧ರಂದು ಮೌಲಾನಾ ಅಬುಲ್ ಕಲಮ್ ಅಝಾದರ ಆರೋಗ್ಯವು ಚಿಂತಾಜನಕ ಸ್ಥಿತಿಯಲ್ಲಿದೆಯೆಂದು ಅಂದಿನ ವರ್ತಮಾನ ಪತ್ರಗಳಿಂದ ತಿಳಿದ ನಾಡಿನ ಮುಖಂಡರು ಚಿಂತೆ-ಭಯಗಳಿಂದ ಕದಡಿದ ಮನಸ್ಸುಳ್ಳವರಾಗಿ ಮಲಗಿದ ಕೆಲವು ಗಂಟೆಗಳಲ್ಲಿಯೆ, ಭಾರತ ಮಾತೆಗೆ ಮತ್ತೊಂದು ಬಲವಾದ ಪೆಟ್ಟು ಬಿತ್ತು. ಮರುದಿನ, ರಾಷ್ಟ್ರದ ನಾನಾ ಭಾಗಗಳ ಮುಖಂಡರು ಮೌಲಾನಾ ಸಾಹೇಬರ ಅಂತ್ಯದರ್ಶನಕ್ಕಾಗಿ ದಿಲ್ಲಿಗೆ ಹೋದರು. ಮೌಲಾನಾ ಸಾಹೇಬರ ನಿಧನವು ಆಕಸ್ಮಿಕವೆಂದೇ ಹೇಳಬಹುದು. ಯಾಕೆಂದರೆ ಅವರ ಅಜಾರಿಯು ಕೇವಲ ೩-೪ ದಿನಗಳ ಹಿಂದೆಯೇ ಪ್ರಾರಂಭವಾಗಿದ್ದು ಅವರು ತಮ್ಮ ವಯಸ್ಸಿನ ೭೦ರ ಮನೆಯನ್ನು ಇನ್ನೂ ದಾಟಿರಲಿಲ್ಲ. ಅವರ ನಿಧನದಿಂದ ಭಾರತ ಮಾತೆಯು ಮತ್ತೊಬ್ಬ ಶ್ರೇಷ್ಠ ಪುತ್ರನನ್ನು ಕಳೆದುಕೊಂಡು ಅತೀವ ದುಃಖಕ್ಕೊಳಗಾದಳು. ಮಾತೆಯ ಜೊತೆಗೆ ಮಕ್ಕಳೂ ಶೋಕ ಸಾಗರದಲ್ಲಿ ಮುಳುಗಿದರು. ಪೈಗಂಬರವಾಸಿಯಾದ ಮೌಲಾನಾ ಸಾಹೇಬರು ಅರ್ಧ ಶತಮಾನದ ದೀರ್ಘಾವಧಿ ಕಾಲದಲ್ಲಿ ಭಾರತಕ್ಕೆ ಸಲ್ಲಿಸಿದ ಸೇವೆಯನ್ನು ಯಾವ ಭಾರತೀಯನೂ ಮರೆಯಲಾರನು. ಚಿಕ್ಕಂದಿನಲ್ಲಿಯೇ ಸುದೀರ್ಘ ವಿಚಾರದ ನಂತರ ಅಂಗೀಕರಿಸಿದ ತತ್ವಗಳಿಗೆ ಅಂಟಿಕೊಂಡು ಅವುಗಳನ್ನೇ ಹಿಂಬಾಲಿಸಿ ಕಷ್ಟ-ಕಾರ್ಪಣ್ಯಗಳನ್ನು ಸಹಿಸಿದ ಕೆಲವೇ ಭಾರತೀಯರಲ್ಲಿ ಆಝಾದರು ಅಗ್ರಗಣ್ಯರು. ಬೆಂಕಿಯು ಹೆಚ್ಚಾದಂತೆ, ಬಂಗಾರದ ಹೊಳಪು ಹೆಚ್ಚಾಗುತ್ತಿರುವಂತೆ ಅವರು ಎದುರಿಸಿದ ಕಷ್ಟಗಳಿಂದ ಅವರ ಜೀವನದ ತೇಜಸ್ಸು ಓಜಸ್ಸುಗಳು ಮತ್ತಿಷ್ಟು ಮಿಗಿಲಾದವು. ಅವರ "ಅಲ್ ಅಝಾದ" ಪತ್ರಿಕೆಯಲ್ಲಿ ಅವರ ತೀಕ್ಷ್ಣವಾದ ಲೇಖಣಿಯಿಂದ ಹೊರಹೊಮ್ಮಿದ ಲೇಖಗಳಿಂದ ಆಗಿನ ಆಳರಸರ ವಿರುದ್ಧ ಭಾರತ ಹಾಗೂ ಅರಬಸ್ತಾನಗಳ ಮೇಲೆ ಆದ ಅದ್ಭುತ ಪರಿಣಾಮವನ್ನು ಮರೆಯುವವರಾರು ? ಧಾರ್ಮಿಕ ಸಾಂಪ್ರದಾಯಗಳಿಂದ ತುಂಬಿದ ಮನೆತನದಲ್ಲಿ ಹುಟ್ಟಿದ ಈ ಶ್ರೇಷ್ಠ ಬರೆಹಗಾರನೇ ಬ್ರಿಟಿಶರ ಅಸ್ತಿತ್ವದ ಅಡಿಗಲ್ಲನ್ನೇ ಸಡಿಲಿಸುವ ಲೇಖನಗಳನ್ನು ಬರೆಯುತ್ತಿದ್ದನೆಂದು ಬ್ರಿಟಿಶರಿಗೆ ಎಷ್ಟೋ ಕಾಲ ಗೊತ್ತಿರಲಿಲ್ಲ. ಒಮ್ಮೆ ಗೊತ್ತಾದನಂತರ ಅವರನ್ನು ಹಣ್ಣಿಗೆ ತರುವ ಕೆಲಸವು ತಾವು ತಿಳಿದಷ್ಟು ಸುಲಭವಾಗಿರಲಿಲ್ಲ. ಯಾಕೆಂದರೆ ಪ್ರಪಂಚದ ಮೊದಲನೆಯ ಮಹಾಯುದ್ಧವು ಮುಗಿಯುವದರೊಳಗಾಗಿ ಅರಬಸ್ತಾನ ಹಾಗೂ ಭಾರತದ ಮುಸಲ್ಮಾನರೆಲ್ಲರೂ ಆಝಾದರ ಸಲುವಾಗಿ ಯಾವ ತ್ಯಾಗವನ್ನು ಮಾಡಲೂ ಸಿದ್ಧರಾಗಿದ್ದರು. ಬ್ರಿಟಿಶರು ಮಹಾತ್ಮರೊಬ್ಬರನ್ನು ಬಿಟ್ಟರೆ ಆಝಾದರಿಗೆ ಅಂಜಿದಷ್ಟು ಇನ್ನಾರಿಗೂ ಅಂಜಿರಲಿಲ್ಲ. ಯಾಕೆಂದರೆ ಅವರಿಗೆ ಹಿಂದುಗಳಷ್ಟೇ ಮುಸಲ್ಮಾನರ ಬೆಂಬಲವಿತ್ತು. ಅವರ ಕ್ರಾಂತಿಕಾರಕ ವಿಚಾರಗಳ ಪರಿಣಾಮದಿಂದ ಮುಸ್ಲೀಮ ಲೀಗವು ರಾಜಕಾರಣದಲ್ಲಿ ಕಾಲಿಟ್ಟು ಮುಂದೆ ಕಾಂಗ್ರೆಸ್ಸಿನ ಕೂಡ ಒಪ್ಪಂದಮಾಡಲು ಸಹ ಒಪ್ಪಿತು. ಹಿಂದು-ಮುಸ್ಲೀಮ್ ಐಕ್ಯತೆಯೇ ಆಝಾದರ ಅಚಲವಾದ ಗುರಿಯಾಗಿತ್ತು. ಕಾಂಗ್ರೆಸ್ಸಿನಲ್ಲಿ ಇವರ ವರ್ಚಸ್ಸು ಬಹು ಬೇಗ ಬೆಳೆಯಿತು. ಕಾಂಗ್ರೆಸ್ಸಿನ ಅಧ್ಯಕ್ಷರಲ್ಲಿ ಇವರೇ ಚಿಕ್ಕವರು. ಇವರಷ್ಟು ದೀರ್ಘ ಕಾಲದ ವರೆಗೆ ಸತತವಾಗಿ ಕಾಂಗ್ರೆಸ್ ಅಧ್ಯಕ್ಷರಾದವರು ಮತ್ತೊಬ್ಬರಿಲ್ಲ. ಇವರ ಅಧ್ಯಕ್ಷತೆಯಲ್ಲಿ ನಡೆದಷ್ಟು ಮಹಾ ಘಟನೆಗಳು ಇನ್ನುಳಿದ ಯಾರ ಕಾಲದಲ್ಲಿಯೂ ನಡೆಯಲಿಲ್ಲ. ಕಾಂಗ್ರೆಸ್ಸಿನ ಇತಿಹಾಸದಲ್ಲಿ ಇವರ ಸ್ಥಾನ ಚಿರಸ್ಮರಣೀಯವಾಗಿದೆ. ೧೯೩೯ ರಿಂದ ೧೯೪೬ರ ವರೆಗಿನ ಕಾಲವು ಭಾರತದ ಇತಿಹಾಸದಲ್ಲಿಯೇ ಅತ್ಯಂತ ಮಹತ್ವವಾದ ಕಾಲ. ಆಗ ಮೌಲಾನಾ ಆಝಾದರು ಕಾಂಗ್ರೆಸ್ಸಿನ ಅಧ್ಯಕ್ಷರು, ಸ್ವಾತಂತ್ರ್ಯ ಸಂಗ್ರಾಮವು ಕೊನೆಯ ಮಟ್ಟಕ್ಕೆ ಮುಟ್ಟಿ 'ಚಲೇಜಾವ್' ಗೊತ್ತುವಳಿಯು ಸ್ವೀಕೃತವಾಯಿತು. ಅನಂತರ ಅತ್ಯುನ್ನತ ಮಟ್ಟದಲ್ಲಿ ನಡೆದ ಸಂಧಾನದ ಮಾತುಕತೆಗಳಲ್ಲಿ ಅವರು ತೋರಿಸಿದ ಮುತ್ಸದ್ದಿತನಕ್ಕೆ ಬ್ರಿಟಿಶರು ಬೆರಗಾದರು. ಅಂತೆಯೇ ಅವರು ಅಧ್ಯಕ್ಷ ಸ್ಥಾನದಿಂದ ನಿವೃತ್ತಿ ಹೊಂದುವಾಗ

ದಿವಂಗತ ಸರದಾರ ಪಟೇಲರು ಅವರ ಬಗೆಗೆ ತೆಗೆದ ಉದ್ಗಾರವು ಅವರ ಶ್ರೇಷ್ಠ ವ್ಯಕ್ತಿತ್ವವನ್ನು ಸ್ಪಷ್ಟಗೊಳಿಸುತ್ತದೆ. ಅವರು ಜೇಲಿನಲ್ಲಿದ್ದಾಗ ಅವರ ಧರ್ಮಪತ್ನಿಯವರು ಅಂತ್ಯಾವಸ್ಥೆಯಲ್ಲಿದ್ದರೆಂದು ತಿಳಿದರೂ ಬಿಡುಗಡೆ ಹೊಂದಲು ಪ್ರಯತ್ನಿಸಲಿಲ್ಲ. ಬೇಗಮ್ಮರು ಆಝಾದರನ್ನೇ ಸ್ಮರಿಸುತ್ತ ಇಹಲೋಕ ಯಾತ್ರೆಯನ್ನು ಮುಗಿಸಿದಾಗ, ಭಾರತ ಮಾತೆಯ ಬಿಡುಗಡೆಗಾಗಿ ಜೇಲಿಗೆ ಹೋದ ಆಝಾದರು ತಮ್ಮ ಜೀವನ ಸಂಗಾತಿಯನ್ನು ಕೊನೆಗೊಮ್ಮೆ ನೋಡಲು ಆಳರಸರ ಅಪ್ಪಣೆಯನ್ನು ಕೇಳುವದು ಸಹ ಅವರ ಮನಸ್ಸಿಗೆ ಒಪ್ಪಲಿಲ್ಲ. ಅವರ ತತ್ವನಿಷ್ಠೆಗೆ ಜಗತ್ತು ಬೆರಳು ಕಚ್ಚಿತು. ಭಾರತೀಯರು ಬೇಗಮ್ಮರ ಸ್ಮರಣೆಗಾಗಿ ಯೋಗ್ಯ ಸ್ಮಾರಕವೊಂದನ್ನು ನಿರ್ಮಿಸಬೇಕೆಂದು ಪ್ರಯತ್ನಿಸಿದಾಗ ಮೌಲಾನಾ ಸಾಹೇಬರೇ ಅಡ್ಡ ಬಂದು ಅದನ್ನು ಅಲ್ಲಿಗೇ ನಿಲ್ಲಿಸಿ ಬಿಟ್ಟರು. ಅವರು ಈ ಶತಮಾನದ ಶ್ರೇಷ್ಠ ಮುಸ್ಲಿಮರಾಗಿದ್ದರು. ಹಾಗು ಸ್ವಾತಂತ್ರ್ಯದ ನಂತರವೂ ರಾಜಕಾರಣದಲ್ಲಿ ಹಿರಿಯ ಪಾತ್ರವನ್ನು ವಹಿಸಿ, ರಾಷ್ಟ್ರದ ಉಜ್ವಲ ಭವಿಷ್ಯತ್ತಿನ ಬಗೆಗೆ ಪ್ರಯತ್ನಿಸಿದ ಒಬ್ಬ ಶ್ರೇಷ್ಠ ಶಿಲ್ಪಿಗರಾಗಿದ್ದಾರೆ. ಸುಮಾರು ಹತ್ತು ವರ್ಷಗಳ ವರೆಗೆ ಕೇಂದ್ರದ ಶಿಕ್ಷಣ ಶಾಖೆಯ ಹಿರಿಯತನವನ್ನು ವಹಿಸಿ ಆ ಕ್ಷೇತ್ರದಲ್ಲಿಯೂ ಒಳ್ಳೇ ಮಹತ್ಕಾರ್ಯವನ್ನು ಮಾಡಿದ್ದಾರೆ. ಭಾರತ ಮಾತೆಯ ಸೇವೆಗೆ ಯಾವ ಕಾರ್ಯವನ್ನು ಕೈಕೊಂಡರೂ ಅವರು ತನು-ಮನ-ಧನದಿಂದಲೂ ತ್ರಿಕರಣ ಶುದ್ಧಿಯಿಂದಲೂ ತಮ್ಮ ಕಾಯಕವನ್ನು ನಿರ್ವಹಿಸಿ ಕೊನೆಗೂ ಕಾಯಕದಲ್ಲಿಯೇ ಪೈಗಂಬರವಾಸಿಗಳಾಗಿ ವೈಭವಪೂರ್ವಕವಾದ ಕೊನೆಯನ್ನು ಕಂಡ ಅಜರಾಮರ ಕೀರ್ತಿ ಅವರದಾಗಿದೆ. ಅವರ ಮಾರ್ಗದರ್ಶನ ಇನ್ನೂ ಹೆಚ್ಚುಕಾಲಬೇಕಾಗಿತ್ತು. ಆದರೆ ಮಹಾತ್ಮಾ ಪೈಗಂಬರರ ದೃಷ್ಟಿಯಿಂದ ಅವರಿಗೆ ಶಾಂತಿ ವಿಶ್ರಾಂತಿಗಳು ಅತ್ಯಗತ್ಯವಾಗಿದ್ದವೆಂದೇ ನಾವು ಸಮಾಧಾನ ಹೊಂದಬೇಕು. ಆಝಾದರಿಂದ ನಮಗಾದ ಮಹದುಪಕಾರವನ್ನು ಸ್ಮರಿಸಿ ಅವರ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ನಾವು ಪ್ರಾರ್ಥಿಸುತ್ತೇವೆ.

ಜೀವನ ಶಿಕ್ಷಣವು ತಾಂತ್ರಿಕ ಶಿಕ್ಷಣಕ್ಕೆ ಅನುಕೂಲವಾಗಿದೆ

[ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜಿನ ಶತಾಬ್ದಿ ಸಮಾರಂಭದ ಕಾಲಕ್ಕೆ ವಿಚಾರ ಸಂಕಿರಣದಲ್ಲಿ
ಶ್ರೀ ರೋಹಿಡೇಕರರು ಮಾಡಿದ ಭಾಷಣದ ಮುಖ್ಯಾಂಶಗಳು]

ಇಂದಿನ ಯುಗವು ಯಂತ್ರಯುಗವು. ಯಾಂತ್ರಿಕ ಪ್ರಗತಿ ದಿನೇದಿನೇ ಬೆಳೆಯತೊಡಗಿದ್ದು, ಮುಂದುವರಿದ ದೇಶಗಳು ಅಂತರಿಕ್ಷದಲ್ಲಿ ಸ್ಪುಟ್ನಿಕ್‌ಗಳನ್ನು ಹಾರಿಸಿ ನಮ್ಮ ಜಗತ್ತು ಹಾಗೂ ಅಂತರಿಕ್ಷದ ಗ್ರಹಗಳಲ್ಲಿ ಸಂಬಂಧವನ್ನು ಬೆಳೆಸಲು ಪ್ರಯತ್ನಗಳನ್ನು ಮಾಡಬೇಕೆಂದು ಸಾಹಸಗೈಯುತ್ತಿರುವ ಇಂದಿನ ಯುಗದಲ್ಲಿ ಜೀವನ ಶಿಕ್ಷಣಕ್ಕೆ ಬೆಂಬಲ ಕೊಡುವುದು ಸರಿಯಲ್ಲವೆಂದು ಹೇಳುವ ಜನರು ಇದ್ದಾರೆ. ಅವರು ಶಿಕ್ಷಣದ ಸಮಸ್ಯೆಯನ್ನು ಆಳವಾಗಿ ಅಭ್ಯಾಸ ಮಾಡದೆ ಹೇಳುವ ಮಾತು ಅದು. ಜೀವನ ಶಿಕ್ಷಣವು ತಾಂತ್ರಿಕ ಶಿಕ್ಷಣಕ್ಕೆ ತೀರ ವಿರೋಧವಾದುದೆಂದು ಅವರ ಗ್ರಹಿಕೆ. ಆದರೆ ಜೀವನ ಶಿಕ್ಷಣದ ನಿಜವಾದ ಉಪಯೋಗವನ್ನು ತಿಳಿದವರಿಗೆ ಕೆಳಗಿನ ಸತ್ಯಾಂಶಗಳು ಹೊಳೆಯದಿರವು.

ಇಂದಿನ ನಮ್ಮ ಜೀವನದಲ್ಲಿ ತಾಂತ್ರಿಕ ಶಿಕ್ಷಣದಿಂದ ಒಂದು ದೊಡ್ಡ ಕೊರತೆ ತೋರಿಬರುತ್ತಿದೆ. ಗಿರಣಿಗಳಲ್ಲಿ ಕೆಲಸ ಮಾಡುತ್ತಿರುವ ಕೂಲಿಕಾರರ ಜೀವನವನ್ನು ನೋಡಿರಿ. ಮುಂಜಾವಿನಿಂದ ಸಂಜೆಯ ವರೆಗೆ ಕೆಲಸ ಮಾಡಿ ಗಿರಣಿಗಳಿಂದ ಅವರು ಹೊರಬೀಳುವಾಗ, ಜೇಲಿನಿಂದ ಹೊರಬಿದ್ದಂತೆ ಅವರು ಹೌಹಾರಿ ಬರುವರು; ಬಂದವರೇ ನೇರವಾಗಿ ಚಹದ ಅಂಗಡಿ, ಬೀಡಿಯ ಅಂಗಡಿ, ಸಿನೇಮಾ ಥೇಟರದ ಕಡೆಗೆ ಹೋಗುವರು. ಯಾಕೆ? ಯಾಕಂದರೆ ತಮ್ಮ ನಿತ್ಯದ ಕೆಲಸದಲ್ಲಿ ಅವರಿಗೆ ಆನಂದದ ಸೋಂಕಿಲ್ಲ. ಉಪವಾಸವನ್ನು ತಪ್ಪಿಸಿಕೊಳ್ಳಲು ಅವರು ಗಿರಣಿಯಲ್ಲಿ ಕೆಲಸ ಮಾಡುತ್ತಾರೇ ವಿನಃ ತಮ್ಮ ಮನಸ್ಸಿನ ತೃಪ್ತಿಗಾಗಿ ಅಲ್ಲ. ಸ್ಕ್ರೂ ತಿರುವುವ ಕೆಲಸದಲ್ಲಿ ತೊಡಗಿದ ಕೂಲಿಕಾರನಿಗೆ ಸಂಜೆಯ ವರೆಗೆ ಬೇರೆ ಕೆಲಸ

ವೇನೆಂಬುದನ್ನರಿಯಲು ಅವಕಾಶ ಸಿಗದು. ಸಾಮಾನುಗಳನ್ನು ಪೂರ್ಣ ರೂಪದಲ್ಲಿ ನೋಡಿ ನಲಿಯುವ, ತನ್ನ ಕ್ರಿಯಾತ್ಮಕ ಆನಂದ ಆತನಿಗೆ ಸಿಗುವುದೇ ಇಲ್ಲ.

ಕೂಲಿಕಾರರಷ್ಟೇ ಏಕೆ? ಹೆಚ್ಚಿನ ಗ್ರೇಡಿನಲ್ಲಿ ಕೆಲಸ ಮಾಡುವವನೂ ಅಷ್ಟೇ. ಒಂದೇ ವಿಭಾಗದಲ್ಲಿ ವಿಶೇಷ ಜ್ಞಾನ ಸಂಪಾದಿಸಿ ಹೆಚ್ಚಿನ ಹಣ ಗಳಿಸುವುದೇ ಆತನ ಧ್ಯೇಯ. ತನ್ನ ಕೆಲಸದಲ್ಲಿ ಆತನಿಗೆ ನೈಸರ್ಗಿಕ ಆನಂದವಿಲ್ಲ. ಯಾಕಂದರೆ ಎಷ್ಟಾದರೂ ಆತ ನೌಕರಿಯ ಆಳು. ರೂಪುಗೊಂಡ ವಸ್ತು ತನ್ನ ಕೃತಿಯಲ್ಲಿ ಈ ರೀತಿಯ ಮಾನಸಿಕ ವೇದನೆಯನ್ನು ತಡೆದು, ಪ್ರಾರಂಭದಿಂದಲೂ ಪೂರ್ಣವಸ್ತು ನಿರ್ಮಾಣವಾಗುವ ವರೆಗೆ ತನ್ನ ಕೃತಿಯಿಂದಲೇ ಮುಂದೆ ಸಾಗಿ ತನ್ನ ಪ್ರಯತ್ನದ ಫಲವನ್ನು ನೋಡಿ ಆನಂದಪಡುವ ಸುಯೋಗವನ್ನು ತಂದು ಕೊಡುವ ಮಹತ್ಕಾರ್ಯವನ್ನು ಜೀವನ ಶಿಕ್ಷಣ ಮಾಡುತ್ತಿದೆ. ಈ ದೃಷ್ಟಿಯಿಂದ ಜೀವನ ಶಿಕ್ಷಣವು ತಾಂತ್ರಿಕ ಶಿಕ್ಷಣಕ್ಕೆ ಪೂರಕ ಕೆಲಸವನ್ನು ಮಾಡುತ್ತದೆ.

ಎರಡನೆಯದಾಗಿ, ನಮ್ಮ ದೇಶ ಹಳ್ಳಿಗಳ ದೇಶ, ಹಳ್ಳಿಗಳಿಗೆ ಯಾಂತ್ರಿಕ ಜೀವನದ ಸೌಲಭ್ಯಗಳು ಸಂಪೂರ್ಣವಾಗಿ ದೊರೆಯಬೇಕಾದರೆ ಕನಿಷ್ಟ ನೂರಾರು ವರ್ಷಗಳಾದರೂ ಬೇಕು. ಅಲ್ಲಿಯ ವರೆಗೆ ನಮ್ಮ ಹಳ್ಳಿಗಳಿಗೆ ಈಗಿನ ಕೈಗಾರಿಕೆಗಳೇ ತಾರಕ. ಅವು ಒಳ್ಳೆಯ ರೀತಿಯಲ್ಲಿ ನಡೆದು ದೇಶಕ್ಕೆ ಸೌಖ್ಯವನ್ನುಂಟು ಮಾಡಬೇಕಾದರೆ ಜೀವನ ಶಿಕ್ಷಣ ಅತ್ಯವಶ್ಯ. ಯಾವ ಕೆಲಸವನ್ನು ತಾಂತ್ರಿಕ ಶಿಕ್ಷಣವು ಇನ್ನೂ ನೂರಾರು ವರ್ಷ ಮಾಡಲಾರದೊ ಅದನ್ನು ಜೀವನ ಶಿಕ್ಷಣ ಮಾಡುತ್ತದೆ.

ಮೂರನೆಯದಾಗಿ, ತಾಂತ್ರಿಕ ಶಿಕ್ಷಣಕ್ಕೆ ಪ್ರಥಮ ಸೋಪಾನವೆಂದು ವಿಚಾರ ಮಾಡಿದರೂ ಜೀವನ ಶಿಕ್ಷಣ ಅತ್ಯವಶ್ಯ. ಕೇವಲ ಪುಸ್ತಕೀ ವಿದ್ಯೆಯನ್ನು ಕಲಿತು, ತಾಂತ್ರಿಕ ಶಿಕ್ಷಣಕ್ಕೆ ಹೋಗುವ ವಿದ್ಯಾರ್ಥಿಗಳ ಮೊದಲನೆಯ ವರ್ಷದ ಗೋಳನ್ನು ದೇವರೇ ಬಲ್ಲ. ಅಂತೆಯೇ ಬಿ. ಈ. ಪರೀಕ್ಷೆಯಲ್ಲಿ ಮೊದಲನೆಯ ವರ್ಷ ವಿದ್ಯಾರ್ಥಿಗಳು ನಪಾಸಾಗುವದು ಹೆಚ್ಚು. ಜೀವನ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಉಪಯುಕ್ತ ಉದ್ಯೋಗದಲ್ಲಿ ತೊಡಗಿರುವದರಿಂದ, ಅವರ ಬೆರಳಿಗೆ, ಮೆದುಳಿಗೆ ಕೂಡಿಯೇ ತರಬೇತಿ ಸಿಗುತ್ತದೆ. ಹೀಗೆ ಅನುಕೂಲವಾಗಿ ಸಿಕ್ಕ ಜ್ಞಾನ ಹಾಗು ಕೈಬೆರಳಗಳ ತರಬೇತಿಯು ತಾಂತ್ರಿಕ ಶಿಕ್ಷಣದಲ್ಲಿ ಶೀಘ್ರಗತಿಯಿಂದ ಪ್ರಗತಿಯನ್ನು ಸಾಧಿಸಲು ಅನುಕೂಲವಾಗುತ್ತದೆ.

ಇದೂ ಅಲ್ಲದೆ, ತಾಂತ್ರಿಕ ಶಿಕ್ಷಣಕ್ಕೆ ಒಲವುಳ್ಳ ವಿದ್ಯಾರ್ಥಿಗಳನ್ನು ಕಂಡುಹಿಡಿಯಲು ಜೀವನ ಶಿಕ್ಷಣವು ಸಹಾಯಕಾರಿಯಾಗಿದೆ. ಪ್ರತ್ಯಕ್ಷ ಕೃತಿಯಲ್ಲಿ ಆಸ್ಥೆಯಿಲ್ಲದವನು ತಾಂತ್ರಿಕ ಶಿಕ್ಷಣವನ್ನು ಹೇಗೆ ಸಾಗಿಸಬಲ್ಲನು? ಅದನ್ನು ಕಂಡು ಹಿಡಿಯುವುದು, ಇದ್ದ ಆಸ್ಥೆಯನ್ನು ಬೆಳಸುವದು, ಮತ್ತು ಕೃತಿ-ಜ್ಞಾನ ಇವುಗಳಲ್ಲಿ ಸೂಕ್ತ ಸಂಬಂಧವನ್ನು ಏರ್ಪಡಿಸುವದು, ಇವೆಲ್ಲ ಕೆಲಸಗಳನ್ನು ಜೀವನ ಶಿಕ್ಷಣವು ಮಾಡುವುದರಿಂದ ತಾಂತ್ರಿಕ ಶಿಕ್ಷಣಕ್ಕೆ ಅನುಕೂಲವೆಂಬುದು ತೀರ ಸ್ಪಷ್ಟವಿದೆ. ಆದುದರಿಂದ ಜೀವನ ಶಿಕ್ಷಣವು ತಾಂತ್ರಿಕ ಶಿಕ್ಷಣಕ್ಕೆ ದೂಷಕವಲ್ಲ. ಪೋಷಕ; ಮಾರಕವಲ್ಲ; ತಾರಕ.

೧೯೫೬ನೆಯ ಇಸವಿಯಿಂದ ಪ್ರಾರಂಭವಾಗುವ
ಸಾಮಾನ್ಯ ಪ್ರಾ. ಶಾ. ಪ್ರ. ಪರೀಕ್ಷೆಯ
ಅಭ್ಯಾಸ ಕ್ರಮವನ್ನು ಅನುಸರಿಸಿ ಬರೆದ
ಶೇಲಾರ ಕೃತ
ಪ್ರಾಥಮಿಕ ಭೂಮಿತಿ
[ಕ್ಷೇತ್ರಫಲ ಘನಫಲ ಸಹಿ]
೪ ರಿಂದ ೭ ನೇಯ ವರ್ಗದ ವರೆಗಿನ
ವಿಷಯವನ್ನೆಲ್ಲ ಒಳಗೊಂಡಿದೆ.
ಬೆಲೆ: ೧ರೂ. ೮ಆಣೆ ಮಾತ್ರ
ದೊರೆಯುವ ಸ್ಥಳ:—
ಸಾಯಿ ಪಬ್ಲಿಶಿಂಗ್ ಹಾವುಸ್,
ವಿಜಯ ರೋಡ, ಧಾರವಾಡ.

ಮೂಲಶಿಕ್ಷಣವು ನೆಲೆಸಲು ಬಂದಿದೆ

(Basic Education has come to stay)

ಲೇಖಕರು : **ಶ್ರೀ ಮು. ಗು. ಹಂದ್ರಾಳ,** ಬಿ.ಎ.(ಆನರ್ಸ),ಎಂ.ಎಡ್., ಧಾರವಾಡ.

೧೯೩೭ ನೆಯ ಜುಲೈ ತಿಂಗಳಲ್ಲಿ ಗಾಂಧೀಜಿಯವರು ಹೊಸ ಶಿಕ್ಷಣದ ಬಗೆಗೆ ತಮ್ಮ ವಿಚಾರಗಳನ್ನು ಹರಿಜನ ಪತ್ರಿಕೆಯಲ್ಲಿ ಪ್ರಕಟ ಮಾಡಿದರು. ಪ್ರಾಥಮಿಕ ಶಿಕ್ಷಣವು ಸ್ವಾವಲಂಬಿಯಾಗಬೇಕೆಂದೂ ಅವರು ಅಭಿಪ್ರಾಯ ಪಟ್ಟರು. ಈ ವಿಚಾರವು ಶಿಕ್ಷಣ ತಜ್ಞರಿಗಂತೂ ಸಿಡಿಲು ಬಡಿದಂತಾಯಿತು. ಶಿಕ್ಷಣವು ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ಮಹತ್ವದ್ದಾಗಿದೆ. ಎಲ್ಲ ಮಕ್ಕಳಿಗೂ ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿಯೂ, ಉಚಿತವಾಗಿಯೂ ದೊರೆಯುವಂತೆ ಮಾಡುವದು ಸರಕಾರದ ಹೊಣೆಯಿದೆ. ಹೀಗಿದ್ದು ಪ್ರಾಥಮಿಕ ಶಿಕ್ಷಣವು ಸ್ವಾವಲಂಬಿಯಾಗಬೇಕೆಂಬ ತತ್ವವನ್ನು ಏಕೆ ಮನ್ನಿಸಬೇಕೆಂದು ಅನೇಕರು ಆಕ್ಷೇಪಣೆ ಎತ್ತಿದರು.

೧೯೧೧ ನೇ ಇಸ್ವಿಯಲ್ಲಿ, ಪ್ರಾಥಮಿಕ ಶಿಕ್ಷಣವು ಕಡ್ಡಾಯವಾಗಿಯೂ, ಉಚಿತವಾಗಿಯೂ ದೊರೆಯಬೇಕೆಂದು ಮಾನ್ಯ ಶ್ರೀ ಗೋಪಾಲಕೃಷ್ಣ ಗೋಖಲೆಯವರು ಪ್ರಥಮ ಪ್ರಯತ್ನ ಮಾಡಿದರು. ಅವರ ಅಂದಿನ ಪ್ರಯತ್ನವು ನಿಷ್ಫಲವಾಯಿತು. ೧೯೩೭ನೆಯ ಇಸ್ವಿಯವರೆಗೂ, ನಮ್ಮ ನಾಡಿನಲ್ಲಿ ಯಾವ ಸರಕಾರವೂ ಈ ದಿಶೆಯಲ್ಲಿ ತಕ್ಕಷ್ಟು ಯೋಚಿಸಲಿಲ್ಲ. ಅಷ್ಟರಲ್ಲಿ, ಯುಗಪ್ರವರ್ತಕ ಗಾಂಧೀಜಿಯವರಿಗೆ ಒಂದು ವಿಚಾರವು ತಟ್ಟನೆ ಹೊಳೆಯಿತು, ಅದೆಂದರೆ ಸದ್ಯದ ಪರಿಸ್ಥಿತಿಯಲ್ಲಿ ಸರಕಾರಕ್ಕೆ ಇದು ಸಾಧ್ಯವಿಲ್ಲ. ಈ ಸಮಸ್ಯೆಯನ್ನು ಹಾಗೆಯೇ ಬಿಟ್ಟರೆ, ಪ್ರಾಥಮಿಕ ಶಿಕ್ಷಣವು ತೀರ ಮುಂದಗಾಮಿಯಾಗಿ ಸಾಗುವದು. ಅಲ್ಲದೆ ಪುಸ್ತಕೀಯ ವಿದ್ಯೆಗೆ ಪ್ರಾಧಾನ್ಯ ಕೊಟ್ಟದ್ದರಿಂದ ಮಕ್ಕಳ ಜೀವನವು ಹಾಳಾಗುತ್ತಿದೆ. ಆದುದರಿಂದ ಶಿಕ್ಷಣವು ಉತ್ಪಾದಕ ಉದ್ಯಮದ (Productive work) ಮುಖಾಂತರ ದೊರೆಯಬೇಕು; ಎಂದರೆ ಅದು ಸಜೀವವಾಗುವದು; ಸ್ವಾವಲಂಬಿಯೂ ಆಗಬಲ್ಲದು ಎಂಬ ವಿಚಾರವು ಗಾಂಧೀಜಿಯವರಿಗೆ ಹೊಳೆಯಿತು. ಇನ್ನಾವ ಮಾರ್ಗದಿಂದಲೂ, ಪ್ರಾಥಮಿಕ ಶಿಕ್ಷಣವನ್ನು ಪುಕ್ಕಟೆಯಾಗಿಯೂ, ಕಡ್ಡಾಯವಾಗಿಯೂ, ಸಾರ್ವತ್ರಿಕವಾಗಿಯೂ, ಪರಿಣಾಮಕಾರಕವಾಗಿಯೂ ಒದಗಿಸುವದು ಸಾಧ್ಯವಿಲ್ಲವೆಂದು ಗಾಂಧೀಜಿಯವರು ಖಂಡಿತವಾಗಿ ಆಗ ನಂಬಿದರು, ಹಾಗೆ ತಿಳಿಸಿ ಹೇಳಿದರು. ೧೯೩೭ರಲ್ಲಿ ಏಳು ಪ್ರಾಂತಗಳಲ್ಲಿ ಅದೇ ಆಗ, ಕಾಂಗ್ರೆಸ ಸರಕಾರವು ಸ್ಥಾಪನೆಯಾಗಿದ್ದರಿಂದ ರಾಷ್ಟ್ರೀಯ ಶಿಕ್ಷಣವನ್ನು ಪ್ರಯೋಗ ಮಾಡಲು ಅನುಕೂಲ ದೊರೆಯಿತು. ರಾಷ್ಟ್ರೀಯ ಶಿಕ್ಷಣವು ಒಂದು ನಿಶ್ಚಿತ ಸ್ವರೂಪ ತಾಳಲು ಸಂಧಿ ಸಂದಿಸಿತು.

ಮೂಲ ಶಿಕ್ಷಣ ಯೋಜನೆಯಲ್ಲಿ ಅತಿ ಜಟಿಲ ಸಮಸ್ಯೆಯೆನಿಸಿದ, ಕಹಿ ಎನಿಸಿದ ವಿಷಯವೆಂದರೆ—ಸ್ವಾವಲಂಬಿ ಶಿಕ್ಷಣದ ತತ್ವ ಪ್ರಣಾಲಿ ! ಈ ತತ್ವವನ್ನು ೧೯೩೭ ನೆಯ ಅಕ್ಟೋಬರ ತಿಂಗಳಲ್ಲಿ ಪ್ರಥಮ ವರ್ಧಾ ಶಿಕ್ಷಣ ಸಮ್ಮೇಲನದಲ್ಲಿ ಚರ್ಚಿಸಲಾಯಿತು. ತುರುಸಿನ ಚರ್ಚೆಯೂ ಸಂಭವಿಸಿತು. ಡಾ. ಝಾಕೀರ ಹುಸೇನ ಮತ್ತು ಪ್ರಾಧ್ಯಾಪಕ ಕೆ. ಟಿ. ಶಹಾ ಅವರು ಈ ತತ್ವವನ್ನು ಆಗ ಬಲವಾಗಿ ವಿರೋಧಿಸಿದರು. ಅಮೇರಿಕೆಯಲ್ಲಿ ಹೆಸರಾಂತ ಶಿಕ್ಷಣ ತಜ್ಞ ಜಾನ್‌ಡ್ಯೂಯಿ ಅವರು ಸ್ವಾವಲಂಬಿ ಶಿಕ್ಷಣದ ಬಗೆಗೆ ಮಾಡಿದ ಪ್ರಯತ್ನವು ಯಶಸ್ವಿಯಾಗಿಲ್ಲವೆಂದೂ, ಶಿಕ್ಷಕರು ಬಡಮಕ್ಕಳ ಶ್ರಮವನ್ನು ಸುಲಿಗೆ ಮಾಡಬಹುದೆಂದೂ, ಹೀಗೆ ಸಂಭವಿಸಿದಲ್ಲಿ, ತಕಲಿಯು ಪುಸ್ತಕಕ್ಕಿಂತ ಕೀಳೆಂದು ಸಿದ್ಧವಾಗುವದೆಂದೂ ಡಾ. ಝಾಕೀರ ಹುಸೇನರು ಪ್ರತಿಪಾದಿಸಿದರು. ಈ ವಿಚಾರಗಳಿಗೆ ಗಾಂಧೀಜಿಯವರು ತಾತ್ವಿಕ ದೃಷ್ಟಿಯಿಂದ ಸೂಕ್ತವಾಗಿ ಅಂದು ಉತ್ತರ ಕೊಟ್ಟರು. ಅದೆಂದರೆ—ಜಾನ್‌ಡ್ಯೂಯಿ ಅವರ ಯೋಜನೆಯು ದೊಡ್ಡ ಪ್ರಮಾಣದಲ್ಲಿ ಪ್ರಯೋಗವಾಗಲಿಲ್ಲವೆಂದೂ, ತಮ್ಮ ಯೋಜನೆಯು ಗ್ರಾಮನಿಷ್ಠವಾದುದೆಂದೂ ಮನೆಯಲ್ಲಿ ತಂದೆ–ತಾಯಂದಿರ ಸೂಚನೆಗಳಂತೆ ಮಕ್ಕಳು ವರ್ತಿಸಿದಲ್ಲಿ, ಅವರು ಗುಲಾಮರಾಗುವದಿಲ್ಲವೆಂದೂ, ಅದರಂತೆ ಶಾಲೆಗಳಲ್ಲಿ ಗುರುಗಳೆಂದರೆ ಮಕ್ಕಳ ಹಿತೈಷಿಗಳು— ಅವರ ಮಾತುಗಳಂತೆ ಮಕ್ಕಳು ಕೆಲಸ ಮಾಡಿದರೆ, ಅದು ಗುಲಾಮಗಿರಿ ಆಗಲಾರದೆಂದೂ,

ಅವರು ಸಮರ್ಥಿಸಿದರು. ಅರ್ಥಶಾಸ್ತ್ರಕ್ಕೆ ನೀತಿ ಶಾಸ್ತ್ರದ ಆಧಾರ ಕೊಟ್ಟರು.

ಪೂಜ್ಯ ವಿನೋಬಾಜಿ ಅವರೂ ಗಾಂಧೀಜಿಯವರ ಸ್ವಾವಲಂಬಿ ಶಿಕ್ಷಣದ ತತ್ವಪ್ರಣಾಲಿಯನ್ನು ಎತ್ತಿ ಹಿಡಿದರು. ಅವರ ಮಾತುಗಳಲ್ಲಿಯೇ ಹೇಳುವದಾದರೆ— "ಪ್ರಾಥಮಿಕ ಶಿಕ್ಷಣವು ಉಚಿತ ಮತ್ತು ಸ್ವಾವಲಂಬಿಯಾಗಬೇಕೆಂಬ ಸೂಚನೆಯನ್ನು ಓದಿದಾಕ್ಷಣವೇ ಅದು ಸ್ವಯಂಸಿದ್ಧ (Self-evident) ವಾದುದೆಂದು ನನಗೆ ಅನಿಸಿತು. ಅದು ಹೊಸತು ಇರಲಿಕ್ಕಿಲ್ಲ; ಆದರೆ ಹೊಸ ಬೆಳಕಿನಲ್ಲಿ ಅದನ್ನು ನಿವೇದಿಸಲಾಗಿದೆ. ಮನುಷ್ಯನು ದೈಹಿಕ ಶ್ರಮವನ್ನು ಬಿಟ್ಟದ್ದರಿಂದ, ಅನೇಕ ರೋಗಗಳು ಬೆಳೆದಿವೆ ಎಂದು ನನ್ನ ನಂಬಿಕೆ. ಗಾಂಧೀಜಿಯವರ ಕ್ರಾಂತಿಕಾರಕ ಸೂಚನೆಯು ಒಂದೇ ಹೊಡೆತದಿಂದ ಆ ರೋಗಗಳನ್ನು ನಿವಾರಿಸಬಲ್ಲದು."

ಕಾಕಾ ಕಾಲೇಲಕರರೂ ಕೂಡ ಸ್ವಾವಲಂಬಿ ಶಿಕ್ಷಣದ ವಿಚಾರಗಳನ್ನು ಸ್ಪಷ್ಟೀಕರಿಸಿದರು. ಅದಕ್ಕೆ ಅವರ ಈ ಕೆಳಗಿನ ಮಾತುಗಳೇ ಸಾಕ್ಷಿ:– "ಶಿಕ್ಷಣವನ್ನು ಸ್ವಾವಲಂಯಾಗಿ ಮಾಡುವಾಗ, ಮಕ್ಕಳ ಶ್ರಮದ ಸುಲಿಗೆ ಮಾಡಬಹುದೆಂಬ ಭಯ ಪಡಲಾಗಿದೆ. ನನಗೆ ಅಂಥ ಅಂಜಿಕೆಗಳಿಲ್ಲ. ಯಾಕೆಂದರೆ, ಶಿಕ್ಷಕರು ಸ್ವತಃ ಕೆಲಸ ಮಾಡಿದ ಹೊರತು ಮಕ್ಕಳನ್ನು ಕೆಲಸ ಮಾಡಹಚ್ಚಲಾರರು. ಅಲ್ಲದೆ ಕೆಲಸದ ವಿವರಣಾ ಪಟಗಳನ್ನು (Record sheets) ಶಾಲೆಗಳಲ್ಲಿ ಇಡಲಾಗುವದು. ಮೇಲಾಗಿ ಮೇಲ್ವಿಚಾರಕರು (Inspecting officers) ತಕ್ಕ ಜಾಗರೂಕತೆ ವಹಿಸುವರು."

ಇದುವರೆಗೆ, ಶಿಕ್ಷಣವು ಸ್ವಾವಲಂಬಿಯಾಗಬೇಕೆಂಬ ತತ್ವ ಪ್ರಣಾಲಿಯನ್ನು ವಿವೇಚಿಸಿದ್ದಾಯಿತು. ಬಾಪೂಜಿಯವರಂತೂ ಸ್ವಾವಲಂಬನವು ಮೂಲ ಶಿಕ್ಷಣದ ಒರೆಗಲ್ಲು ಎಂದು ಸಾರಿದರು. (Self Sufficiency is the acid test of Basic Education,) ಕೊನೆಯವರೆಗೂ ಅವರು ಈ ಅಭಿಪ್ರಾಯವನ್ನು ಬದಲಿಸಲಿಲ್ಲ. ಇದರಲ್ಲಿ ಏನೋ ಸತ್ವವಿದೆ! ಇನ್ನೂ ಮಥನ ಮಾಡೋಣ. ....

ಶಿಕ್ಷಣದ ವೆಚ್ಚವು ಬಹುಮುಖವಾಗಿದೆ. ಶಾಲಾ ಕಟ್ಟಡಗಳು, ಶಿಕ್ಷಣದ ಸಾಧನ-ಸಲಕರಣೆಗಳು, ಆಟದ ಬಯಲು, ಕೈತೋಟಕ್ಕೆ ಚಿಕ್ಕ ಹೊಲ ಇನ್ನಿನ್ನೂ ಬೇಕು. ಮೇಲಾಗಿ, ಯೋಗ್ಯ ಶಿಕ್ಷಣ ಸಾಗಿಸಲು ತಕ್ಕ ಗುರುವೃಂದವು ಬೇಕು. ಈ ಎಲ್ಲ ಶಾಲೆಗಳ ವೆಚ್ಚಗಳಲ್ಲಿ ಯಾವ ಭಾಗವನ್ನು ಪೂರೈಸಿದರೆ, ಶಿಕ್ಷಣವು ಸ್ವಾವಲಂಬಿಯಾಗಬಹುದು? ಮಕ್ಕಳ ದುಡಿತದ ಫಲದಿಂದ ಈ ಎಲ್ಲ ವೆಚ್ಚಗಳನ್ನು ನೀಗಿಸಬಹುದೇ? ಸಾಧ್ಯವಿಲ್ಲ! ಗುರುಗಳ ವೇತನದಷ್ಟು ಹಣವನ್ನು ಮಕ್ಕಳ ಶ್ರಮದ ಫಲವಾಗಿ ದೊರಕಿಸಬಹುದೇ ಎಂದು ಗಾಂಧೀಜಿಯವರಿಗೆ ಸಮಸ್ಯೆಯಾಗಿ ಒಮ್ಮೆ ಪರಿಣಮಿಸಿತು. ಝಾಕೀರ ಸಮಿತಿಯವರು ಈ ಸಮಸ್ಯೆಯನ್ನು ಪರಿಶೀಲಿಸಿದರು. ನೂಲುವ-ನೇಯುವ ಉದ್ಯೋಗವುಳ್ಳ ಒಂದು ಶಾಲೆಯನ್ನು ಮಾದರಿಯಾಗಿ ಇಟ್ಟುಕೊಂಡು ಲೆಕ್ಕ ಹಾಕಿದರು. ತಿಂಗಳಿಗೆ ೨೫ ರೂಪಾಯಿಗಳಂತೆ, ಏಳು ವರುಷಗಳಲ್ಲಿ ಒಬ್ಬ ಶಿಕ್ಷಕನ ಒಟ್ಟು ವೇತನವು ೨೧೦೦ ರೂಪಾಯಿ ಆಗುವದು. ಒಬ್ಬ ಶಿಕ್ಷಕನಿಗೆ ೩೦ ವಿದ್ಯಾರ್ಥಿಗಳಂತೆ, ಏಳು ವರುಷಗಳಲ್ಲಿ ಒಟ್ಟು ಉತ್ಪನ್ನವು ೧೭೨೫ ರೂಪಾಯಿ ಆಗುವದೆಂದು ಅಂದಾಜು ಮಾಡಿ, ಶಿಕ್ಷಕರ ಪಗಾರದ ಬಹುಭಾಗವನ್ನು ಮಕ್ಕಳ ಕೆಲಸದಿಂದ ಹೊರಡಿಸಬಹುದೆಂದು ಸಮಿತಿಯವರು ಆಗ ಸೂಚಿಸಿದರು.

ಇಲ್ಲಿ ಇನ್ನೊಂದು ವಿಚಾರವನ್ನು ಗಮನಿಸುವದು ಅಗತ್ಯವಿದೆ. ಶಿಕ್ಷಕರ ಪಗಾರವು ಯಾವಾಗಲೂ ೨೫ ರೂಪಾಯಿ ಉಳಿಯುವದಿಲ್ಲ. ಅಲ್ಲದೆ ಇದು ೧೯೩೭ ನೇ ಇಸ್ವಿಯಲ್ಲಿ ಮೂಡಿದ ವಿಚಾರ! ಆಗ ದ್ವಿತೀಯ ಮಹಾಯುದ್ಧವು ಪ್ರಾರಂಭವಾಗಿರಲಿಲ್ಲ. ಈಗಂತೂ, ಶಿಕ್ಷಕರ ವೇತನದ ಪ್ರಮಾಣವು ಹೆಚ್ಚಾಗಿದೆ; ಇದಲ್ಲದೆ, ತುಟ್ಟಿ ಭತ್ತೆಯನ್ನು ಕೊಡಲಾಗುತ್ತದೆ. ಹೀಗಿರುವಾಗ, ಮಕ್ಕಳ ಕೆಲಸದ ಉತ್ಪನ್ನಕ್ಕೂ, ಶಿಕ್ಷಕರ ವೇತನಕ್ಕೂ ಯಾವದೇ ತರದ ಸಾಮೀಪ್ಯವಿಲ್ಲ. ಈಗ ಪರಿಸ್ಥಿತಿಯೂ ತೀರಭಿನ್ನವಾಗಿದೆ. ಭಾರತವು ಸ್ವತಂತ್ರವಾಗಿದೆ. ಶಿಕ್ಷಣವು ರಾಷ್ಟ್ರ ನಿರ್ಮಾಣಕಾರ್ಯವೆಂದು ಎಣಿಸಲಾಗಿದೆ. ಪ್ರಾಥಮಿಕ ಶಿಕ್ಷಣವು ಉಚಿತವಾಗಿಯೂ, ಕಡ್ಡಾಯವಾಗಿಯೂ, ಸಕಲರಿಗೂ ದೊರೆಯಬೇಕೆಂದು ಸರಕಾರವು ಹೊಣೆಹೊತ್ತಿದೆ. ಅಲ್ಲದೆ, ಗಾಂಧೀಜಿಯವರ ತತ್ವಪ್ರಣಾಲಿಯಂತೆ ರೂಪುಗೊಂಡ ಮೂಲಶಿಕ್ಷಣವನ್ನು ಸಾರ್ವತ್ರಿಕ ಕೊಡುವ ಯೋಜನೆಗಳು ಸಿದ್ಧವಾಗಿವೆ.

ಪ್ರಾಥಮಿಕ ಶಾಲೆಗಳಲ್ಲಿ ಉದ್ಯೋಗಗಳನ್ನು ಸೇರಿಸಲು ತುಸು ಹೆಚ್ಚು ವೆಚ್ಚವು ಬರುವದು ಸ್ವಾಭಾವಿಕ, ಈ ಹೆಚ್ಚಿನ ವೆಚ್ಚವನ್ನು ಮಕ್ಕಳ ಉತ್ಪನ್ನದಿಂದ ಹೊರಡಿಸಬಹುದೆಂದು ಅಂಕೆ-ಸಂಖ್ಯೆಗಳು ಹೇಳುತ್ತವೆ: (Craft

Education can be made self supporting.) ಮಕ್ಕಳಿಗೆ ತಾವು ಸಿದ್ಧಗೊಳಿಸಿದ ವಸ್ತುಗಳು ಕಡಿಮೆ ಬೆಲೆಗೆ ಸಿಗುವಂತೆ ಮಾಡಬಹುದು. ಉದ್ಯೋಗಗಳನ್ನು ಹೆಚ್ಚೆಚ್ಚು ವ್ಯವಸ್ಥಿತ ಸ್ವರೂಪದಲ್ಲಿ ಸಂಘಟಿಸಿದಂತೆ, ಮಕ್ಕಳ ಪ್ರಾವೀಣ್ಯವೂ ಬೆಳೆದಂತೆ, ಉತ್ಪನ್ನವು ಹೆಚ್ಚು ಪ್ರಮಾಣದಲ್ಲಿ ದೊರೆಯುವದು. ಆರ್ಥಿಕ ಉತ್ಪನ್ನವನ್ನು ಮಕ್ಕಳ ಹಿತಕ್ಕಾಗಿಯೇ ಉಪಯೋಗಿಸಬಹುದು. ಜೀವನ ಸತ್ವ ಗುಳಿಗೆಗಳನ್ನು ಹಂಚುವ ಇಲ್ಲವೇ ಹಾಲು ಕೊಡುವ ವ್ಯವಸ್ಥೆಯನ್ನು ಶಾಲೆಗಳಲ್ಲಿ ಮಾಡಬಹುದು.

ಕೊನೆಯದಾಗಿ, ಸ್ವಾವಲಂಬಿ ಶಿಕ್ಷಣವು ಸ್ವಾವಲಂಬಿ ವ್ಯಕ್ತಿಗಳನ್ನು ಸಿದ್ಧಮಾಡುವದು. ಸ್ವಾವಲಂಬನ ಪ್ರವೃತ್ತಿಯುಳ್ಳ, ಕ್ರಿಯಾತ್ಮಕ ಚೈತನ್ಯವುಳ್ಳ, ಸತ್ಯ ಅಹಿಂಸೆಗಳಲ್ಲಿ ಶ್ರದ್ಧೆಯುಳ್ಳ, ಸಹಕಾರ ಜೀವಿಗಳಿಂದ ಕೂಡಿದ ಸ್ವಾವಲಂಬಿ ಸಮಾಜ (Self supporting society) ನಿರ್ಮಾಣ ಮಾಡುವದು. ಈ ಕಲ್ಪನೆಗೆ ನಾವು ಹೆಚ್ಚು ಮಹತ್ವ ಕೊಡುವದು ಅಗತ್ಯವಿದೆ. ಇದುವೇ ಮೂಲ ಶಿಕ್ಷಣದ ಮೂಲ ಹಿರಿಮೆ. ಮಹಾತ್ಮಾಜಿಯವರ ಸಂದೇಶ, ಅವರ ಅಮರವಾಣಿ, ಅಂತರಾಳದ ಕೂಗು, ಅಂತರ್‌ದರ್ಶನ ! (Vision)

ಮನುಷ್ಯತ್ವವನ್ನುಂಟು ಮಾಡುವ ಧರ್ಮವು ನಮಗೆಬೇಕು. ಮನುಷ್ಯತ್ವವನ್ನು ತಂದು ಕೊಡುವ ಶಿಕ್ಷಣವು ನಮಗೆ ಬೇಕು. ಶಿಕ್ಷಣವು ಉದ್ಯಮಶೀಲವಾಗಿರಬೇಕು ಎಂದು ಸ್ವಾಮಿ ವಿವೇಕಾನಂದರೂ ಒಮ್ಮೆ ಹೇಳಿದರು. ನಮ್ಮ ಮಕ್ಕಳಲ್ಲಿ ಭಾವೀ ಜೀವನದ ಎಡರು-ತೊಡರುಗಳನ್ನು ಎದುರಿಸಲು "ಸಿಂಹ ಧೈರ್ಯ"ಬೇಕೆಂದು ಅವರು ಹೇಳಿದರು. ಇಂಥ ಸಿಂಹ ಧೈರ್ಯವು ಬರಿ ಓದಿನ ಶಿಕ್ಷಣದಿಂದ ಉಂಟಾಗಲಾರದು. ಓದು ಪ್ರಥಮ ಸಾಧನ, ಅದುವೇ ಸಿದ್ಧಿಯಲ್ಲ. (Literacy is just a beginning, means for education and not an end in it-self)

ಪ್ರಾಥಮಿಕ ಶಾಲೆಗಳಲ್ಲಿ ಅನೇಕ ಲಲಿತಕಲೆಗಳನ್ನು (Fine arts) ಕಲಿಸುವಿರಿ. ಸಂಗೀತ, ಚಿತ್ರಕಲೆ, ಹೊಲಿಗೆ ಹಾಗೂ ಕೈಕೆಲಸ ಇವೆಲ್ಲವೂ ಮಕ್ಕಳ "ಬಹುಮುಖ ಆಸಕ್ತಿ"ಗಳಿಗನುಗುಣವಾಗಿ (Many-sided interests) ಬೇಕೆನ್ನುವಿರಿ. ಈ ತತ್ವವನ್ನು ಹರ್ಬಾರ್ಟನು ತಿಳಿಸಿಕೊಟ್ಟನು. ಪೆಸ್ಟಾಲಜಿ, ಫ್ರೊಬೆಲ್, ಮೊಂಟೆಸರಿ ಅವರೂ ಸಹ ಮಗುವಿನ ವ್ಯಕ್ತಿತ್ವದ ಅಖಂಡ ವಿಕಾಸಕ್ಕೆ ಇವು ಅಗತ್ಯವಾಗಿವೆ ಎಂದು ಸ್ಪಷ್ಟ ಮಾಡಿರುವರು. ಈ ಎಲ್ಲ ವಿಷಯವನ್ನು ಕಲಿಸುವಾಗ, ಶಿಕ್ಷಣದ ವೆಚ್ಚದ ಕಡೆಗೆ ಗಮನಿಸುವಿರಾ? ಇಲ್ಲ! (Craft) ಮೂಲೋದ್ಯೋಗದ ಮಾತೆತ್ತಿದರೆ ಮಾತ್ರ, ನೀವು ವೆಚ್ಚದ ಗೊಡವೆಗೆ ಬೀಳುವಿರಿ. ಇದು ಸರಿಯೇ? (Craft is the soul of Basic Education, as it is one of the media of Education.) ಉದ್ಯೋಗವು ಮೂಲ ಶಿಕ್ಷಣದ ಜೀವಾಳವು. ಯಾಕೆಂದರೆ ಅದು ಶಿಕ್ಷಣದ ಒಂದು ಮಾಧ್ಯಮವು ಎಂದು ಗಾಂಧೀಜಿಯವರು ಒತ್ತಿ ಒತ್ತಿ ಹೇಳಿದರು. ಇದು ಬಹು ಜನರನ್ನು ವಿಚಾರಕ್ಕೆ ಹಚ್ಚಿತು, ನಮ್ಮ ಶಿಕ್ಷಣವು ವೆಚ್ಚದ್ದಾಗುವದು, ನಮ್ಮ ಮಕ್ಕಳ ಬುದ್ಧಿ ಹಾಳಾಗುವದು. ಎಂದು ಭಯಪಟ್ಟು ಎಷ್ಟೋ ಜನರು ಮೂಲಶಿಕ್ಷಣದ ಕಡೆಗೆ ಇನ್ನೂ ಸಾಶಂಕ ದೃಷ್ಟಿಯಿಂದ ನೋಡುವರು. ಈ ಭ್ರಮೆ ದೂರಾಗಬೇಕಾಗಿದೆ. ಜನ-ಮನ ಇನ್ನು ತಿಳಿಯಾಗಬೇಕಾಗಿದೆ; ಎಂದರೆ ಎಲ್ಲವೂ ಸರಿಯಾಗಿ ಅರ್ಥವಾಗುವದು. ಕೈಯಿಂದ ಮೆದುಳಿಗೆ, ಮೆದುಳಿನಿಂದ ನೇರವಾಗಿ ಹೃದಯಕ್ಕೆ ತಟ್ಟುವ ಶಿಕ್ಷಣ ಬೇಕೆಂದು ಎಲ್ಲರೂ ಹೇಳುತ್ತಿರುವರು. ತತ್ವಜ್ಞಾನಿ ಬರ್ಟ್ರಾಂಡ್ ರಸೆಲ್‌ರು "ವಿವೇಕ ಮೂಲ್ಯ ಶಿಕ್ಷಣ" ಎಂದರೆ ವಿವೇಕವನ್ನು ಅರಳಿಸುವ ಶಿಕ್ಷಣವು ನಮಗೆ ಬೇಕೆಂದು ನಿರ್ದೇಶ ಕೊಟ್ಟಿರುವರು. ಡಾ. ರಾಧಾಕೃಷ್ಣನ್ ಅವರೂ ಮೇಲಿಂದ ಮೇಲೆ ಈ ಮಾತಿನ ಕಡೆಗೆ ಸಕಾಲಿಕ ಲಕ್ಷ್ಯವನ್ನು ಎಳೆಯುತ್ತಿರುವರು. Hand (ದೇಹ), Head (ಬುದ್ಧಿ), Heart (ಹೃದಯ) ಇವುಗಳ ಮಧುರ ಮಿಲನ ಒಳ್ಳೆಯ ಜೀವನಕ್ಕೂ ಬೇಕು; ಒಳ್ಳೆಯ ಶಿಕ್ಷಣಕ್ಕೂ ಬೇಕು (EcH^{೩})

ಜೀವನವು ಒಂದು ಅನುಭವ ಮಂಟಪ. ಅದೊಂದು ದೊಡ್ಡ ಪಾಠಶಾಲೆ; ಅದು ಅನುಭವ ಮಾಲಿಕೆಯೂ ಅಹುದು; ಪ್ರೀತಿ ಸ್ಫೂರ್ತಿಯ ಕೇಂದ್ರ; ಅತೃಪ್ತಿ ಅಶಾಂತಿಯ ಮೂಲ; ಸಹ ಜೀವನ ವಿಶ್ವಶಾಂತಿಯ ಸಾಧನ: ಇದು ವಿಶ್ವದ ಒಗಟು. ಬಿಡಿಸಿರಿ ಇಲ್ಲವೆ ನಾಶವಾಗಿರಿ ಎಂದು ನಿಸರ್ಗವು ಕರೆಕೊಟ್ಟಿದೆ. Solve, lest, ye will Perish ! ದುಡಿಯುವದೇ ಧರ್ಮ. ಕಾಯಕವೇ ಕೈಲಾಸ. ಕಾಯಕದ ಮುಖಾಂತರ ಕೊಡುವ ಶಿಕ್ಷಣ ಬಾಳಿನ ಶಿಕ್ಷಣ. ಬರಿಯ ಬೋಧೆಯಿಂದು ಬಡಬಡಿಸಬೇಡಿರಿ. (Preaching is not professing, Teaching is not cheating. live and learn. learn to live well. Make others live well. This is real life centred Education. Basic Education is a philosophy of life. It is not a mere system of Education) ಬೋಧೆಯೆಂದರೆ ಜಂಭಕೊಚ್ಚುವದಲ್ಲಿ, ಕಲಿಸುವದೆಂದರೆ ವಂಚಿಸುವದಲ್ಲ. ಬಾಳನ್ನು ಅನುಭವಿಸು ಮತ್ತು ಕಲಿ ಹಸನಾಗಿ ಬಾಳು. ಪರರನ್ನು ಹಸನಾಗಿ ಬಾಳುವಂತೆ ಮಾಡು. ಇದು ನಿಜವಾಗಿ ಶಿಕ್ಷಣದ ಕಲ್ಪನೆ. ಮೂಲ ಶಿಕ್ಷಣವು ಜೀವನದ ಸಿದ್ಧಾಂತವು. ಅದು ಪಾಠಗಳನ್ನು ಕಲಿಸುವ ಕ್ರಮವನ್ನು ಸೂಚಿಸುವ ವಿಧಾನ ಮಾತ್ರವಲ್ಲ. ಈಗ (Education for life and through life) ಜೀವಿಕೆಯ ಮುಖಾಂತರ ಜೀವನ ಶಿಕ್ಷಣವೆಂಬ ಕಲ್ಪನೆಯೆ ಶಿಕ್ಷಣ ಕ್ಷೇತ್ರದಲ್ಲಿ ಪ್ರಧಾನವಾಗಿದೆ.

ಅಡಾಲ್ಫ ಫೆರಿಯೂ ಎಂಬವನು ಯುರೋಪ ಖಂಡದಲ್ಲಿ, ಜಾನ್ ಡ್ಯೂಯಿ ಎಂಬವನು ಅಮೇರಿಕೆಯಲ್ಲಿ ಈಗಾಗಲೇ ಕೃತಿಮೂಲ ಹಾಗೂ ವೃತ್ತಿಮೂಲ ಶಿಕ್ಷಣದ (Activity school movement) ವಿಚಾರ ಪ್ರವಾಹವನ್ನು ಬಿಟ್ಟಿರುವರು. ಅದನ್ನು ತಡೆಯಲು ಈಗ ಯಾರಿಗೂ ಸಾಧ್ಯವಿಲ್ಲ. ಈ ಪ್ರವಾಹದಲ್ಲಿ ಸತ್ಯದ ಸೆಲೆ ಇದೆ. ವ್ಯವಹಾರದ ವಾಸ್ತವತೆ ಇದೆ. ಈ ಘನ ಪ್ರವಾಹದ ಗುಂಟ, ತುಸು ತುಸು ಕೋನಗಳನ್ನು ಮಾಡಿಕೊಂಡು ಜಗತ್ತಿನ ಶಿಕ್ಷಣ ತಜ್ಞರು ಈಗ ಈಸುತ್ತಿರುವರು. ಗಾಂಧೀಜಿಯವರ ಮೂಲಶಿಕ್ಷಣದ ಮೂಲವಿಚಾರಗಳು, ಅಪರೋಕ್ಷವಾಗಿ, ಈ ಪ್ರವಾಹವನ್ನೇ ಸೂಚಿಸುತ್ತವೆ. ರೂಸೊ, ಪೆಸ್ಟಾಲಝಿ ಅವರೂ ೧೮ ನೆಯ ಶತಮಾನದಲ್ಲಿಯೇ ಈ ವಿಚಾರಗಳನ್ನು ಕೊಟ್ಟಿರುವರು. ಆದುದರಿಂದ ಮೂಲ ಶಿಕ್ಷಣಕ್ಕೆ ಆಧುನಿಕ ಶಿಕ್ಷಣ ಶಾಸ್ತ್ರಜ್ಞರ ಅಧಾರಗಳಿವೆ. ಅದು ಪುರೋಗಾಮಿಯಾಗಿದೆ.

ಇಲ್ಲಿಯ ವರೆಗಿನ ಮೂಲ ಶಿಕ್ಷಣದ ಎಷ್ಟೋ ಪ್ರಯೋಗಗಳು ಅನೇಕ ಅಡೆ-ತಡೆಗಳಲ್ಲಿ ಮಾಡಲ್ಪಟ್ಟಿವೆ. ಆದಾಗ್ಯೂ ಮೂಲ ಶಿಕ್ಷಣವು ಬಾಳಲು ಬಂದಿದೆ. ಬೆಳೆಯಲು ನಿಂತಿದೆ. ಇದುವೇ ನಮ್ಮ ನಾಡಿನ ನಾಳಿನ ಶಿಕ್ಷಣ! ಬಾಪೂಜಿಯವರ ದೂರ ದೃಷ್ಟಿ (fore-sight)ಯನ್ನು ನಾವು ಅರಿಯಬೇಕು. ಅವರ ಒಳನೋಟ (in-sight) ಇನ್ನು ಎಷ್ಟೋ ವರುಷಗಳ ವರೆಗೆ ಒಗಟವಾಗಿ ಉಳಿಯಬಹುದು. ಅವರು ರೂಪಿಸಲಪೇಕ್ಷಿಸಿದ ಅಹಿಂಸಾತ್ಮಕ ಸ್ವಾವಲಂಬಿ ಸಮಾಜವು ಬರಿಯ ಕನಸಲ್ಲ! ಇಂದು ವಿಶ್ವದಲ್ಲಿ ಚಲಿಸುತ್ತಿರುವ ಉಪಗ್ರಹಗಳೇ ಇದಕ್ಕೆ ಸಾಕ್ಷಿ! ಅವರ ಕನಸು ನನಸಾಗುವಂತೆ ಉಪಾಧ್ಯಾಯರು ದುಡಿದು ತೋರಿಸಬೇಕಾಗಿದೆ.

ಇದು ಸಂಕ್ರಾಂತಿಯ ಸಮಯ ಸಕಲರ ಸತ್ವ ಪರೀಕ್ಷೆಯ ಕಾಲ! ಎಲ್ಲರೂ ತಮ್ಮ ತಮ್ಮ ಹೃದಯ ಹಸನ ಮಾಡಿಕೊಳ್ಳುವ ಕಾಲ! ಸ್ವತಂತ್ರ ಭಾರತವು ಸಮೃದ್ಧಿ ಭಾರತವಾಗಿ ಬೆಳೆಯಬೇಕಾಗಿದೆ. ಅದು ವಿಶ್ವದಲ್ಲಿ ಸಮರ್ಥ ಸ್ಥಾನವನ್ನು ತನ್ನದೇ ಆದ ಹೊಸ ಸಿದ್ಧಾಂತದ ಮುಖಾಂತರ ಪಡೆಯಬೇಕಾಗಿದೆ. ಇದು ಯೋಗ್ಯ ಶಿಕ್ಷಣದಿಂದ ಮಾತ್ರ ಸಾಧ್ಯ! ಇದುವೇ ಗಾಂಧೀ ಮಾರ್ಗ. (Gandhian way) ಕಳೆದ ಎರಡು ವರ್ಷಗಳ ಹಿಂದೆ (All India Basic Education Assessment Board) ಅಖಿಲ ಭಾರತ ಮೂಲ ಶಿಕ್ಷಣ ಪರಿಶೀಲನಾ ಸಮಿತಿಯವರು ಭಾರತದಲ್ಲಿಯ ಮೂಲ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿ, ಕಾರ್ಯಕರ್ತರೊಡನೆ ವಿಚಾರ ವಿನಿಮಯ ಮಾಡಿ, ಮೂಲ ಶಿಕ್ಷಣದ ಬಗೆಗೆ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಕೇಂದ್ರ ಸರಕಾರವು ಕಡ್ಡಾಯದ ಉಚಿತ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕೊಡಲು ಮುಂದೆ ಬಂದಿದೆ. ಅದು ರಾಜ್ಯಘಟನೆಯಲ್ಲಿಯೂ ನಮೂದಿಸಲ್ಪಟ್ಟಿದೆ. ಈ ಪ್ರಾಥಮಿಕ ಶಿಕ್ಷಣವು ಮೂಲ ಶಿಕ್ಷಣವೇ ಎಂದು ತನ್ನ ಧೋರಣವನ್ನು ಸ್ಪಷ್ಟೀಕರಿಸಿದೆ. ತುಸು ನಿಧಾನವಾಗಿ ಸಾಗಬಹುದು ಅಷ್ಟೆ! ದ್ವಿತೀಯ ಪಂಚವಾರ್ಷಿಕ ಯೋಜನೆಯ ಕೊನೆಯ ಹಂತದಲ್ಲಿ, ಕಡ್ಡಾಯದ ಉಚಿತ ಸಾರ್ವತ್ರಿಕ ಶಿಕ್ಷಣವನ್ನು ಸಾಧಿಸಲು ಶಕ್ಯವಾಗದಿದ್ದಲ್ಲಿ, ತೃತೀಯ ಪಂಚವಾರ್ಷಿಕ ಯೋಜನೆಯ ಕೊನೆಗಾದರೂ ಇದನ್ನು ಸಾಧಿಸಬಹುದೆಂದು ಡಾ. ಶ್ರೀಮಾಳಿಯವರು ಮೊನ್ನೆ ಮೊನ್ನೆ ತಮ್ಮ ಆಶಯವನ್ನು ವ್ಯಕ್ತಪಡಿಸಿರುವರು. ಎಲ್ಲ ರಾಜ್ಯ ಸರಕಾರಗಳೂ ಈ ದಿಶೆಯಲ್ಲಿ ಬಹಳಷ್ಟು ಶ್ರಮವಹಿಸಿ, ಶಿಕ್ಷಣ ಯೋಜನೆಗಳನ್ನು ರೂಪಿಸುತ್ತಲಿವೆ.

ಮೂಲ ಶಿಕ್ಷಣವು ಭಾರತಕ್ಕೆ ಬೇಕಾದ ಶಿಕ್ಷಣ! ಅದು ಭಾರತದ ಶಿಕ್ಷಣ ತಜ್ಞರಿಂದ ರಚಿತವಾದ ಶಿಕ್ಷಣ ಯೋಜನೆ. ಅದು ಜಗತ್ತಿನ ಶಿಕ್ಷಣ ಚರಿತ್ರೆಯಲ್ಲಿ "ಭಾರತೀಯರ ಶಿಕ್ಷಣ"ವೆಂದು ಈಗಾಗಲೇ ಒಂದು ಅಧ್ಯಾಯವನ್ನು ಗಳಿಸಿದೆ. ಅದು ಭಾರತೀಯರ ಸಂಸ್ಕೃತಿಯನ್ನು

ರಕ್ಷಿಸಿ-ಪೋಷಿಸುವ ಶಿಕ್ಷಣ! ಅದು ಬಾಳಿನ ಶಿಕ್ಷಣ. ಬಾಳುವ ಶಿಕ್ಷಣ. ಬೆಳೆಯುವ ಶಿಕ್ಷಣ, ಜೀವನದ ಮೂಲ್ಯಗಳನ್ನು ವಿಕಸಿಸುವ ಶಿಕ್ಷಣ. ವಿಶ್ವಕುಟುಂಬದ ದರ್ಶನದತ್ತ ಒಯ್ಯುವ ಶಿಕ್ಷಣ. ಇದು ಬರಿಯ ಭ್ರಮೆಯಲ್ಲ. ಇದರಲ್ಲಿ ನಾಡಿನ ಉಜ್ವಲ ಭವಿಷ್ಯವಿದೆ. ಈ ಶಿಕ್ಷಣ ಕ್ರಮದಲ್ಲಿ ಕೆಲವು ಲೋಪದೋಷಗಳಿವೆ. ಇದು ನಿಜ. ಜಗತ್ತಿನಲ್ಲಿ ಯಾವುದು ಪರಿಪೂರ್ಣತೆಯನ್ನು ಪಡೆದಿದೆ? ಪ್ರಯೋಗದ ಫಲವಾಗಿ ಕಂಡು ಬಂದ ಲೋಪದೋಷಗಳನ್ನು ಆಗಾಗ ಸರಿಪಡಿಸಿಕೊಳ್ಳೋಣ.

ಮೂಲ ಶಿಕ್ಷಣವು ಸತ್ವಯುತ ಶಿಕ್ಷಣವು. ಅದು ಸತ್ಯದ ಸೆಲೆಯಾಗಿದೆ; ಅಹಿಂಸೆಯ ಬುಗ್ಗೆಯಾಗಿ ಪುಟಿಯುತ್ತಿದೆ. ವರ್ಗರಹಿತ, ಶೋಷಣ ರಹಿತ, ಅಹಿಂಸಾತ್ಮಕ ಸಮಾಜ ರಚನೆಯು ಮೂಲ ಶಿಕ್ಷಣದಿಂದಲೇ ಸಾಧ್ಯ! ಇದುವೇ ಬಾಪೂಜಿಯವರು ನಮಗೆ ಕೊಟ್ಟ ಅಮರ ಸಂದೇಶ! ಇದರಲ್ಲಿ ಅಚಲವಾದ ಶ್ರದ್ಧೆ ಬೇಕು. ಪರಮಾತ್ಮನು ಅಂಥ ಶ್ರದ್ಧೆಯನ್ನು ನಮ್ಮೆಲ್ಲರಿಗೂ ಕರುಣಿಸಲಿ!

ಜಯ್-ಹಿಂದ್

ದ್ವಿತೀಯ ಪಂಚವಾರ್ಷಿಕ ಯೋಜನೆಯ ಸಾಧನೆಯಲ್ಲಿ ಜೀವನ ಶಿಕ್ಷಣ ಸಾಲೆಗಳ ಪಾತ್ರ

ಲೇಖಕರು : **ಮಾನೇಶ್ವರ ನಾಯಕ**

ದ್ವಿತೀಯ ಪಂಚವಾರ್ಷಿಕ ಯೋಜನೆಯು ದಿ. ೧—೪—೧೯೫೬ ರಿಂದ ಕಾರ್ಯಾಚರಣೆಯಲ್ಲಿ ಬಂದಿದ್ದು ೩೧—೩—೧೯೬೧ ರಲ್ಲಿ ಕೊನೆಗೊಳ್ಳಲಿದೆ. ಈ ರಾಷ್ಟ್ರೀಯ ಯೋಜನೆಯ ಮೊದಲಿನ ಎರಡು ವರುಷಗಳು ಮುಗಿಯುತ್ತ ಬಂದಿದ್ದು ಉಳಿದ ಮೂರು ವರುಷಗಳ ಅವಧಿಯಲ್ಲಿ ಅದರ ಯಶಸ್ಸಿಗೆ ಜೀವನ ಶಿಕ್ಷಣ ಸಾಲೆಗಳು ಹೇಗೆ ನೆರವಾಗಬಲ್ಲವು? ಎಂಬುದೇ ಇಂದಿನ ನನ್ನ ಭಾಷಣದ ಉದ್ದೇಶವಾಗಿದೆ—

(ಅ) ಯೋಜನೆಯ ರೂಪರೇಷೆ:- ಸ್ವತಂತ್ರ ಭಾರತ ಸರಕಾರವು ತನ್ನ ನವ ಭಾರತ ನಿರ್ಮಾಣ ಕಾರ್ಯಕ್ರಮದ ಅಂಗವಾಗಿ ಅನೇಕ ಪಂಚವಾರ್ಷಿಕ ಯೋಜನೆಗಳನ್ನು ಕೈಕೊಳ್ಳಲಿದೆ. ಇವುಗಳಲ್ಲಿ ಮೊಟ್ಟಮೊದಲಿನದಾದ ಪ್ರಥಮ ಪಂಚವಾರ್ಷಿಕ ಯೋಜನೆಯು ೧೯೫೧ ರಿಂದ ೧೯೫೬ ವರೆಗೆ ಕಾರ್ಯಾಚರಣೆಯಲ್ಲಿ ಬಂದು ರಾಷ್ಟ್ರಾಭಿವೃದ್ಧಿಗೆ ಜನತೆಯಲ್ಲಿರಬೇಕಾದ ಕಳಕಳಿಯನ್ನು ಜಾಗ್ರತಗೊಳಿಸುವ ಜೊತೆಗೆ ಮುಂದಿನ ಅನೇಕ ಯೋಜನೆಗಳಿಗೆ ಅಸ್ತಿವಾರವೆನಿಸುವ ವಿವಿಧೋದ್ದೇಶಗಳ ನದಿ-ಕೊಳ್ಳಗಳ ಯೋಜನೆಗಳೇ ಮೊದಲಾದ ಕಾರ್ಯಗಳನ್ನು ಕೃತಿಗಿಳಿಸಿದೆ.

ಎರಡನೇಯ ಪಂಚವಾರ್ಷಿಕ ಯೋಜನೆಯು ಮೊದಲನೇ ಪಂಚವಾರ್ಷಿಕ ಯೋಜನೆಗಿಂತ ಮಹತ್ತು ಬೃಹತ್ತುಗಳಲ್ಲಿ ಹೆಚ್ಚಿನದಾಗಿದೆ. ಇದನ್ನು ಯೋಜನೆಯ ಉದ್ದೇಶ ಹಾಗೂ ಅದಕ್ಕಾಗಿ ಮೀಸಲಾಗಿಟ್ಟ ಒಟ್ಟು ಮೊತ್ತದಿಂದಲೇ ಕಂಡುಕೊಳ್ಳಬಹುದು. ಮೊದಲನೆಯ ಯೋಜನೆಯ ಅಂದಾಜು ವೆಚ್ಚವು ೨,೩೫೦ ಕೋಟಿ ರೂ. ಇದ್ದರೆ ಎರಡನೇಯ ಯೋಜನೆಯ ಅಂದಾಜು ವೆಚ್ಚವು ೪,೮೦೦ ಕೋಟಿ ರೂ.ಗಳಷ್ಟಿದೆ. ಮೊದಲನೆಯ ಯೋಜನೆಯ ಅಂದಾಜು ವೆಚ್ಚದ ೨,೩೫೦ ಕೋಟಿ ರೂಪಾಯಿಗಳಲ್ಲಿ ೨೦೦೦ ಕೋಟಿ ರೂ. ಮಾತ್ರ ವೆಚ್ಚವಾಗಿದೆ ಎಂದು ಇದೀಗ ಕಂಡು ಬಂದಿದೆ. ಇದರಿಂದ ೨ನೆಯ ಯೋಜನೆಗೆ ತೆಗೆದಿಟ್ಟ ಒಟ್ಟು ಹಣವು ಮೊದಲಿನಕ್ಕಿಂತ ೨ ಪಟ್ಟುಗಳಿಗಿಂತಲೂ ಹೆಚ್ಚು ಎಂಬುದು ಸುಸ್ಪಷ್ಟವಾಗಿದೆ.

ಈ ಯೋಜನೆಯ ಗಾತ್ರದ ಸರಿಯಾದ ಕಲ್ಪನೆಯು ಕೆಳಗಿನ ಸಂಗತಿಗಳಿಂದ ಆಗಬಹುದು. ಪ್ರಥಮ ಯೋಜನೆಯ ಫಲವಾಗಿ ೧೯೫೫-೫೬ ಸಾಲಿನ ನಮ್ಮ ರಾಷ್ಟ್ರೀಯ ಆದಾಯವು ೧೦,೮೦೦ ಕೋಟಿ ರೂ. ಮತ್ತು ಕೇಂದ್ರ ಮತ್ತು ರಾಜ್ಯ ಸರಕಾರಗಳ ಒಟ್ಟು ವರಮಾನವು ೫,೦೦೦ ಕೋಟಿ ರೂಪಾಯಿ ಎಂದು ತಜ್ಞರ ಹೇಳಿಕೆಯಾಗಿದೆ. ಅಂದರೆ ನಮ್ಮ ಈ ಯೋಜನೆಗೆ ನಮ್ಮ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಒಂದು ವರ್ಷದ ಒಟ್ಟು ಆದಾಯಕ್ಕಿಂತ ಸ್ವಲ್ಪ ಕಡಿಮೆ ಹಣವನ್ನು ತೆಗೆದಿ

ಡಲಾಗಿದೆ ಎಂದಂತಾಯಿತು. ನಮ್ಮ ಸರಕಾರಗಳ ಆದಾಯದಲ್ಲಿ ಪ್ರತಿ ವರ್ಷವೂ ೪೬೫೦ ಕೋಟಿ ರೂ. ಅಭಿವೃದ್ಧಿ ಯೋಜನೆಗಳನ್ನು ಬಿಟ್ಟು ರಕ್ಷಣೆ ಹಾಗೂ ಆಡಳಿತಗಳ ಆವರ್ತ ವೆಚ್ಚಕ್ಕಾಗಿ ಖರ್ಚಾಗುತ್ತದೆ. ವಾರ್ಷಿಕ ಉಳಿತಾಯವಾದ ೩೫೦ ಕೋಟಿ ರೂ.ಗಳಿಂದಲೇ ಅಭಿವೃದ್ಧಿ ಯೋಜನೆಗಳಿಗೆ ಹಣ ಪೂರೈಸಬೇಕಾಗಿದೆ. ಇದರಿಂದಾಗಿ ಹೆಚ್ಚಿನ ಕರಭಾರವು ಅನಿವಾರ್ಯವಾಗಿದೆ. ಆದುದರಿಂದ ಕೊರತೆಯ ಹಣವನ್ನು ಹೆಚ್ಚಿನ ತೆರಿಗೆ, ಅಭಿವೃದ್ಧಿ ಸಾಲ, ಅಲ್ಪ ಉಳಿತಾಯದ ಯೋಜನೆ ಮತ್ತು ಕೊರತೆಯ ಧನ ವಿನಿಯೋಗ (Deficit Financing) ಮುಂತಾದವುಗಳಿಂದ ತುಂಬಿಕೊಳ್ಳುವಂತೆ ಯೋಜಿಸಲಾಗಿದೆ.

ದ್ವಿತೀಯ ಯೋಜನೆಯ ಉದ್ದೇಶಗಳನ್ನು ಯೋಜನೆಯ ಕರಡಿನಲ್ಲಿ ಕೆಳಗಿನಂತೆ ಹೇಳಲಾಗಿದೆ.

೧) ಜನತೆಯ ಜೀವನ ಮಟ್ಟವು ಏರುವಂತೆ ರಾಷ್ಟ್ರೀಯ ಆದಾಯದಲ್ಲಿ ಹೆಚ್ಚುವರಿ (ತಲಾ ೨೮೧ ರಿಂದ ೩೩೧ ರೂ)

೨) ಮೂಲ ಮತ್ತು ದೊಡ್ಡ ಕೈಗಾರಿಕೆಗಳ ಮೂಲಕ ಶೀಘ್ರ ಔದ್ಯೋಗೀಕರಣ (೩ ಉಕ್ಕಿನ ಕಾರಖಾನೆ ಮತ್ತು ೩. ಗೊಬ್ಬರ ಕಾರಖಾನೆ).

೩) ಉದ್ಯೋಗಾವಕಾಶವನ್ನು ವಿಶೇಷವಾಗಿ ಹೆಚ್ಚಿಸುವದು.

೪) ಆದಾಯ ಸಂಪತ್ತುಗಳ ಅಸಮಾನತೆಯನ್ನು ಕಡಿಮೆ ಮಾಡಿ ಆರ್ಥಿಕ ಶಕ್ತಿಯನ್ನು ಸಮನಾಗಿ ಹಂಚುವದು.

ಮೊದಲನೆಯ ಯೋಜನೆಯು ರಾಮಾಯಣದಂತಿದ್ದರೆ ಎರಡನೆಯ ಯೋಜನೆಯು ಮಹಾಭಾರತದಂತಿದೆ. ಅದು ರಾಷ್ಟ್ರದ ಮಹಾಯೋಜನೆಯಾಗಿದ್ದು ಅದ ಯಶಸ್ಸು ರಾಷ್ಟ್ರೀಯ ಅಭಿವೃದ್ಧಿ ಮಂಡಲವು ಅದನ್ನು ಸ್ವೀಕರಿಸುವ ಮುನ್ನ ತನ್ನ ೨-೬-೧೯೫೬ ರ ಗೊತ್ತುವ ಯಲ್ಲಿ ಹೇಳಿದಂತೆ ಜನತೆಯ ಅದಮನೀಯವಾದ ಕಳಕಳ ಮತ್ತು ಸಹಕಾರಗಳನ್ನು ಅವಲಂಬಿಸಿದೆ. ಆದುದರಿಂ ಸುಮಾರು ೮೦% ನಿರಕ್ಷರಿಗಳನ್ನೊಳಗೊಂಡ ಈ ದೇಶದಲ್ಲಿ ಯೋಜನೆಗಳು ಫಲಪ್ರದವಾಗಿ ಕಾರ್ಯಾಚರಣೆಯಲ್ಲಿ ಬ ಬೇಕಾದರೆ ಶಿಕ್ಷಣ ಕೇಂದ್ರಗಳಿಂದ ಜೀವನ ಶಿಕ್ಷಣ ಸಾ ಗಳ ಹೊಣೆಯು ಗುರುತರವಾಗಿದೆ. ಈ ಸಾಲೆಗಳು ತಮ್ಮ ಕರ್ತವ್ಯವಾದ ವಿದ್ಯಾದಾನದ ಜೊತೆಗೆ ಸಮಾಜ ಕೇಂದ್ರಗಳಂತೆಯೂ ಕೆಲಸ ಮಾಡುವದು ಅನಿವಾರ್ಯವಾಗಿದೆ. ಯಾಕೆಂದರೆ ಹಿಂದಿನ ಪಠ್ಯೇತರ(Extra-curricular) ಚಟುವಟಿಕೆಗಳೇ ಇಂದು ಜೀವನ ಶಿಕ್ಷಣ ಶಾಲೆಗಳ ಸಹಪಠ್ಯ ಚಟುವಟಿಕೆಗಳಾಗಿ (Co-curricular) ಪ ಣಮಿಸಿವೆ.

(ಬ) ಜೀವನ ಶಿಕ್ಷಣ ಸಾಲೆಗಳ ಪಾತ್ರ:—

ಯೋಜನೆಯ ಸಾಧನೆಗಾಗಿ ಜೀವನ ಶಿಕ್ಷಣ ಸಾಲೆಗಳು ಕೆಳಗೆ ವಿವರಿಸಿದ ಬಗೆಗಳಲ್ಲಿ ತಮ್ಮ ಸಹಾಯವನ್ನು ಸಲ್ಲಿಸಬಹುದು.

೧. ಶಿಕ್ಷಣ ಪ್ರಚಾರ : ಜೀವನ ಶಿಕ್ಷಣ ಸಾಲೆಗಳು ಸರಕಾರಿ ದಾಖಲೆಗಳಲ್ಲಿ ಜೀವನ ಶಿಕ್ಷಣ ಸಾಲೆಗಳಿರದೆ ತಮ್ಮ ದೈನಂದಿನ ಕಾರ್ಯನಿರ್ವಹಣೆಯಲ್ಲಿಯೂ ಇರಬೇಕು. ಅವು ವಿದ್ಯಾರ್ಥಿಗಳಿಗೂ ಅವರ ಪಾಲಕರಿಗೂ ಸ್ಫೂರ್ತಿಯ ಸೆಲೆಗಳಾಗಬೇಕು.

ಕೆಳಗೆ ಕೊಟ್ಟ ಕೋಷ್ಟಕದಿಂದ ಜೀವನ ಶಿಕ್ಷಣ ಸಾಲೆಗಳ ಕಾರ್ಯಕ್ಷೇತ್ರದ ಅರಿವು ಸುಲಭವಾಗಿ ಆಗಬಹುದು.

	ವಿವರಗಳು	1950-51 ಯೋಜನೆಗಳ ಮೊದಲು	1955-56 ೧ನೇ ಯೋಜನೆಯ ಕೊನೆ	1960-61 ೨ನೇ ಯೋಜನೆಯ ಕೊನೆ
೧	ಕೆಳಗಿನ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳ ಪ್ರತಿಶತ ಪ್ರಮಾಣ– (೬ರಿಂದ ೧೧ ವಯೋಮಾನ)	42%	51%	63%
೨	ಮೇಲಿನ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳ ಪ್ರತಿಶತ ಪ್ರಮಾಣ–(೧೧ರಿಂದ೧೪ ವಯೋಮಾನ)	14%	19%	22.5%

೩	ಪ್ರಾಥಮಿಕ ಶಾಲೆಗಳಿಗೆ ಹೋಗುವವರು (೧ ಹಾಗೂ ೨ ಕೂಡಿ) % (೬ರಿಂದ ೧೪ ವಯೋಮಾನ)	32%	40%	49%
೪	ಪ್ರಾಥಮಿಕ ಹಾಗು ಜೀವನ ಶಿಕ್ಷಣ ಸಾಲೆಗಳು (ಲಕ್ಷದಲ್ಲಿ)	2.23	2.93	3.50
೫	ಜೀವನ ಶಿಕ್ಷಣ ಸಾಲೆಗಳು	1,751	10,000	38,400
೬	ಪ್ರಾಥಮಿಕ ಶಿಕ್ಷಕರು (ಲಕ್ಷದಲ್ಲಿ)	7.4	10.3	13.4

ನಮ್ಮ ರಾಜ್ಯ ಘಟನೆಯಲ್ಲಿ ೬ ರಿಂದ ೧೪ ವರ್ಷದ ಎಲ್ಲ ಮಕ್ಕಳಿಗೂ ೧೯೬೧ ನೆಯ ಸಾಲಿನಲ್ಲಿ, ಎಂದರೆ ದ್ವಿತೀಯ ಯೋಜನೆಯ ಅಂತ್ಯದೊಳಗಾಗಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕೊಡಬೇಕೆಂದು ಆದೇಶಿಸಲಾಗಿದೆ. ಘಟನೆಯ ಆದೇಶಕ್ಕೂ ಹಾಗು ನಮ್ಮ ಕಾರ್ಯಾಚರಣೆಗಳಿಗೂ ಇರುವ ಅಂತರವು ಮೇಲಿನ ಸಂಖ್ಯೆಗಳಿಂದ ತಿಳಿದು ಬರುವಂತಿದೆ. ಘಟನೆಯ ಉದ್ದೇಶಗಳು ಆದರ್ಶಪ್ರಾಯಗಳೆಂದೂ ಅವನ್ನು ಕಾರ್ಯರೂಪಕ್ಕೆ ತರಲು ಇರುವ ತೊಂದರೆಗಳು ಅನೇಕವೆಂದೂ ವಾದಿಸಬಹುದು. ನಮ್ಮ ೨ನೆಯ ಯೋಜನೆಯ ಕೊನೆಗೆ ಕೇವಲ ೪೯% ಬಾಲಕರು ಸಾಲೆಗೆ ಹೋಗಲು ಅವಕಾಶವಿರುವದು ನಿಜವಾಗಿಯೂ ಶೋಚನೀಯ. ಅಂದರೆ ಸಾಲೆಗೆ ಹೋಗುವ ವಯಸ್ಸಿನ ಮಕ್ಕಳಲ್ಲಿ ಅರ್ಧಕ್ಕಿಂತ ಹೆಚ್ಚು ಮಕ್ಕಳಿಗೆ ಸಾಲೆಗಳ ಅನುಕೂಲತೆ ಸಹ ಇಲ್ಲವಂತಾಗುವದು. ಪಟದ ಮೇಲಿನ ಸಂಖ್ಯೆಯಲ್ಲಿ ಕೇವಲ ೫೦% ಬಾಲಕರು ಹಾಜರ ಇರುತ್ತಾರೆಂಬುದು ಪರಿಸ್ಥಿತಿಯ ಪ್ರತ್ಯಕ್ಷ ಅನುಭವವಿದ್ದವರಿಗೆ ಗೊತ್ತಿದ್ದ ಮಾತು. ಯಾಕೆಂದರೆ "ಒತ್ತಾಯ ಶಿಕ್ಷಣವು ಕೇವಲ ಕಾಗದದ ಮೇಲೆ ಇದೆ" ಎಂದು ಹಿಂದೆ ಮುಂಬಯಿ ಪ್ರಾಂತದ ಆದರ್ಶ ಶಿಕ್ಷಣ ಮಂತ್ರಿಗಳಾದ ದಿ. ಖೇರರೇ ಒಮ್ಮೆ ಉದ್ಗರಿಸಿದ್ದಾರೆ! ಮೇಲಾಗಿ ಸಾಲೆಗೆ ಹೋಗಲು ಅವಕಾಶವಿಲ್ಲದ ೫೦% ಬಾಲಕರ ಸಮಸ್ಯೆ ಈಗಾಗಲೇ ಸಾಲೆಗೆ ಹೋಗುತ್ತಿರುವ ಬಾಲಕರ ಸಮಸ್ಯೆಗಳಿಂದ ತೀರ ಭಿನ್ನವಾಗಿವೆ. ಅಂಥ ಬಾಲಕರ ಶಿಕ್ಷಣಕ್ಕೆ ಕಡಿಮೆ ಎಂದರೂ ಈ ವರೆಗೆ ಶಾಲೆಗೆ ಹೋಗುತ್ತಿರುವ ಬಾಲಕರ ತಲಾ ಖರ್ಚಿಗಿಂತ ೨-೩ ಪಟ್ಟು ಹಣಬೇಕು. ಅವರಲ್ಲಿ ಅನೇಕರು ಮೈಸೂರ, ಮಧ್ಯಪ್ರದೇಶ, ಮತ್ತು ಆಸಾಮುಗಳಂಥ ರಾಜ್ಯಗಳಲ್ಲಿ ಚಿಕ್ಕಪುಟ್ಟ ಹಳ್ಳಿಗಳಲ್ಲಿ ವಾಸಿಸುತ್ತಿದ್ದು ಅವರ ಶಿಕ್ಷಣದ ದಾರಿಯಲ್ಲಿ ಆರ್ಥಿಕ ತೊಂದರೆಯ ಜೊತೆಗೆ ಅನೇಕ ಸ್ವಾಭಾವಿಕ (ಗುಡ್ಡ-ನದಿ ಮೊದಲಾವು) ಅಡೆತಡೆಗಳಿವೆ.

ಭಾರತದಲ್ಲಿ ವಿಭಜನೆಯ ನಂತರ ಸುಮಾರು ೫ ಲಕ್ಷ ೬೦ ಸಾವಿರ ಹಳ್ಳಿಗಳಿವೆ. ಹಳ್ಳಿ-ಪಟ್ಟಣಗಳಲ್ಲಿ ಕೂಡಿಯೇ ಯೋಜನೆಯ ಕೊನೆಯಲ್ಲಿ ೩|| ಲಕ್ಷ ಸಾಲೆಗಳಾಗಲಿವೆ. ಮೇಲಾಗಿ ದೊಡ್ಡ ಪಟ್ಟಣಗಳಲ್ಲಿ ಹಲವಾರು ಸಾಲೆಗಳಿರುವ ಅಂಶವನ್ನೂ ಗಮನಕ್ಕೆ ತಂದು ಕೊಂಡರೆ ಸುಮಾರು ೨ ಲಕ್ಷಕ್ಕೂ ಮಿಕ್ಕಿ ಹಳ್ಳಿಗಳಿಗೆ ಇನ್ನೂ ಸಾಲೆಗಳ ಅನುಕೂಲತೆ ಇಲ್ಲವೆಂಬ ಕರುಣಾಜನಕ ಚಿತ್ರ ನಮ್ಮ ಕಣ್ಮುಂದೆ ಬರುತ್ತದೆ. ಅದೂ ದ್ವಿತೀಯ ಯೋಜನೆಯ ಕೊನೆಯಲ್ಲಿ !

ಆದುದರಿಂದ ಜೀವನ ಶಿಕ್ಷಣ ಸಾಲೆಗಳ ಶಿಕ್ಷಕರಿಗೆ ಮೇಲಿನ ನೈಜ ಪರಿಸ್ಥಿತಿಯ ಅರಿವು ಹಾಗೂ ಜೀವನ ಶಿಕ್ಷಣದ ದರ್ಶಗಳಿದ್ದರೇ ತಮ್ಮ ಕರ್ತವ್ಯವನ್ನು ನೆರವೇರಿಸಬಲ್ಲರು. ದೃಷ್ಟಿ ಇಲ್ಲದೆ, ಸೃಷ್ಟಿ ಎಲ್ಲಿ? ದರ್ಶನವಿಲ್ಲದೆ ಮಾರ್ಗದರ್ಶನ, ಪ್ರದರ್ಶನಗಳೆಂತು ಸಾಧ್ಯ? ಆದ್ದರಿಂದ ಜೀವನ ಶಿಕ್ಷಣ ಶಾಲೆಗಳ ಪ್ರಥಮ ಕರ್ತವ್ಯವೆಂದರೆ ತಮ್ಮ ಸಾಲೆಗೆ ಸಂಬಂಧಿಸಿದ ಎಲ್ಲ ಮಕ್ಕಳೂ ಸಾಲೆಗೆ ಬರುವಂತೆ ಮಾಡುವದು. ವಿಶೇಷವಾಗಿ ಪಟದ ಮೇಲೆ ಹೆಸರಿದ್ದು ಸಾಲೆಗೆ ಸರಿಯಾಗಿ ಬರದ ೫೦% ಬಾಲಕರು ಸಾಲೆಗೆ ಸರಿಯಾಗಿ ಬರುವಂತೆ ಮಾಡುವದು. ಮತ್ತು ಎಲ್ಲ ಬಾಲಕರಿಗೂ ಸರಿಯಾದ ಜೀವನ ಶಿಕ್ಷಣವನ್ನು ಕೊಡುವದು.

೨. ಸಮಾಜ ಕೇಂದ್ರ: ಈ ಮೇಲೆ ಹೇಳಿದಂತೆ ಜೀವನ ಶಿಕ್ಷಣ ಸಾಲೆಗಳು ಕೇವಲ ಸಾಲೆಗಳಾಗಿರದೆ ಸಮಾಜ ಕೇಂದ್ರಗಳೂ ಆಗಬೇಕು. ಅಂಥ ಸಾಲೆಗಳು ಉಳಿದ ಕಾರ್ಯಗಳ ಜೊತೆಗೆ ಕೆಳಗೆ ನಮೂದಿಸಿದ ಚಟುವಟಿಕೆಗಳನ್ನೂ ಕೈಕೊಳ್ಳಬೇಕು.

ಡಲಾಗಿದೆ ಎಂದಂತಾಯಿತು. ನಮ್ಮ ಸರಕಾರಗಳ ಆದಾಯದಲ್ಲಿ ಪ್ರತಿ ವರ್ಷವೂ ೪೬೫೦ ಕೋಟಿ ರೂ. ಅಭಿವೃದ್ಧಿ ಯೋಜನೆಗಳನ್ನು ಬಿಟ್ಟು ರಕ್ಷಣೆ ಹಾಗೂ ಆಡಳಿತಗಳ ಆವರ್ತ ವೆಚ್ಚಕ್ಕಾಗಿ ಖರ್ಚಾಗುತ್ತದೆ. ವಾರ್ಷಿಕ ಉಳಿತಾಯವಾದ ೩೫೦ ಕೋಟಿ ರೂ.ಗಳಿಂದಲೇ ಅಭಿವೃದ್ಧಿ ಯೋಜನೆಗಳಿಗೆ ಹಣ ಪೂರೈಸಬೇಕಾಗಿದೆ. ಇದರಿಂದಾಗಿ ಹೆಚ್ಚಿನ ಕರಭಾರವು ಅನಿವಾರ್ಯವಾಗಿದೆ. ಆದುದರಿಂದ ಕೊರತೆಯ ಹಣವನ್ನು ಹೆಚ್ಚಿನ ತೆರಿಗೆ, ಅಭಿವೃದ್ಧಿ ಸಾಲ, ಅಲ್ಪ ಉಳಿತಾಯದ ಯೋಜನೆ ಮತ್ತು ಕೊರತೆಯ ಧನ ವಿನಿಯೋಗ (Deficit Financing) ಮುಂತಾದವುಗಳಿಂದ ತುಂಬಿಕೊಳ್ಳುವಂತೆ ಯೋಜಿಸಲಾಗಿದೆ.

ದ್ವಿತೀಯ ಯೋಜನೆಯ ಉದ್ದೇಶಗಳನ್ನು ಯೋಜನೆಯ ಕರಡಿನಲ್ಲಿ ಕೆಳಗಿನಂತೆ ಹೇಳಲಾಗಿದೆ.

೧) ಜನತೆಯ ಜೀವನ ಮಟ್ಟವು ಏರುವಂತೆ ರಾಷ್ಟ್ರೀಯ ಆದಾಯದಲ್ಲಿ ಹೆಚ್ಚುವರಿ (ತಲಾ ೨೮೧ ರಿಂದ ೩೩೧ ರೂ)

೨) ಮೂಲ ಮತ್ತು ದೊಡ್ಡ ಕೈಗಾರಿಕೆಗಳ ಮೂಲಕ ಶೀಘ್ರ ಔದ್ಯೋಗೀಕರಣ (೩ ಉಕ್ಕಿನ ಕಾರಖಾನೆ ಮತ್ತು ೩ ಗೊಬ್ಬರ ಕಾರಖಾನೆ).

೩) ಉದ್ಯೋಗಾವಕಾಶವನ್ನು ವಿಶೇಷವಾಗಿ ಹೆಚ್ಚಿಸುವದು.

೪) ಆದಾಯ ಸಂಪತ್ತುಗಳ ಅಸಮಾನತೆಯನ್ನು ಕಡಿಮೆ ಮಾಡಿ ಆರ್ಥಿಕ ಶಕ್ತಿಯನ್ನು ಸಮನಾಗಿ ಹಂಚುವದು.

ಮೊದಲನೆಯ ಯೋಜನೆಯು ರಾಮಾಯಣದಂತಿದ್ದರೆ ಎರಡನೆಯ ಯೋಜನೆಯು ಮಹಾಭಾರತದಂತಿದೆ. ಅದು ರಾಷ್ಟ್ರದ ಮಹಾಯೋಜನೆಯಾಗಿದ್ದು ಅದ ಯಶಸ್ಸು ರಾಷ್ಟ್ರೀಯ ಅಭಿವೃದ್ಧಿ ಮಂಡಲವು ಅದನ್ನ ಸ್ವೀಕರಿಸುವ ಮುನ್ನ ತನ್ನ ೨-೬-೧೯೫೬ ರ ಗೊತ್ತುವ ಯಲ್ಲಿ ಹೇಳಿದಂತೆ ಜನತೆಯ ಅದಮನೀಯವಾದ ಕಳಕ ಮತ್ತು ಸಹಕಾರಗಳನ್ನು ಅವಲಂಬಿಸಿದೆ. ಆದುದರಿಂ ಸುಮಾರು ೮೦% ನಿರಕ್ಷರಿಗಳನ್ನೊಳಗೊಂಡ ಈ ದೇಶದ ಯೋಜನೆಗಳು ಫಲಪ್ರದವಾಗಿ ಕಾರ್ಯಾಚರಣೆಯಲ್ಲಿ ಬ ಬೇಕಾದರೆ ಶಿಕ್ಷಣ ಕೇಂದ್ರಗಳಿಂದ ಜೀವನ ಶಿಕ್ಷಣ ಸಾ ಗಳ ಹೊಣೆಯು ಗುರುತರವಾಗಿದೆ. ಈ ಸಾಲೆಗಳು ತಮ ಕರ್ತವ್ಯವಾದ ವಿದ್ಯಾದಾನದ ಜೊತೆಗೆ ಸಮಾಜ ಕೇಂದ ಗಳಂತೆಯೂ ಕೆಲಸ ಮಾಡುವದು ಅನಿವಾರ್ಯವಾಗಿದೆ ಯಾಕಂದರೆ ಹಿಂದಿನ ಪತ್ಯೇತರ(Extra-curricular ಚಟುವಟಿಕೆಗಳೇ ಇಂದು ಜೀವನ ಶಿಕ್ಷಣ ಶಾಲೆಗ ಸಹಪತ್ಯ ಚಟುವಟಿಕೆಗಳಾಗಿ (Co-curricular) ಪ ಣಮಿಸಿವೆ.

(ಬ) ಜೀವನ ಶಿಕ್ಷಣ ಸಾಲೆಗಳ ಪಾತ್ರ:– ಯೋಜನೆಯ ಸಾಧನೆಗಾಗಿ ಜೀವನ ಶಿಕ್ಷಣ ಸಾಲೆಗಳ ಕೆಳಗೆ ವಿವರಿಸಿದ ಬಗೆಗಳಲ್ಲಿ ತಮ್ಮ ಸಹಾಯವನ್ನು ನಲ್ಲಿ ಬಹುದು.

೧. **ಶಿಕ್ಷಣ ಪ್ರಚಾರ :** ಜೀವನ ಶಿಕ್ಷ ಸಾಲೆಗಳು ಸರಕಾರಿ ದಾಖಲೆಗಳಲ್ಲಿ ಜೀವನ ಶಿಕ್ಷ ಸಾಲೆಗಳಿರದೆ ತಮ್ಮ ದೈನಂದಿನ ಕಾರ್ಯನಿರ್ವಹಣೆಯಲ್ಲಿಯೂ ಇರಬೇಕು. ಅವು ವಿದ್ಯಾರ್ಥಿಗಳಿಗ ಅವರ ಪಾಲಕರಿಗೂ ಸ್ಫೂರ್ತಿಯ ಸೆಲೆಗಳಾ ಬೇಕು.

ಕೆಳಗೆ ಕೊಟ್ಟ ಕೋಷ್ಟಕದಿಂದ ಜೀವನ ಶಿಕ್ಷಣ ಸಾಲೆಗಳ ಕಾರ್ಯಕ್ಷೇತ್ರದ ಅರಿವು ಸುಲಭವಾಗಿ ಆಗಬಹುದು.

	ವಿವರಗಳು	1950-51 ಯೋಜನೆಗಳ ಮೊದಲು	1955-56 ೧ನೇ ಯೋಜನೆಯ ಕೊನೆ	1960-61 ೨ನೇ ಯೋಜನೆಯ ಕೊನೆ
೧	ಕೆಳಗಿನ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳ ಪ್ರತಿಶತ ಪ್ರಮಾಣ- (೬ರಿಂದ ೧೧ ವಯೋಮಾನ)	42%	51%	63%
೨	ಮೇಲಿನ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳ ಪ್ರತಿಶತ ಪ್ರಮಾಣ–(೧೧ರಿಂದ೧೪ ವಯೋಮಾನ)	14%	19%	22.5%

೩	ಪ್ರಾಥಮಿಕ ಶಾಲೆಗಳಿಗೆ ಹೋಗುವವರು (೧ ಹಾಗೂ ೨ ಕೂಡಿ) % (೬ರಿಂದ ೧೪ ವಯೋಮಾನ)	32%	40%	49%
೪	ಪ್ರಾಥಮಿಕ ಹಾಗು ಜೀವನ ಶಿಕ್ಷಣ ಸಾಲೆಗಳು (ಲಕ್ಷದಲ್ಲಿ)	2.23	2.93	3.50
೫	ಜೀವನ ಶಿಕ್ಷಣ ಸಾಲೆಗಳು	1,751	10,000	38,400
೬	ಪ್ರಾಥಮಿಕ ಶಿಕ್ಷಕರು (ಲಕ್ಷದಲ್ಲಿ)	7.4	10.3	13.4

ನಮ್ಮ ರಾಜ್ಯ ಘಟನೆಯಲ್ಲಿ ೬ ರಿಂದ ೧೪ ವರ್ಷದ ಎಲ್ಲ ಮಕ್ಕಳಿಗೂ ೧೯೬೧ ನೆಯ ಸಾಲಿನಲ್ಲಿ, ಎಂದರೆ ದ್ವಿತೀಯ ಯೋಜನೆಯ ಅಂತ್ಯದೊಳಗಾಗಿ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕವಾಗಿ ಕೊಡಬೇಕೆಂದು ಆದೇಶಿಸಲಾಗಿದೆ. ಘಟನೆಯ ಆದೇಶಕ್ಕೂ ಹಾಗು ನಮ್ಮ ಕಾರ್ಯಾಚರಣೆಗಳಿಗೂ ಇರುವ ಅಂತರವು ಮೇಲಿನ ಸಂಖ್ಯೆಗಳಿಂದ ತಿಳಿದು ಬರುವಂತಿದೆ. ಘಟನೆಯ ಉದ್ದೇಶಗಳು ಆದರ್ಶಪ್ರಾಯಗಳೆಂದೂ ಅವನ್ನು ಕಾರ್ಯರೂಪಕ್ಕೆ ತರಲು ಇರುವ ತೊಂದರೆಗಳು ಅನೇಕವೆಂದೂ ವಾದಿಸಬಹುದು. ನಮ್ಮ ೨ನೆಯ ಯೋಜನೆಯ ಕೊನೆಗೆ ಕೇವಲ ೪೯% ಬಾಲಕರು ಸಾಲೆಗೆ ಹೋಗಲು ಅವಕಾಶವಿರುವದು ನಿಜವಾಗಿಯೂ ಶೋಚನೀಯ. ಅಂದರೆ ಸಾಲೆಗೆ ಹೋಗುವ ವಯಸ್ಸಿನ ಮಕ್ಕಳಲ್ಲಿ ಅರ್ಧಕ್ಕಿಂತ ಹೆಚ್ಚು ಮಕ್ಕಳಿಗೆ ಸಾಲೆಗಳ ಅನುಕೂಲತೆ ಸಹ ಇಲ್ಲದಂತಾಗುವದು. ಪಟದ ಮೇಲಿನ ಸಂಖ್ಯೆಯಲ್ಲಿ ಕೇವಲ ೫೦% ಬಾಲಕರು ಹಾಜರ ಇರುತ್ತಾರೆಂಬುದು ಪರಿಸ್ಥಿತಿಯ ಪ್ರತ್ಯಕ್ಷ ಅನುಭವವಿದ್ದವರಿಗೆ ಗೊತ್ತಿದ್ದ ಮಾತು. ಯಾಕಂದರೆ "ಒತ್ತಾಯ ಶಿಕ್ಷಣವು ಕೇವಲ ಕಾಗದದ ಮೇಲೆ ಇದೆ" ಎಂದು ಹಿಂದೆ ಮುಂಬಯಿ ಪ್ರಾಂತದ ಆದರ್ಶ ಶಿಕ್ಷಣ ಮಂತ್ರಿಗಳಾದ ದಿ. ಖೇರರೇ ಒಮ್ಮೆ ಉದ್ಗರಿಸಿದ್ದಾರೆ! ಮೇಲಾಗಿ ಸಾಲೆಗೆ ಹೋಗಲು ಅವಕಾಶವಿಲ್ಲದ ೫೦% ಬಾಲಕರ ಸಮಸ್ಯೆ ಈಗಾಗಲೇ ಸಾಲೆಗೆ ಹೋಗುತ್ತಿರುವ ಬಾಲಕರ ಸಮಸ್ಯೆಗಳಿಂದ ತೀರ ಭಿನ್ನವಾಗಿದೆ. ಅಂಥ ಬಾಲಕರ ಶಿಕ್ಷಣಕ್ಕೆ ಕಡಿಮೆ ಎಂದರೂ ಈ ವರೆಗೆ ಶಾಲೆಗೆ ಹೋಗುತ್ತಿರುವ ಬಾಲಕರ ತಲಾ ಖರ್ಚಿಗಿಂತ ೨-೩ ಪಟ್ಟು ಬೇಕು. ಅವರಲ್ಲಿ ಅನೇಕರು ಮೈಸೂರ, ಮಧ್ಯಪ್ರದೇಶ, ಮತ್ತು ಆಸಾಮಗಳಂಥ ರಾಜ್ಯಗಳಲ್ಲಿ ಚಿಕ್ಕಪುಟ್ಟ ಹಳ್ಳಿಗಳಲ್ಲಿ ವಾಸಿಸುತ್ತಿದ್ದು ಅವರ ಶಿಕ್ಷಣದ ದಾರಿಯಲ್ಲಿ ಆರ್ಥಿಕ ತೊಂದರೆಯ ಜೊತೆಗೆ ಅನೇಕ ಸ್ವಾಭಾವಿಕ (ಗುಡ್ಡ-ನದಿ ಮೊದಲಾವು) ಅಡೆತಡೆಗಳಿವೆ.

ಭಾರತದಲ್ಲಿ ವಿಭಜನೆಯ ನಂತರ ಸುಮಾರು ೫ ಲಕ್ಷ ೬೦ ಸಾವಿರ ಹಳ್ಳಿಗಳಿವೆ. ಹಳ್ಳಿ-ಪಟ್ಟಣಗಳಲ್ಲಿ ಕೂಡಿಯೇ ಯೋಜನೆಯ ಕೊನೆಯಲ್ಲಿ ೩|| ಲಕ್ಷ ಸಾಲೆಗಳಾಗಲಿವೆ. ಮೇಲಾಗಿ ದೊಡ್ಡ ಪಟ್ಟಣಗಳಲ್ಲಿ ಹಲವಾರು ಸಾಲೆಗಳಿರುವ ಅಂಶವನ್ನೂ ಗಮನಕ್ಕೆ ತಂದು ಕೊಂಡರೆ ಸುಮಾರು ೨ ಲಕ್ಷಕ್ಕೂ ಮಿಕ್ಕಿ ಹಳ್ಳಿಗಳಿಗೆ ಇನ್ನೂ ಸಾಲೆಗಳ ಅನುಕೂಲತೆ ಇಲ್ಲವೆಂಬ ಕರುಣಾಜನಕ ಚಿತ್ರ ನಮ್ಮ ಕಣ್ಮುಂದೆ ಬರುತ್ತದೆ. ಅದೂ ದ್ವಿತೀಯ ಯೋಜನೆಯ ಕೊನೆಯಲ್ಲಿ!

ಆದುದರಿಂದ ಜೀವನ ಶಿಕ್ಷಣ ಸಾಲೆಗಳ ಶಿಕ್ಷಕರಿಗೆ ಮೇಲಿನ ನೈಜ ಪರಿಸ್ಥಿತಿಯ ಅರಿವು ಹಾಗೂ ಜೀವನ ಶಿಕ್ಷಣದ ದರ್ಶಗಳಿದ್ದರೇ ತಮ್ಮ ಕರ್ತವ್ಯವನ್ನು ನೆರವೇರಿಸಬಲ್ಲರು. ದೃಷ್ಟಿ ಇಲ್ಲದೆ, ಸೃಷ್ಟಿ ಎಲ್ಲಿ? ದರ್ಶನವಿಲ್ಲದೆ ಮಾರ್ಗದರ್ಶನ, ಪ್ರದರ್ಶನಗಳೆಂತು ಸಾಧ್ಯ? ಆದ್ದರಿಂದ ಜೀವನ ಶಿಕ್ಷಣ ಶಾಲೆಗಳ ಪ್ರಥಮ ಕರ್ತವ್ಯವೆಂದರೆ ತಮ್ಮ ಸಾಲೆಗೆ ಸಂಬಂಧಿಸಿದ ಎಲ್ಲ ಮಕ್ಕಳೂ ಸಾಲೆಗೆ ಬರುವಂತೆ ಮಾಡುವದು. ವಿಶೇಷವಾಗಿ ಪಟದ ಮೇಲೆ ಹೆಸರಿದ್ದು ಸಾಲೆಗೆ ಸರಿಯಾಗಿ ಬರದ ೫೦% ಬಾಲಕರು ಸಾಲೆಗೆ ಸರಿಯಾಗಿ ಬರುವಂತೆ ಮಾಡುವದು. ಮತ್ತು ಎಲ್ಲ ಬಾಲಕರಿಗೂ ಸರಿಯಾದ ಜೀವನ ಶಿಕ್ಷಣವನ್ನು ಕೊಡುವದು.

೨. ಸಮಾಜ ಕೇಂದ್ರ: ಈ ಮೇಲೆ ಹೇಳಿದಂತೆ ಜೀವನ ಶಿಕ್ಷಣ ಸಾಲೆಗಳು ಕೇವಲ ಸಾಲೆಗಳಾಗಿರದೆ ಸಮಾಜ ಕೇಂದ್ರಗಳೂ ಆಗಬೇಕು. ಅಂಥ ಸಾಲೆಗಳು ಉಳಿದ ಕಾರ್ಯಗಳ ಜೊತೆಗೆ ಕೆಳಗೆ ನಮೂದಿಸಿದ ಚಟುವಟಿಕೆಗಳನ್ನೂ ಕೈಕೊಳ್ಳಬೇಕು.

(೧) ಆಟ, ಸ್ಪರ್ಧೆ ಮತ್ತು ಮನೋರಂಜನೆ.
(೨) ಭಾಷಣ, ಸಂಭಾಷಣೆ ಮತ್ತು ಪ್ರದರ್ಶನ.
(೩) ಮಹಿಳೆಯರಿಗಾಗಿ ಕಸಬಿನ ಶಿಕ್ಷಣ.
(೪) ಅಕ್ಷರಾಭ್ಯಾಸ ಹಾಗೂ ಮುಂದಿನ ಅಭ್ಯಾಸಕ್ಕಾಗಿ ತರಗತಿಗಳು.
(೫) ಪುಸ್ತಕ ಭಾಂಡಾರ ಹಾಗೂ ವಾಚನಾಲಯಗಳು.
(೬) ಸ್ಥಳಿಯ ಹಾಗೂ ರಾಷ್ಟ್ರೀಯ ಉತ್ಸವಗಳ ಆಚರಣೆ.

ಮೇಲಿನ ಚಟುವಟಿಕೆಗಳಿಂದ ಶಾಲೆ ಮತ್ತು ಸಮಾಜಗಳ ನಡುವಿನ ಅಂತರವು ಇಲ್ಲದಂತಾಗಿ ಸರ್ವೋದಯ ಸಮಾಜ ರಚನೆ ಸುಲಭವಾಗುವದು.

೩. ಸ್ಥಾನಿಕ ಅಭಿವೃದ್ಧಿಯ ಯೋಜನೆಗಳಲ್ಲಿ ಸೇವೆ: ನಮ್ಮ ರಾಷ್ಟ್ರದ ಜೀವನದಲ್ಲಿ ಇದು ಸಂಧಿಕಾಲ, ಬಾಲಕನು ತನ್ನ ಬಾಲ್ಯಾವಸ್ಥೆಯಲ್ಲಿ ಭರದಿಂದ ಬೆಳೆಯುವದು ಹೇಗೆ ನಿಸರ್ಗ ನಿಯಮವೋ ಅಂತೆಯೇ ರಾಷ್ಟ್ರವೂ ರಾಜಕೀಯ ಸ್ವಾತಂತ್ರ್ಯ ದೊರೆತ ಮೇಲೆ ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಪರಿಶ್ರಮಿಸಬೇಕು. ಆ ಕಾರಣ ರಾಷ್ಟ್ರದ ಶಿಲ್ಪಿಗಳಾದ ಶಿಕ್ಷಕರು ಸ್ವಾತಂತ್ರ್ಯದ ಅರುಣೋದಯದಲ್ಲಿ ತಮ್ಮ ಕರ್ತವ್ಯಕ್ಕೂ ತಮಗೆ ಸಿಗುವ ವರಮಾನಕ್ಕೂ ಗಂಟು ಹಾಕದೆ ಭಾರತೀಯ ನಾಗರಿಕರೆಂದು ತಮ್ಮ ಪಾಲಿನ ಸೇವೆಯನ್ನು ಅಳಿಲು ಭಕ್ತಿಯಿಂದ ಸಲ್ಲಿಸಬೇಕಾಗಿದೆ. ಶಿಕ್ಷಕರು ತಮ್ಮ ಪ್ರತಿಫಲಕ್ಕಾಗಿ ಯೋಗ್ಯ ಸಂಘಟನೆಯನ್ನು ಮಾಡಿಕೊಳ್ಳಲಿ. ಆದರೆ ಕರ್ತವ್ಯ ಮತ್ತು ವರಮಾನಕ್ಕೆ ಗಂಟು ಹಾಕುವದು ರಾಷ್ಟ್ರದ ಹಿತದೃಷ್ಟಿಯಿಂದ ಸರಿಯಾದುದಲ್ಲ. “ಸೇವೆ ಮಾಡಬೇಕೆನ್ನುವವರಿಗೆ ಆಕಾಶದಷ್ಟು ಅವಕಾಶವಿದೆ,” ಎಂದು ಪೂಜ್ಯ ವಿನೋಬಾ ಅವರು ಒಂದೆಡೆ ಹೇಳಿದ್ದಾರೆ. ಮೇಲಾಗಿ ಇಂದಿನ ಶಿಕ್ಷಕರು ಕ್ರಾಂತಿಯ ಮಕ್ಕಳು, ದೇಶದ ಸ್ವಾತಂತ್ರ್ಯ, ನಾಡಿನ ಏಕೀಕರಣಗಳಿಗಾಗಿ ದುಡಿದು ಅವನ್ನು ಸಾಧಿಸಿದ ಪುಣ್ಯ ಪುರುಷರು. ಇಂಥ ಕ್ರಾಂತಿಕಾರಕ ದಿನಗಳಲ್ಲಿ“ಭಾರತೀಯನಾಗಿ, ಗುರುವಾಗಿ ಕೆಲಸ ಮಾಡುವದೇ ತನ್ನ ಪಾಲಿನ ಪುಣ್ಯ. ಬಹು ದೊಡ್ಡ ವರಮಾನ”ವೆಂದು ಬಗೆದು ಭಾವೀ ರಾಷ್ಟ್ರದ ಪೀಳಿಗೆಯನ್ನು ರೂಪಿಸುವದೇ ತಮ್ಮ ಪರಮ ಕರ್ತವ್ಯವೆಂದು ಬಗೆಯುವದು ಅಪರಿಹಾರ್ಯವಾಗಿರುವದು. ಹೀಗೆ ತಮ್ಮ ಕರ್ತವ್ಯಗಳನ್ನು ಮಾಡುತ್ತ ಹೆಚ್ಚಿನ ರಾಷ್ಟ್ರ ಸೇವೆಗೆ ಅವಕಾಶವಿರುವದು, ಶಿಕ್ಷಕರಿಗೆ- ಅದರಲ್ಲಿಯೂ ಜೀವನ ಶಿಕ್ಷಣ ಶಾಲೆಗಳ ಶಿಕ್ಷಕರಿಗೆ ಮಾತ್ರ. ಜೀವನ ಶಿಕ್ಷಣ ಶಾಲೆಗಳು ಸಮಾಜ ಅಭಿವೃದ್ಧಿಯ ಕ್ಷೇತ್ರಗಳಲ್ಲಿ (Community Development Blocks) ಬರುತ್ತಿದ್ದರೆ ಅಭಿವೃದ್ಧಿಯ ಯೋಜನೆಗಳ ಎಲ್ಲ ಹಂತಗಳಲ್ಲಿಯೂ ಸಹಕರಿಸಲು ಆಸ್ಪದವಿದೆ. ಅವು ಇಂಥ ಕ್ಷೇತ್ರಗಳ ಹೊರಗೆ ಇದ್ದರೆ ಕೆಳಗೆ ಕಾಣಿಸಿದ ಸ್ಥಾನಿಕ ಅಭಿವೃದ್ಧಿಯ ಯೋಜನೆಗಳಲ್ಲಿ (Local Development works) ಭಾಗವಹಿಸಿ ಹಳ್ಳಿಗಳ ಏಳಿಗೆ ಸಹಾಯ ಮಾಡಬಹುದು.

(೧) ಕುಡಿಯುವ ನೀರಿನ ಪೂರೈಕೆ.
(೨) ಒಕ್ಕಲುತನದ ಅಭಿವೃದ್ಧಿಗೆ ಶಾಶ್ವತ ಯೋಜನೆ.
(೩) ಗ್ರಾಮ ನೈರ್ಮಲ್ಯದ ಬಗೆಗೆ ,, ,,
(೪) ಹಳ್ಳಿಯ ಕವಲು ದಾರಿಗಳು.
(೫) ಶಾಲೆ ಮತ್ತು ದವಾಖಾನೆಗಳ ಬಡಾವಣೆ ಮತ್ತು ವಿಸ್ತರಣೆ.
(೬) ಗುದಾಮುಗಳ ರಚನೆ.

ಮೇಲಿನ ಯೋಜನೆಗಳಲ್ಲಿ ಯಾವದೇ ಒಂದನ್ನು ಕೈಕೊಂಡರೂ ಅದರ ಪರಮಾವಧಿ ವೆಚ್ಚವು ೧೦,೦೦೦ ರೂ. ಮಿಕ್ಕಕೂಡದು. ಅದರಲ್ಲಿ ೫೦% ಕೇಂದ್ರ ಸರಕಾರವೂ ಉಳಿದ ಅರ್ಧ ವೆಚ್ಚವನ್ನು ರಾಜ್ಯ ಸರಕಾರ ಹಾಗೂ ಗ್ರಾಮಸ್ಥರು ಶ್ರಮದಾನಗಳ ಮೂಲಕ ಸಲ್ಲಿಸಬಹುದು.

ಶುದ್ಧವಾದ ಕುಡಿಯುವ ನೀರು ತಮ್ಮ ಅನೇಕ ಆಧುನಿಕ ನಗರಗಳಲ್ಲಿ ಸಹ ಲಭ್ಯವಿಲ್ಲದಾಗ ಅವುಗಳ ಸುಲಿಗೆಗೆ ಒಳಪಟ್ಟ ಹಳ್ಳಿಗಳ ಪಾಡೇನು ? ಈ ದಿಶೆಯಲ್ಲಿ ಜೀವನ ಶಿಕ್ಷಣ ಶಾಲೆಗಳು ಹಳ್ಳಿಗರಿಗೆ ಮಾರ್ಗದರ್ಶನ ಮಾಡಿ ಕುಡಿಯುವ ನೀರಿನ ಪೂರೈಕೆಯು ಹಳ್ಳಿಗರಿಗೆ ಆಗುವಂತೆ ಶ್ರಮದಾನದಲ್ಲಿ ಭಾಗವಹಿಸಬೇಕು. ಎರಡನೆಯದಾಗಿ “ಹರಿನಾಮಾಮೃತವು ಹಸಿದ ಹೊಟ್ಟೆಯ ಕೂಗನ್ನು ಹಿಂಗಿಸದು. ಅದಕ್ಕೆ ಹಿಟ್ಟೇ ಬೇಕು” ಆದ್ದರಿಂದ ನಮ್ಮ ಜೀವನ ಶಿಕ್ಷಣ ಶಾಲೆಗಳು ಒಕ್ಕಲುತನದ ಅಭಿವೃದ್ಧಿಗೆ ಪ್ರಾಶಸ್ತ್ಯವನ್ನು ಕೊಟ್ಟು ತಮ್ಮ ಶಾಲೆಯ ತೋಟಗಳ ಮೂಲಕ ಹೊಸ ಹೊಸ ಒಕ್ಕಲತನದ ಸಂಶೋಧನೆಗಳ ಪರಿಚಯವನ್ನು ಹಳ್ಳಿಗರಿಗೆ ಮಾಡಿಕೊಡಬೇಕು. ಸುಧಾರಿಸಿದ ಬೀಜಗಳನ್ನು ಪೂರೈಸಲೂ ಸಹಾಯ ಮಾಡಬಹುದು.

ಸಾರಿಗೆಯ ಸೌಕರ್ಯಕ್ಕೆ ಅವಶ್ಯಗತೆಗಿಂತ ಹೆಚ್ಚು ಲಕ್ಷ್ಯ ಕೊಡುತ್ತಿರುವದು ಕಂಡುಬಂದಿದೆ. ರಸ್ತೆಗಳು ಹಳ್ಳಿಗಳ ಅಭಿವೃದ್ಧಿಗಳಿಗಾಗಿ ಬೇಕಲ್ಲದೆ ಅವುಗಳ ಶೋಷಣೆಗಾಗಿ ಅಲ್ಲ. ರಸ್ತೆಗಳ ರಚನೆ ಹೊಟ್ಟೆಯ ಪ್ರಶ್ನೆಗೆ ಪೂರಕವಾಗಿ ಬರಬೇಕು. "ಹೊಟ್ಟೆಗೆ ಸಾಕಷ್ಟಿರಲಿ; ಬೇಕಾದರೆ ಕೆಟ್ಟ ರಸ್ತೆಗಳೂ ಇರಲಿ–ವಾಹನಗಳ ಜಂಜಾಟದಲ್ಲಿ ಆಹಾರ ಪಚನವಾಗಬಲ್ಲದು" ಎಂದು ಒಬ್ಬ ಗಾಂಧಿವಾದಿ ಹಿಂದೆ ಭಾರತದ ಭಾಗವಾದ ಸರಹದ್ದು ಪ್ರಾಂತದ ಸಶಕ್ತ ಪಠಾಣರನ್ನೂ ಅಲ್ಲಿಯ ಕೆಟ್ಟ ರಸ್ತೆಗಳನ್ನೂ ಕಂಡು ಉದ್ಗರಿಸಿದ್ದು ನನಗೆ ನೆನಪಿಗೆ ಬರುತ್ತದೆ.

೪. ಶೈಕ್ಷಣಿಕ ಮತ್ತು ವೃತ್ತಿಮಾರ್ಗದರ್ಶನ: ಇಂದು ಅನೇಕ "ಹೊಣೆಗಾರ ಸ್ಥಾನಗಳಲ್ಲಿ ಎಡವಟ್ಟು (Misfits) ಜನರಿದ್ದುದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಇದರಿಂದ ಸಂಬಂಧಿಸಿದ ವ್ಯಕ್ತಿಗಳಿಗೂ ತನ್ಮೂಲಕ ರಾಷ್ಟ್ರದ ಪ್ರಗತಿಗೂ ಬಹಳಷ್ಟು ನಷ್ಟವಾಗುತ್ತಿದೆ. ಪ್ರತಿಯೊಬ್ಬನು ತನ್ನ ಒಲವಿನ ಸ್ಥಾನದಲ್ಲಿದ್ದರೆ ವ್ಯಕ್ತಿಗೂ ರಾಷ್ಟ್ರಕ್ಕೂ ಅಪಾರ ಲಾಭವಿದೆ. ಆದುದರಿಂದ ಯೋಜನೆಗಳು ಫಲಪ್ರದವಾಗಬೇಕಾದರೆ ನಮ್ಮ ಜೀವನ ಶಿಕ್ಷಣ ಸಾಲೆಗಳಿಂದ ಹೊರಬೀಳುವ ಎಲ್ಲ ಮಕ್ಕಳಿಗೂ ಯೋಗ್ಯ ಮಾರ್ಗದರ್ಶನ ಅವಶ್ಯವಿದೆ. ಅವರಲ್ಲಿ ಕೆಲವರು ತಮ್ಮ ಶಿಕ್ಷಣವನ್ನು ಮುಂದುವರಿಸಿದರೆ ಅನೇಕರು ಮುಂದಿನ ಶಿಕ್ಷಣಕ್ಕೆ ಶರಣು ಹೊಡೆದು ಜೀವನ ರಂಗವನ್ನೇ ಪ್ರವೇಶಿಸುತ್ತಾರೆ. ಈ ಎರಡೂ ವರ್ಗದವರಿಗೂ ಅವರವರ ಬುದ್ಧಿಮತ್ತೆ, ಯೋಗ್ಯತೆ, ಒಲವು, ಸಾಂಪತ್ತಿಕ ಸ್ಥಿತಿಗತಿಗಳನ್ನು ಪರಿಶೀಲಿಸಿ ಶೈಕ್ಷಣಿಕ ಮತ್ತು ವೃತ್ತಿ ಮಾರ್ಗದರ್ಶನ ಮಾಡುವದು ರಾಷ್ಟ್ರದ ಹಿತಚಿಂತನೆಯ ದೃಷ್ಟಿಯಿಂದ ಇಂದಿನ ಶಿಕ್ಷಕರ ಪರಮ ಕರ್ತವ್ಯವಾಗಿದೆ. ಜೀವನ ಶಿಕ್ಷಣ ಸಾಲೆಗಳ ಶಿಕ್ಷಕರು ಈ ರೀತಿಯಿಂದ ಸಹ ಪರಿಣತಿಯನ್ನು ಹೊಂದುವದು ತೀರ ಅವಶ್ಯವಾಗಿರುವದು.

೫. ಯೋಜನೆಯ ಪ್ರಚಾರ: ನಮ್ಮ ಅಭಿವೃದ್ಧಿ ಯೋಜನೆಗಳು ನಮ್ಮ ಜಿಲ್ಲೆಗಳ ಅಭಿವೃದ್ಧಿ ಮಂಡಲಗಳ ಸೂಚನೆಗಳ ಮೇರೆಗೆ ರೂಪಗೊಳ್ಳುತ್ತಿದ್ದರೂ ಹೊಣೆಗಾರ ಸ್ಥಳಗಳಲ್ಲಿರುವ ಅನೇಕರಿಗೆ ಅವುಗಳ ರೂಪರೇಷಗಳ ಪರಿಜ್ಞಾನವಿರುವದಿಲ್ಲ. ಆದುದರಿಂದ ಅನೇಕರಿಗೆ ಆ ಯೋಜನೆಗಳು ಪೂರ್ತಿಯಾಗಿದ್ದರೂ ಆ ಬಗ್ಗೆ ಗೊತ್ತಿರುವದಿಲ್ಲ. ಈ ಯೋಜನೆಗಳು ಫಲಪ್ರದವಾಗಬೇಕಾದರೆ ಅವುಗಳ ರೂಪರೇಷೆಗಳಾದರೂ ಸಂಬಂಧಿಸಿದ ಸ್ಥಾನಿಕ ಜನರಿಗೆ ಮುಂಚಿತವಾಗಿ ಗೊತ್ತಿರಬೇಕು. ಈ ಮಟ್ಟಿಗಾದರೂ ಜೀವನ ಶಿಕ್ಷಣ ಸಾಲೆಗಳು ಪ್ರಚಾರ ಮಾಡಿದರೆ ಅವು ಯೋಜನೆಗೆ ತಮ್ಮ ಅಳಿಲು ಸೇವೆ ಸಲ್ಲಿಸಿದಂತಾಗುವದು.

ಕೊನೆಯದಾಗಿ ಯಾವದೇ ಕೆಲಸವು ಸರಿಯಾಗಿ ಸಾಗಬೇಕಾದರೆ ಅದು ಅನೇಕ ಸಂಗತಿಗಳನ್ನು ಅವಲಂಬಿಸಿರುತ್ತದೆ. ಅವುಗಳಲ್ಲಿ 'ಹಣವು' ಬಹು ಮುಖ್ಯವಾದ ಅಂಶವಾಗಿರುತ್ತದೆ. ದ್ವಿತೀಯ ಯೋಜನೆಯಲ್ಲಿ ಶಿಕ್ಷಣಕ್ಕೆ ಒದಗಿಸಿದ ಹಣವು ಸಮಾಧಾನಕಾರಕವಾಗಿದ್ದರೂ ಪ್ರಾಥಮಿಕ ಪ್ರಾಶಸ್ತ್ಯವನ್ನು ಕೊಡಬೇಕಾದ ಪ್ರಾಥಮಿಕ ಶಿಕ್ಷಣಕ್ಕೆ (Primary Education is the primary concern of the state-worth the name) ಅದರ ಮಹತ್ವಕ್ಕೆ ಅನುಗುಣವಾಗಿ ಸ್ಥಾನವನ್ನು ಕೊಡಲಾಗಲಿಲ್ಲವೆಂಬ ಸಂಗತಿಯನ್ನು ಕೆಳಗಿನ ಅಂಶಗಳೇ ಸಾರುತ್ತವೆ:—

	೧ನೆಯ ಯೋಜನೆ		೨ನೆಯ ಯೋಜನೆ	
೧) ಒಟ್ಟು ಹಣ (ರೂ.ಗಳಲ್ಲಿ)	2,356 ಕೋಟಿ	100%	4,800 ಕೋಟಿ	100%
೨) ಶಿಕ್ಷಣ	164 ,,	7%	307 ,,	6.4%
೩) ಪ್ರಾಥಮಿಕ ಶಿಕ್ಷಣ	13 ,,	4.03%	87 ,,	1.87%

ಇನ್ನು ಮುಂದಾದರೂ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಟ್ಟು ಸಾರ್ವತ್ರಿಕ ಶಿಕ್ಷಣವು ಎಲ್ಲರಿಗೂ ಆದಷ್ಟು ತೀವ್ರವಾಗಿ ದೊರೆಯುವದೆಂದು ಆಶಿಸೋಣ.

ಸಹಾಯ ಸಾಹಿತ್ಯ

1.	Second Five year Plan	1956 Govt. of India,	Planning Commissio
2.	Second Five year Plan	1956 Summary	Do
3.	People and the Plan	the Publication	Division.
4.	ನಮ್ಮ ದ್ವಿತೀಯ ಪಂಚವಾರ್ಷಿಕ ಯೋಜನೆ		ಪ್ರಕಾಶನ ವಿಭಾಗ.
5.	ಶಿಕ್ಷಣ ಮತ್ತು ಯೋಜನೆ.		,,

ಜೀವನ ಶಿಕ್ಷಣ ಶಾಲೆಗಳ ಶಿಕ್ಷಕರಿಂದ ಅಪೇಕ್ಷಿಸುವುದೇನು?

ಲೇಖಕರು: **ಶ್ರೀ ಎಫ್. ಸಿ. ಉಣಕಲ್ಲ,** ಬಿ.ಎ.,ಬಿ.ಟಿ.,ಡಿ.ಪಿ.ಈಡಿ.,ಡಿ.ಬಿ.ಇ.

ಇಂದು ಕೆಲವು ಸುಶಿಕ್ಷಿತ ಪಾಲಕರು ಸಹ ಈ ಹೊಸ ಶಿಕ್ಷಣದಿಂದ ತಮ್ಮ ಮಕ್ಕಳು ದಡ್ಡರೂ ಮುಡ್ಡರೂ ಆಗಿದ್ದಾರೆಂದು ಆಕ್ಷೇಪಿಸುತ್ತಿರುವುದು ನನ್ನ ಪ್ರತ್ಯಕ್ಷ ಅನುಭವಕ್ಕೆ ಬಂದಿದೆ. ಅವರ ಈ ಆಕ್ಷೇಪಣೆಯಲ್ಲಿ ತಥ್ಯಾಂಶವಿದೆಯೆಂದು ನಾವು ಒಪ್ಪಬಹುದಾದರೆ ಈ ಅಪವಾದಕ್ಕೆ ಕೇವಲ ಶಿಕ್ಷಕರಷ್ಟೇ ಗುರಿಯಾಗಲಾರರು. ಶಿಕ್ಷಕ–ಬಾಲಕ–ಪಾಲಕ ಹಾಗು ಶಿಕ್ಷಣ ಸುಧಾರಣೆಗೆ ಮಾರ್ಗದರ್ಶನ ಮಾಡುತ್ತಿರುವವರೆಲ್ಲರು ಒಂದೇ ಯಂತ್ರದ ಭಾಗಗಳೆಂದು ತಿಳಿದುಕೊಂಡರೆ ಎಲ್ಲಾ ಸರಿ ಹೋಗುವದು. ಮೂಲಶಿಕ್ಷಣದ ಯೋಜನೆಯಲ್ಲಿ ದೋಷವಿರದೆ ಶಿಕ್ಷಕನಾದವನಲ್ಲಿ ಸರಿಯಾದ ಚಟುವಟಿಕೆಗಳ ಯೋಜನೆ, ಮೂಲೋದ್ಯಮಕ್ಕೆ ವಿಷಯಗಳನ್ನು ಸ್ವಾಭಾವಿಕವಾಗಿ ಸಮವಾಯ ಮಾಡುವ ವಿಧಾನ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯರೂಪದಲ್ಲಿ ತರುವಂಥ ಪರಿಪಕ್ವವಾದ ಅನುಭವ–ಇವುಗಳ ಅಭಾವವೇ ಈ ದೋಷಕ್ಕೆ ಕಾರಣವೆಂದು ಹೇಳಬಹುದು. ಮಕ್ಕಳಿಗೆ ಸರಿಯಾದ ಜ್ಞಾನಲಭಿಸಬೇಕಾದರೆ ಯಾವ ಮಾರ್ಗವನ್ನು ಅನುಸರಿಸತಕ್ಕದ್ದೆಂಬುದನ್ನು ತಿಳಿಸಿ ಕೊಡುವುದೇ ನನ್ನ ಗುರಿಯಾಗಿದೆ.

ಶಿಕ್ಷಕನು ಸಮವಾಯ ಪಾಠಗಳ ಯೋಜನೆಯನ್ನು ಸರಿಯಾಗಿ ಸಿದ್ಧಪಡಿಸಿ ಅದನ್ನು ಯಶಸ್ವಿಯಾಗಿ ಕಾರ್ಯರೂಪದಲ್ಲಿ ತರಬೇಕಾದರೆ ಆತನಲ್ಲಿ ಪಾಂಡಿತ್ಯ, ಅನುಭವ, ಜಾಣ್ಮೆಗಳು ಹೆಚ್ಚಾಗಿರಬೇಕು; ಇದಲ್ಲದೆ ಆತನ ತಾಳ್ಮೆಯೂ ತತ್ವದಲ್ಲಿ ಗಾಢವಾದ ನಂಬಿಕೆಯೂ ಅತ ಗತ್ಯ. ಮಕ್ಕಳಿಗೆ ಸಹಜವಾದ ಸನ್ನಿವೇಶಗಳು ಮೂರ ಬಗೆ: ಔದ್ಯೋಗಿಕ ಅಥವಾ ಆರ್ಥಿಕ; ಭೌಗೋಲಿ ಅಥವಾ ನೈಸರ್ಗಿಕ; ಸಾಂಸ್ಕೃತಿಕ ಅಥವಾ ಸಾಮಾಜಿ ಜೀವನದ ಈ ಮೂರೂ ಸನ್ನಿವೇಶಗಳ ಚಟುವಟಿಕೆಗಳನ್ನು ಶಿಕ್ಷಣದ ಸಾಮಗ್ರಿಯಾಗಿ ಉಪಯೋಗಿಸಿಕೊಳ್ಳಬೇಕು ಶಿಕ್ಷಣ ಜೀವನದಲ್ಲಿ ಬೆರೆತು, ಜೀವನ ಶಿಕ್ಷಣವಾಗಬೇಕು ಸಮವಾಯ ಅಥವಾ ಅನುಬಂಧ ಸುಲಭವಾಗಿಯೂ ಸ್ವಾಭಾವಿಕವಾಗಿಯೂ ಇರಬೇಕು. ಉದಾಹರಣಾರ್ಥವಾಗಿ ಮಳೆ ಬೀಳುವಾಗ ಮೋಡ, ಗಾಳಿಯ ದಿಕ್ಕು ಮನ್ಸೂನ ಗಾಳಿಗಳು, ಮಳೆ ಅಳೆಯುವ ರೀತಿ, ಅದ ಪ್ರಮಾಣ, ಗಿಡನೆಡುವಾಗ ಬೇರು, ಕಾಂಡ, ಎಲೆಗಳ ಬಗೆಗೆ ಕಲ್ಪನೆ, ಪ್ರವಾಸ ಕಾಲದಲ್ಲಿ ಬೆಳೆ, ಹೊಳೆ, ಪರ್ವತ ಇತ್ಯಾದಿ ಸೃಷ್ಟಿ ವಸ್ತು ಪರಿಚಯ, ನೂಲುವ ನೆಯ್ಗೆಯ ಚಟುವಟಿಕೆಗಳಾದ ಮೇಲೆ ಹತ್ತಿ ಬೆಳೆಯುವ ಪ್ರದೇಶಗಳು, ಹತ್ತಿಯ ವಿವಿಧ ಪ್ರಕಾರಗಳು, ಬಟ್ಟೆಯ ಗಿರಣಿಗಳು, ಭಾರತದಲ್ಲಿ ಹಿಂದೆ ಹಾಗು ಇಂದು ತಯಾರಾದ ಬಟ್ಟೆಯ ಪ್ರಕಾರ, ಸ್ವಾತಂತ್ರ್ಯ ದಿನಾಚರಣೆಯ ದಿನ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸ, ತೋಟದ ಕಾಯಿಪಲ್ಲೆ ಮಾರುವಾಗ ತೂಕ, ಅಳತೆ, ಜಮಾಖರ್ಚು ಇಡುವ ರೀತಿ, ರಟ್ಟಿನ ಕೆಲಸ, ಬಡಿಗತನದ ಕೆಲಸವಾದ ಮೇಲೆ

ಭೂಮಿತಿ, ಗಣಿತಗಳ ಕಲ್ಪನೆ ಹಾಗು ಬಿದಿರು, ಕಟ್ಟಿಗೆ ದೊರೆಯುವ ಪ್ರದೇಶ ಈ ರೀತಿಯಾಗಿ ಕಲ್ಪನೆಗಳನ್ನು ನೈಜವಾಗಿ ಸುಲಭವಾಗಿ ಕ್ರಮಬದ್ಧವಾಗಿ ಮಕ್ಕಳ ಮನದಲ್ಲಿ ಮೂಡಿ ಬರುವಂತೆ ಸಮವಾಯ ಮಾಡಬೇಕು. ಆದರೆ ಕೃತ್ರಿಮವಾಗಿ ಜಗ್ಗಿ ತಂದು ಸಮವಾಯ ಮಾಡಕೂಡದು. ವಿಚಿತ್ರ ಹಾಗೂ ಅಸ್ವಾಭಾವಿಕ ಸಮವಾಯ ಮಾಡುವ ಉದಾಹರಣೆಗಳಿಗೇನೂ ಕಡಿಮೆಯಿಲ್ಲ. ನೂಲುವ ಚಟುವಟಿಕೆಗೆ ಪ್ಲಾಸಿ ಕಾಳಗವನ್ನು, ಹತ್ತಿಯ ಗಿಡದ ಮೇಲೆ ಗಿಳಿ ಕೂಡ್ರಿಸುವ ಚಿತ್ರದ ಸಹಾಯದಿಂದ ಗಿಳಿಯ ಬಗೆಗೆ ಕವಿತೆಯನ್ನು, ಹತ್ತಿಯ ಹೊಲ ಹಾಗು ಹುಲಿ–ಇವುಗಳ ಸನ್ನಿವೇಶದ ಚಿತ್ರದ ಸಹಾಯದಿಂದ ಶಬ್ದಾಲಂಕಾರವನ್ನು ಕಲಿಸುವದು, ನೂಲಿನಿಂದ ಅರಿವೆ ತಯಾರಾಗುತ್ತದೆ, ಅರಿವೆಯನ್ನು ಇಲಿ ಕಡಿಯುತ್ತದೆ, ಇಲಿ ಗಣಪತಿಯ ವಾಹನ ಹಾಗಾದರೆ ಇಂದು ಗಣಪತಿಯ ಕತೆ ಕಲಿಯೋಣ ಎಂದೂ, ನೂಲಿನಿಂದ ಹಗ್ಗ ತಯಾರಾಗುತ್ತದೆ; ಈ ಹಗ್ಗದಿಂದ ರಾವಣನು ಹನುಮಂತನನ್ನು ಕಟ್ಟಿ ಹಾಕಿಸಲು ಯತ್ನಿಸಿದ-ಎಂದು ರಾಮಾಯಣ ಕತೆ ಕಲಿಯೋಣ ಎಂದೂ ಹೇಳುವ ಗೋಕುಲಷ್ಟಮಿಗೂ ಇಮಾಮಸಾಹೇಬರಿಗೂ ಗಂಟು ಹಾಕುವ ಹಾಸ್ಯಾಸ್ಪದ ಸನ್ನಿವೇಶಗಳು ತಿಳಿಯದಲೆ ಪಾಠಗಳಲ್ಲಿ ನುಗ್ಗಿ ಬರುತ್ತವೆ. ಯಾವ ಜ್ಞಾನವನ್ನು ಸ್ವಾಭಾವಿಕವಾಗಿ ಕೊಡಲು ಬರುವುದಿಲ್ಲವೋ ಅದನ್ನು ಪೂರಕ ಪಾಠ ಅರ್ಥಾತ್ ಸಾದಾ ಇಲ್ಲವೆ ರೂಢಿಯ ಪಾಠ ಅಂತಾ ಇಟ್ಟುಕೊಂಡು ಕಲಿಸತಕ್ಕದ್ದು. ಒಂದೇ ಪಾಠದಲ್ಲಿ ಅನೇಕ ವಿಷಯಗಳ ಸಮನ್ವಯ ಮಾಡಿ ಮಕ್ಕಳ ಮನಸ್ಸನ್ನು ಕದಡಿಸಿ ಗೊಂದಲಗೇರ ಆಟ ಹೂಡುವದಕ್ಕಿಂತ ಸ್ವಾಭಾವಿಕವಾಗಿ ಎಷ್ಟು ಸಮವಾಯ ಮಾಡಲು ಬರುತ್ತದೆಯೊ ಅಷ್ಟೆ ಮಾಡುವುದು ವಿಹಿತ. ಮಣ್ಣು–ನೀರು ಗಡಿಗೆಯಲ್ಲ; ಮಣ್ಣು–ನೀರು ಇವೆರಡನ್ನು ಕಲೆಸಿ ಕುಂಬಾರ ಅದರಲ್ಲಿ ತನ್ನ ಕಲೆಯನ್ನು ಬೆಳಗಿದಾಗ ಗಡಿಗೆ ಸಿದ್ಧವಾಗುತ್ತದೆ. ಅಂತೆಯೇ ಶಿಕ್ಷಕನ ಕೆಲಸವಾಗಿರಬೇಕು; ಎಂದು ಆಚಾರ್ಯ ವಿನೋಬಾ ಭಾವೆಯವರು ಹೇಳಿದುದು ಗಮನಾರ್ಹವಾಗಿದೆ. ಅಡಿಗೆಯಲ್ಲಿ ಉಪ್ಪು ಹೆಚ್ಚಾದರೆ ಅಡಿಗೆ ಉಪ್ಪಾಗುತ್ತದೆ, ಉಪ್ಪು ಕಡಿಮೆಯಾದರೆ ಸಪ್ಪಗಾಗುತ್ತದೆ. ಆದುದರಿಂದ ಎಷ್ಟು ಉಪ್ಪು ಬೆರಿಸಬೇಕೋ ಅಷ್ಟನ್ನು ಬೆರೆಸಿದರೆ ಅಡಿಗೆ ರುಚಿಕಟ್ಟಾಗುತ್ತದೆ. ಅದರಂತೆ ಶಿಕ್ಷನು ಆಟ–ಅಭ್ಯಾಸ ಅಥವಾ ಚಟುವಟಿಕೆ–ಜ್ಞಾನ–ಇವುಗಳನ್ನು ಹಿತಮಿತದಿಂದ ಸಮರಸವಾಗಿ ಸರಾಗವಾಗಿ ಪಾಠಕ್ರಮ ಸಾಗಿಸಬೇಕು.

ವಿಷಯ ಜ್ಞಾನಕ್ಕಾಗಿ ಚಟುವಟಿಕೆಗಳನ್ನು ಆರಿಸಬೇಕೋ ಅಥವಾ ನಿತ್ಯ ಜೀವನದ ಕೆಲಸಗಳ ಮುಖಾಂತರ ವಿಷಯ ಜ್ಞಾನ ಮಾಡಿಕೊಡಬೇಕೊ ಎಂಬುದು ಕೆಲವರಿಗೆ ಸಮಸ್ಯೆಯಾಗಿದೆ. ವಿಷಯ ಜ್ಞಾನಕ್ಕಾಗಿ ಚಟುವಟಿಕೆಗಳನ್ನು ಆರಿಸಿಕೊಂಡರೆ ಅದು ಕೃತಕವಾಗುವ ಸಂಭವವಿದೆ. ಚಟುವಟಿಕೆಗಳು ಸನ್ನಿವೇಶಕ್ಕೆ ಅನುಗುಣವಾಗಿರಬೇಕು. ಉದಾಹರಣೆಗಾಗಿ ಉಳುವುದು, ಬಿತ್ತುವುದು, ಕೊಯ್ಯುವುದು ಹಾಗು ಜಯಂತಿ-ಪುಣ್ಯತಿಥಿಗಳನ್ನು ಆಚರಿಸುವುದು ಒಂದೊಂದು ನಿರ್ದಿಷ್ಟ ಋತುವಿನಲ್ಲಿ ಹಾಗು ಕಾಲದಲ್ಲಿ ಮಾಡುವದು ಸಾಧ್ಯ. ನಮ್ಮ ಮನಸ್ಸಿಗೆ ಬಂದಾಗ ಈ ಚಟುವಟಿಕೆಗಳು ನಡೆಯುವದಿಲ್ಲ. ಆದುದರಿಂದ ವಿಷಯ ಜ್ಞಾನವೇ ಚಟುವಟಿಕೆಗಳಿಗೆ ಹೊಂದಿಕೊಳ್ಳಬೇಕು.

ಮಗುವಿನ ಮುಂದಿನ ಜೀವನದ ಆಗುಹೋಗುಗಳ ಅಡಿಗಲ್ಲನ್ನು ಕೂಡಿಸುವ ಅನುಭಾವಿಗಳೆಂದರೆ ಮನೆಯಲ್ಲಿ ತಂದೆ ತಾಯಿಗಳು, ಸಾಲೆಯಲ್ಲಿ ಶಿಕ್ಷಕನು. ಆತನ ಭಾವೀ ಜೀವನ ವಿಕಾಸದ ಬೀಜಾರೋಪಣವು ತಂದೆ ತಾಯಿಗಳಿಂದಾದರೆ, ಅದು ಅಂಕುರಿಸಿ ಮೊಳೆತು ಮರವಾಗಿ ಫಲ ಕೊಡುವುದು ಶಿಕ್ಷಕನಿಂದ. ಮಗುವಿಗೆ ಶಿಕ್ಷಣ ಕೊಡುವವರೆಂದರೆ ತಂದೆ ತಾಯಿಗಳು ಶಿಕ್ಷಕರು ಮಾತ್ರವೇ ಅಲ್ಲ; ಸುತ್ತುಮುತ್ತಲಿನ ಪ್ರಪಂಚವೂ, ಸಜೀವ–ನಿರ್ಜೀವ ನಿಸರ್ಗವೂ ಮಗುವಿಗೆ ಶಿಕ್ಷಣ ಕೊಡುತ್ತದೆ. ಹಸಿದು ಕಂಗಾಲಾದವನು ಒಳಿತು ಕೆಡಕುಗಳನ್ನು ಲೆಕ್ಕಿಸದೆ ಕೈಗೆ ಸಿಕ್ಕದ್ದನ್ನು ಹೊಟ್ಟೆಯಲ್ಲಿ ತುರುಕಿಕೊಳ್ಳುವಂತೆ ಮಗುವಿನ ಬರಿದಾದ ಮನಸ್ಸು ಸುತ್ತುಮುತ್ತಲಿನ ವಿಷಯಗಳನ್ನು ಯಾವ ವಿಚಾರ ಮಾಡದೆ ಸಂಗ್ರಹಿಸತೊಡಗುತ್ತದೆ. ಆದರೆ ಯಾವುದನ್ನು, ಹೇಗೆ? ಮತ್ತು ಎಷ್ಟು? ಸಂಗ್ರಹಿಸಬೇಕೆಂಬುದನ್ನು ಮಗು ತಿಳಿದುಕೊಳ್ಳುವದು ಅತ್ಯಗತ್ಯ. ಈ ತಿಳುವಳಿಕೆಯನ್ನು ಸಾಲೆಯಲ್ಲಿ ಮಾಡಿಕೊಡುವ ಪ್ರಭಾವಿ ವ್ಯಕ್ತಿಯೆಂದರೆ ಶಿಕ್ಷಕನು. ಇದು ಈಡೇರಬೇಕಾದರೆ ಶಿಕ್ಷಣ ಕೊಡುವ ಶಿಕ್ಷಕರು ಮಕ್ಕಳಾಗಬೇಕು: ಶಿಕ್ಷಣ ಪಡೆಯುವ ಮಕ್ಕಳು ದೊಡ್ಡವರಾಗಬೇಕು; ಇದಲ್ಲದೆ ಶಿಕ್ಷಕನಲ್ಲಿ ತಾಯ್ತನ ಬರಬೇಕು.

ವಿಚಾರಕ್ಕೂ ಪ್ರತ್ಯಕ್ಷ ಜೀವನಕ್ಕೂ ನಿಕಟ ಸಂಬಂಧವಿರಬೇಕು; ಇದು ತಪ್ಪಿದರೆ ವಿಚಾರ ನಿರ್ಜೀವವಾಗು

ತ್ತದೆ, ಜೀವನ ವಿಚಾರ ಶೂನ್ಯನಾಗುತ್ತನೆ. ಆದುದರಿಂದ ಪ್ರಾಯೋಗಿಕ-ತಾತ್ವಿಕ-ಇವು ಸಮರಸವಾಗಿ ಹಾಸು ಹೊಕ್ಕಾಗಿ ಸಾಗಬೇಕು. ಈ ತತ್ವಪ್ರಣಾಲಿಗನುಗುಣವಾಗಿ ಶಿಕ್ಷಕನು ಮಗುವನ್ನು ಯಾವದಾದರೊಂದು ಉಪಯುಕ್ತ ಚಟುವಟಿಕೆಯಲ್ಲಿ ತೊಡಗಿಸಿ ಅದರ ಮುಖಾಂತರ ಜ್ಞಾನ ಮಾಡಿಕೊಡುವ ವಿಧಾನವೇ ಗಾಂಧೀಜಿಯವರು ಜೀವನ ಶಿಕ್ಷಣಕ್ಕೆ ಕೊಟ್ಟ ಕೊಡುಗೆ ಶ್ರೀಕೃಷ್ಣನು ಅರ್ಜುನನಿಗೆ ಕುರುಕ್ಷೇತ್ರದಲ್ಲಿ ಭಗವದ್ಗೀತೆಯನ್ನು ಹೇಳಿದ; ಆದರೆ ಮೊದಲು ಭಗವದ್ಗೀತೆಯನ್ನು ಪಾಠ ಮಾಡಿಸಿ ತದನಂತರ ಅರ್ಜುನನನ್ನು ಕುರುಕ್ಷೇತ್ರಕ್ಕೆ ನೂಕಲಿಲ್ಲ. ಆಗ ಅವನಿಗೆ ಗೀತೆ ಅರಗಿತು. ಅಂತೆಯೇ ಶಿಕ್ಷಕನ ಕೆಲಸ. ಚಟುವಟಿಕೆಯು ಜ್ಞಾನ ಶಿಖರಕ್ಕೆ ಮುಟ್ಟುವ ಸೋಪಾನ. ಮೂಲೋದ್ಯಮ ಶಿಕ್ಷಣ ಬರಿ ಸಾಧನವಲ್ಲ, ಅದರ ಅವಿಭಾಜ್ಯ ಅಂಗ, ಈ ಉದ್ಯಮದ ಮೂಲಕ ಮೂರು ಉದ್ದೇಶಗಳನ್ನು ಶಿಕ್ಷಕನು ಪೂರ್ಣ ಮಾಡಬೇಕು. ಅವು ಯಾವವೆಂದರೆ— (೧) ಮಕ್ಕಳ ಸುಪ್ತ ಶಕ್ತಿಗಳನ್ನು ಜಾಗೃತಗೊಳಿಸಿ ಅವುಗಳ ಸರ್ವವಿಧದ ವಿಕಾಸ (೨) ಮಕ್ಕಳಿಗೆ ಜೀವನೋಪಯೋಗಿಯಾದ ವಿವಿಧ ಜ್ಞಾನ ನೀಡುವದು ಹಾಗು (೩) ಮಕ್ಕಳ ಉಪಜೀವನಕ್ಕೆ ಒಂದು ಸಮರ್ಥ ಸಾಧನವನ್ನು ಒದಗಿಸುವದು.

ಶಿಕ್ಷಕನು ತೊಟ್ಟಿಲಿನಿಂದ ಸುಡುಗಾಡ ವರೆಗಿನ ಎಲ್ಲ ಜ್ಞಾನವನ್ನು ಮಗುವಿಗೆ ಮಾಡಿಕೊಡುವ ಆವಶ್ಯಕತೆಯಿಲ್ಲ. ಸಮಯಕ್ಕನುಸಾರವಾಗಿ ಯಾವುದು ಎಷ್ಟು ಅಗತ್ಯವೊ ಅಷ್ಟು ಜ್ಞಾನವನ್ನು ಮಕ್ಕಳಿಗೆ ಗಳಿಕೆ ಮಾಡಿ ಕೊಡಬೇಕು. ವೃಕ್ಷವು ತನ್ನ ಸುತ್ತಲಿನ ವಾತಾವರಣದಿಂದ ಪೋಷಣ ಪಡೆಯುವಂತೆ ಮಗುವು ತನ್ನ ಸುತ್ತಲಿನ ಸಮಾಜದಿಂದ ಬಾಳಿಬೆಳೆಯಬೇಕಾಗುವದು. ಮಕ್ಕಳಲ್ಲಿ ಹುದುಗಿರುವ ಸ್ವಯಂಭೂ-ಜ್ಞಾನವನ್ನು ಹೊರಸೆಳೆಯಲು ತ್ರಿವಿಧ ಕಾರ್ಯಕ್ರಮವಿದೆ. ಮಗುವಿನ ಬುದ್ಧಿ-ದೇಹ-ಮನಸ್ಸು ಇಲ್ಲವೆ ವಾಚೆ-ಶರೀರ-ಮನಸ್ಸು-ಇವುಗಳ ಪರಿಪೂರ್ಣ ಹಾಗು ಸಮನಾದ ವಿಕಾಸವಾಗಬೇಕು.

೧) ಒಳ್ಳೆಯ ಭಜನೆ, ಕವಿತೆ ಮುಂತಾದವುಗಳನ್ನು ಮಧುರ ಕಂಠದಿಂದ ಸ್ಪಷ್ಟ ಉಚ್ಚಾರಣೆಯಿಂದ ಹೇಳುವದು ಅರ್ಥದ ಸಾಮಾನ್ಯ ಜ್ಞಾನ, ವಾಚನ ಇತ್ಯಾದಿಗಳೆಲ್ಲ ವಾಣಿಯ ಸುಧಾರಣೆಯ ಸಾಧನಗಳು.

೨) ಬಯಲಿನಲ್ಲಿ ಉದ್ಯೋಗ ಅಥವಾ ಆಟ, ಹಿ
ಮಿತ ಆಹಾರ, ನಿಸರ್ಗೋಪಚಾರಗಳ ಜ್ಞಾನ, ತದನ
ಸಾರ ಉಚಿತ ಆಚರಣೆ ಇವು ಶರೀರ ಸಂವರ್ಧನೆಗೆ ಸಹಾ
ಯಕಾರಿಯಾಗಿವೆ.

೩) ಉತ್ತಮ ನಡವಳಿಕೆ, ಪರೋಪಕಾರ ಬುದ್ಧಿ
ತ್ಯಾಗ, ಸಮಾಜ ಸೇವೆ, ಆತ್ಮಸಂಯಮನ, ಸ್ವಾವಲ
ಬನೆ, ಅಹಿಂಸೆ ಇತ್ಯಾದಿ ಗುಣಗಳು ಮಗುವಿನ ಮನಸ್ಸನ್ನು
ಅರಳಿಸುತ್ತವೆ.

ಒಟ್ಟಿನಲ್ಲಿ, ಗಾಳಿ, ಮಳೆ, ಚಳಿ, ಬಿಸಿಲುಗಳನ್ನು
ಸಹಿಸಿ ಗಿಡಬಳ್ಳಿಗಳು ಜನರಿಗೆ ಹೂ-ಹಣ್ಣುಗಳನ್ನು ನೀಡ
ವಂತೆ ಶಿಕ್ಷಕನು ಮಕ್ಕಳ ಸರ್ವತೋಮುಖ ಕಲ್ಯಾ
ಕ್ಕಾಗಿ ಶ್ರಮಬಟ್ಟು ಅವರು ಸುಸಂಸ್ಕೃತರಾಗಿ, ಗುಣವಂ
ರಾಗಿ, ಸ್ವಾವಲಂಬಿಗಳಾಗಿ, ಸಮಾಜ ಸೇವಕರಾಗಿ ಪರಿ
ಮಿಸುವಂತೆ ತರಬೇತುಗೊಳಿಸುವದೇ ಶಿಕ್ಷಕನ ಅಂತಿಮ
ಗುರಿಯಾಗಿರಬೇಕು.

ಪ್ರಾಥಮಿಕ ಶಾಲಾ ಪ್ರಮಾಣಪತ್ರ ಪರೀಕ್ಷೆ, ಟ್ರೇನಿಂ
ಕಾಲೇಜ; ಎಲಿಮೆಂಟರಿ ಮತ್ತು ಇಂಟರಮೀಡಿಯೆಟ್ ಗ್ರೇ
ಮುಂ. ಡ್ರಾಯಿಂಗ ಪರಿಕ್ಷೆಗಳಿಗೆ—

ಜನಪ್ರಿಯವಾದ ಮತ್ತು ಸರಕಾರದಿಂದ
ಮಂಜೂರಾದ ಒಂದೇ ಒಂದು ಪುಸ್ತಕ

ಆದರ್ಶ ಚಿತ್ರಕಲಾ

(Ideal Drawing)

ಶ್ರೀ ಎಸ್. ಕೆ. ಜೋಶಿ, ಮತ್ತು
ಶ್ರೀ ಜಿ. ಡಿ. ವಾಲಿ.

ಎಲ್ಲ ದೊಡ್ಡ ಪುಸ್ತಕ ವ್ಯಾಪಾರಸ್ಥರಲ್ಲಿ
ದೊರೆಯುವದು. **ಬೆಲೆ ೧—೧೨—೦** ಅಂಚೆವೆಚ್ಚ
ಪ್ರತ್ಯೇಕ. ಐದು ಮತ್ತು ಐದಕ್ಕಿಂತ ಹೆಚ್ಚು ಪ್ರ
ತರಿಸಿಕೊಳ್ಳುವವರಿಗೆ ಅಂಚೆ ವೆಚ್ಚವಿಲ್ಲ.
ಇದು ಕನ್ನಡದಲ್ಲಿಯೂ ಸಿಗುತ್ತದೆ,

ಜಿ. ವಾಯ್. ರಾಣೆ
ಪ್ರಕಾಶಕರು, ೩೪೩, ಕಸಬಾ ಪೇಟ ಪುಣೆ.

ಜೀವನ ಶಿಕ್ಷಣದ ಕೆಲ ವಿಷಯಗಳ ವಿಮರ್ಶೆ

ಲೇಖಕರು : **ಶ್ರೀ ತಟ್ಟಿ ಶಾಮರಾಯರು**

ಅಧ್ಯಕ್ಷ ಮಹಾಶಯರೇ, ಸನ್ಮಾನ್ಯ ಸಭಿಕರೇ,

ಇದುವರೆಗೆ ಜೀವನ ಶಿಕ್ಷಣದ ಹಿನ್ನೆಲೆ, ಅದಕ್ಕೆ ಆಧಾರವಾಗಿದ್ದ ಮನೋವೈಜ್ಞಾನಿಕ ತತ್ವಗಳು, ರಾಷ್ಟ್ರೀಯ ದೃಷ್ಟಿಯಿಂದ ಅದರ ಪ್ರಯೋಜನ ಇತ್ಯಾದಿ ಸಂಗತಿಗಳನ್ನು ಉತ್ತಮ ರೀತಿಯಿಂದ ವಿವೇಚಿಸಿದ್ದನ್ನು ಕೇಳಿದ್ದೀರಿ. ಈ ಜೀವನ ಶಿಕ್ಷಣಕ್ಕೆ ಸಂಬಂಧಿಸಿದ ಕೆಲವು ಮಾತುಗಳ ವಿಮರ್ಶೆಯನ್ನು ತಮ್ಮ ಗಮನಕ್ಕೆ ತರಬೇಕೆಂದಿದ್ದೇನೆ. ಮೊನ್ನೆ ಕರ್ನಾಟಕ ಗ್ರಂಥಾಲಯದಲ್ಲಿ ಓದುತ್ತ ಕುಳಿತಾಗ ಅಕಸ್ಮಾತ್ತಾಗಿ ಕೇಂದ್ರ ಸರಕಾರದ ಪ್ರಸಿದ್ಧಿ ಶಾಖೆಯವರು ಪ್ರಕಟಿಸಿದ ಕಳೆದ ಅಕ್ಟೋಬರ ತಿಂಗಳ 'ಕುರುಕ್ಷೇತ್ರ' ಪತ್ರಿಕೆಯಲ್ಲಿ 'ಜೀವನ ಶಿಕ್ಷಣವು ಸರಿಯಾಗಿ ನಡೆದಿದೆಯೇ ಎಂಬ' ಶೀರ್ಷಿಕೆಯಿಂದ ಒಂದು ಚರ್ಚೆಯನ್ನು ಆರಂಭಿಸಿದ್ದನ್ನು ಓದಿದೆ. ಅದರಲ್ಲಿ ಈ ಜೀವನ ಶಿಕ್ಷಣದ ಬಗೆಗೆ ಅಸಮಾಧಾನವನ್ನೂ ಅಸಂತೃಪ್ತಿಯನ್ನೂ ವ್ಯಕ್ತಪಡಿಸಿದ್ದನ್ನು ಓದಿ ಮನಸ್ಸಿಗೆ ಒಂದಿಷ್ಟು ಖೇದವಾಯಿತು. ಯಾಕೆಂದರೆ ಈ ಜೀವನ ಶಿಕ್ಷಣವು ನಮ್ಮ ದೇಶದ ಸಂಸ್ಕೃತಿಯ ಪೋಷಣ ದೃಷ್ಟಿಯಿಂದ, ನಮ್ಮ ದೇಶದ ಭವಿತವ್ಯದ ದೃಷ್ಟಿಯಿಂದ, ದೇಶದ ಆರ್ಥಿಕ ಸ್ಥಿತಿಯ ವಿಶಿಷ್ಟ ದೃಷ್ಟಿಯಿಂದ, ಮನೋವೈಜ್ಞಾನಿಕ ದೃಷ್ಟಿಯಿಂದ ಹೀಗೆಲ್ಲ ದೃಷ್ಟಿಯಿಂದಲೂ ಈ ಶಿಕ್ಷಣವು ಇಟ್ಟುಕೊಂಡ ಸಾಧ್ಯಸಾಧನೆಗಳು ನಿರ್ದುಷ್ಟವೂ ಅತ್ಯಂತ ಸಮಂಜಸವೂ ಇವೆ ಎಂದು ದೀರ್ಘ ವಿಚಾರಾಂತ್ಯದಲ್ಲಿ ಕಂಡು ಬಂದಿದೆ. ಜೀವನ ಶಿಕ್ಷಣದ ಆದರ್ಶವಂತೂ ಯೋಗ್ಯವಾದದ್ದೇ; ಕಾರ್ಯ ಸಾಧನೆಯು ತಕ್ಕ ಮಟ್ಟಕ್ಕೆ ಇನ್ನೂ ಬಂದಿಲ್ಲವೆಂಬುದನ್ನು ನಾವು ಒಪ್ಪಬಹುದು. ಆ ಮಾಸಿಕ ಪತ್ರಿಕೆಯಲ್ಲಿ ಎತ್ತಿ ತೋರಿಸಿದ ಲೋಪದೋಷಗಳನ್ನು ಸಂಕ್ಷೇಪದಿಂದ, ಸೂತ್ರರೂಪದಿಂದ ಹೇಳಬೇಕಾದರೆ, ಹೀಗಿವೆ. ೧. ಈ ಶಿಕ್ಷಣದಿಂದ ಮಕ್ಕಳು ಹಿಡಿದ ಕೈಗಾರಿಕೆಯಲ್ಲಿ ಸಾಕಷ್ಟು ಕುಶಲತೆಯನ್ನು ಪಡೆಯುವದಿಲ್ಲ. ೨. ಅವರಿಗೆ ಬೌದ್ಧಿಕ ವಿಷಯಗಳ ಅಂದರೆ ಭೂಗೋಲ, ಇತಿಹಾಸ, ಭಾಷೆ, ಗಣಿತ, ವಿಜ್ಞಾನ ಇತ್ಯಾದಿ ವಿಷಯಗಳ ಸಾಕಷ್ಟು ಜ್ಞಾನವು ಆಗುವದಿಲ್ಲ. ಮತ್ತು ಬುದ್ಧಿಯ ಮಟ್ಟವು ಸಾಕಷ್ಟು ಬೆಳೆಯುವದಿಲ್ಲ, ೩. ಮಕ್ಕಳ ಒಲವು ತಿಳಿಯುವದಕ್ಕೆ ಮುಂಚೆಯೇ, ತಿಳಿ ವಯಸ್ಸಿನಲ್ಲಿಯೇ ಕೈಗಾರಿಕೆಯ ಅಭ್ಯಾಸವನ್ನು ಮಕ್ಕಳಿಗೆ ಮಾಡಿಸಲಾಗುತ್ತಿದೆ; ಇದು ತಪ್ಪು. ೪. ದೊಡ್ಡವರಿಗೆ, ಅಧಿಕಾರಸ್ಥರಿಗೇ ಇದರಲ್ಲಿ ವಿಶ್ವಾಸವಿಲ್ಲ; ಅವರು ತಮ್ಮ ಮಕ್ಕಳನ್ನು ಜೀವನ ಶಿಕ್ಷಣ ಸಾಲೆಗಳಿದ್ದರೂ ಅಲ್ಲಿ ಕಳಿಸದೇ ಬೇರೆ ಕಡೆಗೆ ಕಳಿಸುತ್ತಾರೆ. ಮುಖ್ಯವಾಗಿ ಹಳ್ಳಿಯ ಶಿಕ್ಷಣಕ್ಕೂ ನಗರಗಳ ಶಿಕ್ಷಣಕ್ಕೂ ವ್ಯತ್ಯಾಸವಾಗಿ ಬಿಟ್ಟಿದೆ. ಹೀಗೆ ನಾಲ್ಕೈದು ದೋಷಗಳನ್ನು ತೋರಿಸಿ ಇದನ್ನು ಇದ್ದಕ್ಕಿದ್ದಂತೆ ಮುಂದುವರಿಸುವದರಲ್ಲಿ ಅರ್ಥವಿಲ್ಲ ಎನ್ನುವ ಹಾಗೆ ಆ ಲೇಖನದಲ್ಲಿ ವಿವರಿಸಲಾಗಿದೆ. ಆದರೆ, ಮಾನ್ಯ ಶಿಕ್ಷಕರೇ, ಹಾಗು ಅಧ್ಯಾಪಕ ಗುರುಗಳೇ, ಈ ಎಲ್ಲ ಆಕ್ಷೇಪಗಳಿಗೂ ತಕ್ಕ ಸಮಾಧಾನಕರವಾದ ಉತ್ತರಗಳಿವೆ ಎಂಬುದನ್ನು ನೀವು ಬಲ್ಲಿರಿ. ಮೊನ್ನೆ ಮೊನ್ನೆ ರಾಜ್ಯದ ಮಾನ್ಯ ಶಿಕ್ಷಣ ಮಂತ್ರಿಗಳಾದ ಶ್ರೀ ವೆಂಕಟಪ್ಪನವರು "ಈ ಉತ್ತರ ಕರ್ನಾಟಕದಲ್ಲಿ ಜೀವನ ಶಿಕ್ಷಣವು ಸಾಕಷ್ಟು ಯಶಸ್ವಿಯಾಗಿದೆ, ಉಳಿದ ರಾಜ್ಯಗಳಲ್ಲಿಗಿಂತಲೂ ಹೆಚ್ಚು ಚೆನ್ನಾಗಿ ಇಲ್ಲಿ ಇದು ನಡೆದಿದೆ," ಎಂಬ ನಿಷ್ಪಕ್ಷಪಾತವಾದ ರೀತಿಯಲ್ಲಿ ವ್ಯಕ್ತಮಾಡಿದ ಅಭಿಪ್ರಾಯವನ್ನು ಕೇಳಿ ಎಲ್ಲ ಕನ್ನಡಿಗರಿಗೂ ಸಂತೋಷವಾಗಿದೆ. ಹಳೆಯ ಮೈಸೂರ ರಾಜ್ಯದವರು ನಮ್ಮ ಬಗ್ಗೆ ಅಸೂಯೆಯನ್ನು ತಾಳದೇ ಉತ್ತರ ಕರ್ನಾಟಕದ ಶಿಕ್ಷಣ ಮಟ್ಟದಿಂದ ಸ್ಫೂರ್ತಿಯನ್ನು ಪಡೆಯಬಹುದೆಂದು ಆಶಿಸುವದು ಸರಿಯಾಗಿದೆ. ಇನ್ನು ಉತ್ಪಾದಕ ಕೈಗಾರಿಕೆಯಲ್ಲಿ ಕೌಶಲ್ಯವು ಪ್ರಾಪ್ತವಾಗುದಿಲ್ಲ ಎಂಬ ಆಕ್ಷೇಪಕ್ಕೆ ಉತ್ತರವಿಷ್ಟೇ. ಈ ಕೌಶಲ್ಯದ ಮಟ್ಟವನ್ನು ಆಧುನಿಕ ಪ್ರಗತಿಮಾನದ ಸಾಧನಗಳಿಂದ ಅಳೆದು ಕಂಡು ಹಿಡಿದ ಅಂಕಿ ಸಂಖ್ಯೆಗಳು ತಕ್ಕ ಪ್ರಮಾಣದಲ್ಲಿ ದೊರೆಯುವದಿಲ್ಲ ಇಷ್ಟೇ. ಈ ವಸ್ತುನಿಷ್ಠ ಪರೀಕ್ಷಾ ಪದ್ಧತಿಯ ಸಾಧನಗಳ ಉಪಯೋಗವು ಇನ್ನೂ ಸಾಕಷ್ಟು ಪ್ರಸಾರವಾಗದೇ ಇದ್ದದ್ದು ನಮ್ಮ ಕೊರತೆ ಎಂದು ನಾವು ಒಪ್ಪಿಕೊಳ್ಳಬಹುದು. ಇನ್ನು ವಿಷಯ ಜ್ಞಾನ ಮತ್ತು ಬುದ್ಧಿವಂತಿಕೆ ತಕ್ಕ ಮಟ್ಟಕ್ಕೆ ಮುಟ್ಟಿಲ್ಲ ಎಂಬ ಎರಡನೇ ದೋಷವನ್ನು ಪರಿಶೀಲಿಸುವ.

ಉದಾಹರಣೆಗೆ ಭೂಗೋಲದ ಯಥಾರ್ಥ ಜ್ಞಾನವಿಲ್ಲ ಎಂದು ಟೀಕಿಸುವವರು ಈ ಭೂಗೋಲಜ್ಞಾನದ ರೂಪರೇಷೆಯಲ್ಲಿ ಕಳೆದ ಹತ್ತಿಪ್ಪತ್ತು ವರ್ಷಗಳಲ್ಲಿ ಎಷ್ಟು ಬದಲಾವಣೆಯಾಗಿದೆ ಎಂಬುದನ್ನು ಮರೆತಂತೆ ತೋರುತ್ತದೆ. 'ನೋವಾಝೆಮ್ಲಾ' ಎಲ್ಲಿದೆ? 'ಕಾಮಶ್ಚಾಟಕ' ಯಾವ ದೇಶದಲ್ಲಿ ಬರುತ್ತದೆ? ಎಂದು ಹಳೆಯ ಪರೀಕ್ಷೆಯ ತರಹದ ಪ್ರಶ್ನೆಗಳನ್ನು ಕೇಳಿದರೆ ಉತ್ತರವನ್ನು ಸಾಮಾನ್ಯವಾಗಿ ಈಗಿನ ಹುಡುಗರು ಕೊಡಲಿಕ್ಕಿಲ್ಲ. ಇದು ಯಾರ ತಪ್ಪೂ ಅಲ್ಲ. ಈಗ ಮಕ್ಕಳು ಓದುವ ಭೂಗೋಲ ಪುಸ್ತಕಗಳೇ ಆಗಲಿ, ಇತಿಹಾಸ ಪುಸ್ತಕಗಳೇ ಆಗಲಿ ಬಹಳ ಚೆನ್ನಾಗಿ ವಿಷಯವನ್ನು ತಿಳಿದುಕೊಂಡವರಿಂದ ಬರೆಯಲ್ಪಟ್ಟಿರುತ್ತವೆ ಮತ್ತು ಮಕ್ಕಳಿಗೆ ವ್ಯಾವಹಾರಿಕವೂ ಕುತೂಹಲಹುಟ್ಟಿಸುವವೂ, ಮನೋರಂಜಕವೂ ಆಗುವಂತೆ ಈಗಿನ ದೇಶಕಾಲ ಪರಿಸ್ಥಿತಿಗನುಸರಿಸಿ ಬರೆಯಲ್ಪಟ್ಟಿರುತ್ತವೆ. ಇನ್ನು ಮಕ್ಕಳು ಅವನ್ನು ಮೊದಲಿನಂತೆ ಓದಿ ಓದಿ ಪಾಠಮಾಡುತ್ತಿರಲಿಕ್ಕಿಲ್ಲ; ಏಕೆಂದರೆ ಕೇವಲ ಪುಸ್ತಕದಲ್ಲಿದ್ದ ಸಂಗತಿಗಳ ಉಪಯೋಗವನ್ನು ಕಂಡುಕೊಳ್ಳಲಿಕ್ಕೆ ಅನುಭವದಿಂದ, ಕೈಯಿಂದ ಕೆಲಸ ಮಾಡುವಾಗ ಮನೆಯ, ಶಾಲೆಯ, ಹಳ್ಳಿಯ ಕೆಲಸಗಳನ್ನು ಮಾಡುವಾಗ ಪ್ರತ್ಯಕ್ಷ ಉಪಯೋಗವನ್ನು ಕಂಡುಕೊಳ್ಳಲಿಕ್ಕೆ ತಕಷ್ಟು ಸಮಯವು ದೊರೆತಿರಲಿಕ್ಕಿಲ್ಲ. ಮಕ್ಕಳ ಈ ವಿಚಾರಕ್ರಮಕ್ಕೆ ತಕ್ಕ ಸಮಯವೂ ಪೂರ್ವಾಲೋಚನೆಯೂ ಪಾಠಗಳ ಯೋಜನೆಯೂ ಎಷ್ಟು ಚೆನ್ನಾಗಿ ಆಗಬೇಕೋ ಅಷ್ಟು ಚೆನ್ನಾಗಿ ಆಗುವದಿಲ್ಲ. ಅದಕ್ಕೆ ಶಿಕ್ಷಕರೂ, ಮೇಲ್ವಿಚಾರಕರೂ, ಪ್ರಾಧ್ಯಾಪಕರೂ ಸಾಕಷ್ಟು ತಮ್ಮ ತಮ್ಮ ವಿಷಯಗಳಲ್ಲಿ ಅಭಿಜ್ಞರೂ, ಉತ್ಸಾಹಯುತರೂ, ಅನುಭವಿಕರೂ ಆದವರು ಸಾರ್ವತ್ರ ಇನ್ನೂ ಕಾಣಬರುವದಿಲ್ಲ. ಅದನ್ನು ಸಾಧಿಸುವದಕ್ಕೆ ವಿದ್ಯಾಖಾತೆಯವರೂ ತರಬೇತಿ ಸಂಸ್ಥೆಯವರೂ ತಕ್ಕಷ್ಟು ಪರಿಶ್ರಮವಹಿಸುತ್ತಲಿರುವರು. ಮುಂದೆ ಈ ಸ್ಥಿತಿಯು ಹೀಗೇ ಅಸಮಾಧಾನದ ಸ್ಥಿತಿಯಲ್ಲಿ ಉಳಿಯಲಾರದು ಎಂದು ಆಶಿಸಬಹುದಾಗಿದೆ. ಇಲ್ಲಿ ಸಮನ್ವಯತಂತ್ರ ಅಥವಾ ಸಂಬಂಧೀಕರಣದ ಹೊಸ ಪದ್ಧತಿಯ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳುವದು ಅಪ್ರಸ್ತುತವಾಗದು. ಈ ಪದ್ಧತಿಯನ್ನು ಹೀಗೆ ಸಾಮಾನ್ಯವಾಗಿ ವಿವರಿಸಲಾಗುತ್ತಿದೆ. ಯಾವ ತಿಳಿದುಕೊಳ್ಳಬೇಕಾದ ಮಾತನ್ನಾದರೂ ಒಂದು ಕೆಲಸಕ್ಕೆ ಅದು ಬೇಕು.
ಅದು ತಿಳಿಯದಿದ್ದರೆ ಆ ಕೆಲಸ ಮಾಡಲಿಕ್ಕೇ ಬರುವದಿ
ಹೀಗಿರಬೇಕು: ಆದ್ದರಿಂದ ಪ್ರತಿಯೊಂದು ಜ್ಞಾನ
ಚುಟುಕನ್ನು ಒಂದು ವ್ಯವಹಾರದ ಕೆಲಸಕ್ಕೆ ಕೂಡಿಸಿಯೆ
ಕಲಿಸುವದಾಗಬೇಕು. ಈ ವ್ಯವಹಾರವು ಆರ್ಥಿಕ ಸನ್ನಿ
ವೇಶಕ್ಕೆ ಸಂಬಂಧಿಸಿದ್ದಾಗಲೀ, ಸಾಮಾಜಿಕ ಸನ್ನಿವೇ
ಕ್ಕಾಗಲಿ, ಭೌತಿಕ ಸಾಧನಗಳ ಉಪಯೋಗದ ಪ್ರಾಕೃ
ತಿಕ ಸನ್ನಿವೇಶಕ್ಕೆ ಸಂಬಂಧಿಸಿದ್ದಾಗಲಿ ಇರಬೇಕು—
ಎಂದು. ಉದಾಹರಣೆಗಾಗಿ ೩ ಚೌರಸ ಫೂಟು ಸ್ಥಳವನ್ನು
ವ್ಯಾಪಿಸುವ ಸಣ್ಣ ಸಣ್ಣ ಮಡಿಗಳನ್ನು ಕಾಯಿಪಲ್ಯ
ಒಂದು ತೋಟದಲ್ಲಿ ಮಾಡಬೇಕಿದ್ದರೆ, ೩ ಚೌರಸ ಅಡಿ
ಅಂದರೆಷ್ಟು ಇದರ ತಿಳುವಳಿಕೆ ಆಗಬೇಕು. ಈ ಮಡಿ
ಮಾಡುವ ಕೆಲಸಕ್ಕೆ ಸಂಬಂಧಿಸಿ, ಕ್ಷೇತ್ರಫಲದ ಅರ್ಥ
ವನ್ನು ಕಲಿಸಬಹುದು; ಅಥವಾ ೨ ಚೌರಸ ಅಡಿಯ ೧
ಈ ಗುಣಾಕಾರದ ಕೃತಿಯನ್ನು ಕಲಿಸಬಹುದು; ಮತ್ತು
ಮೂರು ಅಂಶ ಎರಡನೆಯವು. ಈ ಭಿನ್ನ ರಾಶಿಯ ಅರ್ಥ
ವನ್ನು ಕಲಿಸಬಹುದು. ಅಂಕಗಣಿತದ ಈ ಮೂರು ಪಾ
ಗಳನ್ನು ಕಲಿಸುವದಕ್ಕೂ ಅದೇ ತೋಟದ ಕ್ಷೇತ್ರ
ಅಳತೆ ಮಾಡಬೇಕಾದ ಚಟುವಟಿಕೆ ಇದ್ದರೂ ಆ ಮೂರೂ
ಪಾಠಗಳಿಗೂ ಪುನಃ ಈ ಚಟುವಟಿಕೆಯಿಂದಲೇ ಪಾ
ವನ್ನು ಪ್ರಾರಂಭಿಸುವ ಕಾರಣವಿಲ್ಲ. ಹೀಗೆಯೆ ಭೂಮಿ
ಕಲಿಯುವದದೆ. ಆಗ ಸರಳರೇಖೆಯ ಸೂಕ್ಷ್ಮ ಅಳ
ಮಾಡಲಿಕ್ಕೆ ಕಲಿಯುವದಿದೆ, ೧ ಇಂಚಿಗಿಂತಲೂ ಸಣ್ಣ
ದಾದ ಗೆರೆಯನ್ನು ಹೇಗೆ ಅಳತೆ ಮಾಡಬೇಕು, ಯಾ
ರಿಂದ ಅಳೆಯಬೇಕು, ಆ ಅಳತೆಯ ಉತ್ತರವನ್ನು ಹೇ
ಮಾತಿನಿಂದ ಹೇಳಬೇಕು ಇತ್ಯಾದಿ ಸಂಗತಿಗಳನ್ನು ತಿಳಿ
ಕೊಂಡಿರಬೇಕಾಗುವದು. ಕೊಟ್ಟ ಅಳತೆಗಳ ಮೇಲಿಂ
ತ್ರಿಕೋಣಗಳನ್ನು ರೂಲರ ಕಂಪಾಸುಗಳ ಸಾಧನದಿಂ
ರಚಿಸಲಿಕ್ಕೆ ಕಲಿಯುವವರಿದ್ದೇವೆ. ಆದರೆ ಮೊದಲ
ನಾನು ನಿಮಗೆ ೧ ಅರ್ಧ ಇಂಚು, ೧ ದಶಾಂಶ ಇಂಚ
ಎಂಬ ಮಾತುಗಳ ಅರ್ಥವನ್ನು ಒಂದೆರಡು ಪಾಠಗಳಲ್ಲಿ
ಕಲಿಸುವೆನು. ಅದರ ಉಪಯೋಗವು ನಿಮಗೆ ತ್ರಿಕೋ
ಣದ ಪ್ರಾತ್ಯಕ್ಷಿಕೆಯಲ್ಲಿ ತಿಳಿಯುವದು. ಎಂದು ಅಪೂ
ರ್ಣಾಂಕದ ಕಲ್ಪನೆಯ ಆರಂಭವನ್ನು ಪ್ರತ್ಯಕ್ಷವಸ್ತುಗ
ಭಾಗಮಾಡಿ ಹುಡುಗರಿಗೆ ಕಲಿಸಬಹುದು. ಸಾರಾಂಶವೇ
ನೆಂದರೆ ಪ್ರತಿಯೊಂದು ಪಾಠಕ್ಕೂ ಒಂದು ಚಟುವಟಿ
ಕೆಯೇ ಉಪೋದ್ಘಾತವಾಗಿರಬೇಕೆಂದು ಹಟಹಿಡಿಯದೆ
ಹಿಂದೆ ಮಾಡಿದ ಒಂದು ಕೆಲಸಕ್ಕೆ ಈ ಕಲಿಯುವ ಮಾತಿ

ಅಗತ್ಯವನ್ನು ತಿಳಿದುಕೊಂಡರೆ ಸಾಕು; ಅಥವಾ ಹಾಗೆಯೇ ಮುಂದೆ ನಾವು ಮಾಡಲಿರುವ ಇಂಥದೊಂದು ಕಾರ್ಯಕ್ಕೆ ಕೆಲವು ಗಣಿತದ ಪಾರಿಭಾಷೆಯ ಅರ್ಥವನ್ನು ಮುಂಚಿತವಾಗಿಯೇ ನಾವು ಗಣಿತದ ಪಾಠದಂತೆಯೇ ಸಾಮಾನ್ಯವಾಗಿ ಕಲಿತು ಪೂರ್ವಸಿದ್ಧತೆ ಮಾಡಿಕೊಳ್ಳೋಣ, ಹೀಗೆ ಈಗ ಈ ಸಮನ್ವಯ ಪದ್ಧತಿಯ ವಿವೇಕಪೂರ್ಣವಾದ ಆಚರಣೆಯು ಜೀವನ ಶಿಕ್ಷಣ ಸಾಲೆಗಳಲ್ಲಿ ಕ್ರಮವಾಗಿ ಬಳಕೆಯಲ್ಲಿ ಬರುತ್ತಲಿವೆ. ಅದರ ಮೇಲ್ವಿಚಾರಣೆಗೆ ತರಬೇತಿ ಸಂಸ್ಥೆಯ ಅಧ್ಯಾಪಕರೂ, ಪರೀಕ್ಷಕರೂ, ಮೇಲ್ವಿಚಾರಕರೂ ತಕ್ಕ ಅವಕಾಶವನ್ನು ಕೊಟ್ಟು ಶ್ರಮಹಹಿಸಬೇಕು. ಹೀಗೆ ಸಮವಾಯ ಪದ್ಧತಿಯು ಸುಪರಿಚಿತವಾದ ಸಾಮಾನ್ಯ ಶಿಕ್ಷಕನಿಗೂ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಒಂದು ಕಲಿಸುವ ಪ್ರಥೆಯು ರೂಢವಾದರೆ ಬೌದ್ಧಿಕ ವಿಷಯಗಳ ಜ್ಞಾನವು ಮೇಲ್ಮಟ್ಟದ್ದಾಗಬಲ್ಲದು: ಆದ್ದರಿಂದ ಬೌದ್ಧಿಕ ವಿಷಯಗಳು ಚನ್ನಾಗಿ ಬರದಿರುವದಕ್ಕೆ ಜೀವನ ಶಿಕ್ಷಣ ತಂತ್ರವು ಕಾರಣವಾಗಿಲ್ಲ. ಅದರ ಈ ಸಮನ್ವಯ ಪದ್ಧತಿಯ ಯಥಾಯೋಗ್ಯ ತಿಳುವಳಿಕೆಯಾಗಲಿಕ್ಕೆ ಇಷ್ಟೊಂದು ದೀರ್ಘಕಾಲ ಹಿಡಿಯಿತು ಎಂಬ ಮಾತನ್ನು ಮಾತ್ರ ಎಲ್ಲ ಶಿಕ್ಷಕರೂ ಈಗ ಒಪ್ಪಿಕೊಳ್ಳಬಹುದು. ಈ ದಿಶೆಯಲ್ಲಿ ಮಾರ್ಗದರ್ಶಕವಾದ ಹೊತ್ತಿಗೆಗಳು ತಯಾರಾಗಿ ಅವು ಶಿಕ್ಷಕರಿಗೆ ಒದಗಿಸಲ್ಪಟ್ಟಿವೆ ಎಂದು ಕೇಳಿದ್ದೇನೆ. ಅದನ್ನು ನನಗೂ ಚೆನ್ನಾಗಿ ಅಭ್ಯಾಸ ಮಾಡಬೇಕೆಂಬ ಅಪೇಕ್ಷೆ ಇದೆ. ಇರಲಿ.

ಇನ್ನು ಬೇರೊಂದು ದೊಡ್ಡ ಟೀಕೆಯು ಈ ಜೀವನ ಶಿಕ್ಷಣದ ವಿಷಯದಲ್ಲಿ ಮೇಲಿಂದ ಮೇಲೆ ಅಧಿಕಾರಿಗಳಿಂದಲೂ ಮಾಡಲ್ಪಡುತ್ತದೆ. ಅದೇನೆಂದರೆ ಈ ಹೊಸ ಶಾಲೆಗಳ ಖರ್ಚನ್ನು ಪೂರೈಸುವದು. ಅದಕ್ಕೆ ಬೇಕಾಗುವ ಕಟ್ಟಡದ ಪೂರೈಕೆ, ತೋಟಪಟ್ಟಿಗಳಿಗೆ ಬೇಕಾಗುವ ಸ್ಥಳ ಒದಗಿಸುವದು. ಉಪಕರಣಗಳ ಪೂರೈಕೆ, ಸಾಧನಗಳ ಸವಕಳಿಯನ್ನು ಪೂರ್ತಿಮಾಡುವದು. ಇತ್ಯಾದಿ ಬ್ರಹ್ಮಾಂಡ ಖರ್ಚು ಹೊರಬೇಕಾಗುವದು. ಇದು, ಎಂದರೆ ಉಚಿತ ಸಾರ್ವತ್ರಿಕ ಕಡ್ಡಾಯದ ಶಿಕ್ಷಣವನ್ನು ಕಾಯಿದೆಯಿಂದ ಜಾರಿಯಲ್ಲಿ ತರುವದಾದರೆ ರಾಜ್ಯ ಸರಕಾರಗಳೂ; ಕೇಂದ್ರ ಸರಕಾರವೂ ಮಿತಿಮೀರಿದ ಆರ್ಥಿಕ ಭಾರವನ್ನು ಹೊರಬೇಕಾಗುವದು ಎಂದು. ಇದು ನಿಜ. ಆದರೆ ನಮ್ಮ ದೇಶದ ಆರ್ಥಿಕ ಸ್ಥಿತಿಯು ಸುಧಾರಿಸುವವರೆಗೆ ಈ ಕಡ್ಡಾಯದ ಶಿಕ್ಷಣವು ಅನುಷ್ಠಾನಕ್ಕೆ ಬರುವದು ಎಂಥ ಮಾತೋ ಏನೋ. ಆದರೆ ಅನ್ನ, ವಸ್ತ್ರ, ವಸತಿಗಳಿಗೆ ಎಷ್ಟು ಪ್ರಥಮ ಪ್ರಾಶಸ್ತ್ಯ ಕೊಡಬೇಕೋ, ಅಷ್ಟೇ ಕಿಂಬಹುನಾ ಅದಕ್ಕಿಂತಲೂ ಹೆಚ್ಚಾಗಿ ವಿದ್ಯೆಗೆ ವಿದ್ಯಾಪ್ರಸಾರಕ್ಕೆ ಪ್ರಾಶಸ್ತ್ಯ ಕೊಡಬೇಕು.

ಎಲ್ಲಿಯವರೆಗೆ ಕಡ್ಡಾಯದ ಉಚಿತ ಶಿಕ್ಷಣವನ್ನು ಸರಕಾರವು ಕೊಡಬೇಕು ಎಂಬ ಪ್ರಶ್ನೆಯೂ ಒಮ್ಮೆಲ್ಲೊಮ್ಮೆ ಚರ್ಚೆಗೆ ಬಂದೇಬರುವದು. ಮುಲ್ಕೀ ಪರೀಕ್ಷೆಯವರೆಗೆ ಎಲ್ಲರಿಗೂ ಪುಕ್ಕಟೆಯಾದ ಶಿಕ್ಷಣಬೇಕು ಎಂದು ಸಾಮಾನ್ಯವಾಗಿ ಹೇಳಬಹುದು; ಕೆಲವರು ಅದೇಕೆ ಮ್ಯಾಟ್ರಿಕ್ಯುಲೇಶನ್ ಅಥವಾ ಎಸ್. ಎಸ್. ಸಿ. ಮಟ್ಟದ ಶಿಕ್ಷಣದ ವರೆಗೂ ಉಚಿತವಾಗಿ ಸಾರ್ವತ್ರಿಕವಾಗಿ ಶಿಕ್ಷಣ ಇರಲೇಬೇಕು ಎಂದು ಆಹ್ವಾನಿಸುವರು. ಮೂಲ ಶಿಕ್ಷಣದ ಅಭ್ಯಾಸ ಕ್ರಮದ ಆದ್ಯಪ್ರವರ್ತಕರು ಬುನಿಯಾದೀ ಶಿಕ್ಷಾ ಅಥವಾ ಮೂಲ ಶಿಕ್ಷಣಕ್ಕೆ "ಮ್ಯಾಟ್ರಿಕ್ಯುಲೇಶನ್ ಮಾಇನಸ್ ಇಂಗ್ಲಿಷ" ಎಂದು ಹೆಸರಿಡಬಹುದಾಗಿದೆ ಎಂದು ಹೇಳಿದರು. ಇದು ನಿಜವಾದರೆ, ಜೀವನ ಶಿಕ್ಷಣದಲ್ಲಿ ಕೊನೆಯ ಪ್ರಮಾಣಪತ್ರ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಯು ನೇರವಾಗಿ ವಿಶ್ವವಿದ್ಯಾಲಯ ಶಿಕ್ಷಣವನ್ನು ತಕ್ಕೊಳ್ಳಬಹುದು. ಅಥವಾ ಈಗಿನ ಹೊಸ ಯೋಜನೆಯ ಮೇರೆಗೆ ಪೂರ್ವ ವಿಶ್ವವಿದ್ಯಾಲಯ ವರ್ಗದ ತರಬೇತಿಗೆ ಅರ್ಹನಾಗಬಹುದು. ಆಗ ಅಪ್ಪರ್ ಸೆಕಂಡರೀ ಅಥವಾ ನಮ್ಮ ಹೈಸ್ಕೂಲುಗಳ ಅಗತ್ಯವೇನಿದೆ ? ಎಂಬ ಪ್ರಶ್ನೆಯು ಹುಟ್ಟುವದಿಲ್ಲವೇ ? ಆದರೆ ಮೇಲಿನ ವರ್ಣನೆಯು ಮ್ಯಾಟ್ರಿಕ್ಯುಲೇಶನ್ ಮಾಇನಸ್ ಇಂಗ್ಲಿಷ ಎಂಬುದು ಒಂದಿಷ್ಟು ಅತಿರಂಜಿತವಾಗಿ ಹೇಳಿದ ಮಾತು ಎಂದು ನಾನು ಭಾವಿಸುತ್ತೇನೆ. ನಾನು ಕಲಿಸುವಾಗಿನ ಮೂಲ ಶಿಕ್ಷಣದ ಅಭ್ಯಾಸಕ್ರಮದಲ್ಲಿಯಂತೂ ಬೀಜಗಣಿತದ ಅಭ್ಯಾಸಕ್ಕೆ ಸಾಕಷ್ಟು ಅವಕಾಶವಿರಲಿಲ್ಲ; ಸಂಸ್ಕೃತದ ಅಭ್ಯಾಸಕ್ಕೆ ಅವಕಾಶವಿಲ್ಲ. ಇಂಗ್ಲಿಷಂತೂ ಬೇಡವೇ ಬೇಡ ಎಂದೂ ಆಗ ಮೂಲ ಶಿಕ್ಷಣದ ವ್ಯಾಪ್ತಿಯಲ್ಲಿ ಅದನ್ನು ಸೇರಿಸಲಿಲ್ಲ. ಆದರೆ ಈಗ ವಿಶ್ವವಿದ್ಯಾಲಯ ಶಿಕ್ಷಣವನ್ನು ಪಡೆಯಬೇಕೆಂಬ ಮಹತ್ವಾಕಾಂಕ್ಷೆಯುಳ್ಳವರಿಗೆ ಬೀಜಗಣಿತ ಮೊದಲಾದ ಗಣಿತದ, ಹಾಗು ವಿಜ್ಞಾನದ ಉಚ್ಚಮಟ್ಟದ ಜ್ಞಾನ ಹಾಗು ನಮ್ಮ ದೇಶದ ಅನಾದಿ ಪರಂಪರೆಯಿಂದ ಸಂಪತ್ತಾಗಿ ದೊರಕಿದ ಸಂಸ್ಕೃತಿಯ ಅರ್ಥವನ್ನು ಮಾಡಿಕೊಳ್ಳಲಿಕ್ಕೆ ಸಂಸ್ಕೃತ ಭಾಷೆಯ ಅಭ್ಯಾಸ ಹಾಗು ವಿಜ್ಞಾನ

ದಲ್ಲಿ ದಿನದಿನಕ್ಕೆ ಆಗುತ್ತಿರುವ ಪ್ರಗತಿಯನ್ನು ತಿಳಿದುಕೊಳ್ಳಲಿಕ್ಕೆ ಇಂಗ್ಲಿಷು ಭಾಷೆಯ ಜ್ಞಾನ ಇವು ಅತ್ಯಾವಶ್ಯಕಗಳೆಂದು ಅನಿಸುತ್ತದೆ.

ವಿದ್ಯಾರ್ಥಿಗಳ ಫೀ ವಿಷಯದಲ್ಲಿಯೂ ಅಭ್ಯಾಸದ ಮಟ್ಟದಲ್ಲಿಯೂ ಇನ್ನೊಂದು ತೊಂದರೆಯುಂಟಾಗಿದೆ. ವಿದ್ಯಾರ್ಥಿಯು ಪ್ರಾ. ಶಾಲೆಯಲ್ಲಿ ಕಲಿತರೆ ಫೀ ಕಡಿಮೆ ಆದರೆ ಹೈಸ್ಕೂಲಲ್ಲಿ ೫ನೆಯ ಆರನೆಯ ೭ನೆಯ ಇಯತ್ತೆಗಳಲ್ಲಿ ಕಲಿತರೆ ಫೀ ಹೆಚ್ಚು ಕೊಡಬೇಕಾಗುವದು. ಮತ್ತು ಅಭ್ಯಾಸ ಪತ್ರಿಕೆಯಲ್ಲಿ ಹೇಳಲಾದ ವಿಷಯಗಳು ಪ್ರಾ. ಶಾಲೆ ಮಾಧ್ಯಮಿಕ ಶಾಲೆಯಲ್ಲಿ ನೋಡಲಿಕ್ಕೇನೋ ಒಂದೇ ಇದ್ದರೂ ಮಾಧ್ಯಮಿಕ ಶಾಲೆಗಳಲ್ಲಿನ ಶಿಕ್ಷಣವು ಖಂಡಿತವಾಗಿಯೂ ಹೆಚ್ಚು ಚೆನ್ನಾದುದು ಎಂದು ಎಲ್ಲರೂ ಹೇಳುತ್ತಾರೆ. ಈ ಅನುಕೂಲಗಳ ವಿಷಮತೆಯನ್ನು ಸರಕಾರವು ಹಾಗೂ ಸ್ಕೂಲ್‌ಬೋರ್ಡುಗಳು ಪರಿಹರಿಸಬೇಕು.

ಎಲ್ಲಕ್ಕೂ ಕ್ಲೀಷ್ಟಪ್ರಶ್ನೆ ಇನ್ನೊಂದು ಇದೆ. ಜೀವನ ಶಿಕ್ಷಣ ಸಾಲೆಗಳಲ್ಲಿ ಧಾರ್ಮಿಕ ಶಿಕ್ಷಣವಿರಬೇಕೋ ಬೇಡವೋ ಎಂಬುದು ಇದು ಬಹಳ ಜಟಿಲವಾದ ಪ್ರಶ್ನೆ. ಧರ್ಮ ಎಂದರೇನು, ಧಾರ್ಮಿಕ ಶಿಕ್ಷಣ ಯಾವದು, ಧರ್ಮಕ್ಕೂ ತತ್ವಜ್ಞಾನಕ್ಕೂ ಯಾವ ಸಂಬಂಧವಿದೆ? ಸಂಬಂಧವಿದೆಯೋ ಇಲ್ಲವೋ? ನೀತಿ ಶಿಕ್ಷಣವು ಧರ್ಮ ಶಿಕ್ಷಣವಾಗುವದೋ ಇಲ್ಲವೋ? ಸಾಲೆಯಲ್ಲಿ ಗುಣಶೀಲ ಸಂಪನ್ನರಾದ ಸದ್ಗುರುಗಳ ನೇತೃತ್ವದಲ್ಲಿ ಜೀವಿಸುವ ಮಕ್ಕಳಿಗೆ ಜೀವನ ಮಾರ್ಗದರ್ಶನವಾದರೆ ಧಾರ್ಮಿಕ ಶಿಕ್ಷಣ ಸಿಕ್ಕಂತಾಗಲಿಲ್ಲವೇನು? ಇತ್ಯಾದಿ ಬಹು ಸಂಕೀರ್ಣವಾದ ವಿಷಯಗಳ ಸಮೀಕ್ಷಣಕ್ಕೆ ಇದು ಯೋಗ್ಯ ಸಮಯವಲ್ಲ. ಎಂದು ಇಷ್ಟಕ್ಕೆ ನನ್ನ ಎರಡು ಮಾತುಗಳನ್ನು ಮುಗಿಸಿ, ನನಗೆ ಸಮಯಾವಕಾಶವನ್ನು ಕೊಟ್ಟ ಉತ್ಸವ ಸಮಿತಿಯವರಿಗೆ ನನ್ನ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸಿ ನಿಮ್ಮ ಅಪ್ಪಣೆಯನ್ನು ಪಡೆಯುವೆ.

ಜೀವನ ಶಿಕ್ಷಣದಲ್ಲಿ ಮಾರ್ಪಾಡು ಅಗತ್ಯವೇ?

ಭಾಷಣಕಾರರು: **ಪ್ರಿನ್ಸಿಪಾಲ ಕೆ. ಬಿ. ತೀರಗಾಂವಕರ,** ಜಿ.ಬಿ.ಟಿ.ಸಿ., ಧಾರವಾಡ

ಜೀವನ ಶಿಕ್ಷಣದ ವಿಷಯದಲ್ಲಿ ಅನೇಕ ಅಭಿಪ್ರಾಯಗಳು ಕೇಳಿಬರುತ್ತಿವೆ. ಅವುಗಳಲ್ಲಿ ಕೆಲವನ್ನು ಹೀಗೆ ಹೇಳಬಹುದು.

ಅ) ಕೆಲವರು ಅದು ಒಳ್ಳೆಯದಿದೆ, ಇರಲಿ ಎನ್ನುವರು.

ಬ) ಹಲವರು ಅದು ಒಳ್ಳೆಯದೇನೋ ಇದೆ; ಆದರೆ ಅದರಲ್ಲಿ ಸ್ವಲ್ಪ ಬದಲಾವಣೆಯಾಗಬೇಕು ಎನ್ನುವರು.

ಕ) ಇನ್ನೂ ಕೆಲವರು ಸ್ಪುಟ್ನಿಕ್‌ದಂತಹ ಸಂಶೋಧನೆಯ ಯುಗದಲ್ಲಿ ಗ್ರಾಮೋದ್ಯೋಗಗಳಂತ ಕಾರ್ಯಗಳನ್ನು ಮಾಡುತ್ತೀರಿ, ಇದೇನು? ಎಂದು ಆಶ್ಚರ್ಯ ತಳೆಯುವರು.

ಡ) ಇನ್ನೂ ಸ್ವಲ್ಪ ಜನ ಅದರ ಪ್ರಗತಿಯ ಬಗೆಗೆ ಸಂಶಯಗ್ರಸ್ತರಾಗಿ, ಸ್ವಾತಂತ್ರ್ಯಪೂರ್ವದಲ್ಲಿ ಈ ತೆರನಾದ ಶಿಕ್ಷಣ ಕ್ರಮ ಸಾಧುವೇನೋ ಎನಿಸಿದ್ದಿತು; ಆದರೆ ಸ್ವಾತಂತ್ರ್ಯೋತ್ತರ ದೇಶವು ರಭಸದಿಂದ ಪ್ರಗತಿ ಹೊಂದುತ್ತಿದೆ. ಇಂತಹ ತೀವ್ರಗಾಮಿಯಾದ ದೇಶಕ್ಕೆ ಈ ತರಹದ ಶಿಕ್ಷಣದ ಅಗತ್ಯವೇನಿದೆ? ಎಂದು ಕೇಳುವವರೂ ಇದ್ದಾರೆ.

ಈ ಸಂದರ್ಭದಲ್ಲಿ ಮೂರು ನಾಲ್ಕು ದೃಷ್ಟಿಯಿಂದ ಮಾರ್ಪಾಟಿನ ವಿಷಯವನ್ನು ಚರ್ಚಿಸಲೆಳಸುತ್ತೇನೆ. ಮೊದಲನೆಯದಾಗಿ ಇದರ ಉದ್ದೇಶದ ದೃಷ್ಟಿಯಿಂದ ಮಕ್ಕಳು ದುಡಿಮೆಯಲ್ಲಿ ಆಸಕ್ತಿಯುಳ್ಳವರೂ, ಪ್ರಾಮಾಣಿಕರೂ, ಸಹಕಾರ ಬುದ್ಧಿಯವರೂ ಆಗಿ, ನಿರ್ಮಿಸಬೇಕೆಂದಿರುವ ನವಸಮಾಜದಲ್ಲಿ ಯೋಗ್ಯ ನಾಗರಿಕರಾಗಿ ಬಾಳಲರ್ಹರಾಗುವಂತೆ ತರಬೇತುಗೊಳಿಸುವದು ಈ ಶಿಕ್ಷಣದ ಮುಖ್ಯ ಉದ್ದೇಶವಾಗಿದೆ. ಈ ಗುಣಗಳು ಮಕ್ಕಳಲ್ಲಿ ಉದಯಿಸುವದು ಬೇಡವೆ? ಈ ಶಿಕ್ಷಣವು ಅಂಥ ಗುಣಗಳನ್ನು ಬೇರೂರಿಸುವದೆಂಬ ಅಂಶವು ನಿರ್ವಿವಾದವಾಗಿರುವಾಗ ಅದರ ಮೂಲಭೂತ ಉದ್ದೇಶದಲ್ಲಿ ಬದಲಾವಣೆಯ ಅಗತ್ಯವೇನಿದೆ? ಉದ್ದೇಶದಲ್ಲಿ ಮಾರ್ಪಾಡಾಗಬೇಕೆಂದು ಹೇಳಿದರೆ ಈ ಗುಣಗಳ ಆವಿರ್ಭವನವು ಕಾರಣವಿಲ್ಲೆಂದು ಹೇಳಿದಂತಾಗುವದಿಲ್ಲವೆ?

ಇನ್ನು ಎರಡನೆಯದಾಗಿ ಇದರ ಸ್ವಾವಲಂಬೀ ತತ್ವದ ದೃಷ್ಟಿ. ಇದರ ಮುಖ್ಯ ಉದ್ದೇಶ ಉತ್ಪಾದನೆ ಹೆಚ್ಚಬೇಕೆಂದಿದೆ. ಜೊತೆಗೆ ಪರಿಶ್ರಮ, ಸಹಿಷ್ಣುತೆ ಮೊದಲಾದವುಗಳು ಮಕ್ಕಳಿಗೆ ಲಭಿಸುವವು. ಸ್ನಾಯುಗಳಿಗೆ ಶಿಕ್ಷಣ ದೊರಕುವದು. ಗ್ರಾಮೋದ್ಯೋಗಗಳ ಅಭಿವೃದ್ಧಿಯಾಗುವದು.

ಗ್ರಾಮೋದ್ಯೋಗಗಳೇ ಬೇಡವೆಂದು ಹೇಳುವ ಜನರೂ ಇರಬಹುದು. ಆದರೆ ಇಂದಿನ ನಮ್ಮ ಮುಂದಾಳುಗಳ ದೃಷ್ಟಿಕೋನವನ್ನು, ವಿನೋಬಾಜಿಯವರಂಥ ಋಷಿ ಜನರನ್ನು ವಿಚಾರಿಸಿದರೆ ಗ್ರಾಮೋದ್ಯೋಗಗಳಿಗೆ ಅವರು ಕೊಡುತ್ತಿರುವ ಮಹತಿಯು ಕಂಡು ಬರುವದು. ಆದುದರಿಂದ ಸದ್ಯಕ್ಕೆ ಆ ದೃಷ್ಟಿಯಿಂದಲೂ, ಮಾರ್ಪಾಡಿನ ಅಗತ್ಯ ಅನಿಸದು.

ಇದರ ಪ್ರಗತಿಯ ದೃಷ್ಟಿಯನ್ನು ಕಣ್ಣಿಟ್ಟು ನೋಡಿದರೂ ಮಾರ್ಪಾಡಿನ ಅಗತ್ಯವಿಲ್ಲವೆನಿಸುವದು. ೨೦ ವರುಷಗಳ ಅಲ್ಪ ಕಾಲಾವಧಿಯಲ್ಲಿ ಶಿಕ್ಷಣದಂಥ ಬೃಹತ್ ಯೋಜನೆಯ ಪ್ರಗತಿಯನ್ನು ಅಳೆಯುವದು ಹವ್ಯಾಸದ ಮಾತಾದೀತು! ಅದಕ್ಕೆ ತಕ್ಕ ಸಮಯ ಒದಗಿಸಿ ಕೊಡಬೇಕು. ಈ ಇಪ್ಪತ್ತು ವರುಷಗಳ ಕಾಲಾವಧಿಯ ಪ್ರಗತಿಯನ್ನು ನಾವು ಅಳೆದರೂ ಇಂದು ನಿರಾಶೆ ಹೊಂದಬೇಕಿಲ್ಲ. ಅಂದ ಮೇಲೆ ಮಾರ್ಪಾಡಿನ ಬಗ್ಗೆ ಗಡಿಬಿಡಿ ಏಕೆ?

ಕೊನೆಯದಾಗಿ ಕಾರ್ಯಕರ್ತರು ಹೆಚ್ಚಿನ ಶ್ರದ್ಧೆ ಆತ್ಮ ವಿಶ್ವಾಸಗಳಿಂದ ದುಡಿದದ್ದಾದರೆ ಈ ಪ್ರಶ್ನೆಯೇ ಉದ್ಭವಿಸಲಾರದು. ಈ ಶಿಕ್ಷಣದಲ್ಲಿ ಕಾರ್ಯಕರ್ತರ, ಸಾಮಾಜಿಕರ ವಿಶ್ವಾಸಗಳು ಕುದುರಬೇಕು. ಜೀವ ತೆತ್ತರೂ ಜೀವನ ಶಿಕ್ಷಣ ಬಿಡಲಾರೆನೆಂಬ ದೃಢ ನಿರ್ಧಾರವು ಮೂಡಿಬರಬೇಕು. ಎಲ್ಲಾದರೂ ದೋಷಗಳು ಕಂಡು ಬಂದರೆ; ಅವುಗಳ ನಿವಾರಣೋಪಾಯಗಳನ್ನು ಕಂಡು ಹಿಡಿಯಲೆತ್ನಿಸಬೇಕೇ ವಿನಃ ಅದನ್ನೇ ಮುಂದು ಮಾಡಿ ಬದಲಾವಣೆ ಮಾಡಿಬಿಡಬಾರದು. ಹಾಗೆ ಮಾಡುವದು ಅವಸರದ ಕ್ರಮವೆನಿಸಿ, ಅನರ್ಥಕಾರಿಯಾದೀತು! ಈ ಜೀವನ ಶಿಕ್ಷಣ ವಿಚಾರ ಗೋಷ್ಠಿಯು ಆ ತರಹದ ಒಂದು ಬೆಳಕನ್ನು ಕಾರ್ಯಕರ್ತರ ದಾರಿಯಲ್ಲಿ ಚೆಲ್ಲಲಿ ಎಂದು ಹಾರೈಸುವೆ.

ಜೈ-ಹಿಂದ

(ಶ್ರೀ ರೋಹಿಡೆಕರರು ಮಾಡಿದ ಭಾಷಣವನ್ನು ಪುಟ ೩ರಲ್ಲಿ ಕೊಡಲಾಗಿದೆ.)

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಾಬ್ದಿ ಸಮಾರಂಭದ ಅಂಗವಾಗಿ ನಡೆದ ತೈಲ ಚಿತ್ರಗಳ ಅನಾವರಣ ಮಾಡಿದ ಮುಖ್ಯ ಅತಿಥಿ

ಶ್ರೀ ಆಲೂರ ವೆಂಕಟರಾಯರ ಭಾಷಣ

ಗುರುಗಳಲ್ಲಿ ಆಧ್ಯಾತ್ಮಿಕ ದೃಷ್ಟಿ ಬೆಳೆದು ಬರಲಿ.

ಸಹೋದರ ಸಹೋದರಿಯರೇ,

ಇಂದಿಲ್ಲಿ ಸೇರಿದ ಈ ಶತಮಾನೋತ್ಸವದ ಅಂಗವಾಗಿ ಭಾವಚಿತ್ರಗಳನ್ನು ಅನಾವರಣಗೊಳಿಸಲು ನನ್ನನ್ನು ಕೇಳಿಕೊಂಡುದುದಕ್ಕಾಗಿ ನನಗೆ ತುಂಬಾ ಸಂತಸವಾಗಿದೆಯಲ್ಲದೆ;-ಅಭಿಮಾನವೂ ಎನಿಸಿದೆ. ಅದಕ್ಕಾಗಿ ಮೊದಲು ನಾನು ತಮಗೆ ಕೃತಜ್ಞತೆಗಳನ್ನರ್ಪಿಸುತ್ತೇನೆ. ನಾನಿಲ್ಲಿ ಅನಾವರಣಗೊಳಿಸಲಿರುವ ಈ ಚಿತ್ರಗಳಲ್ಲಿರುವ ವ್ಯಕ್ತಿಗಳು ಕನ್ನಡವನ್ನು, ಕನ್ನಡ ನಾಡನ್ನು ಉದ್ಧರಿಸಿದ ಪುಣ್ಯಪುರುಷರು. ಕನ್ನಡಿಗರಲ್ಲಿ ಕನ್ನಡತನದ ಅರಿವು ಉಂಟಾಗಲು, ಹುಟ್ಟಿದ ಭಾವನೆಯು ಬೆಳೆದು ಬರಲು ಈ ಮಹಾನುಭಾವರು ತಮ್ಮ ಜೀವನವನ್ನೇ ಧಾರೆಯೆರೆದಿದ್ದಾರೆ. ಅವರ ಕೃತಶಕ್ತಿಯ ಜೀವನವು ನಮ್ಮೆಲ್ಲರಿಗೆ ಸ್ಫೂರ್ತಿಯನ್ನಿತ್ತಿದೆಯಲ್ಲದೆ; ಮುಂದಿನ ಪೀಳಿಗೆಯವರಿಗೂ ಸ್ಫೂರ್ತಿದಾಯಕವಾದುದಾಗಿದೆ. ಶ್ರೀಮಾನ್ ಡೆಪ್ಯೂಟಿ ಚೆನ್ನಬಸಪ್ಪನವರು ಈ ಕಾಲೇಜದ ಪ್ರಥಮ ಪ್ರಿನ್ಸಿಪಾಲರಲ್ಲದೆ; ಕನ್ನಡದ ಅಭಿಮಾನ ಹಬ್ಬುವದಕ್ಕೆ ಅವರೇ ಮೂಲ ಪುರುಷರೆಂದು ಹೇಳಬಹುದು. ಅಂದು ಅವರು ಅದರ ಅಸ್ತಿವಾರವನ್ನು ಹಾಕಿರದಿದ್ದರೆ ಇಷ್ಟೊಂದು ಕಾರ್ಯ ಮಾಡುವದು ಮುಂದಿನವರಾದ ನಮ್ಮಂಥವರಿಗೆ ಸಾಧ್ಯವಾಗುತ್ತಿದ್ದಿತೋ, ಇಲ್ಲವೋ ಹೇಳಲು ಬಾರದು. ಶ್ರೀಯುತ ರೊದ್ದ ಶ್ರೀನಿವಾಸರಾಯರು ಕನ್ನಡ ನಾಡಿನ ಜನತೆಯ ಶಿಕ್ಷಣಕ್ಕಾಗಿ ಹೆಣಗಾಡಿದವರು. ಈ ಕಾಲೇಜದ ಪ್ರಿನ್ಸಿಪಾಲರಾಗಿ ಕೆಲಸ ಮಾಡಿದರಲ್ಲದೆ, ಕರ್ನಾಟಕ

ದಲ್ಲಿಯೇ ಉಚ್ಚ ಶಿಕ್ಷಣಕ್ಕಾಗಿ ಹೆಸರುವೆತ್ತ ಕರ್ನಾಟಕ ಕಾಲೇಜವು ಅವರ ಪ್ರಯತ್ನದ ಪ್ರತೀಕವು. ರಾಷ್ಟ್ರೋದ್ಧಾರದ ಯಾವ ಚಳವಳಿಯೇ ಇರಲಿ ಅದಕ್ಕೆ ಒಳಗಿಂದೊಳಗೆ ಪುಷ್ಟಿಕೊಡುವ ಹಳೆಯ ತರಹದ ಮುತ್ಸದ್ದಿಗಳಾಗಿದ್ದರು. ಈ ಮಹನೀಯರ ಜೊತೆಗೆ ಕಲೆಕ್ಟರರಾಗಿ ಅಧಿಕಾರ ನಡೆಯಿಸಿದ ಕೈ. ನಾಯಕರ ಭಾವಚಿತ್ರವೇಕೆ? ಎಂದು ತಾವು ಪ್ರಶ್ನಿಸಬಹುದು. ನಾಯಕರ ಭಾವಚಿತ್ರವು, ಮನುಷ್ಯನು ಸ್ವಪ್ರಯತ್ನಗಳಿಂದ ಕಷ್ಟಗಳ ಕಲ್ಲು ಬಂಡೆಗಳನ್ನೊಡೆಯುತ್ತ, ಸಂತತವಾದ ದೃಢ ನಿರ್ಧಾರದ ಮುನ್ನುಗ್ಗುವಿಕೆಯಿಂದ ಎಂಥ ಮಟ್ಟ ಮುಟ್ಟಬಹುದೆಂಬದನ್ನು ತೋರಿಸುವದರ ಪ್ರತೀಕವಾಗಿದೆ. ಉತ್ತರ ಕನ್ನಡ ಜಿಲ್ಲೆಯ ವನಹಳ್ಳಿ ಗ್ರಾಮದಲ್ಲಿ ಜನಿಸಿ ಇದೇ ಸಂಸ್ಥೆಯಲ್ಲಿ ತರಬೇತು ಹೊಂದಿ ಶಿಕ್ಷಕರಾಗಿ ಕೆಲಸ ಮಾಡಿ, ಸ್ವಪ್ರಯತ್ನದಿಂದ ವಿದ್ಯಾರ್ಜನೆ ಮಾಡಿ ಜಿಲ್ಹಾಧಿಕಾರಿಗಳಾದುದು ನಿಜಕ್ಕೂ ಹೆಮ್ಮೆಯ ವಿಷಯ. ವಿದ್ಯಾರ್ಥಿಗಳಿಗೆ ಅವರ ಜೀವನವು ಸ್ಫೂರ್ತಿದಾಯಕವಾಗಿದೆ. ಈ ಮೂವರು ಮಹನೀಯರು ಸಲ್ಲಿಸಿದ ಸೇವೆಯನ್ನು ನೆನೆದು ಈ ತೈಲಚಿತ್ರಗಳನ್ನು ಇಲ್ಲಿರಿಸುವ ನಿರ್ಧಾರ ಮಾಡಿದ್ದರೆ. ನಾಲ್ಕನೆಯದಾದ ಶ್ರೀಮಾನ್ ಪಾವಟೆಯವರ ತೈಲಚಿತ್ರವು ನಿಮ್ಮೆಲ್ಲರ ಪ್ರೀತಿಯ ಪ್ರತೀಕವಾಗಿದೆ. ಅವರು ತಮ್ಮ ದೀರ್ಘಾವಧಿ ಆಡಳಿತ ಸೇವೆಯಿಂದಲೂ ಮತ್ತು ಈಗ ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿ ಮಾಡುತ್ತಿರುವ ಕೆಲಸದಿಂದ ಮೊದಲಿನ ಮೂವರು ಕಟ್ಟಿದ ಮಂದಿರಕ್ಕೆ ಕಳಸವನ್ನಿಟ್ಟಿದ್ದಾರೆ.

ಭಾವನೆಗೆ ಪ್ರತೀಕವಾಗಿ ಪ್ರತಿಮೆ ಇರಬೇಕು. ಸಾನ್ನಿಧ್ಯವು ಸಾಧಕನಿಗೆ ಅಗತ್ಯವಾಗಿದೆ. ಅದನ್ನು ತಿಳಿದುಕೊಳ್ಳಲು ಜ್ಞಾನದೃಷ್ಟಿ ಇರಬೇಕು. ಹೀಗೆ ನಾವು ಮುಕ್ಕಣ್ಣರಾದಾಗಲೇ ಅವುಗಳ ಹಿನ್ನೆಲೆಯ ಸಮಗ್ರ ಭಾವವು ತಿಳಿವಿನದಾಗುವದು. ಆಧ್ಯಾತ್ಮ ಭಾವನೆ ಬೇಕೆಂಬ ನಿ. ಪ್ರ. ಬಂಥನಾಳ ಶಿವಯೋಗಿಗಳ ಮಾತು ನಿಜಕ್ಕೂ ಬೆಲೆಯುಳ್ಳದ್ದು. ಯಾವ ಶಿಕ್ಷಣಕ್ಕೂ ಈ ತೇಜ ಬೇಕೇ ಬೇಕು. ಅದು ಜೀವನ ಶಿಕ್ಷಣವೇ ಇರಲಿ, ಬೇರಾವ ಶಿಕ್ಷಣವೇ ಇರಲಿ, ಅದರಲ್ಲಿ ಅಧ್ಯಾತ್ಮ ತೇಜಸ್ಸು ಇರದಿದ್ದರೆ ಅದು ಅಮೋಘವಾಗಲಾರದು. ಶಿಕ್ಷಣವು ಹೊಟ್ಟೆಹೊರಕೊಳ್ಳಲು ದಾರಿ ಮಾಡಿಕೊಟ್ಟರೂ, ಕೇವಲ ಹೊಟ್ಟೆಹೊರಕೊಳ್ಳುವದೊಂದೇ ಅದರ ಗುರಿಯಾಗಲಾರದು; ಆಗಬಾರದು. काकेपि जीवति चिराय लिंच भुन्के। ಎಂದಿದೆ. ಬಲಿಯನ್ನು ಭಕ್ಷಿಸುತ್ತ ಬಹುಕಾಲ ಬಾಳುತ್ತದೆ ಕಾಗೆ. ಆದರೆ ಅದರ ಪ್ರಯೋಜನವೇನು? ಅನ್ನಬ್ರಹ್ಮನೇ ಬ್ರಹ್ಮನಲ್ಲ; ಬೇರೆ ಅನೇಕ ಬ್ರಹ್ಮರಿದ್ದಾರೆಂಬ ಅರಿವಿರಬೇಕು. (अन्नं ब्रह्मेति त्यजानाम्. ಮುಂತಾಗಿ) ಇಂದಿನ ಕಾಲದಲ್ಲಿ ಅನ್ನ ಬಟ್ಟೆಗಳ ಸಮಸ್ಯೆಯೇ ದೊಡ್ಡದಾಗಿದ್ದರೂ, ಕೇವಲ ಅದನ್ನೊಂದೇ ಬಿಡಿಸುವದು ಜೀವನದ– ಅದರಲ್ಲಿಯೂ ವಿಶೇಷತಃ ಟ್ರೇನಿಂಗ ಕಾಲೇಜುಗಳಲ್ಲಿ ಕಲಿತು ಗುರುಗಳಾಗುವವರ ಗುರಿಯಾಗಬಾರದು. ಕೈ–ಬುದ್ಧಿ-ಹೃದಯ (Hand, Head Heart) ಇವುಗಳ ವಿಕಾಸವು ಜೀವನ ಶಿಕ್ಷಣದ ಗುರಿಯೆಂದು ಹೇಳಲಾಗುತ್ತಿದೆ. ಆದರೆ ಇವುಗಳ ಕ್ರಮವು, ಹೃದಯ-ಬುದ್ಧಿ-ಕೈ (Heart, Head Hand) ಯಾದರೆ ಒಳಿತಾದೀತೆಂದು ನನ್ನ ಭಾವನೆ.

ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಾಬ್ದಿಯನ್ನು ಜರುಗಿಸಿದ ವರುಷವೇ ಈ ಸಂಸ್ಥೆಯ ಶತಮಾನೋತ್ಸವವನ್ನು ಆಚರಿಸಿದುದು ಒಂದು ಯೋಗಾಯೋಗವೆಂದೇ ಹೇಳಬಹುದು. ಈ ಸಂಸ್ಥೆ ಕನ್ನಡ ಚಳುವಳಿಯ ಅಸ್ತಿವಾರವನ್ನು ಹಾಕಿದೆ. ಕರ್ನಾಟಕದವರಲ್ಲಿ ಕನ್ನಡತನದ ಅರಿವನ್ನುಂಟು ಮಾಡಿದೆ. ಇಂದು ಸ್ವಾತಂತ್ರ್ಯ ಸಿಕ್ಕಿದೆ. ಕನ್ನಡಿಗರಿಗೆ ತಮ್ಮದೇ ಆದ ಕರ್ನಾಟಕ ರಾಜ್ಯವೂ ದೊರಕಿದೆ. ಆದರೆ ಇಷ್ಟರಿಂದಲೇ ತೃಪ್ತಿಪಟ್ಟು ಕನ್ನಡಿಗರು ನಿಷ್ಕ್ರಿಯರಾಗಬಾರದು. ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಅವರಿನ್ನೂ ಮಹತ್ವದ ಪಾತ್ರವಾಡಬೇಕಾಗಿದೆ. ಅಂಥ ರಾಷ್ಟ್ರ ನಿರ್ಮಾಪಕರನ್ನು ಸಿದ್ಧಗೊಳಿಸಲು ಹೊಣೆಹೊತ್ತ ಗುರುವರ್ಗದವರು ಈ ಸಂಸ್ಥೆಯಿಂದ ಮಾರ್ಗದರ್ಶನ ಪಡೆದು ಹೊರಬೀಳಲಿ. ಈ ಸಂಸ್ಥೆಯ ಇತಿಹಾಸವು ಇನ್ನಷ್ಟು ಉಜ್ವಲವಾಗಲಿ! ಇಂದು ಅನಾವರಣಗೊಳಿಸಲಾದ ಈ ವ್ಯಕ್ತಿಗಳ ಭಾವಚಿತ್ರಗಳು ಅಂಥ ಒಂದು ಸ್ಫೂರ್ತಿಯನ್ನೀಯಲಿ!

ಕಲ್ಯಾಣ ಕನ್ನಡ ಗುಡಿಯ ಕಾಣಿಕೆ

ವರ್ಣ ಸಂಧಿ! **ಸಚಿತ್ರ ಗ್ರಂಥ !!** **ಸುಂದರ ಮುದ್ರಣ !!!**

“ ಶಿಕ್ಷಣ-ಶಿಕ್ಷಕ-ದರ್ಶನ”

ಶಿಕ್ಷಕರಿಗೂ, ಶಿಕ್ಷಕ ವಿದ್ಯಾರ್ಥಿಗಳಿಗೂ, ಶಿಕ್ಷಣಾಭಿಮಾನಿಗಳಿಗೂ, ಉಪಯುಕ್ತವಾಗುವಂಥ, ತನು-ಮನ
ಸುವಂಥ, **ಶಿಕ್ಷಣ ತಜ್ಞರಿಂದ ಪರಿಶೀಲಿಸಲ್ಪಟ್ಟಂಥ, ಭಾರತದಲ್ಲಿಯ ಮಾನ್ಯ ಮಂತ್ರಿವರ್ಯರಿಂದ, ರಾಜ್ಯಪಾಲರಿಂದ,**
ಕ್ಷಣಾಧಿಕಾರಿಗಳಿಂದ, ಪ್ರಿನ್ಸಿಪಾಲರಿಂದ, ಸಾಹಿತಿಗಳಿಂದ ಪ್ರಶಂಸೆಪಡೆದ ಅಭಿಪ್ರಾಯಗಳುಳ್ಳಂಥ, ಕರ್ನಾಟಕ
ಶ್ವವಿದ್ಯಾಲಯದ ಉಪ ಕುಲಪತಿಗಳಾದ ರ್‍ಯಾಂಗ್ಲರ್ ಶ್ರೀ ಡಿ. ಸಿ. ಪಾವಟೆಯವರು ಮುನ್ನುಡಿ ಬರೆದಂಥ,
ಮೋಘ ಗ್ರಂಥ.

ಶ್ರೀ ನಿಂಬಾಳ ಶಿಕ್ಷಕ ದಂಪತಿಗಳಿಂದ ಸಂಗ್ರಹಿಸಲ್ಪಟ್ಟಿದೆ. ಅಖಿಲ ಕರ್ನಾಟಕದ ಗಣ್ಯ ಶಿಕ್ಷಕ-ಶಿಕ್ಷಕಿಯರ
ಣ್ಣ ಬಣ್ಣಗಳಲ್ಲಿ ೮೧ ಫೋಟೋ ಬ್ಲಾಕ್, ಲೇಖನ, ಪರಿಚಯಗಳುಳ್ಳಂಥ ೪೭೫ ಪುಟಗಳ ಅಮರ ಸಾಹಿತ್ಯ ಗ್ರಂಥ.
ನ್ನಡದಲ್ಲಿ ಒಂದು ಉತ್ತಮ ಮಾದರಿಯ ಶೈಕ್ಷಣಿಕ ಉದ್ಗ್ರಂಥ.

ದಿ. ೧೫ ಅಗಸ್ಟ ೫೭ ಸ್ವಾತಂತ್ರ್ಯ ದಿನದಂದು ಮಾನ್ಯ ಶ್ರೀ ಎ. ಎಚ್. ದಳವಾಯಿ, ಎ. ಓ. ಸಾಹೇಬರ ಅಧ್ಯಕ್ಷತೆ
ಲ್ಲಿ ಪ್ರೊ. ಬಿ. ಟಿ. ಸಾಸನೂರ ಅವರ ಅಮೃತಹಸ್ತದಿಂದ ಈ ಗ್ರಂಥ ಪ್ರಕಾಶನಗೊಂಡಿದೆ.

ವಿವರಗಳಿಗೆ ಇಂದೇ ಈಗಲೇ ಬರೆಯಿರಿ. ಪ್ರೋತ್ಸಾಹನೆ ಕೊಡಿರಿ.

ದಾ **ಪ್ರತಿ ೩ ರೂ.**] ವ್ಯಾಪಾರಸ್ಥರಿಗೆ ಧಾರಾಳವಾದ ಕಮೀಷನ್. [**ಸುಂದರ ಪ್ರತಿ ೪ ರೂ.**

ವಿಳಾಸ :- ಶ್ರೀ ನಿಂಬಾಳ ಕಲ್ಯಾಣಪ್ಪ, ಪೋಸ್ಟ:— ತಿಕೋಟಾ, ಜಿಲ್ಲಾ:— ವಿಜಾಪುರ.

ಸುಬೋಧ ಹಿಂದೀ ಕನ್ನಡ ವ್ಯಾಕರಣ

● ★ ●

ಇದನ್ನು ಬರೆದವರು ಹಿಂದೀ ಕ್ಷೇತ್ರದಲ್ಲಿ ಹೆಸರು ಪಡೆದ **ಶ್ರೀ ಗುರನಾಥ ಜೋಶಿ** ಅವರು. ತಮ್ಮ ಆಳವಾದ
ನುಭವದಿಂದ ಅಲ್ಲಲ್ಲಿ ಕನ್ನಡ ವ್ಯಾಕರಣಕ್ಕೆ ಹೋಲಿಸಿ ಸುಲಭ ಭಾಷೆಯಲ್ಲಿ ಸರ್ವರಿಗೂ ತಿಳಿಯುವಂತೆ ಬರೆದಿದ್ದಾರೆ
ದರಲ್ಲಿ ಕೇವಲ ವ್ಯಾಕರಣದ ನಿಯಮಗಳು ಇರದೆ ಹಿಂದೀಯಿಂದ ಕನ್ನಡಕ್ಕೂ ಕನ್ನಡದಿಂದ ಹಿಂದಿಗೂ
ಷಾಂತರ ಮಾಡುವದಕ್ಕೆ ವಾಕ್ಯಗಳೂ ಕೊಡಲ್ಪಟ್ಟಿವೆ. ಇದರಿಂದ ಕಲಿಯಬಯಸುವವರೆಲ್ಲರೂ ಸುಲಭವಾಗಿ
ಂದಿಯನ್ನೂ ಕಲಿಯಬಹುದಾಗಿದೆ. ಈ ಪುಸ್ತಕವನ್ನು ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ, **ಪ್ರಿನ್ಸಿಪಾಲ**
ಕೆ. **ಗೋಕಾಕ ಅವರು** ಸ್ವಾಗತಿಸಿದ್ದಾರೆ. ಇಂದೇ ಇದನ್ನು ತರಿಸಿಕೊಂಡು ಹಿಂದೀಯನ್ನು ಕಲಿಯಿರಿ
ದುನೂರಾ ಹನ್ನೆರಡು ಪುಟಗಳು! ಬೆಲೆ ಕೇವಲ ೧೪ ಆಣೆ. ವ್ಯಾಪಾರಸ್ಥರಿಗೆ ಯೋಗ್ಯ ಕಮಿಸನ್ನು !

ಕೆಳಗಿನ ಪತ್ತೆಗೆ ಬರೆಯಿರಿ.

ಕನ್ನಡ ಸಾಹಿತ್ಯ ಪ್ರಕಾಶನ, ಧಾರವಾಡ.

ಶ್ರೀ ಅರವಿಂದ ಪ್ರಭಾವಿತೆಯೂ ಶ್ರೀ ತಾಯಿಯವರ ಪ್ರಾಸಾದಿಕತೆಯೂ ಒಂದೆಡೆಗೆ ತೋರುವ ಪವಿತ್ರ ಸಾಹಿತ್ಯದಿಂದ

ವಾಚನಾಲಯದ ಬೆಲೆ ಹೆಚ್ಚಿಸಬೇಡವೇ ?

ಹಾಗಿದ್ದರೆ, ಕೆಳಗೆ ಕಾಣಿಸಿದ ಪುಸ್ತಕಗಳನ್ನು ತರಿಸಿಕೊಳ್ಳಿರಿ.

೧.	ನನ್ನನಲ್ಲ (ಅಂತರ್ಮುಖಗೊಳಿಸುವ ದಿ. ಮಧುರಚೆನ್ನರ ಸಮಗ್ರ ಕವನ ಸಂಗ್ರಹ	೧-೧೨-
೨.	ಆತ್ಮಸಂಶೋಧನ (ದಿ. ಮಧುರಚೆನ್ನರ ಜೀವನದ ಕಲಶಪ್ರಾಯದ ಪ್ರಾಂಜಲ ಸಾಹಿತ್ಯ)	೧- ೮-
೩.	ಪವಿತ್ರ ಜೀವನ (ಹೊಸಕಾಲದ ಋಷಿ ಟಾಲಸ್ಟಾಯರ ಕಥಾಸಂಕಲನ)	೧- ೨-
೪.	ಸುಂದರ ಕಥೆಗಳು (ಮಕ್ಕಳಿಗೂ ಮಕ್ಕಳಂಥವರಿಗೂ ಶ್ರೀ ತಾಯಿಯವರು ಹೇಳಿದುವು)	೧- ೪-
೫.	ಶ್ರೀ ಅರವಿಂದರು (ಅಂತರ್ ರಾಷ್ಟ್ರೀಯ ವಿಶ್ವವಿದ್ಯಾಲಯದಲ್ಲಿ ಪಠ್ಯಪುಸ್ತಕವಾಗಿದೆ)	೧- ೮-
೬.	ಶ್ರೀ ಅರವಿಂದರ ಪತ್ರಗಳು (ಪೂರ್ಣಜೀವನದ ಸಿರಿಮೊಳಕೆ)	೦- ೮-
೭.	ಸ್ವರ್ಗದೋಲೆಗಳು (ಕನ್ನಡಿಗರ ಕೈಗೆ ಬಂದ ಸಾಂಸ್ಕೃತಿಕ ಕನ್ನಡಿ)	೧- ೮-
೮.	ಮುಗಿಲ ಜೇನು (ಮಿಂಚಿನ ಶಲಾಕೆಯಂಥ ಕವನ ಸಂಕಲನ)	೧- ೮-
೯.	ಸಪ್ತಪದಿ (ವಿದ್ಯಾರ್ಥಿಗಳ ಮೆಚ್ಚಿಕೆಯ ಏಕಾಂಕಗಳು)	೧- ೪-
೧೦.	ಭಾರತದ ಭವ್ಯಸಿದ್ಧತೆ (ನೂತನ ದೃಷ್ಟಿದಾಯಕವಾದ ಇತಿಹಾಸ ನಿರೀಕ್ಷಣ)	೧- ೦-
೧೧.	ಬೆಟ್ಟದ ಹೊಳೆ (ಜೀವನ ಪ್ರಚೋದಕವಾದ ಕಾದಂಬರಿ)	೧- ೪-
೧೨.	ಗರತಿಯ ಬಾಳು (ಹೆಣ್ಣಿನ ಮಾಯೆಯಲ್ಲಿ ಕಪಿಲ ಸಿದ್ಧಮಲ್ಲಿಕಾರ್ಜುನ)	೧- ೪-
೧೩.	ಬಾಳಬಟ್ಟೆ (ಆಧುನಿಕ ಬಾಳಿನ ಬಂಡಾಟಕ್ಕೆ ಚಿಕಿತ್ಸೆ)	೧- ೮-
೧೪.	ಪೂಜಾ (ಅತೀಂದ್ರಿಯ ಜಾಗ್ರತಿಯ ಮಿಸುಕು)	೦-೧೨-
೧೫.	ಜೀವನ ದೃಷ್ಟಿ (ಭವ್ಯ ಬದುಕಿನ ಬೊಕ್ಕಸ)	೧- ೨-
೧೬.	ಕನ್ನಡ ಕುಲದೀಪ ಬಸವಣ್ಣ (ಹಿಡಿದರೆ ಹಿಡಿಕೆಯಲ್ಲಿ ಬಿಟ್ಟರೆ ಮನೆತುಂಬ)	೧- ೦-

ಕನ್ನಡದಲ್ಲಿ ಶ್ರೀ ಅರವಿಂವರ ಸಾಹಿತ್ಯ ಬೇಕಾದರೆ ಬರೆಯಿರಿ. ಮೇಲೆ ಕಾಣಿಸಿದ ಪುಸ್ತಕಗಳನ್ನೆಲ್ಲ ತರಿಸಿಕೊಂಡಲ್ಲಿ ಅಂಚೆವೆ
ನಾವೇ ವಹಿಸುವೆವು.

ಶ್ರೀ ಅರವಿಂದ ಗ್ರಂಥಾಲಯ ಪೋ:— **ಚಡಚಣ** ಜಿ. ವಿಜಾಪು

ಶ್ರೀ ಶಂಗು ಬಿರಾದಾರರ	ಮಾಲೆಯ	ಶ್ರೀ ಪಿ. ಎಸ್. ಗಣಪಯ್ಯನವರ
ನೌಕರಿಯ ಹುಚ್ಚು	**೨ನೇ, ೩ನೇ ಕುಸುಮಗಳು**	**ಚೌತಿ ಗಣಪ**
ಬಹುಮಾನಿತ ಏಕಾಂಕ ನಾಟಕ ಬೆಲೆ : ೨೫ ನ. ಪೈ.		ಮಕ್ಕಳ ಸಚಿತ್ರ ಕವಿತೆಗಳು, ಬೆಲೆ : ೨೫ ನ. ಪೈ

- ಕೇವಲ ೨-೮-೦ (ಅಂಚೆ ಸೇರಿ) ವಾರ್ಷಿಕ ಚಂದಾಹಣದಲ್ಲಿ ಮಾಲೆಯ ೫ನೆಯ ಕುಸುಮವನ್ನಾಗಿ **ಪಡೆಯಿರಿ.**
- ಪ್ರಾಥಮಿಕ ಶಿಕ್ಷಕರ ಕಥೆ, ಕಾದಂಬರಿ, ಕವನ, ನಾಟಕಾದಿ ನಾಲ್ಕೈದು ಕೃತಿಗಳು ೪೦೦ ಪುಟಗಳಲ್ಲಿ.
- ಎಪ್ರಿಲದಿಂದ ಎಪ್ರಿಲಕ್ಕೆ ಒಂದು ವರುಷ.
- ವರ್ಷದ ಮಧ್ಯದಲ್ಲಿ ಚಂದಾದಾರರಾದರೂ ಆ ವರ್ಷದ ಎಲ್ಲ ಪುಸ್ತಕಗಳು ದೊರೆಯುವವು.
- ಶ್ರೇಷ್ಠ ಸಾಹಿತಿಗಳ ಕೃತಿಗಳನ್ನು ಪ್ರಕಟಿಸಿ ಚಂದಾದಾರರಿಗೆ ½ ಬೆಲೆಯಲ್ಲಿ ಕೊಡಲಾಗುವದು. (ಅಂಚೆ ಬೇರೆ)
- ಶಿಕ್ಷಕರಿಗೆ ವಿಶೇಷ ಸವಲತ್ತುಗಳಿವೆ. ಕೂಡಲೇ ಚಂದಾದಾರರಾಗಿ ತಮ್ಮದೇ ಆದ ಶಿಕ್ಷಕರ ಸಂಸ್ಥೆಯು ಚಿರಸ್ಥಾಯಿಯಾ
ನಿಲ್ಲುವಂತೆ ನೆರವು ನೀಡಿರಿ. ಈ ಅತ್ಯಲ್ಪಹಣ ತಮ್ಮ ಶಿಕ್ಷಕ ಮಿತ್ರರ ಏಳ್ಗೆಗೆ ಮೀಸಲಾಗಿದೆ.

★ ಮುಂಬೈ ರಾಜ್ಯದ ಶಿಕ್ಷಣಾಧಿಕಾರಿಗಳಿಂದ ಶಾಲಾವಾಚನಾಲಯಗಳಿಗೆ ಮಂಜೂರಾದ ೩೦೦ **ಜನ** ಶ್ರೇಷ್ಠ ಸಾಹಿತಿ
ವಿವಿಧ ಕೃತಿ, ಪರಿಚಯಗಳನ್ನೊಳಗೊಂಡ ‘ ಆಣೆಕಲ್ಲು ’ ‘ ಪುಟಚೆಂಡು ’ ಕಥೆ, ಕವನಗಳ ಪುಸ್ತಕಗಳು ನಿಮ್ಮಲ್ಲಿವೆ
ಕೆಲವೇ ಪ್ರತಿ ಉಳಿದಿವೆ. ಈಗಲೇ ತರಿಸಿಕೊಳ್ಳಿರಿ. ಚಂದಾದಾರರಿಗೆ ಮಾತ್ರ ½ ಬೆಲೆ (ಅಂಚೆ ಬೇರೆ) ಬೆಲೆ ೧೨ ಆಣೆಯ

ವಿವರಗಳಿಗೆ: **ಭಾರತೀ ಸಾಹಿತ್ಯ ಭಂಡಾರ** ಅಂಚೆ: **ಯರನಾಳ** ಜಿಲ್ಲೆ: **ಬಿಜಾಪುರ**

ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಶತಾಬ್ದಿ ಸಮಾರಂಭ

ಸ್ಮಾರಕ ಸಂಪುಟದ ಪ್ರಕಟನೆ

ದಿನಾಂಕ: ೨೮-೧೨-೧೯೫೭ ವೇಳೆ: ಸಂಜೆ ೪ ರಿಂದ

ಅಧ್ಯಕ್ಷರು: ರ್‍ಯಾಂಗ್ಲರ ಡಿ.ಸಿ. ಪಾವಟೆ, ಎಮ್. ಎ. (ಕೆಂಬ್ರಿಜ) ಉಪಕುಲಪತಿಗಳು ಕರ್ನಾಟಕ ವಿಶ್ವವಿದ್ಯಾನಿಲಯ ಧಾರವಾಡ.

ಮುಖ್ಯ ಅತಿಥಿಗಳು: ಕೀರ್ತನ ಕೇಸರಿ, ಆಸ್ಥಾನ ವಿದ್ವಾನ, ಪಂಡಿತ ರತ್ನ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು.

ಸ್ವಾಗತ ಹಾಗೂ ಪರಿಚಯಾತ್ಮಕ ಭಾಷಣ.

ಭಾಷಣಕಾರರು: ಶ್ರೀ ಬ. ಮ. ಶಿಂತ್ರಿ, ಬಿ.ಎ., ಬಿ. ಟಿ.,

ಅಧ್ಯಕ್ಷ ಮಹಾಶಯರೇ, ಅಂಣ-ತಮ್ಮಂದಿರೇ, ಅಕ್ಕ-ತಂಗಿಯರೇ,

ಕೀರ್ತನ ಕೇಸರಿ, ಆಸ್ಥಾನ ವಿದ್ವಾನ, ಪಂಡಿತರತ್ನ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ಹುಲಕುಂಟೇಮಠ ತುಮಕೂರು ಅವರು ಈ ಹೊತ್ತಿನ ನಮ್ಮ ಸಂಜೆಯ ಕಾರ್ಯಕ್ರಮದಂತೆ ನಮ್ಮ ಸ್ಮಾರಕ ಸಂಪುಟದ ಪ್ರಕಟನೆಯನ್ನು ತಮ್ಮ ಅಮೃತ ಹಸ್ತದಿಂದ ಜರುಗಿಸಲಿರುವರಷ್ಟೇ. ನಮ್ಮ ಕಾರ್ಯಕಾರಿ ಸಮಿತಿಯವರು ಶಾಸ್ತ್ರಿಗಳವರ ಅಮೃತ ಹಸ್ತದಿಂದ ಸಂಪುಟದ ಪ್ರಕಟನೆಯನ್ನು ಮಾಡಿಸಬೇಕೆಂಬ ಸಂಕಲ್ಪವೊಂದನ್ನು ಮಾಡಿಟ್ಟುಕೊಂಡಿದ್ದರು. ಆ ಸಂಕಲ್ಪಕ್ಕನುಸರಿಸಿ ಅವರಿಗೆ ಆಮಂತ್ರಣವು ಕಳಿಸಲ್ಪಟ್ಟಿತು. ನಮ್ಮ ಆಮಂತ್ರಣಕ್ಕೆ ಓಗೊಟ್ಟು ತಮ್ಮ ಕಾರ್ಯಗಳನ್ನೆಲ್ಲ ಬದಿಗಿರಿಸಿ ಪರಿಶ್ರಮ ವಹಿಸಿ ಬೆಂಗಳೂರಿನಿಂದ ಧಾರವಾಡಕ್ಕೆ ಪ್ರವಾಸವನ್ನು ಕೈಕೊಂಡು ಇದೀಗ ಆಗಮಿಸಿದ್ದಾರೆ. ಅವರಿಗೆ ತಮ್ಮೆಲ್ಲರ ಪರವಾಗಿ ಮತ್ತು ನಮ್ಮ ಕಾರ್ಯವಾಹಕ ಸಮಿತಿಯವರ ಪರವಾಗಿ ಹೃತ್ಪೂರ್ವಕವಾದ ಸ್ವಾಗತವನ್ನು ಸಲ್ಲಿಸುತ್ತೇನೆ. ತಾವುಗಳು ಸಹ ನಮ್ಮ ಆಮಂತ್ರಣಕ್ಕೆ ಮನ್ನಣೆ ಕೊಟ್ಟು ತಂಡೋಪ ತಂಡವಾಗಿ ಆಗಮಿಸಿ ಸಮಾರಂಭಕ್ಕೆ ಹೆಚ್ಚಿನ ಮೆರಗನ್ನು ತಂದುಕೊಟ್ಟಿದ್ದಕ್ಕಾಗಿ ತಮ್ಮೆಲ್ಲರಿಗೂ ನಮ್ಮ ಸಮಿತಿಯವರ ಪರವಾಗಿ ತುಂಬಿದ ಹೃದಯದಿಂದ ಸ್ವಾಗತವನ್ನು ಕೋರುತ್ತೇನೆ.

ಕನ್ನಡ ನಾಡಿನಲ್ಲಿ ಶಾಸ್ತ್ರಿಗಳ ಪರಿಚಯವನ್ನು ಮಾಡಿಕೊಡುವದು ಅನವಶ್ಯಕ. ಆದರೂ ಔಪಚಾರಿಕವಾಗಿ ನಾಲ್ಕು ಮಾತುಗಳನ್ನು ಹೇಳಬಯಸುವೆ. ಅವರ ಬಗೆಗೆ ನಾನೊಂದು ಮಾತನ್ನು ತಮಗೆ ಅರುಹಿದರೆ, ತಮ್ಮಲ್ಲಿ ಅನೇಕರಿಗೆ ಅಚ್ಚರಿಯೆನಿಸಬಹುದು. ಅದಾವುದೆಂದರೆ, ಶಾಸ್ತ್ರಿಗಳವರು ತಮ್ಮ ಜೀವನವನ್ನು ಪ್ರಾರಂಭಿಸಿದುದು ಕನ್ನಡ ಸಾಲೆಯ ಪ್ರಾಥಮಿಕ ಶಿಕ್ಷಕರಾಗಿ. ಕನ್ನಡ ಸಾಲೆಯ ಚಿಕ್ಕ ಕಟ್ಟಡವು ಅವರ ಬುದ್ಧಿಮತ್ತೆಗೆ ಸಾಲದೆ ಹೋಯಿತೋ ಏನೋ ಕನ್ನಡ ನಾಡೆಂಬ ದೊಡ್ಡ ಸಾಲೆಯಲ್ಲಿ ನಾಡ ಶಿಕ್ಷಕರಾಗಲು ಅವರು ಮನಸು ಮಾಡಿದರು. ನಾಡ ಶಿಕ್ಷಕರೆಂದರೆ ಕೀರ್ತನಕಾರರು. ಕೀರ್ತನಕಾರರು ನಾಡಿನ ಜನತೆಯ ಧಾರ್ಮಿಕ, ನೈತಿಕ, ಸಾಮಾಜಿಕ ಹಾಗೂ ರಾಜಕೀಯ ಮಟ್ಟವನ್ನು ಎತ್ತರಿಸಲು ಹೊಣೆ ಹೊತ್ತ ಗುರೂಜಿಯವರು ಇಲ್ಲವೆ ಶಿಕ್ಷಕರು. ಅಂತಹ ಗುರುತರವಾದ ಹೊಣೆಯನ್ನು ಹೊರಲು ಅವರು ಧೈರ್ಯದಿಂದ ಮುಂದಕ್ಕೆ ಬಂದರು.

ನಮ್ಮ ಮುಂಬಯಿ ಕರ್ನಾಟಕದ ಕನ್ನಡಿಗರಿಗೆ ಅವರ ಪ್ರಥಮ ಪರಿಚಯವಾದುದು ಅವರು ಕೀರ್ತನಕಾರರಾದಾಗ. ಅವರು ಕೀರ್ತನಕಾರರಾದ ಮೇಲೆ ವರುಷಕ್ಕೊಂದು ಸಲ ನಮ್ಮ ಭಾಗದ ಸಂಚಾರವನ್ನು ಕೈಕೊಂಡು ಹೋದಲ್ಲೆಲ್ಲ ಪೌರಾಣಿಕ, ಐತಿಹಾಸಿಕ ಹಾಗೂ ಸಾಮಾಜಿಕ ಕೀರ್ತನಗಳನ್ನು ಮಾಡುತ್ತ ಲೋಕಾನುರಾಗವನ್ನು ಸೆಗ್ಗಳವಾಗಿ ಗಳಿಸಿಕೊಂಡರು. ಅವರ ಇಂಪಾದ ಹಾಡುಗಾರಿಕೆ, ವಿನೋದಪೂರ್ಣ ಮಾತುಗಾರಿಕೆ, ಕೇಳುವವರ ಮಟ್ಟಕ್ಕೆ ತಕ್ಕಂತೆ ಭಾಷಾ ಪ್ರೌಢಿಮೆ, ವಾಗ್ವೈಖರಿ, ಸಮಯೋಚಿತ ಅಭಿನಯ, ಸಂದರ್ಭೋಚಿತ ದೃಷ್ಟಾಂತ ಇವುಗಳನ್ನೆಲ್ಲ ಕಂಣಾರೆ ಕಂಡು ಮತ್ತು ಕೇಳಿ ಶ್ರೋತೃವೃಂದವು ಕೀರ್ತನದಲ್ಲಿ ತಲ್ಲೀನಗೊಳ್ಳುತ್ತಿತ್ತು. ವೀರರಸ, ಕರುಣರಸ, ಶೃಂಗಾರರಸ ಮುಂತಾದ ನವರಸಗಳನ್ನು ಹೃದಯಂಗಮವಾಗಿ ಚಿತ್ರಿಸುವಾಗ ಅವರಿಂದ ಹೊರಹೊಮ್ಮುತ್ತಿದ್ದ ಬಗೆ ಬಗೆಯ ಹಾವಭಾವಗಳನ್ನು ನೋಡಿ ನೋಡಿ ಜನಸಮುದಾಯವು ಮೆಚ್ಚಿ ತಲೆದೂಗುತ್ತಿತ್ತು; ಮಾತ್ರವಲ್ಲದೆ, ಹರ್ಷೋದ್ರೇಕದಿಂದ ಚಪ್ಪಾಳೆಯ ಮೇಲೆ

ಚಪ್ಪಾಳೆಯನ್ನು ಹಾಕುತ್ತಿತ್ತು. ಶ್ರೋತೃವೃಂದದ ಅವಧಾನವನ್ನು ತಮ್ಮತ್ತ ಸೆಳೆದುಕೊಳ್ಳಲು ಅವರು ಉಪಯೋಗಿಸುತ್ತಿದ್ದ ಯುಕ್ತಿ—ಪ್ರಯುಕ್ತಿಗಳೆಲ್ಲ ಮನಃಶಾಸ್ತ್ರದ ಉದಾತ್ತ ತತ್ವಗಳೆಲ್ಲ ಮೈಗೊಂಡು ನಿಂತಂತೆ.

ಅವರ ಉತ್ತಮೋತ್ತಮವಾದ ಕೀರ್ತನವೆಂದರೆ ಕರ್ನಾಟಕದ ಏಕೀಕರಣದ ಕೀರ್ತನ. ಕಾಲಿದಾಸನ ಪರಿಪಕ್ವವಾದ ಅನುಭವಾಮೃತದ ಕೊನೆಯ ಫಲ ಅಭಿಜ್ಞಾನ ಶಾಕುಂತಲವೆಂದು ಎಲ್ಲ ವಿಮರ್ಶಕಾರರ ಹಾಗು ಟೀಕಾಕಾರರ ಒಮ್ಮತದ ಅಭಿಪ್ರಾಯ. ಅದರಂತೆ, ಶಾಸ್ತ್ರಿಗಳವರ ಅನುಭವಾಮೃತದ ಕೊನೆಯಫಲ ಏಕೀಕರಣದ ಕೀರ್ತನವೆಂದು ನನ್ನ ಪ್ರಾಂಜಲ ಮತ. ಕಾರಣವೆಂದರೆ, ಕೀರ್ತನಕಾರರಾದಾಗಿನಿಂದ ಸುಮಾರು ಹತ್ತು ವರುಷಗಳ ತಮ್ಮ ಅನುಭವದ ಸಾರವನ್ನೆಲ್ಲ ಈ ಕೀರ್ತನದಲ್ಲಿ ಕೇಂದ್ರೀಕರಿಸಿದ್ದಾರೆ, ಎರಕ ಹೊಯ್ದಂತೆ ಮಾಡಿದ್ದಾರೆ. ಆ ಕೀರ್ತನವನ್ನು ನಮ್ಮ ನಾಡಿನ ತುಂಬೆಲ್ಲ ಮಾಡಿದರಲ್ಲದೆ ಗಡಿ ಪ್ರದೇಶಗಳಲ್ಲಿಯ ಮೂಲೆ ಮೂಲೆಗಳಿಗೆ ಹೋಗಿ ಆ ಕೀರ್ತನವನ್ನು ಮಾಡಿ ಅಲ್ಲಿಯ ಕನ್ನಡಿಗರನ್ನು ಬಡಿದೆಬ್ಬಿಸಿ. ಅವರಲ್ಲಿ ಮನೆಮಾಡಿಕೊಂಡಿದ್ದ ಪರಭಾಷೆಯ ಮೋಹವನ್ನು ಹೊಡೆದೋಡಿಸಿ, ತಾಯ್ನುಡಿಯಾದ ಕನ್ನಡ ಭಾಷೆಯ ಬಗೆಗೆ ಅವರಲ್ಲಿ ಅಭಿಮಾನವನ್ನು ಚಿಗುರಿಸಿ, ಏಕೀಕರಣಕ್ಕೋಸ್ಕರ ಅವರನ್ನು ಬದ್ಧಕಂಕಣರನ್ನಾಗಿ ಮಾಡಿದ ಯಶಸ್ಸು ನಮ್ಮ ಶಾಸ್ತ್ರಿಗಳವರಿಗೆ ಮೀಸಲಾಗಿದೆ. ಕನ್ನಡ ಜನತೆಯ ಮನವನ್ನು ಏಕೀಕರಣಕ್ಕೋಸುಗ ನಿಜವಾಗಿ ಹದಗೊಳಿಸಿದವರು ಶಾಸ್ತ್ರಿಗಳವರು.

ಇಷ್ಟೊಂದು ಯೋಗ್ಯತೆಯುಳ್ಳಂಥ ಶಾಸ್ತ್ರಿಗಳವರಿಗೆ "ಕೀರ್ತನಕೇಸರಿ" ಎಂಬ ಬಿರುದು ಬಂದುದು ಅಚ್ಚರಿಯ ಮಾತೇನಲ್ಲ. ಬಿ. ಎ., ಎಮ್.ಎ., ಎಮ್.ಇಡಿ., ಪಿಎಚ್. ಡಿ., ಮುಂತಾದ ಡಿಗ್ರಿಗಳನ್ನು ದೊರಕಿಸಬೇಕಾದರೆ, ಅವುಗಳ ಬೆನ್ನುಹತ್ತಿ, ಹಗಲು–ರಾತ್ರಿಯನ್ನದೆ ಅಭ್ಯಾಸ ಮಾಡಿ, ತಲೆಕೆಡಿಸಿಕೊಂಡು, ಕಷ್ಟಪಟ್ಟು, ಕಂಗಾಲಾಗಿ, ಪರೀಕ್ಷೆಗೆ ಕುಳಿತು, ಪಾಸಾಗಿ, ಅವುಗಳನ್ನು ಪಡೆಕೊಂಡು ಬರುವದುಂಟು. ಶಾಸ್ತ್ರಿಗಳವರು ಹಾಗೆ ಮಾಡುವವರಲ್ಲ, ಅವರು ಬಿರುದುಗಳ ಬೆನ್ನುಹತ್ತಿ ಹೋಗುವವರಲ್ಲ. ಬಿರುದುಗಳೇ ಅವರ ಬೆನ್ನುಹತ್ತಿ ಬಂದಿವೆ. ಕೀರ್ತನಕೇಸರಿ, ಆಸ್ಥಾನ ವಿದ್ವಾನ, ಪಂಡಿತರತ್ನ, ಈ ಬಿರುದುಗಳಲ್ಲದೆ ನಮ್ಮ ನಾಡಿನಲ್ಲಿಯ ಎಲ್ಲ ಜಾತಿಗಳ ಧರ್ಮಪೀಠದವರು ಅವರನ್ನು ತಮ್ಮಲ್ಲಿಗೆ ಪ್ರೇಮದಿಂದ ಬರಮಾಡಿಕೊಂಡು ಅವರಿಂದ ಕೀರ್ತನಗಳನ್ನು ಮಾಡಿಸಿ, ಕೇಳಿ, ಮೆಚ್ಚಿ, ತಲೆದೂಗಿ, ಬಿರುದುಗಳನ್ನೂ ಪ್ರೇಮದ ಸಂಭಾವನೆಗಳನ್ನೂ ದಯಪಾಲಿಸಿದ್ದಾರೆ. ಅವುಗಳಿಗಂತೂ ಲೆಕ್ಕವೇ ಇಲ್ಲ. ಒಂದೇ ಮಾತಿನಲ್ಲಿ ಹೇಳುವದಾದರೆ, ಯೋಗ್ಯತೆಯಿದ್ದಲ್ಲಿ ಬಿರುದುಗಳೂ ಸಂಭಾವನೆಗಳೂ ತಮ್ಮಷ್ಟಕ್ಕೆ ತಾವೇ ಧಾವಿಸಿ ಬರುವದುಂಟು.

ಪತ್ರಿಕಾವ್ಯವಸಾಯದಲ್ಲಿಯೂ ಅವರಿಗೆ ಅಭಿರುಚಿಯುಂಟು. ಸುಮಾರು ಇಪ್ಪತ್ತು ವರುಷಗಳಿಂದ "ಶರಣಸಾಹಿತ್ಯ"ವೆಂಬ ಪತ್ರಿಕೆಯೊಂದನ್ನು ಅವ್ಯಾಹತವಾಗಿ ನಡೆಯಿಸಿಕೊಂಡು ಬಂದಿದ್ದಾರೆ. ಅದರ ಕಾರ್ಯಾಲಯವು ಬೆಂಗಳೂರಿನಲ್ಲಿದೆ. ಆ ಪತ್ರಿಕೆಯ ಮುಖಾಂತರ ವೀರಶೈವ ಸಾಹಿತ್ಯಕ್ಕೂ ಕನ್ನಡ ಸಾಹಿತ್ಯಕ್ಕೂ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ, ಸಲ್ಲಿಸುತ್ತಲಿದ್ದಾರೆ, ಮುಂದಾದರೂ ಸಲ್ಲಿಸುವರು. ಅವರಿಂದ ಬರೆಯಲ್ಪಟ್ಟ ಹೊತ್ತಿಗೆಗಳು ಅವರು ನಾಮಾಂಕಿತ ಬರೆಹಗಾರರಿರುವರೆಂಬುದನ್ನು ಕೈಯೆತ್ತಿ ತೋರಿಸುತ್ತಿವೆ.

ಅವರ ಜೀವನ ಸಾಹಸಮಯವಾದ ಜೀವನ. "Man is the architect of his own fortune" ಎಂಬದೊಂದು ಆಂಗ್ಲ ನಾಂಣುಡಿಯುಂಟು. "ಮಾನವನು ತನ್ನ ಭವಿತವ್ಯವನ್ನು ಇಲ್ಲವೆ ಆಗು–ಹೋಗುಗಳನ್ನು ತಾನೇ ರೂಪಿಸಬಲ್ಲನು" ಎಂದು ಅದರ ಅರ್ಥವಾಗುತ್ತದೆ. ಅದರಂತೆ ಶಾಸ್ತ್ರಿಗಳವರು ತಮ್ಮ ಭವಿತವ್ಯವನ್ನು ತಾವೇ ರಚಿಸಿಕೊಂಡಿದ್ದಾರೆ. ತಮ್ಮ ಸ್ವಂತ ಶ್ರಮದಿಂದಲೇ ಸಮಾಜದಲ್ಲಿ ತಮಗೋಸುಗ ವಿಶಿಷ್ಟವಾದೊಂದು ಉನ್ನತ ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಸುಮಾರು ಒಂದು ವರ್ಷದ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದದ ಸಲುವಾಗಿ ಬೆಂಗಳೂರಿನಲ್ಲಿ ಚುನಾವಣೆಯು ಜರುಗಿತು. ಅದು ಬಹು ತುರುಸಿನದಾಯಿತೆಂದು ನಮ್ಮ ಕೇಳಿಯಲ್ಲಿದೆ. ಶೇಕ್ಸಪೀಯರ ಕವಿ ಒಂದು ಮುತ್ತಿನಂತಹ ಮಾತನ್ನು ಹೇಳಿದ್ದಾನೆ:– "Fortune favours the brave." "ವಿಜಯಲಕ್ಷ್ಮಿಯು ಸಾಹಸಿಗೆ ಮೆಚ್ಚುತ್ತಾಳೆ" ಎಂದು ಅದರ ಆಶಯವು. ಆ ಪ್ರಕಾರ ಶಾಸ್ತ್ರಿಗಳವರು ಆ ಚುನಾವಣೆಯಲ್ಲಿ ಪ್ರಚಂಡ ಬಹುಮತದಿಂದ ಆಯ್ಕೆಯನ್ನು ಹೊಂದಿದರು. ಚುನಾವಣೆಯಲ್ಲಿ ಆಯ್ಕೆಯನ್ನು ಹೊಂದುವದು ಜೇಷ್ಟೆಯ

ಮಾತಲ್ಲ. ಅದಕ್ಕೆ ಪಾಂಡಿತ್ಯವಷ್ಟೇ ಸಾಲದು. ಅದಕ್ಕೆ ಮುತ್ಸದ್ಧಿತನದ ಜೋಡಣೆಯೂ ಅವಶ್ಯವಾಗಿಬೇಕು. ಆ ಮುತ್ಸದ್ಧಿತನವು ಅವರಲ್ಲಿ ಸಾಕಷ್ಟಿದೆ.

ಈ ಪ್ರಕಾರ ಅವರ ಒಂದಲ್ಲ, ಎರಡಲ್ಲ, ಬಹುಮುಖ ವ್ಯಕ್ತಿತ್ವದ ಪರಿಚಯವನ್ನು ಹತ್ತು ನಿಮಿಷಗಳಲ್ಲಿ ಮಾಡಿಕೊಡುವದು ಬಲು ಕಷ್ಟ. ಒಬ್ಬ ಸಾದಾ ಕನ್ನಡ ಸಾಲೆಯ ಪ್ರಾಥಮಿಕ ಶಿಕ್ಷಕನ ವೃತ್ತಿಯಿಂದ ತಮ್ಮ ಜೀವನವನ್ನು ಪ್ರಾರಂಭಿಸಿದಂತಹ ಶಾಸ್ತ್ರಿಗಳವರು ಈಗ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನದಲ್ಲಿ ವಿರಾಜಮಾನರಾಗುತ್ತಲಿದ್ದಾರೆ. ಇದು ತಮ್ಮೆಲ್ಲರಿಗೆ ಎಂತಹ ಸ್ಫೂರ್ತಿದಾಯಕ ಆದರ್ಶ! ಕನ್ನಡ ಸಾಲೆಯ ಶಿಕ್ಷಕನೋರ್ವನು ಮನಸು ಮಾಡಿದರೆ, ಬೇಕಾದಂತಹ ಉನ್ನತ ಸ್ಥಾನಕ್ಕೆ ಏರಬಲ್ಲನೆಂಬ ಆದರ್ಶವನ್ನು ಶಾಸ್ತ್ರಿಗಳವರು ತಮ್ಮೆಲ್ಲರ ಕಣ್ಣೆದುರಿಗೆ ಇಟ್ಟಿದ್ದಾರೆ. ಆ ಆದರ್ಶವು ತಮ್ಮೆಲ್ಲರಿಗೆ ಸ್ಫೂರ್ತಿಯ ಸೆಲೆಯಾಗಲೆಂದು ಹಾರೈಸುವೆ. ಶಾಸ್ತ್ರಿಗಳವರನ್ನು ಸ್ಮಾರಕ ಗ್ರಂಥದ ಪ್ರಕಟನೆಗೋಸ್ಕರ ಆಮಂತ್ರಿಸಿದುದರ ಔಚಿತ್ಯವು ಇಷ್ಟರೊಳಗೆ ತಮಗೆಲ್ಲ ನಿಚ್ಚಳವಾಗಿ ಹೊಳೆದಿರಲು ಸಾಕು. ಆ ಸ್ಮಾರಕ ಗ್ರಂಥವನ್ನು ತಮ್ಮ ಅಮೃತ ಹಸ್ತದಿಂದ ಪ್ರಕಟಗೊಳಿಸಬೇಕೆಂದು ಶಾಸ್ತ್ರಿಗಳವರಿಗೆ ಬಿನ್ನವಿಸಿಕೊಳ್ಳುತ್ತೇನೆ. ಈಗ ಶಾಸ್ತ್ರಿಗಳವರು ತಮ್ಮ ಭಾಷಣವನ್ನು ಪ್ರಾರಂಭ ಮಾಡುವವರಿದ್ದಾರೆ. ಅದನ್ನು ತಾವುಗಳೆಲ್ಲ ಸಾವಧಾನದಿಂದ ಚಿತ್ತಗೊಟ್ಟು ಕೇಳಬೇಕೆಂದು ಬೇಡಿಕೊಳ್ಳುವೆ. ನಮ್ಮಂಥವರ ಭಾಷಣವು ರಾಯಿಸ ಪ್ಲೇಟನಂತಿದ್ದರೆ, ಶಾಸ್ತ್ರಿಗಳವರ ಭಾಷಣವು ವೃಷ್ಟಾನ್ನ ಭೋಜನದಂತೆ.

ಜಯ ಹಿಂದ

ಪತ್ರಗಳು

ಶ್ರೀಮಾನ್ ಪ್ರಿನ್ಸಿಪಾಲ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜ ಧಾರವಾಡ ಇವರಿಗೆ—

ವಂದನೆಗಳು—

ಇದರ ಜೊತೆಗೆ ಧಾರವಾಡ ಜಿಲ್ಲಾ ಪ್ರಾಥಮಿಕ ಶಿಕ್ಷಕ–ಶಿಕ್ಷಿಕೆಯರ ಸಂಘ, ಧಾರವಾಡ ಇವರು ತಾರೀಖು ೧೫–೧೨–೫೭ನೆಯ ದಿನಸ ತೀರ್ಮಾನಿಸಿದ ಗೊತ್ತುವಳಿಯ ನಕಲನ್ನು ಇಟ್ಟಿದೆ. ಸದರ ಶಿಕ್ಷಕ ಸಂಘದ ಇಚ್ಛೆಯ ಪ್ರಕಾರ ಶ್ರೀಮಾನ್ ದಾ. ಚಿಂ. ಪಾವಟೆ ಅವರ ತೈಲ ಚಿತ್ರವನ್ನು ಸ್ವೀಕರಿಸಿ ಶಿಕ್ಷಕ–ಶಿಕ್ಷಿಕೆಯರ ಇಚ್ಛೆಯನ್ನು ಪೂರ್ಣ ಮಾಡುವಿರೆಂದು ಆಶಿಸುವೆ.

ಶ್ರೀಮಾನ್ ಪಾವಟೆ ಅವರು ಶಿಕ್ಷಣ ಕ್ಷೇತ್ರದಲ್ಲಿ ಅದರಲ್ಲಿಯೂ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಅದ್ವಿತೀಯವಾದ ಶ್ರೇಯಸ್ಸನ್ನು ಪಡೆದಿರುವರು. ಅಂಥವರ ಸ್ಮರಣೆಗಾಗಿ ಇಂಥ ಸುಪ್ರಸಂಗದಲ್ಲಿ ಶಿಕ್ಷಕ–ಶಿಕ್ಷಿಕೆಯರು ಈ ಕಾರ್ಯ ಮಾಡುವದು ಯಥಾಯೋಗ್ಯವು.

ಆದುದರಿಂದ ತಾವು ಶಿಕ್ಷಕ-ಶಿಕ್ಷಿಕೆಯರ ಈ ಸದಿಚ್ಛೆಯನ್ನು ನೆರವೇರಿಸುವಿರೆಂದು ತುಂಬಾ ನಂಬಿರವೆನು.

ಧಾರವಾಡ ತಮ್ಮ ನಂಬುಗೆಯ
೨೫–೧೨–೫೭ ಅಂಕಿತ
ಅಧ್ಯಕ್ಷ
ಧಾ. ಜಿ. ಪ್ರಾ. ಶಿ. ಶಿ.ರ ಸಂಘ, ಹುಬ್ಬಳ್ಳಿ.

ಧಾರವಾಡ ಜಿಲ್ಲಾ ಪ್ರಾಥಮಿಕ ಶಿಕ್ಷಕ–ಶಿಕ್ಷಿಕೆಯರ ಸಂಘದ ಗೊತ್ತುವಳಿ ನಂಬರು:— ೨ ದಿ. ೧೫–೧೨–೫೭

ಕನ್ನಡ ನಾಡಿನಲ್ಲಿ ಹುಟ್ಟಿ, ಕನ್ನಡದಲ್ಲಿ ಬೆಳೆದು, ದೇಶ ವಿದೇಶಗಳ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಪದವಿಗಳನ್ನು ಉಚ್ಚತರಗತಿಯಲ್ಲಿ ಪಡೆದು, ವಿಶ್ವವಿದ್ಯಾಲಯಗಳಿಗೇ ಕೀರ್ತಿವೆತ್ತ ಹಾಗೂ ಮುಂಬಯಿ ರಾಜ್ಯದಲ್ಲಿ ಶಿಕ್ಷಣ ಖಾತೆಯ ಮುಖ್ಯ ಅಧಿಕಾರಿಯಾಗಿ, ಶಿಕ್ಷಣ ಪ್ರಪಂಚದಲ್ಲಿ ವಿಶೇಷತಃ ಪ್ರಾಥಮಿಕ ಶಿಕ್ಷಣದ ರಂಗಭೂಮಿಯಲ್ಲಿ ವಿಶೇಷ ದಕ್ಷತೆವಹಿಸಿ, ಆಸ್ಥೆ ಇಟ್ಟು, ಇಡೀ ರಾಜ್ಯದಲ್ಲಿಯೇ ಪ್ರಥಮವಾಗಿ ಕಡ್ಡಾಯ ಶಿಕ್ಷಣವನ್ನು ಪ್ರಾರಂಭಿಸಿ ಇವೆಲ್ಲವುಗಳನ್ನು ಮಿಗಿಲಾದ ರೀತಿಯಲ್ಲಿ ನಿರ್ವಹಿಸಿದ ಮಾನ್ಯ ರ‍್ಯಾಂಗ್ಲರ ದಾದಾಸಾಹೇಬ ಚಿಂತಪ್ಪ ಪಾವಟೆ ಅವರು ನಮ್ಮ ನಾಡಿಗೆ ಮಾಡಿದ ಸೇವೆಯನ್ನು ನೆನೆದು, ಕನ್ನಡ ನಾಡಿನ ಉಚ್ಚ ತರಗತಿಯ ಏಕಮೇವ ಪ್ರಾಥಮಿಕ ಶಿಕ್ಷಣ ಸಂಸ್ಥೆಯಾದ ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ ಅಪೂರ್ವ, ಅಭೂತ, ಅನುಪಮೇಯವಾದ ಶತಸಾಂವತ್ಸರಿಕೋತ್ಸವದ ಸುಸಮಯದಲ್ಲಿ ಅವರ ಸೇವೆಯ ಸವಿನೆನಹಿಗಾಗಿ ಅವರ ತೈಲ ಚಿತ್ರವನ್ನು "ಧಾರವಾಡ ಜಿಲ್ಲಾ ಪ್ರಾಥಮಿಕ ಶಿಕ್ಷಕ-ಶಿಕ್ಷಿಕೆಯರ ಸಂಘವು" ಅಲ್ಪಕಾಣಿಕೆಯೆಂದು ಸಲ್ಲಿಸುತ್ತಿದೆ. ಅದನ್ನು ಧಾರವಾಡ ಗಂಡು ಮಕ್ಕಳ ಸರಕಾರಿ ಟ್ರೇನಿಂಗ ಕಾಲೇಜದ

ಶತಾಬ್ಧಿ ಉತ್ಸವ ಸಮಿತಿಯವರು ಸ್ವೀಕರಿಸಿ, ಅದನ್ನು ಟ್ರೇನಿಂಗ ಕಾಲೇಜ ಸಂಸ್ಥೆಯ ಪ್ರಾರ್ಥನಾ ಮಂದಿರದಲ್ಲಿರಿಸಬೇಕೆಂದು ಧಾರವಾಡ ಜಿಲ್ಲಾ ಪ್ರಾಥಮಿಕ ಶಿಕ್ಷಕ-ಶಿಕ್ಷಕಿಯರ ಸಂಘವು ವಿನಂತಿಸುತ್ತಿದೆ.

ಅಧ್ಯಕ್ಷ ಸ್ಥಾನದಿಂದ
ಗೊತ್ತುವಳಿಯ ಖರೇ ನಕಲು

ಫ. ಬ. ಗುರಣ್ಣವರ
ಕಾರ್ಯಾಧ್ಯಕ್ಷ

ಅಂಕಿತ
ಅಧ್ಯಕ್ಷ

ಧಾರವಾಡ ಜಿಲ್ಲಾ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರ ಸಂಘ, ಹುಬ್ಬಳ್ಳಿ.

Statement about ownership and other particulars about newspape **"Jeevan Shikshana"** Monthly to be published at the 15th of every month.

FORM IV

[See rule 8]

1	Place of Publication	G. T. C. M. Dharwar
2	Periodicity of its Publication	Monthly
3	Printer's Name	Shri S. F. Kattimani
	Nationality	Indian
	Address	Belgaum Gali, Hubli
4	Publisher's Name	S. P. Patil
	Nationality	Indian
	Address	Principal, G. T. C. M. Dharwar
5	Editor's Name	S. P. Patil
	Nationality	Indian
	Address	Principal G. T. C. M. Dharwar
6	Names & addresses of individuals who own the newspaper & partners or shareholders holding more than one percent of the total capital	Editor, Board G. T. C. M. [illegible]

I, S. P Patil hereby declare that the particulars given above are true to the best of my knowledge & belief.

15 3 1958

S. P. PATIL
Signature of Publisher

ಅಧ್ಯಕ್ಷರಾದ ಡಾ. ಪಾವಟೆ ಅವರು ಪಾರಿತೋಷಕಗಳನ್ನು ಹಂಚುತ್ತಿರುವರು.

ಶ್ರೀ ಸ್ವಾಮಿಗಳು ಆಭಾರ ಮನ್ನಣೆ ಮಾಡುತ್ತಿರುವರು.